ತುಳುನಾಡಿನ ಬ್ಯಾರಿಗಳು

ಇಂಗ್ಲಿಷ್ ಮೂಲ : ಪ್ರೊ. ಬಿ.ಎಂ. ಇಚ್ಲಂಗೋಡು
ಕನ್ನಡಕ್ಕೆ : ತುಫೈಲ್ ಮುಹಮ್ಮದ್

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

ತುಳುನಾಡಿನ ಬ್ಯಾರಿಗಳು

ಇಂಗ್ಲಿಷ್ ಮೂಲ
ಪ್ರೊ. ಬಿ.ಎಂ. ಇಚ್ಲಂಗೋಡು

ಕನ್ನಡಕ್ಕೆ
ತುಫೈಲ್ ಮುಹಮ್ಮದ್



ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ
ಮಂಗಳೂರು

TULUNADINA BYARIGALU

A Research Work

by

Prof. B.M. Ichlangod

translated by

Thufail Mohammad

Published by

Umarabba

Registrar

Karnataka Beary Sahithya Academy

Presidium Commercial Complex

N.G. Road, Attavar, Mangalore - 575 001

Phone & Fax : 0824 - 2412297, 4260038

bearyacademy@yahoo.in

www.karnatakabearysahithyaacademy.org

Copies

1000

Ist Published

2011

©

Karnataka Beary Sahithya Academy

Pages

xii+198

Price

₹130

Cover Design

Kalloor Nagesh

Designed & Printed at

Aakrithi Prints

Mangalore - 575 001

Tel. : 0824 2443002

ಅಧ್ಯಕ್ಷರ ಮಾತು

ಬ್ಯಾರಿಗಳಿಗೆ 1200 ವಷಗಳಿಗೂ ಹೆಚ್ಚಿನ ಇತಿಹಾಸವಿದೆ ಎಂಬುದು ಸಂಶೋಧಕರ ಅಭಿಪ್ರಾಯ. ಈ ಬಗ್ಗೆ ಪ್ರಸಿದ್ಧ ಲೇಖಕರ ಹಲವಾರು ಲೇಖನಗಳು ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದರೂ ಒಂದು ಸಮಗ್ರ ಗ್ರಂಥ ಈವರೆಗೆ ಬಂದಿಲ್ಲ. ಶಿಕ್ಷಣದಲ್ಲಿ ಬ್ಯಾರಿಗಳು ಬಹಳಷ್ಟು ಹಿಂದುಳಿದಿರುವುದು, ಮಾತೃಭಾಷೆಯ ಬಗ್ಗೆ ಅಭಿಮಾನದ ಕೊರತೆ ಹಾಗೂ ಇತ್ತೀಚಿನ ವರೆಗೂ ತಮ್ಮನ್ನು ಬ್ಯಾರಿಗಳೆಂದೂ ಗುರುತಿಸಿಕೊಳ್ಳಲು ಸಂಕೋಚಪಟ್ಟುಕೊಳ್ಳುತ್ತಿದ್ದುದು ಇದಕ್ಕೆ ಕಾರಣವಾಗಿರಬಹುದು. ಈ ಸಮುದಾಯ ಕಳೆದ 15-20 ವರ್ಷಗಳಿಂದೀಚೆಗೆ ಶಿಕ್ಷಣ ಕ್ಷೇತ್ರದಲ್ಲಿ ಜಾಗೃತಿಗೊಳ್ಳುತ್ತಿರುವಂತೆಯೇ ಮಾತೃಭಾಷೆಯ ಬಗ್ಗೆಯೂ ಒಲವು ತೋರಿಸ ಲಾರಂಭಿಸಿತು. ಜೊತೆಗೆ ಕರ್ನಾಟಕ ಸರಕಾರವು ಬ್ಯಾರಿ ಭಾಷೆಗೆ ಅಕಾಡೆಮಿಯನ್ನೂ ನೀಡಿತು. ಇದರ ಪರಿಣಾಮ ಇಂದು ಬ್ಯಾರಿಗಳಲ್ಲಿ ಬ್ಯಾರಿ ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಹೊಸ ಜಾಗೃತಿ ಮೂಡಲಾರಂಭಿಸಿದೆ. ಬ್ಯಾರಿಗಳಿಗೆ ಮಾತ್ರವಲ್ಲ, ಭ್ಯಾರಿಯೇತರರಿಗೂ ಬ್ಯಾರಿಗಳ ಇತಿಹಾಸದ ಬಗ್ಗೆ ತಿಳಿಯುವ ಕುತೂಹಲ ಹೆಚ್ಚಾಗುತ್ತಿದೆ. ಇದಕ್ಕೆ ಪೂರಕವಾಗಿ ಬ್ಯಾರಿ ಅಕಾಡೆಮಿಯು ಅಲ್ಲಲ್ಲಿ ಈ ಬಗ್ಗೆ ಗೋಷ್ಠಿ, ಸಂವಾದ, ಚರ್ಚೆಗಳನ್ನು ಏರ್ಪಡಿಸುವ ಮೂಲಕ ಬ್ಯಾರಿಗಳ ಇತಿಹಾಸ, ಗತ ವೈಭವಗಳನ್ನು ಬ್ಯಾರಿಗಳಿಗೂ, ಬ್ಯಾರಿಯೇತರರಿಗೂ ಪರಿಚಯಿಸುತ್ತಾ ಬಂದಿದೆ.

ಇದು ಪ್ರೊ. ಬಿ.ಎಂ. ಇಚ್ಲಂಗೋಡುರವರು ಪಿಎಚ್.ಡಿ.ಗಾಗಿ ಬರೆದ ಪ್ರಬಂಧ. ಕಾರಣಾಂತರದಿಂದ ಅವರಿಗೆ ಪಿಎಚ್.ಡಿ. ಮಾಡ ಲಾಗಿರಲಿಲ್ಲ. ಬ್ಯಾರಿಗಳ ಇತಿಹಾಸದ ಬಗ್ಗೆ ಬಹಳಷ್ಟು ತಿಳಿದಿರುವ ಇಚ್ಲಂಗೋಡುರವರು ಈ ಕೃತಿಯಲ್ಲಿ ಬ್ಯಾರಿ ಸಮುದಾಯದ ಒಂದು ಸಮಗ್ರ ಪರಿಚಯವನ್ನು ಮಾಡಿದ್ದಾರೆ. ಇದನ್ನು ಪತ್ರಕರ್ತ ತುಫೈಲ್ ಮುಹಮ್ಮದ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ಬ್ಯಾರಿ ಸಮುದಾಯದ ಬಗ್ಗೆ ತಿಳಿದುಕೊಳ್ಳು ವವರಿಗೆ, ಸಂಶೋಧನೆ ಮಾಡುವವರಿಗೆ, ಪಿಎಚ್.ಡಿ. ಮಾಡುವವರಿಗೆ ಬಹಳಷ್ಟು ಉಪಯುಕ್ತವಾಗಲಿದೆ ಎಂಬುದು ನನ್ನ ನಂಬಿಕೆ.

ಈ ಕೃತಿಯನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟ ತುಫೈಲ್ ಮುಹಮ್ಮದ್ ಹಾಗೂ ಅಕಾಡೆಮಿಗೆ ಪ್ರಕಟಿಸಲು ಅನುಮತಿ ನೀಡಿದ ಮತ್ತು ಸುಂದರವಾಗಿ ಮುದ್ರಿಸಿಕೊಟ್ಟ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶ್ ರವರಿಗೆ ಕೃತಜ್ಞತೆಗಳು.

ಎಂ.ಬಿ. ಅಬ್ದುಲ್ ರಹ್‌ಮಾನ್

ಬ್ಯಾರಿ : ಮರವಿನಿಂದ ಇರವಿನೆಡೆಗೆ

Bearys : From amnesia to existence

(ಮೂಲ ಕೃತಿಯಿಂದ ಅನುವಾದಿತ)

ಶತ ಶತಮಾನಗಳಿಂದ ತುಳುನಾಡಿನ ಜನಸಮುದಾಯ ದೊಂದಿಗೆ ಒಂದಾಗಿ ಬದುಕಿಕೊಂಡು ಬರುತ್ತಿರುವ ಬ್ಯಾರಿಗಳಿಗೆ ಉನ್ನತ ಸಾಂಸ್ಕೃತಿಕ ಪರಂಪರೆಯಿದೆ, ಚರಿತ್ರೆಯಿದೆ. ಆದರೆ ಅದು ಜನರ ಸ್ಮೃತಿಕೋಶದಲ್ಲಿ ಮರೆವಿಗೆ ಸಂದಿತ್ತು, ಅನೇಕ ತಪ್ಪುಗ್ರಹಿಕೆ ಗಳಿಗೆ ಒಳಗಾಗಿತ್ತು. ಶ್ರೀ ವಹಾನ್ ದೊಡ್ಡಮನೆ, ಡಾ. ಸುಶೀಲಾ ಉಪಾಧ್ಯಾಯ ಮುಂತಾದ ಸ್ಥಳೀಯ ವಿದ್ವಾಂಸರು ಕರಾವಳಿ ಮುಸ್ಲಿಮರ, ವಿಶೇಷವಾಗಿ ಬ್ಯಾರಿಗಳ ಚರಿತ್ರೆ ಕಟ್ಟುವ ಪ್ರಯತ್ನ ಮಾಡಿದ್ದುಂಟು. ಶ್ರೀಮತಿ ಸಾರಾ ಅಬೂಬಕರ್, ಫಕೀರ್ ಮುಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ್ ಮುಂತಾದವರು ತಮ್ಮ ಸೃಜನಶೀಲ ಕೃತಿಗಳಲ್ಲಿ ಬ್ಯಾರಿಗಳ ಸಾಂಸ್ಕೃತಿಕ ಬದುಕಿಗೆ ಕನ್ನಡಿ ಹಿಡಿದುದೂ ಉಂಟು. ಆದರೆ ಕ್ರಿ.ಶ. 7ನೆಯ ಶತಮಾನದಿಂದ ತೊಡಗಿ ವರ್ತಮಾನದ ಬ್ಯಾರಿ ಸಮುದಾಯದ ಕ್ರಿಯಾಚಟುವಟಿಕೆಗಳಿಗೆ ಕನ್ನಡಿ ಹಿಡಿಯುವ ಅಪಾರ ಪ್ರಮಾಣದ ಆಕರ ಸಾಮಗ್ರಿಗಳನ್ನು ಬಳಸಿಕೊಂಡು ಚರಿತ್ರೆ ಕಟ್ಟುವ ಕೆಲಸವನ್ನು ಪ್ರೊ. ಬಿ.ಎಂ. ಇಚ್ಲಂಗೋಡು 'Impact of Bearys in Tulunadu' ಎಂಬ ಗ್ರಂಥದಲ್ಲಿ ಸಾಕಷ್ಟು ಯಶಸ್ವಿ ಯಾಗಿ ನಿರ್ವಹಿಸಿದ್ದಾರೆ. ಅತ್ಯಂತ ಅಚ್ಚುಕಟ್ಟಾದ ಸಂಶೋಧನ ಪ್ರಬಂಧ (Research dessertation)ದ ಮಾದರಿಯ ಈ ಗ್ರಂಥ ಕರಾವಳಿಯ ಮುಸ್ಲಿಂ ಸಮುದಾಯವನ್ನು ಕುರಿತು ಅನೇಕ

ಹೊಸ ವಿಚಾರಗಳನ್ನು ಬೆಳಕಿಗೆ ತಂದಿದೆ. ಅನೇಕ ತಪ್ಪುಗ್ರಹಿಕೆಗಳನ್ನು ದೂರ ಮಾಡಿದೆ. ಅದಕ್ಕಾಗಿ ಪ್ರೊ. ಇಚ್ಲಂಗೋಡು ಅವರನ್ನು ಅಭಿನಂದಿಸುತ್ತೇನೆ.

ಕ್ರಿ.ಶ. 1ನೆಯ ಶತಮಾನದಿಂದಲೇ ಮಲಬಾರ್, ತುಳುನಾಡ ಕರಾವಳಿಗೂ ಅರಬರಿಗೂ ವ್ಯಾಪಾರ ಸಂಬಂಧದ ನಂಟು ಇದ್ದಿತು. ಅರಬರು ಸ್ಥಳೀಯ ಮಹಿಳೆಯರನ್ನು ಮದುವೆಯಾಗಿ ಏರ್ಪಟ್ಟ ಜನವರ್ಗವೇ ಬ್ಯಾರಿ. ಅರಬರು ಕರಾವಳಿಯಲ್ಲಿ ಪೋರ್ಚುಗೀಸರು ಅಧಿಕಾರ ಹಿಡಿವ ತನಕ ವ್ಯಾಪಾರ ವ್ಯವಹಾರಗಳಲ್ಲಿ ನಿಯಂತ್ರಣ ಸಾಧಿಸಿದ್ದರು. ಕ್ರಿ.ಶ. 7ನೆಯ ಶತಮಾನದಲ್ಲಿ ಪ್ರವಾದಿ ಮುಹಮ್ಮದರಿಂದ ಪವಿತ್ರ ಸಂದೇಶ ಬಿತ್ತರಗೊಂಡ ಬಳಿಕ ಅರಬರು ಮುಸ್ಲಿಮರಾದರು. ಕರಾವಳಿಯ ಅರಬರೂ ಅವರ ಸಂತಾನದವರೂ ಮುಸ್ಲಿಮರಾದರು. ಪಶ್ಚಿಮ ಕರಾವಳಿಯ ಮಲಬಾರ್ ಹಾಗೂ ತುಳುನಾಡಿನ ಪ್ರಾದೇಶಿಕ ಸಂಸ್ಕೃತಿಯ ಪ್ರಭಾವದಿಂದ ಈ ಮುಸ್ಲಿಮರು ಕೊಂಕಣಿ ಮಾತಾಡುವ ನವಾಯತರೆಂದೂ, ಬ್ಯಾರಿಭಾಷೆಯಾಡುವವರು ಬ್ಯಾರಿಗಳೆಂದೂ, ಮಲಬಾರಿನ ಮಲಯಾಳಂ ಮಾತನಾಡುವವರು ಮಾಪಿಳ್ಳೆಯವರೆಂದೂ, ಕೋರಮಂಡಲ ಪ್ರದೇಶದ ತಮಿಳು ಮುಸ್ಲಿಮರು ಲಬ್ಬೈಗಳೆಂದೂ ಕರೆಯಲ್ಪಟ್ಟರು. ಕರಾವಳಿಯ ತಲಮೂಲ ಸಮುದಾಯಗಳಾದ ಬಿಲ್ಲವ, ಮೊಗವೀರ, ಮುಕ್ಕುವ, ಬೋವಿ, ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದ ಜೈನರು ಅರಬ ಮುಸ್ಲಿಮರ ಆರ್ಥಿಕ ಬಲ ಹಾಗೂ ಆ ಧರ್ಮದ ಜಾತಿನಿರಸನ ಹಾಗೂ ಭ್ರಾತೃತ್ವದ ಉದಾರತೆಗೆ ಮನಸೋತು ಮತಾಂತರಗೊಂಡರು. ಇದನ್ನು ತುಳುನಾಡಿನ ಬೊಬ್ಬರ್ಯ ಪಾಡ್ದನದ ವಸ್ತುವಿನ ಎಳೆ ಹಿಡಿದು ಸಂಶೋಧಕರು ಸಮರ್ಥಿಸಿದ್ದಾರೆ. ಕಡಲ ವ್ಯಾಪಾರ, ನೌಕಾವಿದ್ಯೆಯ ಕೌಶಲ್ಯಗಳಿಂದಾಗಿ ಈ ಬ್ಯಾರಿಗಳಿಗೆ ಅಬ್ಬಕ್ಕ ರಾಣಿ ತನ್ನ ಸೇನೆಯಲ್ಲಿ ಅವಕಾಶ ಕಲ್ಪಿಸಿದ್ದಳೆನ್ನುವುದನ್ನು ವಿವರಿಸಿದ್ದಾರೆ.

ಈ ಗ್ರಂಥದ ಇನ್ನೊಂದು ವಿಶಿಷ್ಟತೆಯೆಂದರೆ ಬ್ಯಾರಿಗಳ ಬಗೆಗಿನ ಅನೇಕ ಸ್ಥಾಪಿತ 'ಸತ್ಯ'ಗಳನ್ನು ಒಡೆದು ಅಲ್ಲಿ ವಾಸ್ತವ ಅಂಶಗಳನ್ನು ಹೇಳಿರುವುದು. ಬ್ಯಾರಿ ಎನ್ನುವ ಪದ 'ಬಹಾರಿ' ಎಂಬ ಅರೇಬಿಕ್ ಪದದಿಂದ ಬಂದುದೇ ಹೊರತು (ವ್ಯಾಪಾರ) ಎನ್ನುವ ತುಳುವಿನಿಂದ ಹುಟ್ಟಿದುದಲ್ಲ ಎನ್ನುವ ಅಂಶ ವಿಚಾರಣೀಯ. ಬ್ಯಾರಿ ಭಾಷೆ ಅದು ಮಾಪಿಳ್ಳೆಯವರ ಮಾಪ್ಪಾಭಾಷೆ ಅಲ್ಲವೆಂದೂ, ಬ್ಯಾರಿ ಭಾಷೆಯಲ್ಲಿ ತುಳುವಿನ ಹಾಗೂ ಅರೇಬಿಕ್ ಪದಕೋಶ

(lexicon) ಇರುವುದಾಗಿಯೂ, ಮಲೆಯಾಳಂ ಭಾಷೆಗಿಂತ ಅದು ದೂರ ನಿಲ್ಲುವುದಾಗಿಯೂ ಹೇಳಿದ್ದಾರೆ. ಬ್ಯಾರಿ ಭಾಷೆಯಲ್ಲಿ ರಚಿತವಾಗಿರುವ ಸಾಹಿತ್ಯದ ಮೇಲೆ ತುಳುವಿನ ಪ್ರಭಾವವನ್ನು ದಟ್ಟವಾಗಿ ಗುರುತಿಸಬಹುದೆನ್ನುವ ಮಹತ್ವದ ಸಂಗತಿಯನ್ನು ಬೆಳಕಿಗೆ ತಂದಿದ್ದಾರೆ. ಬ್ಯಾರಿಗಳು ಲಾಗಾಯ್ತಿನಿಂದ ಮಲಯಾಳಿ ಲಿಪಿಗಿಂತ ಬೇರೆಯಾದ 'ಬಟ್ಟೆಲಿಪಿ'ಯನ್ನು ಬಳಸುತ್ತಿದ್ದರೆಂದೂ, ಮಾಪಿಳ್ಳೆಯವರು ಮಲೆಯಾಳಿ ಲಿಪಿಯನ್ನು ಬಳಸುತ್ತಾ ಬಂದರೆಂದೂ ಹೇಳುತ್ತಾರೆ. ವ್ಯಾಪಾರ ವ್ಯವಹಾರಗಳಲ್ಲಿ ಕೂಡಾ ಬ್ಯಾರಿ ಮುಸ್ಲಿಮರು ಹಿಂದುಗಳ ಜೊತೆ ಏಕತೆಯಿಂದ ಇದ್ದ ಸಂಗತಿ ಗಳನ್ನು ತುಳುನಾಡಿನ ಭೂಸಾಮರಸ್ಯಕ್ಕೆ ಈ ಗ್ರಂಥದ ಮೂಲಕ ವೇದಿಕೆ ನಿರ್ಮಿಸಿಕೊಟ್ಟಿದ್ದಾರೆ. ಬ್ಯಾರಿಗಳ ಕುಟುಂಬ ವ್ಯವಸ್ಥೆ ಮಾಪಿಳ್ಳೆಯವರಿಗಿಂತ ಬೇರೆಯಾಗಿ ತುಳುವರ ಅಳಿಯಸಂತಾನ ವ್ಯವಸ್ಥೆಗೆ ಸಮೀಪವಾಗಿರುವುದನ್ನು ವಿವರಿಸುತ್ತಾ ಬ್ಯಾರಿಗಳು ಮಾಪಿಳ್ಳೆಯವರಿಗಿಂತ ಬೇರೆಯಾದ – ಸ್ವತಂತ್ರ ಅಸ್ತಿತ್ವವುಳ್ಳ ಸಮುದಾಯವೆನ್ನುವುದನ್ನು ಸ್ಥಾಪಿಸಿದ್ದಾರೆ. ಬ್ಯಾರಿಗಳು ಕೇರಳದ ಧಾರ್ಮಿಕ ಪಂಡಿತ (ಉಲಮಾ)ರನ್ನು ಅವಲಂಬಿಸಿದ ಫಲವಾಗಿ ಇವರ ಮೇಲೆ ಮಾಪ್ಲಾ ಸಂಸ್ಕೃತಿಯ ಹಾಗೂ ಮಲೆಯಾಳಂ ಸಂಸ್ಕೃತಿಯ ಪ್ರಭಾವ ಕಾಣಿಸಿಕೊಂಡಿತೆಂಬ ವಾಸ್ತವವನ್ನು ಹೇಳಿದ್ದಾರೆ.

ಬ್ಯಾರಿಗಳ ಮೂಲಕಸುಬಾದ ವ್ಯಾಪಾರ ವ್ಯವಹಾರ ಬದಲಾಗುತ್ತಿರುವ ಸನ್ನಿವೇಶದಿಂದಾಗಿ ಅವರ ಆರ್ಥಿಕ ಜೀವನ ಬದಲಾದುದು, ಹೊಸ ಉದ್ಯಮಕ್ಕೆ ತೆರೆದುಕೊಂಡುದು ಮೇಲಾಗಿ ವಿದ್ಯೆಯಿಂದ ವಂಚಿತರಾಗಿದ್ದ ಈ ಬ್ಯಾರಿಗಳು ಇದೀಗ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ತಮ್ಮನ್ನು ಶಿಕ್ಷಣಕ್ಕೆ ಒಡ್ಡಿಕೊಂಡು ಸಮಾಜದ ಮುಖ್ಯಧಾರೆಯೊಂದಿಗೆ ಗುರುತಿಸಿಕೊಳ್ಳುತ್ತಿರುವ ಮಹತ್ವದ ಸಂಗತಿಯನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಒಟ್ಟಿನಲ್ಲಿ ತುಳುನಾಡಿನ ಮಹತ್ವದ ಸಮುದಾಯಗಳಲ್ಲಿ ಒಂದಾದ ಬ್ಯಾರಿಗಳನ್ನು ಸಂಶೋಧಕ ಇಚ್ಲಂಗೋಡು ಅವರು ಮರೆವಿನಿಂದ ಇರವಿನೆಡೆಗೆ ಕೊಂಡೊಯ್ದಿದ್ದಾರೆ. ಇದನ್ನು ಪ್ರಕಟಿಸಿದ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನೂ ಅಭಿನಂದಿಸುತ್ತೇನೆ.

ಮಂಗಳೂರು
20-11-2011

ಪ್ರೊ. ಎ.ವಿ. ನಾವಡ
ನಿವೃತ್ತ ಉಪನ್ಯಾಸಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನಸು ನನಸಾದ ಕ್ಷಣ

ನಾನು ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಡಾ. ಶೇಕ್ ಅಲಿಯವರ ಅಧೀನದಲ್ಲಿ ಒಬ್ಬ ಸಂಶೋಧನಾ ವಿದ್ಯಾರ್ಥಿಯಾಗಿ 1983ರಿಂದ ಸುಮಾರು ಹತ್ತು ವರ್ಷ ಕಾಲ ಕೆಲಸ ಮಾಡಿದ್ದು ಬ್ಯಾರಿ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿದ್ದೇನೆ. ದುರದೃಷ್ಟವಶಾತ್, ನನ್ನ ಆರೋಗ್ಯ ಸಮಸ್ಯೆಯಿಂದಾಗಿ ನನಗೆ ನಿಗದಿತ ಅವಧಿಯೊಳಗೆ ನನ್ನ ಸಂಶೋಧನಾ ಲೇಖನವನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಆದರೆ ನನ್ನ ಈ ಬರಹವನ್ನು ಒಂದು ಪುಸ್ತಕದ ರೂಪದಲ್ಲಿ ಪ್ರಕಟಿಸಿ ಸಾರ್ವಜನಿಕರ ಮುಂದಿಡಲು ಆಯ್ಕೆ ಮಾಡಿದ್ದಕ್ಕಾಗಿ ನಾನು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡಮಿಯ ಅಧ್ಯಕ್ಷ ಎಂ.ಬಿ. ಅಬ್ದುಲ್ ರಹ್‌ಮಾನ್ ಹಾಗೂ ಇತರ ಸದಸ್ಯರಿಗೆ ಋಣಿಯಾಗಿದ್ದೇನೆ.

ಇದು ನನ್ನ ಕನಸು. ಮತ್ತು ಇದೀಗ ಈ ಕನಸು ನನಸಾಗುತ್ತಿದೆ. ಪದವಿ ತರಗತಿಯ ವಿದ್ಯಾರ್ಥಿಯಾಗಿದ್ದಾಗ ನನ್ನ ಪ್ರಾಧ್ಯಾಪಕರಾಗಿದ್ದ ಪ್ರೊ. ದಿ. ಗುರುರಾಜ್ ಭಟ್ ಯಾವಾಗಲೂ ನನ್ನ ಮುಂದೆ ಒಂದು ಪ್ರಶ್ನೆ ಇಡುತ್ತಿದ್ದರು. ''ನೀನು ಯಾಕೆ ಬ್ಯಾರಿ?'', ''ಬ್ಯಾರಿ ಎಂಬ ಒಂದು ಸಮುದಾಯವಿದೆಯೇ?'' ನನ್ನ ಬಳಿ ಈ ಪ್ರಶ್ನೆಗಳಿಗೆ ಉತ್ತರವಿರಲಿಲ್ಲ.

ನನ್ನ ಅಪ್ಪ ಒಬ್ಬ ಬ್ಯಾರಿ, ಆದ್ದರಿಂದ ನಾನೂ ಒಬ್ಬ ಬ್ಯಾರಿ. ಇಷ್ಟು ಬಿಟ್ಟರೆ ನನಗೆ ಇನ್ನೇನೂ ಗೊತ್ತಿರಲಿಲ್ಲ. ನಾನು ನನ್ನ ಸ್ನಾತಕೋತ್ತರ ಪದವಿ ಮುಗಿಸಿ ಮೈಸೂರಿನಿಂದ ಹೊರಬಂದಾಗ ಆಕಸ್ಮಿಕವಾಗಿ ಗುರುರಾಜ್ ಭಟ್ ಅವರನ್ನು ಮತ್ತೆ ಭೇಟಿಯಾಗುವ ಅವಕಾಶ ಸಿಕ್ಕಿತು. ''ನೀನು ಅಧ್ಯಾಪಕ ವೃತ್ತಿಯನ್ನು ಆಯ್ಕೆ ಮಾಡು ಮತ್ತು ಈ ವಿಷಯದಲ್ಲಿ ಸಂಶೋಧನೆ ನಡೆಸು'' ಎಂಬ ಸಲಹೆಯನ್ನೂ ಅವರು ನೀಡಿದರು. ನಿಜವಾಗಿ ನನ್ನ ಅಪ್ಪ ನಾನು ಒಬ್ಬ ಲಾಯರ್ ಆಗಬೇಕೆಂದುಕೊಂಡಿದ್ದರು. ನನಗೂ ವಕಾಲತ್ತಿನಲ್ಲಿ ಆಸಕ್ತಿಯಿತ್ತು. ನಾನು ಅದನ್ನು ಆಯ್ಕೆಮಾಡಿದ್ದರೆ, ನಾನೊಬ್ಬ ಪ್ರಖ್ಯಾತ ನ್ಯಾಯವಾದಿಯಾಗಿರುತ್ತಿದ್ದೆ. ಆದರೆ ನಾನು ಯಾಕೆ ಬ್ಯಾರಿ?, ಬ್ಯಾರಿಗಳು ಯಾರು? ಎಂಬ ಪ್ರಶ್ನೆಗಳು ನನ್ನ ಮನಸ್ಸನ್ನು ಕಾಡುತ್ತಲೇ ಇದ್ದವು. ಹಾಗಾಗಿ ನಾನು ಅಧ್ಯಾಪಕ ವೃತ್ತಿ ಕೈಗೆತ್ತಿಕೊಳ್ಳುವಂತೆ ನನ್ನ ಗುರುವಿಗಿದ್ದ ಅಭಿಲಾಷೆಯನ್ನು ಈಡೇರಿಸಿದೆ. 1965ರಲ್ಲಿ ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿಕೊಂಡೆ.

ಡಾ. ಶೇಕ್ ಅಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿಯಾಗಿ ನೇಮಕ ಗೊಂಡು ಇಲ್ಲಿಗೆ ಬಂದಾಗ ನಾನು ಅವರನ್ನು ಕಂಡು ಈ ವಿಷಯದಲ್ಲಿ ಸಂಶೋಧನೆ ನಡೆಸಲು ಮಾರ್ಗದರ್ಶನ ನೀಡುವಂತೆ ಕೋರಿಕೊಂಡೆ. ಆದರೆ ಇದಕ್ಕೆ ಅಗತ್ಯವಿರುವ ಆಕರ ಗ್ರಂಥ ಗಳಾಗಲಿ ಸಾಮಗ್ರಿಗಳಾಗಲಿ ಇರಲಿಲ್ಲ. ಅಲ್ಲದೆ ಯಾವನೇ ಮುಸ್ಲಿಮನು ಈ ಬ್ಯಾರಿ ಕಲ್ಪನೆಯನ್ನು ಒಪ್ಪಿಕೊಳ್ಳುವ ಧೈರ್ಯ ತೋರಲಿಲ್ಲ. ನನ್ನ ಗೈಡ್ ಇದು ಸಂಶೋಧನೆಗೆ ಒಳ್ಳೆಯ ವಿಷಯವಲ್ಲ ಎಂದು ಹೇಳಿದರೂ ನಾನು ಇದನ್ನು ಆಯ್ಕೆ ಮಾಡಿಕೊಂಡೆ. ಯಾಕೆಂದರೆ ಇದು

ನನ್ನ ಕನಸಾಗಿತ್ತು ಮತ್ತು ಸತ್ಯವನ್ನು ಹೊರಗೆ ತರುವುದು ನನ್ನ ಕರ್ತವ್ಯವೂ ಆಗಿತ್ತು. ಆದರೆ ನನಗೆ ಅದನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಸಂಶೋಧನಾವಧಿಯನ್ನು ನವೀಕರಿಸಿಕೊಂಡ ಬಳಿಕವೂ ನನ್ನ ಆನಾರೋಗ್ಯದಿಂದಾಗಿ ಕೆಲಸ ಅಪೂರ್ಣವಾಗಿಯೇ ಉಳಿಯಿತು.

ನನ್ನ ಕೆಲವು ಸಹೋದ್ಯೋಗಿಗಳು ಮತ್ತು ಮಿತ್ರರು ಈ ಕೃತಿಯನ್ನು ಪುಸ್ತಕ ರೂಪದಲ್ಲಿ ಹೊರತರುವಂತೆ ಸಲಹೆ ನೀಡಿದರು. ವಹಾಬ್ ದೊಡ್ಡಮನೆ ಸೇರಿದಂತೆ ಹಲವಾರು ಲೇಖಕರು ನನ್ನ ಕೃತಿಯನ್ನು ತಮ್ಮ ಸಂಶೋಧನಾ ಬರಹಗಳಲ್ಲಿ ಉಲ್ಲೇಖಿಸಿದರು. ಡಾ. ಸುಶೀಲಾ ಉಪಾಧ್ಯಾಯ ಅವರೂ ಕೂಡ ನನ್ನ ಕೃತಿಯನ್ನು ಅಧ್ಯಯನ ಮಾಡಿದ್ದು ತಮ್ಮ ಹಲವು ಸಂಶಯಗಳನ್ನು ಬಗೆಹರಿಸಿದ್ದಕ್ಕಾಗಿ ನನಗೆ ಕೃತಜ್ಞತೆ ಸಲ್ಲಿಸಿದ್ದಾರೆ ಮತ್ತು ಬ್ಯಾರಿ ಭಾಷೆಯು ಮಾಪಿಳ್ಳ ಮಲಯಾಳಂಗಿಂತ ಭಿನ್ನ ಎಂಬ ನನ್ನ ನಿಲುವನ್ನು ಒಪ್ಪಿ ಕೊಂಡಿದ್ದಾರೆ. ಡಾ. ಎ.ವಿ. ನಾವಡ ಈ ಕೃತಿಯನ್ನು ಮೆಚ್ಚಿದ್ದು ಪ್ರಸಕ್ತ ರೂಪದಲ್ಲೇ ಇದನ್ನು ಪ್ರಕಟಿಸುವಂತೆ ಸಲಹೆಯನ್ನೂ ಕೊಟ್ಟಿದ್ದಾರೆ. ಇದೀಗ ಬ್ಯಾರಿ ಅಕಾಡೆಮಿಯ ಮೂಲಕ ನನ್ನ ಕನಸು ನನಸಾಗಿದೆ.

ನನಗೆ ಮಾರ್ಗದರ್ಶನ ಮಾಡಿದ, ಸಲಹೆಗಳನ್ನು ಕೊಟ್ಟ ಹಾಗೂ ಸಹಾಯ ಹಸ್ತ ಚಾಚಿದ ಎಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ನಾನು ಸ್ವತಃ ಕರಾವಳಿ ಜಿಲ್ಲೆಗಳ 104 ಹಳ್ಳಿಗಳಿಗೆ ಭೇಟಿ ನೀಡಿದ್ದು 74 ಹಿರಿಯರನ್ನು ಭೇಟಿಯಾಗಿ ನನಗೆ ಅಗತ್ಯವಿರುವ ಆಕರ ಸಾಮಗ್ರಿಗಳನ್ನು ಸಂಗ್ರಹಿಸಿದ್ದೇನೆ. ಅವರೆಲ್ಲರಿಗೂ ನಾನು ಕೃತಜ್ಞ. ಅವರು ಹೇಳಿದ ಸಂಗತಿಗಳ ಪೈಕಿ ಕೆಲವನ್ನು ಮಾತ್ರ ಇಲ್ಲಿ ದಾಖಲಿಸಲು ಸಾಧ್ಯವಾಗಿದೆ.

ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್, ಬೆಂಗಳೂರು, ನನಗೆ ಕೊಟ್ಟ ಪ್ರೋತ್ಸಾಹವನ್ನು ನಾನು ಮರೆಯಲಾರೆ. ವಿಶೇಷವಾಗಿ ಜನಾಬ್ ಸಯ್ಯದ್ ಮುಹಮ್ಮದ್ ಬ್ಯಾರಿ, ಜನಾಬ್ ಅಬ್ದುಲ್ ರಹೀಂ ಟೀಕೆ., ಡಾ. ಮಕ್ಬೂದ್ ಅಹಮದ್, ಬಿ.ಎಂ. ಹನೀಫ್ ಹಾಗೂ ಸಂಘಟನೆಯ ಇತರ ಎಲ್ಲ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

ಜನಾಬ್ ಅಬೂ ರೈಹಾನ್ ಅಹಮದ್ ನೂರಿಯವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಅವರು ತಮ್ಮ ಮೈಕಾಲ ಕೃತಿಯ ಮೂಲಕ ಸಂಶೋಧನಾ ರಂಗವನ್ನು ಪ್ರವೇಶಿಸಿ ನಂತರದ ಕೆಲಸವನ್ನು ನೀನು ಪೂರ್ತಿ ಮಾಡು ಎಂದು ನನಗೆ ಹಸ್ತಾಂತರಿಸಿದ್ದಾರೆ. ನನ್ನ ಕನಸನ್ನು ಸಾಕಾರಗೊಳಿಸಲು ನೆರವಾದ ಯಾರ ಹೆಸರನ್ನಾದರೂ ಇಲ್ಲಿ ಮರೆತಿದ್ದರೆ ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಮೂಲಕ ನಾನು ಬ್ಯಾರಿಗಳು ಯಾರು? ನಾನೇಕೆ ಬ್ಯಾರಿ? ಎಂಬ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ಬ್ಯಾರಿಸಮ್‌ಗೆ ಸಂಬಂಧಿಸಿ ನನ್ನ ವಾದವನ್ನು ಒಪ್ಪುವ ಎಲ್ಲರಿಗೂ ನನ್ನ ಕೃತಜ್ಞತೆಗಳು ಮತ್ತು ಈ ವಿಚಾರದಲ್ಲಿ ಮತ್ತಷ್ಟು ಸಂಶೋಧನೆ ನಡೆಸಲು ಇಚ್ಛಿಸುವ ಎಲ್ಲರಿಗೂ ನಾನು ಯಶಸ್ಸು ಕೋರುತ್ತೇನೆ.

ಪ್ರೊ. ಬಿ.ಎಂ. ಇಚ್ಲಂಗೋಡು (ನಿವೃತ್ತ)
ನಂದಿಗುಡ್ಡೆ ಜೆಪ್ಪು-ಬಪ್ಪಾಲ್, ಮಂಗಳೂರು - 575 002

ಪರಿವಿಡಿ

ಅಧ್ಯಾಯ 1

ತುಳುನಾಡು, ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಮತ್ತು ಅವರ ಚರಿತ್ರೆ / 1

1. ತುಳುನಾಡು, ದಕ್ಷಿಣ ಕನ್ನಡ ಜಿಲ್ಲೆ / 1

ಅ. ಬಾರಕೂರು ವಿಭಾಗ / 3

ಆ. ಮಂಗಳೂರು ವಿಭಾಗ / 4

ಇ. ಕಾಸರಗೋಡು ವಿಭಾಗ / 5

2. ತುಳುನಾಡಿನ ಮುಸ್ಲಿಮರು (ಕೋಷ್ಟಕ 1 ಮತ್ತು 2) / 6

ಅ. ಅರಬ್ ಸಂಪರ್ಕ / 7

ಆ. ಜಾತೀಯತೆ / 8

ಇ. ಅರಸೊತ್ತಿಗೆಯ ಪ್ರೋತ್ಸಾಹ / 9

ಈ. ಮಿಶನರಿ ಪ್ರಚಾರ / 10

ಉ. ಸೂಫಿ ಪ್ರಭಾವ / 12

ಊ. ಮುಸ್ಲಿಮ್ ವ್ಯಾಪಾರದ ಪ್ರಭಾವ / 14

3. ಮುಸ್ಲಿಮ್ ಸಮುದಾಯಗಳು ಮತ್ತು ವಸತಿಗಳು (ಕೋಷ್ಟಕ 3) / 16

ಅ. ತುಳುನಾಡಿನ ಬ್ಯಾರಿಗಳು / 18

ಬ್ಯಾರಿಗಳು ಮಾಪಿಳ್ಳೆಗಳಲ್ಲ / 20

ಬ್ಯಾರಿ ಶಬ್ದದ ವ್ಯುತ್ಪತ್ತಿ / 21

ಆ. ಕಚ್ಚೀ ಮೇಮನ್‌ಗಳು / 24

ಇ. ನವಾಯತರು / 26

ಈ. ದಕ್ಕನಿಗಳು ಅಥವಾ ಹನಫಿಗಳು / 28

ಉ. ಇತರ ಮುಸ್ಲಿಮ್ ಪಂಗಡಗಳು (ಶಿಯಾಗಳು ಮತ್ತು ಪುಸಲ್ಮಾರ್‌ಗಳು) / 31

ಅಧ್ಯಾಯ 2

ತುಳುನಾಡು ಜಿಲ್ಲೆಯ ಮುಸ್ಲಿಮರ ಇತಿಹಾಸ / 38

1. ಅಂಜುಮನ್‌ಗಳು / 40
2. ಮುಸ್ಲಿಮರ ವಾಣಿಜ್ಯ ಸ್ವಾಮ್ಯದ ಮೇಲೆ ಹೊಡೆತ / 44
3. ಒಂದು ಹೊಸ ಸ್ಫೂರ್ತಿ / 49

ರಾಣಿ ಬಾಲಿಯಾ ಬಾನು / 53

ಲಂಗ್ಡಾ ದಾಡಿ ಶೇಖ್ ಇಮಾಮ್ / 54
ಸಾಧುರಿ ಬೆಹಾರಿಯ ಬಂಡಾಯ / 55
4. ಪರಂಪರೆ ಕೊಂಡಿ ಕಳಚಿತು
ಪ್ರಗತಿ ಮತ್ತು ಸುಧಾರಣೆಯ ಒಂದು ದೃಷ್ಟಿ / 58
5. ಪೌನಾರಗದ ಕಾಲ / 63
ಖಾನ್ ಬಹದೂರ್ ಬಾವ ಹಾಜಿ / 65
ಕುಞ್ಞಾಮು ಹಾಜಿ / 66
6. ಒಂದು ಜಾಗೃತಿ ಮತ್ತು ಸುಧಾರಕರು / 67
ಮುಹಮ್ಮದ್ ಶೆರೂಲ್ / 68
ಖಾನ್ ಬಹದೂರ್ ಮುಹಮ್ಮದ್ ಶಮ್ಮಾಡ್ / 69
ಮಾಹಿನ್ ಶಮ್ಮಾಡ್ / 71
ಮೊಗ್ರಾಲ್ ಕುಟುಂಬ / 71
ಎಚ್. ಎಸ್. ಹುಸೇನ್ ಸಾಹೇಬ್ / 72
ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಖಾಸಿಂ ಸೇಟ್ / 73
ಕಲೆಕ್ಟರ್‌ಗಳ ಪಾತ್ರ / 74
ಮುಸ್ಲಿಮರು ಮತ್ತು ರಾಜಕೀಯ / 83

ಅಧ್ಯಾಯ 3
ಮುಸ್ಲಿಮರ ಆರ್ಥಿಕ ಬದುಕಿನ ವಿಚಾರಗಳು ಯ 90
1. ವಾಣಿಜ್ಯ, ಒಂದು ಪ್ರಾಶಸ್ತ್ಯದ ವೃತ್ತಿ / 91
2. ಕೈಗಾರಿಕೆಗಳು ಮತ್ತು ನೌಕರಿ, ಜಮಾಅತ್ ವ್ಯವಸ್ಥೆ / 96
3. ಭೂ ಹಿಡುವಳಿದಾರರು / 101

ಅಧ್ಯಾಯ 4
ನಂಬಿಕೆಗಳು, ಆಚರಣೆ ಮತ್ತು ಸಂಪ್ರದಾಯಗಳು / 106
1. ಜಿಲ್ಲೆಯಲ್ಲಿ ಇಸ್ಲಾಮ್ / 106
ಖಾಝಿ ಅಬ್ದುಲ್ಲಾ ಹಾಜಿ / 113
ಉರೂಸ್ / 115
2. ಮುಸ್ಲಿಮ್ ಹಬ್ಬಗಳು / 117
ಅ. ಮೊಹರ್ರಮ್ / 118
ಆ. ಈದ್ ಮಿಲಾದುನ್ನಬಿ / 118
ಇ. ರಾತೀಬ್, ದಿಕ್ರ್ ಅಥವಾ ಗ್ಯಾರವೀನ್ ಷರೀಫ್ / 119
ಈ. ಬರಾಅತ್ / 120

ಉ. ಈದುಲ್ ಫಿತ್ರ್ ಅಥವಾ ಚೆರಿಯೊ ಪೆರ್ನಾಳ್ / 121
ಊ. ಈದುಝುಹ್ಹಾ ಅಥವಾ ಬಕ್ರೀದ್ / 121
3. ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳು / 122

ಅಧ್ಯಾಯ 5
ಸಮಾಜ ಮತ್ತು ಸಂಸ್ಕೃತಿ / 130
1. ಬ್ಯಾರಿಗಳು ಬ್ಯಾರಿಗಳೇ, ಮಾಪಿಳ್ಳೆಗಳಲ್ಲ / 132
2. ಬ್ಯಾರಿಗಳು ಒಂದು ಮಾತೃಪ್ರಧಾನ ಸಮಾಜ / 134
ಅ. ತಾಲಕ್ಕಾರ್ ಇಲ್ಲಮ್ ಗುಂಪು / 136
ಇಲ್ಲಮ್‌ನ ಲಕ್ಷಣಗಳು / 137
ಆ. ಇಲ್ಲಮ್ ಅಲ್ಲದ ಗುಂಪು ಅಥವಾ ತಾಳ ಇಲ್ಲದವರು
ಬಡುಗಾರ್ ಚಿಮ್ಮಾರ್, ಪುದು ಇಸ್ಲಾಮ್ / 138
ಇ. ಅಗಕ್ಕಾರ್ ಮತ್ತು ಜೈನ ಪ್ರಭಾವ / 140
ಈ. ನಿತ್ಯ ಜೀವನದಲ್ಲಿ ಬ್ಯಾರಿಗಳು / 143
ಮದುವೆಗಳು ಮತ್ತು ಇತರ ಸಮಾರಂಭಗಳು / 143
ಸುನ್ನತ್ ಮದುವೆ / 150
ಬುಲೂಗ್ ಮದುವೆ / 150
ಉ. ಬ್ಯಾರಿಗಳು ಮತ್ತು ಕೊಡವರು / 152
ಊ. ಬ್ಯಾರಿಗಳ ವಸ್ತ್ರಗಳು ಮತ್ತು ಆಭರಣಗಳು / 153

ಅಧ್ಯಾಯ 6
ಬೌದ್ಧಿಕ ಕೊಡುಗೆಗಳು / 156
ಭಾಷೆ, ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳು / 156
1. ಬ್ಯಾರಿ ಭಾಷೆ, ಒಂದು ಉಪಭಾಷೆ / 156
2. ಬ್ಯಾರಿ ಭಾಷೆಯಲ್ಲಿ ಸಾಹಿತ್ಯ / 163
ಪೆನ್ನರಸಿಡೆ ರಾಯ / 164
ಮೂಸಾನೆಬಿ / 164
ಬಂಗಾರದ ಸೂಜಿ / 165
3. ಅರಬಿ ಮಲಯಾಳಮ್ ಮತ್ತು ಮಾಪಿಳ್ಳೆ ಹಾಡುಗಳು / 167
ಮಾಪಿಳ್ಳೆ ಹಾಡುಗಳು / 169
4. ಸಾಂಸ್ಕೃತಿಕ ಜಾಗೃತಿಯ ಆಂದೋಲನ / 172

1. ಆಧುನಿಕ ಶಿಕ್ಷಣ / 172
2. ಧಾರ್ಮಿಕ ಮತ್ತು ಸಾಂಸ್ಕೃತಿಕ ಸುಧಾರಣೆಯ ಆಂದೋಲನಗಳು / 175
ಎಮ್.ಸಿ. ಮಮ್ಮಿ / 179

ಅಧ್ಯಾಯ 7
ತುಳುನಾಡಿನಲ್ಲಿ ಇಸ್ಲಾಮಿನ ಪ್ರಭಾವ / 183

ಪರಿಸಮಾಪ್ತಿ
ಕೋಷ್ಟಕಗಳು ಮತ್ತು ಪಟ್ಟಗಳು

1. ಟೇಬಲ್ 1 ಜಿಲ್ಲೆಯ ಜನಸಂಖ್ಯೆ / 6
2 ಟೇಬಲ್ 2 ಜನಸಂಖ್ಯೆಯಲ್ಲಿ ಹೆಚ್ಚಳ / 6
3. ಟೇಬಲ್ 3 ಜಾತಿ, ಪಂಗಡಗಳು ಮತ್ತು ವರ್ಗಗಳು / 16
4. ಟೇಬಲ್ 4 ಕಲೆಕ್ಟರ್‌ಗಳು ಮತ್ತು ತಾರೀಕು / 61
5. ಟೇಬಲ್ 5 ಮಾರ್ಕೆಟ್ ಫೇಸ್ / 96
6. ಟೇಬಲ್ 6 ವೇತನ ದರಗಳು – ತುಲನೆ / 101
7. ಟೇಬಲ್ 7 ಮುಸ್ಲಿಮ್ ಭೂಮಾಲಿಕರು ಮತ್ತು ಪಟ್ಟಾ ನಂಬ್ರಗಳು / 133
8. ಟೇಬಲ್ 8. ಬ್ಯಾರಿಗಳು ಮತ್ತು ಕೊಡವ ಸಂಸ್ಕೃತಿ / 152
9. ಟೇಬಲ್ 9. ಮಂಗಳೂರಿನ ಸಂಘ ಮತ್ತು ಸುಧಾರಣೆಗಳು / 175
10. ಟೇಬಲ್ 10 ಮುಸ್ಲಿಮ್ ಕನ್ನಡ ಬರಹಗಾರರು / 180
11. ಪಟ್ಟಿ 1. ನವಾಯತ್ ವಸತಿಗಳು / 27
12. ಪಟ್ಟಿ 2 ಹನಫಿ ವಸತಿಗಳು / 31
13. ಪಟ್ಟಿ 3 ಪಟ್ಟಣಗಳ ಪಟ್ಟಿ / 41
14. ಪಟ್ಟಿ 4 ಹದಿನಾರು ಮನೆಗಳು / 64
15. ಪಟ್ಟಿ 5 ಒಂದು ಗ್ರಾಮದ ಭೂ ಹಿಡುವಳಿದಾರರು / 103
16. ಪಟ್ಟಿ 6 ಮಂಗಳೂರು ಪಟ್ಟಣದ ಮಸೀದಿಗಳು / 108
17. ಪಟ್ಟಿ 7 ಮಂಗಳೂರು, ಬಾರ್ಕೂರು ಮತ್ತು ಕಾಸರಗೋಡಿನ ಮುಸ್ಲಿಮ್ ವಸತಿಗಳು / 109
18 ಪಟ್ಟಿ 8 ಮಂಗಳೂರು ಪ್ರದೇಶದ ಇಲ್ಲಮ್‌ಗಳು / 136
19. ಪಟ್ಟಿ 9 ಕಾಸರಗೋಡು ಪ್ರದೇಶದ ಇಲ್ಲಮ್‌ಗಳು / 136
20. ಪಟ್ಟಿ 10 ಬ್ಯಾರಿಗಳ ಚಿರಪರಿಚಿತ ಆಭರಣಗಳು / 183

ಅಧ್ಯಾಯ 1

ತುಳುನಾಡು, ದಕ್ಷಿಣ ಕನ್ನಡ ಜಿಲ್ಲೆ ಮುಸ್ಲಿಮರು ಮತ್ತು ಅವರ ಇತಿಹಾಸ

1. ತುಳುನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆ

ದಕ್ಷಿಣ ಕನ್ನಡ ಎಂಬುದು ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆ. ಅದಕ್ಕೆ ತನ್ನದೇ ಆದ ಸುದೀರ್ಘ ಇತಿಹಾಸ ಮತ್ತು ಪರಂಪರೆಯಿದೆ. ಕ್ರಿ.ಶ. 1860ರಲ್ಲಿ ಇದು ಕೆನರಾ ಜಿಲ್ಲೆಯೆಂದು ಕರೆಯಲ್ಪಡುತ್ತಿತ್ತು ಮತ್ತು ಕಾಸರಗೋಡು, ಮಂಗಳೂರು, ಬಾರಕೂರು ಮತ್ತು ಉತ್ತರ ಕೆನರಾ ಜಿಲ್ಲೆಗಳನ್ನು ಒಳಗೊಂಡಿತ್ತು. ಈ ಸಂಶೋಧನಾ ಕೃತಿಯು ಕಾಸರಗೋಡು ಮತ್ತು ಬೈಂದೂರಿನ ವರೆಗಿನ ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದ್ದು, 1947ರವರೆಗಿನ ಬ್ರಿಟಿಷ್ ದಾಖಲೆಗಳಲ್ಲಿ ಈ ಪ್ರದೇಶವು ದಕ್ಷಿಣ ಕೆನರಾ ಜಿಲ್ಲೆ ಎಂದು ಉಲ್ಲೇಖಿತವಾಗಿದೆ. ಈ ಜಿಲ್ಲೆಯ ಭೌಗೋಳಿಕ ಸೀಮೆಗಳು ಉತ್ತರದಲ್ಲಿ ಉತ್ತರ ಕೆನರಾ ಜಿಲ್ಲೆ, ಪೂರ್ವದಲ್ಲಿ ಮೈಸೂರು (ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ), ದಕ್ಷಿಣದಲ್ಲಿ ಮಲಬಾರ್ ಜಿಲ್ಲೆ ಹಾಗೂ ಪಶ್ಚಿಮದಲ್ಲಿ ಅರಬಿ ಸಮುದ್ರದವರೆಗೆ ವ್ಯಾಪಿಸಿಕೊಂಡಿವೆ. ಈ ಜಿಲ್ಲೆಯು 12.27 ಡಿಗ್ರಿ ಮತ್ತು 13.55 ಡಿಗ್ರಿ ಅಕ್ಷಾಂಶ ಹಾಗೂ 74.35 ಮತ್ತು 75.40 ಡಿಗ್ರಿ ರೇಖಾಂಶದ ಮಧ್ಯೆ ನಿಂತಿದೆ. ಕೈಸ್ತ ಶಖೆಯ ಆರಂಭದ ಸಂಗಮ್ ಸಾಹಿತ್ಯ ಕೃತಿಯು ಈ ಭೂಪ್ರದೇಶವನ್ನು ತುಳುನಾಡು ಎಂದು ಉಲ್ಲೇಖಿಸಿದೆ.[1] ಲೋಗನ್ ತನ್ನ ಮಲಬಾರ್ ಮ್ಯಾನುವೆಲ್‌ನಲ್ಲಿ ತುಳುವ ಎಂಬ ಪದವು ತುಳುಬಾನ್ ಪೆರುಮಾಳ್ ಎಂಬ ಕೇರಳದ ಒಬ್ಬ ಅರಸನಿಂದ ಬಂದಿದೆ ಎಂದೂ ದಕ್ಷಿಣ ಕೆನರಾವು ಕೇರಳದ ಒಂದು ಭಾಗವಾಗಿತ್ತೆಂದೂ ಬರೆದಿದ್ದಾನೆ.[2] ಆದರೆ ಸ್ಟ್ರಕ್‌ರ ಪುಸ್ತಕ

ದಲ್ಲಿ ತುಳುಬಾನ್ ಪೆರುಮಾಳ್ ಬಗ್ಗೆ ಯಾವುದೇ ಸಾಕ್ಷ್ಯಗಳಿಲ್ಲ.[3] ಕುಂದಾಪುರದ ಸಮೀಪದ ಕೋಟೇಶ್ವರದಲ್ಲಿ ತುಳುಬಾನ್ ಪೆರುಮಾಳ್‌ಗೆ ಸಂಬಂಧಿಸಿದ ರಾಜಧಾನಿ ಇತ್ತೆಂದೂ ಹೇಳಲಾಗಿದೆ. ಆದರೆ ಸ್ಟರ್ಕ್‌ರ ಪ್ರಕಾರ ತುಳುನಾಡು ಎಂಬ ಪದವು ತುಳು ಎಂಬ ಉಪಭಾಷೆಯಿಂದ ಬಂದಿದ್ದು, ಇದು ದಕ್ಷಿಣ ಕೆನರಾ ಪ್ರದೇಶದ ಶೇ. 75ರಷ್ಟು ಜನರ ಭಾಷೆಯಾಗಿತ್ತು. ತುಳುನಾಡು ಎಂಬುದು ಈ ಪ್ರದೇಶದ ಮೂಲ ಹೆಸರಾಗಿದ್ದು 1498ರಲ್ಲಿ ಪೋರ್ಚುಗೀಸರ ಆಗಮನದವರೆಗೂ ಈ ಹೆಸರೇ ಸಾಮಾನ್ಯವಾಗಿ ಬಳಕೆಯಲ್ಲಿತ್ತು.[4] ಪೋರ್ಚುಗೀಸರು ಈ ಪ್ರದೇಶವನ್ನು ಕೆನರಾ ಎಂದು ಕರೆದರು. ಯಾಕೆಂದರೆ ಅವರ ಭಾಷೆಯಲ್ಲಿ 'ಡ' ಎಂಬ ಪ್ರಯೋಗ ಹೆಚ್ಚಾಗಿ ಬಳಕೆಯಲ್ಲಿಲ್ಲದ ಕಾರಣ ಸಂಪರ್ಕ ಮಾಧ್ಯಮವಾಗಿದ್ದ ಕನ್ನಡ ಕೆನರಾ ಎಂದು ಬದಲಾಯಿತು.[5] ಕನ್ನಡವು ಈ ಪ್ರದೇಶದ ಲಿಖಿತ ಭಾಷೆಯಾಗಿದ್ದು ಎಲ್ಲ ದಾಖಲೆಗಳೂ ಈ ಭಾಷೆಯಲ್ಲೇ ನಮೂದಾಗಿದ್ದವು. ಬ್ರಿಟಿಷರ ಆಗಮನದೊಂದಿಗೆ ಕೆನರಾ ಎಂಬ ಹೆಸರು ಈ ಜಿಲ್ಲೆಯ ಜನಪ್ರಿಯ ಹೆಸರಾಗಿ ಮುಂದುವರಿಯಿತು. ಇದು ಮಲಬಾರ್ ಜಿಲ್ಲೆಯೆಂಬ ಹೆಸರಿಗೆ ಪರ್ಯಾಯವಾಗಿ ಚಾಲ್ತಿಗೆ ಬಂತು ಮತ್ತು ಈ ಜಿಲ್ಲೆಯು ವಾಣಿಜ್ಯ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿಯೂ ಪರಿವರ್ತನೆಗೊಂಡಿತು.

ಈ ಜಿಲ್ಲೆಯು ವಿಶಾಲವಾಗಿ ಹಬ್ಬಿದ್ದು ಸುಮಾರು 250 ಕಿ.ಮೀ.ಗಳಷ್ಟು ದೀರ್ಘವಾದ ತೀರವನ್ನು ಹೊಂದಿದೆ. ಸಾಗರ ತಟದಲ್ಲಿರುವುದರಿಂದ ಸಹಜವಾಗಿಯೇ ಸಾಗರೋದ್ಯಮಕ್ಕೆ ಇದು ಹೆಚ್ಚು ಪ್ರಶಸ್ತವಾಗಿದೆ. ಪಶ್ಚಿಮ ಘಟ್ಟಗಳ ತಪ್ಪಲಿನಿಂದ ಅರಬಿ ಸಮುದ್ರದ ನಡುವೆ ಸಪೂರವಾದ ಮತ್ತು ಉದ್ದನೆಯ ಭೂಭಾಗವನ್ನು ಇದು ಆವರಿಸಿಕೊಂಡಿದ್ದು ಇದೊಂದು ಲೋ ಟೇಬಲ್ ಲ್ಯಾಂಡ್ ಆಗಿದೆ. ಇಡೀ ಭೂಪ್ರದೇಶವು ಹಲವಾರು ತೊರೆ ಮತ್ತು ನದಿಗಳಿಂದಾಗಿ ಫಲವತ್ತಾಗಿದೆ. ಗಂಗೊಳ್ಳಿ, ಸೀತಾನದಿ, ಸುವರ್ಣ, ಶಾಂಭವಿ, ಪಲ್ಗುಣಿ (ಗುರುಪುರ), ನೇತ್ರಾವತಿ ಮತ್ತು ಪಯಸ್ವಿನಿ (ಚಂದ್ರಗಿರಿ) ಇಲ್ಲಿನ ಪ್ರಮುಖ ನದಿಗಳಾಗಿವೆ. ಈ ನದಿಗಳ ಮೂಲಕ ಒಂದು ಗಮನಾರ್ಹವಾದ ಆಂತರದವರೆಗೆ ಸಂಚಾರ ಸಾಧ್ಯವಾಗಿತ್ತು ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿತ್ತು. ಆರಂಭದ ಶತಮಾನಗಳಲ್ಲಿ ಈ ನದಿಗಳು ಆರ್ಥಿಕ ಚಟುವಟಿಕೆಗಳಲ್ಲಿ ದೊಡ್ಡ ಪಾತ್ರ ವಹಿಸಿದ್ದವು. ಈ ನದಿಗಳು ಮತ್ತು ಹಿನ್ನೀರು ಜನರ ವಾಸಕ್ಕೆ ಮತ್ತು ಸಂಸ್ಕೃತಿಯ ಉಗಮಕ್ಕೆ ಅನುಯೋಜ್ಯವಾದ ಹಿನ್ನೆಲೆಯನ್ನು ಕಲ್ಪಿಸಿಕೊಟ್ಟಿದ್ದವು.

ಸಂಸ್ಕೃತಿ ಮತ್ತು ಸಂಪ್ರದಾಯಗಳ ಆಧಾರದಲ್ಲಿ ಜಿಲ್ಲೆಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

1. ಬಾರ್ಕೂರು ಪ್ರದೇಶ
2. ಮಂಗಳೂರು ಪ್ರದೇಶ ಮತ್ತು
3. ಕಾಸರಗೋಡು ಪ್ರದೇಶ

ಅಲುಪಾ ಅರಸರ ಆಡಳಿತ ಕಾಲದಲ್ಲಿ ಬೈಂದೂರು ನಾಡು ಮತ್ತು ಮಂಗಳೂರು ನಾಡು ಎಂಬ ಎರಡು ವಿಭಾಗಗಳಿದ್ದವು. ವಿಜಯನಗರ ಸಾಮ್ರಾಜ್ಯದಡಿಯಲ್ಲಿ ಇವು ಬಾರ್ಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದು ಗುರುತಿಸಲ್ಪಟ್ಟಿದ್ದವು. ಕ್ರಿ.ಶ. 1896

ರವರೆಗೆ ಕೇವಲ ಐದು ತಾಲೂಕುಗಳಿದ್ದವು – ಕುಂದಾಪುರ, ಉಡುಪಿ, ಮಂಗಳೂರು, ಉಪ್ಪಿನಂಗಡಿ ಮತ್ತು ಕಾಸರಗೋಡು. ಕ್ರಿ.ಶ. 1910ರಲ್ಲಿ ಮೂಡಬಿದ್ರೆಯನ್ನು ಕೇಂದ್ರ ವಾಗಿರಿಸಿಕೊಂಡು ಕಾರ್ಕಳ ತಾಲೂಕು ಅಸ್ತಿತ್ವಕ್ಕೆ ಬಂತು. ಎರಡು ವರ್ಷದ ನಂತರ ಆಡಳಿತಾತ್ಮಕ ಅಗತ್ಯಗಳಿಗಾಗಿ ಕೇಂದ್ರ ಸ್ಥಾನವನ್ನು ಕಾರ್ಕಳಕ್ಕೆ ಸ್ಥಳಾಂತರಿಸಲಾಯಿತು. ಕ್ರಿ.ಶ. 1927ರಲ್ಲಿ ಉಪ್ಪಿನಂಗಡಿ ತಾಲೂಕು, ಪುತ್ತೂರು ತಾಲೂಕು ಎಂದು ನಾಮಕರಣಗೊಂಡಿತು.[6]

ಅ. ಬಾರ್ಕೂರು ವಿಭಾಗ

ಬಾರ್ಕೂರು ಪ್ರದೇಶವು ಎರಡು ತಾಲೂಕುಗಳನ್ನೊಳಗೊಂಡಿದೆ – ಕುಂದಾಪುರ ಮತ್ತು ಉಡುಪಿ. ಈ ಪ್ರದೇಶದಲ್ಲಿ ಗಂಗೊಳ್ಳಿ, ಸೀತಾನದಿ, ಸುವರ್ಣ ಮತ್ತು ಉದ್ಯಾವರ ಹೊಳೆ ಎಂಬ ನಾಲ್ಕು ನದಿಗಳಿದ್ದು ಗಂಗೊಳ್ಳಿ ನದಿಯು ರಮಣೀಯವಾದ ಸಮುದ್ರಕೊಲ್ಲಿ ಯನ್ನು ಹೊಂದಿದೆ. ಕೊಲ್ಲೂರು, ಹಾಲಾಡಿ ಮತ್ತು ಚಕ್ರಾನದಿಯು ಉತ್ತರ ಕುಂದಾಪುರದ ಹಿನ್ನೀರಾಗಿದೆ. ಹಾಲಾಡಿಯು ಸುಮಾರು 18 ಕಿ.ಮೀ. ದೂರದವರೆಗೆ ಸಂಚಾರಯೋಗ್ಯ ವಾಗಿದ್ದು ಚಕ್ರಾ ನದಿಯು ವಂಡ್ಸೆಗೆ ದೋಣಿಯ ಮೂಲಕ ಸಂಪರ್ಕ ಕಲ್ಪಿಸುತ್ತಿತ್ತು.[7] ಸೀತಾ ನದಿ ಮತ್ತು ಸುವರ್ಣ ನದಿಯು ಸುಮಾರು 15 ಕಿ.ಮೀ. ದೂರದವರೆಗೆ ಸಂಚಾರ ಕಲ್ಪಿಸುತ್ತಿತ್ತು. ಈ ಹಿನ್ನೀರು ಮತ್ತು ಅಳಿವೆಯಿಂದಾಗಿ ಇಲ್ಲಿ ಫಲವತ್ತಾದ ಉಸುಕು ಮರಳಿನಿಂದ ಕೂಡಿದ ಮೆಕ್ಕಲು ಭೂಮಿ ನಿರ್ಮಾಣವಾಗಿದ್ದು, ಇದು ಈ ರೇವು ಜಿಲ್ಲೆಯ ಅತ್ಯಂತ ದೊಡ್ಡ ವಿಶೇಷತೆಯಾಗಿದೆ. ಇದು ತೆಂಗು, ಕಬ್ಬು ಕೃಷಿ ಹಾಗೂ ಸಾಮಾನ್ಯ ಬೆಳೆಯಾಗಿರುವ ಭತ್ತಕ್ಕೆ ಅತ್ಯಂತ ಅನುಯೋಜ್ಯ ವಾದ ಭೂಮಿ. ಈ ನದಿಗಳು ಮತ್ತು ಹಿನ್ನೀರು ಸೇತುವೆ ನಿರ್ಮಿಸಲು ಸಾಧ್ಯವಾಗದಷ್ಟು ದೊಡ್ಡದಾಗಿದ್ದುದರಿಂದ ರಸ್ತೆ ಸಂಪರ್ಕವು ಕಡೆಗಣಿಸಲ್ಪಟ್ಟಿತ್ತು ಮತ್ತು ರಸ್ತೆಗಳಿಗೆ ವಾಣಿಜ್ಯಾತ್ಮಕ ಮೌಲ್ಯ ಇರಲಿಲ್ಲ. ಕುಂದಾಪುರ–ವಂಡ್ಸೆ, ಕುಂದಾಪುರ–ಹಾಲಾಡಿ, ಕಾಪು–ಉದ್ಯಾವರ ಹಾಗೂ ಹಿನ್ನೀರಿನ ಮೂಲಕ ಕಲ್ಯಾಣಪುರ, ಹಂಗಾರಕಟ್ಟೆ ಮತ್ತು ಮಾನೂರು, ಇವು ಆ ಕಾಲದ ಪ್ರಮುಖ ಸಂಪರ್ಕ ಮಾರ್ಗಗಳಾಗಿದ್ದವು. ಮುಸ್ಲಿಮರು ವ್ಯಾಪಾರ ಮತ್ತು ಸಾಗಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಈ ಪ್ರದೇಶಗಳು ಬಹುತೇಕ ಮುಸ್ಲಿಮರಿಂದಲೇ ತುಂಬಿಕೊಂಡಿತ್ತು.

ಕರಾವಳಿ ಪ್ರದೇಶವು ಅವರ ವ್ಯಾಪಾರದ ಹೆಬ್ಬಾಗಿಲಾಗಿತ್ತು. ಶಿರೂರು ಆಗ ಉತ್ತರ ಗಡಿಯ ಒಂದು ಸಣ್ಣ ಬಂದರಾಗಿತ್ತು. ಕುಂದಾಪುರವು ಐದು ನದಿಗಳು ಸೇರುವ ಅಳಿವೆಯ ಮೇಲೆ ನಿಂತಿದೆ. ಅದೊಂದು ಸಾಂಪ್ರದಾಯಿಕ ಬಂದರಾಗಿತ್ತು. ಬಸ್ರೂರು ಆರಂಭ ಕಾಲದ ಅತ್ಯಂತ ಮುಖ್ಯ ವಾಣಿಜ್ಯ ಕೇಂದ್ರವಾಗಿತ್ತು. ಕ್ರಿ.ಶ. 1514ರಲ್ಲಿ ಡ್ವಾರ್ಟ್ ಬರ್ಬೋಸಾ ಹೇಳುವ ಪ್ರಕಾರ ಬಸ್ರೂರಿಗೆ ಹಲವು ಹಡಗುಗಳು ಮಲಬಾರ್‌ನಿಂದಲೂ ಆರ್ಮೆಜ್, ಏಡೆನ್ ಮತ್ತು ಜುಬೇರ್‌ನಿಂದಲೂ ಆಗಮಿಸುತ್ತಿದ್ದವು.[8] ಕೋಡಿಯು ಗಂಗೊಳ್ಳಿಯ ಹಿನ್ನೀರು ಮತ್ತು ನದಿದ್ವಾರದ ಎದುರಿಗಿದೆ. ಇದೊಂದು ಸಾಂಪ್ರದಾಯಿಕ ಮೀನುಗಾರಿಕಾ ಕೇಂದ್ರ. ಗಂಗೊಳ್ಳಿ ಎಂಬುದು ನದಿಯ ದಕ್ಷಿಣದಲ್ಲಿರುವ ಭಾಗ. ಹಂಗಾರಕಟ್ಟೆಯೆಂಬ ಸಣ್ಣ ಬಂದರು ಬಾರ್ಕೂರು ಬಂದರು ಎಂದು ಕರೆಯಲ್ಪಡುತ್ತದೆ. ಬಾರ್ಕೂರು ಆಂದಿನ ಸಾಮ್ರಾಜ್ಯದ

ಕೇಂದ್ರವೂ ವ್ಯಾಪಾರ ಕೇಂದ್ರವೂ ಆಗಿತ್ತು. ಅದು ವಿಜಯನಗರ ಆಡಳಿತಗಾರರ ಕೇಂದ್ರ ವಾಗಿತ್ತು. ಅದು ಮುಸ್ಲಿಮರ ಕೇಂದ್ರವೂ ಆಗಿತ್ತು. ಅತ್ಯಂತ ಪುರಾತನವಾದ ದೀನಾರ್ ಪಳ್ಳಿ (ಮಸೀದಿ) ಇಲ್ಲಿ ನಿರ್ಮಾಣಗೊಂಡಿತ್ತು ಎನ್ನಲಾಗಿದೆ. ಮಲ್ಪೆಯು ಜಿಲ್ಲೆಯ ಅತ್ಯುತ್ತಮ ಬಂದರಾಗಿದ್ದು ಅದನ್ನು ಉಡುಪಿಯ ಬಂದರು ಎಂದೂ ಕರೆಯಲಾಗುತ್ತಿತ್ತು. ಹಡಗುಗಳನ್ನು ನಿಲ್ಲಿಸುವ ಸ್ಥಾನವು ದರಿಯಾ ಬಹದೂರ್‌ಗಢ್ (ಸೈಂಟ್ ಮೇರೀಸ್ ದ್ವೀಪ)ನಿಂದ ಆಶ್ರಿತ ವಾಗಿದ್ದು ಇದು ನದಿದ್ವಾರದ ಮೇಲೆ ನಿಂತಿದೆ.

ಆ. ಮಂಗಳೂರು ವಿಭಾಗ

ಮಂಗಳೂರು ಪಶ್ಚಿಮ ಕರಾವಳಿಯು ಅತ್ಯಂತ ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಅದು, ಪ್ರಾಂತ್ಯದ ಮುಖ್ಯ ಪಟ್ಟಣವೂ ಆಗಿತ್ತು. ನೇತ್ರಾವತಿ ನದಿಯು ಬಂಟ್ವಾಳದವರೆಗೆ ದೋಣಿ ಸಂಪರ್ಕ ಕಲ್ಪಿಸುತ್ತದೆ ಮತ್ತು ಉಪ್ಪಿನಂಗಡಿಗೂ ಇಲ್ಲಿ ಜಲಸಾರಿಗೆ ಸಾಧ್ಯವಿದೆ. ನೇತ್ರಾವತಿಯು ಜಿಲ್ಲೆಯ ಅತ್ಯಂತ ದೊಡ್ಡ ನದಿಯಾಗಿದ್ದು ಫಲ್ಗುಣಿ (ಗುರುಪುರ), ಶಾಂಭವಿ (ಮೂಲ್ಕಿ) ಜಿಲ್ಲೆಯ ಇನ್ನೆರಡು ಪ್ರಮುಖ ನದಿಗಳಾಗಿವೆ. ಹಿನ್ನೀರೂ ಸೇರಿದಂತೆ ಅವು ನದಿ ದ್ವಾರದಿಂದ ತುಸು ದೂರದವರೆಗಷ್ಟೆ ಸಾರಿಗೆ ಸಂಪರ್ಕ ಸಾಧ್ಯವಿರುವ ನದಿಗಳಾಗಿವೆ. ಮಂಗಳೂರಿನಿಂದ ಬಂಟ್ವಾಳದವರೆಗೆ, ಹಾಗೂ ಪಾಣೆ ಮಂಗಳೂರಿನವರೆಗೆ ಸುಮಾರು 25 ಕಿ.ಮೀ. ವ್ಯಾಪ್ತಿಯವರೆಗೆ ಜಲಸಾರಿಗೆ ಸಾಧ್ಯವಿತ್ತು. ಮಂಗಳೂರಿನಿಂದ ಗುರುಪುರವರೆಗೆ ನದಿ ದ್ವಾರದಿಂದ ಸುಮಾರು 15 ಕಿ.ಮೀ.ವರೆಗೆ ಸಂಪರ್ಕ ಸಾಧ್ಯವಿತ್ತು. ಮಂಗಳೂರಿನಿಂದ ಪಣಂಬೂರಿಗೆ ಹಾಗೂ ಮುಕ್ಕಾದಿಂದ ಮುಲ್ಕಿ ಮತ್ತು ಹೆಜಮಾಡಿಗೆ ಹಿನ್ನೀರಿನ ಸಾರಿಗೆ ಸಂಪರ್ಕ ಸಾಧ್ಯವಿತ್ತು.

ಮಂಗಳೂರು ಕೊಡಿಯಾಲ್ ಬಂದರ್ ಎಂದು ಸ್ಥಳೀಯರಿಂದ ಕರೆಯಲ್ಪಡುತ್ತಿತ್ತು ಮತ್ತು ಅದು ಅತ್ಯಂತ ಪ್ರಮುಖ ಬಂದರಾಗಿತ್ತು. ಅದು ತುಳುನಾಡಿನ ರಾಜಕೀಯ ರಾಜಧಾನಿಗಿಂತಲೂ ವಾಣಿಜ್ಯ ರಾಜಧಾನಿಯಾಗಿತ್ತು.[9] 1542ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಇಬ್ನೆ ಬತೂತ, ಬಾರ್ಬೋಸಾ ಹಾಗೂ ಪರ್ಶಿಯಾ, ಯಮನ್‌ನ ವ್ಯಾಪಾರಿಗಳು ಈ ನಗರಕ್ಕೆ 1514ರಲ್ಲಿ ಭೇಟಿ ನೀಡಿದ್ದರು ಎಂದು ಬರೆದಿದ್ದಾನೆ.[10] ಆತ ಅದನ್ನು ಅತ್ಯಂತ ದೊಡ್ಡ ಪಟ್ಟಣ ವೆಂದೂ ಬ್ಯಾರಿಗಳಿಂದ (ಮೂರ್) ಮತ್ತು ಜೆಂಟೈಲ್‌ಗಳಿಂದ ತುಂಬಿತ್ತೆಂದೂ ಅವರು ಭತ್ತ ಮತ್ತು ಕರಿಮೆಣಸು ರಫ್ತು ಮಾಡುತ್ತಿದ್ದರೆಂದೂ ಬರೆದಿದ್ದಾನೆ. ಮಂಗಳೂರು ತೆಂಗಿನ ತೋಟ ಗಳ ಮಧ್ಯೆ ಕಂಗೊಳಿಸುತ್ತಿರುವ ಸುಂದರ ನಗರ. ಅದು ಗುರುಪುರ ಮತ್ತು ನೇತ್ರಾವತಿ ನದಿಯ ಸಂಗಮದ ಮೇಲೆ ನಿಂತಿದೆ. ಸ್ಥಳೀಯ ಮುಸ್ಲಿಮರ ಮಟ್ಟಿಗೆ ಅದು ಮೈಕಾಲವಾಗಿದ್ದು ಮಲಬಾರಿಗಳು ಅದನ್ನು ಮಂಗಳಾಪುರ ಎಂದು ಕರೆಯುತ್ತಾರೆ.

ಉಳ್ಳಾಲವು ನೇತ್ರಾವತಿಯ ದಕ್ಷಿಣ ದಂಡೆಯ ಮೇಲೆ ಮಂಗಳೂರಿಗೆ ಎದುರಾಗಿ ನಿಂತಿದೆ. ಅದು ಜೈನ ರಾಜಮನೆತನವಾದ ಚೌಟರಿಗೆ ಸೇರಿದೆ. ಅದು ಮೀನುಗಾರಿಕೆ ಮತ್ತು ವ್ಯಾಪಾರಕ್ಕೆ ಹೆಸರಾಗಿದೆ. ಮೂಲ್ಕಿ ಇನ್ನೊಂದು ಪಟ್ಟಣ ಮತ್ತು ಬಂದರು. ಅದು ಬಪ್ಪ ನಾಡು, ಕಸ್ಬಾ ಬಜಾರ್ ಮತ್ತು ಮನಂಬಾಡಿ ಗ್ರಾಮದ ಒಂದು ಭಾಗವನ್ನು ಒಳಗೊಂಡಿದೆ. ಶಾಂಭವಿ

ನದಿಯ ನೀರು ಸಮುದ್ರ ಸೇರುವ ಭಾಗದಲ್ಲಿ ಈ ಬಂದರು ನಿಂತಿದೆ.

ಇ. ಕಾಸರಗೋಡು ವಿಭಾಗ

ಕಾಸರಗೋಡು ದಕ್ಷಿಣದ ತುತ್ತ ತುದಿಯಲ್ಲಿರುವ ವಿಭಾಗವಾಗಿದ್ದು ದಕ್ಷಿಣದಲ್ಲಿ ಮಲಬಾರ್ ಜಿಲ್ಲೆಯೊಂದಿಗೆ ಗಡಿಯನ್ನು ಹೊಂದಿದೆ. ಅದು ಕಾಸರಗೋಡು ಮತ್ತು ಉಪ್ಪಿನಂಗಡಿ ಎಂಬ ಎರಡು ತಾಲೂಕುಗಳನ್ನೊಳಗೊಂಡಿತ್ತು. ಉಪ್ಪಿನಂಗಡಿ ತಾಲೂಕು ಕ್ರಮೇಣ ಪುತ್ತೂರು ತಾಲೂಕು ಎಂದು ಹೆಸರು ಪಡೆಯಿತು. ಈ ಭಾಗದಲ್ಲಿ ಆರು ನದಿಗಳಿದ್ದು ಪ್ರತಿಯೊಂದು ಕೂಡಾ ಆರಂಭ ಕಾಲದಲ್ಲಿ ಕೇವಲ ಅಲ್ಪ ದೂರಕ್ಕೆ ಮಾತ್ರ ಸಾರಿಗೆ ಸಾಧ್ಯವುಳ್ಳವುಗಳಾಗಿದ್ದವು. ಮಂಜೇಶ್ವರದ ದಕ್ಷಿಣಕ್ಕಿರುವ ಉಪ್ಪಳ ನದಿಯ ಮೇಲೆ ಪೈವಳಿಕೆ ಎಂಬಲ್ಲಿಯ ವರೆಗೆ ಸಂಚಾರ ಸಾಧ್ಯವಿತ್ತು. ಶಿರಿಯಾ ನದಿಯ ಮೇಲೆ ಬಾಡೂರ್‌ವರೆಗೆ ಸಂಚರಿಸಬಹುದಾಗಿತ್ತು. ಮೊಗ್ರಾಲ್ ನದಿಯು ಅದರ ಉಗಮ ಸ್ಥಾನದಿಂದ ಹತ್ತು ಕಿ.ಮೀ.ವರೆಗೆ ಸಂಚಾರ ಕಲ್ಪಿಸುತ್ತಿತ್ತು. ಚಂದ್ರಗಿರಿ ಮತ್ತು ಪಯಸ್ವಿನಿ ನದಿಗಳ ಮೇಲೆ 15 ಕಿ.ಮೀ. ದೂರದವರೆಗೆ ಸಂಚರಿಸಬಹುದಾಗಿತ್ತು.

ಕನ್ಹಾರೊಟ್ಟು ಎಂದು ಸ್ಥಳೀಯರಿಂದ ಕರೆಯಲ್ಪಡುವ ಕಾಸರಗೋಡು ಚಂದ್ರಗಿರಿಯ ತೀರದಲ್ಲಿರುವ ಪ್ರಾಚೀನ ಪಟ್ಟಣ ಮತ್ತು ಬಂದರು. ಅದು ಕದಂಬರ ಪ್ರಸಿದ್ಧ ಬಂದರುಗಳ ಪೈಕಿ ಒಂದಾಗಿತ್ತು ಮತ್ತು ತುಳುನಾಡಿನ ದಕ್ಷಿಣದ ತುದಿಯಲ್ಲಿರುವ ಪಟ್ಟಣವೂ ಆಗಿತ್ತು. ಮಾಲಿಕ್ ದೀನಾರ್ ಮಸೀದಿಯು 9ನೇ ಶತಮಾನದಲ್ಲಿ ಚೆರುಮನ್ ಪೆರುಮಾಳ್ ಎಂಬ ಮಲಬಾರ್ ರಾಜನಿಂದ ನಿರ್ಮಾಣಗೊಂಡಿದ್ದು ಅದು ದೀನಾರ್ ಧರ್ಮಪ್ರಚಾರ ಚಟುವಟಿಕೆಗಳ ಕೇಂದ್ರವೂ ಆಗಿತ್ತು. ಕುಂಬಳೆ ಇನ್ನೊಂದು ಪ್ರಾಚೀನ ಬಂದರಾಗಿದ್ದು ಅದನ್ನು ಕನ್ಯಾರ ಅಥವಾ ಕನ್ನಿಪುರಮ್ ಎಂದೂ ಕರೆಯಲ್ಪಡುತ್ತಿತ್ತು. ಅದು ಸ್ಥಳೀಯ ರಾಜ ಮನೆತನದ ಕೇಂದ್ರವೂ ಮಾಲ್ದೀವ್ಸ್‌ಗೆ ಆರಂಭ ಕಾಲದಲ್ಲಿ ಅಕ್ಕಿ ರಫ್ತು ಮಾಡುವ ಮೂಲಕ ಹೆಸರು ಪಡೆದಿತ್ತು.[11] ಮಂಜೇಶ್ವರವು ಒಂದು ಸಣ್ಣ ತೊರೆಯು ಸಾಗರವನ್ನು ಸೇರುವಲ್ಲಿ ಇರುವ ಇನ್ನೊಂದು ಸಾಂಪ್ರದಾಯಿಕ ಬಂದರಾಗಿದೆ. ಉದ್ಯಾವರವು ಮಂಜೇಶ್ವರಕ್ಕೆ ಸೇರ್ಪಡೆಗೊಂಡ ಬ್ಯಾರಿ ಪಟ್ಟಣ. ಬೇಕಲ್ ಕಾಸರಗೋಡಿನ ದಕ್ಷಿಣಕ್ಕಿರುವ ಕೋಟೆಯಾಗಿದ್ದು ಸ್ಥಳೀಯ ಪಾಳೇಗಾರರ ಪ್ರಮುಖ ಕೇಂದ್ರವಾಗಿತ್ತು. ಕಾಸರಗೋಡು ತಾಲೂಕು ಹಲವು ವರ್ಷಗಳವರೆಗೆ ಬೇಕಲ್ ತಾಲೂಕು ಎಂದೂ ಕರೆಯಲ್ಪಡುತ್ತಿತ್ತು.

2. ತುಳುನಾಡಿನ ಮುಸ್ಲಿಮರು

ಕ್ರಿ.ಶ. 1871ರಲ್ಲಿ ಇಲ್ಲಿ ಮೊಟ್ಟ ಮೊದಲ ಜನಗಣತಿ ನಡೆಯಿತು ಮತ್ತು ತದನಂತರ ಪ್ರತಿ ಹತ್ತು ವರ್ಷಗಳಿಗೊಮ್ಮೆ ಈ ಪ್ರಕ್ರಿಯೆ ನಡೆಯುತ್ತಲೇ ಹೋಯಿತು. ಸ್ಟರ್ಕ್ ತನ್ನ ಸೌತ್ ಕೆನರಾ ಮ್ಯಾನುವೆಲ್‌ನಲ್ಲಿ ಜಿಲ್ಲೆಯ ಜನಸಂಖ್ಯೆಯನ್ನು 1891ರ ಜನಗಣತಿ ಪ್ರಕಾರ ದಾಖಲಿಸಿದ್ದಾನೆ.[12]

ಟೇಬಲ್-1 ಜಿಲ್ಲೆಯ ಜನಸಂಖ್ಯೆ

	ತಾಲೂಕು	ಮುಸ್ಲಿಮರು	ಹಿಂದೂಗಳು	ಒಟ್ಟು
1.	ಕುಂದಾಪುರ	5,222	1,11,805	1,20,268
2.	ಕಾಸರಗೋಡು	56,731	2,16,946	2,8,659
3	ಮಂಗಳೂರು	30,670	2,01,287	2,78,908
4.	ಉಡುಪಿ	7,125	2,27,041	2,53,717
5.	ಪುತ್ತೂರು	8,613	1,05,494	1,18,807
	ಒಟ್ಟು	1,08261	8,62,573	10,52,359
	ಒಟ್ಟು ಶೇಕಡಾವಾರು	10.3%	82%	

ಜನಗಣತಿ ವರದಿ ಪ್ರಕಾರ ಜಿಲ್ಲೆಯ ಅತಿ ದೊಡ್ಡ ಸಮುದಾಯ ಹಿಂದೂಗಳದ್ದಾಗಿದ್ದು ಮುಸ್ಲಿಮರು ಶೇಕಡಾ 10ಕ್ಕೂ ಹೆಚ್ಚಿನ ಪ್ರಮಾಣದಲ್ಲಿದ್ದು ದ್ವಿತೀಯ ಸ್ಥಾನದಲ್ಲಿದ್ದಾರೆ. ಈ ಪ್ರದೇಶದಲ್ಲಿ ಮುಸ್ಲಿಮ್ ಜನಸಂಖ್ಯೆಯು ಗಮನಾರ್ಹ ಹೆಚ್ಚಳ ಕಂಡಿದ್ದು ಸ್ಥಳೀಯ ಸಂಸ್ಕೃತಿಯ ಮೇಲೂ ನಿಕಟ ಪರಿಣಾಮ ಬೀರಿದೆ.

ಟೇಬಲ್-2

ಜನಸಂಖ್ಯೆಯಲ್ಲಾಗಿರುವ ಹೆಚ್ಚಳ - 1941ರ ಜನಗಣತಿಗೆ ಹೋಲಿಸಿದಾಗ

	ತಾಲೂಕುಗಳು	ಮುಸ್ಲಿಮರು	
		1891	1941
1.	ಕುಂದಾಪುರ	5,122	9,042
2.	ಕಾಸರಗೋಡು	56,731	95,542
3.	ಮಂಗಳೂರು	30,670	56,679
4.	ಪುತ್ತೂರು	8,613	29,492
5.	ಉಡುಪಿ	7,125	10,879
6.	ಕಾರ್ಕಳ	–	6,298
	ಒಟ್ಟು	1,08,261	2,07,932
	ಶೇಕಡಾವಾರು	10.3%	13.7%

ಕ್ರೈಸ್ತರು ಹಾಗೂ ಇತರರು ಸೇರಿದಂತೆ ಒಟ್ಟು ಜನಸಂಖ್ಯೆ: 15,17,339.[13]

ಅರೇಬಿಯಾದಲ್ಲಿ ಇಸ್ಲಾಮ್ ಪ್ರಸಾರವಾಗತೊಡಗಿದ ಕಾಲದಲ್ಲೇ ಇಸ್ಲಾಮ್ ಇಲ್ಲಿನ ಕರಾವಳಿಯನ್ನು ತಲುಪಿತು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಪ್ಲಿನಿ

ಎಂಬಾತನ ಪ್ರಕಾರ ಕರಾವಳಿಯಲ್ಲಿ ಅರಬ್ ವಸತಿಗಳು ಕ್ರಿ.ಶ. 1ರಲ್ಲೇ ಇತ್ತು. ಇಸ್ಲಾಮ್-ಪೂರ್ವದ ಕಾಲದಿಂದಲೂ ವಾಣಿಜ್ಯ ಸಂಬಂಧಗಳು ಜಾರಿಯಲ್ಲಿದ್ದವು ಮತ್ತು ಅನಂತರವೂ ಮುಂದುವರಿಯಿತು ಎಂಬುದು ಆತನ ವಾದ.[14]

ಆರಂಭದ ಶತಮಾನಗಳಲ್ಲಿ ಮುಸ್ಲಿಮ್ ಜನಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲು ಹಲವಾರು ಕಾರಣಗಳಿದ್ದವು.

1. ಅರಬ್ ಸಂಪರ್ಕ
2. ಜಾತಿ ತಾರತಮ್ಯ
3. ರಾಜಾಶ್ರಯ
4. ಮಿಷನರಿಗಳ ಧರ್ಮ ಪ್ರಚಾರ
5. ಸೂಫಿ ಪ್ರಭಾವ
6. ಮುಸ್ಲಿಮ್ ವರ್ತಕರ ಪ್ರಭಾವ

1. ಅರಬ್ ಸಂಪರ್ಕ

ಆಗರ್ತಸೀಡನ ಕಾಲದ ಮಲಬಾರ್ ಕರಾವಳಿಯಲ್ಲಿ ಸಾಕಷ್ಟು ಸಂಖ್ಯೆಯ ಅರಬಿಗಳಿದ್ದರು. ಇವರು ಅರಬ್ ಧರ್ಮ (ಸಬಯನ್)ವನ್ನು ಅಂಗೀಕರಿಸಿದವರಾಗಿದ್ದರು. ರೀನಾರ್ಡ್‌ರ ಪ್ರಕಾರ ಫರ್ಷಿಯನ್‌ರೊಂದಿಗೆ ಸೇರಿಕೊಂಡು ಸೃಷ್ಟಿಯಾದ ಒಂದು ನಂಬಿಕೆ ಅದಾಗಿತ್ತು. ಹದಿನಾಲ್ಕನೇ ಶತಮಾನದವರೆಗೆ ಪರ್ಷಿಯನರು ಈ ಕರಾವಳಿಯ ಮೇಲೆ ತದನಂತರದ ಕಾಲದಲ್ಲಿ ಪೋರ್ಚುಗೀಸರು ಹೊಂದಿದ್ದಂತಹದ್ದೇ ಪ್ರಭಾವವನ್ನು ಹೊಂದಿದ್ದರು.[15] ರೌಲಾಂಡ್‌ಸನ್‌ನ ಪ್ರಕಾರ ಮುಸ್ಲಿಮ್ ಅರಬರು ಮಲಬಾರ್ ಕರಾವಳಿಯಲ್ಲಿ ಮೊಟ್ಟಮೊದಲ ಬಾರಿಗೆ ನೆಲೆಸಿದ್ದು ಕ್ರಿ.ಶ. ಏಳನೇ ಶತಮಾನದಲ್ಲಿ. ಫ್ರಾನ್ಸಿಸ್ ಡೇ ಮತ್ತು ಸ್ಟರ್ಕ್ ಕೂಡಾ ಈ ಅಭಿಪ್ರಾಯವನ್ನು ಬೆಂಬಲಿಸುತ್ತಾರೆ. ಅವರ ಪ್ರಕಾರ ಪರ್ಷಿಯನರು ಮತ್ತು ಅರಬ್ ವರ್ತಕರು ಭಾರಿ ಸಂಖ್ಯೆಯಲ್ಲಿ ಭಾರತದ ಪಶ್ಚಿಮ ಕರಾವಳಿಯ ವಿವಿಧ ಭಾಗಗಳಲ್ಲಿ ನೆಲೆಸಿದರು ಮತ್ತು ಸ್ಥಳೀಯ ಮಹಿಳೆಯರನ್ನು ಮದುವೆಯಾದರು.[16] ಅದರಲ್ಲೂ ಅರಬ್ ಮುಸ್ಲಿಮರು ಕರಾವಳಿ ಗುಂಟ ನೆಲೆಸಲಾರಂಭಿಸಿದರು ಮತ್ತು ಸ್ಥಳೀಯ ಸ್ತ್ರೀಯರನ್ನು ವಿವಾಹವಾದರು ಮತ್ತು ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಮೈಗೂಡಿಸಿಕೊಂಡರು. ಕ್ರಿ.ಶ. 1342ರಲ್ಲಿ ಬಾರ್ಕೂರಿಗೆ ಬಂದಿದ್ದ ಇಬ್ನೆ ಬತೂತ ಕೆನರಾ ಪ್ರದೇಶದಲ್ಲಿ ಯಮನ್ ಮತ್ತು ಪರ್ಷಿಯಾದಿಂದ ಬಂದ ಮುಸ್ಲಿಮ್ ವರ್ತಕರನ್ನು ಕಂಡಿದ್ದ.[17] ಏಳನೇ ಶತಮಾನದ ನಂತರವಂತೂ ಅರಬರು ಮತ್ತು ಪರ್ಷಿಯನರು ಬಾರ್ಕೂರು, ಮಂಗಳೂರು, ಉಳ್ಳಾಲ, ಮಂಜೇಶ್ವರ ಮತ್ತು ಕಾಸರಗೋಡಿನೊಂದಿಗೆ ವಾಣಿಜ್ಯ ಸಂಬಂಧ ಹೊಂದಿದ್ದರು ಮತ್ತು ಅಲ್ಲೇ ಬಿಡಾರ ಹೂಡಿದ್ದರು.[18] ಅವರು ಸ್ಥಳೀಯ ಮಹಿಳೆಯರನ್ನು ಮದುವೆಯಾಗಿ ಇಲ್ಲೇ ನೆಲೆಸಿದರು.ಅರಬರು ಯಾವುದೇ ರಾಜಕೀಯ ಮಹತ್ವಾಕಾಂಕ್ಷೆ ಅಥವಾ ಧರ್ಮ ಪ್ರಚಾರದ ಉದ್ದೇಶದಿಂದ ಭಾರತಕ್ಕೆ ಬಂದಿರಲಿಲ್ಲ.ಇಸ್ಲಾಮಿನ ಆಗಮನಕ್ಕಿಂತ ಹಿಂದೆ ವಂಶ ಪಾರಂಪರ್ಯದಿಂದ ಬಂದ ವ್ಯಾಪಾರವೇ ಅವರ ಮೂಲ ಕಸುಬಾಗಿತ್ತು.[19] ಅರಬ್ ಮುಸ್ಲಿಮ್ ವ್ಯಾಪಾರಿ

ಗಳು ಕರಾವಳಿಯುದ್ದಕ್ಕೂ ತಳವೂರಿ ವಿವಿಧ ಮುಸ್ಲಿಮ್ ಜನಾಂಗಗಳ ಹುಟ್ಟಿಗೆ ಕಾರಣ ರಾದರು. ಅರಬರು ನಿಸ್ಸಂಶಯವಾಗಿ ಭಾರತದ ಆಚೆ ಚೀನಾವರೆಗೂ ವ್ಯಾಪಾರವನ್ನು ಸ್ಥಾಪಿಸಿದ್ದರು. ಅವರು ಹೋದಲ್ಲೆಲ್ಲ ಇತರರೊಂದಿಗೆ ಬೆರೆತರು ಮತ್ತು ಸ್ಥಳೀಯ ಸಮುದಾಯ ವಾಗಿ ಬಾಳಿದರು.[20] ತಮ್ಮದೇ ಆದ ಸ್ಥಳೀಯ ಸಂಸ್ಕೃತಿಯನ್ನೂ ಭಾಷೆಯನ್ನೂ ಅವರು ಬೆಳೆಸಿದರು.

2. ಜಾತೀಯತೆ

ತುಳುನಾಡಿನ ಅತ್ಯಂತ ಹಳೆಯ ನಿವಾಸಿಗಳೆಂದರೆ ಕೊರಗರು ಮತ್ತು ಮನ್ಸರು. ಈಗ ಮನ್ಸರನ್ನು ಹರಿಜನರೆಂದೋ ದಲಿತರೆಂದೋ ಕರೆಯಲಾಗುತ್ತದೆ. ''ನಂದರಾಯನ ಸಂಪತ್ತನ್ನು ನರಿ-ನಾಯಿ ತಿಂದುಹೋಯಿತು'' ಎಂಬ ಒಂದು ಗಾದೆಯಿದೆ. ಇದು ನಂದು ಎಂಬ ಕೊರಗ ಮುಖಂಡನಿಗೆ ಸಂಬಂಧಿಸಿದ್ದೆಂದು ಹೇಳಲಾಗುತ್ತದೆ. ಬಿಲ್ಲವರು ತಮ್ಮ ಬಿಲ್ಲು ಬಾಣಗಳ ಮೂಲಕ ಭೂತಾರಾಧನೆಯನ್ನು ಹಿಡಿದುಕೊಂಡು ಅವರ ಮೇಲೆ ಎರಗಿದರು ಮತ್ತು ಪೂಜಾರಿ ಎಂಬ ಹೆಸರಿನಲ್ಲಿ ಸಮಾಜದ ಪುರೋಹಿತರಾಗಿ ಮಾರ್ಪಟ್ಟರು. ಬಂಟರು (ನಾಡವರು) ಅವರನ್ನು ಸೇರಿಕೊಂಡ ಇನ್ನೊಂದು ವರ್ಗ.[21] ಬಿಲ್ಲವ ವರ್ಗದಲ್ಲಿ ಪೂಜಾರಿಗಳು, ಬೋವಿ, ಮೊಗವೀರ ಮತ್ತು ಮರಕಲರೆಂಬ ಮೀನುಗಾರ ಪಂಗಡಗಳೂ ಇವೆ. ಮಲಬಾರ್‌ನಲ್ಲಿ ಇವರು ತೀಯಾಗಳು ಮತ್ತು ಮುಕ್ಕುವಾಗಳೆಂದೂ ಕರೆಯಲ್ಪಡುತ್ತಾರೆ. ಬನವಾಸಿಯ ಕದಂಬರ ಕಾಲದಲ್ಲಿ ಬ್ರಾಹ್ಮಣ ಕುಟುಂಬಗಳು ಇಲ್ಲಿಗೆ ಆಗಮಿಸಿದವು. ಅವರ ಹಿಂದೆಯೇ ಜೈನರ ಆಗಮನವಾಯಿತು. ಬ್ರಾಹ್ಮಣರ ಪ್ರಾಬಲ್ಯದೊಂದಿಗೆ ಹರಿಜನರು ಮತ್ತು ಬಿಲ್ಲವರು ಅಸ್ಪೃಶ್ಯ ರಾಗಿ ಬಿಟ್ಟರು ಮತ್ತು ಕ್ರಮೇಣ ದುರ್ಬಲ ವರ್ಗವಾಗಿ ಮಾರ್ಪಟ್ಟರು. ಬ್ರಾಹ್ಮಣ ಪ್ರಾಬಲ್ಯ ಮತ್ತು ಜೈನರ ಊಳಿಗಮಾನ್ಯ ನಾಯಕತ್ವವು ಅದಾಗಲೇ ಹಲವಾರು ಹೆಗ್ಗಡೆ ಮತ್ತು ಬಲ್ಲಾಳರ ಮೂಲಕ ತುಳುನಾಡಿನಲ್ಲಿ ನೆಲೆಯೂರಿ ಬಿಟ್ಟಿತ್ತು ಮತ್ತು ಇದರ ಪರಿಣಾಮವಾಗಿ ಈ ಪ್ರದೇಶದ ಮೂಲನಿವಾಸಿಗಳು ಅತ್ಯಂತ ದಯನೀಯ ಪರಿಸ್ಥಿತಿಯನ್ನು ಎದುರಿಸುವಂತಾಯಿತು. ಸಂಪ್ರದಾಯವಾದಿ ಬ್ರಾಹ್ಮಣ್ಯವು ಕೆಳವರ್ಗದ ಜನರನ್ನು ಹಿಂದೂ ಪದ್ಧತಿಗಳಿಂದ ಹೊರಗಿಟ್ಟಿತು. ಹಿಂದೂಗಳ ಒಳಗಡೆಯೇ ಸಾಕಷ್ಟು ಕಟ್ಟುಪಾಡುಗಳನ್ನು ಹೇರಲಾಗಿತ್ತು. ಧರ್ಮದಿಂದ ಹೊರಗಟ್ಟುವುದು ಹಿಂದೂಗಳ ಒಳಗೆ ಅತ್ಯಂತ ದೊಡ್ಡ ಶಿಕ್ಷೆಯಾಗಿತ್ತು. ಹೀಗೆ ಹೊರಗಿಟ್ಟವರೆಲ್ಲರೂ ಸಮಾಜದಿಂದ ಬಹಿಷ್ಕರಿಸಲ್ಪಟ್ಟರು. ಆತನನ್ನು ಮಿತ್ರರು ಮತ್ತು ಬಂಧುಗಳೇ ಒಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. ತಮ್ಮ ಮಕ್ಕಳಿಗೆ ಹುಡುಗಿಯನ್ನು ಪಡೆಯುವುದು ಕೂಡಾ ಅವರಿಗೆ ಅಸಾಧ್ಯವಾಗಿತ್ತು. ಪುರೋಹಿತರಾಗಲೀ ಕ್ಷೌರಿಕರಾಗಲೀ ಅಥವಾ ಅಗಸನೇ ಆಗಲಿ, ಅವರ ಸೇವೆಯನ್ನು ಮಾಡುವಂತಿರಲಿಲ್ಲ. ಶವಸಂಸ್ಕಾರದಿಂದಲೂ ಅವರನ್ನು ಹೊರ ಗಿಡಲಾಗಿತ್ತು. ಮಂದಿರ ಮತ್ತು ಸಾರ್ವಜನಿಕ ಸ್ಥಳಗಳಿಂದಲೂ ಅವರನ್ನು ಹೊರಗಿಡಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಬಹಿಷ್ಕಾರಕ್ಕೊಳಗಾದವರು ಸಾಮಾಜಿಕ ಸ್ಥಾನಮಾನ ಪಡೆಯಲಿಕ್ಕಾಗಿ ಇತರ ಧರ್ಮಗಳಿಗೆ ಮತಾಂತರವಾಗದೆ ಬೇರೆ ಆಯ್ಕೆಯೇ ಇರಲಿಲ್ಲ. ಕೆಳವರ್ಗದ ಜನರ ಮಧ್ಯೆಯೂ ಇದೇ ರೀತಿಯ ಶೋಷಣೆಗಳು ಚಾಲ್ತಿಯಲ್ಲಿದ್ದವು.[22] ಕ್ರೂರ ಬ್ರಾಹ್ಮಣ ಜಾತಿ

ವ್ಯವಸ್ಥೆಯಿಂದ ನಲುಗಿದ ಕೆಳ ವರ್ಗದ ಜನರು ಬೇರೆ ಧರ್ಮಗಳನ್ನು ಅಪ್ಪಿ ಕೊಳ್ಳಲು ಭಾರಿ ಸಂಖ್ಯೆಯಲ್ಲಿ ಮುಂದೆ ಬಂದರು. ನಿಜವಾಗಿ ಈ ಬಹಿಷ್ಕೃತ ಸಮಾಜದ ಜನರಿಗೆ ಇಸ್ಲಾಮ್ ಒಂದು ದೊಡ್ಡ ಆಸರೆಯಾಗಿ ಕಂಡಿತು.[23] ಕೆಳವರ್ಗದ ಹಿಂದೂಗಳ ಮತಾಂತರದಿಂದಾಗಿ ಪಶ್ಚಿಮ ಕರಾವಳಿಯಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟು ಗಣನೀಯ ಪ್ರಮಾಣದಲ್ಲಿ ಹೆಚ್ಚಿತೆಂದರೆ ಕೆಲವೇ ವರ್ಷಗಳಲ್ಲಿ ಇಡೀ ಪಶ್ಚಿಮ ಕರಾವಳಿಯೇ ಮಹಮ್ಮದೀಯರಿಂದ ತುಂಬಿ ಹೋಗುತ್ತದೇನೋ ಎಂದು ಅನ್ನಿಸತೊಡಗಿತ್ತು.[24] ಆದರೆ ಈ ಪೈಕಿ ಹೆಚ್ಚಿನವರು ತಮ್ಮ ಸ್ವಂತ ಇಚ್ಛೆಯಿಂದಲೇ ಇಸ್ಲಾಮ್ ಸ್ವೀಕರಿಸಿದ್ದರು.[25] ಕೆಳವರ್ಗದ ಹಿಂದೂಗಳ ಮಟ್ಟಿಗೆ ಇಸ್ಲಾಮ್ ಸ್ವೀಕರಿಸುವುದು ಹಿಂದೂ ಸಮಾಜದಲ್ಲಿ ತಮಗಿದ್ದ ನಿಕೃಷ್ಟ ಸ್ಥಾನಮಾನದಿಂದ ಬಿಡುಗಡೆ ಹೊಂದುವುದು, ಆಡಳಿತಾರೂಢ ಸಮಾಜದೊಂದಿಗೆ ತಾತ್ವಿಕವಾಗಿಯಾದರೂ ಸಮಾನತೆ ಯನ್ನು ಪಡೆಯುವುದಾಗಿತ್ತು.[26]

ಲೋಗನ್‌ರ ಪ್ರಕಾರ ಇಸ್ಲಾಮ್ ಸ್ವೀಕರಿಸುವುದೆಂದರೆ ಮಲಬಾರ್‌ನ ಗುಲಾಮ ಜಾತಿಯನ್ನು ಅವರ ಹಳೆಯ ಬುರ್ತಾನ್‌ಗಳಿಂದ ಮುಕ್ತಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸಿತು.[27] ಕೆಳ ಜಾತಿಯವರಿಗೆ, ಬಹಿಷ್ಕರಿಸಲ್ಪಟ್ಟವರಿಗೆ ಮತ್ತು ಅಸ್ಪೃಶ್ಯರಿಗೆ ಸಮಾನ ನಾಗರಿಕ ರೆಂಬ ಸಾಮಾಜಿಕ ಸ್ಥಾನದ ಕೊಡುಗೆ ನೀಡಿದ್ದು ಕರಾವಳಿ ಜಿಲ್ಲೆಗೆ ಇಸ್ಲಾಮ್ ಧರ್ಮವು ಕೊಟ್ಟ ದೊಡ್ಡ ಕಾಣಿಕೆಯೆಂದೂ ಭಾವಿಸಬಹುದು.

3. ಅರಸೊತ್ತಿಗೆಯ ಪ್ರೋತ್ಸಾಹ

ಕರಾವಳಿ ಜಿಲ್ಲೆಗಳಲ್ಲಿ ಅಂದರೆ ಮಲಬಾರ್ ಮತ್ತು ಕೆನರಾ ಜಿಲ್ಲೆಗಳಲ್ಲಿ ಹಲವಾರು ಸ್ಥಾನೀಯ ಮುಖಂಡರಿದ್ದರು. ತುಳುನಾಡಿನಲ್ಲಿ ಚೌಟರು ಮತ್ತು ಬಂಗರು, ಕಲ್ಲಿಕೋಟೆಯಲ್ಲಿ ಝಮೋರಿಯನ್ನರು ಸಮಾಜದ ಮೇಲೆ ನಿರ್ಣಾಯಕ ಪ್ರಭಾವ ಹೊಂದಿದ್ದರು. ಅವರಿಗೆ ತಮ್ಮ ಜಹಜುಗಳಲ್ಲಿ ಮತ್ತು ಸೈನ್ಯದಲ್ಲಿ ಕೆಲಸ ಮಾಡಲು ಗಟ್ಟಿಮುಟ್ಟಾದ ಗಂಡಸರು ಬೇಕಾಗಿದ್ದರು. ಕೆಳ ಜಾತಿಯವರು ಮಣ್ಣಿನ ಮಕ್ಕಳು (ರೈತರು) ಅಥವಾ ಮೀನುಗಾರರಾಗಿದ್ದುದರಿಂದ ಭಾರಿ ದೊಡ್ಡ ಸಂಖ್ಯೆಯಲ್ಲಿದ್ದರು. ಆದರೆ ಅಸ್ಪೃಶ್ಯರಾಗಿದ್ದ ಕಾರಣ ಅವರಿಗೆ ನೌಕರಿಗೆ ಸೇರುವ ಅರ್ಹತೆಯಿರಲಿಲ್ಲ. ಹಾಗಾಗಿ ಅವರು ಈ ಜನರನ್ನು ನೌಕರಿಗೆ ಸೇರ್ಪಡೆಯಾಗುವ ಅರ್ಹತೆ ಗಳಿಸುವುದಕ್ಕೋಸ್ಕರ ಇಸ್ಲಾಮ್‌ಗೆ ಮತಾಂತರ ಹೊಂದುವಂತೆ ಪ್ರೋತ್ಸಾಹಿಸಿದರು. ಅರಸರು ಮತ್ತು ಮಲಬಾರ್‌ನ ಝಮೋರಿನ್ ದೊರೆಗಳು ಮುಸ್ಲಿಮರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡಿದರು ಮತ್ತು ಮಸೀದಿಗಳನ್ನು ನಿರ್ಮಿಸಲು ಅನುಮತಿಯನ್ನೂ ಕೊಟ್ಟರು. ಅಷ್ಟೇ ಅಲ್ಲ, ಯಾವುದೇ ಅಡೆತಡೆಯಿಲ್ಲದೆ ಧರ್ಮಪ್ರಚಾರ ಚಟುವಟಿಕೆಗಳನ್ನು ನಡೆಸುವ ಅವಕಾಶವನ್ನೂ ಕಲ್ಪಿಸಿದರು.[28] ಕೇರಳದಲ್ಲಿ ಮುಸ್ಲಿಮ್ ಜನಸಂಖ್ಯೆ ಹೆಚ್ಚಲು ಅತ್ಯಂತ ಮುಖ್ಯ ಕಾರಣ ಕಲ್ಲಿಕೋಟೆಯ ಝಮೋರಿನ್ ದೊರೆ ನೀಡಿದ ಪ್ರೋತ್ಸಾಹ. ಅವನು ಹೊಸದಾಗಿ ಇಸ್ಲಾಮ್‌ಗೆ ಮತಾಂತರಗೊಂಡವರನ್ನೊಳಗೊಂಡ ಸೇನೆಯನ್ನು ರಚಿಸಿದನು ಮತ್ತು ಅವರ ನೆರವಿನಿಂದ ವೆಳ್ಳುವನಾಡನ್ನು ಗೆದ್ದುಕೊಂಡ. ಇದರಿಂದ ಪ್ರೇರಿತರಾದ ಅವನು ಪ್ರತಿಯೊಂದು ಮೀನುಗಾರ ಕುಟುಂಬದ ಓರ್ವನನ್ನಾದರೂ ಮುಸ್ಲಿಮ್ ಆಗಿ ಬೆಳೆಸಬೇಕೆಂದು ಆದೇಶ

ಹೊರಡಿಸಿದ. ಇದು ದೊಡ್ಡ ಪ್ರಮಾಣದಲ್ಲಿ ಮೀನುಗಾರರು ಇಸ್ಲಾಮ್ ಧರ್ಮಕ್ಕೆ ಮತಾಂತರ ಗೊಳ್ಳುವುದಕ್ಕೆ ಕಾರಣವಾಯಿತು ಮತ್ತು ಈ ವರ್ಗವು ಪುಸಲ್ಲಾರ್‌ಗಳು ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿತು.[29] ಪುಸಲ್ಲಾರ್ ಎಂಬುದು ಪುದು ಇಸ್ಲಾಮ್ ಅಥವಾ ಹೊಸದಾಗಿ ಇಸ್ಲಾಮ್ ಸ್ವೀಕರಿಸಿದವರು ಎಂಬುದರ ಅಪಭ್ರಂಶವಾಗಿದೆ.

ಝಮೋರಿನ್ ಕುಟುಂಬಕ್ಕೆ ಸೇರಿದ ಚೇರುಮಾನ್ ಪೆರುಮಾಳ್ ಎಂಬಾತ ಕೇರಳದ ರಾಜಕುಟುಂಬದ ಪೈಕಿ ಇಸ್ಲಾಮ್‌ಗೆ ಮತಾಂತರಗೊಂಡ ಮೊದಲ ವ್ಯಕ್ತಿ ಎನ್ನಲಾಗುತ್ತದೆ. ಅವರು ಇಸ್ಲಾಮ್ ಪ್ರಚಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಹೈದರ್ ಅಲಿ ಮತ್ತು ಟಿಪ್ಪು ಮೈಸೂರಿನ ನವಾಬರು ಕರಾವಳಿ ಪ್ರದೇಶದಲ್ಲಿ ಇಸ್ಲಾಮಿನ ಬೆಳವಣಿಗೆಗೆ (ಧರ್ಮ ಪ್ರಚಾರದ ಮೂಲಕವಲ್ಲ) ನಿರ್ಣಾಯಕ ಪ್ರೇರಣೆಯಾಗಿದ್ದರು.

4. ಮಿಷನರಿ ಪ್ರಚಾರ

ಮಲಬಾರ್ ಮತ್ತು ತುಳುನಾಡಿನಲ್ಲಿ ಇಸ್ಲಾಮ್‌ನ ಪ್ರಚಾರದ ಕೀರ್ತಿಯನ್ನು ಸಾಮಾನ್ಯವಾಗಿ ಸೂಫಿ ಪಂಥದ ಪ್ರಕಾರ ಕೆಲಸ ನಿರ್ವಹಿಸಿದ ದೀನಾರ್ ಮಿಷನರಿಗಳಿಗೆ ಕೊಡಲಾಗುತ್ತದೆ. ಎಲ್ಲ ಮಲಯಾಳಿ ವಿವರಣೆಗಳೂ ಸಾಮಾನ್ಯವಾಗಿ ಈ ಕೆಳಗಿನ ವಿಷಯ ಗಳಿಗೆ ಅನುರೂಪವಾಗಿದೆ.

ಚೇರುಮಾನ್ ಪೆರುಮಾಳ್ ಮಲಬಾರ್‌ನ ಕಟ್ಟಕಡೆಯ ಅರಸ. ಈತ ಕೊಡುಂಗಳ್ಳೂರ್ (ಕ್ರಾಂಗನೂರು, ಗ್ರೀಕರ ಮುಸಿರಿನ್)ನ ಆಡಳಿತಗಾರನಾಗಿದ್ದ.

ಕೆಲವು ವರ್ಷಗಳ ನಂತರ ಮಾಲಿಕ್ ಬಿನ್ ದೀನಾರ್ ಮತ್ತು ಅವರ ಪರಿವಾರ ಮಲಬಾರ್‌ಗೆ ಬಂತು ಮತ್ತು ಕೊಡುಂಗಳ್ಳೂರ್‌ನ ಅರಸನಿಗೆ ಅವರ ಪತ್ರವನ್ನು ಕೊಟ್ಟಿತು.[33] ಅವರನ್ನು ಬರಮಾಡಿಕೊಂಡ ಅರಸ ಅವರನ್ನು ಚೆನ್ನಾಗಿ ನೋಡಿಕೊಂಡ ಮತ್ತು ಮಸೀದಿಗಳನ್ನು ನಿರ್ಮಿಸಲು ಸ್ಥಳವನ್ನೂ ಒದಗಿಸಿದ. ಜತೆಗೆ ಇಸ್ಲಾಮ್ ಧರ್ಮ ಪ್ರಚಾರ ಕೆಲಸಕ್ಕೆ ಪ್ರೋತ್ಸಾಹ ವನ್ನೂ ಕೊಟ್ಟ ಮಾಲಿಕ್ ಬಿನ್ ದೀನಾರ್ ಅಲ್ಲಿನ ಮೊಟ್ಟಮೊದಲ ಖಾಝಿಯಾಗಿದ್ದರು. ಧರ್ಮಪ್ರಚಾರ ತಂಡದಲ್ಲಿದ್ದ ಸದಸ್ಯರು: 1. ಮಾಲಿಕ್ ಬಿನ್ ದೀನಾರ್ 2. ಹಬೀಬ್ ಬಿನ್ ಮಾಲಿಕ್ 3. ಶರ್ಫ್ ಬಿನ್ ಮಾಲಿಕ್ 4. ಮಾಲಿಕ್ ಬಿನ್ ಹಬೀಬ್ ಹಾಗೂ ಆತನ ಪತ್ನಿ ಕಮರಿಯತ್ ಮತ್ತು ಅವರ ಹತ್ತು ಪುತ್ರರು; ಹಬೀಬ್, ಮೊಹಮ್ಮದ್, ಅಲಿ, ಹುಸೇನ್, ತಕಿಯುದ್ದೀನ್, ಅಬ್ದುಲ್ ರಹಮಾನ್, ಇಬ್ರಾಹೀಮ್, ಮೂಸಾ, ಉಮರ್ ಮತ್ತು ಹುಸೇನ್ ಹಾಗೂ ಐವರು ಹೆಣ್ಣಕ್ಕಳು : ಫಾತಿಮಾ, ಆಯಿಷಾ, ಝೈನಬ್, ತಾಹೀರಾತ್ ಮತ್ತು ಹಲೀಮಾ. ಹಲವಾರು ಸ್ಥಳಗಳಲ್ಲಿ ಮಸೀದಿಗಳನ್ನು ನಿರ್ಮಿಸಿದ ನಂತರ ದೀನಾರ್ ಮಿಷನ್ ಕೆನರಾದ ಮೂರು ಸ್ಥಳಗಳಾದ ಬಕರೂರ್ (ಬಾರ್ಕೂರು), ಮಂಜಲು (ಮಂಗಳೂರು) ಮತ್ತು ಕನ್ಯರೋಡ್ (ಕಾಸರಗೋಡು)ಗೆ ತೆರಳಿತು ಮತ್ತು ಪ್ರತಿಯೊಂದೆಡೆಯೂ ಮಸೀದಿಯನ್ನು ನಿರ್ಮಿಸಿ ಇಬ್ರಾಹೀಮ್, ಮೂಸಾ ಮತ್ತು ಮಹಮೂದ್ (ಮಾಲಿಕ್ ಬಿನ್ ಹಬೀಬರ ಮಕ್ಕಳು) ಎಂಬ ಹೆಸರಿನ ಖಾಜಿಗಳನ್ನೂ ನೇಮಕ ಮಾಡಿತು.[34] ಇವರೆಲ್ಲರೂ ಮಾಲಿಕ್ ಬಿನ್ ಹಬೀಬ್‌ರ ಪುತ್ರರಾಗಿದ್ದರು.[35]

ಮಲಬಾರ್ ಮತ್ತು ಕೆನರಾ ಕರಾವಳಿಗೆ ಇಸ್ಲಾಮ್‌ನ ಪ್ರವೇಶಕ್ಕೆ ಸಂಬಂಧಿಸಿದ ಈ ವೃತ್ತಾಂತವು ಅತ್ಯಂತ ನಂಬಲರ್ಹ ಎಂಬುದು ಲೋಗನ್‌ರ ವಾದ. ಕೇರಳದ ಪಯಂಗಾಡಿಯಲ್ಲಿ ಕಂಡು ಬಂದ ಮರದ ಹಲಗೆಯ ಫಲಕವೊಂದು ಅಲ್ಲಿನ ಮಸೀದಿಯು ಹಿ.ಶ. 5 ಅಥವಾ ಕ್ರಿ.ಶ. 627ರಲ್ಲಿ ನಿರ್ಮಾಣಗೊಂಡಿತೆಂದು ಹೇಳುತ್ತದೆ. ಎಳಿನಾಡಿನ ಮಾಡಾಯಿ ಪಳ್ಳಿಯಲ್ಲಿ ಸಿಕ್ಕ ಇನ್ನೊಂದು ಫಲಕದ ಪ್ರಕಾರ ಆ ಮಸೀದಿಯು ಹಿ.ಶ. 101 (ಕ್ರಿ.ಶ. 723)ರಲ್ಲಿ ನಿರ್ಮಾಣಗೊಂಡಿತೆಂದು ಹೇಳುತ್ತದೆ. ಕಾಸರಗೋಡಿನ ಮಾಲಿಕ್ ಬಿನ್ ದೀನಾರ್ ಮಸೀದಿಯನ್ನು ಹಿ.ಶ. 20 (ಕ್ರಿ..ಶ. 642)ರಲ್ಲಿ ನಿರ್ಮಿಸಲಾಗಿತ್ತೆಂದು ಹೇಳಲಾಗುತ್ತದೆ.[36] ಕೇರಳದ ತಾಳಿಪರಂಬನಿಂದ 13 ಮೈಲಿ ದೂರದಲ್ಲಿರುವ ಶ್ರೀಕಂಟಪುರಮ್‌ನಲ್ಲಿ ಪತ್ತೆಯಾದ ಇನ್ನೊಂದು ದಾಖಲೆಯ ಪ್ರಕಾರ ರಾಫಿಯಿ ಬಿನ್ ಹಬೀಬ್ ಹಿ.ಶ. 37 (ಕ್ರಿ.ಶ. 660)ರಲ್ಲಿ ಇಸ್ಲಾಮ್‌ನ ಪ್ರಚಾರ ನಡೆಸಿದ್ದ ಮತ್ತು ಕಾಸರಗೋಡು ತಾಲೂಕಿನಲ್ಲಿರುವ ಇಚ್ಲಂಗೋಡಿನಲ್ಲಿ ಮಸೀದಿಯನ್ನು ನಿರ್ಮಿಸಿದ್ದ. ಇಲ್ಲೇ ಏಳು ಸಂತರ ಗೋರಿಗಳೂ ಪತ್ತೆಯಾಗಿದ್ದು ಪ್ರತಿ ಐದು ವರ್ಷಕ್ಕೊಮ್ಮೆ ಉರೂಸ್‌ನ ಮೂಲಕ ಇವರಿಗೆ ಗೌರವ ಸಲ್ಲಿಸಲಾಗುತ್ತದೆ.[37]

ಇಚ್ಲಂಗೋಡು ಮಸೀದಿಯಲ್ಲಿ ಪತ್ತೆಯಾದ ಹಿ.ಶ. 139 (ಕ್ರಿ.ಶ. 758)ರ ಒಂದು ನೇಲಕ್ಕಯರ್[38] ಇದೇ ಮಸೀದಿಗೆ ದೇಣಿಗೆಯೊಂದು ದೊರತಿರುವ ಕಡೆಗೆ ಬೊಟ್ಟು ಮಾಡುತ್ತದೆ. ರಾಫಿಯಿ ಬಿನ್ ಹಬೀಬ್‌ರ ಹೆಸರು ಲೋಗನ್‌ರ ವರದಿಯಲ್ಲಿರುವ ಪಟ್ಟಿಯಲ್ಲಿ ಇಲ್ಲ. ಇದೇ ತಂಡದ ಕೆಲವು ಸದಸ್ಯರು ಧರ್ಮಪ್ರಚಾರದ ಕೆಲಸವನ್ನೂ ಮಾಡಿರಬೇಕೆಂದು ಭಾವಿಸಲಾಗಿದೆ. ಈ ದರ್ಗಾ ಮತ್ತು ಮಸೀದಿಯು ಮುಸ್ಲಿಮ್ ಯಾತ್ರಾರ್ಥಿಗಳ ಕೇಂದ್ರವಾಗಿ ಬೆಳೆದುಬಂದಿದೆ. ದೀನಾರ್ ಮಿಷನರಿಗಳಿಗೆ ಸೇರಿದ್ದೆಂದು ಭಾವಿಸಲಾಗುವ ಮಸೀದಿಗಳನ್ನು ಸಾಮಾನ್ಯವಾಗಿ ಚೆರುಮನ್ ಪಳ್ಳಿ ಎಂದು ಕರೆಯಲಾಗುತ್ತದೆ.[39] ತುಹ್‌ಫತುಲ್ ಮುಜಾಹಿದೀನ್ ಹತ್ತುಕಡೆ ಮಸೀದಿ ನಿರ್ಮಾಣಗೊಂಡ ಬಗ್ಗೆ ಉಲ್ಲೇಖಿಸುತ್ತದೆ. ಅವುಗಳೆಂದರೆ ಕೊಡುಂಗಳ್ಳೂರು, ಕೊಲ್ಲಂ, ಮಾಡಾಯಿ, ಫಾಲ್ಕನೂರ್ (ಬಾರ್ಕೂರು), ಮಂಜರೂರ್ (ಮಂಗಳೂರು), ಕಂಜರ್‌ಕುಟ್ (ಕಾಸರಗೋಡು), ಜಾಫತನ್, ಧರ್ಮ ಪಟನ್, ಫೌದಿನಾ ಹಾಗೂ ಷಾಲಿಯತ್.[40] ಮಾಲಿಕ್ ಬಿನ್ ದೀನಾರ್‌ರ ನಿಧನ ಖರಮೈನ್ ಎಂಬಲ್ಲಾಯಿತು ಎಂದು ತುಹ್‌ಫತ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ ರಿಹ್ಲತುಲ್ ಮಲಿಕ್‌ನ ಕರ್ತೃ ಉಮರ್ ಸುಹ್ರವರ್ದಿಯ ಪ್ರಕಾರ ಮಾಲಿಕ್ ಬಿನ್ ದೀನಾರ್ ಕಾಸರಗೋಡಿನಲ್ಲಿ ಮೃತಪಟ್ಟರು. ದೀನಾರ್ ಹಿ.ಶ. 137 (ಕ್ರಿ.ಶ. 748)ರಲ್ಲಿ ನಿಧನ ಹೊಂದಿದರು.[41] ಕಾಸರಗೋಡು ಇಂದಿಗೂ ಕೇರಳದ ಒಂದು ಯಾತ್ರಾಕೇಂದ್ರವಾಗಿದೆ. ಸಂತರ ಗೌರವಾರ್ಥ ಅಲ್ಲಿ ಉರೂಸ್ ನಡೆಯುತ್ತದೆ. ಆದರೆ ಬಾರ್ಕೂರಿನಲ್ಲಿ ಮಾತ್ರ ಚೆರುಮನ್ ಪಳ್ಳಿಯ ಕುರುಹು ಕಂಡು ಬಂದಿಲ್ಲ. ಆರಂಭ ಕಾಲದ ಮುಸ್ಲಿಮ್ ವ್ಯಾಪಾರ ಮತ್ತು ಸಂಸ್ಕೃತಿಯ ಈ ಮಹತ್ವದ ಕೇಂದ್ರವು ತನ್ನ ಅಸ್ತಿತ್ವದ ಯಾವ ಕುರುಹನ್ನೂ ಬಿಡದೆ ಕಾಲನ ಹೊಡೆತಕ್ಕೆ ಸಿಕ್ಕಿ ಅಳಿದುಹೋಗಿದೆ.

5. ಸೂಫಿ ಸಂತರ ಪ್ರಭಾವ

ಆರ್ನಾಲ್ಡ್ ತನ್ನ ಪ್ರೀಚಿಂಗ್ ಆಫ್ ಇಸ್ಲಾಮ್ ಎಂಬ ಕೃತಿಯಲ್ಲಿ ಮುಸ್ಲಿಮ್ ಜನಸಂಖ್ಯೆಯ ಹೆಚ್ಚಳದಲ್ಲಿ ಸೂಫಿ ಪ್ರಭಾವದ ಬಗ್ಗೆ ಬರೆದಿದ್ದಾನೆ. ಮಾಲಿಕ್ ಬಿನ್ ದೀನಾರ್ ಮತ್ತು ಅವರ ಶಿಷ್ಯಂದಿರು ಇಸ್ಲಾಮ್‌ನ ಪ್ರಚಾರಕರಾಗಿ ಸೂಫೀ ಪ್ರಭಾವವನ್ನು ಭದ್ರಗೊಳಿಸಿದರು. ದಕ್ಷಿಣ ಭಾರತದ ಮೇಲೆ ಪ್ರಭಾವ ಬೀರಿದ ಕೆಲವು ಪ್ರಮುಖ ಸೂಫಿಗಳ ಹೆಸರು ಹೀಗಿದೆ : ತಿರುಚನಾಪಳ್ಳಿಯ ಸೈಯದ್ ನತಾದ ವಲೀ ಷಾ (ಕ್ರಿ.ಶ. 969–1039), ಎರ್ವಾಡಿಯ ಸೈಯದ್ ಇಬ್ರಾಹೀಮ್ ಷಾಹಿದ್, ನಾಗೋರಿನ ಸೈಯದ್ ಹಮೀದ್ (ಕ್ರಿ.ಶ. 1532– 1600), ನಾಗೋರಿನ ಸೈಯದ್ ಮಿರೇನ್ ಷಾ ವಲೀ, ಮುತ್ತುಪೇಟೆಯ ಹಕೀಮ್ ದಾವೂದ ವಲಿ, ಪೆನುಕೊಂಡದ ಬಾಬಾ ಫಕ್ರುದ್ದೀನ್ ವಲಿ, ಗುಲ್ಬರ್ಗಾದ ಸೈಯದ್ ಮೊಹಮ್ಮದ್ ಗೇಸುದರಾಸ್, ಬಿಜಾಪುರದ ಪೀರ್ ಮಹಾಬಿರ್ ಖಂಡಿಯಾತ್ ಮತ್ತು ಶೇಕ್ ಫರೀದ್ ಮಸೂದ್ ಗಂಜ್‌ಸರ್ಕಾರ್. ತುಹ್‌ಫತುಲ್ ಮುಜಾಹಿದೀನ್‌ನ ಕರ್ತೃ ಝೈನುದ್ದೀನ್ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಮ್ ಪ್ರಚಾರ ನಡೆಸಿದವರು ಮುಸ್ಲಿಮ್ ಶೇಖ್ ಗಳಾಗಿದ್ದರು ಎಂದು ಬರೆದಿದ್ದಾನೆ. ಇವರ ಪೈಕಿ ಪೊನ್ನಾನಿಯ ಝೈನುದ್ದೀನ್ ಬಿನ್ ಅಲಿ ಮತ್ತು ಕಣ್ಣೂರಿನ ಸೈಯದ್ ಮೌಲಾ ಉಲ್ಲೇಖಾರ್ಹರಾಗಿದ್ದಾರೆ. ಇವರ ಪ್ರಭಾವದಿಂದಾಗಿ ಹಲವಾರು ಪಟ್ಟಣಗಳು ಮುಸ್ಲಿಮ್ ಬಾಹುಳ್ಯದ ಪ್ರದೇಶಗಳಾಗಿ ಮಾರ್ಪಟ್ಟವು. ಮಲಪ್ಪುರಂನ ಪೊನ್ನಾನಿಯು ಮುಸ್ಲಿಮ್ ಜ್ಞಾನದ ಕೇಂದ್ರವಾಗಿ ಮಾರ್ಪಟ್ಟಿತು ಮತ್ತು ಮಲಬಾರ್‌ನ ಪುಟ್ಟ ಮಕ್ಕಾ ಪಟ್ಟಣದ ರೀತಿಯಲ್ಲಿ ಅದು ಬೆಳೆದುನಿಂತಿತು.[42] ಹೀಗಾಗಿ ಉತ್ತರ ಕನ್ನಡದಿಂದ ಮಲಬಾರ್‌ವರೆಗಿನ ಕರಾವಳಿಯು ಧಾರ್ಮಿಕ ಮಾರ್ಗದರ್ಶನಕ್ಕಾಗಿ ಪೊನ್ನಾನಿಯ ಕಡೆಗೆ ನೋಡುವಂತಾಯಿತು. ಈ ಭಾವನೆಯು ಈಗಲೂ ಆ ಜಿಲ್ಲೆಯ ಮುಸ್ಲಿಮರ ಮನಸ್ಸಿನಲ್ಲಿದೆ. ಮಲಬಾರ್‌ನಲ್ಲಿ ಹಲವು ಅರಬ್ ಧರ್ಮಶಾಸ್ತ್ರಜ್ಞರನ್ನು ಭೇಟಿಯಾಗಿದ್ದಾಗಿ ಇಬ್ನೆ ಬತೂತ ಬರೆದಿದ್ದಾನೆ.[43] ಈ ಧರ್ಮಶಾಸ್ತ್ರಜ್ಞರು ಸೂಫಿ ಪ್ರಚಾರಕರಾಗಿ ಕೆಲಸ ನಿರ್ವಹಿಸಿದರು ಮತ್ತು ಜನರಿಗೆ ಇಸ್ಲಾಮೀ ಬೋಧನೆ ಮತ್ತು ಸಿದ್ಧಾಂತಗಳ ಪರಿಚಯ ಮಾಡಿಕೊಟ್ಟರು.

ಈ ಸೂಫಿಗಳ ಪೈಕಿ ಪೆನುಕೊಂಡದ ಬಾಬಾ ಫಕ್ರುದ್ದೀನ್ ಕೆನರಾ ಪ್ರದೇಶದ ಮೇಲೆ ಪ್ರಭಾವ ಬೀರಿದರೆಂದು ಹೇಳಲಾಗಿದೆ. ಒಂದು ಐತಿಹ್ಯದ ಪ್ರಕಾರ ಇವರು ಸಿಸ್ತಾನ್‌ನ ಆಡಳಿತಗಾರರಾಗಿದ್ದರು. ಇವರು ತನ್ನ ಅರಸೊತ್ತಿಗೆಯನ್ನು ಬಿಟ್ಟು ವೈರಾಗ್ಯದ ದಾರಿ ಹಿಡಿದರು. ಅವರು ಭಾರತಕ್ಕೆ ಬಂದು ತಿರುಚಿನಾಪಳ್ಳಿಯ ನತಾದ್‌ವಲಿ ಎಂಬವರ ಶಿಷ್ಯರಾದರು. ಅವರು ನತಾದ್‌ವಲಿ ಸಹಿತ 200 ಮಂದಿ ವೈರಾಗಿಗಳ ತಂಡದೊಂದಿಗೆ ಧರ್ಮಪ್ರಚಾರ ಕಾರ್ಯಕ್ಕೆ ಹೊರಟರು. ಅವರು ಪೆನಕೊಂಡಾಗೆ ಹೋಗುವ ದಾರಿಯಲ್ಲಿ ಮಲಬಾರ್ ಮತ್ತು ಕರಾವಳಿ ತೀರದ ಹಲವು ಸ್ಥಳಗಳನ್ನು ಸಂದರ್ಶಿಸಿದರು. ಅವರ ಪ್ರಭಾವದಿಂದ ದೊಡ್ಡ ಸಂಖ್ಯೆಯ ನಿವಾಸಿಗಳು ಇಸ್ಲಾಮ್ ಸ್ವೀಕರಿಸಿದರು.[44] ತಮಿಳುನಾಡಿನ ಡುಡೇಕರ್‌ಗಳು ತಮ್ಮ ಮತಾಂತರದ ಕೀರ್ತಿಯನ್ನು ಬಾಬಾ ಫಕ್ರುದ್ದೀನ್‌ಗೆ ನೀಡುತ್ತಾರೆ.[45] ಕೆನರಾ ಜಿಲ್ಲೆಯ ಸರೋಪಾಡಿ ಗ್ರಾಮದ ಅಜಿಲಮೊಗರು ಮಾಲಿದಾ ಉರೂಸ್‌ನ ಸಂದರ್ಭದಲ್ಲಿ ಜಮಾತ್ ಅಧ್ಯಕ್ಷರಾದ ಪಿ.ಬಿ. ಹುಸ್ಸೈನ್ ಕುಂಞ ಪ್ರಕಟಿಸಿದ ಕರಪತ್ರದ ಪ್ರಕಾರ ಬಾಬಾ ಅಜಿಲಮೊಗರಿ

ನಲ್ಲಿ ಸಂದೇಶ ಪ್ರಚಾರ ನಡೆಸಿದ್ದು, ಝಕರಿಯ್ಯಾ ಎಂಬವರನ್ನು ಖಾಜಿಯಾಗಿ ನೇಮಕ ಮಾಡಿದ್ದರು.[46] ಅವರು ಅನಂತರ ಪೆನಕೊಂಡಾಕ್ಕೆ ತೆರಳಿ ಹಿ.ಶ. 694 (ಕ್ರಿ.ಶ. 1294)ರಲ್ಲಿ ಅಲ್ಲೇ ನಿಧನರಾದರೆಂದು ಕರಪತ್ರ ಖಚಿತಪಡಿಸುತ್ತದೆ. ಆದರೆ ತಾರಾಚಂದ್ ಮತ್ತು ಥರ್ಡ್‌ಸ್ಟನ್ ಬಾಬಾ ಫಕ್ರುದ್ದೀನ್ ಹಿ.ಶ. 564 (ಕ್ರಿ.ಶ. 1186)ರ ಸುಮಾರಿಗೆ ಬದುಕಿದ್ದರೆಂದು ಹೇಳುತ್ತಾರೆ.[47] ತುಂಬೆಯ ವಳಚ್ಚಿಲ್ ಗ್ರಾಮದ ಜಮಾತ್ ಸಮಿತಿ ಬಾಬಾ ಫಕ್ರುದ್ದೀನ್ ಅವರು ಆ ಪ್ರದೇಶದಲ್ಲಿ ಇಸ್ಲಾಮಿನ ಪ್ರಚಾರ ಮಾಡಿದ್ದಾರೆಂಬುದನ್ನು ದೃಢಪಡಿಸುತ್ತದೆ. ಅಜಿಲಮೊಗರು ಮತ್ತು ವಳಚ್ಚಿಲ್ ಮಸೀದಿಗಳು ಇತರ ಕಡೆಗಳಲ್ಲಿರುವ ದೀನಾರ್ ಮಸೀದಿಯ ವಿನ್ಯಾಸವನ್ನು ಹೋಲುತ್ತದೆ. ಬಾಬಾ ಫಕ್ರುದ್ದೀನ್ ಅವರು ಕಾಸರಗೋಡು, ಕುಂಬ್ಳೆ, ಶಿರಿಯಾ, ಮಂಜೇಶ್ವರದ ಉದ್ಯಾವರ, ಮಂಜನಾಡಿ, ಉಳ್ಳಾಲ, ಮಂಗಳೂರು, ವಳಚ್ಚಿಲ್ ಮತ್ತು ಅಜಿಲಮೊಗರು ಮೂಲಕ ತೆರಳಿ ಆಂಧ್ರಪ್ರದೇಶದ ಕಡೆಗೆ ಸಾಗಿದರು ಎಂದು ಭಾವಿಸಲಾಗಿದೆ.[48] ಈ ಎಲ್ಲಾ ಕಡೆಗಳಲ್ಲೂ ಸ್ವಲ್ಪ ಕಾಲ ತಂಗಿ ಧರ್ಮ ಪ್ರಚಾರ ನಡೆಸಿ ಉತ್ತರ ದಿಕ್ಕಿನ ಕಡೆಗೆ ಅವರು ಪಯಣ ಬೆಳೆಸಿದರು. ಈ ಎಲ್ಲಾ ಪ್ರದೇಶಗಳು ಈಗಲೂ ಬ್ಯಾರಿ ಮುಸ್ಲಿಮರ ಪ್ರಾಬಲ್ಯವನ್ನು ಹೊಂದಿವೆ.

ಬಿಜಾಪುರದ ಇನ್ನೋರ್ವ ಸೂಫಿ ಶೇಖ್ ಫರೀದ್ ಮಸೂದ್ ಗಂಜ್‌ಸರ್ಕಾರ್ ಮಂಗಳೂರಿನ ಕದ್ರಿಗೆ 19ನೇ ಶತಮಾನದಲ್ಲಿ ಭೇಟಿ ನೀಡಿ ಧ್ಯಾನಸ್ಥರಾದರು. ಅವರು ಕದ್ರಿ ಹಿಲ್ಸ್‌ನಲ್ಲಿ ತಂಗಿ ಇಸ್ಲಾಮ್ ಪ್ರಚಾರ ನಡೆಸಿದರು. ಗಂಜ್‌ಸರ್ಕಾರ್ ತಂಗಿದ ಪೀಠವು ಈಗಲೂ ಮುಸ್ಲಿಮರ ಕೈಯಲ್ಲಿದ್ದು ಉಳಿದ ಭಾಗವು ದೇವಸ್ಥಾನದ ವಶವಾಗಿದೆ.[49]

ಈ ಪ್ರದೇಶದ ಮೇಲೆ ಗಮನಾರ್ಹ ಪ್ರಭಾವ ಬೀರಿದ ಇನ್ನೋರ್ವ ಸೂಫಿ ಸಂತರೆಂದರೆ ಉಳ್ಳಾಲದ ಸೈಯದ್ ಮುಹಮ್ಮದ್ ಶರಫುಲ್ ಮದನಿ. ಇವರ ಕಾಲವನ್ನಾಗಲೀ ಚಟುವಟಿಕೆಗಳನ್ನಾಗಲೀ ಖಚಿತಪಡಿಸುವ ಯಾವುದೇ ದಾಖಲೆ ಲಭ್ಯವಿಲ್ಲ. ದರ್ಗಾದ ಹೊಣೆಗಾರರು ಹೊರಡಿಸಿದ ಕಿರುಹೊತ್ತಿಗೆ ಪ್ರಕಾರ ಇವರು 16ನೇ ಶತಮಾನಕ್ಕೆ ಸೇರಿದವರಾಗಿದ್ದು, ಮದೀನಾದಿಂದ ಆಗಮಿಸಿ ಉಳ್ಳಾಲದ ಮೇಲಂಗಡಿಯಲ್ಲಿ ವಾಸ ಹೂಡಿದ್ದರು. ಅಲ್ಲೇ ಉಳ್ಳಾಲದ ಪ್ರಪ್ರಥಮ ಮಸೀದಿ ನಿರ್ಮಾಣವಾಯಿತು. ಅದು ಉಳ್ಳಾಲ, ಪೆರ್ಮನ್ನೂರು, ಮುನ್ನೂರು, ಜೆಪ್ಪಿನ ಮೊಗರು ಮತ್ತು ಸೋಮೇಶ್ವರ ವ್ಯಾಪ್ತಿಯಲ್ಲಿ ವಾಸವಾಗಿದ್ದ ಮುಸ್ಲಿಮರ ಮಸೀದಿಯಾಗಿತ್ತು. ಸಂತರ ಪವಾಡಗಳಿಂದ ಪ್ರಭಾವಿತರಾಗಿ ಮಂದಿರಕ್ಕೆ ಸೇರಿದ್ದ 0.7 ಸೆಂಟ್ ಜಾಗವನ್ನು ಮಸೀದಿಗಾಗಿ ನೀಡಲಾಯಿತು. ಕಂದಾಯ ದಾಖಲೆಗಳ ಪ್ರಕಾರ ಅದು ಸೈಯದ್ ಮದನಿ ಗುಡಿ ಎಂದೇ ಗುರುತಿಸಲ್ಪಟ್ಟಿದೆ. ತಮ್ಮ ಪವಾಡಗಳ ಮೂಲಕ ಅವರು ಜನರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸಿದರು ಮತ್ತು ಉಳ್ಳಾಲದಲ್ಲೇ ನಿಧನರಾದರು. ಕ್ರಿ.ಶ. 1920ರಿಂದ ಐದು ವರ್ಷಗಳಿಗೊಮ್ಮೆ ಅವರ ಗೌರವಾರ್ಥ ಉಳ್ಳಾಲದಲ್ಲಿ ಉರೂಸ್ ನಡೆಯುತ್ತಿದೆ. ಆದರೆ ಇದಕ್ಕಿಂತ ಮೊದಲು ಉರೂಸ್ ನಡೆಯುತ್ತಿತ್ತೇ ಎಂಬ ಬಗ್ಗೆ ದಾಖಲೆಗಳಿಲ್ಲ. ದರ್ಗಾವನ್ನು ಹಲವಾರು ಬಾರಿ ನವೀಕರಿಸಲಾಗಿದೆ.[50] ಕ್ರಿ.ಶ. 1920ಕ್ಕೆ ಮೊದಲು ಇದ್ದ ಒಂದು ಸಣ್ಣ ಹುಲ್ಲಿನ ಛಾವಣಿಯುಳ್ಳ ದರ್ಗಾವನ್ನು ಕಾಲಾನಂತರದಲ್ಲಿ ಈಗಿನ ಮಟ್ಟಕ್ಕೆ ತರಲಾಗಿದೆ ಎಂದು ಹೇಳಲಾಗುತ್ತದೆ. ಹಾಗಿದ್ದರೂ,

ಸೈಯದ್ ಮದನಿ ಅಗಾಧ ಜನರ ಮೇಲೆ ಗಮನಾರ್ಹ ಪ್ರಭಾವ ಹೊಂದಿದ್ದು ಮುಸ್ಲಿಮರ ಜನಸಂಖ್ಯೆಯು ಅವರ ಪ್ರಭಾವದಿಂದ ಬಹಳಷ್ಟು ವೃದ್ಧಿಯಾಯಿತು. ಇಂದು ಉಳ್ಳಾಲ ಪ್ರದೇಶದಲ್ಲಿ ಅನೇಕಾರು ಮಸೀದಿಗಳಿವೆ. ಇಂದು ಸೈಯದ್ ಮದನಿ ಉರೂಸ್ ಕರ್ನಾಟಕ ದಲ್ಲೇ ಅತ್ಯಂತ ದೊಡ್ಡ ಆಚರಣೆಯಾಗಿದೆ.

ಮಂಗಳೂರಿನ ಅಡ್ಯಾರ್ ಕಣ್ಣೂರು ಪ್ರದೇಶದ ಶೇಖ್ ಸಿದ್ದೀಕ್ ಯೂಸುಫ್ ವಲೀಯವರು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸ್ಥಳೀಯ ಜನರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸಿದ ಇನ್ನೋರ್ವ ಸೂಫಿ ಸಂತ. ಅಂದ್ರೋತ್ ದ್ವೀಪದವರಾಗಿದ್ದ ಅವರು ಪೊನ್ನಾನಿ ಯಲ್ಲಿ ವಿದ್ಯಾರ್ಜನೆ ಮಾಡಿದರು. ನಂತರ ಕೆನರಾ ಕ್ಷೇತ್ರವನ್ನು ತಮ್ಮ ಕಾರ್ಯ ಕ್ಷೇತ್ರ ವನ್ನಾಗಿಸಿದರು. ಅವರು ಅಡ್ಯಾರನ್ನು ತನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡರು ಮತ್ತು ವಳಚ್ಚಿಲ್, ಆರ್ಕುಳ ಇನ್ನಿತರ ಪ್ರದೇಶಗಳಲ್ಲಿ ತಮ್ಮ ಪ್ರಭಾವ ಬೀರಿದರು.[51] ಮಂಗಳೂರಿನ ಡೊಂಗರಕೇರಿ ಸೈಯದ್ ಷಾಮೀರ್ ವಲೀ ಮತ್ತೋರ್ವ ಪ್ರಸಿದ್ಧ ಧರ್ಮಪ್ರಚಾರಕ. ಅವರು ಕುದ್ರೋಳಿಯಲ್ಲಿ ಮಸೀದಿಯನ್ನು ಸ್ಥಾಪಿಸಿ ಸುತ್ತಲಿನ ಪ್ರದೇಶದಲ್ಲಿ ಅಗಾಧ ಪ್ರಭಾವ ಬೀರಿದರು. ಟೀಪು ಸುಲ್ತಾನ್ ಇವರನ್ನು ಭೇಟಿ ಮಾಡುತ್ತಿದ್ದ ಮಾತ್ರವಲ್ಲ ಅವರ ಮರಣದ ಬಳಿಕ ಸಮಾಧಿಯನ್ನು ಸ್ಥಾಪಿಸಲು ಆದೇಶಿಸಿದ್ದ. ಕ್ರಿ.ಶ. 1799 ಟೀಪು ಹುತಾತ್ಮನಾದ ನಂತರ ಈ ಕೆಲಸವು ಅರ್ಧದಲ್ಲೇ ನಿಂತಿತು.[52] ಇದಲ್ಲದೆ ಜಿಲ್ಲೆಯಲ್ಲಿ ಹಲವಾರು ಸಮಾಧಿಗಳಿದ್ದು ವ್ಯಕ್ತಿಯ ಅಸ್ತಿತ್ವ ಮತ್ತು ಕೊಡುಗೆಗಳನ್ನು ಲೆಕ್ಕಿಸದೆ ಈ ಎಲ್ಲ ಸಮಾಧಿಗಳಲ್ಲಿ ಉರೂಸ್ ಆಚರಣೆಯು ಒಂದು ಫ್ಯಾಷನ್ ರೀತಿಯಲ್ಲಿ ಬೆಳೆದು ಬಂತು. ಸೂಫಿಗಳು ಜಿಲ್ಲೆಯಾದ್ಯಂತ ಸಂಚರಿಸಿ ತಮ್ಮ ಪವಾಡಗಳ ಮೂಲಕ ಇಸ್ಲಾಮಿನ ಕಡೆಗೆ ಕೆಳಜಾತಿಯ ಹತಾಶ ಜನರನ್ನು ಆಕರ್ಷಿಸಿ ಅವರಿಗೆ ಧರ್ಮಬೋಧನೆ ನಡೆಸಿದರು.

ಮುಸ್ಲಿಮ್ ವ್ಯಾಪಾರದ ಪ್ರಭಾವ

ಕ್ರಿ.ಶ. 1891ರ ಜನಗಣತಿಯ ಪ್ರಕಾರ ಕೆನರಾ ಜಿಲ್ಲೆಯಲ್ಲಿದ್ದ ವ್ಯಾಪಾರಿಗಳ ಸಂಖ್ಯೆ 95,000. ಈ ಪೈಕಿ 90,345 ಮಂದಿ ಮಾಪಿಳ್ಳೆ (ಬ್ಯಾರಿಗಳು), 2,104 ನವಾಯತಿಗಳು. ನವಾಯತಿಗಳು[53] ಕೂಡಾ ಮುಸ್ಲಿಮರಾಗಿದ್ದು ಒಟ್ಟು ಮುಸ್ಲಿಮ್ ವ್ಯಾಪಾರಿಗಳ ಸಂಖ್ಯೆ 92,449 ಇತ್ತು. ಇದರಿಂದ ಈ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಾರವು ಮುಸ್ಲಿಮರ ಏಕಸ್ವಾಮ್ಯ ವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಸ್ಥಳೀಯ ಉಪಭಾಷೆಯಾದ ತುಳುವಿನಲ್ಲಿ ಬ್ಯಾರಿ ಎಂದರೆ ವ್ಯಾಪಾರಿ ಎಂಬ ಅರ್ಥವಿದೆ. ಹೆಚ್ಚಿನ ವ್ಯಾಪಾರಿಗಳು ಬ್ಯಾರಿಗಳಾಗಿದ್ದ ಕಾರಣ ಇಡೀ ಸಮುದಾಯಕ್ಕೆ ಈ ಹೆಸರು ಬಂತು. ಮುಸ್ಲಿಮರು, ಅರಬ್/ಪರ್ಷಿಯನ್ ಮೂಲದಿಂದ ಬಂದಿದ್ದರಿಂದ ಅವರ ಸಾಮಾನ್ಯ ಕಸುಬು ವ್ಯಾಪಾರವಾಗಿತ್ತು. ಕೆನರಾ ಜಿಲ್ಲೆಯು ನದಿ ಮತ್ತು ತೊರೆಗಳ ಜಾಲವನ್ನು ಹೊಂದಿದೆ. ದೋಣಿಯ ಹೊರತಾಗಿ ಅವರಿಗೆ ಯಾವುದೇ ಸಂಪರ್ಕ ಸಾಧನಗಳು ಲಭ್ಯವಿರಲಿಲ್ಲ. ಹುಟ್ಟು ಹಾಕುವುದು ಮುಸ್ಲಿಮರ ಸಾಮಾನ್ಯ ಕಸುಬಾಗಿತ್ತು. ಹಾಗಾಗಿ ವ್ಯಾಪಾರದ ಮೇಲೆ ಅವರ ಸ್ವಾಮ್ಯವಿತ್ತು.

ಬಬ್ಬರ್ಯ ಪಾಡ್ದನವು ಬ್ಯಾರಿ ವರ್ತಕರ ಬಗ್ಗೆ ಉಲ್ಲೇಖ ಹೊಂದಿದ್ದು ಮೈಸಂದಾಯ

ಪಾಡ್ದನವು ಮಾಪಿಳ್ಳ ಎಂಬ ಹೆಸರಿನ ಅಂಬಿಗನ ಬಗ್ಗೆ ಪ್ರಸ್ತಾಪಿಸುತ್ತದೆ.[54] ಮುಸ್ಲಿಮ್ ವರ್ತಕರ ಸಂಘವನ್ನು ಹಂಜಮನ್‌ಗಳು ಎಂದು ಕರೆಯಲಾಗುತ್ತಿತ್ತು. ಬಾರ್ಕೂರು ಮತ್ತು ಮಂಗಳೂರಿನಲ್ಲಿ ಎರಡು ಮುಖ್ಯ ವರ್ತಕರ ಸಂಘಗಳಿದ್ದವು. ಶಿಲಾಫಲಕಗಳಲ್ಲಿ ಹಂಜಮನ್ (ಅಂಜುಮನ್)ಗಳನ್ನು ನಖಿರಾ ಹಂಜಮನಗಳೆಂದು ಉಲ್ಲೇಖಿಸಲಾಗಿದೆ. ಕ್ರಿ.ಶ. 1427ರಲ್ಲಿ ಉತ್ತರ ಕೆನರಾ ಜಿಲ್ಲೆಯ ಕಾಯ್ಕಿಣಿ ಎಂಬಲ್ಲಿ ದೊರೆತ ಶಿಲಾಫಲಕದ ಪ್ರಕಾರ ಉಮರ ಮರ್ಕಲ ಎಂಬವರು ವರ್ತಕರ ಸಂಘದ ಮುಖ್ಯಸ್ಥರಾಗಿದ್ದರು.[55] ಬಾರ್ಕೂರಿನಲ್ಲಿ ದೊರೆತೆ ಶಿಲಾಫಲಕದಲ್ಲಿ ಹಂಜಮನದ ಹಾಲರ ಪ್ರಾಮುಖ್ಯತೆಯನ್ನು ಬಣ್ಣಿಸಲಾಗಿದೆ.[56]

ಸೆಟ್ಟಿಗರ ಸಂಘದಂತೆಯೇ ಹಂಜಮನಗಳು ಕೂಡಾ ವಾಣಿಜ್ಯ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದವು. ಮುಸ್ಲಿಮ್ ವರ್ತಕರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದ್ದರಿಂದ, ಜಾತಿವಾದಿ ಬ್ರಾಹ್ಮಣರು ಮತ್ತು ಜೈನರಿಂದಾಗಿ ದಾರಿದ್ರ್ಯಕ್ಕೆ ತಳ್ಳಲ್ಪಟ್ಟಿದ್ದ ಕೆಳಜಾತಿಯ ಜನರು ಸಹಜವಾಗಿಯೇ ಮುಸ್ಲಿಮ್ ವರ್ತಕರ ಕಡೆಗೆ (ಸಹಾಯಕ್ಕಾಗಿ) ನೋಡುವಂತಾಯಿತು. ಈ ಮುಸ್ಲಿಮ್ ವರ್ತಕರು ಮತ್ತು ಹಿಂದೂ ಆಡಳಿತಗಾರರ ಮಧ್ಯೆ ಅತ್ಯಂತ ಸುಮಧುರ ಸಂಬಂಧವಿರುವಂತೆ ಕಂಡು ಬರುತ್ತಿತ್ತು. ಹಿಂದೂ ಆಡಳಿತಗಾರರು ಹೆಚ್ಚುತ್ತಿರುವ ವ್ಯಾಪಾರ ಚಟುವಟಿಕೆಗಳ ಹಾಗೂ ಅದರಿಂದ ಉಂಟಾದ ಸುಭಿಕ್ಷೆಯ ಕಾರಣಕ್ಕಾಗಿ ಮುಸ್ಲಿಮ್ ವರ್ತಕರಿಗೆ ರಕ್ಷಣೆ ಮತ್ತು ಆಶ್ರಯವನ್ನು ಒದಗಿಸಿದ್ದರು. ಅಷ್ಟೇ ಅಲ್ಲ ವರ್ತಕರಿಗೆ ಸ್ಥಳೀಯರನ್ನು ಮತಾಂತರಗೊಳಿಸುವ ಹಾದಿಯಲ್ಲಿ ಯಾವುದೇ ಅಡೆತಡೆಗಳು ಎದುರಾಗಲಿಲ್ಲ. ಮತಾಂತರಗೊಳ್ಳುವುದಕ್ಕೆ ಮುಂಚೆ ಈ ವರ್ತಕರು ಸಮಾಜದ ಅತ್ಯಂತ ಕೆಳ ವರ್ಗಕ್ಕೆ ಸೇರಿದವರಾಗಿದ್ದರೂ ವಿದೇಶಿ ವರ್ತಕರಿಂದ ಅವರಿಗೆ ಸಿಗುವ ಗೌರವ ಸಮ್ಮಾನದಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ.[57] ಅರಬ್ ವ್ಯಾಪಾರದ ಮುಖ್ಯ ಪೋಷಕನಾಗಿದ್ದ ಕಲ್ಲಿಕೋಟೆಯ ಝಮೋರಿನ್ ಅರಸ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಬೆಂಬಲ ನೀಡಿದ್ದ. ಆತನ ಶ್ರೀಮಂತಿಕೆಯು ಅರಬ್ ಹಡಗುಗಳ ಸಂಚಾರದ ಮೇಲೆ ಅವಲಂಬಿಸಿದ್ದರಿಂದ ಹೀಗೆ ಮಾಡುವುದು ಅವನಿಗೆ ಅನಿವಾರ್ಯವಾಗಿತ್ತು ಎನ್ನಲಾಗಿದೆ.[58] ಅರಬ್, ಪರ್ಷಿಯಾ ಹಾಗೂ ಭಾರತದ ಗುಜರಾತ್ ಮತ್ತು ದಕ್ಖನ್‌ನಿಂದ ಆಗಮಿಸಿದ ಮುಸ್ಲಿಮ್ ವರ್ತಕರು ಎಂತಹ ಪ್ರಭಾವವನ್ನು ಬೀರಿದ್ದರೆಂದರೆ ಪೋರ್ಚುಗೀಸರ ಆಗಮನವಾಗದೇ ಇರುತ್ತಿದ್ದರೆ ಕರಾವಳಿಯು ಸಂಪೂರ್ಣವಾಗಿ ಮಹಮ್ಮದೀಯರ ಪಾಲಾಗುತ್ತಿತ್ತು.[59] ಆರಂಭದ ಶತಮಾನದಲ್ಲಿ ವಾಣಿಜ್ಯ ಕ್ಷೇತ್ರದ ಮೇಲೆ ಮುಸ್ಲಿಮರಿಗಿದ್ದ ಏಕಸ್ವಾಮ್ಯ ಮತ್ತು ಸ್ಥಳೀಯ ಕೆಳ ಜಾತಿಯ ವರ್ಗಗಳ ದಾರಿದ್ರ್ಯ ಹಾಗೂ ಅವರು ಎದುರಿಸುತ್ತಿದ್ದ ಅಸ್ಪೃಶ್ಯತೆಗಳಿಂದಾಗಿ ಸಹಜವಾಗಿಯೇ ಮುಸ್ಲಿಮ್ ಜನಸಂಖ್ಯೆ ವೃದ್ಧಿಸುತ್ತಲೇ ಹೋಯಿತು.

3. ತುಳುನಾಡಿನ ಮುಸ್ಲಿಮ್ ಪಂಗಡಗಳು ಮತ್ತು ವಸತಿ ಪ್ರದೇಶಗಳು

ಮೇಲೆ ಕಾಣಿಸಿದ ಕಾರಣಗಳೂ ಸೇರಿದಂತೆ ಇತರ ಹಲವು ಕಾರಣಗಳಿಂದಾಗಿ ತುಳುನಾಡು ಜಿಲ್ಲೆಯಲ್ಲಿ ಮುಸ್ಲಿಮ್ ಜನಸಂಖ್ಯೆ ವೃದ್ಧಿಯಾಗುತ್ತಲೇ ಹೋಯಿತು. ಇಪ್ಪತ್ತನೇ ಶತಮಾನದ ವೇಳೆಗೆ ಅವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 13ರಷ್ಟಾಯಿತು (1941ರ

ಜನಗಣತಿಯ ಆಧಾರದಲ್ಲಿ). ಸ್ಪರ್ಕ್ ಎಂಬಾತ ತನ್ನ ಸೌತ್ ಕೆನರಾ ಮ್ಯಾನುವೆಲ್‌ನಲ್ಲಿ ಮುಸ್ಲಿಮ್ ಜನಸಂಖ್ಯೆಯನ್ನು ಈ ರೀತಿ ವಿಂಗಡಿಸಿದ್ದಾನೆ.[60]

ಜಾತಿ, ಪಂಗಡ ಮತ್ತು ಜನಾಂಗಗಳು

ಕ್ರಮ ಸಂಖ್ಯೆ	ಹೆಸರು	ಜನಸಂಖ್ಯೆ
1.	ದಕ್ಖನಿ	7
	ಭಕ್ತರು	13
2.	ಫಕೀರ್	2
	ವರ್ತಕರು	–
3.	ಬೊಹ್ರಾಗಳು	6
4.	ಖೋಜಾ	1
5.	ಲಬ್ಬೆಯಿ	49
6.	ಮಾಪಿಳ್ಳ	90,345
7.	ಮೇಮನ್	79
8.	ನವಾಯತ್	3104
	ಅಸ್ಥಿರ ಜನಾಂಗಗಳು	
9.	ಅರಬರು	30
10.	ಬಲೂಚಿಗಳು	32
11.	ಮೊಗಲರು	93
12.	ಪಠಾಣರು	867
13.	ಸೈಯದ್	1379
14.	ಶೇಖ್	11407
	ಪ್ರಾದೇಶಿಕ ಮತ್ತು ಭಾಷಿಕ	
15.	ಹನಫಿ	129
16.	ಮುಸಲ್ಮಾನ್	3,605
17.	ಪುದು ಇಸ್ಲಾಮ್	964
18.	ಶಾಫಿ	461
19.	ಷಿಯಾ	11
20.	ಸುನ್ನಿ	144
	ಇತರೆ	
21.	ಬ್ಯಾರಿಗಳು	14
22.	ಅಬಯೇನಿಯನರು	4
23.	ಪುಸಲ್ಲಾರ್‌ಗಳು	5

ಇಡೀ ಮುಸ್ಲಿಮ್ ಸಮುದಾಯವನ್ನು ಸುನ್ನಿಗಳು ಮತ್ತು ಷಿಯಾಗಳೆಂಬ ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಅಬ್ಬಾಸಿ ಖಿಲಾಫತ್ ಕಾಲದಲ್ಲಿ ಅಲಿಯವರ ಹಿಂಬಾಲಕರು ತಮ್ಮನ್ನು ಷಿಯಾಗಳೆಂದು ಗುರುತಿಸಿಕೊಂಡರು ಮತ್ತು ಇಸ್ಲಾಮೀ ಇತಿಹಾಸದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು.[61] ಇದೇ ಸಮಯದಲ್ಲಿ ಸುನ್ನಿ ಮುಸ್ಲಿಮರಲ್ಲಿ ಕರ್ಮಶಾಸ್ತ್ರಕ್ಕೆ ಸಂಬಂಧಪಟ್ಟಂತೆ ನಾಲ್ಕು ವಿಭಾಗಗಳು (ಮದ್‌ಹಬ್‌ಗಳು) ಸೃಷ್ಟಿಯಾದವು. ಅಬೂ ಹನೀಫಾರಿಂದ ಸ್ಥಾಪಿತವಾದ ಹನಫಿ ವಿಭಾಗ ಕೂಫಾ ಮತ್ತು ಬಾಗ್ದಾದ್‌ನಲ್ಲಿ ಹಬ್ಬಿತು. ಇವರು ಇಸ್ಲಾಮಿನ ಮೊಟ್ಟ ಮೊದಲ ಮತ್ತು ಅತ್ಯಂತ ಪ್ರಭಾವಿ ಕರ್ಮಶಾಸ್ತ್ರಜ್ಞರಾಗಿದ್ದು ಕ್ರಿ.ಶ. 8ನೇ ಶತಮಾನಕ್ಕೆ ಸೇರಿದ್ದರು. ಇದು ಅತ್ಯಂತ ದೊಡ್ಡ ಮತ್ತು ಸಹನಶೀಲ ಮುಸ್ಲಿಮ್ ವಿಭಾಗವಾಗಿದ್ದು ಇದರ ಅನುಯಾಯಿಗಳ ಸಂಖ್ಯೆ ಲೋಕದಾದ್ಯಂತವಿರುವ ಸುನ್ನಿ ಮುಸ್ಲಿಮರ ಅರ್ಧದಷ್ಟಿದೆ. ಮೊಗಲರ ಕಾಲದಲ್ಲಿ ಈ ವಿಭಾಗವು ಭಾರತದಾದ್ಯಂತ ಪಸರಿಸಿತು. ಭಾರತದಲ್ಲಿ ಇವರ ಜನಸಂಖ್ಯೆ ಅತ್ಯಧಿಕವಾಗಿದ್ದು ವಿಶೇಷವಾಗಿ ಉತ್ತರ ಭಾರತದಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ.

ಮಾಲಿಕ್ ಬಿನ್ ಅನಸ್ (ಕ್ರಿ.ಶ. 715ರಿಂದ ಕ್ರಿ.ಶ. 775) ಕರ್ಮಶಾಸ್ತ್ರಕ್ಕೆ ಸಂಬಂಧಿಸಿದಂತೆ ಇನ್ನೊಂದು ಕರ್ಮಶಾಸ್ತ್ರ ವಿಭಾಗವನ್ನು ಸ್ಥಾಪಿಸಿದರು. ಇವರ ಅಲ್‌ಮುವತ್ತಾ ಎಂಬ ಕೃತಿಯು ಮುಸ್ಲಿಮ್ ಕಾನೂನಿಗೆ ಸಂಬಂಧಿಸಿದಂತೆ ಈಗ ಉಳಿದಿರುವ ಅತ್ಯಂತ ಹಳೆಯ ಆಕರ ಗ್ರಂಥವಾಗಿದೆ. ಅವರು ಈಜಿಪ್ಟ್ ಮತ್ತು ಆಫ್ರಿಕಾದಲ್ಲೂ ಒಂದೇ ಪ್ರಮಾಣದಲ್ಲಿ ಅನುಯಾಯಿಗಳನ್ನು ಹೊಂದಿದ್ದರು. ಮೊಹಮ್ಮದ್ ಬಿನ್ ಇದ್ರೀಸ್ ಎಂಬವರು ಶಾಫಿ ವಿಭಾಗದ ಸ್ಥಾಪಕರು (ಕ್ರಿ.ಶ. 767ರಿಂದ ಕ್ರಿ.ಶ. 820). ಅವರು ಖುರೇಶಿ ಕುಟುಂಬಕ್ಕೆ ಸೇರಿದವರಾಗಿದ್ದು ಹಲವಾರು ದೇಶಗಳಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದ್ದರು. ಶಾಫಿ ವಿಭಾಗದ ಪ್ರಾಬಲ್ಯವು ಇಂದಿಗೂ ಈಜಿಪ್ಟ್ ಪೂರ್ವ ಆಫ್ರಿಕಾ, ಫೆಲೆಸ್ತೀನ್, ದಕ್ಷಿಣ ಅರೇಬಿಯಾ, ಈಸ್ಟ್ ಇಂಡೀಸ್ ಮತ್ತು ದಕ್ಷಿಣ ಭಾರತದ ಕರಾವಳಿ ಪ್ರದೇಶದ ಮೇಲೆ ಇದೆ. ನಾಲ್ಕು ವಿಭಾಗಗಳಲ್ಲಿ ಕೊನೆಯದ್ದು ಹಂಬಲಿಗಳದ್ದಾಗಿದ್ದು ಇದರ ಸ್ಥಾಪಕ ಅಹ್ಮದ್ ಬಿನ್ ಹಂಬಲ್ ಶಾಫಿಯವರ ವಿದ್ಯಾರ್ಥಿಯಾಗಿದ್ದರು. ಅವರು ಸಾಂಪ್ರದಾಯಿಕತೆಯ ಪ್ರತಿಪಾದಕರಾಗಿದ್ದರು. ಅವರ ಮುಸ್ನದ್ ಎಂಬ ಕೃತಿಗೆ ಹೆಚ್ಚಿನ ವಿಖ್ಯಾತಿ ಪ್ರಾಪ್ತವಾಗಿದೆ. ಷಿಯಾಗಳನ್ನು ಹೊರತುಪಡಿಸಿದರೆ ಜಗತ್ತಿನಾದ್ಯಂತವಿರುವ ಮುಸ್ಲಿಮರನ್ನು ನಾಲ್ಕು ವಿಭಾಗಗಳಾಗಿ ಗುರುತಿಸಬಹುದು.[62] ಇದನ್ನು ಹೊರತುಪಡಿಸಿದರೆ ಮುಸ್ಲಿಮರಲ್ಲಿ ಬೇರೆ ವಿಭಾಗಗಳಿಲ್ಲ. ಸ್ಪ್ರಕ್‌ನ ವರ್ಗೀಕರಣದಿಂದ ಈ ವಿಭಾಗಗಳನ್ನು ಗುರುತಿಸುವುದು ಕಷ್ಟಸಾಧ್ಯ. ಬೊಹ್ರಾ, ಖೋಜಾ, ಸೈಯದ್ ಮತ್ತು ಶೇಖ್‌ಗಳು ಷಿಯಾಗಳಾಗಿದ್ದರು. ಸ್ಪ್ರಕ್ ತನ್ನ ಕೃತಿಯಲ್ಲಿ ಅತ್ಯಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ವಿಭಾಗವೆಂದು ಗುರುತಿಸಿರುವ ಮಾಪಿಳ್ಳೆಗಳು ನಿಜವಾಗಿ ಬ್ಯಾರಿಗಳಾಗಿದ್ದು ಇವರು ಮತಾಂತರಗೊಂಡ ಸ್ಥಳೀಯರಾಗಿದ್ದಾರೆ. ಹೀಗಾಗಿ ಬ್ಯಾರಿಗಳ ಸಂಖ್ಯೆ ಕೇವಲ 14 ಎಂಬ ಸ್ಪ್ರಕ್‌ನ ವರ್ಗೀಕರಣವು ದೋಷಪೂರಿತವೆಂದು ಭಾಸವಾಗುತ್ತದೆ.

ಕೋಚ್‌ಮನ್‌ರ ಕ್ರಿ.ಶ. 1904ರ ಗ್ರಾಮ ಸಮೀಕ್ಷಾ ವರದಿಯು ಜಿಲ್ಲೆಯ ಹಲವು ಗ್ರಾಮಗಳಲ್ಲಿ ವಾಸವಾಗಿದ್ದ ನೂರಾರು ಬ್ಯಾರಿಗಳ ಹೆಸರನ್ನು ಉಲ್ಲೇಖಿಸುತ್ತದೆ.[63] ಆರಂಭದ

ಶತಮಾನದಲ್ಲಿ ಇಸ್ಲಾಮಿನ ನಾಲ್ಕು ಕರ್ಮಶಾಸ್ತ್ರ ಪಂಗಡಗಳ ಪೈಕಿ ಯಾವುದಕ್ಕೂ ಸೇರದ ಮುಸ್ಲಿಮರು ಇರುವ ಸಾಧ್ಯತೆಯಿಲ್ಲ. ಮುಸಲ್ಮಾನ್ ಎಂಬುದು ಎಲ್ಲರಿಗೂ ಅನ್ವಯವಾಗುವ ಪದವಾಗಿದ್ದರೂ ಅವರೆಲ್ಲರೂ ಒಂದೇ ಆಗಿರಲಿಲ್ಲ. ಹೀಗಾಗಿ ತುಳುನಾಡಿನ ಮುಸ್ಲಿಮರನ್ನು ಪ್ರಮುಖವಾಗಿ ಸುನ್ನಿಗಳೆಂದು ವಿಂಗಡಿಸಬಹುದು. ಕರ್ಮಶಾಸ್ತ್ರಕ್ಕೆ ಅನುಗುಣವಾಗಿ ಸುನ್ನಿಗಳನ್ನು ಶಾಫಿ ಮತ್ತು ಹನಫಿಗಳೆಂದು ವಿಂಗಡಿಸಬಹುದು. ಜಿಲ್ಲೆಯಲ್ಲಿ ಹಂಬಲಿ ಮತ್ತು ಮಾಲಿಕಿ ಕರ್ಮಶಾಸ್ತ್ರವನ್ನು ಅನುಸರಿಸುವ ಜನರಿಲ್ಲ. ಆದ್ದರಿಂದ ಬ್ಯಾರಿಗಳು, ಮಾಪಿಳ್ಳೆಗಳು, ಲಬ್ಬೆಯಿಗಳು, ಆರಬಿಗಳು, ಸೈಯದ್‌ಗಳು, ಪುದು ಇಸ್ಲಾಮ್ ಮತ್ತು ಪುಸಲ್ಲಾರ್‌ಗಳು ಶಾಫಿ ಕರ್ಮಶಾಸ್ತ್ರ ವಿಭಾಗಕ್ಕೆ ಸೇರಿದವರು. ದಕ್ಖನಿಗಳು, ಫಕೀರರು, ಮೇಮನರು, ಬಲೂಚಿಗಳು, ಮೊಗಲರು, ಪಠಾಣರು, ಶೇಖ್‌ಗಳು, ಅಬಿಸೀನಿಯನರು ಹನಫಿ ಕರ್ಮಶಾಸ್ತ್ರ ವಿಭಾಗಕ್ಕೆ ಸೇರಿದವರು. ಶಾಫಿಗಳು ಈ ಪ್ರದೇಶದಲ್ಲಿ ಬಹುಸಂಖ್ಯಾತರಾಗಿದ್ದರು.

ಜನಸಂಖ್ಯೆಯ ಮತ್ತು ಸಂಸ್ಕೃತಿಯ ಆಧಾರದಲ್ಲಿ ತುಳುನಾಡಿನ ಮುಸ್ಲಿಮರ ಅಧ್ಯಯನವನ್ನು ಈ ರೀತಿ ವಿಂಗಡಿಸಬಹುದು.

1. ಬ್ಯಾರಿಗಳು
2. ಕಚ್ಚಿ ಮೇಮನ್‌ಗಳು
3. ನವಾಯತರು
4. ದಕ್ಖನರು ಅಥವಾ ತುರುಕರು ಅಥವಾ ಉರ್ದು ಭಾಷಿಕರು
5. ಇತರರು

1. ತುಳುನಾಡಿನ ಬ್ಯಾರಿಗಳು

ತುಳುನಾಡಿನ ಮುಸ್ಲಿಮರ ಪೈಕಿ ಜನಸಂಖ್ಯೆಯಲ್ಲಿ ಅತ್ಯಂತ ಮುಂಚೂಣಿಯಲ್ಲಿರುವವರು ಬ್ಯಾರಿಗಳು. ಅವರು ಈ ಪ್ರದೇಶದ ಅತ್ಯಂತ ಪ್ರಾಚೀನ ಮುಸ್ಲಿಮರಾಗಿದ್ದು ಆರಂಭದ ಶತಮಾನದಲ್ಲಿ ಇಲ್ಲಿ ನೆಲೆಸಿದ್ದ ಆರಬಿಗಳಿಂದ ನೇರ ಪ್ರಭಾವಕ್ಕೊಳಗಾಗಿದ್ದಾರೆ. ಹೊಸ ಧರ್ಮದ ಜಾತಿವಿರೋಧ, ಸಮಾನತೆಯ ಆಶಯಗಳಿಗೆ ಕೆಳ ಜಾತಿಯ ಜನರು ಮಾರು ಹೋದರು ಮತ್ತು ಮುಸ್ಲಿಮರಾಗಿ ಮಾರ್ಪಟ್ಟರು. ಆದರೂ ಅವರು ತಮ್ಮ ಪ್ರಾದೇಶಿಕ ಸಂಪ್ರದಾಯಗಳನ್ನು ಉಳಿಸಿಕೊಂಡರು. ಕೊಂಕಣಿ ಮಾತನಾಡುವ ಕೊಂಕಣ ತೀರದ ಮುಸ್ಲಿಮರು, ತಮಿಳು ಮಾತನಾಡುವ ತಮಿಳುನಾಡಿನ ಲಬ್ಬೆಯಿಗಳು ಈ ವಿಭಾಗಕ್ಕೆ ಸೇರಿದವರು. ತುಳುಮಿಶ್ರಿತ ಮಲಯಾಳ ಭಾಷೆಯನ್ನು ಹೋಲುವ ಸ್ಥಳೀಯ ಉಪಭಾಷೆಯಾದ ಬ್ಯಾರಿ ಭಾಷೆಯ ತುಳುನಾಡಿನ ಬ್ಯಾರಿಗಳು ಈ ಪ್ರದೇಶದ ಅತ್ಯಂತ ಮಹತ್ವದ ಜನಾಂಗವಾಗಿ ಬೆಳೆದು ಬಂದರು. ಈ ಎಲ್ಲ ವಿಭಾಗಗಳೂ ಅರಬ್ ಸಂಪರ್ಕದಿಂದ ಹುಟ್ಟಿದ್ದರಿಂದಾಗಿ ಹಾಗೂ ಅರಬ್ ವರ್ತಕರು ಶಾಫಿಗಳಾಗಿದ್ದರಿಂದ ಈ ಎಲ್ಲ ಮುಸ್ಲಿಮರೂ ಶಾಫಿಗಳಾಗಿರುವರು.

ಆರಂಭ ಕಾಲದ ಮುಸ್ಲಿಮರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರಿಂದ ಪ್ರದೇಶದ ಇತರ ಜನರೊಂದಿಗೆ ಉತ್ತಮ ಸಂಬಂಧವನ್ನು ಉಳಿಸಿಕೊಂಡಿದ್ದರು. ಸ್ಥಳೀಯ

ರೊಂದಿಗೆ ಬ್ಯಾರಿಗಳು ಹೊಂದಿದ್ದ ಸಂಬಂಧದ ಬಗ್ಗೆ ಪಾಡ್ದನಗಳಲ್ಲಿ ಉಲ್ಲೇಖವಿದೆ. ಬಬ್ಬರ್ಯ ಪಾಡ್ದನವು ಮುರವೆ ಬ್ಯಾರಿ ಮತ್ತು ಫಾತಿಮಾ ದಂಪತಿಯ ಪುತ್ರನಾಗಿದ್ದ ಮತ್ತು ಭೂತವಾಗಿ ಮಾರ್ಪಟ್ಟ ಬಪ್ಪನ ಬಗ್ಗೆ ಪ್ರಸ್ತಾಪಿಸುತ್ತದೆ.[64] ಅವರ ಮಕ್ಕಳಾದ ಅಂತು, ಗೆಂಡಾ ಹೆಮ್ಮಗೆ, ಸರ್ಪಳಿ ನಾಯಗೆ, ಚಿಂಕ್ರು, ಸೇಕು, ಸಯ್ಯಿದ್ ಇತ್ಯಾದಿಗಳನ್ನು ಸ್ಥಳೀಯ ಬ್ಯಾರಿ ಹೆಸರುಗಳಾದ ಅಂದು, ಕೆಂಡ ಹಮ್ಮದೆ, ಸರ್ಪಳಿ, ಪಕ್ರುಞಿ, ಸೇಕು, ಸಯ್ಯಿದು ಮತ್ತಿತರ ಹೆಸರುಗಳೊಂದಿಗೆ ಹೋಲಿಸಬಹುದು.

ಡಾ. ಶ್ರೀಮತಿ ಸುಶೀಲಾ ಉಪಾಧ್ಯಾಯ ಪಾಡ್ದನದ ಇನ್ನೊಂದು ಅವತರಣಿಕೆಯನ್ನು ಮುಂದಿಡುತ್ತಾರೆ. ಸುಲಿಕಲ್ಲು (ಸುರತ್ಕಲ್) ಮಾಧವ (ಮಹಮ್ಮದ) ಬ್ಯಾರಿ ಎಂಬ ವರ್ತಕ ವಿವಾಹವಾಗುವ ಅವಕಾಶವನ್ನೇ ಕಳೆದುಕೊಂಡಿದ್ದ ಮುತ್ತು ಶೆಡ್ತಿ ಎಂಬ ಮಹಿಳೆಯನ್ನು ವಿವಾಹವಾದನು. ಆಕೆಯೊಂದಿಗೆ ವಿವಾಹ ಪ್ರಸ್ತಾಪವಿಡುತ್ತಿದ್ದ ಪುರುಷರೆಲ್ಲರೂ ಮದುವೆಯ ರಾತ್ರಿಯಲ್ಲೇ ತೀರಿಹೋಗುತ್ತಿದ್ದರು. ಮಾಧವ ಬ್ಯಾರಿ ಅವಳನ್ನು ವಿವಾಹವಾದ ಮೂವತ್ತನೇ ಪುರುಷನಾಗಿದ್ದ. ತನ್ನ ಜೀವವನ್ನೇ ಅಪಾಯಕ್ಕೊಡ್ಡಿದ್ದ ಆತ ಈ ನಿಗೂಢ ಸಾವುಗಳ ಹಿಂದಿನ ಕಾರಣ ಸರ್ಪಕಡಿತ ಎಂಬುದನ್ನು ಪತ್ತೆ ಹಚ್ಚಿದ. ಆತ ಆ ಹಾವನ್ನು ಕೊಂದು ಆ ಹೆಣ್ಣನ್ನು ಮದುವೆಯಾದ. ಆದ್ದರಿಂದ ರತ್ನಾ ಸೆಟ್ಟಿಯ ಸೋದರಿಯಾಗಿದ್ದ ಮುತ್ತು ಶೆಡ್ತಿ ಫಾತಿಮಾ ಆಗಿ ಬಪ್ಪ ನಿಗೆ ಜನ್ಮ ನೀಡಿದಳು. ಈ ಬಪ್ಪನೇ ಬಬ್ಬರ್ಯನೆಂದು ಮುಂದೆ ಪ್ರಸಿದ್ಧನಾದ.[65]

ವರ್ತಕರಾಗಿದ್ದ ಅರಬರು ಇಲ್ಲಿ ವಲಸೆ ಬಂದವರಾದ ಕಾರಣ ಅವರ ಸಂತಾನವು ಹೆಚ್ಚಾಗಿ ತಾಯಿಯನ್ನೇ ಆಶ್ರಯಿಸುವಂತಾಯಿತು. ಇದರಿಂದ ಅವರಿಗೆ ಸೂಕ್ತ ಧಾರ್ಮಿಕ ವಿದ್ಯಾಭ್ಯಾಸವೂ ದೊರೆಯಲಿಲ್ಲ. ಶಿಕ್ಷಕರ ಜತೆ ಧಾರ್ಮಿಕವಾದ ಸಂಪರ್ಕ ಸಾಧಿಸುವ ಅವಕಾಶ ದೊರೆತವರು ಮಾತ್ರ ಇಸ್ಲಾಮೀ ಕಟ್ಟಳೆ ಮತ್ತು ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು. ಇತರರ ಜ್ಞಾನವು ಕಲಿಮಾವನ್ನು ಉಚ್ಚರಿಸಿ ಮುಸ್ಲಿಮ್ ಸಮುದಾಯದ ಭಾಗವಾಗಿ ಬಿಡುತ್ತಿದ್ದರು.[66] ಅಂಥವರು ನಿಯಮಿತವಾದ ಯಾವುದೇ ಆಚರಣೆಗಳನ್ನು ಪಾಲಿಸುತ್ತಿರಲಿಲ್ಲ. ಹೀಗಾಗಿ ಸ್ಥಳೀಯರು ಜಾತಿ-ನೀತಿ ಬ್ಯಾರಿಗಳು ಮತ್ತು ಜಾತಿ-ಸೆಟ್ಟಿ ಬ್ಯಾರಿಗಳೆಂದು ಗುರುತಿಸಲ್ಪಡುತ್ತಿದ್ದರು. ಜಾತಿ-ನೀತಿ ಬ್ಯಾರಿಗಳು ಕಟ್ಟಳೆಗಳನ್ನು ಆಚರಣೆಯಲ್ಲಿ ಪಾಲಿಸುತ್ತಿದ್ದರು. ಆದರೆ ಜಾತಿ-ಸೆಟ್ಟಿ ಬ್ಯಾರಿಗಳು ಆಚರಣೆಗಳ ವಿಷಯದಲ್ಲಿ ಅಷ್ಟಕ್ಕಷ್ಟೆ. ನಡವಳಿಕೆಗಳ ಸಂಗ್ರಹ (1886)ದಲ್ಲಿ ಬೊಬ್ಬರ್ಯ ಪಾಡ್ದನವು ಬ್ಯಾರಿಗಳಿಗೆ ಇತರ ಜಾತಿಗಳೊಂದಿಗಿದ್ದ ಅನ್ಯೋನ್ಯತೆಯನ್ನು ಹೀಗೆ ವಿವರಿಸುತ್ತದೆ: ''ಏಳು ಪಟ್ಟಣದ ಮರಕಲರು ಮತ್ತು ಏಳು ಕಡೆಯ ಬ್ಯಾರಿಗಳು ಒಟ್ಟು ಸೇರಿ ಕಲಂಜಾರ್ ಎಂಬಲ್ಲಿಗೆ ತೆರಳಿದರು. ನೀವು ಜಾತಿ-ನೀತಿ ಬ್ಯಾರಿಗಳೋ ಅಥವಾ ಜಾತಿ-ಸೆಟ್ಟಿ ಬ್ಯಾರಿಗಳೋ ಎಂದು ಅವರನ್ನು ಅಲ್ಲಿನವರು ಕೇಳಿದರು. ತಾವು ಜಾತಿ ಬ್ಯಾರಿಗಳೆಂದು ಬ್ಯಾರಿಗಳು ಉತ್ತರಿಸಿದರು. ನೀವು ಜಾತಿ-ನೀತಿ ಬ್ಯಾರಿಗಳಾಗಿದ್ದರೆ ಅವರಣ ದೊಳಕ್ಕೆ ಬನ್ನಿ'' ಎಂಬ ಆಹ್ವಾನ ಅಲ್ಲಿನವರಿಂದ ಬಂತು. ಅವರಿಗೆ ಒಳ್ಳೆಯ ಆತಿಥ್ಯವೂ ದೊರೆಯಿತು.[67]

ಇನ್ನೊಂದು ಪಾಡ್ದನದಲ್ಲೂ ಇದೇ ಬಗೆಯ ಉಲ್ಲೇಖ ಕಂಡುಬರುತ್ತದೆ. 'ಯೆಡ್ಡೋಡಿ ಸೊತ್ತು ಮರಕಲೆನ ಕತೆ' ಎಂಬುದು ಅದರ ಶೀರ್ಷಿಕೆ. ಮೂವರು ಬ್ಯಾರಿಗಳು ಕಲಂಜಾರ್

ಎಂಬಲ್ಲಿನ ದೇವಸ್ಥಾನಕ್ಕೆ ಹೋದರು. ಗುತ್ತುವಿನ ಜನರು ಈ ಹಿಂದಿನ ಪಾಡ್ದನದಲ್ಲಿ ಕೇಳಿದ್ದ ಪ್ರಶ್ನೆಗಳನ್ನೇ ಕೇಳಿದರು.[68] ತಾವು ಜಾತಿ–ನೀತಿ ಬ್ಯಾರಿಗಳೆಂದು ಅವರು ಉತ್ತರಿಸಿದರು. ನಂತರ ಗುತ್ತುವಿನವರು ಬ್ಯಾರಿಗಳನ್ನು ಆವರಣದೊಳಕ್ಕೆ ಬರಮಾಡಿಕೊಂಡರು.[69] ಜನಸಾಮಾನ್ಯರ ನಡುವೆ ಬ್ಯಾರಿಗಳಿಗೆ ವಿಶೇಷವಾದ ಗೌರವವಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ. ಬ್ಯಾರಿಗಳ ಹೆಸರು ಕೂಡಾ ಸ್ಥಳೀಯ ಹೆಸರುಗಳನ್ನು ಹೋಲುತ್ತಿತ್ತು. ಕೆಲವು ಹೆಸರುಗಳು ಅರಬಿಯ ಅಪಭ್ರಂಶಗೊಂಡವುಗಳಾಗಿದ್ದು ಅವೂ ಸ್ಥಳೀಯ ಹೆಸರುಗಳಂತೆಯೇ ಇದ್ದವು. ಅಬ್ದು ಶೇಖ್ ಮತ್ತು ಸೈಯದ್‌ಗಳ ಬದಲಿಗೆ ಅಂದು, ಸೇಕು ಹಾಗೂ ಸೈದು ಎಂಬ ಹೆಸರುಗಳು ಇಪ್ಪತ್ತನೇ ಶತಮಾನದ ಮಧ್ಯ ಭಾಗದವರೆಗೂ ಚಾಲ್ತಿಯಲ್ಲಿದ್ದವು.[70]

ಬ್ಯಾರಿಗಳು ಮಾಪಿಳ್ಳಾಗಳಲ್ಲ

ಬ್ಯಾರಿಗಳು ವರ್ತಕ ಸಮುದಾಯವಾಗಿದ್ದರಿಂದ ನದಿ ತೀರದಲ್ಲಿ ಹಾಗೂ ಹಿನ್ನೀರಿಗೆ ಅಂಟಿಕೊಂಡಂತೆ ಇರುವ ಕರಾವಳಿ ಪ್ರದೇಶದಲ್ಲಿ ನೆಲೆಸಿದರು. ಮಂಗಳೂರು ಕರಾವಳಿಯಲ್ಲಿ ಉಳ್ಳಾಲದಿಂದ ಮೂಲ್ಕಿಯವರೆಗೆ, ಕಾಸರಗೋಡು ಕರಾವಳಿಯಲ್ಲಿ ಕಾಸರಗೋಡಿನಿಂದ ಮಂಜೇಶ್ವರದವರೆಗೆ ಇವರು ನೆಲೆಸಿದರು. ನದಿಪಾತ್ರದಿಂದ ಹದಿನೈದು ಕಿ.ಮೀ.ವರೆಗೆ ಇವರ ಹರವು ಇತ್ತು. ಅಲ್ಲದೆ ಇಷ್ಟೇ ಅಂತರವನ್ನು ದೋಣಿಗಳ ಮೂಲಕ ಇವರು ಕ್ರಮಿಸುತ್ತಿದ್ದರು. ಮಂಗಳೂರು ಮತ್ತು ಕಾಸರಗೋಡು ವಿಭಾಗವು ಬ್ಯಾರಿಗಳ ಭದ್ರಕೋಟೆಯಾಗಿತ್ತು. (ನಕ್ಷೆ ಮತ್ತು ಅನೆಕ್ಸರ್ ನೋಡಿ). ಏಳನೇ ಶತಮಾನದಲ್ಲಿ ಪ್ರವಾದಿ ಮುಹಮ್ಮದರು ಇಸ್ಲಾಮ್ ಧರ್ಮವನ್ನು ಪ್ರಚಾರ ಪಡಿಸುತ್ತಿದ್ದ ಸಂದರ್ಭದಲ್ಲೇ ಈ ಪ್ರದೇಶಕ್ಕೂ ಇಸ್ಲಾಮಿನ ಆಗಮನ ವಾಯಿತು. ಕರಾವಳಿಗೆ ಬಂದ ಎಲ್ಲ ಅರಬರೂ ಶಾಫಿಗಳಾಗಿದ್ದರಿಂದ ಇಲ್ಲಿನ ಮುಸ್ಲಿಮರೂ ಅದೇ ಕರ್ಮಶಾಸ್ತ್ರದ ಅನುಯಾಯಿಗಳಾಗಿ ಮಾರ್ಪಟ್ಟರು.

ತುಳುನಾಡಿನ ಶೇ. 80ಕ್ಕೂ ಹೆಚ್ಚು ಮುಸ್ಲಿಮರು ಬ್ಯಾರಿಗಳಾಗಿದ್ದಾರೆ. ಆದರೆ ಇತಿಹಾಸಕಾರರು ಮತ್ತು ಲೇಖಕರು ಈ ಮುಸ್ಲಿಮರನ್ನು ಮಾಪಿಳ್ಳೆಗಳೆಂದು ತಪ್ಪಾಗಿ ಗುರುತಿಸಿದ್ದಾರೆ. ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳವರೆಗೂ ಬ್ಯಾರಿಗಳು ತಮ್ಮ ಹೆಸರಿನ ಮುಂದೆ ಅಭಿಮಾನಪೂರ್ವಕವಾಗಿ ಬ್ಯಾರಿಗಳು ಎಂದು ಬರೆಯುತ್ತಿದ್ದರು. ಸರಕಾರಿ ದಾಖಲೆಗಳು ಕೂಡಾ ಅವರನ್ನು ಬ್ಯಾರಿಗಳೆಂದೇ ಗುರುತಿಸಿದೆ. ಸಂಸ್ಕೃತಿ ಮತ್ತು ಸಂಪ್ರದಾಯದ ವಿಚಾರದಲ್ಲಿ ಇವರು ಮಾಪಿಳ್ಳೆಗಳಿಗಿಂತ ಭಿನ್ನ. ಇತಿಹಾಸಕಾರರು ಈ ವಾಸ್ತವ ಗಳನ್ನು ಕಡೆಗಣಿಸಿದರು ಮತ್ತು ಧಾರ್ಮಿಕ ಮದ್ರಸಾಗಳ ಮೇಲಿನ ಅವಲಂಬನೆಯ ಕಾರಣ ಬ್ಯಾರಿಗಳಿಗೆ ಮಲಬಾರ್‌ನ ಮಾಪಿಳ್ಳೆಗಳೊಂದಿಗೆ ಸಾಮ್ಯತೆ ಇದ್ದುದರಿಂದ ಅವರನ್ನು ಅದೇ ಗುಂಪಿಗೆ ಸೇರಿಸಿಬಿಟ್ಟರು. ಇದರ ಪರಿಣಾಮವಾಗಿ ಅತ್ಯಂತ ಮುಖ್ಯ ಜನವಿಭಾಗವಾಗಿದ್ದ ಬ್ಯಾರಿಗಳು ತುಳುನಾಡಿನ ಭವ್ಯ ಚರಿತ್ರೆಯಿಂದ ಹೊರಗುಳಿಯುವಂತಾಯಿತು. ವಾಸ್ತವದಲ್ಲಿ ಬ್ಯಾರಿಗಳನ್ನು ಮಾಪಿಳ್ಳೆಗಳಿಂದ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿದೆ.

1. ಬ್ಯಾರಿ ಎಂಬ ಪದದ ವ್ಯುತ್ಪತ್ತಿ

ಬ್ಯಾರಿ ಎಂಬ ಪದವು ಸ್ಥಳೀಯ ಆಡುಭಾಷೆಯಾದ ತುಳುವಿನಿಂದ ಬಂದಿದೆ ಎಂಬುದು ಸಾಮಾನ್ಯ ಗ್ರಹಿಕೆ. ಬ್ಯಾರಿ ಎಂದರೆ ವ್ಯಾಪಾರಿ ಎಂದರ್ಥ. ಅರಬರು ವ್ಯಾಪಾರಿಗಳಾಗಿದ್ದ ಕಾರಣ ಅವರ ಸಂತಾನವು ಕರಾವಳಿಯಲ್ಲಿ ತಮ್ಮ ಸಂಪ್ರದಾಯವನ್ನು ಉಳಿಸಿಕೊಂಡಿತು. ಆದ್ದರಿಂದ ಸ್ಥಳೀಯರು ಅವರನ್ನು ಬ್ಯಾರಿಗಳೆಂದು ಸರಿಯಾಗಿಯೇ ಗುರುತಿಸಿದರು. ವ್ಯಾಪಾರವನ್ನು ಇಸ್ಲಾಮ್ ಜೀವನೋಪಾಯದ ಸಮೃತಾರ್ಹ ಮಾರ್ಗವೆಂದು ಪರಿಗಣಿಸುತ್ತದೆ. ಆದ್ದರಿಂದ ಆರಂಭದ ಶತಮಾನದಲ್ಲಿ ಸಾಗರೋದ್ಯಮದಿಂದ ಹಿಡಿದು ಗೂಡಂಗಡಿಯವರೆಗೆ ಎಲ್ಲ ಬಗೆಯ ವ್ಯಾಪಾರವನ್ನೂ ಬ್ಯಾರಿಗಳೇ ನೋಡಿಕೊಳ್ಳುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗಳ ದಾಖಲೆಗಳು (ಸರ್ವೆ) ಜಿಲ್ಲೆಯಲ್ಲಿ ಭಾರಿ ಸಂಖ್ಯೆಯ ಬ್ಯಾರಿಗಳ ಅಸ್ತಿತ್ವದ ಬಗ್ಗೆ ಉಲ್ಲೇಖಿಸುತ್ತದೆ.[71] ಆರಂಭ ಕಾಲದ ಇನ್ನೂ ಹಲವು ಖಾಸಗಿ ಕಡತಗಳು ಮತ್ತು ದಾಖಲೆಗಳು ಅವರನ್ನು ಬ್ಯಾರಿಗಳೆಂದೇ ಗುರುತಿಸಿದೆ. ಇದು ಸ್ಥಳೀಯ ತುಳು ಭಾಷೆಯಲ್ಲಿ ವ್ಯಾಪಾರಿ ಎಂಬುದಕ್ಕೆ ಸಂವಾದಿಯಾಗಿ ಇರುವ ಬ್ಯಾರಿ ಎಂಬ ಪದದಿಂದ ಉಗಮಗೊಂಡಂತೆ ಭಾಸವಾಗುತ್ತದೆ. ಆದರೆ ಹೆಚ್ಚು ನಿಖರವಾಗಿ ಹೇಳಬೇಕಾದರೆ ಈ ಪದದ ಮೂಲವು ಅರಬಿ ಭಾಷೆಯ ಬಹಾರಿ (ಸಮುದ್ರ ಸಂಚಾರದಲ್ಲಿ ತೊಡಗಿದಾತ) ಎಂಬ ಪದದಲ್ಲಿದೆ. ಮಸೀದಿಗಳಿಗೆ ಮಹ್‌ಜೀದ್ ಎಂಬ ಪದವೂ ಆರಂಭ ಕಾಲದ ಕಡತಗಳಲ್ಲಿ ಧಾರಾಳವಾಗಿ ಬಳಕೆಯಾಗಿದೆ. ಅಜಿಲಮೊಗರುವಿನ ಸಾಧುರೀ ಬಹಾರಿ ಹತ್ತೊಂಬತ್ತನೇ ಶತಮಾನದ ಆರಂಭ ಕಾಲದಲ್ಲಿದ್ದ ಒಬ್ಬ ಮುಸ್ಲಿಮ್ ನಾಯಕ. ಆದೇ ರೀತಿ ಮುಲ್ಕಿಯ ಬಪ್ಪ ಬ್ಯಾರಿ ಮತ್ತು ಮಂಜೇಶ್ವರದ ಮಮ್ಮಿ ಸೂಪಿ ಬ್ಯಾರಿ ಹತ್ತೊಂಬತ್ತನೇ ಶತಮಾನದಲ್ಲಿ ಬದುಕಿದ್ದ ಬ್ಯಾರಿಗಳ ಪ್ರಮುಖ ನಾಯಕರು.

ಆದರೆ ಮಾಪಿಳ್ಳೆ ದಾಖಲೆಗಳಲ್ಲಿ ಬ್ಯಾರಿ ಎಂಬ ಅಂತ್ಯ ಪ್ರತ್ಯಯ ಕಂಡು ಬರುವುದಿಲ್ಲ. ಮಲಯಾಳಂ ದಾಖಲೆಗಳಲ್ಲಿ ಬ್ಯಾರಿ ಎಂಬ ಪದವನ್ನು ಕಡೆಗಣಿಸಲಾಗಿದೆ ಮತ್ತು ಈ ಪದವನ್ನು ಬಳಸಲು ಮಾಪಿಳ್ಳೆಗಳಿಗೆ ಹಿಂಜರಿಕೆಯಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

2. ಬ್ಯಾರಿ ಉಪಭಾಷೆಯು ಮಲಯಾಳಂ ಮೂಲದ್ದೆಂದು ತಪ್ಪಾಗಿ ಭಾವಿಸಲಾಗುತ್ತದೆ. ಆದರೆ ಡಾ. (ಶ್ರೀಮತಿ) ಸುಶೀಲಾ ಪಿ. ಉಪಾಧ್ಯಾಯ ತಮ್ಮ ಪಿಎಚ್‌ಡಿ ಪ್ರಬಂಧದಲ್ಲಿ ಬ್ಯಾರಿ ಭಾಷೆಗೆ ಸಂಬಂಧಿಸಿದಂತೆ ಈ ಕೆಳಗಿನ ವಿಚಾರಗಳನ್ನು ಕಂಡುಕೊಂಡಿದ್ದಾರೆ.[72]

1. ಈ ಉಪಭಾಷೆಗೆ ತುಳುವಿನ ವ್ಯಾಕರಣವಿದ್ದು ಇದು ಮಲಯಾಳಂಗಿಂತ ಸಂಪೂರ್ಣ ಭಿನ್ನವಾಗಿದೆ.
2. ಶೇ. 50ಕ್ಕೂ ಹೆಚ್ಚು ಪದಗಳು ತುಳುವಿನಿಂದ ಬಂದಿವೆ. ಉಳಿದ ಪದಗಳು ಅರಬಿ ಮತ್ತು ಮಲಯಾಳಂ ಮೂಲದ್ದು.
3. ಮಲಯಾಳಂನಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಪದಗಳು ಬ್ಯಾರಿಯಲ್ಲಿ ಬಳಕೆಯಲ್ಲಿಲ್ಲ.
4. ರ ಕ್ಕೆ ಬದಲಾಗಿ ಲ, ವ ಕ್ಕೆ ಬದಲಾಗಿ ಬ ಮತ್ತು ತ ಕ್ಕೆ ಬದಲಾಗಿ ದ ಈ ಭಾಷೆಯ ಉಚ್ಚರಣೆಯಲ್ಲಿ ಕಂಡುಬರುವ ಪ್ರಮುಖ ಬದಲಾವಣೆಗಳು.

ಈ ಮೇಲಿನ ಮತ್ತು ಇಂತಹದ್ದೇ ಕೆಲವು ಇತರ ಸಂಶೋಧನೆಗಳಿಂದ ಈ ಭಾಷೆಯು ತುಳು ಮೂಲದ್ದು ಎಂದು ಹೇಳಬಹುದು. ಅದು ಮುಸ್ಲಿಮರಾಗುವುದಕ್ಕೆ ಮುಂಚೆಯೇ ಸ್ಥಳೀಯರ ಮಧ್ಯೆ ಚಾಲ್ತಿಯಲ್ಲಿದ್ದ ಒಂದು ಉಪಭಾಷೆ. ಇಂದಿಗೂ ಮಲಯಾಳಮನ್ನು ಹೋಲುವ ಉಪಭಾಷೆಗಳನ್ನು ಬಿಲ್ಲವರು, ಬೋವಿಗಳು, ಮರಕಲರು ಹಾಗೂ ತುಳುನಾಡಿನ ಇತರ ಮುಸ್ಲಿಮೇತರ ಜನಾಂಗಗಳು ಬಳಸುತ್ತಿವೆ. ಅಲ್ಲದೆ ಬ್ಯಾರಿಗಳು ಆಡುವ ಭಾಷೆಯು ಕೇರಳದ ಮುಸ್ಲಿಮರಲ್ಲಿ ಚಾಲ್ತಿಯಲ್ಲಿರುವ ಕೆಲವು ಭಾಷಾ ಪ್ರಭೇದಗಳಿಗಿಂತ ಭಿನ್ನವಾಗಿದೆ. ಬ್ಯಾರಿ ಭಾಷೆಯು ತುಳು ಭಾಷಿಕರೇ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ಆಡಲ್ಪಡುತ್ತಿರುವುದೇ ಇದಕ್ಕೆ ಕಾರಣ.[73] ಬ್ಯಾರಿಗಳು ತಮ್ಮ ಧಾರ್ಮಿಕ ಶಿಕ್ಷಣಕ್ಕಾಗಿ ಮಾಪಿಳ್ಳಗಳನ್ನೇ ಆಶ್ರಯಿಸಿದ್ದರಿಂದ ಅವರ ಭಾಷೆಯ ಪ್ರಭಾವವೂ ಬ್ಯಾರಿ ಭಾಷಿಕ ಸಮುದಾಯದ ಮೇಲಾಯಿತು. ಆದರೂ ಬ್ಯಾರಿ ಬರಹಗಾರರು ತಮ್ಮ ಬರಹಗಳಲ್ಲಿ ಒಂದು ಬಗೆಯ ಮಿಶ್ರ ಭಾಷೆಯನ್ನು ಬಳಸಿದರು. ಮೊಗ್ರಾಲ್‌ನ ಸಾಹುಕಾರ್ ಕುಂಞಿಪಕ್ಕಿ ತುಳುನಾಡಿನ ಓಬೇಲೆ ಎಂಬ ಜನಪದ ಹಾಡನ್ನು ಆಧರಿಸಿದ ತಮ್ಮ ಒಂದು ಕವನದಲ್ಲಿ ತುಳು ಪದಗಳನ್ನು ಧಾರಾಳವಾಗಿ ಬಳಸಿದ್ದಾರೆ.[74]

3. ಬ್ಯಾರಿಗಳಿಗೆ ಸಮರ್ಪಕವಾದ ಲಿಪಿಯಿಲ್ಲ. ಆರಂಭದ ಶತಮಾನಗಳಲ್ಲಿ ಅವರು 'ಬಟ್ಟೆ ಬರಹ' ಎಂಬ ಲಿಪಿಯನ್ನು ಬಳಸಿದರು. ಇದನ್ನು ಸಾಮಾನ್ಯವಾಗಿ ಬ್ಯಾರಿ ಬರಹ ಎಂದೂ ಜನಸಾಮಾನ್ಯರು ಕರೆಯುತ್ತಿದ್ದರು. ಇದು ಬ್ಯಾರಿಗಳೇ ಬಳಸುತ್ತಿದ್ದ ಲಿಪಿ. ಆದರೆ ಇಂದು ಅದು ಸಂಪೂರ್ಣ ಅಳಿದುಹೋಗಿದೆ.[75]

ಇದು ಮಲಯಾಳಮ್‌ಗಿಂತ ಭಿನ್ನವಾಗಿದ್ದು ತಥಾಕಥಿತ ತುಳು ಲಿಪಿಯನ್ನು ಹೋಲುತ್ತದೆ. ಆದರೆ ಮಾಪಿಳ್ಳಗಳು ಮಲಯಾಳಮ್ ಲಿಪಿಯನ್ನು ಮಾತ್ರ ಬಳಸುತ್ತಿದ್ದರು.

4. ಬ್ಯಾರಿಗಳ ಹೆಸರು ಮಾಪಿಳ್ಳೆಗಳಲ್ಲಿ ಸಾಮಾನ್ಯವಾಗಿ ಪ್ರಚಲಿತವಿದ್ದ ಹೆಸರುಗಳಿಗಿಂತ ಭಿನ್ನವಾಗಿದೆ. ಬ್ಯಾರಿಗಳು ತಮ್ಮ ಹೆಸರಿನ ಜತೆಗೆ ಬ್ಯಾರಿ ಅಥವಾ ಬ್ಯಾರ್ದಿ ಎಂಬ ಅಂತ್ಯ ಪ್ರತ್ಯಯ ಬಳಸಲು ಹೆಮ್ಮೆ ಪಡುತ್ತಿದ್ದರು. ಹಲವಾರು ಹೆಸರುಗಳು ಮುಸ್ಲಿಮೇತರ ಸಮುದಾಯಗಳಲ್ಲೂ ಬಳಕೆಯಲ್ಲಿದ್ದವು. ಉದಾ: ಮಾಯಬ್ಬ ಸಾಯಿರಿ, ಕಾಯಿರಿ, ಇಜ್ಜಬ್ಬ ಬಪ್ಪ, ಕುಂಞಪ್ಪ, ಉಮ್ಮಾತ್ತು, ಬೀಪಮ್ಮ, ಕುಂಞಮ್ಮ ಇತ್ಯಾದಿ.[76]

ಮಾಪಿಳ್ಳೆಗಳ ಹೆಸರುಗಳಿಗೂ ಈ ಸ್ಥಳೀಯ ಹೆಸರಿಗೂ ಯಾವುದೇ ಸಾಮ್ಯತೆ ಕಂಡು ಬರುವುದಿಲ್ಲ.

5. ಬ್ಯಾರಿಗಳ ಸಂಪ್ರದಾಯವೂ ಮಾಪಿಳ್ಳೆಗಳಿಗಿಂತ ಭಿನ್ನ. ತುಳುನಾಡಿನ ಪಾಡ್ದನಗಳು ಅವರ ಸೌಹಾರ್ದಮಯ ಬದುಕು ಮತ್ತು ಸ್ಥಳೀಯರೊಂದಿಗಿದ್ದ ಅನ್ಯೋನ್ಯತೆಯನ್ನು ಸಾರಿ ಹೇಳುತ್ತವೆ.[77] ಮೂಲ್ಕಿಯ ದುರ್ಗಾ ಪರಮೇಶ್ವರಿ ದೇವಸ್ಥಾನದ ನಿರ್ಮಾತೃವಾದ ಬಪ್ಪ ಬ್ಯಾರಿಯ ವಂಶಿಕರೊಂದಿಗೆ ದೇಗುಲದ ಆಡಳಿತ ಮಂಡಳಿಯವರು ಇಂದಿಗೂ ಗೌರವದೊಂದಿಗೆ ನಡೆದುಕೊಳ್ಳುತ್ತಾರೆ. ಅರಿಕ್ಕಾಡಿಯ ಆಲಿ ಭೂತ ಇಂತಹ ಇನ್ನೊಂದು ಉದಾಹರಣೆ. ಮಂಜೇಶ್ವರದ ಉದ್ಯಾವರದಲ್ಲಿರುವ ಮಸೀದಿ ಹಾಗೂ ತುಳುನಾಡಿನ ಇತರ ಹಲವು ಸ್ಥಳಗಳು ಇಂದಿಗೂ ಬ್ಯಾರಿ ಭೂತಸ್ಥಾನ ಎಂದು ಗೌರವಿಸಲ್ಪಡುತ್ತವೆ. 'ಅಬ್ದುಲ್

ರೆಹಮಾನ್ ಅಂಡ್ ಕೊರಗಪ್ಪ ಕಂಪನಿ ಆಫ್ ಮ್ಯಾಂಗಲೂರ್' ಪ್ರತಿ ವರ್ಷ ಮೌಲೂದ್ (ಪ್ರವಾದಿ ಜನ್ಮದಿನ)ನಂದು ತಮ್ಮ ಜಂಟಿ ನಿಧಿಯಿಂದ ಸಹಸ್ರಾರು ಮಂದಿ ಬಡವರಿಗೆ ಅನ್ನ ಹಾಕುತ್ತಿತ್ತು. ಮೊಗ್ರಾಲ್‌ನ ಹಿಂದೂ ಇಸ್ಲಾಮ್ ಮೋಟಾರ್ ಸರ್ವಿಸ್ (1931) ಎಂಬ ಸಂಸ್ಥೆಯು ಅಬ್ದುಲ್ಲಾ ಇಸ್ಮಾಯಿಲ್, ಮೊಹಮ್ಮದ್ ಬ್ಯಾರಿ ಮತ್ತು ಕುಂಬಳೆ ವಾಸುದೇವ ಭಟ್ಟ ಎಂಬವರ ಜಂಟಿ ಒಡೆತನಕ್ಕೆ ಸೇರಿತ್ತು ಮತ್ತು ಸೌತ್ ಕೆನರಾದಲ್ಲೇ ಇಂತಹ ಮೊಟ್ಟ ಮೊದಲ ಜಂಟಿ ಮಾಲಿಕತ್ವದ ಸಂಸ್ಥೆಯಾಗಿತ್ತು.[78]

6. ಬ್ಯಾರಿ ಮತ್ತು ಮಾಪಿಳ್ಳ ಸಂಸ್ಕೃತಿಯ ಮಧ್ಯೆ ಹಲವಾರು ಭಿನ್ನತೆಗಳಿವೆ.

(ಅ) ಬ್ಯಾರಿಗಳಲ್ಲಿ ಇಲ್ಲಂ ಎಂಬ ಒಂದು ಪದ್ಧತಿಯಿತ್ತು ಮತ್ತು ಇದು ಬಂಟರ 'ಬಲಿ' ಪದ್ಧತಿಯನ್ನು ಹೋಲುತ್ತದೆ. ಇದೊಂದು ಮಾತೃ ಪ್ರಧಾನ ಪದ್ಧತಿಯಾಗಿದ್ದು ಮುಸ್ಲಿಮರಲ್ಲಿ ಕಂಡು ಬರುವುದಿಲ್ಲ. ಹೆಸರುಗಳು ಸ್ಥಳೀಯ ಮೂಲವನ್ನು ಹೊಂದಿವೆ. ಉದಾ: ಮುಸ್ತಾನ್ ಬೆಲಿಯೆ, ಚಮಕ್ ಬೆಲಿಯೆ, ಕಯಸರ್, ಪತ್ತಿಲ್ಲಂ, ಅಂಜಿಲ್ಲಂ ಇತ್ಯಾದಿ. ಮಂಗಳೂರು ಮತ್ತು ಕಾಸರಗೋಡಿನ ಮಧ್ಯೆ ಈ ಹೆಸರುಗಳಲ್ಲಿ ಸಣ್ಣ ವ್ಯತ್ಯಾಸವಿದೆ. ಇಲ್ಲಂಗಳ ಒಳಗೆ ಮದುವೆ ಯಾಗುವುದಕ್ಕೆ ಕಟ್ಟುಪಾಡುಗಳಿದ್ದವು. ಪ್ರತಿಯೊಂದು ಇಲ್ಲಂಗೂ ಒಂದು ಸ್ಥಾನಮಾನವಿತ್ತು ತಮ್ಮ ಮಗಳಿಗೆ ಸಿಗುವ ವಧುದಕ್ಷಿಣೆಯ ಆಧಾರದಲ್ಲಿ ಅದನ್ನು ನಿರ್ಧರಿಸಲಾಗುತ್ತಿತ್ತು.[79] ಮಾಪಿಳ್ಳೆಗಳಲ್ಲಿ ಇಂತಹ ಒಂದು ಪದ್ಧತಿ ಆಚರಣೆಯಲ್ಲಿರಲಿಲ್ಲ.

(ಆ) ಹತ್ತೊಂಬತ್ತನೇ ಶತಮಾನದ 'ಹದಿನಾರು ಮನೆ' ಪರಿಕಲ್ಪನೆಯು ಮೂಲಭೂತವಾಗಿ ಒಂದು ಊಳಿಗಮಾನ್ಯ ವ್ಯವಸ್ಥೆ. ಆ ಮನೆಗಳ ಪಳಯುಳಿಕೆಗಳು ಇಂದಿಗೂ ಕಂಡುಬರುತ್ತವೆ.[80] ಈ ಪೈಕಿ ಹೆಚ್ಚಿನ ಕುಟುಂಬಗಳು ಆ ಕಾಲದ ಪ್ರಮುಖ ವರ್ತಕರು ಮತ್ತು ಕುಲೀನ (ಲಾರ್ಡ್ಸ್)ರಾಗಿದ್ದರು. ಅವರು ಕೆಳವರ್ಗದ ಜನರನ್ನು ತಮ್ಮ ಬಳಿಗೆ ಬಿಟ್ಟುಕೊಡುತ್ತಿರಲಿಲ್ಲ ಮತ್ತು ಊಳಿಗಮಾನ್ಯ ವ್ಯವಸ್ಥೆಯನ್ನು ಪಾಲಿಸುತ್ತಿದ್ದರು. ಇಂತಹ ಪದ್ಧತಿ ಮಾಪಿಳ್ಳೆಗಳಲ್ಲಿ ಕಂಡುಬರುವುದಿಲ್ಲ.

(ಇ) ಇಲ್ಲಂ ಮತ್ತು ಹದಿನಾರು ಮನೆಯಲ್ಲದೆ 'ತಾಳ ಇಲ್ಲದವರು' ಅರ್ಥಾತ್ ಸ್ಥಾನಮಾನ ಇಲ್ಲದವರು ಎಂಬ ಇನ್ನೊಂದು ವರ್ಗವೂ ಅಸ್ತಿತ್ವದಲ್ಲಿತ್ತು. ಇದು ಕೆಳ ಜಾತಿಗಳಿಂದ ಮತ್ತು ಬಹಿಷ್ಕೃತ ಸಮಾಜದಿಂದ ಮತಾಂತರಗೊಂಡು ಮುಸ್ಲಿಮರಾದವರ ವರ್ಗ. ಸಂಗೀತಗಾರರು, ಮುಂಜಿ ಮಾಡುವವರು (ವಾಸಗಳು), ಗುಲಾಮರು ಅಥವಾ ಕೆಳ ವರ್ಗದ ಕಾರ್ಮಿಕರು ಕೂಡಾ ಈ ಗುಂಪಿಗೆ ಸೇರಿದವರಾಗಿದ್ದರು. ಅವರಿಗೆ ಇತರರೊಂದಿಗೆ ಸಹಭೋಜನ ಮಾಡುವ ಅಥವಾ ಕುಳಿತುಕೊಳ್ಳುವ ಅವಕಾಶವೂ ಇರಲಿಲ್ಲ. ಅವರು ಅಸ್ಪೃಶ್ಯರಲ್ಲದಿದ್ದರೂ ಸ್ಥಾನಮಾನವುಳ್ಳ ಮುಸ್ಲಿಮರೊಂದಿಗೆ ಸಾಮಾಜಿಕ ವ್ಯವಹಾರ ನಡೆಸುವುದರಿಂದ ಅವರನ್ನು ದೂರವಿರಿಸಲಾಗಿತ್ತು. ನಿಜವಾಗಿ ಇದು ಒಂದು ಇಸ್ಲಾಮೀ ಆಚರಣೆಯಾಗಿರಲಿಲ್ಲ. ಬದಲಾಗಿ ತುಳುನಾಡಿನ ಸ್ಥಳೀಯ ಕಟ್ಟಳೆಗಳಿಂದ ಬಂದ ಒಂದು ಪದ್ಧತಿಯಾಗಿತ್ತು. ಮಾಪಿಳ್ಳೆಗಳಲ್ಲಿ ಈ ರೀತಿಯ ಆಚರಣೆ ಕಂಡುಬರುವುದಿಲ್ಲ.

(ಈ) ಜನನ, ಮುಂಜಿ, ಋತುಮತಿಯಾಗುವುದು, ಮೈಲಾಂಜಿ, ಮದುವೆ, ಮರಣ ಇತ್ಯಾದಿ ಸಾಮಾಜಿಕ ಸಮಾರಂಭಗಳಿಗೆ ಸಂಬಂಧಿಸಿ ಬ್ಯಾರಿಗಳು ನಿರ್ದಿಷ್ಟ ಆಚರಣೆಗಳನ್ನು

ಹೊಂದಿದ್ದು ಇವು ಕೊಡಗಿನ ಕೊಡವರ ಸಂಪ್ರದಾಯಗಳನ್ನು ಹೋಲುತ್ತವೆ. ಈ ಸಮಾರಂಭ ಗಳ ಹೆಸರು ಕೂಡಾ ಕೊಡವರ ಹೆಸರಿನೊಂದಿಗೆ ಸಾಮ್ಯತೆ ಹೊಂದಿವೆ. ತಮ್ಮ ಉಡುಗೆ ಮತ್ತು ಆಭರಣಗಳ ವಿಚಾರದಲ್ಲೂ ಬ್ಯಾರಿಗಳಿಗೆ ಮಾಪಿಳ್ಳೆಗಳೊಂದಿಗೆ ಬಹಳಷ್ಟು ಸಾಂಸ್ಕೃತಿಕ ಭಿನ್ನತೆಗಳಿವೆ (ಬ್ಯಾರಿ ಸಂಸ್ಕೃತಿಗೆ ಸಂಬಂಧಿಸಿದ ವಿವರಗಳಿಗೆ 5ನೇ ಅಧ್ಯಾಯವನ್ನು ಓದಿ).

ಮೇಲೆ ನಮೂದಿಸಲಾದ ಮತ್ತು ಇಂತಹದ್ದೇ ಇನ್ನಷ್ಟು ಸಾಕ್ಷ್ಯಾಧಾರಗಳು ಬ್ಯಾರಿಗಳು ಮಾಪಿಳ್ಳೆಗಳಲ್ಲ ಎಂಬುದನ್ನು ಸಾರಿ ಹೇಳುತ್ತವೆ. ವಸ್ತುತಃ ಬ್ಯಾರಿಗಳು ತುಳುನಾಡಿನ ಒಂದು ಸ್ವತಂತ್ರವಾದ ಪ್ರಾದೇಶಿಕ ಜನಾಂಗವಾಗಿದ್ದಾರೆ ಮತ್ತು ತಮ್ಮದೇ ಆದ ಸ್ವತಂತ್ರ ಮುಸ್ಲಿಮ್ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾರೆ. ಜಿಲ್ಲೆಯ ಅತಿದೊಡ್ಡ ಮುಸ್ಲಿಮ್ ಸಮಾಜವಾಗಿರುವುದ ರಿಂದ ಈ ಕೃತಿಯನ್ನು ಅವರ ಸಂಸ್ಕೃತಿ ಮತ್ತು ಕೊಡುಗೆಗಳನ್ನು ಅನಾವರಣಗೊಳಿಸುವುದಕ್ಕೆ ಮೀಸಲಿಡಲಾಗಿದೆ.

2. ಕಚ್ಚೀ ಮೇಮನರು

ಮೇಮನರು ಮೂಲದಲ್ಲಿ ಸಿಂಧ್‌ನ ಲೋಹನರಾಗಿದ್ದಾರೆ. ಲೋಹನರು ಸಿಂಧ್‌ನ ಒಂದು ಗುಡ್ಡಗಾಡು ಬುಡಕಟ್ಟಾಗಿದ್ದಾರೆ. ಹಿ.ಶ. 824ರ ವೇಳೆಗೆ ಸುಮಾರು ಏಳು ನೂರು ಕುಟುಂಬಗಳು ಇಸ್ಲಾಮ್‌ಗೆ ಮತಾಂತರಗೊಂಡಿದ್ದವು. ಆದರೂ ಅವರು ಲೋಹನರ ಆಚಾರ ಸಂಪ್ರದಾಯಗಳನ್ನು ಉಳಿಸಿಕೊಂಡಿದ್ದರು.[81] ಲೋಹನರು ಸಿಂಧ್‌ನ ಪ್ರತಿಷ್ಠಿತ ಬುಡಕಟ್ಟು ಆಗಿದ್ದು ಕ್ರಿ.ಪೂ. 300ರಿಂದಲೂ ಪ್ರತ್ಯೇಕವಾದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ. ಅಲೆಕ್ಸಾಂಡರ್ ಭಾರತವನ್ನು ಆಕ್ರಮಿಸಿದಾಗ ಇಂದ್ ಎಂಬ ಅರಸ ಸಿಂದನ್ನು ಆಳುತ್ತಿದ್ದ. ಆತ ಇಂದನ್ನು ನಾಲ್ಕು ಭಾಗಗಳಾಗಿ ತುಂಡರಿಸಿದ. ಲೋಹಾನಾ ಮತ್ತು ನದ್ಮಾ ಆ ಪೈಕಿ ಮುಖ್ಯವಾದ ಭಾಗಗಳಾಗಿದ್ದವು. ಇಂದ್ ಚಕ್ರವರ್ತಿಯ ನಂತರ ರಾಜ್ಯವು ಹಲವು ಗುಂಪು ಮತ್ತು ವಿಭಾಗಗಳಾಗಿ ವಿಭಜನೆಗೊಂಡಿತು. ಹಲವಾರು ಕುಟುಂಬಗಳು ಹರಿಹಂಚಾದ ರಾಜ್ಯವನ್ನು ಒಗ್ಗೂಡಿಸಲು ಪ್ರಯತ್ನಿಸಿದವು. ನಾಬಿಹ್, ತಾಕ್, ಮೊಮೈದ್, ರಾಯ್ ಮತ್ತು ಬ್ರಾಹ್ಮಿನ್ ಈ ಪೈಕಿ ಪ್ರಮುಖವಾದವು. ರಾಜಾ ಚಾಚಾ ಬ್ರಾಹ್ಮಿಣ್ ವಂಶದ ಪ್ರಥಮ ಅರಸನಾಗಿದ್ದ ಮತ್ತು ಈ ಅವಧಿಯಲ್ಲಿ ಸಿಂಧ್‌ನಲ್ಲಿ ಮುಸ್ಲಿಮ್ ಸಂಪರ್ಕ ಆರಂಭಗೊಂಡಿತು. ಲೋಹನರು ಮೂಲಭೂತವಾಗಿ ಒಂದು ವರ್ತಕ ಸಮುದಾಯವಾಗಿದ್ದರು ಮತ್ತು ಹಲವು ಗುಂಪು (ನೂಖ್)ಗಳಾಗಿ ವಿಂಗಡಿಸಲ್ಪಟ್ಟಿದ್ದರು. ರಾಜಾ ಚಾಚಾನ ಬಳಿಕ ಆತನ ಮಗ ದಾಹಿರ್ ಸಿಂಧ್‌ನಲ್ಲಿ ರಾಜ್ಯಭಾರ ನಡೆಸಿದ. ಹಿ.ಶ. 92 (ಕ್ರಿ.ಶ. 712)ರಲ್ಲಿ ಮೊಹಮ್ಮದ್ ಬಿನ್ ಕಾಸಿಂ ಎಂಬಾತ ಅವನನ್ನು ಸೋಲಿಸಿದ ಮತ್ತು ಸಿಂಧ್ ತರುವಾಯ ಮುಸ್ಲಿಮ್ ರಾಜ್ಯವಾಗಿ ಮಾರ್ಪಟ್ಟಿತು. ಸುಮಾರು ಮುನ್ನೂರು ವರ್ಷ ಕಾಲ ಸಿಂಧ್ ಅರಬರ ಆಳ್ವಿಕೆಗೊಳಪಟ್ಟಿತ್ತು. ಈ ಅವಧಿಯಲ್ಲಿ ಸಂತ ಪೀರ್ ಯೂಸುಫುದ್ದೀನ್ ಸಾಹೇಬ್ ಸಿಂಧ್‌ಗೆ ಭೇಟಿ ನೀಡಿದ್ದರು ಮತ್ತು ಅವರ ಪ್ರಭಾವದಿಂದಾಗಿ ಲೋಹನರು ಇಸ್ಲಾಮ್‌ಗೆ ಮತಾಂತರಗೊಂಡರು. ಅವರು ಹನಫಿ ಕರ್ಮಶಾಸ್ತ್ರವನ್ನು ಅನುಸರಿಸಿದರು.

ಸಂತ ಯೂಸುಫುದ್ದೀನ್ ಬಾಗ್ದಾದ್‌ನ ಖ್ಯಾತ ಸಂತರಾದ ಶೇಖ್ ಅಬ್ದುಲ್ ಕಾದರ್

ಜೀಲಾನಿಯವರ ವಂಶಜರಾಗಿದ್ದರು. ಅಂದಿನ ಗವರ್ನರ್ ಆಗಿದ್ದ ಕಾಬೂಲ್‌ನ ಅಯ್ಯೂಬ್ ಖಾನ್ ಅವರನ್ನು ಬರಮಾಡಿಕೊಂಡರು. ಸ್ಥಳೀಯ ಅಧಿಕಾರಿ ಮುಖಿರ್‌ಬ್ ಖಾನ್‌ರ ನೆರವಿನಿಂದ ಲೋಹನರು ಇಸ್ಲಾಮ್ ಸ್ವೀಕರಿಸಿದರು. ಅವರು ಹೊಸ ಧರ್ಮಕ್ಕೆ ಹೆಚ್ಚಿನ ನಿಷ್ಠೆಯನ್ನು ತೋರಿದರು. ಸಂತರು ಅವರನ್ನು ಮೂಮಿನ್ (ಸತ್ಯವಿಶ್ವಾಸಿ) ಗಳೆಂದು ಆಶೀರ್ವದಿಸಿದರು. ಕ್ರಮೇಣ ಈ ವಿಶೇಷಣವೇ ಅವರ ಹೆಸರಿನೊಂದಿಗೆ ಸೇರಿಕೊಂಡಿತು ಮತ್ತು ಕ್ರಮೇಣ ಅವರು ಮೇಮನ್‌ಗಳೆಂದು ಗುರುತಿಸಲ್ಪಟ್ಟರು. ರಾಜಕೀಯ ದಬ್ಬಾಳಿಕೆಯ ಕಾರಣ ಸಿಂಧ್‌ನ ಬಹುತೇಕ ಜನರು ದಾರಿದ್ರ್ಯಕ್ಕೆ ತುತ್ತಾಗಬೇಕಾಯಿತು ಮತ್ತು ಅವರ ಆರ್ಥಿಕ ಪರಿಸ್ಥಿತಿಯು ಶೋಚನೀಯವಾಗಿ ಮಾರ್ಪಟ್ಟಿತು. ನೀವು ಬೇರೆ ಕಡೆಗೆ ವಲಸೆ ಹೋಗಿ ವ್ಯಾಪಾರ ಮಾಡಿಕೊಳ್ಳಿ ಎಂದು ಪೀರ್ ಸಲಹೆ ನೀಡಿದರು. ಅದರಂತೆ ಹೆಚ್ಚಿನವರು ವಾರಿಯಾ ನದಿ ತಟಕ್ಕೆ ವಲಸೆ ಹೋದರು. ಹಿ.ಶ. 856ರ ವೇಳೆಗೆ ಸಿಂಧ್‌ನಲ್ಲಿ ಆಕ್ರಮಣ ಮತ್ತು ಸಂಕಷ್ಟ ಹೆಚ್ಚಾಯಿತು. ಮೇಮನರು ಹಲಾಲ್ (ಕತಿಯಾವಾರ್), ಸೂರತ್ ಮತ್ತು ದಕ್ಷಿಣದ ಇತರ ಭಾಗಗಳಿಗೆ ವಲಸೆ ಆರಂಭಿಸಿದರು. ಅವರನ್ನು ಹಲಾಲ್ ಮೇಮನ್‌ಗಳು ಮತ್ತು ಸೂರತಿ ಮೇಮನ್‌ಗಳೆಂದು ಗುರುತಿಸಲಾಗುತ್ತಿತ್ತು.

ಆದಂ ಸೇಠ್ ಎಂಬಾತ ವಾರಿಯಾ ನದಿ ತಟದ ಮೇಮನ್‌ಗಳ ನಾಯಕನಾಗಿದ್ದ. ಆತನ ಮೊಮ್ಮಗ ಖಾನಾ ಸೇಠ್ ಕಚ್‌ನ ರಾಜಧಾನಿಯಾದ ಭುಜ್‌ಗೆ ವಲಸೆಗೈದ. ಅಲ್ಲಿ ಆತನ ಸಂತತಿ ಅಭ್ಯುದಯ ಹೊಂದಿತು ಮತ್ತು ಕಚ್ಚಿ ಮೇಮನ್‌ಗಳೆಂಬ ಹೆಸರು ಪಡೆಯಿತು. ಹಿ.ಶ. 1200ರ ವೇಳೆಗೆ ಸಂತ ಬಿದ್ವಾಲಾ ಪೀರ್ ಸಾಹೇಬ್ ಭುಜ್‌ಗೆ ಬಂದರು. ಸ್ಥಳೀಯರು ಅವರನ್ನು ಸತ್ಕರಿಸಿದರು. ಈ ನಡುವೆ ಅವರು ತಮ್ಮ ವ್ಯಾಪಾರದ ಜಾಲವನ್ನು ಬೊಂಬಾಯಿ, ಕಲ್ಕತ್ತಾ, ಮದ್ರಾಸ್ ಮತ್ತು ಮಲಬಾರ್‌ಗೆ ಹಬ್ಬಿಸಿದರು. ಹಿ.ಶ. 1175 (ಕ್ರಿ.ಶ. 1761)ರ ವೇಳೆಗೆ ಅವರು ಮುಂಚೂಣಿಯ ವರ್ತಕರಾಗಿ ಮಾರ್ಪಟ್ಟರು. ಅವರು ಭಾರತದಾದ್ಯಂತ ಶಾಲೆ, ಮಸೀದಿ, ಯಾತ್ರಿಕರ ತಂಗುದಾಣ ಮತ್ತು ಆಸ್ಪತ್ರೆಗಳಿಗೆ ದೇಣಿಗೆ ಕೊಟ್ಟರು. ಉಮರ್ ಸಬಾನಿ ಮತ್ತು ಅಬ್ದುಲ್ ಸತ್ತಾರ್ ಸೇಠ್‌ರಂತಹ ಕೆಲವು ನಾಯಕರು ಸ್ವಾತಂತ್ರ್ಯ ಹೋರಾಟದಲ್ಲೂ ಪಾಲ್ಗೊಂಡರು. ಕ್ರಿ.ಶ. 1920 ಮತ್ತು 1938ರಲ್ಲಿ ಕಚ್ಚೀ ಮೇಮನ್ ಕಾಯ್ದೆಗಳನ್ನು ಅಂಗೀಕರಿಸಲಾಯಿತು. ಸರ್ ಇಬ್ರಾಹೀಮ್ ಹಾರೂನ್ ಜಾಫರ್ ಮತ್ತು ಅಬ್ದುಲ್ ರಝ್ಝಾಕ್ ಸೇಠ್ ಅವರು ರಾಜ್ಯದ ಸೆಂಟ್ರಲ್ ಕೌನ್ಸಿಲ್‌ನ ಸದಸ್ಯರಾಗಿದ್ದರು. ಶ್ರೀಮಂತ ಸಮುದಾಯವಾಗಿದ್ದ ಕಾರಣ ಅವರು ಹಲವಾರು ಸಾರ್ವಜನಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.[82] ದಕ್ಷಿಣ ಭಾರತದಲ್ಲಿ ಅವರು ಬೆಳಗಾವಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ನೆಲೆಸಿದರು. ಕೇರಳದಲ್ಲಿ ಕೊಚ್ಚಿ ಅಲಪ್ಪಿ ಮತ್ತು ಕ್ವಿಲಾನ್‌ನಲ್ಲಿ ಬೇರು ಬಿಟ್ಟರು. ಕ್ರಿ.ಶ. 1850ರ ಸುಮಾರಿಗೆ ಅವರು ಈ ಎಲ್ಲ ನಗರಗಳಲ್ಲೂ ಪ್ರವರ್ಧಮಾನಕ್ಕೆ ಬಂದರು.

ಕೆಲವು ಕಚ್ಚಿ ಮೇಮನ್ ಕುಟುಂಬಗಳು ಈ ಹೊತ್ತಿಗೆ ಮಂಗಳೂರಿಗೂ ಆಗಮಿಸಿದವು ಮತ್ತು ಅಲ್ಲಿ ಸೇಠ್ ಎಂಬವರು ಇಲ್ಲಿ ಮಸೀದಿಯೊಂದನ್ನೂ ನಿರ್ಮಿಸಿದರು. ಮಸೀದಿಯನ್ನು ನಿರ್ವಹಿಸುವಷ್ಟು ಸ್ಥಿತಿವಂತರಾಗಿದ್ದರಿಂದ ಟೀಪು ಸುಲ್ತಾನ್ ಆಡಳಿತವು ನೀಡಿದ್ದ ತಸ್ದೀಕನ್ನೂ

ಅವರು ತಿರಸ್ಕರಿಸಿದ್ದರು ಎನ್ನಲಾಗುತ್ತದೆ. ಆದರೆ ಕ್ರಿ.ಶ. 1930ರ ವರೆಗೂ ಇಲ್ಲಿ ಜುಮಾ ನಮಾಝ್ ನಡೆಯುತ್ತಿರಲಿಲ್ಲ. ಕೇಂದ್ರ ಮಸೀದಿಯಲ್ಲೇ ಹನಫಿಗಳಿಗೆ ಒಬ್ಬ ನಾಯಬ್ (ಸಹಾಯಕ ಇಮಾಮ್)ರನ್ನು ನೇಮಕ ಮಾಡಲಾಗಿತ್ತು[83] ಮತ್ತು ಇತ್ತೀಚಿನವರೆಗೂ ಈ ಹುದ್ದೆ ಅಸ್ತಿತ್ವದಲ್ಲಿತ್ತು. ಕಚ್ಚಿ ಮೇಮನ್ ಮಸೀದಿಯು ತನ್ನ ಪಶ್ಚಿಮದಲ್ಲಿ ದೊಡ್ಡದಾದ ಕೆರೆಯನ್ನು ಹೊಂದಿತ್ತು ಮತ್ತು ಮುನ್ಸಿಪಾಲಿಟಿ ವತಿಯಿಂದ ಇಲ್ಲಿ ನೀರು ತುಂಬಿಸಲಾಗುತ್ತಿತ್ತು. ಈ ಕೆರೆ ಮತ್ತು ಅದರ ಸುತ್ತಲಿನ ವಠಾರ ಗೋಲಿಕಟ್ಟೆ ಬಜಾರ್ ಮುಸ್ಲಿಮರು ವಶಪಡಿಸಿಕೊಂಡ ಜೈನರ ವಾಸಸ್ಥಳ ಎಂಬುದನ್ನು ಎತ್ತಿ ತೋರಿಸುತ್ತದೆ. ಮಸೀದಿ ಮತ್ತು ಅದರ ವಠಾರವನ್ನು ಕಚ್ಚಿ ಮೇಮನರು ಚೆನ್ನಾಗಿ ನಿರ್ವಹಿಸಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಕಚ್ಚೀ ಮೇಮನರಿಗಾಗಿ ಪ್ರತ್ಯೇಕ ದಫನಭೂಮಿಯೂ ಇಲ್ಲಿದೆ.[84]

ಕಚ್ಚೀ ಮೇಮನರು ತಮ್ಮ ಮಾತೃಭಾಷೆ ಉರ್ದುವಿನಲ್ಲಿ ವ್ಯವಹರಿಸುತ್ತಾರೆ. ಆದರೆ ಕ್ರಮೇಣ ಸ್ಥಳೀಯ ದಕ್ಖನಿಗಳೊಂದಿಗೆ ಅವರು ಬೆರೆಯತೊಡಗಿದರು ಮತ್ತು ಪರಸ್ಪರ ಸಂಪರ್ಕ ಬೆಳೆಯತೊಡಗಿತು. ಅವರ ಸಂಸ್ಕೃತಿಯು ದಕ್ಖನಿಗಳ ಸಂಸ್ಕೃತಿಯನ್ನೇ ಹೋಲುತ್ತದೆ. ಜಿಲ್ಲೆಯ ಲೀಗ್ ಅಧ್ಯಕ್ಷರಾಗಿದ್ದ ಅಬ್ದುಲ್ ಹಮೀದ್ ಅತ್ಯಂತ ಸ್ವಾರಸ್ಯಕರವಾದ ಘಟನೆಯೊಂದನ್ನು ವಿವರಿಸಿದ್ದಾರೆ. ಬೊಂಬಾಯಿಯ ಮೇಮನ್‌ಗಳು ಬ್ಯಾರಿಗಳಲ್ಲಿ ಮಾತ್ರ ಕಂಡುಬರುವ ತಾಲ (ಒಂದು ಭೋಜನ) ಎಂಬ ಆಚರಣೆಯನ್ನು ಆಚರಿಸುತ್ತಾರೆ. ಬ್ಯಾರಿಗಳೊಂದಿಗಿನ ಸುದೀರ್ಘ ಒಡನಾಟದಿಂದ ಪ್ರಾಯಶಃ ಹೀಗೆ ಆಗಿರಬಹುದು. ಆದರೆ ಈ ಪ್ರದೇಶದ ಕಚ್ಚಿ ಮೇಮನ್‌ಗಳಲ್ಲಿ ಈ ಆಚರಣೆ ಕಂಡುಬರುವುದಿಲ್ಲ.[85] ಕ್ರಿ.ಶ. 1891ರಲ್ಲಿ ಜಿಲ್ಲೆಯಲ್ಲಿ 79 ಮೇಮನ್ ಕುಟುಂಬಗಳು ನೆಲೆಸಿದ್ದವು ಎಂದು ಸ್ಟುವರ್ಟ್ ದಾಖಲಿಸಿದ್ದಾನೆ. ಮೇಮನರು ಕೇವಲ ಉಡುಪಿ ಮತ್ತು ಮಂಗಳೂರಿನಲ್ಲಿ ಮಾತ್ರ ಕಂಡು ಬರುತ್ತಾರೆ ಎಂದೂ ಆತ ಬರೆದಿದ್ದಾನೆ. ಉರ್ದು ಭಾಷೆ ಮತ್ತು ಸಂಸ್ಕೃತಿಯಿಂದಾಗಿ ಅವರು ದಕ್ಖನಿಗಳೊಂದಿಗೆ ಬೆರೆತು ಹೋಗಿದ್ದರು. ಈ ಕೃತಿಯಲ್ಲಿ ದಕ್ಖನಿಗಳ ಜತೆ ಇವರನ್ನು ಕೂಡಾ ಹನಫಿಗಳೆಂದೇ ಉಲ್ಲೇಖಿಸಲಾಗಿದೆ.

3. ನವಾಯತರು

ನವಾಯತರು ತುಳುನಾಡಿನ ಮೂರನೇ ದೊಡ್ಡ ಮುಸ್ಲಿಮ್ ವಿಭಾಗವಾಗಿದ್ದು 1891ರ ಜನಗಣತಿಯ ಪ್ರಕಾರ ಇವರ ಸಂಖ್ಯೆ 12,000ಕ್ಕೂ ಹೆಚ್ಚಿತ್ತು. ಮಂಗಳೂರಿನಿಂದ ಬೈಂದೂರಿನವರೆಗಿನ ಕರಾವಳಿಗುಂಟ ಇವರು ಹಬ್ಬಿಕೊಂಡಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಭಟ್ಕಳ ಮತ್ತು ಹೊನ್ನಾವರ ಇವರ ಪ್ರಮುಖ ಕೇಂದ್ರವಾಗಿತ್ತು ಮತ್ತು ಇವರನ್ನು ಸಾಮಾನ್ಯವಾಗಿ ಭಟ್ಕಳಿಗಳೆಂದು ಕರೆಯಲಾಗುತ್ತಿತ್ತು. ತುಳುನಾಡಿನಲ್ಲಿ ಇವರು ಹೆಚ್ಚಾಗಿ ಕಂಡುಬರುವ ಕೇಂದ್ರಗಳೆಂದರೆ ಶಿರೂರು, ಬೈಂದೂರು, ಗಂಗೊಳ್ಳಿ, ಬಸ್ರೂರು, ಕುಂದಾಪುರ, ಹಂಗರಕಟ್ಟೆ, ಬೆಂಗರೆ, ತೋನ್ಸೆ ಮತ್ತು ಮಲ್ಪೆ.[86] ಇವರು ವ್ಯಾಪಾರಕ್ಕಾಗಿ ದಕ್ಷಿಣಕ್ಕೆ ವಲಸೆ ಬಂದವರು. ಹದಿನೆಂಟನೇ ಮತ್ತು ಹತ್ತೊಂಬತ್ತನೇ ಶತಮಾನದಲ್ಲಿ ಭಟ್ಕಳಿ ಹೋಟೆಲ್‌ಗಳು ಮತ್ತು ಭಟ್ಕಳಿ ಜವಳಿ ಅಂಗಡಿಗಳು ದಕ್ಷಿಣ ಕನ್ನಡದ ಎಲ್ಲೆಡೆ ಕಂಡುಬರುತ್ತಿದ್ದವು. ಅಷ್ಟೇ ಅಲ್ಲ, ಹೋಟೆಲ್

ಉದ್ಯಮಿಗಳಾಗಿ ಮತ್ತು ಜವಳಿ ಉದ್ಯಮಿಗಳಾಗಿ ಅವರು ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು.

ಬ್ಯಾರಿಗಳಂತೆ ಇವರು ಕೂಡಾ ಮೂಲದಲ್ಲಿ ಕೊಂಕಣ ಕರಾವಳಿಯಲ್ಲಿ ಅರಬ್ ವರ್ತಕರ ಸಂಪರ್ಕದಿಂದ ಜನ್ಮತಳೆದ ಒಂದು ಜನಾಂಗ. ಇವರೂ ತಮ್ಮ ಕೊಂಕಣಿ ಭಾಷೆಯನ್ನು ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡವರು. ಕಶ್‌ಫುಲ್ ಇನ್ಸಾಬ್ ಎಂಬ ಕೃತಿಯ ಲೇಖಕರಾದ ಅಲ್ಲಾಮಾ ಜಲಾಲುದ್ದೀನ್ ಸುಯೂತಿಯವರು ನವಾಯತರು ಅಬ್ದುಲ್ಲಾ ವಯಾತ್ (ಬನು ವಯಾತ್) ಎಂಬ ಅರಬ್ ವ್ಯಕ್ತಿಯ ಸಂತತಿ ಎಂದು ಬರೆದಿದ್ದಾರೆ.[87] ಜಾಫರ್ ಷರೀಫ್ ಈ ಸಮುದಾಯವನ್ನು ಭಾರತ, ಅರಬ್ ಸಮುದ್ರ ಸಂಚಾರಿಗಳು ಮತ್ತು ವರ್ತಕರೊಂದಿಗೆ ಪ್ರಪ್ರಥಮವಾಗಿ ಸಂಪರ್ಕ ಹೊಂದಿದ 'ನವೇ ತೇ' ಅರ್ಥಾತ್ 'ಹೊಸದಾಗಿ ಬಂದವರು' ಎಂದು ದಾಖಲಿಸಿದ್ದಾರೆ.[88] ನವಾಯತ್ ಎಂಬ ಪದವು ಅರಬಿ ಭಾಷೆಯ 'ನುವ್ವತಿ' ಅರ್ಥಾತ್ ನಾವಿಕರು ಎಂಬಲ್ಲಿಂದ ಬಂದಿದೆ. ಇದೊಂದು ಸಮ್ಮತಾರ್ಹವಾದ ವ್ಯಾಖ್ಯಾನವೆಂದು ತೋರುತ್ತದೆ ಮತ್ತು ಸೈಯದ್ ಸುಲೈಮಾನ್ ನದ್ವಿಯವರೂ ಈ ವಾದವನ್ನು ಬೆಂಬಲಿಸಿದ್ದಾರೆ.[89] ಇಂಪೀರಿಯಲ್ ಗಜೆಟಿಯರ್ ಆಫ್ ಇಂಡಿಯಾ ಕೂಡಾ ಈ ಪದಕ್ಕೆ ಇದೇ ಅರ್ಥವನ್ನು ಕೊಟ್ಟಿದೆ.[90] 1901ರ ಮದ್ರಾಸ್ ಜನಸಂಖ್ಯಾ ವರದಿಯ ಪ್ರಕಾರ ನವಾಯತರು ಭಟ್ಕಳಿಗಳೆಂದು ಗುರುತಿಸಲ್ಪಡುವ ಒಂದು ಮುಸ್ಲಿಮ್ ಜನಾಂಗವಾಗಿದ್ದು ಉತ್ತರ ಕನ್ನಡದ ಭಟ್ಕಳ ಇವರ ಮೂಲಸ್ಥಾನವಾಗಿದೆ. ಹೊಬ್ಸನ್ ಮತ್ತು ಜೊಬ್ಸನ್‌ರ ಪ್ರಕಾರ ನವಾಯತರು ಕೊಂಕಣ ಮತ್ತು ದಕ್ಷಿಣ ಕನ್ನಡದ ಒಂದು ಮಿಶ್ರ ಜನಾಂಗವಾಗಿದ್ದಾರೆ.

ಅರಬ್ ಸಂಪರ್ಕದಿಂದ ಆರಂಭ ಕಾಲದಲ್ಲಿ ಮತಾಂತರಗೊಂಡ ಕಾರಣ ನವಾಯತರು ಶಾಫಿ ಕರ್ಮಶಾಸ್ತ್ರ ಪಂಗಡಕ್ಕೆ ಸೇರಿದ್ದಾರೆ. ಆದರೆ ಇವರು ಬ್ಯಾರಿಗಳಂತೆ ತಮ್ಮ ಭಾಷೆ - ಕೊಂಕಣಿಯನ್ನು ಉಳಿಸಿಕೊಂಡಿದ್ದಾರೆ. ಕೆಲವೊಂದು ಬದಲಾವಣೆಗಳೊಂದಿಗೆ ತಮ್ಮದೇ ಆದ ಭಟ್ಕಳಿ ಎಂಬ ಭಾಷಾ ಪ್ರಭೇದವನ್ನು ಇವರು ರೂಪಿಸಿಕೊಂಡಿದ್ದಾರೆ. ದಕ್ಷಿಣ ಕನ್ನಡದಲ್ಲಿ ಇವರ ಮಕ್ಕಳು ಧಾರ್ಮಿಕ ವಿದ್ಯಾಭ್ಯಾಸಕ್ಕಾಗಿ ಹನಫಿ ಮೊಹಲ್ಲಾಗಳಲ್ಲಿ ವಾಸವಾಗಿದ್ದ ಕಾರಣ ಉರ್ದು ಭಾಷೆಯನ್ನೂ ಇವರು ಮಾತನಾಡಬಲ್ಲರು. ಬೈಂದೂರು ಮತ್ತು ಗಂಗೊಳ್ಳಿಯಲ್ಲಿ ಮಾತ್ರ ಇವರು ತಮ್ಮದೇ ಆದ ನವಾಯತಿ ಮಸೀದಿ ಮತ್ತು ಶಾಲೆಗಳನ್ನು ಹೊಂದಿದ್ದಾರೆ. ಒಳ್ಳೆಯ ಶಿಕ್ಷಣಕ್ಕಾಗಿ ಇಂದಿಗೂ ಇವರು ಭಟ್ಕಳವನ್ನೇ ಆಶ್ರಯಿಸುತ್ತಾರೆ.

ದಕ್ಷಿಣ ಕನ್ನಡದಲ್ಲಿ ನವಾಯತರು ವಾಸವಾಗಿದ್ದ ಸ್ಥಳಗಳ ಪಟ್ಟಿ -1

1. ಬೈಂದೂರು	4. ಬಸ್ರೂರು	7. ತೋನ್ಸೆ
2. ಗಂಗೊಳ್ಳಿ	5. ಬೆಂಗರೆ	8. ಮಲ್ಪೆ
3. ಕಂಡ್ಲೂರು	6. ಹಂಗರಕಟ್ಟೆ	9. ಮಂಗಳೂರು

ಇಪ್ಪತ್ತನೇ ಶತಮಾನದಲ್ಲಿ ಗೋವಾದ ಗೌಡ ಸಾರಸ್ವತ ಸಮುದಾಯ ಕೊಂಕಣಿಗಳಾಗಿ ದಕ್ಷಿಣ ಕನ್ನಡಕ್ಕೆ ಬಂದರು ಮತ್ತು ವರ್ತಕರಾಗಿ ಸಕ್ರಿಯರಾದರು. ಇದಲ್ಲದೆ ಇನ್ನೂ ಹಲವು ಎದುರಾಳಿ ವರ್ತಕ ಸಮುದಾಯಗಳನ್ನು ನವಾಯತರು ಎದುರಿಸಬೇಕಾಯಿತು.

ಇದರ ಪರಿಣಾಮವಾಗಿ ಅವರ ಪ್ರಾಮುಖ್ಯತೆ ಕಳೆಗುಂದುತ್ತಾ ಹೋಯಿತು.

೪. ದಕ್ಖನಿಗಳು (ಹನಫಿಗಳು)

ಕರಾವಳಿಯ ಮುಸ್ಲಿಮರಿಗೆ ಹೋಲಿಸಿದರೆ ದಕ್ಖನಿಗಳು ಅಥವಾ ತುರುಕರು ತಮ್ಮದೇ ಆದ ವಿಶಿಷ್ಟ ಮುಸ್ಲಿಮ್ ಸಂಸ್ಕೃತಿಯನ್ನು ಹೊಂದಿದ್ದರು. ದಿಲ್ಲಿ ಸುಲ್ತಾನರ ಕಾಲದಲ್ಲಿ ಭಾರಿ ಸಂಖ್ಯೆಯ ಮುಸ್ಲಿಮರು ಉತ್ತರ ಭಾರತದಿಂದ ದಕ್ಷಿಣಕ್ಕೆ ವಲಸೆ ಬಂದು ದಕ್ಖನದಲ್ಲಿ ನೆಲೆಸಿದರು. ಬಹಮನಿ ರಾಜಾಳ್ವಿಕೆ ಮತ್ತು ದಕ್ಖನದ ಶಾಹಿ ಸುಲ್ತಾನರು ದಕ್ಷಿಣದಲ್ಲಿ ಮುಸ್ಲಿಮರ ಬೆಳವಣಿಗೆಗೆ ಅವಕಾಶಗಳನ್ನು ಕಲ್ಪಿಸಿದರು. ಈ ಪೈಕಿ ಹಲವರು ಕರಾವಳಿ ಪ್ರದೇಶಗಳಿಗೆ ತೆರಳಿದರು. ಕೆಲವರು ರಾಜರಿಂದ ನೇಮಕಗೊಂಡ ಅಧಿಕಾರಿಗಳಾಗಿ ತೆರಳಿದರು ಇನ್ನು ಕೆಲವರು ವರ್ತಕರಾಗಿ ಕರಾವಳಿಯ ಹಲವೆಡೆ ನೆಲೆಸಿದರು. ಇವರು ಕ್ರಮೇಣ ದಕ್ಖನಿಗಳೆಂಬ ಹೆಸರು ಪಡೆದುಕೊಂಡರು. ತುಳುನಾಡಿನಲ್ಲಿ ದಕ್ಖನಿಗಳು ಹನಫಿ ಕರ್ಮಶಾಸ್ತ್ರದ ಅನುಯಾಯಿಗಳಾಗಿದ್ದರಿಂದ ಹನಫಿಗಳೆಂದೇ ಗುರುತಿಸಲ್ಪಡುತ್ತಾರೆ. ಜತೆಗೆ ತುರ್ಕಿಶ್ ಮೂಲದವರಾಗಿರದೇ ಹೋದರೂ ತುರುಕರೆಂಬ ಹೆಸರೂ ಅವರಿಗೆ ಬಂದಿದೆ. ಆದರೆ ಸ್ಥಳೀಯರ ದೃಷ್ಟಿಯಲ್ಲಿ ಅವರು ಸಾಹೇಬರೆಂದು ಪರಿಗಣಿಸಲ್ಪಟ್ಟಿದ್ದು ಇದು ಬ್ಯಾರಿಗಳಂತೆಯೇ ಜನಾಂಗ ಸೂಚಕ ಪ್ರತ್ಯಯವಾಗಿ ಬಳಕೆಗೆ ಬಂದಿದೆ. ಅಷ್ಟೇ ಅಲ್ಲ ಕಂದಾಯ ದಾಖಲೆಗಳ ಪ್ರಕಾರ ಅವರು ಸಾಹಿಬ್ ಅಥವಾ ಸಾಯಿಬ್ ಎಂಬ ಅಂತ್ಯ ಪ್ರತ್ಯಯ ಬಳಸುತ್ತಿದ್ದುದು ಕಂಡು ಬರುತ್ತದೆ. ಉದಾ: ಅಬ್ದುಲ್ ರಹಮಾನ್ ಸಾಹೆಬ್, ಇಮಾಮ್ ಸಾಹೆಬ್ ಇತ್ಯಾದಿ. ಆರಂಭದ ಶತಮಾನಗಳಲ್ಲಿ ಬ್ಯಾರಿಗಳು ತಮ್ಮ ಹೆಸರಿನ ಕೊನೆಗೆ ಬ್ಯಾರಿ ಎಂಬ ಪ್ರತ್ಯಯವನ್ನು ತಪ್ಪದೆ ಬರೆಯುತ್ತಿದ್ದರು. ಇದು ಹನಫಿಗಳ ಮೇಲೂ ಪ್ರಭಾವ ಬೀರಿದಂತೆ ತೋರುತ್ತದೆ. ಇತರ ಕಡೆಗಳ ಹನಫಿಗಳಲ್ಲಿ ಈ ಸಂಪ್ರದಾಯ ಕಂಡು ಬರುವುದಿಲ್ಲ.

ದಕ್ಖನಿ ಮುಸ್ಲಿಮರು ನಿಜವಾಗಿ ದಕ್ಖನದ ಮುಸ್ಲಿಮ್ ಅರಸರ ಸೈನ್ಯದಲ್ಲಿದ್ದವರ ಸಂತತಿಗಳು. ಕ್ರಿ. ಶ. 1294ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಆಕ್ರಮಣದೊಂದಿಗೆ ಇವರು ದಕ್ಷಿಣಕ್ಕೆ ಪ್ರವೇಶಿಸಿದರು.[93] ಅಲ್ಲಾವುದ್ದೀನನ ದಂಡನಾಯಕನಾಗಿದ್ದ ಮಲ್ಲಿಕಾಫರನು ಕ್ರಿ.ಶ. 1310ರಲ್ಲಿ ತನ್ನ ದಂಡಯಾತ್ರೆಯನ್ನು ಮುಂದುವರಿಸುತ್ತಾ ದಕ್ಷಿಣದ ರಾಮೇಶ್ವರಮ್‌ವರೆಗೂ ಬಂದನು. ಆತನ ದಂಡಯಾತ್ರೆಯ ಸಂದರ್ಭದಲ್ಲಿ ಆತ ಕುಂದೂರ್‌ನಲ್ಲಿ ಹಿಂದೂ ಆಡಳಿತಗಾರನ ಅಧೀನದಲ್ಲಿ ಕೆಲವು ಮುಸ್ಲಿಮರು ಪ್ರಜೆಗಳಾಗಿದ್ದನ್ನು ಕಂಡುಕೊಂಡನು. ಅವರು ಅರೆಹಿಂದೂಗಳಾಗಿದ್ದರೂ ಕಲಿಮಾ ಉಚ್ಚರಿಸಬಲ್ಲವರಾದ ಕಾರಣ ತಮ್ಮ ಜೀವವನ್ನು ಉಳಿಸಿಕೊಂಡರು.[94] ಧಾರ್ಮಿಕ ವಿದ್ಯಾಭ್ಯಾಸಕ್ಕೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ತುಳುನಾಡಿನ ಕರಾವಳಿ ಮುಸ್ಲಿಮರ ಪರಿಸ್ಥಿತಿಯೂ ಹೀಗೆಯೇ ಇತ್ತು. ಕಾಸರಗೋಡಿನಲ್ಲಿ ಮಾತ್ರ ಧಾರ್ಮಿಕ ಶಿಕ್ಷಣ ಕೊಡುವ ಕೆಲವು ಏರ್ಪಾಡುಗಳಿದ್ದವು ಮತ್ತು ಹೆಚ್ಚಾಗಿ ಮುಸ್ಲಿಮರು ಪೊನ್ನಾನಿಯ ಮಾಪಿಳ್ಳ ಧಾರ್ಮಿಕ ಪುಸ್ತಕಗಳನ್ನೇ ಆಶ್ರಯಿಸಬೇಕಾಗಿತ್ತು. ಹೀಗೆ ಸಂಪೂರ್ಣವಾಗಿ ಹೊಸ ಧರ್ಮಕ್ಕೆ ಮತಾಂತರಗೊಳ್ಳದ ಮುಸ್ಲಿಮರು ಇರುವುದನ್ನು ಮಲ್ಲಿಕಾಫರ ಪತ್ತೆ ಹಚ್ಚಿದ. ಹನಫಿಗಳು ಸಾಮಾನ್ಯವಾಗಿ ಇಸ್ಲಾಮ್‌ನ ನಂಬಿಕೆಗಳಿಗೆ ಸರಿಯಾದ ನಿಷ್ಠೆ ಹೊಂದಿದ್ದರು ಮತ್ತು

ತಮ್ಮ ವಿಸ್ತರಣೆಗೆ ಧಾರ್ಮಿಕ ರೂಪವನ್ನೂ ಕೊಟ್ಟಿದ್ದರು. ದಕ್ಖನದ ಅಮೀರ್‌ಗಳು ಮತ್ತು ಅಧಿಕಾರಿಗಳು ಹಾಗೂ ಸೈನಿಕರು ದಕ್ಖನದಲ್ಲಿ ಇಸ್ಲಾಮ್ ಸಂಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ದಕ್ಖನಿಗಳಲ್ಲಿ ನಾಲ್ಕು ಪ್ರಮುಖ ಗುಂಪುಗಳಿವೆ. ಅವುಗಳೆಂದರೆ ಸೈಯದ್, ಶೇಖ್, ಮೊಗಲ್ ಮತ್ತು ಪಠಾಣ್. ಸೈಯದ್‌ಗಳೆಂದರೆ ತಮ್ಮನ್ನು ಪ್ರವಾದಿಯ ವಂಶಸ್ಥರೆಂದು ತಿಳಿದುಕೊಂಡವರು. ಪ್ರವಾದಿಯ ಪುತ್ರಿಯಾದ ಫಾತಿಮಾರ ಮೂಲಕ ಇವರ ಸಂತಾನ ಬೆಳೆದು ಬಂದಿದೆ. ಮೊಘಲರು ಉತ್ತರದ ಮೊಘಲರ ವಂಶಸ್ಥರಾಗಿದ್ದು ಕ್ರಿ.ಶ. 1686- ಕ್ರಿ.ಶ. 1723ರ ಮಧ್ಯೆ ದಕ್ಷಿಣಕ್ಕೆ ಬಂದವರು. ಪಠಾಣರು ಅಫ್ಘಾನ್ ಮೂಲದವರು. ಮೇಲಿನ ಮೂರೂ ಗುಂಪುಗಳಿಗೆ ಸೇರದ ಇಲ್ಲೇ ಮತಾಂತರಗೊಂಡವರನ್ನು ದಕ್ಖನದಲ್ಲಿ ಶೇಖರು ಎಂದು ಕರೆಯಲಾಗುತ್ತದೆ. ಇವರೆಲ್ಲರೂ ಹನಫಿ ಕರ್ಮಶಾಸ್ತ್ರ ಪಂಥದ ಅನುಯಾಯಿಗಳಾಗಿದ್ದಾರೆ.[95] ಬಹಮನಿ ರಾಜರು ಮತ್ತು ಷಾಹಿ ಆಡಳಿತಗಾರರು ಷಿಯಾಗಳಾಗಿದ್ದರು ಮತ್ತು ದಕ್ಷಿಣದಲ್ಲಿ ಷಿಯಾಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ದಕ್ಖನಿ ಮುಸ್ಲಿಮರ ಮಾತೃಭಾಷೆ ಉರ್ದು ಆಗಿತ್ತು. ಆ ಭಾಷೆಯೊಂದಿಗೆ ಅವರಿಗೆ ಎಷ್ಟೊಂದು ಆತ್ಮೀಯ ಸಂಬಂಧವಿತ್ತೆಂದರೆ ಅವರು ಅದನ್ನು ಮುಸ್ಲಿಮರ ಭಾಷೆ ಎನ್ನುವಷ್ಟರ ವರೆಗೂ ಹೋಗಿದ್ದರು. ದಕ್ಷಿಣ ಭಾರತದ ಈ ರಾಜ್ಯಗಳಲ್ಲಿ ಹಿಂದಿ ಒಂದು ಅಪರಿಚಿತ ಭಾಷೆಯಾಗಿದ್ದರಿಂದ ಮತ್ತು ತಮ್ಮದೇ ಆದ ಪ್ರಾದೇಶಿಕ ಭಾಷೆಯನ್ನು ಈ ರಾಜ್ಯಗಳು ಹೊಂದಿದ್ದ ಕಾರಣ ಉರ್ದುವಿನ ಬಗೆಗಿನ ಮಮತೆಯು ಧಾರ್ಮಿಕ ಏಕತೆಗೂ ಕಾರಣವಾಗಿತ್ತು. ಅಷ್ಟೇ ಅಲ್ಲ ಅದು ಮುಸ್ಲಿಮರ ಮಟ್ಟಿಗೆ ಸಂಪರ್ಕದ ಭಾಷೆಯಾಗಿಯೂ ಬೆಳೆದು ಬಂದಿತ್ತು. ಇಂದಿಗೂ ದಕ್ಖನದಲ್ಲಿ ಉರ್ದು ಭಾಷೆ ಬಾರದ ವ್ಯಕ್ತಿ ಮುಸ್ಲಿಮರಾಗಿರಲು ಸಾಧ್ಯವಿಲ್ಲ ಎಂದು ಭಾವಿಸುವ ಜನರಿದ್ದಾರೆ.

ದಕ್ಖನದಲ್ಲಿ ಶಾಹೀ ಆಳ್ವಿಕೆಯ ಕಾಲದಲ್ಲಿ ದಕ್ಖನಿಗಳ ಪ್ರವೇಶ ತುಳುನಾಡಿಗೆ ಆಯಿತು. ಫರೀದ್ ಗಂಜ್ ಸರ್ಕಾರ್‌ರಂತಹ ಕೆಲವು ಬಿಜಾಪುರಿ ಸೂಫಿ ಸಂತರು ಕೂಡಾ ಈ ಪ್ರದೇಶಕ್ಕೆ ಆಗಮಿಸಿ ಧರ್ಮಪ್ರಚಾರ ನಡೆಸಿದರು. ಆದರೆ ಈ ಪ್ರದೇಶದೊಂದಿಗೆ ದಕ್ಖನಿಗಳ ನಿಜವಾದ ಸಂಪರ್ಕ ಆರಂಭಗೊಂಡದ್ದು ಮೈಸೂರಿನ ನವಾಬರ ಕಾಲದಲ್ಲಿ. ನವಾಬರು (ಹೈದರ್ ಮತ್ತು ಟೀಪು) ಜಿಲ್ಲೆಯ ವಿವಿಧ ಭಾಗಗಳಿಗೆ ಅಮಲ್ದಾರರನ್ನೂ ಅಸಫ್‌ಗಳನ್ನೂ ನೇಮಿಸಿದರು. ಈ ಪೈಕಿ ಹೆಚ್ಚಿನವರು ಇಲ್ಲೇ ನೆಲೆಯೂರಿದರು ಮತ್ತು ಇವರ ಸಂತಾನವೇ ದಕ್ಖನಿಗಳೆಂದು ಮುಂದೆ ಗುರುತಿಸಲ್ಪಟ್ಟಿತು.[96] ಹೈದರಾಲಿ ಮತ್ತು ಟೀಪು ಇಬ್ಬರೂ ಭಾರಿ ಸಂಖ್ಯೆಯ ದಕ್ಖನಿ ಜನರನ್ನು ತಮ್ಮ ಅಧಿಕಾರಿಗಳಾಗಿಯೂ ಸೇವಕರಾಗಿಯೂ ಸೈನಿಕರಾಗಿಯೂ ಕರೆದುಕೊಂಡು ಬಂದಿದ್ದರು. ಹೀಗಾಗಿ ಜಿಲ್ಲೆಯಲ್ಲಿ ಇಂದಿಗೂ ಅಸ್ಸಾದಿ ಎಂಬ ಹೆಸರಿನ ಕೆಲವು ಹನಫಿ ಕುಟುಂಬಗಳಿವೆ. ಅಸ್ಸಾದಿ ಎಂಬುದು ನವಾಬರು ತಮ್ಮ ಕೆಲವು ಶ್ರೇಷ್ಠ ಸೈನಿಕರಿಗೆ ಕೊಡುತ್ತಿದ್ದ ಬಿರುದು ಎಂದೂ ಹೇಳಲಾಗುತ್ತದೆ.[97]

ಈ ಅಸ್ಸಾದಿಗಳಿಗೆ ತಮಗಿಷ್ಟದ ಜಾಗದಲ್ಲಿ ನೆಲೆಸಲು ಭೂಮಿಯನ್ನೂ ನೀಡಲಾಗುತ್ತಿತ್ತು. ದಕ್ಷಿಣ ಕನ್ನಡದಲ್ಲಿ ಅಹ್ಮದಿಗಳು ಎಂಬ ಹೆಸರಲ್ಲಿ ನವಾಬರ ಒಂದು ಸ್ಥಿರ ಸೈನ್ಯವೂ ಅಸ್ತಿತ್ವ

ದಲ್ಲಿತ್ತು.[98] ಇವರು ಅಂಗರಕ್ಷಕರಾಗಿಯೂ ನವಾಬರ ಮೀಸಲು ಪಡೆಯಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ಜಿಲ್ಲೆಯಲ್ಲಿ ನೆಲೆಯೂರಿದ ಈ ಸೈನಿಕರು ತಮ್ಮ ಕುಟುಂಬದ ಹೆಸರನ್ನು ಅಸ್ಸಾದಿಗಳು ಮತ್ತು ಅಹ್ಮದಿಗಳು ಎಂದು ನಮೂದಿಸತೊಡಗಿದರು.[99] ಈ ಪೈಕಿ ಶೇಕ್ ಅಯಾಸ್ ಒಬ್ಬ ವಿದ್ರೋಹಿಯಾಗಿದ್ದು ಬ್ರಿಟಿಷರೊಂದಿಗೆ ಸೇರಿ ಅವರಿಂದ ಉಪಕೃತನಾದನು. ಮೊಹಮ್ಮದ್ ಅಲಿ, ಮೊಹಮ್ಮದ್ ಶೇಖ್, ನೂರ್ ಗುಲಾಮ್ ಅಹಮದ್ ಅಲಿ ಖಾನ್, ಯೂಸುಫ್ ಖಾನ್ ಅಂದಿನ ಬಾರ್ಕೂರು ಪ್ರಾಂತ್ಯದ ದೊಡ್ಡ ಅಧಿಕಾರಿಗಳಾಗಿದ್ದರು.[100] ಆಸಿಸ್ ಖಾನ್ ಬೆಳ್ತಂಗಡಿಯ ಸಮೀಪದ ಜಮಾಲಾಬಾದ್‌ನ ಕೋಟೆಪಾಲಕನಾಗಿದ್ದನು. ದಕ್ಷಿಣ ಕೆನರಾದಿಂದ ಮಲಬಾರ್‌ವರೆಗಿನ ತಮ್ಮ ದಾರಿಗುಂಟ ಸಿಗುವ ಮುಖ್ಯ ಭಾಗಗಳಲ್ಲಿ ನವಾಬರು ಅಧಿಕಾರಿಗಳನ್ನು ನೇಮಕ ಮಾಡಿದ್ದರು. ಈ ಅಧಿಕಾರಿಗಳ ವಾರೀಸುದಾರರ ಪೈಕಿ ಸದ್ಯ ಕಾರ್ಕಳದಲ್ಲಿ ನೆಲೆಸಿರುವವರೊಬ್ಬರ ಪ್ರಕಾರ ಅಂದು ಕಾರ್ಕಳದಲ್ಲಿ ಒಂಭತ್ತು ಅಧಿಕಾರಿಗಳು ನೆಲೆಸಿದ್ದರು. ಒಬ್ಬ ಮಿಯಾರ್‌ನಲ್ಲೂ ನಾಲ್ವರು ಮೂಡಬಿದ್ರೆಯಲ್ಲೂ ಠಿಕಾಣಿ ಹೂಡಿದ್ದರು. ಈ ಪೈಕಿ ಕಾರ್ಕಳದಲ್ಲಿದ್ದ ಒಬ್ಬ ಅಧಿಕಾರಿಯ ಹೆಸರು ಹೈದರ್ ಸಾಹೇಬ್ ಎಂದಾಗಿತ್ತು. ಈತ ಟೀಪು ಸುಲ್ತಾನನ ಪತನದ ಬಳಿಕ ವ್ಯಾಪಾರಕ್ಕೆ ಇಳಿದ ಮತ್ತು ಕಾರ್ಕಳ ಮತ್ತು ಉಡುಪಿಯಲ್ಲಿ ಪುರೋಗತಿ ಹೊಂದಿದ.[101] ಮೂಡಬಿದ್ರೆಯ ಕೋಟೆಬಾಗಿಲು (ಬಿದನೂರಿನ ನಾಯಕರು ನಿರ್ಮಿಸಿದ ಮತ್ತು ತದನಂತರ ನವಾಬರು ವಶಪಡಿಸಿಕೊಂಡ ಕೋಟೆ) ನವಾಬರ ಮಿಲಿಟರಿ ತಾಣವಾಗಿತ್ತು. ಹತ್ತಿರದ ಚಮನ್ ಷಾ ವಲೀ ದರ್ಗಾದ ಸಮೀಪದಲ್ಲಿ ಪ್ರಯಾಣಿಕರ ತಂಗುದಾಣದ ಪಳಿಯುಳಿಕೆಗಳು ಈಗಲೂ ಕಂಡುಬರುತ್ತದೆ. ಹಳೆಯ ಮಸೀದಿಯ ಪಂಚಾಂಗವು ಇದೇ ಮೈದಾನದಲ್ಲಿ ಅವಶೇಷಗಳಡಿಯಲ್ಲಿ ಹೂತು ಹೋಗಿದೆ. ಬೆಳ್ವಾಯಿ ಮತ್ತು ಮರ್ನಾಡ್‌ನಿಂದ ಮೂಡಬಿದ್ರೆಯವರೆಗಿನ ವಿಶಾಲ ಭೂಭಾಗದಲ್ಲಿ ಈಗ ಹನಫಿಗಳು ನೆಲೆಸಿದ್ದಾರೆ. ಇವರೆಲ್ಲರೂ ಮೂಲತಃ ಕೋಟೆಬಾಗಿಲು ಮಸೀದಿಗೆ ಒಳಪಟ್ಟವರಾಗಿದ್ದರು. ಹೆಚ್ಚಿನವರು ನವಾಬರ ಉತ್ತರಾಧಿಕಾರಿಗಳಾಗಿದ್ದು, ಅಲ್ಲಿ ಇಂದಿಗೂ ಒಂದು ದರ್ಗಾ ಮತ್ತು ಮಸೀದಿ ಅಸ್ತಿತ್ವದಲ್ಲಿದೆ. ಇದೇ ರೀತಿ ಉಳ್ಳಾಲ (ಕೊಲ್ಯ), ಉಪ್ಪಳ (ಮಂಗಳಪಾಡಿ) ಮತ್ತು ಮೊಗ್ರಾಲ್‌ಗಳು ಮಲಬಾರ್ ದಾರಿಗುಂಟ ಇರುವ ಕಾರಣ ಇವು ಸೇನಾ ನೆಲೆಗಳೂ ಆಗಿದ್ದವು ಮತ್ತು ಈ ಎಲ್ಲ ಕಡೆಗಳಲ್ಲಿ ಹನಫಿಗಳು ನೆಲೆಸಿದ್ದರು. ಇಂದಿಗೂ ಇಲ್ಲಿ ಹನಫಿಗಳು ಕಂಡು ಬರುತ್ತಾರೆ. ಬಾರ್ಕೂರು, ಕಾರ್ಕಳ, ಮೂಡಬಿದ್ರೆ ಮತ್ತು ಮಂಗಳೂರಿಗೆ ಹೈದರಾಲಿ ಮತ್ತು ಟೀಪು ಸುಲ್ತಾನ್ ಭೇಟಿ ನೀಡಿರುವ ಬಗ್ಗೆ ಹಲವು ಕೈಫಿಯಾತ್ (ಕರ್ನಲ್ ಕಾಲಸ್ ಮೆಕೆನ್ಜಿ ಅವರ ಸಂಗ್ರಹ)ಗಳಲ್ಲಿ ಉಲ್ಲೇಖವಿದೆ. ಸೇನೆ, ಅಧಿಕಾರಿಗಳು ಮತ್ತು ಸೇವಕರಲ್ಲದೆ ಕುದುರೆಗಳಿಂದ ಎಳೆಯಲ್ಪಡುವ ಟಾಂಗಾಗಳು ಕೂಡಾ ಮೈಸೂರಿನಿಂದ ದಕ್ಷಿಣ ಕೆನರಾ ಜಿಲ್ಲೆಗೆ ಆಗಮಿಸಿದವು. ದೋಣಿಗಳನ್ನು ಹೊರತುಪಡಿಸಿದರೆ ಎತ್ತಿನಗಾಡಿಗಳು ಮಾತ್ರ ಅಂದು ಜಿಲ್ಲೆಯಲ್ಲಿ ಲಭ್ಯವಿದ್ದ ಪ್ರಮುಖ ಸಾರಿಗೆ ಸಂಪರ್ಕವಾಗಿತ್ತು.

ಟಾಂಗಾಗಳು ಸುಲ್ತಾನರಿಂದ ಸಿಕ್ಕ ಒಂದು ಹೊಸ ಕೊಡುಗೆಯಾಗಿತ್ತು.[102] ಈ ಟಾಂಗಾ ಎಳೆಯುವವರ ಪೈಕಿ ಹೆಚ್ಚಿನವರು ಸಾಮಾನ್ಯವಾಗಿ ಸುಲ್ತಾನರು ಸೇನೆ ಮತ್ತು ಜನರ ಸೇವೆಗೆಂದು ತಮ್ಮೊಂದಿಗೆ ಕರೆದುಕೊಂಡು ಬಂದ ಬಡ ಮುಸ್ಲಿಮರಾಗಿದ್ದರು. ಮಂಗಳೂರು,

ಉಡುಪಿ ಮತ್ತು ಇತರ ಪಟ್ಟಣಗಳಲ್ಲಿ ಟಾಂಗಾಗಳು ಹೆಚ್ಚು ಜನಪ್ರಿಯವಾದವು. ಇತ್ತೀಚೆಗೆ ಆಟೋರಿಕ್ಷಾಗಳು ಇವುಗಳ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಇದು ಜಿಲ್ಲೆಯಲ್ಲಿ ಹನಫಿ ಕುಟುಂಬಗಳು ಹೆಚ್ಚುವುದಕ್ಕೆ ಇರುವ ಇನ್ನೊಂದು ಪ್ರಮುಖ ಕಾರಣ. ಕ್ರಿ.ಶ. 1891ರ ವೇಳೆಗೆ ಜಿಲ್ಲೆಯಲ್ಲಿ 17,429 ಹನಫಿ (ದಕ್ಖನಿ) ಕುಟುಂಬಗಳಿದ್ದವು. (1891ರ ಜನಗಣತಿ)

1.	ಬ್ಯಾರಿಗಳು	92,223
2.	ಹನಫಿಗಳು	17,4297
3.	ನವಾಯತರು	12,104
4.	ಮೇಮನ್‌ಗಳು	79
5.	ಶಿಯಾಗಳು	19

ಜಿಲ್ಲೆಯ ಹನಫಿ ಜನವಸತಿ ಪ್ರದೇಶಗಳು[103]

1. ಕುಂದಾಪುರ ತಾಲೂಕಿನ ಬೈಂದೂರು
2. ಕುಂದಾಪುರ, ಗಂಗೊಳ್ಳಿ ಸುತ್ತಮುತ್ತ
3. ಉಡುಪಿ, ತೋನ್ಸೆ ಮತ್ತು ಮಲ್ಪೆ
4. ಕಾಪು, ಎರ್ಮಾಳ್, ಮುಲ್ಕಿ ಮತ್ತು ಕಿಲ್ಪಾಡಿ
5. ಕಾರ್ಕಳ ಮತ್ತು ಮಿಯಾರ್
6. ಮೂಡಬಿದ್ರೆ, ಬೆಳ್ವಾಯಿ ಮತ್ತು ಮಾರ್ನಾಡ್
7. ಗುರುಕಂಬ್ಳ, ಕಿನ್ನಿಕಂಬ್ಳ, ಸೂರಲ್ಪಾಡಿ
8. ಬೆಳ್ತಂಗಡಿ (ಜಮಾಲಾಬಾದ್), ಪಿಲ್ಯಾ, ಗುರುವಾಯನಕೆರೆ
9. ಉಳ್ಳಾಲ (ಕೊಲ್ಯ)
10. ಉಪ್ಪಳ ಮತ್ತು ಮಂಗಳಪಾಡಿ
11. ಮಂಗಳೂರು

ದಕ್ಖನಿಗಳ ಪೈಕಿ ದೊಡ್ಡ ಸಂಖ್ಯೆಯ ಜನರು ಮುಂದೆ ವರ್ತಕರಾಗಿಯೂ ಉದ್ಯಮಿಗಳಾಗಿಯೂ ಗುರುತಿಸಲ್ಪಟ್ಟರು. ಆದರೆ ಹೆಚ್ಚಿನ ಜನರು ಇನ್ನೂ ಬಡತನದಲ್ಲೇ ಇದ್ದಾರೆ. ದಕ್ಖನರು ಸಾಮಾನ್ಯವಾಗಿ ತಾವು ವಾಸಿಸುವ ಪ್ರದೇಶಗಳಲ್ಲಿ ಅದೇ ಹೆಸರಿನಿಂದ ಗುರುತಿಸಲ್ಪಡುವುದರಿಂದ ಈ ಪುಸ್ತಕದಲ್ಲಿ ಅವರನ್ನು ದಕ್ಖನಿಗಳೆಂದೇ ಉಲ್ಲೇಖಿಸಲಾಗಿದೆ.

5. ಇತರ ಮುಸ್ಲಿಮ್ ವಿಭಾಗಗಳು

ಷಿಯಾಗಳು ತಮ್ಮದೇ ಆದ ಸಾಂಸ್ಕೃತಿಕ ಪ್ರಭಾವವನ್ನು ಬೀರಿದ ಇನ್ನೊಂದು ವರ್ಗವಾಗಿದ್ದಾರೆ. ಕ್ರಿ.ಶ. 1891ರಲ್ಲಿ ದಕ್ಷಿಣ ಕೆನರಾದಲ್ಲಿ ಒಟ್ಟು ಏಳು ಷಿಯಾಗಳು, ಆರು ಬೊಹ್ರಾಗಳು ಮತ್ತು ಒಬ್ಬ ಖೋಜಾ ವರ್ತಕ ಇದ್ದ.[104] ಇವರು ವ್ಯಾಪಾರಕ್ಕಾಗಿ ಮುಂಬೈಯಿಂದ ನೇರವಾಗಿ ಇಲ್ಲಿಗೆ ಬಂದಿರುವ ಸಾಧ್ಯತೆಯಿದೆ. ಆದರೆ ವಿಚಿತ್ರವೆಂದರೆ ಹದಿನೆಂಟನೇ

ಶತಮಾನದ ವೇಳೆಗೆ ಮೊಹರ್ರಮ್ ಆಚರಣೆ ಇಡೀ ದಕ್ಷಿಣ ಕೆನರಾವನ್ನೇ ಆವರಿಸಿಕೊಂಡಿತ್ತು. ಮಂಗಳೂರಿನ ಡೊಂಗರಕೇರಿಯಲ್ಲಿ ಕರ್ಬಲಾ ಮೈದಾನವೇ ಇದೆ. ಇಲ್ಲಿ ಅಶೂರಾ ಖಾನಾ ಮತ್ತು ಒಂದು ಕರ್ಬಲಾ ರಸ್ತೆಯೂ ಇದೆ. ಉಡುಪಿ, ಮುಲ್ಕಿ, ಕುಂದಾಪುರ, ಬಸ್ರೂರು, ಕಾರ್ಕಳ ಮತ್ತು ಮೂಡಬಿದ್ರೆಯಲ್ಲೂ ಮೊಹರ್ರಮ್ ಆಚರಣೆ ಕಂಡು ಬರುತ್ತದೆ. ಈ ಎಲ್ಲಾ ಕಡೆಗಳಲ್ಲಿ ಕರ್ಬಲಾ ಮೈದಾನ ಮತ್ತು ಅಶೂರಾ ಖಾನಾಗಳಿವೆ. ಮೊಹರ್ರಮನ್ನು ಅಲಾವಿ ಹಬ್ಬ ಅಥವಾ ಅಶೂರಾ ಹಬ್ಬ ಎಂದೂ ಕರೆಯಲಾಗುತ್ತದೆ. ಕೆಳಜಾತಿಯ ಹಿಂದೂಗಳೂ ಸೇರಿದಂತೆ ಎಲ್ಲ ಸಮುದಾಯಗಳವರೂ ಇದರಲ್ಲಿ ಭಾಗವಹಿಸುತ್ತಾರೆ. ಮೊಹರ್ರಮ್ ಹತ್ತನೇ ತಾರೀಕು ಪಂಜಾ ಮತ್ತು ಅಲಾವಿಗಳನ್ನು ಹೊತ್ತುಕೊಂಡು ಮೆರವಣಿಗೆ ಮಾಡಲಾಗುತ್ತದೆ.[105] ಹುಲಿ ವೇಷವು ದಕ್ಷಿಣ ಕೆನರಾದ ಸಾಮಾನ್ಯ ಜನಪದ ನೃತ್ಯ. ಇದರೊಂದಿಗೆ ಭೂತಾರಾಧನೆಯ ಸಂದರ್ಭದಲ್ಲಿ ಕಂಡುಬರುವ ಬೆಂಕಿಯ ಮೇಲೆ ನಡೆಯುವುದು ಮುಂತಾದ ಆಟ ಮತ್ತು ಸಂಪ್ರದಾಯಗಳು ಕರ್ಬಲಾ ಮೈದಾನದಲ್ಲೂ ಕಂಡುಬರುತ್ತವೆ.[106] ಎಂದು ಎಲ್ಲರಿಗೂ ಷರ್‌ಬತ್ (ಪಾನಕ) ವಿತರಿಸಲಾಗುತ್ತದೆ. ಈ ವಿಚಿತ್ರ ಆಚರಣೆಯನ್ನು ಮೈಸೂರಿನ ನವಾಬರ ಸೈನಿಕರು ತಂದರು ಎಂದು ಹೇಳಲಾಗುತ್ತದೆ. ಇದು ಒಂದು ಷಿಯಾ ಹಬ್ಬವಾದರೂ ಎಲ್ಲರೂ, ಮುಖ್ಯವಾಗಿ ಹನಫಿಗಳು, ಆದರಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲಾವಿ ಹಬ್ಬದ ಈ ವಿಶೇಷತೆಗಳು ದಕ್ಖನ ಪ್ರದೇಶದಲ್ಲಿ ಕಂಡು ಬರುವುದಿಲ್ಲ.

ಪುಸಲ್ಲಾರ್‌ಗಳು ಕೂಡಾ ಉಲ್ಲೇಖಾರ್ಹವಾದ ಇನ್ನೊಂದು ಸಮುದಾಯ. ಇಸ್ಲಾಮ್‌ಗೆ ಮತಾಂತರಗೊಂಡ ಮೀನುಗಾರರನ್ನು ಪುಸಲ್ಲಾರ್‌ಗಳು ಎಂದು ಕರೆಯ ಲಾಗುತ್ತಿತ್ತು. ಇದು ಪುದು ಇಸ್ಲಾಮ್ ಅರ್ಥಾತ್ ನವಮುಸಲ್ಮಾನರು ಎಂಬ ಪದದ ಅಪಭ್ರಂಶ ಎಂದು ಹೇಳಲಾಗುತ್ತದೆ. ಆದರೆ ಪುಸಲ್ಲಾರ್‌ಗಳು ಮೀನುಗಾರರಾಗಿಯೇ ಮುಂದುವರಿದರು. ಮಂಗಳೂರಿನಲ್ಲಿ ಪುಸ್ಲಾರ್‌ಕೇರಿ ಎಂಬ ಒಂದು ಕೇರಿಯೂ ಇತ್ತು. ಜತೆಗೆ ಪುಸ್ಲಾರ್ ಎಂಬ ಮಸೀದಿಯೂ ಆರಂಭದ ಶತಮಾನಗಳಲ್ಲಿ ಅಸ್ತಿತ್ವದಲ್ಲಿತ್ತು.[107] ಆದರೆ ಈ ಕೇರಿ ಮತ್ತು ಮಸೀದಿ ಎರಡೂ ಕ್ರಮೇಣ ಅಳಿದು ಹೋದವು. ಇಂದು ಪುಸಲ್ಲಾರ್‌ಗಳ ಕುರುಹೇ ಮಂಗಳೂರಿನಲ್ಲಿ ಕಂಡುಬರುವುದಿಲ್ಲ. ಉಳ್ಳಾಲ ಮತ್ತು ಕೋಟೆಕಾರ್‌ಗಳಲ್ಲೂ ಹಿಂದೆ ಪುಸಲ್ಲಾರ್‌ಗಳಿದ್ದರು. ಮಂಜೇಶ್ವರ ಇವರ ಇನ್ನೊಂದು ಕೇಂದ್ರವಾಗಿತ್ತು. ಅರಿಕ್ಕಾಡಿ ಬಳಿಯ ಕುಂಬಳೆ ಇವರ ಪ್ರಮುಖ ವಸತಿ ಕೇಂದ್ರವಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ಈ ಪ್ರದೇಶ ದಲ್ಲಿ ಅವರು ಬೆಳೆದು ಬಂದರು ಮತ್ತು ಪ್ರತ್ಯೇಕ ಮೀನುಗಾರ ಸಮುದಾಯವಾಗಿ ತಮ್ಮ ಮಹತ್ವವನ್ನೂ ಉಳಿಸಿಕೊಂಡರು. ಒಂದು ಪುರಾತನ ಮಸೀದಿ ಮತ್ತು ಧಾರ್ಮಿಕ ಕೇಂದ್ರವು ಇಂದಿಗೂ ಅಲ್ಲಿ ಅಸ್ತಿತ್ವದಲ್ಲಿದೆ. ಕುಂಬೋಳ್‌ನಲ್ಲಿರುವ ಪುಸಲ್ಲಾರ್ ಮೊಹಲ್ಲಾ ಜಿಲ್ಲೆಯಲ್ಲಿ ಪುಸಲ್ಲಾರ್‌ಗಳ ಪ್ರಭಾವಕ್ಕೆ ಇರುವ ಒಂದು ಸ್ಪಷ್ಟ ಪುರಾವೆ.

ಪುಸಲ್ಲಾರ್‌ಗಳು ಕಡಲಿನ ಒಡಲಿಂದ ಬಂದವರಾದ್ದರಿಂದ ಬಲಿಷ್ಠರೂ ಬಲಾಢ್ಯರೂ ಹೌದು. ಆರಂಭದಲ್ಲಿ ಅವರಿಗೆ ಉನ್ನತ ಸ್ಥಾನಮಾನವೂ ಪ್ರಾಪ್ತವಾಗಿತ್ತು. ಉಳ್ಳಾಲದ ಅಬ್ಬಕ್ಕ ರಾಣಿ ಮತ್ತು ಮೈಸೂರಿನ ನವಾಬರು ತಮ್ಮ ಸೇನೆಯಲ್ಲೂ ಅವರನ್ನು ಸೇರಿಸಿಕೊಂಡಿದ್ದರು. ನಿಜವಾಗಿ ಅವರು ಒಂದು ದೊಡ್ಡ ಆಸ್ತಿಯಾಗಿದ್ದರು. ಆದರೆ ರಾಜಕೀಯ ಏಕಾಧಿಪತ್ಯ ಮತ್ತು

ರಾಜಾಳ್ವಿಕೆ ಕೊನೆಗೊಳ್ಳುವುದರೊಂದಿಗೆ ಅವರು ಕೂಡಾ ತಮ್ಮ ಮಹತ್ವವನ್ನು ಕಳೆದು ಕೊಂಡರು. ಕ್ರಮೇಣ ಅವರು ಹೊಟ್ಟೆಪಾಡಿಗಾಗಿ ಕುಲಕಸುಬಿನ ಮೊರೆ ಹೋಗಬೇಕಾಯಿತು. ಜತೆಗೆ ತಮ್ಮ ಕಾಲನಿಗಳಿಗೆ ಅವರು ಹಿಂದಿರುಗಬೇಕಾಯಿತು.

ಪುಸಲ್ಲಾರ್‌ಗಳು ಶಾಫಿಗಳಾಗಿದ್ದರು ಮತ್ತು ಸಂಪ್ರದಾಯವಾದಿ ಸುನ್ನಿ ಪಂಥವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅವರು ಬ್ಯಾರಿಗಳನ್ನು ಜೋನಾಸ್ ಅಥವಾ ಯೌನಾ ಅರ್ಥಾತ್ ವಿದೇಶಿ ಮೂಲದವರು ಎಂದು ಕರೆಯುತ್ತಿದ್ದರು. ತಮ್ಮ ಪ್ರಾಬಲ್ಯವಿರುವ ಕುಂಬಳೆ ಯಂತಹ ಪ್ರದೇಶಗಳಲ್ಲಿ ಅವರಿಗೂ ಯೌನಾಗಳಿಗೂ ಹೊಡೆದಾಟಗಳು ನಡೆಯುತ್ತಿದ್ದವು. ನಂತರ ಸಂಧಾನದ ಮೂಲಕ ಸಮಸ್ಯೆ ಇತ್ಯರ್ಥವಾಗುತ್ತಿತ್ತು. ಬ್ಯಾರಿಗಳು ಮತ್ತು ಪುಸಲ್ಲಾರ್ ಗಳ ಮಧ್ಯೆ ವಿವಾಹಗಳು ತುಂಬಾ ಅಪರೂಪವಾಗಿತ್ತು. ಅವರು ಬ್ಯಾರಿ ಭಾಷೆಯನ್ನೇ ಮಾತನಾಡುವವರಾಗಿದ್ದರೂ ಸ್ವಲ್ಪ ವ್ಯತ್ಯಾಸ ಅದರಲ್ಲಿತ್ತು. ಸಾಮಾನ್ಯವಾಗಿ ಅವರು ತೀರ ಪ್ರದೇಶದಲ್ಲಿ ಅದರಲ್ಲೂ ನದಿಗಳು ಸೇರುವಲ್ಲಿ ನೆಲೆಸಿದ್ದರು ಮತ್ತು ಸಾಮಾನ್ಯವಾಗಿ ಕಡವತ್ ಎಂದು ಕರೆಯಲ್ಪ ಡುತ್ತಿದ್ದರು. ಮಂಗಳೂರಿನಲ್ಲಿ ಕಡವತ್ ಎಂಬುದು ಕ್ರಮೇಣ ಕಂಡತ್ ಎಂದು ರೂಪಾಂತರಗೊಂಡಿತು ಮತ್ತು ಪ್ರಾಯಶಃ ಪುಸಲ್ಲಾರ್‌ಗಳ ಅಳಿವಿನ ಬಳಿಕ ಕಂಡತ್ ಪಳ್ಳಿ ಸ್ಥಳೀಯ ಮುಸ್ಲಿಮರ ಕೇಂದ್ರವಾಗಿ ಬೆಳೆದುಬಂತು.

ಬ್ಯಾರಿಗಳು ತುಳುನಾಡು ಜಿಲ್ಲೆಯ ಮುಸ್ಲಿಮರ ಅತಿದೊಡ್ಡ ಸಮುದಾಯ ವಾಗಿರುವುದರಿಂದ ಈ ಸಂಶೋಧನಾ ಕೃತಿಯು ಅವರ ಸಂಸ್ಕೃತಿ ಮತ್ತು ಕೊಡುಗೆಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸುತ್ತದೆ.

★★★

1. ಕೆ.ವಿ. ರಮೇಶ್, ಹಿಸ್ಟರಿ ಆಫ್ ಸೌತ್ ಕೆನರಾ, 1970, ಪುಟ 14
2. ಲೋಗನ್, ಮಲಬಾರ್ ಮ್ಯಾನುವಲ್, ಮೆಡ್ರಾಸ್, 1901, ಪುಟ 224
3. ಸ್ಪರ್ಕ್ ಜೆ. ಮೆಡ್ರಾಸ್ ಜಿಲ್ಲಾ ಮ್ಯಾನುವಲ್, ಸೌತ್ ಕೆನರಾ ಡಿಸ್ಟ್ರಿಕ್ಟ್ ಸಂಪುಟ 1, 1894, ಪುಟ ಎರಡು
4. ಮೇಲಿನಂತೆಯೇ ಪುಟ 2
5. ಗಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ, ಸೌತ್ ಕೆನರಾ ಡಿಸ್ಟ್ರಿಕ್ಟ್ ಗೌರ್ನ್‌ಮೆಂಟ್ ಪಬ್ಲಿಕೇಶನ್, 1973, ಅಧ್ಯಾಯ 1
6. ಮೇಲಿನಂತೆಯೇ. ಅಧ್ಯಾಯ 1
7. ಸ್ಪರ್ಕ್ ಜೆ. ಎಂ.ಡಿ. ಮ್ಯಾನುವೆಲ್, ಎಸ್.ಕೆ. ಡಿಸ್ಟ್ರಿಕ್ಟ್ ಸಂಪುಟ 1, ಪುಟ 14
8. ಸ್ಟುವರ್ಟ್ ಎಂ.ಡಿ. ಮ್ಯಾನುವೆಲ್, ಎಸ್.ಕೆ. ಡಿಸ್ಟ್ರಿಕ್ಟ್ ಸಂಪುಟ 2, ಪುಟ 242
9. ಮೇಲಿನಂತೆಯೇ. ಪುಟ 255
10. ಮೇಲಿನಂತೆಯೇ ಪುಟ 255
11. ಮೇಲಿನಂತೆಯೇ. ಪುಟ 249

12. ಸ್ಟುವರ್ಟ್ ಎಸ್.ಕೆ. ಡಿಸ್ಟ್ರಿಕ್ಟ್ ಮ್ಯಾನುವೆಲ್, ಸಂಪುಟ 2 (ಕೋಷ್ಟಕ)
13. ಕೇಶವ ಕೃಷ್ಣ ಕುಡ್ವ, ದಕ್ಷಿಣ ಕನ್ನಡ ಚರಿತ್ರೆ (ಕೆ), 1948
14. ಗಜೆಟಿಯರ್ ಆಫ್ ಇಂಡಿಯಾ, ಎಸ್.ಕೆ. ಡಿಸ್ಟ್ರಿಕ್ಟ್ 1973, ಪುಟ 104
15. ತಾರಾಚಂದ್: ಇನ್‌ಫ್ಲುಯೆನ್ಸ್ ಆಫ್ ಇಸ್ಲಾಮ್ ಆನ್ ಇಂಡಿಯನ್ ಕಲ್ಚರ್, 1963, ಪುಟ 31
16. ಮೇಲಿನಂತೆಯೇ. ಪುಟ 32
17. ಗಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ, ದಕ್ಷಿಣ ಕನ್ನಡ ಜಿಲ್ಲೆ 1973, ಪುಟ 104
18. ಎಮ್. ಗಣಪತಿ ರಾವ್ ಐಗಲ್, ದಕ್ಷಿಣ ಕನ್ನಡ ಪ್ರಾಚೀನ ಇತಿಹಾಸ, 1923, ಪುಟ 17-23
19. ವಿಕ್ಟರ್ ಡಿಸೋಜ, ದ ನವಾಯತ್ಸ್ ಆಫ್ ಕೆನರಾ, 1955, ಪುಟ 2
20. ಡಾ. ಟಿ. ಟೈಟಸ್, ಇಂಡಿಯನ್ ಇಸ್ಲಾಮ್ ಪುಟ 37
21. ಎಮ್. ಗಿರಿಯಪ್ಪ ಬಿ.ಎ. ತುಳುವ ಎಂಡ್ ತುಳುನಾಡು, ಅಧ್ಯಕ್ಷ ಕೊರಗಪ್ಪ ಮೆಮೋರಿಯಲ್ ಸವನೀರ್, 1970, ಬಿಲ್ಲವ ಯೂನಿಯನ್, ಮಂಗಳೂರು
22 ಜಾನ್ ಕ್ಯಾಂಬೆಲ್, ಬ್ರಾಹ್ಮಿನ್ ತಿಯಿಸ್ಟ್ಸ್ ಎಂಡ್ ಮುಸ್ಲಿಮ್ಸ್ ಇನ್ ಇಂಡಿಯಾ 1973. ಡಾ. ಜೆ. ನೆಲ್ಸನ್‌ರ ಕಾಸ್ಟ್ ಆವೃತ್ತಿ 1, ಪುಟ 403ರಿಂದ ಉಲ್ಲೇಖಿತ.
23. ಎಡ್ವರ್ಡ್ ಥರ್ಸ್ಟನ್, ಕಾಸ್ಟ್ಸ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ, ಸಂಪುಟ 2, 1975, ದಿಲ್ಲಿ
24. ಡಬ್ಲ್ಯೂ ಆರ್ನಾಲ್ಡ್ ದ ಪ್ರೀಚಿಂಗ್ ಆಫ್ ಇಸ್ಲಾಮ್, ಪುಟ 269
25. ಮೇಲಿನಂತೆಯೇ ಪುಟ 255
26. ಎಸ್.ಎಂ. ಮೊಹಮ್ಮದ್ ಕೋಯಾ, ಮಾಪಿಳ್ಳಾಸ್ ಆಫ್ ಮಲಬಾರ್, ಪುಟ 3
27. ಮಲಬಾರ್ ಮ್ಯಾನುವಲ್, ಆವೃತ್ತಿ 1, 1951, ಮೆಡ್ರಾಸ್, ಪುಟ 197
28. ಗಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ, ದಕ್ಷಿಣ ಕನ್ನಡ ಜಿಲ್ಲೆ 1973, ಪುಟ 104
29. ಅಯ್ಯಪ್ಪನ್, ಸೋಷಿಯಲ್ ರೆವೆಲ್ಯೂಷನ್ ಇನ್ ಎ ಕೇರಳ ವಿಲೇಜ್
30. ವಿ. ಕುಞಾಲಿ, ಸೂಫಿಸಮ್ ಇನ್ ಕೇರಳ, (ಡೆಸರ್ಟೇಶನ್ ಎಂ.ಎಸ್. 1985), ಪುಟ 12
31. ತುಹ್ಫತುಲ್ ಮುಜಾಹಿದೀನ್, ರೋಲ್ಯಾಂಡ್‌ಸನ್ಸ್ ಟ್ರಾನ್ಸ್‌ಲೇಶನ್, ಪುಟ 50, ಟಿಪ್ಪಣಿ : ಇದೊಂದು ದಂತಕತೆ
32. ಮೇಲಿನಂತೆಯೇ ಪುಟ 53
33. ಲೋಗನ್, ಮಲಬಾರ್ ಮ್ಯಾನುವಲ್, ಸಂಪುಟ 1, 1989, ಡಿ. ಪುಟ 193
34. ಮೇಲಿನಂತೆಯೇ. ಪುಟ 194
35. ಮೇಲಿನಂತೆಯೇ ಪುಟ 195

36. ಅಬೂ ರೈಹಾನ್ ನೂರಿ, ಮೈಕಾಲ, 1960, ಪುಟ 399
37. ಎ.ಎ. ಶೆರೂಲ್ ಅವರು ದಾಖಲಿಸಿರುವ ಮೌಖಿಕ ಇತಿಹಾಸ, ಇಚ್ಲಂಗೋಡು ಮಸೀದಿ ಮತ್ತು ದರ್ಗಾದ ಮೊಕ್ತೇಸರ ಹಾಗೂ ಉರೂಸ್ ಕರಪತ್ರ 1985
38. ನೆಲಕ್ಕಯರ್, ಮಸೀದಿ ಪ್ರವೇಶಿಸುವುದಕ್ಕೆ ಸಹಾಯಕವಾಗುವ ತಾಮ್ರದ ಬಟ್ಟಲು, ತೆಂಗಿನ ಕಾಯಿಯ ಗೆರಟೆ ಅಥವಾ ಮರದ ತುಂಡನ್ನು ಬಳಸಿ ಕಟ್ಟಿದ ಹಗ್ಗ.
39. ಎಂ. ಗಣಪತಿ ರಾವ್, ಡಿ.ಕೆ. ಜಿಲ್ಲೆಯ ಪ್ರಾಚೀನ ಇತಿಹಾಸ (ಕ) ಪುಟ 17-21
40. ತುಹ್ಫತ್, ಪುಟ 38-39.
41. ಕುಂಞಾಲಿ, ಸೂಫಿಸಮ್ ಇನ್ ಕೇರಳ ಪು.12 (ಎಂ.ಫಿಲ್ ಡೆಸರ್ಟೇಶನ್) 1985
42. ಕೆ. ಎ. ಅಬ್ದುಲ್ ರಹ್ಮಾನ್, ಪೊನ್ನಾನಿ, ಎ ಬ್ರೀಫ್ ಹಿಸ್ಟಾರಿಕಲ್ ಎಕೌಂಟ್
43. ರೋಲಾಂಡ್ ಇ. ಮಿಲ್ಲರ್, ಮಾಪಿಳ್ಳ ಮುಸ್ಲಿಮ್ಸ್ ಆಫ್ ಕೇರಳ, 1976, ಮೋಡ್, ಪು. 53
44. ಆರ್ನಾಲ್ಡ್, ದ ಪ್ರೀಚಿಂಗ್ ಆಫ್ ಇಸ್ಲಾಮ್, ಪುಟ 268
45. ತಾರಾಚಂದ್, ಇನ್‌ಫ್ಲುಯೆನ್ಸ್ ಆಫ್ ಇಸ್ಲಾಮ್ ಇನ್ ಇಂಡಿಯನ್ ಕಲ್ಚರ್, 1963, ಪುಟ 40
46. ಬಾಬಾ ಫಕ್ರುದ್ದೀನ್ ವಲಿ, 710 ಮಾಲಿದಾ ಉರೂಸ್ 1984 ಸಂದರ್ಭದಲ್ಲಿ ಅಜಿಲಮೊಗರು ಜಮಾಅತ್ ಹೊರತಂದ ಕರಪತ್ರ
47. ತಾರಾಚಂದ್, ಇನ್‌ಫ್ಲುಯೆನ್ಸ್ ಆಫ್ ಇಸ್ಲಾಮ್, ಪುಟ 41
48. ವಲಚ್ಚಿಲ ಜಮಾತ್‌ನ ಕಮಿಟಿ ಸದಸ್ಯರೊಬ್ಬರು ಹೇಳಿದ ಮೌಖಿಕ ಇತಿಹಾಸ
49. ಅಬೂ ರೈಹಾನ್ ನೂರಿ, ಮೈಕಾಲ, 1960, ಪುಟ 20
50. ಬ್ರೀಫ್ ಹಿಸ್ಟರಿ ಆಫ್ ಸೈಯದ್ ಮೊಹಮ್ಮದ್ ಷರೀಫುಲ್ ಮದನಿ, ದರ್ಗಾ ಕಮಿಟಿ ಹೊರಡಿಸಿದ ಕಿರು ಹೊತ್ತಿಗೆ, 1983
51. ಡಾ. ಎ.ಎಮ್. ಅಬೂಬಕರ್, ಶೇಕ್ ಸಿದ್ದೀಕ್ ಯೂಸುಫ್ ವಲಿಯುಲ್ಲಾ ಹೊರಡಿಸಿದ ಕಿರುಹೊತ್ತಗೆ
52. ಅಬೂರೈಹಾನ್ ನೂರಿ, ಮೈಕಾಲ, 1960, ಪುಟ 29
53. ಸ್ಪ್ರಕ್, ದ ಡಿಸ್ಟ್ರಿಕ್ ಮ್ಯಾನುವಲ್, ಸೌತ್ ಕೆನರಾ ಡಿಸ್ಟ್ರಿಕ್ಟ್ ಸಂಪುಟ 1, ಪುಟ 155
54. ಕನರಾಡಿ ವಾದಿರಾಜ ಭಟ್ಟ ಪಾಡ್ದನಗಳು, 1974
55. ಕೆ.ವಿ. ರಮೇಶ್, ತುಳುನಾಡಿನ ಇತಿಹಾಸ (ಕನ್ನಡ) ಪುಟ 70
56. ಮೇಲಿನಂತೆಯೇ ಪುಟ. 125
57. ಆರ್ನಾಲ್ಡ್, ದ ಪ್ರೀಚಿಂಗ್ ಆಫ್ ಇಸ್ಲಾಮ್, ಪುಟ 264
58. ಮೇಲಿನಂತೆಯೇ, ಪುಟ 264
59. ಮೇಲಿನಂತೆಯೇ, ಪುಟ 266
60. ಸ್ಟುವರ್ಟ್, ದ ಡಿಸ್ಟ್ರಿಕ್ಟ್ ಮ್ಯಾನುವಲ್, ಎಸ್.ಕೆ. ಡಿಸ್ಟ್ರಿಕ್ಟ್ ಸಂಪುಟ 2, ಪುಟ 16-25
61. ಫಿಲಿಪ್ ಕೆ. ಹೈಟಿ, ಹಿಸ್ಟರಿ ಆಫ್ ದ ಅರಬ್ಸ್, 1964, ಪುಟ 439

62. ಮೇಲಿನಂತೆಯೇ, ಪುಟ 397-399
63, ಹೋಚ್‌ಮನ್ - ಡಿಸ್ಕ್ರಿಪ್ಟೀವ್ ಮೆಮರೀಸ್ ಆಫ್ ವಿಲೇಜೆಸ್ ಆಫ್ ಸೌತ್ ಕೆನರಾ ಡಿಸ್ಟ್ರಿಕ್ಟ್ (ಸರ್ವೇ ಎಂಡ್ ಸೆಟ್ಲ್‌ಮೆಂಟ್), ಆದಂಗಲ್ ರೆಕಾರ್ಡ್ಸ್
64. ಕನರಾಡಿ ವಾದಿರಾಜ ಭಟ್ಟ ಪಾಡ್ದನಗಳು, (1974) ಪುಟ 199-204
65. ಡಾ (ಶ್ರೀಮತಿ) ಸುಶೀಲಾ ಉಪಾಧ್ಯಾಯ ತುಳುವಾ (ಸಂಪುಟ 9-10) 1987, ಆರ್ಟಿಕಲ್
66. ನೋಟ್: ಕಲಿಮಾ ಅಂದರೆ ಇಸ್ಲಾಮಿನ ಮೂಲಭೂತ ಸಂಕಲ್ಪ - ಅಲ್ಲಾಹನಲ್ಲದೆ ಬೇರೆ ದೇವರಿಲ್ಲ. ಮೊಹಮ್ಮದ್ ಆತನ ಪ್ರವಾದಿ
67. ಮ್ಯಾನರ್, ಪಾಡ್ದನಲು (ಸಂಗ್ರಹ), 1886, ಬಾಸೆಲ್ ಮಿಷನ್, 68
68. ಗುತ್ತು ಅಂದರೆ ಪ್ರಭುಗಳು (ಬಂಟರು ಅಥವಾ ಜೈನರು)
69. ಎನ್.ಎಸ್. ಕಿಲ್ಲೆ ಪ್ರಾಚೀನ ತುಳುನಾಡು 1952, ಮಂಗಳೂರು, ಪುಟ 43
70. ಕುಚ್‌ಮನ್-ಸರ್ವೇ ಎಂಡ್ ಸೆಟ್ಲ್‌ಮೆಂಟ್, ಡಿಸ್ಕ್ರಿಪ್ಟೀವ್ ಮೆಮರೀಸ್, 1904-05
71. ಮೇಲಿನಂತೆಯೇ
72. ಡಾ. (ಶ್ರೀಮತಿ) ಸುಶೀಲಾ ಉಪಾಧ್ಯಾಯ ಅವರ ಮಾಪಿಳ್ಳ ಮಲಯಾಳಮ್, (ಪಿಎಚ್‌ಡಿ ಪ್ರಬಂಧ) ಪುಟ 3
73. ಮೇಲಿನಂತೆಯೇ ಪುಟ 3
74. ಸ್ಮರಣಸಂಚಿಕೆ, ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್, ಮೊಗ್ರಾಲ್ 1983
75. ಪ್ರತಿಗಳನ್ನು ಲಗತ್ತಿಸಲಾಗಿದೆ, ಇಚ್ಲಂಗೋಡಿನ ಅಬ್ದುಲ್ಲಾ ಹಾಜಿಯವರಿಂದ ಸಂಗ್ರಹಿತ
76. ಕೋಚ್‌ಮನ್, ಸರ್ವೇ ಎಂಡ್ ಸೆಟ್ಲ್‌ಮೆಂಟ್
75. ಮೇಲೆ ಉದ್ಧೃತ ಪುಟ
78. ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್ ಪ್ರಕಟಿಸಿದ ಸ್ಮರಣ ಸಂಚಿಕೆ 1983
79. ಹಲವು ಗಣ್ಯ ಹಿರಿಯರು ನಿರೂಪಿಸಿದ ಮೌಖಿಕ ಇತಿಹಾಸ
80. ಮೇಲಿನಂತೆಯೇ
81. ಆಲ್ ಇಂಡಿಯಾ ಕಚ್ಚಿ ಮೇಮನ್ ಡೈರೆಕ್ಟರಿ, ಬಾಂಬೆ, 1985
82. ಮೇಲಿನಂತೆಯೇ
83. ಅಬ್ದುಲ್ ಹಮೀದ್, ಜಿಲ್ಲಾ ಲೀಗ್ ಅಧ್ಯಕ್ಷರು ನಿರೂಪಿಸಿದ ಮೌಖಿಕ ಇತಿಹಾಸ
84. ಹಸನ್ ಅಹಮದ್ ಪಟೇಲ್, ವ್ಯವಸ್ಥಾಪಕ ಟ್ರಸ್ಟಿ ಜುಮಾ ಮಸ್ಜಿದ್ ಮಂಗಳೂರು, ನಿರೂಪಿಸಿದ ಮೌಖಿಕ ಇತಿಹಾಸ
85. ಅಬ್ದುಲ್ ಹಮೀದ್, ಜಿಲ್ಲಾ ಲೀಗ್ ಅಧ್ಯಕ್ಷರು ನಿರೂಪಿಸಿದ ಮೌಖಿಕ ಇತಿಹಾಸ
86. ವಿಕ್ಟರ್ ಡಿಸೋಜ, ದ ನವಾಯತ್ಸ್ ಆಫ್ ಕೆನರಾ, 1955, ಪುಟ 35
87. ಮೇಲಿನಂತೆಯೇ, ಪುಟ 13
88. ಮೇಲಿನಂತೆಯೇ ಪುಟ. 14
89. ಮೇಲಿನಂತೆಯೇ ಪುಟ. 19

90. ದ ಇಂಪೀರಿಯಲ್ ಗಜೆಟಿಯರ್ ಆಫ್ ಇಂಡಿಯಾ, ಸಂಚಿಕೆ 3, ಪುಟ 373
91. ಇ. ಥರ್ಸ್ಟನ್, ದ ಕಾಸ್ಟ್ಸ್ ಎಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ, ಸಂಚಿಕೆ 5, ಪುಟ 27
92. ವಿಕ್ಟರ್ ಡಿಸೋಜ, ದ ನವಾಯತ್ಸ್ ಆಫ್ ಕೆನರಾ, ಪುಟ. 24
93. ಮೈಸೂರ್ ಗಜೆಟಿಯರ್, ಸಂಪುಟ 1, ಪುಟ 331
94. ಇಲಿಯಟ್, ಹಿಸ್ಟರಿ ಆಫ್ ಇಂಡಿಯಾ, ಸಂಪುಟ 3, ಪುಟ. 90
95. ವಿಕ್ಟರ್ ಡಿಸೋಜ, ದ ನವಾಯತ್ಸ್ ಆಫ್ ಕೆನರಾ, ಪುಟ. 30
96. ಕೆ.ಕೆ. ಕುಡ್ವ, ದಕ್ಷಿಣ ಕನ್ನಡ ಚರಿತ್ರೆ (ಕನ್ನಡ) ಪುಟ. 137
97. ಅಬೂರೈಹಾನ್ ನೂರಿ, ಮೈಕಾಲ, (ಪುಟ. 24)
98. ಮೇಲಿನಂತೆಯೇ ಪುಟ. 24
99. ಹಾರೂನ್ ಸಾಹೇಬ್, ಮಂಗಳೂರು, ನಿರೂಪಿಸಿದ ಮೌಖಿಕ ಚರಿತ್ರೆ - ಗಮನಿಸಿ: ಜಿಲ್ಲೆಯಲ್ಲಿ ಸುಮಾರು ನಾಲ್ಕು ಅಸ್ಸಾದಿ ಕುಟುಂಬಗಳಿವೆ ಮತ್ತು ಕೆಲವು ಕುಟುಂಬಗಳು ಅಹಮದ್ ಎಂದೂ ಗುರುತಿಸಲ್ಪಟ್ಟಿವೆ. ಆದರೆ ಅವರ ಪೂರ್ವಜರ ಬಗ್ಗೆ ದಾಖಲೆ ಇಲ್ಲ.
100. ಕೈಫಿಯತ್ಸ್, ಮೆಕೆನ್ಜಿಯ ಸಂಗ್ರಹ, ಕುಶಾಲಪ್ಪ ಮತ್ತು ಚೆನ್ನಪ್ಪ ಗೌಡ ಅವರಿಂದ ಸಂಗ್ರಹಿತ, ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್‌ಗಳು, ಪುಟ. 21-22
101. ಕುರ್ಶೀದ್ ಹಸನ್ ಸಾಹೇಬ್ ನಿರೂಪಿಸಿದ ಮೌಖಿಕ ಇತಿಹಾಸ
102. ಮೊಹಮ್ಮದ್ ಹಾರೂನ್ ಸಾಹೇಬ್, ಮಂಗಳೂರು, ನಿರೂಪಿಸಿದ ಮೌಖಿಕ ಚರಿತ್ರೆ
103. ಸ್ಟುವರ್ಟ್, ಸೌತ್ ಕೆನರಾ ಮ್ಯಾನುವಲ್, ಸಂಚಿಕೆ 3, (ಟೇಬಲ್)
104. ಮೇಲಿನಂತೆಯೇ (ಟೇಬಲ್)
105. ಅಲಾವಿ ಅಂದರೆ ಕರ್ಬಲಾದ ಸ್ಮಾರಕ, ಖಿಡ್ಗ ಅಥವಾ ಕೃತಕ ಆಯುಧ ಇತ್ಯಾದಿ. ಪಂಜಾ ಅಂದರೆ ಮೆರವಣಿಗೆಯಲ್ಲಿ ಒಯ್ಯುವ ಪಂಜು.
106. ಇದಿನಬ್ಬ ಬ್ಯಾರಿ ಮೂಡಬಿದ್ರೆ ನಿರೂಪಿಸಿದ ಮೌಖಿಕ ಚರಿತ್ರೆ
107. ಅಬ್ದುಲ್ ರಹೀಮ್ ಮಂಗಳೂರು ನಿರೂಪಿಸಿದ ಮೌಖಿಕ ಇತಿಹಾಸ



ಅಧ್ಯಾಯ 2

ತುಳುನಾಡು ಜಿಲ್ಲೆಯ ಮುಸ್ಲಿಮರ ಇತಿಹಾಸ (ಕ್ರಿ.ಶ. 1800ರಿಂದ 1947)

ತುಳುನಾಡು ಪರಶುರಾಮ ಸೃಷ್ಟಿ ಎಂದು ಹೆಸರಾಗಿರುವ ಒಂದು ಸಾಂಪ್ರದಾಯಿಕ ಭೂಭಾಗ. ಪ್ರಸಿದ್ಧ ಮಲಯಾಳಂ ಕೃತಿಯಾಗಿರುವ ಕೇರಳೋಲ್ಪತ್ತಿ ಹಾಗೂ ಕೇರಳ ಮಹಾತ್ಮ್ಯಂನಲ್ಲಿ ಈ ಭೂಪ್ರದೇಶವನ್ನು ಮಲನಾಡಿನ ಭಾಗ ಎಂದು ಕರೆಯಲಾಗಿದೆ. ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ಇಡೀ ಪ್ರದೇಶವನ್ನೇ ಪರಶುರಾಮ ಸೃಷ್ಟಿ ಎಂದು ಬಣ್ಣಿಸಲಾಗಿದೆ. ತನ್ನ ತಾಯಿಯನ್ನು ಕೊಂದ ಪಾಪಕ್ಕೆ ಪರಿಮಾರ್ಜನೆಯಾಗಿ ಕ್ಷತ್ರಿಯರನ್ನು ಮೂಲೋತ್ಪಾಟ ಗೊಳಿಸುವಂತೆ ಪರಶುರಾಮ ಎಂಬ ಬ್ರಾಹ್ಮಣ ಸನ್ಯಾಸಿಯನ್ನು ಇತರ ಸನ್ಯಾಸಿಗಳು ಮನವೊಲಿಸಿದ್ದರು. ಪರಶುರಾಮನು ತನ್ನ ಗದೆಯನ್ನು ಗೋಕರ್ಣ ಮತ್ತು ಕನ್ಯಾಕುಮಾರಿಗುಂಟ ಇರುವ ಸಮುದ್ರಕ್ಕೆ ಎಸೆಯುವ ಮೂಲಕ ಆತ ಈ ಭೂಭಾಗವನ್ನು ಸೃಷ್ಟಿಸಿದ್ದು ತದನಂತರ ಬ್ರಾಹ್ಮಣರನ್ನು ಅಲ್ಲಿ ನೆಲೆಸುವಂತೆ ಆದೇಶಿಸಿದನು. ಪರಶುರಾಮನು ಬ್ರಾಹ್ಮಣರನ್ನು ಈ ಭಾಗಕ್ಕೆ ಕರೆತಂದು 64 ಗ್ರಾಮಗಳಲ್ಲಿ ನೆಲೆಗೊಳಿಸಿದನು ಎನ್ನಲಾಗುತ್ತದೆ.[1] ಈ ಮಲ್ನಾಡ್ ಪ್ರದೇಶವು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿತ್ತು.

1. ತುಳು ರಾಜ್ಯ[2] 2 ಕಾಪ್ ರಾಜ್ಯ[3] 3. ಕೇರಳಂ ರಾಜ್ಯ ಮತ್ತು 4. ಮುಶಿಕ್ಕ ರಾಜ್ಯ[4]. 64 ಗ್ರಾಮಗಳ ಪೈಕಿ 32 ಗ್ರಾಮಗಳು ತುಳು ಸಾಮ್ರಾಜ್ಯದಲ್ಲಿದ್ದವು ಎನ್ನಲಾಗಿದ್ದು ಇಲ್ಲಿ ನೆಲೆಸಿದವರನ್ನು ತುಳುವರೆಂದು ಕರೆಯಲಾಗುತ್ತಿತ್ತು. ಮಲೆನಾಡಿನ ಬ್ರಾಹ್ಮಣರು ತಮಗೆ ಬಾಣ ಪೆರುಮಾಳ್ ಎಂಬ ಒಬ್ಬ ಅರಸನನ್ನು ಆಯ್ಕೆ ಮಾಡಿಕೊಂಡರು. ಆತನನ್ನು ಕೊಡುಂಗಲ್ಲೂರಿನಲ್ಲಿ ಪ್ರತಿಷ್ಠಾಪಿಸಲಾಯಿತು. ಈ ಪೆರುಮಾಳ್ ರಾಜನು ಆಕಸ್ಮಿಕವಾಗಿ ಮುಸ್ಲಿಮರನ್ನು ಭೇಟಿಯಾದನು ಮತ್ತು ಮುಸ್ಲಿಮ್ ನಂಬಿಕೆಯನ್ನು ಅಪ್ಪಿಕೊಂಡನು. ಆತ ಬ್ರಾಹ್ಮಣರಿಗೂ ಇಸ್ಲಾಮ್ ಸ್ವೀಕರಿಸುವಂತೆ ಸಲಹೆ ಮಾಡಿದನು. ಆದರೆ ಬ್ರಾಹ್ಮಣರು ಹೊಸ ಪಂಥವನ್ನು

ಸಂವಾದದ ಮೂಲಕ ಎದುರಿಸಲು ತಮಗೆ ಅವಕಾಶ ನೀಡುವಂತೆ ರಾಜನ ಮನವೊಲಿಸುವಲ್ಲಿ ಯಶಸ್ವಿಯಾದರು. ಮಾಪಿಳ್ಳಗಳು ಸೋತರು ಮತ್ತು ಅವರನ್ನು ಹೊರದಬ್ಬಲಾಯಿತು. ಆದರೆ ಪೆರುಮಾಳ್ ಹಿಂದೂ ಧರ್ಮಕ್ಕೆ ವಾಪಸ್ ಬರಲಿಲ್ಲ. ''ಮುಸ್ಲಿಮ್ ಪಂಥವನ್ನು ತಾನು ಸ್ವೀಕರಿಸಿರುವುದರಿಂದ ಮುಕ್ತಿಗೆ ಬೇರೆ ಯಾವುದೇ ಮಾರ್ಗವಿಲ್ಲ'' ಎಂಬುದು ಆತನ ಸಬೂಬಾಗಿತ್ತು.

ಈ ಪ್ರದೇಶವು ಬ್ರಾಹ್ಮಣರಿಗೆ ಒಂದು ಉಡುಗೊರೆಯಾಗಿ ಪರಶುರಾಮನಿಂದ ದೊರೆತಿದೆ ಎಂದು ಚೆರುಮನ್ ಪೆರುಮಾಳ್ ತನ್ನ ಪ್ರಜೆಗಳನ್ನುದ್ದೇಶಿಸಿ ಹೇಳಿದನು. ''ನಾನು ಇದನ್ನು ಹಲವಾರು ವರ್ಷಗಳ ಕಾಲ ಅನುಭವಿಸಿದ್ದು ಪಾಪಗಳನ್ನು ಮಾಡಿದ್ದೇನೆ. ನಾನು ಈ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಹೇಗೆ?'' ಆರು ಶಾಸ್ತ್ರಗಳಲ್ಲಾಗಲೀ, ಮೂರು ವೇದ ಗಳಲ್ಲಾಗಲೀ ಪರಿಮಾರ್ಜನೆ ಸಾಧ್ಯವಿಲ್ಲ ಎಂದು ಉತ್ತರಿಸಿದ ಶಾಸ್ತ್ರಿಗಳು (ವಿದ್ವಾಂಸರು), ನಾಲ್ಕನೇ ವೇದದ ನೆರವು ಪಡೆಯುವಂತೆ ಸಲಹೆ ಮಾಡಿದರು. ಆತ ತನ್ನ ಮಂತ್ರಿ (ಪದ್ಮಲ್ ನಾಯರ್)ಯೊಡನೆ ಸಮಾಲೋಚನೆ ನಡೆಸಿದನು. ಮಂತ್ರಿಯು ಪವಾಡಸದೃಶ ರೀತಿಯಲ್ಲಿ ಸ್ವರ್ಗಕ್ಕೆ ಕರೆದೊಯ್ಯಲ್ಪಡುವುದನ್ನು ಕಂಡನು. ಇದರಿಂದ ಆಶ್ಚರ್ಯಚಕಿತನಾದ ಅರಸನು ಮಂತ್ರಿಯೊಡನೆ, ''ನಾನು ಶಾಶ್ವತ ಆತ್ಮಾನಂದ ಪಡೆಯುವುದು ಹೇಗೆ?'' ಎಂದು ಪ್ರಶ್ನಿಸಿದನು. ''ನೀನು ಮೊಹಮ್ಮಡನ್ (ಇಸ್ಲಾಮ್) ಅರ್ಥಾತ್ ಮಹಮದೀಯರೊಡನೆ ಸೇರಿಕೊಳ್ಳು. ಮಕ್ಕಾಕ್ಕೆ ಹೋಗು ಮತ್ತು ನಾಲ್ಕನೇ ವೇದದ ಗುಣದಿಂದ ಆತ್ಮಾನಂದ ಪಡೆ'' ಎಂದು ಮಂತ್ರಿ ಉತ್ತರಿಸಿದನು.

ಬನವಾಸಿಯ ಸ್ಥಳ ಮಹಾತ್ಮ್ಯಂ ಕೃತಿಯು ತುಳುನಾಡು ಮತ್ತು ಕೇರಳದ ಬ್ರಾಹ್ಮಣೀಕರಣವು ಕದಂಬ ಅರಸ ಮಯೂರವರ್ಮನಿಂದಾಯಿತು ಎಂದು ಉಲ್ಲೇಖಿಸಿದೆ. ಮಯೂರ ವರ್ಮನ ಪುತ್ರ ಚಂದ್ರಾಂಗದ ಭಾರಿ ಸಂಖ್ಯೆಯ ಬ್ರಾಹ್ಮಣರನ್ನು ಕರೆದು ಕೇರಳ, ತುಳುವ, ಹೈಗ, ಕೊಂಕಣ ಮತ್ತು ಕೊರೊಡಾದಲ್ಲಿ ನೆಲೆಯೂರಿಸಿದನು. ಮಯೂರ ವರ್ಮನು 32 ಬ್ರಾಹ್ಮಣ ಪರಿವಾರಗಳನ್ನು ಕರೆ ತಂದನು ಎಂಬ ಉಲ್ಲೇಖವಿದೆ. ತುಳುನಾಡು ಕದಂಬ ಸಾಮ್ರಾಜ್ಯದ ಭಾಗವಾಗಿತ್ತೆಂದೂ ಕೇರಳ ಆ ಸಾಮ್ರಾಜ್ಯದ ಭಾಗವಾಗಿರಲಿಲ್ಲವೆಂದೂ ಹೇಳಲಾಗುತ್ತದೆ. ಹೀಗಾಗಿ ಕದಂಬ ರಾಜನು ಬ್ರಾಹ್ಮಣರನ್ನು ತುಳುನಾಡಿನಲ್ಲಿ ನೆಲೆಯೂರಿ ಸಿದನು.[5] ಆದರೆ ತುಳುನಾಡಿನ ಬ್ರಾಹ್ಮಣರು ಕಾಲಕ್ರಮೇಣ ಕೇರಳದವರೆಗೆ ಹಬ್ಬಿಕೊಂಡಿರುವ ಸಾಧ್ಯತೆಯೂ ಇದೆ. ಕೇರಳೋಳ್ಪತ್ತಿ ಕೃತಿಯಲ್ಲಿ ಅವರು ಮಲಬಾರಿನಿಂದ ತುಳುನಾಡಿಗೆ ಹಬ್ಬಿದರು ಎಂದು ಉಲ್ಲೇಖಿಸುತ್ತದೆ. ಚೆರುಮನ್‌ನ ರಾಜ್ಯದಲ್ಲಿ ಉದಯವರ್ಮ ಕೊಲಾತ್ರಿ ತನ್ನ ಸೋದರ ಕವಿಸಿಂಹ ವೆರು ಎಂಬಾತನನ್ನು ತುಳುನಾಡಿನ ರಕ್ಷಣೆಗಾಗಿ ನಾಲ್ವರು ಅಧಿ ಪತಿಗಳೊಂದಿಗೆ ಕಳುಹಿಸಿಕೊಟ್ಟನು. ಇವರೆಂದರೆ – ಪಾರಪ್ಪನ್ (ನಂದಾವರದ ಬಂಗಾಗಳು), ಅಜಿಲರ್, ಮೂಡಬಿದ್ರೆಯ ಸವಿತಾರ್ ಚೌಟಗಳು ಮತ್ತು ಮೂಲ್ಕಿಯ ಸಾವಂತರು.[6] ತುಳುನಾಡಿನಲ್ಲಿ ಪೆರುಮಾಳ್ ಅರಸರ ಆಳ್ವಿಕೆಯಿದ್ದುದರಿಂದ ಮಾಲಿಕ್ ಬಿನ್ ದೀನಾರ್ ನೇತೃತ್ವದಲ್ಲಿ ಪೆರುಮಾಳ್‌ರ ಇಸ್ಲಾಮ್ ಸಂದೇಶ ಪ್ರಚಾರ ತಂಡಕ್ಕೆ ಸೌತ್ ಕೆನರಾದಲ್ಲಿ ಆತಿಥ್ಯ ಸಿಕ್ಕಿತು. ಅವರು ಬಾರ್ಕೂರು, ಮಂಗಳೂರು ಮತ್ತು ಕಾಸರಗೋಡಿನಲ್ಲಿ ಇಸ್ಲಾಮ್

ಪ್ರತಿಷ್ಠಾಪಿಸಿದರು. ಇಸ್ಲಾಮ್‌ನ ಪ್ರಭಾವದ ಕುರಿತ ಈ ಐತಿಹ್ಯಕ್ಕೆ ಯಾವುದೇ ಭೌತಿಕ ಸಾಕ್ಷ್ಯಾಧಾರಗಳಿಲ್ಲ. ಅಷ್ಟೇ ಅಲ್ಲ ಕ್ರೊನಲಾಜಿಕಲ್ ಸಮರ್ಥನೆಯೂ ಸಿಗುವುದಿಲ್ಲ. ಇಸ್ಲಾಮಿಕ್ ಮಿಷನ್‌ನ ಬಗ್ಗೆ ಕೇರಳೋಳ್ಪತ್ತಿಯ ಆಧಾರದಲ್ಲಿ ತುಹ್‌ಫತುಲ್ ಮುಜಾಹಿದೀನ್ ಒಂದು ಇಸ್ಲಾಮೀ ವಿವರಣೆಯನ್ನು ನೀಡುತ್ತದೆ.[7] ಆದರೆ ಅದು ಬ್ರಾಹ್ಮಣರ ಪ್ರಭುತ್ವದ ಬಗ್ಗೆ ಹೆಚ್ಚು ನಿಖರವಾದ ವಿವರಣೆಯನ್ನು ನೀಡುತ್ತದೆ ಮತ್ತು ತುಳುನಾಡಿನಲ್ಲಿ ಜಾತೀಯತೆ ಇತ್ತೆಂಬುದನ್ನು ತೋರಿಸುತ್ತದೆ. ಬ್ರಾಹ್ಮಣರನ್ನು ಇಲ್ಲಿಗೆ ಪರಶುರಾಮ ಅಥವಾ ಮಯೂರವರ್ಮ ಕರೆದುಕೊಂಡು ಬಂದ ಎಂಬ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಹರಿಜನರು, ಕೊರಗರು, ಬಿಲ್ಲವರು ಮತ್ತು ನಾಡವರನ್ನು ದಮನಕ್ಕೊಳಪಡಿಸಿ ಕೆಳಜಾತಿಗೆ ತಳ್ಳಲಾಯಿತು. ಈ ಸಾಮಾಜಿಕ ವಾಸ್ತವದ ಕಾರಣದಿಂದಾಗಿ ಮುಸ್ಲಿಮರು ಈ ಪ್ರದೇಶದ ಪ್ರಮುಖ ಸಮುದಾಯವಾಗಿ ಮಾರ್ಪಟ್ಟರು. ಹಳೆಯ ಭೂಮಾಲಿಕರು ಮಿಲಿಟರಿ ವರ್ಗ ಮತ್ತು ಅವರ ಪುರೋಹಿತಶಾಹಿ ಮಿತ್ರರ ಕಟ್ಟಾ ಗುಲಾಮರಾಗಿ ಮಾರ್ಪಟ್ಟರು. ಇದರ ನಡುವಿನ ಸ್ಥಾನವನ್ನು ಕುಶಲಕರ್ಮಿಗಳು ಮತ್ತು ಬಿಲ್ಲವರು ಭರ್ತಿಗೊಳಿಸಿದರು.[8] ಸಾಮಾಜಿಕ ಅಸಮಾನತೆಗಳಿಗೆ ಇಸ್ಲಾಮಿನ ಮೂಲಕ ಒಂದು ಪರಿಹಾರ ಸಿಕ್ಕಂತಾಯಿತು. ಇಸ್ಲಾಮಿನ ಬೆಳವಣಿಗೆಯೊಂದಿಗೆ ಮುಸ್ಲಿಮರು ತುಳುನಾಡಿನಲ್ಲಿ ತಮ್ಮದೇ ಆದ ಸ್ಥಾನವನ್ನು ಗಿಟ್ಟಿಸಿಕೊಂಡರು.

1. ಹಂಜಮನ್‌ಗಳು (ಅಂಜುಮನ್‌ಗಳು)

ತುಳುನಾಡಿನ ಪರಂಪರೆಯಲ್ಲಿ ಜೈನ ಬಲ್ಲಾಳರು ಮತ್ತು ಹೆಗ್ಗಡೆಗಳು ದಕ್ಖನದಿಂದ ಕರಾವಳಿಯವರೆಗೆ ಹಬ್ಬಿಕೊಂಡಿರುವ ಬಗ್ಗೆ ಪ್ರಸ್ತಾಪವಿದೆ. ಒಂದು ಸಾವಿರನೇ ಇಸವಿಯ ವೇಳೆಗೆ ಜೈನರು ದಕ್ಖನದಿಂದ ಕರಾವಳಿ ಪ್ರದೇಶಕ್ಕೆ ವಲಸೆ ಬಂದರು. ಅವರು ಒಂದು ರೀತಿಯ ಜಹಗೀರ್ದಾರಿ ಪ್ರವೃತ್ತಿಯವರಾಗಿದ್ದರು. ಮಣ್ಣಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಸ್ಥಾಪಿಸಿದರು. ಪ್ರತಿ ಕುಟುಂಬವೂ ಬಲ್ಲಾಳ್ ಅಥವಾ ಹೆಗ್ಗಡೆ ಎಂದು ಕರೆಯಲ್ಪಡುತ್ತಿತ್ತು ಮತ್ತು ಅವರು ಮಾಗಣೆಯ ದಣಿಗಳಾಗಿದ್ದರು. ಪ್ರತಿ ಕುಟುಂಬಕ್ಕೆ ಸಹಾಯ ಮಾಡಲು ಒಬ್ಬ ಬಾವಾ, ಮೂರು ಬಾಲಿಕೆ ಮತ್ತು ನಾಲ್ಕು ಪರಾರಿಗಳಿದ್ದರು. ಚಾಲುಕ್ಯರ ಆಡಳಿತ ಕಾಲದಲ್ಲಿ ಭೂಮಿಯನ್ನು ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯಾಗಿ ಪರಿವರ್ತಿಸಲು ಬಳಸಲಾಗಿತ್ತು. ಬಾರಕೂರು ವಿಭಾಗದಲ್ಲಿ ಹಾನೆಹಳ್ಳಿ, ದೊಡ್ಡಮನೆ, ನಡುಮನೆ ಮತ್ತು ಪಡುಮನೆ; ಮಂಗಳೂರಿನಲ್ಲಿ ಕೊಡಿಯಾಲ್‌ಗುತ್ತು, ಗುಡ್ಡೆಗುತ್ತು ಮತ್ತು ಬಡಗಗುತ್ತು ಪ್ರಮುಖ ಜೈನ ವಸತಿ ಕೇಂದ್ರಗಳಾಗಿದ್ದವು. ಪ್ರತಿಯೊಂದು ತಾಲೂಕಿನಲ್ಲೂ ಹಲವು ಕುಟುಂಬಗಳು ನೆಲೆಯೂರಿದವು ಮತ್ತು ಮಾಗಣೆಯ ಪ್ರಭುಗಳಾಗಿ ಅಧಿಕಾರ ವಹಿಸಿಕೊಂಡವು. ಮಂಗಳೂರು ಮತ್ತು ಉಪ್ಪಿನಂಗಡಿ ತಾಲೂಕಿನಲ್ಲಿ ತಲಾ 22, ಕಾರ್ಕಳ ಮತ್ತು ಉಡುಪಿ ತಾಲೂಕಿನಲ್ಲಿ ತಲಾ 11, ಕಾಸರಗೋಡು ತಾಲೂಕಿನಲ್ಲಿ ನಾಲ್ಕು ಮನೆಗಳಿದ್ದವು.[9] ಕಾಸರಗೋಡಿನಲ್ಲಿ ವರ್ಕಾಡಿ ಬಲ್ಲಾಳರು, ಮಂಜೇಶ್ವರ ಬಲ್ಲಾಳರು ಮತ್ತು ತೆಂಕುಂಬಾಳೆ ಅಡ್ಕ ಹೆಗ್ಗಡೆಗಳು ಪ್ರಭು

ಗಳಾಗಿದ್ದರು. ಉಡುಪಿ ತಾಲೂಕಿನಲ್ಲಿ ಚಿತ್ಪಾಡಿ ಬಲ್ಲಾಳ ಎಂಬ ಬ್ರಾಹ್ಮಣ ಬಲ್ಲಾಳ ಇದ್ದನು. ಅಧಿಕಾರಿಗಳು, ಬಾವಾಗಳು ಮತ್ತು ಪರಾರಿಗಳನ್ನು ಬಂಟರು ಮತ್ತು ಬ್ಯಾರಿಗಳ ಪೈಕಿಯಿಂದ ಆಯ್ದುಕೊಳ್ಳಲಾಗುತ್ತಿತ್ತು. ಈ ಜಹಗೀರ್ದಾರಿ ವ್ಯವಸ್ಥೆಯ ಬೆಳವಣಿಗೆಯಿಂದಾಗಿ ಪಾಶ್ಚಾತ್ಯ ಸಮಾಜದಲ್ಲಿ ನಡೆದಂತೆ ಇಲ್ಲಿಯೂ ಆಡಳಿತ ವರ್ಗವು ಇವರನ್ನು ನೆಚ್ಚಿಕೊಳ್ಳುವಂತಾಯಿತು. ಜೈನ ಕುಟುಂಬಗಳ ಈ ಸಕ್ರಿಯ ವೃತ್ತಿಯಿಂದಾಗಿ ತುಳುನಾಡಿನಲ್ಲಿ ಭಾರಿ ಸಂಖ್ಯೆಯ ಪಟ್ಟಣಗಳು ನಿರ್ಮಾಣಗೊಂಡವು. ಬಾರ್ಕೂರು ನಗರ ಮತ್ತು ಮಂಗಳೂರು ನಗರದಲ್ಲಿ ತಲಾ 16 ಪಟ್ಟಣಗಳಿದ್ದವು. ಜೈನರಿಗೆ ನಗರಗಳೆಂದರೆ ಒಂದು ಸಾಮ್ರಾಜ್ಯವಿದ್ದಂತೆ. ಬಾರ್ಕೂರು ನಗರದ ಪಟ್ಟಣಗಳು ಈ ಕೆಳಗಿನಂತಿವೆ:

1. ಬಾರ್ಕೂರು
2. ಬಸ್ರೂರು
3. ಮುದ್ರಾಡಿ
4. ಸುರಲ್
5. ಉಡುಪಿ
6. ಕಾರ್ಕಳ
7. ಮೂಡಬಿದ್ರೆ
8. ಪಡುಬಿದ್ರೆ
9. ಕಾಪು
10. ನಾರಾವಿ
11. ನೆಲಿಕಾರ್
12. ಬಂಗಾಡಿ
13. ಎರ್ಮಾಳ್
14. ಬೈಲಂಗಡಿ
15. ವೇಣೂರು
16. ಮುಂಡ್ಕೂರು

ಮಂಗಳೂರು ನಗರದಲ್ಲಿದ್ದ ಪಟ್ಟಣಗಳು

1. ಮೂಲ್ಕಿ
2. ಒಳಲಂಕೆ
3. ಪಣಂಬೂರು
4. ಅಳಪೆ
5. ಮಣೇಲ್
6. ಮಂಗಳೂರು
7. ಬಂಟ್ವಾಳ
8. ಪಾಣೆಮಂಗಳೂರು
9. ವಿಟ್ಲ
10. ನೆರಾಂಕಿ
11. ಮಾರ್ದಲ
12. ಕಡಬ
13. ಸುಳ್ಯ
14. ಮಂಜೇಶ್ವರ
15. ಕಾಸರಗೋಡು
16. ಉಳ್ಳಾಲ

ಈ ಪಟ್ಟಣಗಳಲ್ಲದೆ ಕಾಲಾನುಕ್ರಮದಲ್ಲಿ ಪಂಜ, ಬೆಳ್ಳಾರೆ, ಉಪ್ಪಿನಂಗಡಿ, ಕಬಕ, ಕುಂಬಳೆ ಮತ್ತಿತರ ಕಡೆಗಳಲ್ಲಿ ಹೊಸ ಬಡಾವಣೆಗಳು ಅಸ್ತಿತ್ವಕ್ಕೆ ಬಂದವು.[10] ಜೈನರ ಜಹಗೀರು ದಾರಿ ವ್ಯವಸ್ಥೆಯು ಈ ಮುಸ್ಲಿಮ್ ವಸತಿ ತಾಣಗಳಿಗೆ ನೇರವಾಗಿ ಸಹಕಾರಿಯಾಯಿತು. ವರ್ತಕರೂ ಆಗಿದ್ದ ಜೈನರು ಬಂಗಾರ, ರತ್ನ ವಜ್ರ ಮತ್ತಿತರ ಅಮೂಲ್ಯ ವಸ್ತುಗಳ ವ್ಯಾಪಾರ ನಡೆಸುತ್ತಿದ್ದರು. ಹೀಗಾಗಿ ಅರಬರಿಗೆ ಈ ಜೈನ ಸೆಟ್ಟಿ ಮತ್ತು ಬಲ್ಲಾಳರೊಂದಿಗೆ ನಿಕಟ ಸಂಪರ್ಕ ಇತ್ತು. ಕರಾವಳಿ ಜಿಲ್ಲೆಯಲ್ಲಿ ಒಂದು ವರ್ತಕ ಸಮುದಾಯವಾಗಿ ಇಸ್ಲಾಮ್ ಪ್ರವೇಶಿಸುವುದ ರೊಂದಿಗೆ ಜೈನರು ಮತ್ತು ಮುಸ್ಲಿಮರು ಸಹಜವಾಗಿಯೇ ವ್ಯಾಪಾರದತ್ತ ಆಕರ್ಷಿತರಾದರು. ಅರಬ್ ವರ್ತಕರು ಮತ್ತು ಜೈನ ವ್ಯಾಪಾರಿಗಳ ನಡುವೆ ಬ್ಯಾರಿಗಳು ಮಧ್ಯವರ್ತಿಗಳಾಗಿ ಕೆಲಸ ನಿರ್ವಹಿಸಿದರು. ಬ್ಯಾರಿಗಳು ಒಂದು ವರ್ತಕ ಸಮುದಾಯವಾಗಿ ಅಭಿವೃದ್ಧಿ ಹೊಂದಿದ್ದು ಜೈನರಿಗೂ ಅನುಕೂಲವಾಯಿತು. ಕೆಳಜಾತಿಯ ಜನರು ಅಸ್ಪೃಶ್ಯರಾಗಿದ್ದರಿಂದ ಜೈನ ಪ್ರಭು ಗಳಿಗೆ ಅಗತ್ಯ ಮಾನವ ಸಂಪನ್ಮೂಲವೂ ದೊರೆತಿತು.

ಜೈನ ವರ್ತಕರ ವ್ಯಾಪಾರಿ ಒಕ್ಕೂಟಗಳು ಹಂಜಮಾನದ ಮುಸ್ಲಿಮರ ಮಧ್ಯೆ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಜೈನ ವರ್ತಕರ ಒಕ್ಕೂಟಗಳು ಸೆಟ್ಟಿಕಾರ ಸಂಘಗಳೆಂದು ಹೆಸರಾಗಿದ್ದವು. ಬಾರ್ಕೂರು, ಮೂಡಬಿದ್ರೆ, ವೇಣೂರು ಮತ್ತಿತರ ಪಟ್ಟಣ ಗಳಲ್ಲಿ ವರ್ತಕರ ಸಂಘಗಳು ಅಸ್ತಿತ್ವದಲ್ಲಿದ್ದವು. ಸೆಟ್ಟಿಕಾರ ಸಂಘಗಳಂತೆಯೇ ಮುಸ್ಲಿಮರ ಹಂಜಮಾನಗಳು ಕೂಡಾ ಸ್ಥಳೀಯ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಜೈನ ಸೆಟ್ಟಿಕಾರ ಸಂಘಗಳಂತೆಯೇ ಹಂಜಮಾನಗಳು ಮಂಗಳೂರು, ಬಾರ್ಕೂರು ಮತ್ತು ಬಸ್ರೂರು ಗಳ ಮೇಲೆ ನಿಯಂತ್ರಣ ಹೊಂದಿದ್ದವು. ಪೋರ್ಚುಗೀಸರ ಆಗಮನವಾಗುವವರೆಗೂ ಅವು ಅತ್ಯಂತ ಶಕ್ತಿಶಾಲಿ ವರ್ತಕ ಒಕ್ಕೂಟಗಳಾಗಿದ್ದವು. ಅವುಗಳಿಗೆ ಸ್ಥಳೀಯ ಮುಖ್ಯಸ್ಥರೊಂದಿಗೆ ನಿಕಟ ಸಂಬಂಧವಿತ್ತು. ಬಾರ್ಕೂರಿನಲ್ಲಿ ದೊರೆತ ಒಂದು ಶಿಲಾಶಾಸನದ ಪ್ರಕಾರ ವೀರ ಜಗದೇವ ಪಟ್ಟಮಹಾದೇವಿ ಮತ್ತು ಪಾಂಡ್ಯ ದೇವರಸ (ಅಲುಪಾ ಮುಖ್ಯಸ್ಥರ ಪೈಕಿ ಒಬ್ಬ) ಬಾರ್ಕೂರಿನಲ್ಲಿ ಮಹದೇವನಿಗೆ ಧಾರ್ಮಿಕ ಅರ್ಚನೆಗಳನ್ನು ಸಲ್ಲಿಸಲು ಒಂದು ತುಂಡು ಜಮೀನನ್ನು ಉಂಬಳಿ ನೀಡಿದ್ದರು. ಈ ದಾನವು ಹಂಜಮಾನರ (ಹಂಜಮಾನದ ಹಾಲರು ಮತ್ತು ಸಮರ್ಥ ಹಾಲರು)[11] ಸಮಕ್ಷಮದಲ್ಲೇ ನಡೆದಿತ್ತು. ಬಾರಕೂರಿನ ಮಹದೇವ ದೇವರಿಗೆ ಕಾಣಿಕೆಯಾಗಿ ವೀರ ಜಗದೇವ ಪಟ್ಟ ಮಹಾದೇವಿ ಮತ್ತು ಪಾಂಡ್ಯ ದೇವರಸ (ಅಲುಪ ಅರಸ) ಭೂಮಿ ನೀಡಿದ ವಿವರ ತಿಳಿಸಿದೆ.[12] ಹಂಜಮಾನರು ಸಮಾಜದ ಒಂದು ಪ್ರಮುಖ ಘಟಕವಾಗಿದ್ದರಿಂದ ಎಲ್ಲ ಪ್ರಮುಖ ಸಮಾರಂಭಗಳಿಗೂ ಚಟುವಟಿಕೆಗಳಿಗೂ ಆಡಳಿತಗಾರರು ಅವರನ್ನು ಆಹ್ವಾನಿಸುತ್ತಿದ್ದರು. ಮಂಗಳೂರಿನ ಮುಸ್ಲಿಮರ ವ್ಯಾಪಾರಿ ಘಟಕ ವನ್ನು ಹಂಜಮಾನರು (ಅಂಜುಮನ್) ಎಂದೇ ಕರೆಯಲಾಗುತ್ತಿತ್ತು.[13] ಹಂಜಮಾನ ಎಂದರೆ ಅಂಜುಮನ್ ಎಂಬ ಪದದ ಅಪಭ್ರಂಶ. ಸಂಘ, ಕ್ಲಬ್, ಸೊಸೈಟಿ ಅಥವಾ ಗಿಲ್ಡ್ ಎಂಬ ಅರ್ಥವೂ ಅದಕ್ಕಿದೆ. ಅಂಜುಮನ್ ಎಂಬುದು ಸಂಘಕ್ಕೆ ಇರುವ ಅತ್ಯಂತ ಜನಪ್ರಿಯ ಪರ್ಯಾಯ ಪದವಾಗಿದ್ದು ಮುಸ್ಲಿಮರ ಮಧ್ಯೆ ಇಂದಿಗೂ ಹಲವು ಅಂಜುಮನ್‌ಗಳು ಅಸ್ತಿತ್ವದಲ್ಲಿವೆ. ಕ್ರಿ.ಶ. 1419ರ ಮಂಗಳೂರು ಶಿಲಾಶಾಸನವು ಹಂಜಮಾನ್‌ಗಳಿಗೆ ಸೇರಿದ ಐದು ಮಸೀದಿಗಳನ್ನು ಅಂದಿನ ಮಂಗಳೂರು ರಾಜ್ಯದ ಗವರ್ನರ್ ಧ್ವಂಸಗೊಳಿಸಿದ ಬಗ್ಗೆ ಪ್ರಸ್ತಾಪಿಸುತ್ತದೆ. ಹಂಜಮಾನ್‌ಗಳು ಈ ಬಗ್ಗೆ ಆಡಳಿತಗಾರನಿಗೆ ದೂರು ನೀಡಿರುವಂತಿದೆ. ವಿಜಯನಗರದ ರಾಜನು ಈ ವಿಷಯದ ಬಗ್ಗೆ ತನಿಖೆ ನಡೆಸಲು ಬೈಚಪ್ಪ ದನನಾಯಕನನ್ನು ಕಳುಹಿಸಿಕೊಟ್ಟನು ಮತ್ತು ಹಂಜಮಾನ್‌ಗಳಿಗೆ ಅನ್ಯಾಯವಾಗಿರುವುದನ್ನು ಕಂಡುಕೊಂಡನು. ಅಷ್ಟೇ ಅಲ್ಲ ಮಸೀದಿಗಳನ್ನು ಮತ್ತೆ ನಿರ್ಮಿಸಿ ಕೊಡುವಂತೆಯೂ ಆದೇಶಿಸಿದ್ದನು ಎಂದು ಶಿಲಾಶಾಸನ ಉಲ್ಲೇಖಿಸಿದೆ. ಇಷ್ಟೇ ಅಲ್ಲದೆ, ಬೈಚಪ್ಪ ದನನಾಯಕನು ಜಮಾಅತ್ ಮಸೀದಿಗೆ 50 ಮುಡಿ ಭತ್ತ ಬೆಳೆಯುವಷ್ಟು ವಿಶಾಲವಾದ ಜಮೀನನ್ನು ಮಂಗಳೂರಿನಲ್ಲಿ ದಾನ ಮಾಡಿದನು. ಕ್ರಿ.ಶ. 926ರ ರಾಷ್ಟ್ರಕೂಟ ವಂಶಕ್ಕೆ ಸೇರಿದ ಮೂರನೇ ಇಂದ್ರರಾಜನ ಕಾಲದ ಚಿಂಚಣಿ ತಾಮ್ರ ಪತ್ರವು ತಾಜೇಕ ಮಧುಮತ (ಮಹಮ್ಮದ್) ಎಂಬಾತನು ಪಶ್ಚಿಮ ಕರಾವಳಿಯ ಸಾಮ್ಯ ಮಂಡಳದ ಆಡಳಿತದೊಳಕ್ಕೆ ಅತ್ಯಂತ ತಂತ್ರಗಾರಿಕೆಯಿಂದ ಸೇರ್ಪಡೆ ಗೊಂಡು ಸಾಗರತಟದ ದೊರೆಯನ್ನು ಸೋಲಿಸಿ ಕೃಷ್ಣರಾಜನ ಕೃಪೆಗೆ ಪಾತ್ರನಾದನು.[14]

ಪ್ರಯಾಣಿಕರಿಗೆ ಭೋಜನಶಾಲೆ ಮತ್ತು ಸಮುದ್ರದ ಖಾರಿಯನ್ನು ದಾಟಲು ದೋಣಿ ಸಂಚಾರ ಸ್ಥಾಪಿಸುವುದು ಮುಂತಾದ ಕಲ್ಯಾಣಕಾರಿ ಕ್ರಮಗಳ ಮೂಲಕ ಮಹಮ್ಮದ್ ಪ್ರಸಿದ್ಧನಾದನು. ಮುಸ್ಲಿಮರಿಗೆ ರಾಷ್ಟ್ರಕೂಟ ದೊರೆಗಳು ನೀಡಿದ ಪ್ರೋತ್ಸಾಹಗಳ ಬಗ್ಗೆ ಸುಲೈಮಾನ್, ಅಬೂ ಇಷಕಲ್ ಇಸ್ತಕಾರಿ ಹಾಗೂ ಇಬ್ನ್ ಹೌಕಲ್ ಎಂಬ ಅರಬ್ ಪ್ರವಾಸಿಗರು ದಾಖಲಿಸಿದ್ದಾರೆ.[15] ಕ್ರಿ.ಶ. 1405ರಲ್ಲಿ ಬಾರ್ಕೂರಿನಲ್ಲಿ ದೊರೆತ ಇನ್ನೊಂದು ಶಿಲಾಶಾಸನವು ಬಾರ್ಕೂರಿನ ಗವರ್ನರ್ ಸೆಟ್ಟಿಕಾರ ಹಾಲರ ಕಚೇರಿ ಮತ್ತು ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸಿದ್ದ ಎಂದು ಉಲ್ಲೇಖಿಸಿದೆ. ನಖಿರಾ ಹಂಜಮಾನವು ಸೆಟ್ಟಿಕಾರ ಹಲರ ವ್ಯಾಪ್ತಿಗೆ ಸೇರಿತ್ತು. ಇದರ ಬಗ್ಗೆ ರಾಜ ಎರಡನೆಯ ಬುಕ್ಕನಿಗೆ ಮನವಿಯನ್ನು ಸಲ್ಲಿಸಲಾಗಿತ್ತು. ಆತ ಮಹಾಪ್ರಧಾನ ಬಚಹನ್ನನಿಗೆ ಈ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಿದ್ದ. ಅಂತೆಯೇ ಮಹಾಪ್ರಧಾನ ಬಚಹನ್ನ ಬಾರ್ಕೂರಿಗೆ ಭೇಟಿ ನೀಡಿ ವಿಚಾರಣೆಯನ್ನು ನಡೆಸಿದ. ಆತ ಫಿರ್ಯಾದಿದಾರರಿಗೆ ಪರಿಹಾರಕ್ಕೆ ವ್ಯವಸ್ಥೆ ಮಾಡಿದ.[16] ಕ್ರಿ.ಶ. 1474ರಲ್ಲಿ ನಖಿರಾ ಹಂಜಮಾನ ಮತ್ತು ಸೆಟ್ಟಿಕಾರ ಸಂಘ ಒಂದು ಕಕ್ಷಿಯಾಗಿಯೂ ನಿಡುಂಬೂರು ಮುಡಿಲಾಗಳು ಮತ್ತು ಆರು ಬಲ್ಲಾಳರು ಇನ್ನೊಂದು ಕಕ್ಷಿಯಾಗಿಯೂ ಇರುವಂತೆ ಒಡಿಯೂರಿನ ಜಮೀನಿಗೆ ಸಂಬಂಧಿಸಿದಂತೆ ಇದ್ದ ವ್ಯಾಜ್ಯವನ್ನು ಬಾರ್ಕೂರಿನ ಗವರ್ನರ್ ಹಂಜಮನ್ ಅವರ ಪರವಾಗಿ ಇತ್ಯರ್ಥಪಡಿಸಿದ್ದನು.[17] ಈ ಎಲ್ಲ ಶಿಲಾಶಾಸನಗಳಿಂದ ಹದಿನಾರನೇ ಶತಮಾನದ ವೇಳೆಗೆ ಮುಸ್ಲಿಮರು ಮಂಗಳೂರು, ಭಟ್ಕಳ ಮತ್ತು ಹೊನ್ನಾವರಗಳಲ್ಲಿ ವ್ಯಾಪಾರಕ್ಕೆ ಸಂಬಂಧಿಸಿ ಮೇಲುಗೈ ಸಾಧಿಸಿದ್ದರು ಎಂಬುದು ವ್ಯಕ್ತವಾಗುತ್ತದೆ.[18] ಹಂಜಮಾನರು ಪ್ರಮುಖ ವ್ಯಾಪಾರಿ ಸಂಘವಾಗಿ ಮಾರ್ಪಟ್ಟರು ಮತ್ತು ಅಂದಿನ ಆಡಳಿತಗಾರರು ಕೂಡಾ ಅವರ ಮೇಲೆ ಭಾರಿ ತೆರಿಗೆ ಹಾಕಿದ್ದರು. ಜತೆಗೆ ಮುಸ್ಲಿಮ್ ನಿವಾಸಿಗಳಿಂದ ಅವರಿಗೆ ಗೌರವವೂ ಪ್ರಾಪ್ತವಾಗಿತ್ತು. ಪಳ್ಳಿ ಮರ್ಯಾದೆ ಎಂಬ ವಿಶೇಷ ನಿಧಿಯನ್ನು ಮಸೀದಿಗಳಿಗೆ ನೀಡಲಾಗಿತ್ತು.[19] ಕ್ರಿ.ಶ. 1565ರಲ್ಲಿ ಬಾರ್ಕೂರಿನಲ್ಲಿ ದೊರೆತ ಶಿಲಾಶಾಸನವು ಈ ಅಂಶವನ್ನು ಪುಷ್ಟೀಕರಿಸುತ್ತದೆ. ಬಸ್ರೂರಿನ ಹಂಜಮಾನರು ತಮ್ಮ ಮೇಲಿನ ತೆರಿಗೆಯನ್ನು ಬಂಗಾರದ ರೂಪದಲ್ಲಿ ಕೊಡಲು ಸಾಧ್ಯವಾಗದಿದ್ದಾಗ ಅವರು ತಮ್ಮ ಬಳಿಯಿದ್ದ ಪಳ್ಳಿ ಮರ್ಯಾದೆಯನ್ನು ಹಿಂದಿರುಗಿಸಿದ್ದರು ಎಂದು ಶಿಲಾಶಾಸನವು ಹೇಳುತ್ತದೆ. ಈ ತೆರಿಗೆಗಳ ಮೂಲಕ ಹಂಜಮಾನಗಳು ರಾಜ್ಯದ ಬೊಕ್ಕಸಕ್ಕೆ ಕೊಡುಗೆ ನೀಡಿದ್ದವು.

ಇತರರೊಂದಿಗೆ ಬ್ಯಾರಿಗಳು ಹೊಂದಿದ್ದ ಉತ್ತಮ ಸಾಮಾಜಿಕ ಸಂಬಂಧವನ್ನು ಪಾಡ್ದನಗಳು ಎತ್ತಿ ತೋರಿಸುತ್ತವೆ. ಬ್ಯಾರಿಗಳು ಅವರೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದರು ಮತ್ತು ಅವರ ಧಾರ್ಮಿಕ ಹಬ್ಬಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರು ಹೊಂದಿದ್ದ ಸಾಮಾಜಿಕ ಸ್ಥಾನಮಾನದಿಂದಾಗಿ ಎಲ್ಲರೂ ಅವರನ್ನು ಇಷ್ಟಪಡುತ್ತಿದ್ದರು. ಮಂಜೇಶ್ವರದ ಸಮೀಪದ ಉದ್ಯಾವರ ಅರ್ಥಾತ್ ಉದ್ಯಾರದಲ್ಲಿ ಪ್ರತಿ ವರ್ಷ ಉದ್ಯಾರದ ದೈಯಂಗಳ ಗೌರವಾರ್ಥ ಭೂತನೃತ್ಯವನ್ನು ಏರ್ಪಡಿಸಲಾಗುತ್ತಿತ್ತು.[20] ಗುಡಿಗಾಗಿ ಜಮೀನು ನೀಡಿದ ಮುಸ್ಲಿಮನಿಗೆ ಆ ಭೂತವು ಆಶ್ವಾಸನೆಯನ್ನು ನೀಡುತ್ತಿತ್ತು.[21] ಮೂಲ್ಕಿಯ ಬಪ್ಪನಾಡಿನಲ್ಲಿ ಬಪ್ಪ ಬ್ಯಾರಿಯ (ದುರ್ಗಾ ಪರಮೇಶ್ವರಿ ಮಂದಿರದ ನಿರ್ಮಾತೃ ಎನ್ನಲಾದ ವ್ಯಕ್ತಿ) ವಂಶಸ್ಥರಿಗೆ ಈಗಲೂ ಪ್ರತಿ ವರ್ಷ ದೇವಸ್ಥಾನದ ಪ್ರಸಾದವನ್ನು ನೀಡಲಾಗುತ್ತದೆ. ಕುಂಬಳೆಯ ಅರಿಕ್ಕಾಡಿಯಲ್ಲಿ ಆಲಿ

ಭೂತ ಹಬ್ಬದ ಸಂದರ್ಭದಲ್ಲಿ ಮುಸ್ಲಿಮ್ ಮುಖ್ಯಸ್ಥರ ಉಪಸ್ಥಿತಿಯು ಒಂದು ಸಂಪ್ರದಾಯವಾಗಿ ಮುಂದುವರಿದುಕೊಂಡು ಬಂದಿದೆ. ಇಂತಹ ನೂರಾರು ಉದಾಹರಣೆಗಳು ಜಿಲ್ಲೆಯ ವಿವಿಧ ಕಡೆಗಳಲ್ಲಿ ಈಗಲೂ ಕಂಡುಬರುತ್ತದೆ. ಬ್ಯಾರಿಗಳು ಯಾವ ರೀತಿ ಏಕಕಾಲದಲ್ಲಿ ಕೆಳ ಜಾತಿಯ ಜನರೊಂದಿಗೆ ಮತ್ತು ಜೈನ ಜಹಗೀರ್ದಾರರೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದರು ಎಂಬುದನ್ನು ಪಾಡ್ದನಗಳಲ್ಲಿ ವಿವರಿಸಲಾಗಿದೆ. ಜೈನ ಗುತ್ತುಗಳಲ್ಲಿ (ಬೀಡು) ಬಾವಾಗಳಾಗಿ ಕೆಲಸ ಮಾಡುತ್ತಿದ್ದವರು ಅದನ್ನೇ ತಮ್ಮ ಮೂಲಹೆಸರಾಗಿ ಉಳಿಸಿಕೊಂಡಿದ್ದಾರೆ. ಬಾವಾ, ಬಾವು, ಕಾಟುಬಾವ, ಚೆಯ್ಯಬಾವಾ ಇತ್ಯಾದಿ ಹೆಸರುಗಳು ಹೆಗ್ಗಡೆ ಅಥವಾ ಬಲ್ಲಾಳರ ಅಡಿಯಲ್ಲಿ ತಾವು ಸಲ್ಲಿಸಿದ ಸೇವೆಯ ಕುರುಹುಗಳಾಗಿ ಈಗಲೂ ಉಳಿದುಕೊಂಡಿವೆ. ಮಂಗಳೂರಿನ ಹಂಜಮಾನದ ಸದಸ್ಯರು ಜೈನ ಸಂಪ್ರದಾಯಗಳನ್ನು ಬಹುತೇಕ ಅಳವಡಿಸಿಕೊಂಡರು ಮತ್ತು ಜಾಗೀರ್ದಾರಿ ವ್ಯವಸ್ಥೆಯಾಗಿ ಮಾರ್ಪಟ್ಟರು. ಜಾಗೀರ್ದಾರಿ ಮನೆಗಳು (ಪದಿನಾರಗ) ಜೈನ ಹೆಸರುಗಳನ್ನು ಹೊಂದಿದ್ದವು.[22] ಉದಾ: ಬಲ್ಲಾಳಗ, ಚೆಟ್ರ ಅಗ. ಇಲ್ಲಿ ಜೈನ ಪ್ರಭಾವ ಹೆಚ್ಚಾಗಿತ್ತು. ಮುಸ್ಲಿಮ್ ಬ್ಯಾರಿ ಸಂಸ್ಕೃತಿ ಹಾಗೂ ಜೈನ ಪದ್ಧತಿಗಳ ಮಧ್ಯೆ ಹಲವಾರು ವಿಧಗಳಲ್ಲಿ ನಿಕಟ ಸಾಮ್ಯತೆ ಇರುವುದನ್ನು ಗುರುತಿಸಬಹುದಾಗಿದೆ.[23] ಹಲವು ಮುಸ್ಲಿಮರು ನಂದಾವರದ ಬಂಗರು, ಉಳ್ಳಾಲದ ಚೌಟರು ಹಾಗೂ ಇತರ ಜೈನ ಅರಸು ಮನೆತನಗಳ ಸಶಸ್ತ್ರ ಪಡೆಗಳಲ್ಲಿ ಯೋಧರಾಗಿಯೂ ಕಮಾಂಡರ್‌ಗಳಾಗಿಯೂ ಸೇವೆ ಸಲ್ಲಿಸಿದ್ದರು.[24] ಕರಾವಳಿಯಲ್ಲಿ ಈ ಹಂಜಮಾನ ವ್ಯಾಪಾರದ ನಾಯಕತ್ವವನ್ನು ಮುರಿಯುವುದು ಪೋರ್ಚುಗೀಸರ ಮುಖ್ಯ ಉದ್ದೇಶವಾಗಿತ್ತು. ಆದರೆ ಹಂಜಮಾನರ ಪ್ರಾಬಲ್ಯ ಮತ್ತು ಜನಪ್ರಿಯತೆಯಿಂದಾಗಿ ಪೋರ್ಚುಗೀಸರ ಹೋರಾಟದ ವಿರುದ್ಧ ಸ್ಥಳೀಯ ಮುಖ್ಯಸ್ಥರ ಮತ್ತು ಜನಸಾಮಾನ್ಯರ ಸಹಾನುಭೂತಿ ಮತ್ತು ಬೆಂಬಲ ಅವರಿಗೆ ಸಿಗುವಂತಾಯಿತು.

೨. ಮುಸ್ಲಿಮರ ವ್ಯಾಪಾರಿ ಪ್ರಾಬಲ್ಯಕ್ಕೆ ದೊಡ್ಡ ಹೊಡೆತ

ಪೋರ್ಚುಗೀಸರ ಆಗಮನವು ತುಳುನಾಡಿನ ಮುಸ್ಲಿಮರ ಇತಿಹಾಸದಲ್ಲಿ ಒಂದು ಬಹುದೊಡ್ಡ ತಿರುವನ್ನು ತಂದು ಕೊಟ್ಟಿತು. ಕ್ರಿ.ಶ. 1498ರಲ್ಲಿ ವಾಸ್ಕೋಡಗಾಮನು ಕ್ಯಾಲಿಕಟ್‌ಗೆ ಆಗಮಿಸಿದನು. ಆತ ಕರಾವಳಿಗೆ ದಾರಿಯನ್ನು ತೆರೆದನು ಮತ್ತು ಮಲಬಾರ್ ಹಾಗೂ ತುಳುನಾಡಿನಲ್ಲಿ ಸಾಗರ ವ್ಯಾಪಾರವು ಅರಬರ (ಮೂರ್) ಏಕಸ್ವಾಮ್ಯವೆಂಬುದನ್ನು ಕಂಡುಕೊಂಡನು. ಜತೆಗೆ ನೆಲದ ಮೇಲಿನ ವ್ಯಾಪಾರವು ಮುಸ್ಲಿಮರ ಏಕಸ್ವಾಮ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಪೋರ್ಚುಗೀಸರಿಗೆ ಮುಸ್ಲಿಮರು ಪ್ರತಿರೋಧವೊಡ್ಡಿದ್ದು ಸಹಜವಾಗಿತ್ತು. ಪೋರ್ಚುಗಲ್‌ನಲ್ಲಿ ಸಾಂಬಾರ ಪದಾರ್ಥಗಳು ಮತ್ತು ಕರಿಮೆಣಸಿನ ತೀವ್ರ ಕೊರತೆಯಿತ್ತು.[25] ಅವರ ಆಗಮನದ ಉದ್ದೇಶವೂ ಅದೇ ಆಗಿತ್ತು. ಅರಬರೊಂದಿಗೆ ನೇರ ಸಂಪರ್ಕ ಹೊಂದಿದ್ದ ಮುಸ್ಲಿಮ್ ವರ್ತಕರು ಕರಾವಳಿಯನ್ನು ನಿಯಂತ್ರಿಸುತ್ತಿದ್ದರು. ಸ್ಥಳೀಯ ಆಡಳಿತಗಾರರ ಸಂಬಂಧಗಳು ಸದೃಢವಾಗಿದ್ದವು. ಹೀಗಾಗಿ ಪೋರ್ಚುಗೀಸರಿಗೆ ತಮ್ಮ ವ್ಯಾಪಾರವನ್ನು ಕರಾವಳಿಯ ಮೇಲೆ ಹೇರುವುದು ಕಷ್ಟವಾಯಿತು. ವಾಸ್ಕೋಡಗಾಮ ಮತ್ತು ಆತನ

ಹಿಂಬಾಲಕನಾದ ಪೆಡ್ರೋ ಅಲ್ವಾರಿಸ್ ಗ್ಯಾಬ್ರಿಯೆಲ್ ಕ್ರಮವಾಗಿ 1498 ಮತ್ತು 1500ರಲ್ಲಿ ನಡೆಸಿದ ಆರಂಭದ ಪ್ರಯತ್ನಗಳು ತುಳುನಾಡು ಜಿಲ್ಲೆಯಲ್ಲಿ ಸಂಬಂಧಗಳನ್ನು ಸ್ಥಾಪಿಸಲು ವಿಫಲವಾಯಿತು. ಮಲ್ಪೆಗೆ ಭೇಟಿ ನೀಡಿದ್ದ ವಾಸ್ಕೋಡಗಾಮ ಆಲ್ ಪೆಡ್ರೀನ್ ಡಿ ಸಾಂಟಾ ಮರಿಯಾ ಎಂಬ ದ್ವೀಪದಲ್ಲಿ ಶಿಲುಬೆಯನ್ನು ಪ್ರತಿಷ್ಠಾಪಿಸಿದ್ದನು.

ಪೋರ್ಚುಗೀಸರು ಕರಾವಳಿಯಲ್ಲಿ ವ್ಯಾಪಾರವನ್ನು ಸ್ಥಾಪಿಸಲು ಮತ್ತಷ್ಟು ದಂಡ ಯಾತ್ರೆಗಳನ್ನು ಕೈಗೊಂಡರು. ಹಂಜಮಾನರ ಮತ್ತು ಮುಸ್ಲಿಮರ ಪ್ರಾಬಲ್ಯವನ್ನು ಧ್ವಂಸ ಗೊಳಿಸದೆ ಇದು ಸಾಧ್ಯವಿರಲಿಲ್ಲ. ಅವರ ಮುಂದೆ ನಾಲ್ಕು ಮುಖ್ಯ ಗುರಿಗಳಿದ್ದವು. 1. ಅರಬರ ವಾಣಿಜ್ಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ಮುರಿದು ಅರಬ್ ಮತ್ತು ಪರ್ಷಿಯನ್ ಹಡಗು ಗಳು ಕರಾವಳಿಯೊಳಗೆ ಬರದಂತೆ ನೋಡಿಕೊಳ್ಳುವುದು. 2. ಮುಸ್ಲಿಮರನ್ನು ವ್ಯಾಪಾರದಿಂದ ದೂರವಿಟ್ಟು ಅವರ ಸಂಖ್ಯೆಯನ್ನು ಕಡಿಮೆ ಮಾಡುವುದು. ಕ್ರಮೇಣ ಅವರ ಜಾಗದಲ್ಲಿ ಕ್ರಿಶ್ಚಿಯನ್ನರನ್ನು ಪ್ರತಿಷ್ಠಾಪಿಸುವುದು.[26] ಅವರ ವಾಣಿಜ್ಯ ನೀತಿಗೆ ಹಂಜಮಾನರು ಮತ್ತು ಮುಸ್ಲಿಮರು ಪ್ರಮುಖ ತೊಡಕಾಗಿದ್ದರು. ಗೊಂದಲ ಮತ್ತು ತೊಂದರೆಗಳನ್ನು ಒಡ್ಡುವ ಮೂಲಕ ಅವರ ಪ್ರಾಬಲ್ಯವನ್ನು ಮುರಿಯಲು ಪ್ರಯತ್ನಿಸಿದರು. 3. ಸ್ಥಳೀಯ ಆಡಳಿತಗಾರ ರನ್ನು ಪುಸಲಾಯಿಸಿ ಪೋರ್ಚುಗೀಸರೊಂದಿಗೆ ಮೈತ್ರಿ ಸಂಬಂಧ ಸ್ಥಾಪಿಸುವಂತೆ ಪುಸಲಾಯಿ ಸುವುದು ಮತ್ತು ಆಮೂಲಕ ವಾಣಿಜ್ಯದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸುವುದು. 4. ಸ್ಥಳೀಯ ಆಡಳಿತಗಾರರು ಸದಾ ತಮ್ಮ ಕೃಪೆಯಲ್ಲಿರುವಂತೆ ಮಾಡಲು ಪಾಶ್ಚಾತ್ಯ ಮಿಲಿಟರಿಯ ಮೇಲೆ ಅವು ಸಂಪೂರ್ಣ ಅವಲಂಬಿಸಿಕೊಂಡಿರುವಂತೆ ಮಾಡುವುದು.[27] ಪೋರ್ಚುಗೀಸ್ ಜನರಲ್ ಆಗಿದ್ದ ಅಲ್ಬುಕರ್ಕ್ ತಾನು ಮುಸ್ಲಿಮರ ವ್ಯಾಪಾರವನ್ನು ನಾಶ ಪಡಿಸುವುದಕ್ಕಾಗಿಯೇ ಬಂದಿದ್ದೇನೆ ಎಂದು ಘೋಷಿಸಿಕೊಂಡಿದ್ದ. ಪೋರ್ಚುಗೀಸರು ಕರಾವಳಿಯುದ್ದಕ್ಕೂ ಅರಬ್ ಮತ್ತು ಮಾಪಿಳ್ಳೆ (ಬ್ಯಾರಿ) ವ್ಯಾಪಾರವನ್ನು ಧ್ವಂಸಗೊಳಿಸಲು ಸನ್ನದ್ಧತೆ ಮಾಡಿಕೊಂಡಿದ್ದರು. ಮಹಮ್ಮದೀಯರು ಬಾರ್ಕೂರು ಮತ್ತು ಮಂಗಳೂರಿನಲ್ಲಿ ತಮ್ಮ ಏಜೆಂಟ್‌ಗಳನ್ನು ಹೊಂದಿದ್ದಾರೆಂಬುದನ್ನು ಅರಿತ ವಾಸ್ಕೋಡಗಾಮನು 1524ರಲ್ಲಿ ನದಿಗಳನ್ನು ಮುಚ್ಚುವಂತೆ ಆದೇಶಿಸಿದ.[28]

ಪೋರ್ಚುಗೀಸರ ಹೊಸ ಉಪಕ್ರಮಗಳಿಗೆ ಸ್ಥಳೀಯ ಜೈನ ಮುಖ್ಯಸ್ಥರಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಗಲಿಲ್ಲ. ಬಾರ್ಕೂರು ಮತ್ತು ಮಂಗಳೂರು ವಿಜಯನಗರ ಗವರ್ನರ್‌ಗಳ ಕೇಂದ್ರಸ್ಥಾನವಾಗಿತ್ತು ಮತ್ತು ಇಲ್ಲಿಂದಲೇ ಅವರು ಆಡಳಿತವನ್ನು ನಡೆಸುತ್ತಿದ್ದರು. ಭಟ್ಕಳ ಮತ್ತು ಕಾರ್ಕಳದ ಭೈರರಸರಂತಹ ಹಲವು ಸಾಮಂತರಿದ್ದರು ಮತ್ತು ಇವರು ವಿಜಯ ನಗರದ ಆಳ್ವಿಕೆಯನ್ನು ಒಪ್ಪಿಕೊಂಡಿದ್ದರು. ಮೂಡಬಿದ್ರೆಯ ಚೌಟರು, ನಂದಾವರದ ಬಂಗರು, ಅಲದಂಗಡಿಯ ಅಜಿಲಗಳು, ಬೈಲಂಗಡಿಯ ಮೂಲಾಗಳು ಮತ್ತು ಮೂಲ್ಕಿಯ ಸಾವಂತರು ಅಂದಿನ ಕೆಲವು ಪ್ರಮುಖ ಜಾಗೀರುಗಳಾಗಿದ್ದವು.[29] ವಿಜಯನಗರದ ಆಡಳಿತ ಕಾಲದಲ್ಲಿ ಕರಾವಳಿಯಲ್ಲಿ ಶಾಂತಿ ಮತ್ತು ಸುಭಿಕ್ಷೆ ನೆಲೆಸಿತ್ತು. ಕರಾವಳಿಯ ಈ ಶಾಂತ ವಾತಾವರಣದ ನಡುವೆ ಪೋರ್ಚುಗೀಸರ ಸ್ಪರ್ಧೆಯು ಶಾಂತ ಸಾಗರದ ಮಧ್ಯೆ ಬಿರುಗಾಳಿ ಎಬ್ಬಿಸಿತು. ಅವರು ಜಾಗೀರು ಮುಖ್ಯಸ್ಥರಿಗೆ ತೊಂದರೆ ಕೊಟ್ಟರು ಮತ್ತು ತಮಗೆ ಕಾಣಿಕೆ ಒಪ್ಪಿಸುವಂತೆ

ನಿರ್ಬಂಧಿಸಿದರು. ಹಂಜಮಾನಗಳು ಕೂಡಾ ಅಪಾಯವನ್ನು ಎದುರಿಸು ವಂತಾಯಿತು. ಅಂದು ಇದ್ದ ಏಕೈಕ ಮುಸ್ಲಿಮ್ ಗವರ್ನರ್, ಏಕದಳ ಖಾನ್ (1551), ಮುಸ್ಲಿಮರ ವಾಣಿಜ್ಯ ಹಿತಾಸಕ್ತಿಯನ್ನು ರಕ್ಷಿಸಲು ಯಾವುದೇ ಕ್ರಮ ಕೈಗೊಳ್ಳಲಾರದೇ ಹೋದನು. ಸರಿ ಸುಮಾರು ಇದೇ ವೇಳೆಗೆ ವಿಜಯನಗರ ಸಾಮ್ರಾಜ್ಯವು ತಾಳಿಕೋಟೆಯ ಮಹಾಯುದ್ಧ (1565)ಕ್ಕೆ ಸನ್ನದ್ಧವಾಗಬೇಕಾಯಿತು. ವಿಜಯನಗರದ ಪತನವು ಮುಸ್ಲಿಮರು ಮತ್ತು ಪೋರ್ಚುಗೀಸರ ನಡುವೆ ಹಬೆಯಾಡುತ್ತಿದ್ದ ವಾಣಿಜ್ಯ ಪೈಪೋಟಿಗೆ ಮತ್ತಷ್ಟು ಕಾವು ಕೊಟ್ಟಿತು. ಪೋರ್ಚುಗೀಸರ ಉಪಟಳವು ಮಲಬಾರಿನ ಜಮೋರಿಯನ್ನರು, ಕ್ಯಾನನ್ನೂರಿನ ಆಲಿರಾಜಾ ಮತ್ತು ಅಹಮದ್ ನಗರ ಮತ್ತು ಬಿಜಾಪುರದ ಷಾಹಿ ಅರಸರಿಗೆ ಅಪಾಯ ತಂದೊಡ್ಡಿತು. ಕರಾವಳಿ ಪ್ರದೇಶದ ಎಲ್ಲ ಮುಖ್ಯಸ್ಥರ ನಡುವೆ ಒಂದು ರೀತಿಯ ಜಾಗೃತಿ ಕಂಡು ಬಂತು. ಮುಸ್ಲಿಮರ ಮಟ್ಟಿಗೆ ಅದು ಅಸ್ತಿತ್ವದ ಪ್ರಶ್ನೆಯಾಗಿತ್ತು. ಪೋರ್ಚುಗೀಸ್ ವೈಸ್‌ರಾಯ್[30] ಫ್ರಾನ್ಸಿಸ್ ದಾ ಅಲ್ಮೇಡಾ ಕ್ರಿ.ಶ. 1505ರಲ್ಲಿ ಹೊನ್ನಾವರದ ಮೇಲೆ ದಾಳಿ ನಡೆಸಿದನು ಮತ್ತು ಕ್ರಿ.ಶ. 1526ರಲ್ಲಿ ಭಟ್ಕಳದ ಮುಖ್ಯಸ್ಥನನ್ನು ಅಡಿಯಾಳಾಗಿಸಿದನು. ಚೌಟರ ರಾಣಿಯಾಗಿದ್ದ ಅಬ್ಬಕ್ಕದೇವಿ ಅವರಿಗೆ ಕಪ್ಪ ಕೊಡಲು ನಿರಾಕರಿಸಿದಳು. ಡಾಮ್ ಅಲ್ವಾರಾ ದಾ ಸಿಲ್ವೇರಾ ಮಂಗಳೂರಿನ ಮೇಲೆ ದಾಳಿ ನಡೆಸಿದನು. ತದನಂತರ ಪೋರ್ಚುಗೀಸರು ಮಂಗಳೂರು ಬಂದರಿನಲ್ಲಿ ಆಲಿರಾಜನ ಹಡಗಿನ ಮೇಲೆ ದಾಳಿ ನಡೆಸಿದರು. ಸ್ಥಳೀಯ ನಾಯಕರು ಮತ್ತು ಹಂಜಮಾನ್‌ಗಳು ಒಟ್ಟಾಗಿ ರಾಣಿಯ ಜತೆಗೆ ದಾಳಿಯನ್ನು ಎದುರಿಸಿದರು. ಆದರೆ ಪಟ್ಟಣವು ಬೆಂಕಿಗಾಹುತಿಯಾಯಿತು. ಕ್ರಿ.ಶ. 1526ರಲ್ಲಿ ವೈಸ್‌ರಾಯ್ ಲೋಪೆಝ್ ವಾಸ್ 'ದ ಸೊಂಪಾಯೊ ದಿಢೀರ್ ದಾಳಿ ನಡೆಸಿದನು. ಮುಸ್ಲಿಮರು ತಮ್ಮೆಲ್ಲ ಶಕ್ತಿ ಸೇರಿಸಿ ಇದನ್ನು ಪ್ರತಿರೋಧಿಸಿದರು. ಪೋರ್ಚುಗೀಸರು ಪಟ್ಟಣವನ್ನು ಕೈವಶಪಡಿಸಿಕೊಂಡರು. ಈ ಉತ್ತೇಜನಕಾರಿ ವಿಜಯಗಳಿಂದಾಗಿ ಪೋರ್ಚುಗೀಸರು ಕ್ರಮೇಣ ಸ್ಥಳೀಯ ರಾಜರು ಮತ್ತು ವರ್ತಕರನ್ನು ತಮ್ಮ ಅಧೀನ ಗೊಳಿಸಿದರು. ಬಾರ್ಕೂರಿನ ಮೇಲೆ ಹಠಾತ್ ದಾಳಿ ನಡೆಯಿತು. ಮುಸ್ಲಿಮರು ತಮ್ಮೆಲ್ಲ ಶಕ್ತಿ ಸೇರಿಸಿ ಪ್ರತಿರೋಧ ಒಡ್ಡಿದರು. ಆದರೆ ಯಶಸ್ಸು ಲಭಿಸಲಿಲ್ಲ. ಪ್ರತಿ ವರ್ಷ ಒಂದು ಸಾವಿರ ಲೋಡ್ ಅಕ್ಕಿಯನ್ನು ಕಪ್ಪ ಕೊಡುವಂತೆ ಬಾರ್ಕೂರಿನ ಮೇಲೆ ಷರತ್ತು ವಿಧಿಸಲಾಯಿತು. ಬಸ್ರೂರಿನ ಮೇಲೆ 500, ಕಾರ್ನಾಡ್ ಅರಸನ ಮೇಲೆ 800, ಮಂಗಳೂರಿನ ದೊರೆಯ ಮೇಲೆ 2,400, ಮಂಜೇಶ್ವರದ ಮೇಲೆ 700 ಮತ್ತು ಕುಂಬಳೆಯ ಮೇಲೆ 800 ಲೋಡ್ ಅಕ್ಕಿ ಪೂರೈಸುವ ವಾರ್ಷಿಕ ಷರತ್ತು ಹೇರಲಾಯಿತು.[31] ಕಪ್ಪ ಸಂದಾಯ ಮಾಡಲು ವಿಫಲವಾದಾಗ ಖಡ್ಗ ಮತ್ತು ಬೆಂಕಿಯ ದಾಳಿಗೆ ಅವರು ತುತ್ತಾಗಬೇಕಾಯಿತು.[32]

ವೈಸ್‌ರಾಯ್ ನೊರೊನ್ಹಾನನ್ನು ಮೂರು ಸಾವಿರ ಸೈನಿಕರ ಪಡೆ ಮತ್ತು ಏಳು ಹಡಗು ಗಳೊಂದಿಗೆ ಮಂಗಳೂರಿನಲ್ಲಿ ಠಿಕಾಣಿ ಹೂಡಿಸಲಾಗಿತ್ತು. ಈತನಿಗೆ ಜೋ ಪೆಕ್ಸೋಟ್ ಸಹಾಯಕ ನಾಗಿದ್ದನು. ಅವನು ಉಳ್ಳಾಲದ ಎರಡನೇ ಅಬ್ಬಕ್ಕ ದೇವಿಯನ್ನು ಕರೆದು ತಮಗೆ ಶರಣಾಗು ವಂತೆ ಒತ್ತಾಯಿಸಿದನು. ಆದರೆ ಬ್ಯಾರಿ ಮತ್ತು ಮೊಗವೀರರನ್ನೊಳಗೊಂಡ ಅಬ್ಬಕ್ಕರಾಣಿಯ ಪಡೆ ಹೋರಾಡುವುದನ್ನೇ ಇಷ್ಟಪಟ್ಟಿತು. ಪ್ರದೇಶದ ಮುಸ್ಲಿಮರು ಅವರೊಂದಿಗೆ ಕೈಜೋಡಿಸಿ ದರು. ಮಧ್ಯರಾತ್ರಿ ಪೋರ್ಚುಗೀಸ್ ನೆಲೆಯ ಮೇಲೆ ತಮ್ಮ ಪಂಜು ಮತ್ತು ಶಸ್ತ್ರಗಳೊಂದಿಗೆ

ದಾಳಿ ನಡೆಸಿದ ಅವರು ಕ್ಯಾಂಪ್ ಮತ್ತು ಹಡಗುಗಳಿಗೆ ಬೆಂಕಿ ಕೊಟ್ಟರು. ಪೋರ್ಚುಗೀಸರಿಗೆ ಇದರಿಂದ ಭಾರಿ ಪ್ರಾಣ ಹಾನಿ ಮತ್ತು ನಷ್ಟವುಂಟಾಯಿತು. ಇದಕ್ಕೆ ಪ್ರತಿಯಾಗಿ ಮಾರನೇ ದಿನವೇ ಜೋ ಪೆಕ್ಸೋಟ್ ಉಳ್ಳಾಲವನ್ನು ಲೂಟಿ ಹೊಡೆದನು. ಆದರೆ ರಾಣಿಯ ವೀರ ಸೈನಿಕರು ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿದರು.[33] ಸುಮಾರು 70 ಮಂದಿ ಸತ್ತರು ಮತ್ತು ಇದು ಪೋರ್ಚುಗೀಸರ ಮಟ್ಟಿಗೆ ಇನ್ನೊಂದು ದೊಡ್ಡ ನಷ್ಟವಾಗಿತ್ತು. ಮಾರನೇ ವರ್ಷ ಪೋರ್ಚುಗೀಸರು ಬಹುದೊಡ್ಡ ಸೇನೆಯೊಂದಿಗೆ ಆಗಮಿಸಿದರು. ಒಪ್ಪಂದವೊಂದಕ್ಕೆ ಸಹಿ ಹಾಕುವಂತೆ ರಾಣಿಯನ್ನು ನಿರ್ಬಂಧಿಸಲಾಯಿತು. ಕ್ರಿ.ಶ. 1569ರಲ್ಲಿ ಸಾವೋ ಸೆಬಾಸ್ಟಿಯೋ ಎಂಬ ಕೋಟೆಯನ್ನು ಪೋರ್ಚುಗೀಸರು ಕಟ್ಟಿದರು. ಇದರ ನಂತರವೂ ಅದೇ ವರ್ಷದಲ್ಲಿ ಮತ್ತೊಮ್ಮೆ ಅವರು ಪಟ್ಟಣವನ್ನು ಸೂರೆಗೈದರು.

ಮಂಗಳೂರಿನಲ್ಲಿ ಪೋರ್ಚುಗೀಸರ ದಾಳಿಗಳು ಸ್ಥಳೀಯ ಮುಖಂಡರನ್ನು ಜಾಗೃತಗೊಳಿಸಿತು. ಪೋರ್ಚುಗೀಸರನ್ನು ಹಿಮ್ಮೆಟ್ಟಿಸುವುದಕ್ಕೆ ಯೋಜನೆಯೊಂದನ್ನು ರೂಪಿಸಲು ತೋಳಾರ್, ಹೊಸಂಗಡಿ, ಪೆರ್ಡೂರು ಮತ್ತು ಹಂಜಮಾನಗಳ ಮುಖ್ಯಸ್ಥರು ಒಂದಾದರು. ಈ ಪೀಡೆಯಿಂದಾಗಿ ಮುಸ್ಲಿಮರೂ ಜಾಗೃತರಾದರು. ಪೋರ್ಚುಗೀಸರ ವಿರುದ್ಧ ಒಂದು ಒಕ್ಕೂಟವನ್ನು ರಚಿಸಲಾಯಿತು ಮತ್ತು ಜಿಲ್ಲೆಯ ಬಹುತೇಕ ಎಲ್ಲ ಸ್ಥಳೀಯ ಮುಖ್ಯಸ್ಥರು ಈ ಒಕ್ಕೂಟವನ್ನು ಬೆಂಬಲಿಸಿದರು. ಬಿಜಾಪುರ ಮತ್ತು ಅಹ್ಮದ್‌ನಗರದ ಸುಲ್ತಾನರು, ಕ್ಯಾಲಿಕಟ್‌ನ ಜಮೋರಿನ್‌ನ ಮಧ್ಯೆ ಒಪ್ಪಂದ ಏರ್ಪಟ್ಟಿತು. ಒಡಂಬಡಿಕೆಯನ್ವಯ ಹೊನ್ನಾವರ, ಬಸ್ರೂರು ಮತ್ತು ಗೋವಾ ಬಿಜಾಪುರ ಸುಲ್ತಾನನಿಗೆ ಸೇರಬೇಕೆಂದೂ ಮಂಗಳೂರನ್ನು ಜಮೋರಿನ್‌ಗೆ ನೀಡಬೇಕೆಂದೂ ರಾಣಿಯು ಸುಲ್ತಾನನ ಆಡಳಿತಕ್ಕೆ ಮನ್ನಣೆ ನೀಡಬೇಕೆಂದೂ ತೀರ್ಮಾನವಾಯಿತು.[34] ಜಮೋರಿನ್‌ನ ನೌಕಾಪಡೆ ಮುಖ್ಯಸ್ಥ ಕುಂಞಿ ಪೋಕರ್ ಮರಕಾರ್ ಕ್ರಿ.ಶ. 1570ರಲ್ಲಿ ಮಂಗಳೂರಿಗೆ ಬಂದನು ಮತ್ತು ಬಂದರನ್ನು ಆಕ್ರಮಿಸಿದನು. ಕ್ರಿ.ಶ. 1581ರಲ್ಲಿ ಪೋರ್ಚುಗೀಸರು ಉಳ್ಳಾಲಕ್ಕೆ ಬೆಂಕಿ ಇಟ್ಟರು ಮತ್ತು ಕಟ್ಟ ಕಡೆಗೆ 1594ರಲ್ಲಿ ಅಬ್ಬಕ್ಕದೇವಿಯ ಪುತ್ರಿಯಾದ ತಿರುಮಲಾ ದೇವಿ ಪೋರ್ಚುಗೀಸರೊಂದಿಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದಳು.[35] ಆದರೆ ಪೋರ್ಚುಗೀಸರ ಹೋರಾಟವು ಮುಸ್ಲಿಮ್ ವರ್ತಕರ ಮಟ್ಟಿಗೆ ಒಂದು ದೊಡ್ಡ ಹೊಡೆತವಾಗಿತ್ತು. ಇದು ಹಂಜಮಾನ್‌ಗಳ ಶಕ್ತಿಯನ್ನೇ ಧ್ವಂಸಗೊಳಿಸಿತು.

ಕ್ರಿ.ಶ. 1646ರ ವೇಳೆಗೆ ಇಕ್ಕೇರಿಯ ನಾಯಕರು ಹೆಚ್ಚು ಶಕ್ತಿಶಾಲಿಗಳಾದರು. ಹಿರಿಯ ವೆಂಕಟಪ್ಪ ನಾಯಕನು ಭೈರದೇವಿಯಿಂದ ಬಾರ್ಕೂರನ್ನು ವಶಪಡಿಸಿಕೊಂಡು ಜಿಲ್ಲೆಯಲ್ಲಿ ಹೆಗ್ಗಡೆ ಮತ್ತು ಬಲ್ಲಾಳರನ್ನು ಧ್ವಂಸಗೊಳಿಸಿಬಿಟ್ಟನು. ಜೈನ ಮುಖ್ಯಸ್ಥರು ಮತ್ತು ಪ್ರಭುಗಳ ಶಕ್ತಿಯನ್ನೂ ಆತ ಕುಂದಿಸಿಬಿಟ್ಟನು. ಇವರನ್ನು ಜಿನಧರ್ಮ ಕುಠಾರ ಮತ್ತು ಜಿನಧರ್ಮ ಛೇದಕ ಎಂದು ಕರೆಯಲಾಗುತ್ತಿತ್ತು. ಆತ ಬಂಗಾಗಳನ್ನೂ ಚೌಟಾಗಳನ್ನೂ ಹದ್ದುಬಸ್ತಿನಲ್ಲಿಟ್ಟನು ಮತ್ತು ವಿಟ್ಲದ ಹೆಗ್ಗಡೆಯನ್ನು ಗೆದ್ದುಕೊಂಡನು. ಕೊಡಿಯಾಲ, ಉಳ್ಳಾಲ, ಮೂಡಬಿದ್ರೆ, ಕುಂಬಳೆ, ಕಾಸರಗೋಡು ಹಾಗೂ ಜಿಲ್ಲೆಯ ಇತರ ಹಲವೆಡೆಗಳಲ್ಲಿ ಅವನು ಕೋಟೆಗಳನ್ನು ನಿರ್ಮಿಸಿದನು. ಹಲವು ಕಡೆಗಳಲ್ಲಿ ವೀರಶೈವ ಮಠಗಳನ್ನೂ ಸ್ಥಾಪಿಸಿದನು. ಆತನ ಉತ್ತರಾಧಿಕಾರಿಯಾಗಿದ್ದ ಶಿವಪ್ಪ ನಾಯಕನೂ ಈ ಪ್ರದೇಶದಲ್ಲಿ ಅದೇ ಧೋರಣೆಯನ್ನು

ಮುಂದುವರಿಸಿಕೊಂಡು ಹೋದನು. ಇಕ್ಕೇರಿ ಆಡಳಿತಗಾರರಿಂದ ಜೈನ ಕುಟುಂಬಗಳ ದಮನವು ಸಮಾಜದ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡಿತು. ಜಾಗೀರ್ದಾರಿ ವ್ಯವಸ್ಥೆ ನಶಿಸತೊಡಗಿತು. ಬಿದನೂರ್ ಒಂದು ಪ್ರಬಲ ಸಾಮ್ರಾಜ್ಯವಾಗಿ ಉದಯಿಸುವ ಮೂಲಕ ಕರಾವಳಿಯ ಇತಿಹಾಸಕ್ಕೆ ಒಂದು ಹೊಸ ತಿರುವನ್ನು ಕೊಟ್ಟಿತು.[36]

ಉಳ್ಳಾಲದ ಚೌಟರು ಮಣೇಲ್‌ನ ಯಾವುದೋ ಒಂದು ಕೌಟುಂಬಿಕ ವಿವಾದಕ್ಕೆ ಸಂಬಂಧಿಸಿ ಬಂಗರೊಂದಿಗೆ ನಿಷ್ಠುರರಾದರು. ಕಿರಿಯ ಅಬ್ಬಕ್ಕದೇವಿ ತನ್ನ ಪತಿ ಕಾಮರಾಯ ಬಂಗನನ್ನು ತೊರೆಯಬೇಕಾಗಿ ಬಂತು. ಕಾಮರಾಯನು ಆಕೆಯ ವಿರುದ್ಧ ಪ್ರತೀಕಾರ ತೀರಿಸಲು ಪೋರ್ಚುಗೀಸರೊಂದಿಗೆ ಸೇರಿಕೊಂಡ. ಅಬ್ಬಕ್ಕದೇವಿಯು ಬಿದನೂರಿನ ವೆಂಕಟಪ್ಪ ನಾಯಕನ ಸಹಾಯ ಕೋರಿದಳು.[37] ಕ್ಯಾಲಿಕಟ್‌ನ ಜಮೋರಿನ್‌ನ ನೆರವೂ ಆಕೆಗೆ ಸಿಕ್ಕಿತು. ಪೋರ್ಚುಗೀಸರು ಅರಬಸ್ತಾನದಿಂದ ಮಂಗಳೂರಿಗೆ ವಾಪಸ್ ಬರುತ್ತಿದ್ದ ಹಡಗಿನ ಮೇಲೆ ದಾಳಿ ನಡೆಸಿದರು. ಇದರಿಂದ ಯುದ್ಧ ಆರಂಭಗೊಂಡಿತು. ಪೋರ್ಚುಗೀಸರನ್ನು ಹೊರ ದಬ್ಬಲು ಇದು ಕಟ್ಟಕಡೆಯ ಅವಕಾಶ ಎಂದು ಭಾವಿಸಿದ್ದ ಮುಸ್ಲಿಮರು ಆಕೆಯೊಂದಿಗೆ ಸೇರಿಕೊಂಡರು. ಇದರಿಂದ ಮೊಗವೀರರು ಕೂಡಾ ಪ್ರಭಾವಿತರಾದರು. ರಾಣಿಯ ಅಮೋಘ ನಾಯಕತ್ವ, ಯೋಧರ ವೀರ ಆಕ್ರಮಣ, ನಾಯಕ ಪಡೆಯ ಪ್ರಬಲ ಬೆಂಬಲ ಹಾಗೂ ಜಮೋರಿನ್ ಅಡ್ಮಿರಲ್‌ಗಳ ಸಹಾಯದೊಂದಿಗೆ ಅವರು ಪೋರ್ಚುಗೀಸರನ್ನು ಹೀನಾಯವಾಗಿ ಸೋಲಿಸಿದರು. ಜನರಲ್ ರೆಬಿರೋ ಓಡಿಹೋದನು. ಮಂಗಳೂರು ಮರಳಿ ಸಿಕ್ಕಿತು. ಈ ಮಧ್ಯೆ ಜನರಲ್ ಕುಟಿನ್ಹಾ ಮಂಗಳೂರಿಗೆ ಓಡೋಡಿ ಬಂದನು ಮತ್ತು ಉಳ್ಳಾಲವನ್ನು ದಿಗ್ಬಂಧಿಸಲು ಪ್ರಯತ್ನಿಸಿದನು. ಡೆಮೆಲ್ಲೊ ಮತ್ತು ಮಿರಾಂಡಾ ಎಂಬ ಇಬ್ಬರು ಜನರಲ್‌ಗಳ ನೇತೃತ್ವದಲ್ಲಿ ಗೋವಾದಿಂದ ಆಗಮಿಸಿದ ಇನ್ನೊಂದು ಪೋರ್ಚುಗೀಸ್ ಪಡೆ ಅವರ ಪ್ರಯತ್ನಕ್ಕೆ ಬೆಂಬಲ ನೀಡಿತು. ಆದರೆ ಇಕ್ಕೇರಿ ಸೇನೆ ಹಾಗೂ ಜಮೋರಿನ್ ಪಡೆಯು ಅವರನ್ನು ಹಿಮ್ಮೆಟ್ಟಿಸಿತು. ಪೋರ್ಚುಗೀಸರಿಗೆ ಸೋಲಾಯಿತು. ಪೋರ್ಚುಗೀಸರನ್ನು ಮಂಗಳೂರಿನಿಂದ ಹೊರದಬ್ಬುವಲ್ಲಿ ರಾಣಿ ಯಶಸ್ವಿಯಾದಳು.[38] ಇದು ಮುಸ್ಲಿಮ್ ವರ್ತಕರ ವಿಜಯವಾಗಿತ್ತು. ಈ ವಿಜಯದಿಂದಾಗಿ ಅವರ ವಾಣಿಜ್ಯ ಹಿತಾಸಕ್ತಿಗಳು ಸುರಕ್ಷಿತವಾದವು.

ಕ್ರಿ.ಶ. 1678ರಲ್ಲಿ ಕಲ್ಯಾಣಪುರದಲ್ಲಿ ಕಾರ್ಖಾನೆಯೊಂದನ್ನು ಕಟ್ಟಲು ಕೆಳದಿಯ ರಾಣಿ ಚೆನ್ನಮ್ಮಾಜಿ ಪೋರ್ಚುಗೀಸರಿಗೆ ಅನುಮತಿ ನೀಡಿದಳು. ಆದರೆ ಬಸಪ್ಪ ನಾಯಕನು ಬಾಕಿ ಪಾವತಿ ವಿಚಾರದಲ್ಲಿ ಅದನ್ನು ಮುಚ್ಚಿಬಿಟ್ಟನು. ಇದಕ್ಕೆ ಪ್ರತೀಕಾರವಾಗಿ ಪೋರ್ಚುಗೀಸರು ಕ್ರಿ.ಶ. 1714ರಲ್ಲಿ ಬಸ್ರೂರು, ಕಲ್ಯಾಣಪುರ ಮತ್ತು ಮಂಗಳೂರಿನ ಮೇಲೆ ದಾಳಿ ನಡೆಸಿದರು. ಕ್ರಿ.ಶ. 1732ರಲ್ಲಿ ಎರಡನೇ ರಾಜ ಸೋಮಶೇಖರ ನಾಯಕನು ಮಲಬಾರ್‌ನಲ್ಲಿ ಆಲಿ ರಾಜನ ರಾಜ್ಯದೊಳಕ್ಕೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಯತ್ನಿಸಿದ. ಆದರೆ ಅವರ ಮಧ್ಯೆ ಸಂಧಾನ ಏರ್ಪಟ್ಟಿತು ಮತ್ತು ಯಾವುದೇ ಯುದ್ಧದ ಅಗತ್ಯವಿಲ್ಲದೆ ವಿವಾದ ಇತ್ಯರ್ಥಗೊಂಡಿತು. ವಾಪಸ್ ಬಂದ ಬಳಿಕ ಎರಡನೇ ರಾಜ ಸೋಮಶೇಖರ ನಾಯಕನು ಯುದ್ಧದಲ್ಲಿ ತನಗೆ ನೆರವಾಗಿದ್ದಕ್ಕೆ ಪ್ರತಿಯಾಗಿ ಕೊಡಗಿನ ರಾಜ ದೊಡ್ಡ ವೀರರಾಜನಿಗೆ ಅಜ್ಜಾವರ-ಸುಳ್ಯ ಮಾಗಣೆಯನ್ನು ಉಡುಗೊರೆಯಾಗಿ ನೀಡಿದನು. ಜಿಲ್ಲೆಯ ಒಂದು ಭಾಗವನ್ನು

ಕೊಡಗಿಗೆ ಸೇರಿಸಲಾಯಿತು. ಈ ಹೊತ್ತಿಗಾಗಲೇ ಬ್ರಿಟಿಷ್ ಕಂಪನಿಯು ಹೊಸ ನೀತಿಯೊಂದಿಗೆ ಕರಾವಳಿಯಲ್ಲಿ ವಾಣಿಜ್ಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿತ್ತು. ಬ್ರಿಟಿಷರ ಆಗಮನದೊಂದಿಗೆ ತುಳುನಾಡಿನಲ್ಲಿ ಪೋರ್ಚುಗೀಸರ ಉಪಟಳಕ್ಕೆ ಕೊನೆಯಾಯಿತು. ಮಂಗಳೂರಿನ ಮುಸ್ಲಿಮ್ ವರ್ತಕರು ಮಾತ್ರ ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು.

ಪೋರ್ಚುಗೀಸರ ದೌರ್ಜನ್ಯದ ಹೊರತಾಗಿಯೂ ಹದಿನೆಂಟನೇ ಶತಮಾನದ ವರೆಗೂ ಮುಸ್ಲಿಮ್ ವರ್ತಕರು ಶಕ್ತಿಶಾಲಿಗಳಾಗಿಯೇ ಇದ್ದರು. ಕ್ರಿ.ಶ. 1755ರಲ್ಲಿ ಕಣ್ಣೂರಿನ ಆಲಿರಾಜನ ಜತೆಗೂಡಿ ಮರಾಠ ಮುಖ್ಯಸ್ಥನೊಬ್ಬ ಎಪ್ಪತ್ತು ಹಡಗು ಮತ್ತು 3,000 ಯೋಧರೊಂದಿಗೆ ತುಳುನಾಡಿನ ಕರಾವಳಿಯ ಮೇಲೆ ಆಕ್ರಮಣ ಮಾಡಿದ. ಅವರು ಮಂಜೇಶ್ವರದ ಮೇಲೆ ದಾಳಿ ನಡೆಸಿ ಅದನ್ನು ಕೊಳ್ಳೆ ಹೊಡೆದರು. ಸ್ಥಳೀಯರಿಂದ ಅವರು ನಾಲ್ಕು ಸಾವಿರ ವರಾಹಗಳನ್ನು ಸಂಗ್ರಹಿಸಿದರು. ಮಮ್ಮಿ ಸೂಪಿ ಬ್ಯಾರಿ ಎಂಬ ಒಬ್ಬ ವರ್ತಕ ನಿಂದಲೇ ಹತ್ತು ಲಕ್ಷ ವರಾಹಗಳನ್ನು ಬಲವಂತದಿಂದ ವಸೂಲಿ ಮಾಡಲಾಯಿತು. ತದನಂತರ ಅವರು ಕೊಲ್ಲೂರು ದೇವಾಲಯವನ್ನು ಸೂರೆ ಹೊಡೆದರು.[39] ಅಂದಿನ ಕಾಲದಲ್ಲಿ ಭಾರಿ ಪ್ರಮಾಣದ ಸಂಪತ್ತು ಹೊಂದಿದ್ದ ಮುಸ್ಲಿಮ್ ವರ್ತಕರು ಇದ್ದರು ಎನ್ನುವುದನ್ನು ಇದು ಸೂಚಿಸುತ್ತದೆ.

3. ಒಂದು ಹೊಸ ಪ್ರೇರಣೆ

ಮೈಸೂರಿನ ನವಾಬ ಹೈದರಾಲಿಯ ಯಶಸ್ಸು ಮತ್ತು ತುಳುನಾಡಿಗೆ ಆತನ ಪ್ರವೇಶವು ಮುಸ್ಲಿಮರಲ್ಲಿ ಹೊಸ ಹುಮ್ಮಸ್ಸನ್ನು ಮೂಡಿಸಿತು. ಅದು ಕರಾವಳಿ ಜಿಲ್ಲೆಯಲ್ಲಿ ಮುಸ್ಲಿಮ್ ಆಡಳಿತದ ಮೊದಲ ಅನುಭವವಾಗಿತ್ತು. ಹೊಸ ಸುಲ್ತಾನರು ಆಡಳಿತ ವಿಚಾರದಲ್ಲಿ ನಿಷ್ಪಕ್ಷಪಾತಿ ನೀತಿ ಅಳವಡಿಸಿದ ಕಾರಣ ಪೋರ್ಚುಗೀಸರೊಂದಿಗಿನ ಹೋರಾಟದ ಸಂದರ್ಭದಲ್ಲಿ ಅತ್ಯಂತ ಹೆಚ್ಚು ತೊಂದರೆ ಅನುಭವಿಸಿದ್ದ ಮುಸ್ಲಿಮ್ ವರ್ತಕರಿಗೆ ಸಂಪೂರ್ಣ ಸುಧಾರಿಸಿಕೊಳ್ಳುವ ಅವಕಾಶ ದೊರೆಯಿತು.

ಬಿದನೂರ್ ಸಾಮ್ರಾಜ್ಯದ ಕಲ್ಪನೆಯೊಂದಿಗೆ ತುಳುನಾಡು ಜಿಲ್ಲೆಯು ಔಪಚಾರಿಕವಾಗಿ ಸುಲ್ತಾನರ ಕೈವಶವಾಯಿತು. ದಿಗ್ವಿಜಯದ ಬೆನ್ನಲ್ಲೇ ಸುಲ್ತಾನನು ಹೊಸಂಗಡಿಯ ಮೂಲಕ ಜಿಲ್ಲೆಯನ್ನು ಪ್ರವೇಶಿಸಿದನು ಮತ್ತು ರಾಜ್ಯಪಾಲನನ್ನು ನೇಮಕ ಮಾಡಲು ಬಾರ್ಕೂರಿಗೆ ತೆರಳಿದನು. ತದನಂತರ ಆತನು ಕಾರ್ಕಳಕ್ಕೆ ತೆರಳಿದನು ಮತ್ತು ಅಲ್ಲಿ ಹಲವಾರು ಮುಖ್ಯಸ್ಥರು ಆವನನ್ನು ಭೇಟಿಯಾಗಿ ನಿಷ್ಠೆ ಪ್ರದರ್ಶಿಸಿದರು. ಚಂದ್ರಶೇಖರ ಚಿಕ್ಕರಾಜ ಚೌಟ ಸೇರಿದಂತೆ ಹಲವಾರು ಮುಖ್ಯಸ್ಥರು ಉಪಸ್ಥಿತರಿದ್ದರು. ಸುಲ್ತಾನನಿಗೆ ಕಾರ್ಕಳದಲ್ಲಿ ಆತ್ಮೀಯ ಸ್ವಾಗತ ನೀಡಲಾಯಿತು. ಇಕ್ಕೇರಿ ಸಾಮ್ರಾಜ್ಯದ ಪತನವು ಒಂದು ಕರಾಳ ದೌರ್ಜನ್ಯಕಾರಿಯುಗದ ಕೊನೆಯಾಗಿತ್ತು ಮತ್ತು ಇದರಿಂದಾಗಿ ಜೈನ ಪಾಳೇಗಾರು ಈ ಬೆಳವಣಿಗೆಯಿಂದ ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಇಕ್ಕೇರಿ ಆಡಳಿತ ಕಾಲದಲ್ಲಿ ಜೈನರು ತಮ್ಮ ಪ್ರಾಮುಖ್ಯತೆಯನ್ನು ಕಳಕೊಂಡರು. ಅವರ ಜನಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಯಿತು. ಹೆಗ್ಗಡೆ ಮತ್ತು ಬಲ್ಲಾಳರು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡರು. ಅವರ ವ್ಯಾಪಾರದ ಮೇಲೂ ಗಂಭೀರ ಪರಿಣಾಮವುಂಟಾಯಿತು. ಇದು ಮುಸ್ಲಿಮರು ಇಕ್ಕೇರಿ

ಆಡಳಿತಗಾರರ ಕಾಲದಲ್ಲಿ ಎದುರಿಸಿದ ಮರ್ದನವನ್ನು ನೆನಪಿಸುವಂತಿತ್ತು. ಹೀಗಾಗಿ ಎರಡೂ ಸಮುದಾಯಗಳಿಗೆ ಅದೊಂದು ಅತ್ಯಂತ ಸಂತೋಷಕಾರಿ ಘಟನೆಯಾಗಿತ್ತು ಮತ್ತು ಅವರು ಹೊಸ ಆಡಳಿತಗಾರನಿಗೆ ಭವ್ಯ ಸ್ವಾಗತವನ್ನು ಕೋರಿದರು. ಈ ಸ್ವಾಗತವು ಸುಲ್ತಾನನಿಗೆ ನೀಡಿದ ಹಸಿರು ನಿಶಾನೆಯಾಗಿತ್ತು. ಆತನನ್ನು ಮೂಡಬಿದ್ರೆಗೆ ಆಮಂತ್ರಿಸಲಾಯಿತು. ಆತ ಕೋಟೆಯನ್ನು ವಶಪಡಿಸಿಕೊಂಡನು ಮತ್ತು ಅಲ್ಲಿನ ಕಾವಲುಗಾರನೊಂದಿಗೆ ಒಂದು ರಕ್ಷಣಾ ಪಡೆಯನ್ನು ಬಿಟ್ಟು ಹೋದನು. ಚೌಟರ ಅರಸನು ಪೊನ್ನಚ್ಚೇರಿ ಮಠದಲ್ಲಿ ಸುಲ್ತಾನನಿಗೆ ಭವ್ಯ ಸ್ವಾಗತವನ್ನು ಏರ್ಪಡಿಸಿದನು. ಅಲ್ಲಿ ಹಲವು ಮುಖ್ಯಸ್ಥರು ಅವನನ್ನು ಸೇರಿಕೊಂಡರು.[40] ಚೌಟ ಅರಸನು 14,000 ವರಾಹಗಳನ್ನು ಕೊಡುಗೆಯಾಗಿ ನೀಡಲು ಒಪ್ಪಿಕೊಂಡನು. ಸುಲ್ತಾನನ ಕಡೆಗೆ ಸೇರಿದ್ದ ಸ್ಥಳೀಯ ರಾಜತಾಂತ್ರಿಕ ಬಜ್ಪೆ ಕೃಷ್ಣ ಸಂಧಾನಕಾರರ ಪಾತ್ರ ವಹಿಸಿದನು. ಜಿಲ್ಲೆಯ ಎಲ್ಲ ಪಟ್ಟಣಗಳಿಗೆ ಸಂದರ್ಶನ ನೀಡುವಾಗ ಆತ ಸುಲ್ತಾನನ ಜತೆಗಿದ್ದನು. ಸಕಲ ಜೈನ ಸಂಪ್ರದಾಯ ಮತ್ತು ಆಚರಣೆಗಳೊಂದಿಗೆ ಅವರನ್ನು ಭವ್ಯವಾಗಿ ಬರ ಮಾಡಿಕೊಳ್ಳಲಾಯಿತು. ನಿಜವಾಗಿ ಇಕ್ಕೇರಿಯ ಪತನವು ಈ ಜಿಲ್ಲೆಯ ಜೈನರಿಗೆ ಪಕ್ಕಾ ಸಂಭ್ರಮದ ವಿಷಯವಾಗಿತ್ತು. ತುಂಬಾ ಸಂತುಷ್ಟನಾಗಿದ್ದ ಸುಲ್ತಾನನು ಸ್ಥಳೀಯ ಮುಖಂಡರಿಗೆ ಸಕಲ ಸಹಕಾರದ ಭರವಸೆ ನೀಡಿದನು. ನಂತರ ಆತನು ಮಂಗಳೂರಿಗೆ ತೆರಳಿದನು. ದಾರಿ ಮಧ್ಯೆ ಗುರುಕಂಬಳದಲ್ಲಿ ಮಣಿಲ್, ಗುರುಪುರ ಮತ್ತು ಬಜ್ಪೆಯ ಮುಖ್ಯಸ್ಥರು ಮತ್ತು ಖ್ಯಾತ ಮುಸ್ಲಿಮರು ಆತನನ್ನು ಬರಮಾಡಿಕೊಂಡರು. ಆತ ಮಸೀದಿಯನ್ನು ಸಂದರ್ಶಿಸಿದನು ಮತ್ತು ಮಂಗಳೂರಿನಲ್ಲಿ ಆತನಿಗೆ ರಾಜನಿಗೆ ತಕ್ಕುದಾದ ಸತ್ಕಾರ ದೊರೆಯಿತು. ಕಣ್ಣೂರಿನ ಆಲಿ ರಾಜ ಮತ್ತು ಆತನ ಸೋದರ ಶೇಖ್ ಅಲಿ, ಬಂಗ ಮುಖಂಡರು ಹಾಗು ತಿಮ್ಮಣ್ಣ ಅಜಿಲ ಉಪಸ್ಥಿತರಿದ್ದರು. ವರ್ತಕರೂ ಸೇರಿದಂತೆ ಗಣ್ಯ ಮುಸ್ಲಿಮ್ ಮುಖಂಡರು ಸುಲ್ತಾನನಿಗೆ ಸತ್ಕಾರ ಏರ್ಪಡಿಸುವಲ್ಲಿ ಉತ್ಸುಕರಾಗಿದ್ದರು. ಬಂದರದಲ್ಲಿರುವ ಮುಖ್ಯ ಮಸೀದಿ ಆತನ ಆಗಮನವನ್ನು ಸಂಭ್ರಮದಿಂದ ಆಚರಿಸಿತು ಮತ್ತು ಈಗ ಈದ್ಗಾ ಇರುವ ಜಾಗದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಲಾಯಿತು. ಅದೊಂದು ತೆರದ ಗಿರಿಶಿಖರವಾಗಿತ್ತು. ಟೀಪು ಸುಲ್ತಾನನು ಆಲಿರಾಜನನ್ನು ಕರಾವಳಿ ಜಿಲ್ಲೆಯ ರಾಜನ ಪ್ರತಿನಿಧಿಯಾಗಿ ನೇಮಿಸಿದನು.[41] ಆತನ ಸೋದರ ಶೇಖ್ ಅಲಿಯನ್ನು ಗವರ್ನರ್ ಆಗಿ ನೇಮಕ ಮಾಡಲಾಯಿತು. ಆತನಿಗೆ ಮಂಗಳೂರಿನಲ್ಲಿ ನೌಕಾಪಡೆಯನ್ನು ನಿರ್ಮಿಸುವ ಹೊಣೆಯನ್ನೂ ವಹಿಸಲಾಯಿತು. ಶೇಖ್ ಅಲಿಗೆ ನೌಕಾ ಶಕ್ತಿಯಲ್ಲಿ ಅನುಭವವಿತ್ತು ಮತ್ತು ಆತನಿಗೆ ಮಂಗಳೂರಿನ ತೀರದಲ್ಲಿ ಏಳು ಹಡಗುಗಳಿದ್ದವು. ಶೇಖ್ ಅಲಿ ಸುಲ್ತಾನನ ಮೊಟ್ಟಮೊದಲ ಅಡ್ಮಿರಲ್ ಆಗಿದ್ದನು ಮತ್ತು ದಾಮಾಜಿ ಪಂತ್ ಸ್ಥಳೀಯ ಆಡಳಿತಗಾರನಾಗಿದ್ದನು. ಶೇಖ್ ಅಲಿ ಮಾಲ್ದೀವ್ಸ್‌ಗೆ ದಂಡಯಾತ್ರೆ ಹೊರಟನು ಮತ್ತು ಅಲ್ಲಿ ಮಾಲ್ದೀವ್ಸ್‌ನ ದೊರೆಯನ್ನು ಸೆರೆಹಿಡಿದನು. ಈ ಯಶಸ್ವಿ ದಂಡಯಾತ್ರೆಯ ಬಗ್ಗೆ ಆತನು ಸುಲ್ತಾನನಿಗೆ ಮಾಹಿತಿ ನೀಡಿದನು. ಆದರೆ ಅಲಿಯು ದೊರೆಗೆ ನೀಡಿದ ಕಿರುಕುಳದಿಂದ ಅಸಮಾಧಾನಗೊಂಡ ಸುಲ್ತಾನನು ಆತನನ್ನು ಸೇನೆಯ ಜವಾಬ್ದಾರಿಯಿಂದ ಮುಕ್ತಗೊಳಿಸಿದನು.

ಲತೀಫ್ ಅಲಿ ಬೇಗ್‌ನನ್ನು ಅಡ್ಮಿರಲ್ ಆಗಿ ನೇಮಕ ಮಾಡಲಾಯಿತು. ಆದರೆ ಅಲಿ

ರಾಜ ಮತ್ತು ಆತನ ಸೋದರನು ಸುಲ್ತಾನನಿಗೆ ನಿಷ್ಠರಾಗಿಯೇ ಇದ್ದರು.[42]

ತಲಚೇರಿಯಲ್ಲಿದ್ದ ಬ್ರಿಟಿಷ್ ಕಾರ್ಖಾನೆಯು ಮಂಗಳೂರಿನ ಭತ್ತದ ಪೂರೈಕೆಯನ್ನು ಅವಲಂಬಿಸಿತ್ತು. ಕ್ಷಿಪ್ರ ರಾಜಕೀಯ ಬದಲಾವಣೆಯು ಮಲಬಾರ್‌ನಲ್ಲಿ ಬ್ರಿಟಿಷರಿಗೆ ದೊಡ್ಡ ಹೊಡೆತವಾಗಿತ್ತು. ಅವರು ಭತ್ತದ ಪೂರೈಕೆಗಾಗಿ ಮಂಗಳೂರಿನಲ್ಲಿ ಬಿದನೂರಿನ ರಾಜ್ಯಪಾಲನಾಗಿದ್ದ ಸೂರಪ್ಪಯ್ಯನೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಹೊಸ ಆಡಳಿತದ ಉದಯವು ಈ ವ್ಯಾಪಾರಕ್ಕೆ ತಡೆಯೊಡ್ಡಿತು. ಬ್ರಿಟಿಷರು ಸುಲ್ತಾನನನ್ನು ಭೇಟಿಯಾಗಿ ಹೊಸ ಆಡಳಿತದೊಂದಿಗೆ ಒಪ್ಪಂದ ಕುದುರಿಸಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದರು. ಆದರೆ ಫರ್ಮಾನ್‌ನ ರೂಪದಲ್ಲಿ ಒಂದು ಒಡಂಬಡಿಕೆಗೆ ಅಂಗೀಕಾರ ನೀಡಲಾಯಿತು.[43] ಅದರ ಪ್ರಕಾರ ಮಂಗಳೂರಿನಿಂದ ತಲಚ್ಚೇರಿಗೆ ಭತ್ತ ರಫ್ತು ಮಾಡಲು ಕಂಪನಿಗೆ ಅವಕಾಶ ನೀಡಲಾಯಿತು. ಇದಕ್ಕೆ ಪ್ರತಿಯಾಗಿ ಎರಡೂ ಕಕ್ಷಿಗಳು ಪರಸ್ಪರರ ವೈರಿಗಳಿಗೆ ಸಹಾಯ ಮಾಡಬಾರದೆಂಬ ನಿಬಂಧನೆ ಹೇರಲಾಯಿತು. ತಮ್ಮನ್ನು ಮಂಗಳೂರಿನಲ್ಲಿ ಭೇಟಿಯಾಗುವಂತೆ ಹೈದರಲಿ ಮುಖ್ಯಸ್ಥರಿಗೆ ಸೂಚನೆ ಕಳುಹಿಸಿದ. ಕಡಬ, ಕುಂಬಳೆ ಮತ್ತು ವಿಟ್ಲದ ದೊರೆಗಳು ಹೊಸ ಆಡಳಿತಕ್ಕೆ ಶರಣಾಗಳು ಹಿಂಜರಿದರು. ಹೈದರಲಿಯು ಅವರನ್ನು ಬಲ ಪ್ರಯೋಗಿಸಿ ಶರಣಾಗುವಂತೆ ಮಾಡಿದನು. ಕುಂದಾಪುರವು ಒಂದು ಬಂದರಾಗಿದ್ದುದರಿಂದ ಅದನ್ನು ಒಂದು ಹೊಸ ವ್ಯವಸ್ಥೆಗೊಳಪಡಿಸಿದನು ಮತ್ತು ಆ ಬಂದರಿನ ಸುತ್ತ ಕಾವಲು ಸೇನೆಯನ್ನು ನಿಯೋಜಿಸಿದನು. ಶೇಖ್ ಅಯಾಝ್‌ರನ್ನು ಬಿದನೂರಿಗೆ ಕೋಟೆಯ ಕಾವಲುಗಾರನಾಗಿ ಕಳುಹಿಸಲಾಯಿತು. ಕ್ರಿ.ಶ. 1766ರೊಳಗೆ ಹೈದರಲಿ ನೀಲೇಶ್ವರದವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು ಮತ್ತು ಮಲಬಾರ್‌ನ ಜಮೋರಿನ್ ಅರಸನನ್ನು ಸೋಲಿಸಿದನು. ನಂತರ ಆವನು ಕೊಯಂಬತ್ತೂರಿನ ಕಡೆಗೆ ತೆರಳಿದನು ಮತ್ತು ಕ್ರಿ.ಶ. 1768ರಲ್ಲಿ ರಾಜಧಾನಿಗೆ ಹಿಂದಿರುಗಿದನು.

ಹೊಸ ಆಡಳಿತದ ಉದಯವು ಮುಸ್ಲಿಮರ ಮಟ್ಟಿಗೆ ಅತ್ಯಂತ ಪ್ರೋತ್ಸಾಹಕರ ಅಂಶವಾಗಿತ್ತು. ಮುಸ್ಲಿಮ್ ವರ್ತಕರು ವಾಣಿಜ್ಯ ರಂಗದಲ್ಲಿ ತಮಗಾದ ಆಘಾತದಿಂದ ಚೇತರಿಸಿಕೊಂಡರು ಮತ್ತು ಹೊಸದಾಗಿ ನೆಲೆ ಕಂಡುಕೊಳ್ಳತೊಡಗಿದರು. ಇದು ದಕ್ಖನದಿಂದ ಹನಫಿಗಳ ವಲಸೆಗೆ ನಾಂದಿ ಹಾಡಿತು. ಭಾರಿ ಸಂಖ್ಯೆಯ ಅಧಿಕಾರಿಗಳು, ಅಸಫ್‌ಗಳು, ಅಮಾಲ್ದಾರರು, ಖಿಲೆದಾರರು ಮತ್ತು ಸೈನಿಕರು ಜಿಲ್ಲೆಯಾದ್ಯಂತ ಹಬ್ಬಿದರು. ನಿಜವಾಗಿ ಈ ಬದಲಾವಣೆಯೇ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಯಿತು. ಕುಂದಾಪುರ, ಕಾರ್ಕಳ, ಮೂಡಬಿದ್ರೆ ಮತ್ತು ಬೆಳ್ತಂಗಡಿಯಲ್ಲಿ ಇಸ್ಲಾಮಿಗೆ ರಭಸ ದೊರೆಯಿತು. ದಕ್ಖನದ ಮುಸ್ಲಿಮ್ ಸೋದರರಿಂದಾಗಿ ಬ್ಯಾರಿಗಳು ಅಮೂಲ್ಯವಾದ ಘನತೆಯನ್ನು ಪಡೆದುಕೊಂಡರು. ಸುಲ್ತಾನನು ಧರ್ಮಭಕ್ತನಾಗಿದ್ದುದರಿಂದ ಮುಸ್ಲಿಮರಲ್ಲಿ ಧಾರ್ಮಿಕ ಜಾಗೃತಿಯನ್ನೂ ಮೂಡಿಸಿದನು. ಮಂಗಳೂರಿನಲ್ಲಿ ಒಂದು ಹೊಸ ಸೇನಾ ವ್ಯವಸ್ಥೆ ಸ್ಥಾಪಿಸಲು ರಾಜ್ಯಪಾಲ ಶೇಖ್ ಅಲಿ ನಿಧಿ ಸಂಗ್ರಹಿಸಲು ಪ್ರಯತ್ನಿಸುತ್ತಿದ್ದನು. ಆತನು ಒರಟಾದ ಕ್ರಮಗಳ ಮೂಲಕ ಸ್ಥಳೀಯ ಮುಖ್ಯಸ್ಥರಿಂದ ಭಾರಿ ಪ್ರಮಾಣದ ನಿಧಿಯನ್ನು ಅಪೇಕ್ಷಿಸಿದನು. ಕೆಲವೊಮ್ಮೆ ಆತನು ಮುಖ್ಯಸ್ಥರನ್ನು ಕೊಳ್ಳೆ ಹೊಡೆದನು. ಇದರಿಂದ ಅವಮಾನಿತರಾದ ಜೈನ ಮುಖ್ಯಸ್ಥರು ಶೇಖ್ ಅಲಿಯ ದೌರ್ಜನ್ಯದ

ವಿರುದ್ಧ ದೂರು ನೀಡಲು ಆರಂಭಿಸಿದರು. ಕ್ರಿ.ಶ. 1766ರಲ್ಲಿ ಹೈದರಲಿ ಮತ್ತೆ ಭೇಟಿ ನೀಡಿದಾಗ ಆತನನ್ನು ಮೂಡಬಿದ್ರೆಯಲ್ಲಿ ಭೇಟಿಯಾದ ಮುಖ್ಯಸ್ಥರು ಫಿರ್ಯಾದಿ ಸಲ್ಲಿಸಿದರು. ಸುಲ್ತಾನನು ಅವರಿಗೆ ಇನಾಮುಗಳನ್ನು ನೀಡುವ ಮೂಲಕ ಸಮಾಧಾನ ಪಡಿಸಿದನು. ಹಲವರು ವಾರ್ಷಿಕ ಪಿಂಚಣಿಗೆ (ತಸ್ದೀಕ್) ಪ್ರತಿಯಾಗಿ ತಮ್ಮ ಸೊತ್ತುಗಳನ್ನು ಒಪ್ಪಿಸಿದರು. ಸುಲ್ತಾನನು ಮೂಡಬಿದ್ರೆಯ ಚೌಟ ಅರಸನಿಗೆ 455 ವರಾಹಗಳನ್ನೂ ವೇಣೂರಿನ ಅಜಿಲಾಗಳಿಗೆ 60 ವರಾಹಗಳನ್ನೂ ತಸ್ದೀಕ್ ರೂಪದಲ್ಲಿ ನೀಡಿದನು.[44] ಹಿಂಬಾಕಿಗೆ ಪ್ರತಿಯಾಗಿ ಸಾಹುಕಾರ ಲಾಲಾ ಸಾಹೇಬನು ಅಜಿಲಾ ದೊರೆಗೆ ಭದ್ರತೆಯನ್ನು ಒದಗಿಸಿದನು.

ಈ ಹೊತ್ತಿಗಾಗಲೇ ಮುಂಬೈಯಿಂದ ಬ್ರಿಟಿಷ್ ಕಂಪನಿ ಗವರ್ನರ್ ಕರಾವಳಿಯ ಭಾಗಗಳನ್ನು ಮರುವಶಪಡಿಸಿಕೊಳ್ಳಲಿಕ್ಕಾಗಿ ಹೊರಟನು ಮತ್ತು ಒಂದು ಬ್ರಿಟಿಷ್ ಹಡಗುಗಳ ಗುಂಪು ಕ್ರಿ.ಶ. 1768ರಲ್ಲಿ ಮಂಗಳೂರಿಗೆ ಆಗಮಿಸಿತು. ಬ್ರಿಟಿಷರು ಮಂಗಳೂರನ್ನು ವಶಪಡಿಸಿಕೊಂಡರು. ಹೈದರಲಿಯು 3,000 ಯೋಧರು ಮತ್ತು 12,000 ಅಶ್ವಯೋಧರೊಂದಿಗೆ ಟೀಪು ಸುಲ್ತಾನನನ್ನು ಕಳುಹಿಸಿದನು. ತಾನೇ ಇನ್ನೊಂದು ದೊಡ್ಡ ಪಡೆಯೊಂದಿಗೆ ಹೈದರಲಿಯೂ ಹೊರಟನು. ಆಂಗ್ಲರಿಗೆ ಸೋಲಾಯಿತು. ಆತನು ಸೈನ್ಯವನ್ನು ಪುನಶ್ಚೇತನ ಗೊಳಿಸಲು ಮತ್ತು ನೌಕಾಪಡೆಯನ್ನು ಬಲಪಡಿಸಲು ಸಕ್ರಿಯ ಕ್ರಮಗಳನ್ನು ಕೈಗೊಂಡನು. ಹೈದರ್ ಕೊನೆಗೂ ಬ್ರಿಟಿಷರನ್ನು ಹೊರದಬ್ಬುವಲ್ಲಿ ಯಶಸ್ವಿಯಾದನು.[45] ಸುಬ್ರಮಣ್ಯದ ಮೂಲಕ ಆತನು ಮತ್ತೆ ರಾಜಧಾನಿಗೆ ಹಿಂದಿರುಗಿದನು. ದಾರಿಯ ಮಧ್ಯೆ ಬೆಳ್ತಂಗಡಿಯಲ್ಲಿ ಕೋಟೆಯೊಂದನ್ನು ಸುತ್ತುವರಿದು ವಶಪಡಿಸಿಕೊಂಡನು. ತದನಂತರ ಅದಕ್ಕೆ ಜಮಾಲಾಬಾದ್ ಎಂದು ಹೆಸರಿಸಿದನು. ತನ್ನ ಹೋರಾಟಗಳಿಗೆ ನೀಡಿದ ಬೆಂಬಲಕ್ಕೆ ಪ್ರತಿಯಾಗಿ ಆತನು ಕೊಡಗಿನ ಅರಸನಿಗೆ ಅಮರಸುಳ್ಯ ಮಾಗಣೆಯನ್ನು ನೀಡಿದನು.[46]

ಕ್ರಿ.ಶ. 1780ರಲ್ಲಿ ಹೈದರಲಿಯ ಹೊಸದಾಗಿ ನಿರ್ಮಿಸಲಾದ ನೌಕಾಪಡೆಯನ್ನು ಸರ್ ಎಡ್‌ವರ್ಡ್ ಹೂಗರ್ ಮಂಗಳೂರಿನಲ್ಲಿ ಧ್ವಂಸಗೊಳಿಸಿದನು. ಇದರ ಬೆನ್ನಲ್ಲೇ ಜನರಲ್ ಮ್ಯಾಥ್ಯೂಸ್ ಮುಂಬೈಯಿಂದ ಕುಂದಾಪುರಕ್ಕೆ ಆಗಮಿಸಿದನು. ಸುಲ್ತಾನನ ಸೇನೆಯು ಈ ಅತಿಕ್ರಮಣವನ್ನು ಹಿಮ್ಮೆಟ್ಟಿಸಲಾಗದೇ ಹೋಯಿತು. ಅವರು ಕುಂದಾಪುರವನ್ನು ವಶಪಡಿಸಿಕೊಂಡು ಹೊಸಂಗಡಿ ಮಾರ್ಗವಾಗಿ ಬಿದನೂರ್ ತಲುಪಿದರು. ಹೈದರನ ನೆಚ್ಚಿನ ಖಿಲೇದಾರ್ ಶೇಖ್ ಅಯಾಜ್ ಬ್ರಿಟಿಷರಿಗೆ ಕೋಟೆಯನ್ನು ಒಪ್ಪಿಸಿದನು. ಹೈದರ್‌ಘಡ್ (ಹೊಸ ಹೆಸರು) ಬ್ರಿಟಿಷರ ಪಾಲಾಯಿತು. ಭಾರಿ ಪ್ರಮಾಣದ ಸೇನೆಯೊಂದಿಗೆ ಟೀಪು ಕೋಟೆಯೆಡೆಗೆ ತೆರಳಿದನು ಮತ್ತು ತನ್ನ ಶೌರ್ಯದ ಪ್ರಯತ್ನದಿಂದಾಗಿ ಕೋಟೆಯನ್ನು ಮತ್ತೆ ವಶಪಡಿಸಿಕೊಂಡನು. ಬ್ರಿಟಿಷರಿಗೆ ಸೋಲಾಯಿತು.[47]

ಕರ್ನಲ್ ಕ್ಯಾಂಬೆಲ್ 700 ಯುರೋಪಿಯನ್ನರು ಮತ್ತು 2,000 ಸಿಪಾಯಿಗಳ ನೆರವಿನಿಂದ ಮಂಗಳೂರನ್ನು ವಶಪಡಿಸಿಕೊಂಡನು. ಹೈದರ್‌ನ ಮುಂಚೂಣಿ ಪಡೆ ಹಾಗೂ ಕಾವಲು ಸೈನ್ಯ ಆತ್ಮರಕ್ಷಣೆಯಲ್ಲಿ ಸೋತಿತು. ಬ್ರಿಟಿಷರು ಪಾಣೆ ಮಂಗಳೂರು ಮತ್ತು ಮೊಡಂಕಾಪುವನ್ನು ವಶಪಡಿಸಿಕೊಂಡರು ಮತ್ತು ಚರ್ಚ್‌ಗಳನ್ನು ನಿರ್ಮಿಸಿ ಸೇನೆಯನ್ನು ನಿಯೋಜಿಸಿದರು. ಟೀಪು ಮಂಗಳೂರಿಗೆ ನುಗ್ಗಿದನು. ಬ್ರಿಟಿಷರು ಮಂಗಳೂರನ್ನು ಉಳಿಸಿ

ಕೊಳ್ಳಲಾರದಾದರು ಹಾಗೂ ಭಾರಿ ಪ್ರಮಾಣದ ನಷ್ಟವನ್ನು ಅನುಭವಿಸಿದರು. ಕ್ರಿ.ಶ. 1785ರ ಮಾರ್ಚ್ 11ರಂದು ಮಂಗಳೂರು ಒಪ್ಪಂದಕ್ಕೆ ಟೀಪು (ಈತ ಕ್ರಿ.ಶ. 1782ರಲ್ಲಿ ಹೈದರಲಿಯ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡನು) ಸಹಿ ಹಾಕಿದನು.[48] ಇದು ಸುಲ್ತಾನನಿಗೆ ಅನುಕೂಲಕರವಾಗಿತ್ತು. ಜನರಲ್ ಕ್ಯಾಂಬಲ್ ತನ್ನ ಗಡಿಕಾವಲನ್ನು ವಾಪಸ್ ಪಡೆದು ಕೊಂಡನು. ತನ್ನನ್ನು ಸೇರಿಕೊಳ್ಳಲು ಹಿಂಜರಿಯುತ್ತಿದ್ದ ಸ್ಥಳೀಯ ಆಡಳಿತಗಾರರ ಬಗ್ಗೆ ಟೀಪು ಸುಲ್ತಾನನಿಗೆ ಅನುಮಾನವಿತ್ತು. ಬ್ರಿಟಿಷರಿಗೆ ಸಹಕಾರ ನೀಡಿದ ಕುಂಬಳೆ ರಾಜನನ್ನು ನಾಡಿ ನಿಂದ ಹೊರದಬ್ಬಲಾಯಿತು ಮತ್ತು ಆತನ ಸೋದರನನ್ನು ಗಲ್ಲಿಗೇರಿಸಲಾಯಿತು. ವಿಟ್ಠಲ ಹೆಗ್ಗಡೆ ಪಲಾಯನಗೈದನು. ವಿಟ್ಲದ ರಾಜ ಮತ್ತು ಕುಂಬಳೆಯ ರಾಜ ಪರಸ್ಪರ ಒಂದಾಗಿ ಡಕಾಯಿತರಾದರು. ಮಂದಿರ ಮತ್ತು ವರ್ತಕರ ಮೇಲೆ ದಾಳಿ ನಡೆಸುವುದು, ಕೊಳ್ಳೆ ಹೊಡೆಯುವುದು ಅವರ ಕಾಯಕವಾಗಿತ್ತು.[49] ಸುಲ್ತಾನನು ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ರಕ್ಷಿಸುವಲ್ಲಿ ಯಶಸ್ವಿಯಾದನು. ಆತನಿಗೆ ಎರಡು ಅನುಕೂಲಕರ ಅಂಶಗಳಿದ್ದವು. 1. ಜನಸಂಖ್ಯೆಯಲ್ಲಿ ಮುಸ್ಲಿಮರೇ ಗಮನಾರ್ಹ ಸಂಖ್ಯೆಯಲ್ಲಿದ್ದುದರಿಂದ ಅವರು ದೇಶಭಕ್ತ ಮುಸ್ಲಿಮ್ ಆರಸನಿಗೆ ಬೆಂಬಲ ನೀಡಿದರು ಮತ್ತು ಸಾಮ್ರಾಜ್ಯಕ್ಕೆ ಕೊಡುಗೆ ನೀಡಿದರು. 2. ಜೈನರ ಪ್ರಮುಖ ವರ್ತಕ ಗುಂಪು ಮುಸ್ಲಿಮರೊಂದಿಗೆ ಸ್ನೇಹದಿಂದಿದ್ದರು ಮತ್ತು ಅವರು ಆಡಳಿತಗಾರನಿಗೆ ಪರವಾಗಿದ್ದರು. ಸುಲ್ತಾನ್ ಮುಕ್ತ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿದನು ಮತ್ತು ದಬ್ಬಾಳಿಕೆಯನ್ನು ಕೊನೆಗೊಳಿಸಿದನು. ಹೀಗೆ ಸುಲ್ತಾನನು ತನ್ನ ಕ್ರಮಗಳನ್ನು ಜಾರಿಗೊಳಿಸಿದನು.

ಕೊಡಗಿನ ವೀರರಾಜೇಂದ್ರ ಅರಸನು ಬ್ರಿಟಿಷ್ ಕಂಪನಿಯ ಮಿತ್ರನಾಗಿದ್ದನು. ಬ್ರಿಟಿಷರನ್ನು ಮಂಗಳೂರಿನಲ್ಲಿ ಸೋಲಿಸಿದ ಬಳಿಕ ಕೊಡಗಿಗೆ ತೆರಳಿದ ಟೀಪು ಸುಲ್ತಾನ್ ಆತನನ್ನು ಬಲಾತ್ಕಾರದಿಂದ ಶರಣಾಗಿಸಿದನು. ಬಂಡುಕೋರರಿಗೆ ಕ್ಷಮೆ ನೀಡಿದನು. ಮಡಿಕೇರಿ ಯಲ್ಲಿ ಕೋಟೆಯೊಂದನ್ನು ನಿರ್ಮಿಸಿದ ಅವನು ಜಾಫರ್ ಖೊಲಿ ಬೇಗ್‌ನನ್ನು ಕೋಟೆಯ ಕಾವಲುಗಾರನಾಗಿ ನೇಮಿಸಿದನು. ಕುಶಾಲನಗರ ಮತ್ತು ಭಾಗಮಂಡಲದಲ್ಲೂ ಕೋಟೆಗಳನ್ನು ನಿರ್ಮಿಸಿ ಅಲ್ಲಿ ರಕ್ಷಕಭಟರನ್ನು ನೇಮಿಸಿದನು. ಜೈನುಲ್ ಆಬಿದೀನ್ ಶುಸ್ತಿಯನ್ನು ಕೊಡಗಿನ ಮುಖ್ಯ ಆಡಳಿತಾಧಿಕಾರಿಯಾಗಿ ನೇಮಿಸಲಾಯಿತು. ಕ್ರಿ.ಶ. 1795 ರಾಜನು ಬ್ರಿಟಿಷರೊಂದಿಗೆ ಸೇರಿ ಬಂಡೆದ್ದನು. ಟೀಪು ಸುಲ್ತಾನ್ ಮತ್ತು ಫ್ರೆಂಚ್ ಜನರಲ್ ಡಿ ಲಾಲಿ ಕೊಡಗಿಗೆ ತೆರಳಿದರು ಮತ್ತು ದಂಗೆಯನ್ನು ಕೊನೆಗಾಣಿಸಿದರು. ಮಡಿಕೇರಿಯಲ್ಲಿ ನೆಲೆಸಿದ ಸುಲ್ತಾನನು ನಂತರ ಅಯ್ಯಂಗಾರಿ ಮತ್ತು ಭಾಗಮಂಡಲಕ್ಕೆ ತೆರಳಿದನು. ಇಲ್ಲಿ ಕಣ್ಣೂರಿನ ರಾಣಿ ಬಲಿಯಾ ಬಾನು ಅಮೂಲ್ಯ ಉಡುಗೊರೆಗಳನ್ನು ಕಾಣಿಕೆಯಾಗಿ ಕೊಟ್ಟಳು.[50]

ರಾಣಿ ಬಲಿಯಾ ಬಾನು

ಕಣ್ಣೂರಿನ ಅರಕ್ಕಳ ಪರಿವಾರದ ರಾಣಿಯಾಗಿದ್ದ ಬಲಿಯಾ ಬಾನು ಮಲಬಾರ್ ದಂಡಯಾತ್ರೆಯ ಸಂದರ್ಭದಲ್ಲಿ ಟೀಪು ಸುಲ್ತಾನನ ಬೆಂಬಲಿಗಳಾಗಿ ಮಾರ್ಪಟ್ಟಳು. ಬ್ರಿಟಿಷರ ವಿರುದ್ಧ ಹೋರಾಡಲು ಆಕೆ ಜನರಲ್ ಫಝ್ಲ್ ಖಾನ್‌ಗೆ ನಾಲ್ಕು ಸಾವಿರ ಸೈನಿಕರ ಮಾಪಿಳ್ಳ ತುಕಡಿಯೊಂದನ್ನು ಕಳುಹಿಸಿಕೊಟ್ಟಿದ್ದಳು. ಮಲಬಾರ್ ಯುದ್ಧದ ಸಂದರ್ಭದಲ್ಲಿ

ಆಕೆ ಅತ್ಯಂತ ನಿರ್ಣಾಯಕ ಪಾತ್ರವಹಿಸಿದ್ದಳು ಎಂದು ಟೀಪು ಕೈಯಲ್ಲಿ ಸೋಲನುಭವಿಸಿದ್ದ ಜನರಲ್ ರಾಬರ್ಟ್ ಟೇಲರ್ ವರದಿ ಮಾಡಿದ್ದ. ಆಕೆಯ ಮಗಳನ್ನು ಟೀಪು ಸುಲ್ತಾನನ ಮಗನಿಗೆ ಮದುವೆ ಮಾಡಿ ಕೊಡಲಾಗಿತ್ತು ಮತ್ತು ಆಕೆಯ ಪರಿವಾರ ತದನಂತರ ಮೈಸೂರಿನ ರಾಜ ಕುಟುಂಬದೊಂದಿಗೆ ನಿಕಟ ಸಂಪರ್ಕ ಬೆಳೆಸಿತ್ತು. ಸುಲ್ತಾನನು ಮೈಸೂರಿಗೆ ವಾಪಸಾದ ನಂತರ ಜನರಲ್ ಟೇಲರ್ ಮತ್ತೆ ದಾಳಿ ನಡೆಸಿ ಆಕೆಯನ್ನು ಶರಣಾಗುವಂತೆ ಬಲಾತ್ಕರಿಸಿದ್ದ. ಆದರೆ ಸುಲ್ತಾನನ ಜನರಲ್‌ಗಳೊಂದಿಗೆ ಸೇರಿ ಷಡ್ಯಂತ್ರ ರೂಪಿಸಿದ ಆಕೆ ಸುಲ್ತಾನನ ಪಡೆ ಆಗಲೇ ಕಣ್ಣೂರನ್ನು ತ್ಯಜಿಸಿದೆ ಮತ್ತು ಮಂಗಳೂರಲ್ಲಿ ತಂಗಿದೆ ಎಂದು ವದಂತಿ ಹಬ್ಬಿಸಿದಳು. ಬ್ರಿಟಿಷರನ್ನು ಶಾಂತಿ ಮಾತುಕತೆಗೆ ಆಹ್ವಾನಿಸಿದಳು. ಜನರಲ್ ಟೇಲರ್ ಮೇಜರ್ ಡೌ ಎಂಬಾತನನ್ನು ತಲಚ್ಚೇರಿಯಿಂದ ಕಣ್ಣೂರಿಗೆ ಕಳುಹಿಸಿಕೊಟ್ಟನು. ಆತನನ್ನು ಬರಮಾಡಿಕೊಂಡ ರಾಣಿ ಕೋಟೆಯ ಮುಂಭಾಗದಲ್ಲಿ ಅವರಿಗೆ ಬಿಡಾರಗಳನ್ನು ಹಾಕಿಕೊಟ್ಟಳು. ಆದರೆ ಮಧ್ಯರಾತ್ರಿಯ ವೇಳೆಗೆ ಮಾಪಿಳ್ಳ ಪಡೆಯು ಶಿಬಿರಗಳ ಮೇಲೆ ಆಕ್ರಮಣ ನಡೆಸಿತು. ಮುಖಾಮುಖಿ ಸಂಘರ್ಷದಲ್ಲಿ ಹಲವರು ಸತ್ತರು ಮತ್ತು ಇನ್ನು ಕೆಲವರು ತಲಚೇರಿಗೆ ಪಲಾಯನ ಮಾಡಿದರು. ಮೇಜರ್ ಡೌ ಕೂಡಾ ಓಡಿ ಹೋಗುವಂತಾಯಿತು. ಜನರಲ್ ಓಬರ್ ಕ್ರಾಂಬಿಗೆ ಪತ್ರ ಬರೆದ ಜನರಲ್ ಟೇಲರ್ ಮೈಸೂರಿಗೆ ಹೋಗುವ ದಾರಿಯಲ್ಲಿ ರಾಣಿಯನ್ನು ಶಿಕ್ಷಿಸುವಂತೆ ಸೂಚಿಸಿನು. ಬ್ರಿಟಿಷರು ಮಾಪಿಳ್ಳೆಗಳನ್ನು ಸೋಲಿಸಿದರು ಮತ್ತು ರಾಣಿಯು ಶಾಂತಿಯ ಬೇಡಿಕೆಯನ್ನು ಮುಂದಿಟ್ಟಳು. ಆದರೆ ಬ್ರಿಟಿಷ್ ಜನರಲ್ ಆಕೆಯ ಪ್ರಸ್ತಾಪವನ್ನು ತಿರಸ್ಕರಿಸಿದನು ಮತ್ತು ವಿದ್ರೋಹಕ್ಕೆ ಶಿಕ್ಷೆಯಾಗಿ ಪೀಠದಿಂದ ಕೆಳಗಿಳಿಯುವಂತೆ ತಿಳಿಸಿದನು.

ಜನರಲ್ ಆಬರ್ ಕ್ರಾಂಬಿಗೆ ಆತನ ಮೈಸೂರು ದಂಡಯಾತ್ರೆಯಲ್ಲಿ ಮಾರ್ಗದರ್ಶನ ನೀಡುತ್ತಿದ್ದ ಕೊಡಗಿನ ರಾಜ ವೀರರಾಜೇಂದ್ರ ಈ ಹೊತ್ತಿಗೆ ತಲಚ್ಚೇರಿಯಲ್ಲಿದ್ದ. ಕಣ್ಣೂರಿನ ರಾಜ ಕುಟುಂಬವು ಆತನಿಗೆ ಆರಂಭದ ಕಷ್ಟಕಾಲದಲ್ಲಿ ನೆರವಾಗಿತ್ತು. ಹೀಗಾಗಿ ರಾಣಿಯು ಆತನ ನೆರವು ಪಡೆಯಲು ನಿರ್ಧರಿಸಿದಳು. ತನ್ನ ದೂತ ಕುಂಞಿಪಕ್ಕಿ ಮತ್ತು ಮೂಸಾ ಬ್ಯಾರಿಯನ್ನು ತನ್ನ ಅಪ್ರಾಪ್ತ ವಯಸ್ಕ ಮಗನೊಂದಿಗೆ ರಾಜನ ಬಳಿಗೆ ಆಕೆ ಕಳುಹಿಸಿದಳು. ಸಾಮ್ರಾಜ್ಯವನ್ನು ತನ್ನ ಮಗನಿಗೆ ಕೊಡುವಂತೆ ಮನವಿ ಮಾಡಿದಳು. ಅವರನ್ನು ರಾಜನು ಜನರಲ್ ಟೇಲರ್ ಬಳಿಗೆ ಒಯ್ದನು. ಬ್ರಿಟಿಷ್ ಯೋಜನೆಯಲ್ಲಿ ವೀರರಾಜೇಂದ್ರನ ಮಹತ್ವವನ್ನು ಪರಿಗಣಿಸಿ ಟೇಲರ್ ಅವರನ್ನು ಜನರಲ್ ಆಬರ್ ಕ್ರಾಂಬಿ ಬಳಿಗೆ ಒಯ್ದನು. ಆತನ ಮಧ್ಯಸ್ಥಿಕೆಯ ಪರಿಣಾಮವಾಗಿ ಬ್ರಿಟಿಷ್ ಕಂಪನಿಗೆ ಶರಣಾಗುವ ಷರತ್ತಿನೊಂದಿಗೆ ರಾಜಕುಮಾರನಿಗೆ ಪಟ್ಟ ಬಿಟ್ಟುಕೊಡಲು ಜನರಲ್ ಒಪ್ಪಿದನು. ರಾಣಿಗೆ ಕ್ಷಮೆ ನೀಡಲಾಯಿತು ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಕಣ್ಣೂರಿನಲ್ಲಿ ನಿಯೋಜಿಸಲಾಯಿತು.[51]

ಲಂಗ್ಡಾ ದಾಡಿ ಶೇಖ್ ಇಮಾಮ್

ಕ್ರಿ.ಶ. 1792ರಲ್ಲಿ ಟೀಪು ಸುಲ್ತಾನನ ಸಿಫಾದಾರ್ ಆಗಿದ್ದ ಲಂಗ್ಡಾ ದಾದಿ ಶೇಖ್ ಇಮಾಮ್ ದಕ್ಷಿಣ ಕೆನರಾದಲ್ಲಿ ಸುಲ್ತಾನನ ಆಳ್ವಿಕೆಯನ್ನು ಮರುಸ್ಥಾಪಿಸಲು ಯತ್ನಿಸಿದ. ಆತ ಪಾಂಜಾ ಮತ್ತು ಬೆಳ್ಳಾರೆ ಮಾಗಣೆಯನ್ನು ತಮಗೆ ಒಪ್ಪಿಸುವಂತೆ ಕೊಡಗಿನ ರಾಜನಿಗೆ ಒತ್ತಡ

ಹೇರಿದ. ಅಷ್ಟೇ ಅಲ್ಲ ಈ ಎರಡು ಪ್ರದೇಶಗಳನ್ನು ಆತ ಆಕ್ರಮಿಸಿಕೊಂಡ. ಜತೆಗೆ ಅಮರಸುಳ್ಯ ಮಾಗಣೆಯನ್ನೂ ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಯತ್ನಿಸಿದ. ರೈತರ ಮೇಲೆ ಆಕ್ರಮಣ ನಡೆಸಿ ಅವರನ್ನು ಕೊಳ್ಳೆ ಹೊಡೆದ. ವೀರರಾಜೇಂದ್ರ ಅರಸನು ಬ್ರಿಟಿಷರ ಮೊರೆ ಹೋದ. ಈ ಬಗ್ಗೆ ತನಿಖೆ ನಡೆಸುವಂತೆ ಲಾರ್ಡ್ ಕಾರ್ನ್‌ವಾಲಿಸನು ಮಲಬಾರ್‌ನ ಕಮಿಷನರ್ ವಿಲಿಯಮ್ ಪಾಲ್ಮರ್ ಮತ್ತು ಮೇಜರ್ ಅಲೆಕ್ಸಾಂಡರ್ ಡೌಗೆ ಆದೇಶ ಜಾರಿಗೊಳಿಸಿದ. ಗಡಿಗಳಲ್ಲಿ ಕಾವಲನ್ನು ಸಶಕ್ತಗೊಳಿಸಲು ಬ್ರಿಟಿಷರು ಕ್ರಮಗಳನ್ನು ತೆಗೆದುಕೊಂಡರು.

ಕ್ರಿ.ಶ. 1797ರಲ್ಲಿ ಅಮರಸುಳ್ಯ ಮಾಗಣೆಯ ವಿವಾದವನ್ನು ಇತ್ಯರ್ಥಪಡಿಸಲು ಮಲಬಾರ್‌ನ ಕಮಿಷನರ್ ಸ್ಪೆನ್ಸರ್ ಜೋಸಯ್ಯ ಉಟೋಫ್ ಮತ್ತು ಕ್ಯಾಪ್ಟನ್ ಮಹಾನೆಯನ್ನು ವೀರರಾಜೇಂದ್ರ ದೊರೆಯ ಬಳಿ ಕಳುಹಿಸಿಕೊಟ್ಟ. ರಾಜ ತನ್ನ ಪ್ರತಿನಿಧಿ ಕಾರ್ಣಿಕ್ ಸುಬ್ಬಯ್ಯನನ್ನು ಕಳುಹಿಸಿಕೊಟ್ಟ. ಸುಲ್ತಾನನು ಶೇಖ್ ಶಿಹಾಬುದ್ದೀನ್ ಮತ್ತು ಮೀರ್ ಮೊಹ್ಮದಾಲಿಯನ್ನು ತನ್ನ ಏಜೆಂಟರಾಗಿ ಕಳುಹಿಸಿಕೊಟ್ಟ. ಆದರೆ ಟೀಪುವಿನ ಮರಣದವರೆಗೂ ಈ ವಿವಾದ ಇತ್ಯರ್ಥಗೊಳ್ಳಲೇ ಇಲ್ಲ.[52]

ಸಾಧುರಿ ಬ್ಯಾರಿಯ ಬಂಡಾಯ

ಕ್ರಿ.ಶ. 1799ರಲ್ಲಿ ಬ್ರಿಟಿಷ್ ಪಡೆಯು ಶ್ರೀರಂಗಪಟ್ಟಣವನ್ನು ಸುತ್ತುವರಿಯಿತು. ಬ್ರಿಟಿಷ್ ದಾಳಿಯನ್ನು ಹಿಮ್ಮೆಟ್ಟಿಸಲು ಕೋಟೆಯನ್ನು ಸಶಕ್ತಗೊಳಿಸಲು ಸುಲ್ತಾನ ಹೆಣಗುತ್ತಿದ್ದ. ಬ್ರಿಟಿಷರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿರುವಾಗಲೇ ಸುಲ್ತಾನನ ಮಿತ್ರರು ಮತ್ತು ಹಿತೈಷಿಗಳು ತುಳುನಾಡಿನ ಬೇರೆ ಬೇರೆ ಕಡೆಗಳಲ್ಲಿ ಬಂಡಾಯದ ಬಾವುಟ ಹಾರಿಸಿದರು. ಬ್ಯಾರಿಗಳ ಒಂದು ಗುಂಪು ಕಾಸರಗೋಡು ಸಮೀಪದ ಕುಂಬಳೆಯಲ್ಲಿ ದಂಗೆ ಎದ್ದಿತು ಮತ್ತು ಬ್ರಿಟಿಷ್ ಬೆಂಬಲಿಗರನ್ನು ಸೂರೆಗೈಯಿತು. ಕೊಡಗಿನ ವೀರರಾಜೇಂದ್ರ ಅರಸನು ಕಾರ್ಣಿಕ್ ಸುಬ್ಬಯ್ಯ ಮತ್ತು ಕಾರ್ಯಕಾರ ಬೋಪ ಎಂಬವರ ನೇತೃತ್ವದಲ್ಲಿ ಐನೂರು ಕೊಡವರ ಪಡೆಯೊಂದನ್ನು ಕಳುಹಿಸಿಕೊಟ್ಟ. ಕ್ಯಾಪ್ಟನ್ ಮಹಾನೇ ಎಂಬ ಬ್ರಿಟಿಷ್ ಸಲಹೆಗಾರನು ಈ ದಂಡಯಾತ್ರೆಯನ್ನು ನಿರ್ದೇಶಿಸಿದ್ದ. ಸೇನೆಯು ವಿಟ್ಲ ಬಳಿಯ ವೀರಕಂಬಕ್ಕೆ ತಲುಪಿ ಅಲ್ಲೇ ಠಿಕಾಣಿ ಹೂಡಿತು. ಆವರು ತುಳುನಾಡಿನ ಮುಸ್ಲಿಮ್ ಮುಖಂಡ ಸಾಧುರಿ ಬ್ಯಾರಿಗೆ ರಾಜನಿಗೆ ಶರಣಾಗುವಂತೆ ಸೂಚನೆ ಕಳುಹಿಸಿದರು.

ಈ ಸಾಧುರಿ ಬ್ಯಾರಿ ಯಾರು? ಆತ ಬಂಟ್ವಾಳ ತಾಲೂಕಿನ ಒಬ್ಬ ಜಮೀನ್ದಾರನಾಗಿದ್ದ. ಆತನ ಮೂಲ ಗ್ರಾಮವು ಪ್ರಾಯಶಃ ಅಜಿಲಮೊಗರು ಆಗಿತ್ತು. ಅಲ್ಲಿ ಆತನಿಗೆ ಭಾರಿ ಪ್ರಮಾಣದ ಸಂಪತ್ತು ಇತ್ತು. ಮೂತ ಮಾಹಿನ್ ಬ್ಯಾರಿ ಎಂಬ ಶ್ರೀಮಂತ ಕೃಷಿಕ ಆತನ ಅಪ್ಪನಾಗಿದ್ದ. ಒಬ್ಬ ಜಮೀನ್ದಾರನಾಗಿದ್ದುದರಿಂದ ಆತ ಹೆಚ್ಚಿನ ಮುಸ್ಲಿಮ್ ವರ್ತಕರು ಮತ್ತು ಕೃಷಿಕರನ್ನು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸಂಘಟಿಸುವಲ್ಲಿ ಯಶಸ್ವಿಯಾದ. ಆತನಿಗೆ ಟೀಪು ಸುಲ್ತಾನನಿಂದ ಸಮ್ಮಾನವೂ ದೊರೆತಿತ್ತು. ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡಾಗ ಆತ ತುಳುನಾಡನ್ನು ಬ್ರಿಟಿಷ್ ಕಂಪನಿಯ ಆಳ್ವಿಕೆಯಿಂದ ಬಿಡುಗಡೆಗೊಳಿಸಲು ಯತ್ನಿಸಿದ. ಆತನಿಗೆ ಕೊಡಗಿನ ರಾಜನ ಆಳ್ವಿಕೆಯ ಬಗ್ಗೆಯೂ ಅಸಮಾಧಾನವಿತ್ತು. ಆತನ ಮೊಮ್ಮಗನಾದ ಸಾಧುರಿ

ಬೆಹಾರಿ ಕ್ರಿ.ಶ. 1856ರಲ್ಲಿ ಉಪ್ಪಿನಂಗಡಿಯ ಬೆಲ್ಯ ಗ್ರಾಮದ ಪಟೇಲನಾಗಿದ್ದ. ಆತನ ಉತ್ತರಾಧಿಕಾರಿಗಳು ಈಗಲೂ ಅಜಿಲಮೊಗರು ಮತ್ತು ಮಂಗಳೂರಿನಲ್ಲಿ ವಾಸವಾಗಿದ್ದಾರೆ.[53]

ವೀರಕಂಭದಲ್ಲಿ ಕೊಡಗು ಸೇನೆಯನ್ನು ಕಂಡ ಸಾಧುರಿ ಸೇನೆಯನ್ನು ಸಂಘಟಿಸಿ ಕೊಡವರ ಮೇಲೆರಗಲು ಯೋಜನೆ ರೂಪಿಸಿದ. ಆದರೆ ಕೊಡವರು ಒಮ್ಮೆಲೆ ಆತನ ಶಿಬಿರದ ಮೇಲೆ ದಾಳಿ ನಡೆಸಿ ಸೋಲಿಸಿಬಿಟ್ಟರು. ಸಾಧುರಿ ಓಡಿಹೋದ. ಈ ಸಂಘರ್ಷದಲ್ಲಿ 23 ಮಂದಿ ಸತ್ತು ಸುಮಾರು 400 ಮಂದಿ ಗಾಯಗೊಂಡರು. ಕ್ಷತ್ರಿ ಕೃಷ್ಣರಾಜ ಎಂಬ ಸಾಧುರಿಯ ಒಬ್ಬ ಸರದಾರನನ್ನು ಸೆರೆ ಹಿಡಿದು ಕ್ಯಾಪ್ಟನ್ ಮಹಾನೆಯ ಬಳಿಗೆ ಕರೆದೊಯ್ಯಲಾಯಿತು. ಈ ಮಧ್ಯೆ ಸಾಧುರಿ ಬೆಹಾರಿ, ಸುಲ್ತಾನನ ಅಧಿಕಾರಿಯಾಗಿದ್ದ ಮೀರ್ ಮೊಹಮ್ಮದಾಲಿಯೊಂದಿಗೆ ಸೇರಿ ಇನ್ನೂ ದೊಡ್ಡದಾದ ಬ್ಯಾರಿ ಪಡೆಯನ್ನು ಬಂಟ್ವಾಳದ ಸುತ್ತಮುತ್ತ ಕಟ್ಟಿದ. ಕೊಡಗು ಪಡೆಗಳು ಬಂಟ್ವಾಳ ತಲುಪಿದವು. ನದಿ ದಂಡೆಗೆ ಆಗಮಿಸಿದಾಗ ಬ್ಯಾರಿ ಪಡೆಗಳು ಅವರ ಮೇಲೆ ದಾಳಿ ನಡೆಸಿದವು. ಆದರೆ ಕೊಡವ ಪಡೆಗಳು ಉತ್ತಮ ಸ್ಥಿತಿಯಲ್ಲಿದ್ದವು. ಅವರ ಬಳಿ ಬ್ರಿಟಿಷ್ ಶಸ್ತ್ರಗಳಾದ ಬಂದೂಕು ಮತ್ತು ಫಿರಂಗಿಗಳಿದ್ದವು. ಹೀಗಾಗಿ ಕೂಡಲೇ ಸಾಧುರಿ ತನ್ನ ಜನರನ್ನು ವಾಪಸ್ ಕರೆಸಿಕೊಂಡು ಉತ್ತರದ ಕಡೆಗೆ ಹೊರಟ. ಈ ತಿಕ್ಕಾಟದಲ್ಲಿ ಒಂಭತ್ತು ಮಂದಿ ಸತ್ತು ಸುಮಾರು 50 ಮಂದಿ ಗಾಯಗೊಂಡರು.

ಸಾಧುರಿ ಬ್ಯಾರಿ ಮತ್ತು ಮೊಹಮ್ಮದಾಲಿ ಕೂಡಲೇ ಗ್ರಾಮಗಳಿಗೆ ತೆರಳಿ ಬ್ಯಾರಿ ಪಡೆಗಳನ್ನು ಸಂಘಟಿಸಿದರು. ರಕ್ಷಣಾ ಪಡೆಯೊಂದನ್ನು ಸಂಘಟಿಸುವಂತೆ ಅವರು ಕರೆ ನೀಡಿದರು. ಶ್ರೀರಂಗಪಟ್ಟಣದಲ್ಲಿ ಸುಲ್ತಾನ್ ಸಂಕಷ್ಟದಲ್ಲಿದ್ದುದರಿಂದ ಬ್ರಿಟಿಷ್ ಕಂಪನಿಯಿಂದ ತುಳುನಾಡನ್ನು ರಕ್ಷಿಸುವುದು ಅವರ ಮುಖ್ಯ ಗುರಿಯಾಗಿತ್ತು. ಉದ್ಯಾವರದ ಬ್ಯಾರಿಗಳೂ ಆತನ ಪಡೆಯನ್ನು ಸೇರಿದರು. ಸುಲ್ತಾನನ ರಾಜ ತುಕುಡಿಯು ಮೊಹಮ್ಮದಾಲಿಯ ಅಧೀನದಲ್ಲಿತ್ತು ಮತ್ತು ಅದು ಸಾಧುರಿಯ ಸೇನೆಯನ್ನು ಸೇರಿಕೊಂಡಿತು. ಮೂನಾಂಕಡಲಿನ (ಮಲಬಾರ್) ನಾಯನಾರ್‌ಗಳು ಮತ್ತು ಕುಂಬಳೆ, ಮಂಜೇಶ್ವರ, ಉಳ್ಳಾಲ, ಬಂಟ್ವಾಳ ಮತ್ತು ಬೆಳ್ತಂಗಡಿಯ ಬ್ಯಾರಿಗಳು ಕೂಡಾ ಆತನ ಹಿಂದೆ ಒಟ್ಟಾಗಿದ್ದರು. ಹೀಗೆ ಸುಮಾರು ಮೂರು ಸಾವಿರ ಸೈನಿಕರಿದ್ದ ಪಡೆಯು ಕೊಡಗು ಸೇನೆಯನ್ನು ಉದ್ಯಾವರದ ಬಳಿ ತಡೆಹಿಡಿಯಲು ಪ್ರಯತ್ನಿಸಿತು. ಆದರೆ ಅವರ ಬಳಿ ಸಾಕಷ್ಟು ಶಸ್ತ್ರಾಸ್ತ್ರಗಳಾಗಲಿ ಸಲಕರಣೆಗಳಾಗಲಿ ಇರಲಿಲ್ಲ. ಬ್ರಿಟಿಷ್ ಪಡೆಗಳು ಸುಲ್ತಾನನನ್ನು ಸುತ್ತುವರಿದ ಕಾರಣ ಆತನ ಸಹಾಯವೂ ಅವರಿಗೆ ದೊರೆಯಲಿಲ್ಲ. ಟೀಪು ಸುಲ್ತಾನನ ಪತನವು ಅವರ ಮಟ್ಟಿಗೆ ಆಘಾತಕಾರಿ ಹೊಡೆತವಾಗಿತ್ತು. ಹೀಗೆ ಈ ಹೋರಾಟವು ವಿಫಲವಾಯಿತು. ಶತ್ರು ಪಾಳಯದ ಸುಮಾರು 51 ಮಂದಿ ಮೃತಪಟ್ಟರು. ಆದರೆ ಮುಸ್ಲಿಮರ ಪೈಕಿ ಮೃತರ ಸಂಖ್ಯೆ ಇನ್ನೂ ಅಧಿಕವಿತ್ತು. ಬಹಳಷ್ಟು ಮಂದಿ ಗಾಯಗೊಂಡರು. ಶತ್ರುಗಳು ಉದ್ಯಾವರವನ್ನು ಕೊಳ್ಳೆ ಹೊಡೆದರು ಮತ್ತು ಮಸೀದಿಗೆ ಕೊಳ್ಳಿಯಿಟ್ಟರು. ಸಾಧುರಿ ಮತ್ತು ಮೊಹಮ್ಮದಾಲಿ ವಿವಶರಾಗಿ ಪಲಾಯನಗೈದರು. ಕೊಡಗು ಪಡೆಗಳು ಉದ್ಯಾವರವನ್ನು ವಶಪಡಿಸಿಕೊಂಡವು ಮತ್ತು ಬಾರ್ಕೂರಿನ ವರೆಗೂ ಮುನ್ನುಗ್ಗಿದವು. ಕ್ರಿ.ಶ. 1801ರ ವೇಳೆಗೆ ತುಳುನಾಡಿನಲ್ಲಿ ದಂಗೆಗಳನ್ನು ಮತ್ತು ಅಶಾಂತಿಯನ್ನು ಮಟ್ಟ ಹಾಕಲಾಯಿತು. ಅವರು ಮೊಹಮ್ಮದಾಲಿಯಿಂದ ಬೆಳ್ಳಾರೆಯನ್ನು ವಶಪಡಿಸಿಕೊಂಡರು

ಮತ್ತು ಈ ಯಶಸ್ವಿ ದಂಡಯಾತ್ರೆಯ ಬಗ್ಗೆ ಮಲಬಾರ್‌ನ ಕಮಿಷನರ್‌ಗೆ ವರದಿ ಒಪ್ಪಿಸಿದರು. ಜನರಲ್ ಹಾರಿಸ್ ಮಂಗಳೂರಿಗೆ ಕರ್ನಲ್ ವೈಸ್‌ಮನ್‌ನನ್ನು ಕಳುಹಿಸಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿ ಬ್ರಿಟಿಷ್ ಕಂಪನಿಯ ಆಡಳಿತ ಜಾರಿಗೊಳಿಸುವಂತೆ ಸೂಚಿಸಿದ. ಆತ ಮಂಗಳೂರು ತಲುಪಿದಾಗ ಕಾರ್ಣಿಕ್ ಸುಬ್ಬಯ್ಯ ಆತನಿಗೆ ಪ್ರದೇಶವನ್ನು ಹಸ್ತಾಂತರಿಸಿಬಿಟ್ಟ ಕ್ರಿ.ಶ. 1804ರ ವೇಳೆಗೆ ದಕ್ಷಿಣ ಕೆನರಾದಲ್ಲಿ ಕಂಪನಿಯ ಆಳ್ವಿಕೆ ಸ್ಥಾಪನೆಗೊಂಡಿತ್ತು.[54]

ಪೋರ್ಚುಗೀಸರ ತೊಂದರೆಯಿಂದಾಗಿ ಬಾರ್ಕೂರು ವಿಭಾಗವು ತನ್ನ ಮಹತ್ವವನ್ನು ಕಳೆದುಕೊಂಡಿತ್ತು. ಅದರ ಪ್ರಾಮುಖ್ಯತೆಯನ್ನು ಮರುಸ್ಥಾಪಿಸಲು ಸುಲ್ತಾನ್ ಯತ್ನಿಸಿದ. ಪ್ರಾಂತ್ಯಕ್ಕೆ ನವಾಬ್ ತಾಲೂಕು ಎಂದು ಹೆಸರಿಸಲಾಯಿತು ಮತ್ತು ಮೂರು ಹೋಬಳಿಗಳಾಗಿ ಅದನ್ನು ವಿಂಗಡಿಸಲಾಯಿತು - ಬಸ್ರೂರು ರಾಜ್ಯ, ಕುಂದಾಪುರ ರಾಜ್ಯ ಮತ್ತು ಕಾರ್ಕಳ ರಾಜ್ಯ. ಗಂಗಾಧರಯ್ಯ ಕುಂದಾಪುರದ ಚೊಚ್ಚಲ ಗವರ್ನರ್ ಆಗಿದ್ದ. ಈತನ ಬಳಿಕ ಮೊಹಮ್ಮದಾಲಿ ಖಾನ್ ಜಾಬೇಕ ಅಧಿಕಾರ ವಹಿಸಿಕೊಂಡ. ಉಳಿದ ಎರಡು ಹೋಬಳಿಗಳನ್ನು ಮಳಾಲಿ ಹಮ್ಮಬ್ಬ ಮತ್ತು ಮೊಹಮ್ಮದ್ ಶರೀಫ್ ನೋಡಿಕೊಳ್ಳುತ್ತಿದ್ದರು. ಮೊಹಮ್ಮದಾಲಿಯ ನಂತರ ನೂರ್ ಗುಲಾಮಲಿ ಅಧಿಕಾರ ವಹಿಸಿಕೊಂಡ.[55] ಟೀಪು ಸುಲ್ತಾನ್ ಬೆಳ್ತಂಗಡಿಯ ಬೆಟ್ಟದ ಮೇಲಿದ್ದ ನರಸಿಂಹಘಡ್ ಎಂಬ ಕೋಟೆಯನ್ನು ವಶಪಡಿಸಿಕೊಂಡು ಅದಕ್ಕೆ ಜಮಾಲಾಬಾದ್ ಎಂದು ಮರುನಾಮಕರಣ ಮಾಡಿದ. ಜತೆಗೆ ಅದನ್ನು ನವೀಕರಿಸಿ ಅಝೀಝ್ ಖಾನ್‌ನನ್ನು ಖಿಲೇದಾರನಾಗಿ ನೇಮಿಸಿದ. ಆತ ಅಲ್ಲಿ ಮಸೀದಿಯೊಂದನ್ನು ನಿರ್ಮಿಸಿ ಮುಸ್ಲಿಮ್ ವಸತಿ ಕೇಂದ್ರವನ್ನು ಸ್ಥಾಪಿಸಿದ.[56] ಮಲ್ಪೆಯ ಸೈಂಟ್ ಮೇರೀಸ್ ದ್ವೀಪಕ್ಕೆ ದರಿಯಾ ಬಹದೂರ್‌ಗಢ್ ಎಂದು ಆತ ಮರುನಾಮಕರಣ ಮಾಡಿದ. ಆತ ಮಂಗಳೂರಿನ ಸುಲ್ತಾನ್ ಪಳ್ಳಿಯನ್ನೂ ಜೀರ್ಣೋದ್ಧಾರಗೊಳಿಸಿದ. ಇದು ತುಳುನಾಡಿನಲ್ಲೇ ಅತ್ಯಂತ ಶ್ರೇಷ್ಠವಾದ ಮರದ ಶಿಲ್ಪವೆನಿಸಿಕೊಂಡಿತು. ನೆಲದ ಅಲಂಕಾರ ಮತ್ತು ಕಂಬಗಳಲ್ಲಿರುವ ಶಿಲ್ಪಗಳು ವಾಸ್ತುಶಿಲ್ಪಿಗಳ ಮೆಚ್ಚುಗೆ ಗಳಿಸಿವೆ. ಈ ಮಸೀದಿಯನ್ನು ಮಸ್ಜಿದು ಝೀನತ್ ಬಕ್ಷ್ ಎಂದು ಮರುನಾಮಕರಣಗೊಳಿಸಲಾಯಿತು. ಅದು ಇಸ್ಲಾಮ್ ಸಂಸ್ಕೃತಿಯ ಕೇಂದ್ರವಾಗಿ ಮಾರ್ಪಟ್ಟಿತು. ಸಾಯಿರ್ ಬ್ಯಾರಿ ಈ ಮಸೀದಿಯ ಮೊಕ್ತೇಸರ್ ಆಗಿದ್ದ. ಸುಲ್ತಾನನು ಕುದ್ರೋಳಿಯ ಶಾಹ್‌ಮೀರ್ ವಲಿಯನ್ನು ಭೇಟಿಯಾಗುತ್ತಿದ್ದ ಮಸೀದಿ ಮತ್ತು ದರ್ಗಾ ನಿರ್ಮಿಸುವ ಬಯಕೆಯನ್ನು ವ್ಯಕ್ತಪಡಿಸಿದ್ದ. ಅಂತೆಯೇ ಮಸೀದಿ ನಿರ್ಮಾಣಗೊಂಡಿತು. ಆದರೆ 1799ರಲ್ಲಿ ಸುಲ್ತಾನನ ಅಕಾಲಿಕ ನಿಧನದಿಂದಾಗಿ ಅದು ಅಪೂರ್ಣವಾಗಿಯೇ ಉಳಿಯಿತು. ಆತ ಜಿಲ್ಲೆಯ ಎಲ್ಲ ಪ್ರಮುಖ ಇಸ್ಲಾಮೀ ಕೇಂದ್ರಗಳಿಗೂ ಭೇಟಿ ನೀಡಿದ ಮತ್ತು ಮಸೀದಿಗಳ ಸಮೀಕ್ಷೆಗೆ ಆದೇಶ ನೀಡಿದ. ಜತೆಗೆ ತನ್ನ ದಾಖಲೆಯಲ್ಲಿದ್ದ ಎಲ್ಲ ಮಸೀದಿಗಳಿಗೆ ತಸ್ದೀಕ್‌ಗಳನ್ನು ಕೊಟ್ಟ. ಇಂತಹ ಅನುದಾನವು ಮಂಗಳೂರು, ಕುಂದಾಪುರ ಮತ್ತು ಕಾಸರಗೋಡಿನಲ್ಲಿ ವಿತರಣೆಯಾಯಿತು. ಮಂದಿರ ಮತ್ತು ಇತರ ಆರಾಧನಾ ಕ್ಷೇತ್ರಗಳಿಗೂ ಆತ ದತ್ತಿ ಮತ್ತು ಅನುದಾನವನ್ನು ಒದಗಿಸಿದ.

ಈ ಅವಧಿಯಲ್ಲಿ ಮಂಗಳೂರು ಬಂದರ್ ಕ್ಷಿಪ್ರವಾಗಿ ಬೆಳವಣಿಗೆ ಹೊಂದಿತು. ನೌಕಾಬಲವು ಗಮನಾರ್ಹವಾಗಿ ಹೆಚ್ಚಿತು. ಬಂದರನ್ನು ಪಾ ಬಂದರ್ ಎಂದು ಹೆಸರಿಸಲಾಯಿತು.

ಹೊಸ ವರ್ತಕರ ಉದಯವಾಯಿತು. ಕೊಂಕಣಿಗಳು, ಗೋವಾದ ಗೌಡ ಸಾರಸ್ವತರು ಒಂದು ಸಕ್ರಿಯ ವರ್ತಕ ವರ್ಗವಾಗಿ ರೂಪುಗೊಂಡರು. ಪೋರ್ಚುಗೀಸ್ ದೌರ್ಜನ್ಯದಿಂದ ಪಾರಾಗಲು ಅವರು ಗೋವಾದಿಂದ ಬಂದಿದ್ದರು ಮತ್ತು ತುಳುನಾಡು ಜಿಲ್ಲೆಯ ವಿವಿಧೆಡೆ ನೆಲೆಸಿದರು. ಮೇಮನ್‌ಗಳು ಇನ್ನೊಂದು ಗುಂಪಾಗಿದ್ದರು. ಇವರು ಮಂಗಳೂರಿನ ಮುಂಚೂಣಿಯ ವರ್ತಕರಾಗಿ ಮಾರ್ಪಟ್ಟರು. ಬ್ಯಾರಿ ವರ್ತಕರು ತಮ್ಮ ಹಂಜಮಾನ್‌ಗಳನ್ನು ಕಳೆದುಕೊಂಡು ಹೆಚ್ಚು ಜಾಗೀರ್ದಾರಿ ಹವ್ಯಾಸಗಳನ್ನು ಬೆಳೆಸಿಕೊಳ್ಳತೊಡಗಿದಾಗ ದಕ್ಖನದ ಹನಫಿಗಳು ಮತ್ತು ಮೇಮನ್‌ಗಳು ಇಸ್ಲಾಮಿನೊಳಗಡೆ ಸುಧಾರಣವಾದಿಗಳಾಗಿ ಕಂಡು ಬಂದರು. ತುಳುನಾಡಿನ ಮುಸ್ಲಿಮರ ಬದುಕಿನಲ್ಲಿ ಸುಲ್ತಾನನ ಆಳ್ವಿಕೆಯು ಒಂದು ಹೊಸ ನೆಲೆಯನ್ನು ಕಲ್ಪಿಸಿಕೊಟ್ಟಿತು. ಮಂಗಳೂರು ಮತ್ತು ತುಳುನಾಡಿನ ಮುಸ್ಲಿಮರು ನವಾಬರ ಆಳ್ವಿಕೆಯಿಂದ ಸ್ಫೂರ್ತಿಯನ್ನು ಪಡೆದರು.

4. ಸಂಪ್ರದಾಯ ಮುರಿದು ಬಿತ್ತು: ಸುಧಾರಣೆ ಮತ್ತು ಪ್ರಗತಿಯ ಕಡೆಗೆ ಕಣ್ಣು

ತುಳುನಾಡಿನ ಮುಸ್ಲಿಮರ ಇತಿಹಾಸದಲ್ಲಿ ಕ್ರಿ.ಶ. 1799ರಲ್ಲಿ ಬ್ರಿಟಿಷ್ ಕಂಪನಿಯ ಆಳ್ವಿಕೆಯ ಆರಂಭವು ಒಂದು ಮೈಲಿಗಲ್ಲಾಗಿತ್ತು. ಸಾಧುರಿ ಬ್ಯಾರಿಯ ನೇತೃತ್ವದಲ್ಲಿ ನಡೆದ ತೀವ್ರ ಮತ್ತು ನಿಖರ ಕ್ರಾಂತಿಯು (ಸೂಚನೆ : ಈ ವಾಖ್ಯ ಅಪೂರ್ಣ, ಒರಿಜಿನಲ್ ಅಸ್ಪಷ್ಟ). ಜಿಲ್ಲೆಯಲ್ಲಿ ವ್ಯಾಪಕವಾದ ಗೊಂದಲ ಮೂಡಿಸಿತ್ತು. ಹಲವಾರು ಸ್ಥಳೀಯ ಮುಖ್ಯಸ್ಥರು ಬ್ರಿಟಿಷರ ಧೋರಣೆಯಿಂದ ಆಕರ್ಷಿತರಾದರು. ಅವರನ್ನು ಆಕರ್ಷಿಸಲಿಕ್ಕಾಗಿ ಬ್ರಿಟಿಷರು ಅವರ ಪಿಂಚಣಿಯನ್ನು ಹೆಚ್ಚಿಸಿದರು. ಮೂಡಬಿದ್ರೆಯ ಚೌಟ ಅರಸನ ಪಿಂಚಣಿಯನ್ನು ಬ್ರಿಟಿಷರು 155 ವರಾಹದಿಂದ 205 ವರಾಹಕ್ಕೆ ಏರಿಸಿದರು. ಕ್ರಿ.ಶ. 1798ರಲ್ಲಿ ರಾಜನ ನಿಷ್ಠೆಯ ಬಗ್ಗೆ ಅನುಮಾನ ಹುಟ್ಟಿದ ಕಾರಣ ಪಿಂಚಣಿಯ ಮೊತ್ತವನ್ನು ಮಂಗಳೂರಿನ ಆಡಳಿತಾಧಿಕಾರಿಯಾಗಿದ್ದ ಸುಲು ಖಾನ್ ಏರಿಸಿದ್ದ.[57] ಆದರೆ ಬ್ರಿಟಿಷರು ಕೇವಲ 198 ವರಾಹಗಳನ್ನು (ರೂ. 793) ಮಾತ್ರ ನೀಡಿದ್ದರು. ಮುಸ್ಲಿಮ್ ವರ್ತಕರು ಬ್ರಿಟಿಷರ ಕೈಯಲ್ಲಿ ಅವಮಾನ ಅನುಭವಿಸತೊಡಗಿದರು. ನವಾಬರ ಕಾಲದ ಉಜ್ವಲ ದಿನಗಳು ಮರೆಯಾದವು. ಯಾತನೆ ಮತ್ತು ಸಂಕಷ್ಟಗಳು ಅವರನ್ನು ಕಾಯುತ್ತಿದ್ದವು. ಪೋರ್ಚುಗೀಸರ ಕಾಲದಲ್ಲಾದ ದಬ್ಬಾಳಿಕೆ ಪುನಾವರ್ತನೆಗೊಳ್ಳುವುದೋ ಎಂಬ ಭೀತಿಗೆ ಮಂಗಳೂರಿನ ವರ್ತಕರು ಒಳಗಾದರು. ಆದರೆ ಬ್ರಿಟಿಷರ ಧೋರಣೆ ಭಿನ್ನವಾಗಿತ್ತು. ಕಲೆಕ್ಟರ್ ಮುನ್ರೋ ಮುಸ್ಲಿಮ್ ವರ್ತಕರನ್ನು ಬ್ರಿಟಿಷ್ ಕಂಪನಿಗೆ ನಿಷ್ಠರಾಗುವಂತೆ ಮಾಡಲು ಪ್ರಯತ್ನಿಸಿದನು. ಆದರೆ ಟೀಪು ಸುಲ್ತಾನನ ಹುತಾತ್ಮತೆಯ ನೋವಿನ ಮಧ್ಯೆಯೂ ಕೆಲವು ಸ್ಥಳೀಯ ಮುಖಂಡರು ಚೇತರಿಕೆಯ ನಿರೀಕ್ಷೆಯಲ್ಲಿದ್ದರು.

ಕ್ರಿ.ಶ. 1799ರಲ್ಲಿ ಟೀಪು ಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಪತನಗೊಳ್ಳುವುದರೊಂದಿಗೆ ತುಳುನಾಡು ಜಿಲ್ಲೆಯನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಮದ್ರಾಸ್ ರೆವೆನ್ಯೂ ಬೋರ್ಡ್‌ನ ಅಧೀನಕ್ಕೊಳಪಡಿಸಿತು. ಸರ್ ಥೋಮಸ್ ಮುನ್ರೋನನ್ನು ಜಿಲ್ಲೆಯ ಮೊದಲ ಕಲೆಕ್ಟರ್ ಆಗಿ ನೇಮಕ ಮಾಡಲಾಯಿತು. ಸ್ಥಳೀಯ ಮುಖ್ಯಸ್ಥನು ಜಮಾಲಾಬಾದ್‌ನ

ಕೋಟೆಯನ್ನು ಟೀಪು ಸುಲ್ತಾನ್‌ನ ಪರವಾಗಿ ಹಿಡಿದಿಟ್ಟುಕೊಂಡಿದ್ದ. ಆದರೆ ವಿಟ್ಲ ಮತ್ತು ಕುಂಬಳೆಯ ರಾಜರು ಕೊಳ್ಳೆ ಮತ್ತು ಲೂಟಿಯ ಮೂಲಕ ತಮ್ಮ ಸಾಮ್ರಾಜ್ಯಕ್ಕೆ ವಾಪಸ್ ಬರಲು ಪ್ರಯತ್ನಿಸುತ್ತಿದ್ದರು. ಆದರೆ ನಿಷ್ಠೆಯ ಪ್ರತಿರೋಧ ಮುಂದುವರಿಯಿತು.[58] ನಾಲ್ಕು ನೂರು ಸೈನಿಕರು ಜಮಾಲಾಬಾದ್ ಕೋಟೆಯನ್ನು ಸುತ್ತುವರಿದರು. ಕೋಟೆಯ ಕೆಳಗೆ ಆಸಫ್‌ನ ನಿವಾಸವಿತ್ತು. ಒಂದು ಬಡಾವಣೆಯಾಗಿ ಅದನ್ನು ಅಭಿವೃದ್ಧಿಪಡಿಸಲಾಯಿತು. ಕ್ರಿ.ಶ. 1799 ರಲ್ಲಿ ಕೂರ್ಗಿ ಪಡೆಗಳು ಅದರ ಮೇಲೆ ದಾಳಿ ನಡೆಸಿದವು ಮತ್ತು ಅದನ್ನು ಬ್ರಿಟಿಷರು ವಶಪಡಿಸಿಕೊಂಡರು. ತಿಮ್ಮ ಎಂಬ ಟೀಪುವಿನ ಅಧಿಕಾರಿ (ಬ್ರಿಟಿಷರು ಈತನನ್ನು ಕೃಷ್ಣನಾಯಕ್ ಎಂದು ಕರೆಯುತ್ತಿದ್ದರು) ಕಂಪನಿಗೆ ಸಿಪಾಯಿಗಳನ್ನು ಒದಗಿಸುವ ಭರವಸೆಯೊಂದಿಗೆ ಬ್ರಿಟಿಷ್ ಸೇನೆಯನ್ನು ಸೇರಿಕೊಂಡ. ಆದರೆ ಕೊಯಮತ್ತೂರಿನ ಶಿರಸ್ತೇದಾರ್ ಆಗಿದ್ದ ಸುಬ್ಬರಾವ್, 200 ಮಂದಿ ಸಕ್ರಿಯ ಸೈನಿಕರ ಬೆಂಬಲದೊಂದಿಗೆ, ಫಾತೆ ಹೈದರ್ ಎಂಬ ಕಪಟಿಯನ್ನು ಟೀಪುವಿನ ಪುತ್ರ ಮತ್ತು ಉತ್ತರಾಧಿಕಾರಿ ಎಂದು ಘೋಷಿಸಿ ಕಂಪನಿಯ ವಿರುದ್ಧ ದಂಗೆ ಎದ್ದರು. ಅವರು ಜಮಾಲಾಬಾದ್‌ಗೆ ತೆರಳಿದರು. ಮುಸ್ಲಿಮರು ಸಹಜವಾಗಿಯೇ ಈ ಬಂಡಾಯಕ್ಕೆ ಬೆಂಬಲ ನೀಡಿದರು. ಅವರು ಸುಂಕದಕಟ್ಟೆಯಲ್ಲಿ ಬ್ರಿಟಿಷ್ ಸಿಪಾಯಿಗಳನ್ನು ಸೋಲಿಸಿದರು. ತದನಂತರ ಅವರು ಕುದುಮಕ್ಕೆ ತೆರಳಿ ಅಲ್ಲಿ ಸಾಂತಯ್ಯ ಎಂಬಾತನ ಮನೆ ಯಲ್ಲಿ ತಂಗಿದರು.[59] ಹೀಗೆ ಜಮಾಲಾಬಾದ್ ಕೋಟೆಯನ್ನು ಮುಸ್ಲಿಮರು ಮರಳಿ ವಶಪಡಿಸಿಕೊಂಡರು.[60]

ಸುಲ್ತಾನನಿಂದ ಉಚ್ಚಾಟಿಸಲ್ಪಟ್ಟಿದ್ದ ವಿಟ್ಲದ ದೊರೆ ತಲಚ್ಚೇರಿಯಲ್ಲಿ ಬ್ರಿಟಿಷರ ಆಶ್ರಯ ಮತ್ತು ಪಿಂಚಣಿಯನ್ನು ಪಡೆದನು. ಕ್ರಿ.ಶ. 1799ರಲ್ಲಿ ವಿಟ್ಲದ ಹೆಗ್ಗಡೆ ರವಿವರ್ಮ ನರಸಿಂಹ ದೊಂಬ ಇತರ ಹಲವರೊಂದಿಗೆ ಸೇರಿ ಮಂಜೇಶ್ವರ ದೇಗುಲವನ್ನು ಕೊಳ್ಳೆ ಹೊಡೆದನು.[61] ಆತನ ವಿರುದ್ಧ ಕ್ರಮ ಕೈಗೊಳ್ಳಲು ಕಲೆಕ್ಟರ್ ಮುನ್ರೋ ತನ್ನ ಕಮಾಂಡಿಂಗ್ ಅಧಿಕಾರಿ ಕರ್ನಲ್ ಹಾರ್ಟ್‌ನನ್ನು ಕಳುಹಿಸಿಕೊಟ್ಟನು. ಮೇ 7ರಂದು ಸುಬ್ಬರಾವ್ ಉಪ್ಪಿನಂಗಡಿಯ ಮೇಲೆ ದಾಳಿ ನಡೆಸಿದ. ಕಡಬದ ತಹಸೀಲ್ದಾರ್ ಪರಾಭವಗೊಂಡ ಮತ್ತು ಪಲಾಯನಗೈದ. ಸುಬ್ಬರಾವ್ ಮತ್ತು ಆತನ ಪಡೆ ಬಂಟ್ವಾಳಕ್ಕೆ ತಲುಪಿತು. ಇನ್ನೊಂದು ಪಡೆ ಪುತ್ತೂರಿನ ಮೇಲೆ ದಾಳಿ ಮಾಡಿತು. ಈ ಪ್ರದೇಶಗಳಿಂದ ಆತ ಭಾರಿ ಪ್ರಮಾಣದ ಕಂದಾಯ ವಸೂಲಿ ಮಾಡಿದ. ಕೂರ್ಗಿ ಆಕ್ರಮಣದಿಂದ ತೊಂದರೆಗೀಡಾಗಿದ್ದ ಮುಸ್ಲಿಮರು ಮತ್ತು ಇತರ ಮುಖ್ಯಸ್ಥರು ಬ್ರಿಟಿಷರನ್ನು ಹೊರದಬ್ಬಿ ಮತ್ತೆ ಅಧಿಕಾರಕ್ಕೇರಲಿಕ್ಕಾಗಿ ಪರಸ್ಪರ ಕೈ ಜೋಡಿಸಿದರು. ಬಂಟ್ವಾಳದ ಪಟೇಲನಾಗಿದ್ದ ಕುಡುಮದ (ಧರ್ಮಸ್ಥಳ) ಕುಮಾರ ಹೆಗ್ಗಡೆಗೆ ಬಂಡಾಯವನ್ನು ಹತ್ತಿಕ್ಕುವ ಹೊಣೆಯನ್ನು ನೀಡಲಾಗಿತ್ತು. ಆತನಿಗೆ ಎರಡು ಸಾವಿರ ಸೈನಿಕರನ್ನು ಕೊಡಲಾಗಿತ್ತು. ಆತ ಸುಬ್ಬರಾವ್‌ನ ವಿರುದ್ಧ ದಾಳಿ ನಡೆಸಿದ. ಆದರೆ ಗುಂಡಿನ ದಾಳಿಗೆ ತುತ್ತಾಗಿ ಆತ ಗಾಯ ಗೊಂಡ. ಅಲ್ಲಿಗೆ ತಲುಪಿದ ಕಡಬದ ತಹಸೀಲ್ದಾರ್ ಪಡೆಗಳ ನೇತೃತ್ವವಹಿಸಿ ಹೋರಾಟವನ್ನು ಮುಂದುವರಿಸಿದ. ಆತ ಬಂಡುಕೋರರನ್ನು ಸಿಸಿಲೆಘಾಟ್‌ವರೆಗೆ ಬೆನ್ನಟ್ಟಿ ಕೊಂಡು ಹೋದ. ಆದರೆ ಸುಬ್ರಹ್ಮಣ್ಯದ ನೂಜಿ ನಾಯಕನ ಬೆಂಬಲದೊಂದಿಗೆ ಜಮಾಲಾ ಬಾದ್‌ನ್ನು ಬ್ರಿಟಿಷರು ಮರಳಿ ವಶಪಡಿಸಿಕೊಂಡರು. ಕುಂಬಳೆ ಮತ್ತು ವಿಟ್ಲದ ಅರಸರು ಕೂಡಾ ಬ್ರಿಟಿಷರಿಗೆ

ಶರಣಾದರು. ಬಂಡುಕೋರರನ್ನು ನಿರ್ನಾಮ ಮಾಡಲಾಯಿತು. ಗವರ್ನರ್ ಜನರಲ್ ಮಕ್ರ್ಯೂಸ್ ಆಫ್ ವೆಲ್ಲೆಸ್ಲಿ ಕ್ರಿ.ಶ. 1801ರಲ್ಲಿ ಕೆನರಾ ಕರಾವಳಿಯ ಸಂಸ್ಕೃತಿಯ ಬಗ್ಗೆ ಸಮೀಕ್ಷೆ ನಡೆಸಲು ಬುಕನನ್‌ನ್ನು ನೇಮಕ ಮಾಡಿದ.[62] ಆತ ಹೊಸದುರ್ಗ, ಕುಂಬಳೆ, ಮಂಜೇಶ್ವರ, ಮಂಗಳೂರು, ಫರಂಗಿಪೇಟೆ, ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ, ಹಿರಿಯಡ್ಕ, ಉಡುಪಿ, ಬ್ರಹ್ಮಾವರ, ಕುಂದಾಪುರಗಳಿಗೆ ಭೇಟಿ ನೀಡಿ ಉತ್ತರ ಕೆನರಾ ಕಡೆಗೆ ತೆರಳಿದ. ಆತ ಈ ಪ್ರದೇಶದ ಪ್ರಾಮುಖ್ಯತೆಗಳ ಬಗ್ಗೆ ಟಿಪ್ಪಣಿ ಮಾಡಿದ.

ರೈತರು ಮತ್ತು ಭೂಮಾಲಿಕರು ಕಂದಾಯ ಕೊಡಲಾಗದೆ ಹೋದಾಗ ಕ್ರಿ.ಶ. 1831 ರಲ್ಲಿ ಮತ್ತೆ ಸಮಸ್ಯೆ ತಲೆದೋರಿತು. ಅವರು ಭಾರಿ ಪ್ರಮಾಣದಲ್ಲಿ ಕಿಸ್ತ್ ತೆರಬೇಕಾಗಿತ್ತು. ತಮ್ಮ ಬೆಳೆಗಳಿಗೆ ಒಳ್ಳೆಯ ಬೆಲೆ ಇರಲಿಲ್ಲ. ಬ್ರಾಹ್ಮಣರು, ಪಟೇಲರು ಮತ್ತು ಶಿರಸ್ತೇದಾರರು ಬಂಡಾಯಗಾರರನ್ನು ಬೆಂಬಲಿಸಿದರು. ಕಲೆಕ್ಟರ್ ಕ್ಯಾಮರೂನ್ ಗೊಂದಲದಲ್ಲಿದ್ದ. ಈ ಮಧ್ಯೆ ಕ್ರಿ.ಶ. 1834ರಲ್ಲಿ ಮತ್ತೆ ಕೊಡಗಿನಲ್ಲಿ ಸಮಸ್ಯೆ ತಲೆದೋರಿತು. ಕರ್ನಲ್ ಜಾಕ್ಸನ್ ಕುಂಬಳೆ ಯಿಂದ ಕೊಡಗಿಗೆ ತೆರಳಿದನು. ಈಶ್ವರಮಂಗಳ ತಲುಪಿದಾಗ ಮದ್ದೂರು ಮತ್ತು ಬೆಳ್ಳಾರೆಯ ಮಧ್ಯೆ ದಿಗ್ಬಂಧನ ಹೇರಲಾಗಿದೆ ಎಂಬ ಸುದ್ದಿ ಆತನಿಗೆ ಸಿಕ್ಕಿತು. ತದನಂತರ ನಡೆದ ಚಕಮಕಿ ಯಲ್ಲಿ ಇಬ್ಬರು ಬ್ರಿಟಿಷ್ ಅಧಿಕಾರಿಗಳು ಗುಂಡಿಗಾಹುತಿಯಾದರು ಮತ್ತು ಹಲವರು ಗಾಯ ಗೊಂಡರು. ಕ್ಯಾಪ್ಟನ್ ಜಾಕ್ಸನ್ ಕಾಸರಗೋಡಿಗೆ ಹಿಂದಿರುಗಿದ.[63] ಕಡಬದ ಮುಸ್ಲಿಮರು ಬಂಡಾಯಕ್ಕೆ ಬೆಂಬಲ ನೀಡಿದರು. ಈ ಬಂಡಾಯವು ಅಮರಸುಳ್ಯ ಮಾಗಣೆ ಯನ್ನು ತುಳುನಾಡಿಗೆ ಹಿಂದಿರುಗಿಸಲು ನಿರ್ಬಂಧಿಸಿತು. ಬಂಡಾಯವನ್ನು ಸಂಪೂರ್ಣ ಹತ್ತಿಕ್ಕಲು ಸಾಧ್ಯವಾಗಲಿಲ್ಲ. ಅದು ಇನ್ನೂ ದೊಡ್ಡದಾದ ಕಲ್ಯಾಣಪ್ಪನ ಕಾಟಕಾಯಿ 1837 ಎಂಬ ರಾಜಕೀಯ ಬಂಡಾಯದ ಜತೆ ವಿಲೀನಗೊಂಡಿತು. ಆದರೆ ಇದನ್ನು ಬ್ರಿಟಿಷರು ಕೊನೆಗೂ ದಮನಿಸಿಬಿಟ್ಟರು. ಮದ್ರಾಸ್ ಬೋರ್ಡ್‌ನ ಅಧೀನದಲ್ಲಿ ಕೆನರಾ ಜಿಲ್ಲೆಯ ಭಾಗವಾಗಿದ್ದ ಉತ್ತರ ಕೆನರಾ ಜಿಲ್ಲೆಯನ್ನು ಕ್ರಿ.ಶ. 1862ರಲ್ಲಿ ಪ್ರತ್ಯೇಕಿಸಿ ಬಾಂಬೆ ಪ್ರೆಸಿಡೆನ್ಸಿಗೆ ಸೇರ್ಪಡೆ ಗೊಳಿಸಲಾಯಿತು.[64] ಆದರೆ ಈ ತುಳುನಾಡು ಜಿಲ್ಲೆಯ ಬ್ರಿಟಿಷ್ ಕಲೆಕ್ಟರ್‌ಗಳು ಹೆಚ್ಚಾಗಿ ಸಮಸ್ಯೆಗಳ ಇತ್ಯರ್ಥದಲ್ಲೇ ತೊಡಗಿದ್ದರು ಹೀಗಾಗಿ ಯಾವುದೇ ಕಠಿಣ ಕ್ರಮಗಳನ್ನು ತೆಗೆದು ಕೊಳ್ಳಲಾರದೆ ಹೋದರು. ಆದರೆ ಹೆಚ್ಚಿನ ಉತ್ಪಾದನೆಗಾಗಿ ಆರ್ಥಿಕತೆಯನ್ನು ಪುನರುಜ್ಜೀವನ ಗೊಳಿಸುವ ಹಾಗೂ ಸ್ಥಳೀಯ ಸಮಸ್ಯೆಗಳಲ್ಲಿ ಹಸ್ತಕ್ಷೇಪ ನಡೆಸುವ ಬ್ರಿಟಿಷ್ ಧೋರಣೆ ಯಿಂದಾಗಿ ಸ್ಥಳೀಯ ಭೂಮಾಲಿಕರು ಮತ್ತು ವರ್ತಕರ ಬೆಂಬಲವು ಅವರಿಗೆ ದೊರೆಯಿತು. ಹೀಗೆ ಅವರಿಗೆ ಬೆಂಬಲ ನೀಡಿದವರನ್ನು ಬಹದೂರ್‌ಗಳಾಗಿ ನಿಯುಕ್ತಗೊಳಿಸಲಾಯಿತು. (ಖಾನ್ ಮತ್ತು ರಾವ್ ಎಂಬಂತಹ ಗೌರವಾರ್ಹ ಅಡ್ಡಹೆಸರು). ಇದು ಕರಾವಳಿ ಜಿಲ್ಲೆಯಲ್ಲಿ ಸ್ಥಳೀಯ ಮುಖಂಡರನ್ನು ಸ್ಥಾನಪಲ್ಲಟಗೊಳಿಸಿ ಹಲವಾರು ಖಾನ್ ಬಹದೂರ್‌ಗಳು ಮತ್ತು ರಾವ್ ಬಹದೂರ್‌ಗಳ ನೇಮಕಕ್ಕೆ ನಾಂದಿ ಹಾಡಿತು.

ಟೇಬಲ್ 4: ಸೌತ್ ಕೆನರಾ ಜಿಲ್ಲೆಯ ಕಲೆಕ್ಟರ್‌ಗಳ ಪಟ್ಟಿ

ಅ. ಬ್ರಿಟಿಷ್ ಕಂಪನಿ ಆಡಳಿತ (1799-1857)

1. ಸರ್ ಥೋಮಸ್ ಮುನ್ರೋ (1799)
2. ಜೆ. ರ್ಯಾವೆನ್‌ಶೋ (1800)
3. ಅಲೆಕ್ಸಾಂಡರ್ ರೀಡ್ (1805)
4. ಥೋಮಸ್ ಹಾರಿಸ್ (1816)
5. ಜೆ. ಬ್ಯಾಬಿಂಗ್ಟನ್ (1824)
6. ಎಚ್. ಡಿಕ್ಕಿನ್ಸನ್ (1829)
7. ಎನ್.ಸಿ. ಕ್ಯಾಮರನ್ (1831)
8. ಎಚ್. ವಿವೇಶ್ (1833)
9. ಜಿ.ಎಮ್. ಆಗಿಲ್ವಿಲ್ (1835)
10. ಸಿ.ಆರ್. ಕಾಟನ್ (1835)
11. ಮೆಲ್ಕಲನ್ ಲೆವಾಯ್ನ್ (1837)
12. ಎಚ್. ಎಂ. ಬ್ಲೇರ್ (1838, 40, 45)
13. ಬೆಲ್ವರ್ಡ್ ಮೆಟ್ಲನ್ (1839-42)
14. ಈ.ಪಿ. ಥಾಮ್ಸನ್ (1844)
15. ಆರ್. ಡಿ. ಪಾರ್ಕರ್ (1845)
16. ಟಿ.ಎಲ್. ಬ್ಲೇನ್ (1846)
17. ಎಫ್. ಎನ್. ಮೋಟ್ಲಿಬಾಯ್ (1850)
18. ಡಬ್ಲ್ಯೂ ಫಿಷರ್ (1855)
19. ಜೆ.ಡಿ. ರಾಬಿನ್ಸನ್ (1857)

ಆ. ಬ್ರಿಟಿಷ್ ಆಡಳಿತ (1858-1947)

1. ಜೆ.ಡಿ. ರಾಬಿನ್ಸನ್ (1857)
2. ಜೆ.ಫ್ರೇಸರ್
3. ಡಿ.ಪಿ. ಹಾಜ್ಸನ್ (1861)
4. ಜೆ.ಲಿ. ಮಾರಿಸ್ (1863)
5. ಜೆ. ಥಾಮ್ಸನ್ (1864)
6. ಡಬ್ಲ್ಯೂ ಎಂ. ಕ್ಯಾಡಲ್ (1865)
7. ಡಬ್ಲ್ಯೂ ಎಸ್. ವೈಟ್‌ಸೈಡ್ (1867)
8. ಎಚ್.ಎಸ್. ಥಾಮಸ್ (1867, 1872)
9. ಜೆ.ಎ.ಸಿ. ಬೋಸ್ವೆಲ್ (1868)
10. ಎ.ಎಮ್.ಸಿ ವೆಬ್ಸ್ಟರ್ (1870-71)

11. ಜೆ.ಸಿ. ಹ್ಯಾಸ್‌ಫಾಲ್ (1876)
12. ಡಬ್ಲ್ಯೂ ಎಚ್. ಕ್ಯಾನ್ಯನ್ (1876)
13. ಎಚ್.ಎಚ್. ಹಾಪಲ್ (1880)
14. ಜೆ. ಸ್ಪರ್ರಕ್ (1881-85)
15. ಇ.ಇ. ಸ್ಪೆನ್ಸರ್ (1883)
16. ಎ.ಟಿ. ಆರಂಡಲ್ (1885)
17. ಎಚ್.ಎಸ್ ವೈನ್ (1857-92)
18. ಎಮ್. ಎಚ್. ಫ್ಯಾರಲ್ (1889)
19. ವಿ.ಎ. ಬ್ರಾಡಿ (1890-92)
20. ಜಿ.ಪಿ.ಎಫ್ ಫವರ್ (1893)
21. ಜಿ. ಡಬ್ಲ್ಯೂ ಡ್ಯಾನ್ಸ್ (1894)
22. ಡಬ್ಲ್ಯೂ ಎಚ್. ವೆಲ್ಷ್ (1894-96)
23. ಎ.ಎಫ್. ಪಿನ್ಪಿ (1897)
24. ಡಬ್ಲ್ಯೂ ಬಿ. ಏಲಿಂಗ್ (1898)
25. ಡಿ.ಡಿ. ಮರ್ಡೂಕ್ (1899-1922)
26. ಎಮ್. ಸಿ. ಕೌಚ್‌ಮನ್ (1903)
27. ಜೆ.ಎಚ್. ರಾಬರ್ಟ್‌ಸನ್ (1908-12)
28. ಮೊಹಮ್ಮದ್ ಅಜೀಜುದ್ದೀನ್ ಹುಸೇನ್ ಸಾಹೇಬ್ ಬಹದೂರ್ (1905)
29. ಆರ್.ಎ. ಗ್ರಹಾಮ್ (1910-12)
30. ಎ. ಫದರಿಂಗ್ಟನ್ (1912)
31. ಎಸ್‌ಲಾಯ್ಡ್ (1915)
32. ಎ.ಜೆ. ಕರ್ಗೆನ್‌ವನ್ (1915)
33. ಎ.ಎಮ್. ಎ.ಸಿ. ಕಲ್ಲೆಟ್ಟಿ (1916)
34. ಆಲ್ ವಿಬರ್ಟ್ (1916-18)
35. ಎ.ಎಫ್.ಬಿ. ಕುಪ್ಪಿ (1916)
36. ಜೆ.ಎಲ್. ಲ್ಯಾಂಕಶೈರ್ (1918)
37. ಆರ್. ಎಚ್. ಎಲ್ಲಿಸ್ (1916-18)
38. ಯು. ಎಮ್. ರಾಮ ರಾವ್ (1920)
39. ಎ.ಆರ್. ನೆಡುಗೋಡಿ (1922)
40. ಎಸ್.ಎನ್. ವಿ. ರಜಾಹರ್ (1922)
41. ಸಿ. ಡಬ್ಲ್ಯೂ. ವೆಲ್ಸ್ (1923)
42. ಸಿ.ಎ. ಸೇಂಟರ್ (1924)
43. ಇ.ಎಮ್. ಗೋವ್ಷೆ (1927)

44. ಸಿ.ಜಿ. ಹಾರ್ಬೆಟ್ (1928)
45. ಜೆ. ಹುಸೇನ್ (1928)
46. ಎ.ಎ. ವೆಂಕಟರಮಣ ಅಯ್ಯರ್ (1935)
47. ಮೊಹಮ್ಮದ್ ಹುಮಾಯುನ್ ಸಾಹೆಬ್ ಬಹದೂರ್ (1936)
48. ಎ.ಡಿ. ಕ್ರೊಂಬಿಯೆ (1936)
49. ಎಚ್.ಆರ್. ಕಾವ್. ದಿವಾನ್ ಬಹದೂರ್ ಎಂ. ವಿ. ವೆಲ್ಲೋಡಿ ಆವ್ (1937)
50. ಖಾನ್ ಬಹದೂರ್ ಶರೀಫ್ ಅಲ್ ಮದಾಲಿ ಸಾಹೆಬ್ ಬಹದೂರ್ (1939)
51. ರಾವ್ ಬಹದೂರ್ ಸಿ.ಪಿ. ಕರುಣಾಕರ್ ಮೆನನ್ (1939)
52. ಎ.ಸಿ. ವುಡ್‌ಹೌಸ್ (1939)
53. ರಾವ್ ಬಹದೂರ್ ಪೊನ್ನುಸ್ವಾಮಿ ಪಿಳ್ಳೆ (1940)
54. ಎಮ್.ವಿ. ಸುಬ್ರಹ್ಮಣ್ಯಂ (1940)
55. ಎಮ್. ಕರಾಮತುಲ್ಲ (1942)
56. ರಾವ್ ಸಾಹೇಬ್ ಆರ್. ರಾಮ್‌ದಾಸ್ (1944)
57. ಕೆ. ರಾಮವರ್ಮ ರಾಜ (1946)
58. ಎಸ್. ಭೂತಲಿಂಗಮ್, ಒಬೆ ಕೆ.ಎಸ್. (1946)
59. ಜೆ.ಆರ್. ಭಟ್ಟ್ ಕೆ.ಎಸ್ (1946)
60. ಜೆ.ಎಫ್ ಸೌಂಡರ್ಸ್ ಕೆ.ಎಸ್ (1947, 48)

5. ಪದಿನಾರಗದ ಯುಗ (ಹದಿನಾರು ಮನೆಗಳು)

ಹತ್ತೊಂಭತ್ತನೇ ಶತಮಾನವನ್ನು ಪದಿನಾರಗ ಅಥವಾ ಹದಿನಾರು ಮನೆಗಳ ಕಾಲ ಎಂದೂ ಕರೆಯಬಹುದು. ಮಂಗಳೂರಿನಲ್ಲಿ ಹದಿನಾರು ಪ್ರತಿಷ್ಠಾಪಿತ ಪರಿವಾರಗಳು ಅಥವಾ 'ಅಗ'ಗಳಿದ್ದವು. ಹಲವು ವಿಧದಲ್ಲಿ ಇವು ಜೈನ ಸೆಟ್ಟಿಕಾರ ಸಂಘದಂತಹ ಜೈನ ಸಂಪ್ರದಾಯಗಳನ್ನು ಹೋಲುತ್ತಿದ್ದವು. ಹದಿನಾರು ಎಂಬ ಸಂಖ್ಯೆ ಕೂಡಾ ಜೈನರ ಪ್ರಭಾವವನ್ನು ಸೂಚಿಸುತ್ತದೆ. ಜೈನ ವರ್ತಕರು ಬೆಳೆದು ಬಂದ ಎಂಟೋ ಹದಿನಾರೋ ಪರಿವಾರಗಳು ಆಗ ಪಟ್ಟಣದಲ್ಲಿದ್ದವು. ಇಸ್ಲಾಮೀ ಸಂಪ್ರದಾಯದ ಪ್ರಕಾರ ಈ ಹದಿನಾರು ಎಂಬ ಅಂಕೆಗೆ ಬೇರಾವುದೇ ಮಹತ್ವವಿಲ್ಲ. ಮುಸ್ಲಿಮರು ಮತ್ತು ಜೈನರ ನಡುವಿನ ಹಲವು ಶತಮಾನಗಳ ಆತ್ಮೀಯ ಒಡನಾಟವು ಹದಿನಾರು ಮನೆಗಳು ಎಂಬ ಒಂದು ಜಾಗೀರ್ದಾರಿ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಟ್ಟಿರುವ ಸಾಧ್ಯತೆಯಿದೆ. ಅವರ ಹೆಣ್ಣುಕ್ಕಳು ಧರಿಸುತ್ತಿದ್ದ ಆಭರಣ, ಮನೆಯ ವಿನ್ಯಾಸ, ಸಂಜೆಯ ವೇಳೆಗೆ ಬೇಗನೇ ಭೋಜನ ಸೇವಿಸುವ ಕ್ರಮ ಇತ್ಯಾದಿಗಳು ಜೈನರಲ್ಲಿ ಕಂಡುಬರುವ ಆಚರಣೆಗಳೇ ಆಗಿದ್ದವು. ಈ ಮನೆಗಳ ಜಾಗೀರ್ದಾರಿ ಸ್ವರೂಪವೂ ಈ ಪ್ರಭಾವವನ್ನು ಎತ್ತಿ ತೋರಿಸುತ್ತವೆ.

ಹದಿನಾರು ಕುಟುಂಬಗಳು ಅಥವಾ ಪದಿನಾರಗಗಳ ಯಾದಿ ಈ ಕೆಳಗಿನಂತಿದೆ.

1. ಕಲ್ಲಗ ಅಗ (ಕಲಾನಾ)
2. ಬೆಲಿಯ ಬಲ್ಲಾಳ ಅಗ
3. ಚೆರಿಯೊ ಬಲ್ಲಾಳ ಅಗ
4. ಬೀಡಿನ್ ಬಲ್ಲಾಳ ಅಗ
5. ಚೆಟ್ರ ಅಗ (ಪಾಂಡ್ಯಾಲ್ ಅಗ)
6. ಚೆಟ್ರ ಬಂಡಸಾಲ ಅಗ
7. ಕೋಸಿಕಾನ್ ಅಗ
8. ಕಚ್‌ಮನ್ ಅಗ
9. ಮೂಸರಿಕಾನ ಅಗ
10. ಬೆಲಿಯ ಮಬ್ಬಾಕ ಅಗ
11. ಸಾಯಿರ್ ಕಾನ ಅಗ
12. ಕಾಯಿರ್‌ಕಾನ ಅಗ
13. ಬೂಬಕಾನ ಅಗ
14. ಐನ ಕಾನ ಅಗ
15. ಸಿಯಾಲಿ ಕಾನ ಅಗ
16. ಗೇಟ್ರೊ ಅಗ

ಜೈನ ಹೆಸರುಗಳಾದ ಬಲ್ಲಾಳ ಮತ್ತು ಸೆಟ್ಟಿಗಳ ಪ್ರಭಾವದಿಂದ ಬಂದ ಹೆಸರು ಗಳಾಗಿರುವುದರಿಂದ ಈ ಹೆಸರುಗಳು ತುಸು ವಿಚಿತ್ರವಾಗಿವೆ. ಈ ಕುಟುಂಬಗಳು ತಮ್ಮದೇ ಆದ ಸಂಪ್ರದಾಯ ಕಟ್ಟಳೆಗಳನ್ನು ಕಾಲಾನುಕ್ರಮದಲ್ಲಿ ಬೆಳೆಸಿಕೊಂಡು ಬಂದಿವೆ. ತಾವು ಮುಸ್ಲಿಮರ ಪೈಕಿ ಅತ್ಯಂತ ಮೇಲಿನ ವರ್ಗ ಎಂಬುದು ಅವರ ನಂಬಿಕೆಯಾಗಿತ್ತು. ಎಲ್ಲರೂ ಶ್ರೀಮಂತ ವರ್ತಕ ವರ್ಗಕ್ಕೆ ಸೇರಿದ್ದರಿಂದ ಇತರರನ್ನು ಕೆಳವರ್ಗದವರಂತೆ ಕಾಣುತ್ತಿದ್ದರು. ತಮ್ಮೊಳಗೆ ಮಾತ್ರ ಕುಟುಂಬ ಸಂಬಂಧವನ್ನು ಬೆಳೆಸುತ್ತಿದ್ದರು. ಅವರ ಹೆಣ್ಣುಕ್ಕಳು ಕುಟುಂಬ ದೊಳಗೆಯೇ ಮದುವೆಯಾಗುತ್ತಿದ್ದರು ಮತ್ತು ಹುಡುಗರಿಗೂ ಹೊರಗಿನ ವಿವಾಹ ಸಂಬಂಧ ಬೆಳೆಸುವ ಅವಕಾಶ ಇರಲಿಲ್ಲ. ಸಂಪ್ರದಾಯವನ್ನು ಮುರಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿತ್ತು. ಕೆಲವೊಮ್ಮೆ ವ್ಯವಸ್ಥೆಯಿಂದಲೇ ಬಹಿಷ್ಕರಿಸಲಾಗುತ್ತಿತ್ತು. ತಥಾಕಥಿತ ಸಾಮಾಜಿಕ ಸ್ಥಾನಮಾನವನ್ನು ಬೆಳೆಸಿಕೊಂಡಿದ್ದ ಅವರು ಇತರರೊಂದಿಗೆ ಮುಕ್ತವಾಗಿ ಬೆರೆಯುತ್ತಿರಲಿಲ್ಲ. ಬ್ರಾಹ್ಮಣರಂತೆಯೇ ಕೆಳವರ್ಗದ ಮತ್ತು ಬಹಿಷ್ಕೃತ ವರ್ಗದ ಜನರು ತಮ್ಮ ಪ್ರದೇಶಗಳಿಗೆ ಪ್ರವೇಶಿಸಲು ಇವರು ಅವಕಾಶ ನೀಡುತ್ತಿರಲಿಲ್ಲ. ಹಬ್ಬದ ಸಂದರ್ಭದಲ್ಲೂ ಬಡ ವರ್ಗದವರನ್ನು ದೂರವಿಡಲಾಗುತ್ತಿತ್ತು. ಈ ಸಂಪ್ರದಾಯಗಳು ಹೆಚ್ಚಾಗಿ ಇಸ್ಲಾಮಿಗೆ ಹೊರತಾಗಿದ್ದವು. ಇಸ್ಲಾಮ್ ಸಾಮಾನ್ಯವಾಗಿ ಜಾಗೀರ್ದಾರಿ ವ್ಯವಸ್ಥೆಯನ್ನು ಸ್ಥಾನಮಾನದ ಆಧಾರದಲ್ಲಿ ಜನರ ಮಧ್ಯೆ ತಾರತಮ್ಯ ಮಾಡುವುದನ್ನೂ ವಿರೋಧಿಸುತ್ತದೆ. ಆದರೆ ಮಂಗಳೂರಿನಲ್ಲಿ ಪದಿನಾರಗದ ಪ್ರಭುಗಳು ಈ ಜಾಗೀರ್ದಾರಿ ವ್ಯವಸ್ಥೆಯನ್ನು ಕಟ್ಟುನಿಟ್ಟಿನಿಂದ

ಅನುಷ್ಠಾನಗೊಳಿಸಿದ್ದರು. (ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಾಯವನ್ನು ನೋಡಿ)[66]

ಖಾನ್ ಬಹದೂರ್ ಬಾವಾ ಹಾಜಿ

ಪದಿನಾರಗದ ನಾಯಕರ ಪೈಕಿ ಸಮುದಾಯಕ್ಕೆ ಅತ್ಯಂತ ಹೆಚ್ಚಿನ ಕೊಡುಗೆ ನೀಡಿದವ ರೆಂದರೆ ಖಾನ್ ಬಹದೂರ್ ಬಾವಾ ಹಾಜಿ. ಇವರು ಮೂಸರಿಕಾನ ಅಗದ ಮುಖ್ಯಸ್ಥ ರಾಗಿದ್ದರು. ಆಗಿನ ಕಾಲದ ಅತ್ಯಂತ ಶಕ್ತಿಶಾಲಿ ನಾಯಕರಾಗಿದ್ದರು. ಆಗ ಆಧಿಪತ್ಯದ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಮುಸ್ಲಿಮೇತರರೂ ಸೇರಿದಂತೆ ಇಡೀ ಮಂಗಳೂರೇ ಹೆದರುತ್ತಿತ್ತು ಈ ಕುಟುಂಬಗಳು ಜೈನ ಮತ್ತು ಬ್ರಾಹ್ಮಣರೊಂದಿಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದವು.

ಬ್ರಿಟಿಷ್ ಕಂಪನಿಯು ಈ ಆಗ ವ್ಯವಸ್ಥೆಯು ತಮ್ಮ ನೀತಿಗಳಿಗೆ ಅನುಕೂಲಕರ ಎಂದು ಭಾವಿಸಿತ್ತು ಮತ್ತು ಹೀಗಾಗಿ ಅವರೊಂದಿಗೆ ಒಳ್ಳೆಯ ಸಂಬಂಧ ಹೊಂದಿತ್ತು. ಬಾವಾ ಹಾಜಿ (ಹಾಜಿ ಅಬೂಬಕರ್ ಎಂಬುದು ಇವರ ಮೂಲ ಹೆಸರು) ಬ್ರಿಟಿಷ್ ಅಧಿಕಾರಿಗಳ ಆಕ್ಷೀಯ ಗೆಳೆಯನಾಗಿ ಮಾರ್ಪಟ್ಟರು. ಬಿಳಿಯ ಸಾಹೇಬರಿಗಾಗಿ ಭೂರಿ ಭೋಜನ ಮತ್ತು ರುಚಿಕರ ವಾದ ಪಾರ್ಟಿಗಳನ್ನು ಆಗಗಳಲ್ಲಿ ಏರ್ಪಡಿಸಲಾಗುತ್ತಿತ್ತು. ಕ್ರಿ.ಶ. 1893ರಲ್ಲಿ ಬಾವಾ ಹಾಜಿಯ ಕ್ರಿಯಾಶೀಲ ನಾಯಕತ್ವವನ್ನು ಪರಿಗಣಿಸಿ ಮಂಗಳೂರಿನ ಕಲೆಕ್ಟರ್ ಅವರಿಗೆ ಖಾನ್ ಬಹದೂರ್ ಎಂಬ ಬಿರುದನ್ನು ನೀಡಿದನು. ಮುಸ್ಲಿಮ್ ಬಂಡಾಯವನ್ನು ಎದುರಿಸಲಿಕ್ಕಾಗಿ ಮಂಗಳೂರಿನಲ್ಲಿ ಒಂದು ಬ್ರಿಟಿಷ್ ತುಕಡಿಯನ್ನು ನಿಯೋಜಿಸಲಾಗಿತ್ತು. ಬಾವಾ ಹಾಜಿಯ ಉಪಕ್ರಮದಿಂದಾಗಿ ಈ ತುಕಡಿಯನ್ನು ಹಿಂದೆಗೆದುಕೊಳ್ಳಲು ಬ್ರಿಟಿಷರು ಒಪ್ಪಿ ಗೆ ನೀಡಿದರು. ಹಾಜಿಗೆ ಮಂಗಳೂರಿನ ಮುಸ್ಲಿಮರ ಮೇಲೆ ಸಂಪೂರ್ಣ ನಿಯಂತ್ರಣವಿತ್ತು. ಅವರ ಧೈರ್ಯಶಾಲಿ ಮತ್ತು ಶಕ್ತಿಶಾಲಿ ನಾಯಕತ್ವವು ಕಲೆಕ್ಟರ್‌ಗೂ ಮನದಟ್ಟಾಗಿತ್ತು. ನಿಜವಾಗಿ ಖಾನ್ ಬಹದೂರ್ ಜಿಲ್ಲಾ ಕಲೆಕ್ಟರರ ಬಲಗೈಯಾಗಿದ್ದರು. ಅವರ ಪ್ರಭಾವದಿಂದಾಗಿ ಅಬುಲ್ ಕಾಸಿಮ್ ಎಂಬ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಶಾಸಕನಾಗಿ ನೇಮಕ ಮಾಡಲಾಯಿತು. ಒಂದು ಸಾಂಪ್ರದಾಯಿಕ ವರ್ತಕ ಸಮುದಾಯವಾಗಿದ್ದುದರಿಂದ ಹದಿನಾರು ಮನೆಗಳು ವಾಣಿಜ್ಯ ಮತ್ತು ಬಂದರ್‌ನ ದೊಡ್ಡ ಭಾಗದ ಮೇಲೆ ನಿಯಂತ್ರಣ ಹೊಂದಿದ್ದವು. ಅರಬರೂ ಸೇರಿದಂತೆ ವಿದೇಶಿ ವರ್ತಕರ ಜತೆ ಅವರಿಗೆ ನಿಕಟ ಸಂಪರ್ಕ ಇತ್ತು. ಇಂಗ್ಲಿಷ್, ಅರಬಿ, ತುಳು ಮತ್ತು ಕನ್ನಡ ಭಾಷೆಗಳಲ್ಲಿ ಸರಾಗವಾಗಿ ಮಾತನಾಡಬಲ್ಲಷ್ಟು ಪಾಂಡಿತ್ಯ ಬೇರಾರಿಗೂ ಇರಲಿಲ್ಲ. ಬ್ರಿಟಿಷರು ಅವರನ್ನು ಜಿಲ್ಲೆಯ ಅತ್ಯಂತ ಶಕ್ತಿಶಾಲಿ ವ್ಯಕ್ತಿ ಎಂದು ಪರಿಗಣಿಸಿದ್ದರು. ಬ್ರಿಟಿಷ್ ಕಲೆಕ್ಟರ್ ಗಳಾಗಿದ್ದ ಪವರ್, ಬ್ರೋಡೈ ಮತ್ತು ಡ್ಯಾನ್ಸ್ ಅವರನ್ನು ಮತ್ತು ಅವರ ಸೇವೆಯನ್ನು ಮೆಚ್ಚಿದ್ದರು. ಬ್ರಿಟಿಷರೊಂದಿಗಿನ ಮಿತ್ರತ್ವವು ಅವರ ಶಕ್ತಿಯ ಮತ್ತು ಸಮಾಜದ ಮೇಲಿನ ಪ್ರಭಾವದ ಮೂಲವಾಗಿತ್ತು.[67]

ಖಾನ್ ಬಹದೂರ್ ಬಾವಾ ಹಾಜಿ ಝೀನತ್ ಬಕ್ಷ್ ಮಸೀದಿಯ ಮೊಕ್ತೇಸರ ಆಗಿದ್ದರು. ಅವರು ಅತ್ಯಂತ ಕಾಳಜಿಯಿಂದ ಸಂಪ್ರದಾಯಗಳನ್ನು ಉಳಿಸಿಕೊಂಡರು. ತಮ್ಮ ವಿಲಾಸಿ ಜೀವನ ಶೈಲಿಯಿಂದಾಗಿ ಅವರಿಗೆ ಇಸ್ಲಾಮೀ ಸಂಪ್ರದಾಯಗಳನ್ನು ಕಟ್ಟುನಿಟ್ಟಿನಿಂದ ಪಾಲಿಸಲು ಸಾಧ್ಯವಾಗಲಿಲ್ಲ. ಈ ಜಾಗೀರ್ದಾರಿ ಹವ್ಯಾಸಗಳಿಂದಾಗಿ ಮಂಗಳೂರಿನ

ಮುಸ್ಲಿಮರು ಮತ್ತು ಉಲೆಮಾಗಳಿಗೆ ಅವರ ಮೊಕ್ತೇಸರಗಿರಿಯ ಬಗ್ಗೆ ಅಸಮಾಧಾನವಿತ್ತು. ಆದರೆ ಅಗಗಳು ಸಾಕಷ್ಟು ಪ್ರಭಾವಿಯಾಗಿದ್ದುದರಿಂದಾಗಿ ಇದು ಯಾವುದೇ ರೀತಿಯಲ್ಲಿ ಸಂಘರ್ಷಕ್ಕೆ ಕಾರಣವಾಗಲಿಲ್ಲ. ಧಾರ್ಮಿಕವಾಗಿ ಹೆಚ್ಚು ಶ್ರದ್ಧಾವಂತರಾಗಿದ್ದ ಹನಫಿಗಳು ಮಂಗಳೂರಿನ ಬ್ಯಾರಿ ಸಮಾಜಕ್ಕೆ ಬೆನ್ನೆಲುಬಾಗಿ ನಿಂತಿದ್ದರು.[68] ಖಾನ್ ಬಹದೂರ್ ಇತರ ಸಮಾಜಗಳ ಮೇಲೂ ಪ್ರಭಾವ ಹೊಂದಿದ್ದರು. ಕದ್ರಿ ದೇವಸ್ಥಾನದ ಆವರಣದಲ್ಲಿರುವ ಏಳು ಬಾವಿಗಳ ನೀರಿನ ಬಳಕೆಗೆ ಸಂಬಂಧಿಸಿದಂತೆ ಎರಡು ಸಮುದಾಯಗಳ ಮಧ್ಯೆ ವಿವಾದ ತಲೆದೋರಿತ್ತು. ಕೋಮು ಸಂಘರ್ಷ ತಲೆದೋರುವ ಎಲ್ಲ ಸಾಧ್ಯತೆಯೂ ಇತ್ತು. ಆದರೆ ಒಂದೇ ರಾತ್ರಿಯಲ್ಲಿ ತಡೆಗೋಡೆಗಳನ್ನು ನಿರ್ಮಿಸುವ ಮೂಲಕ ಎರಡೂ ಸಮುದಾಯಗಳಿಗೆ ಸಮಾಧಾನವಾಗುವ ರೀತಿಯಲ್ಲಿ ವಿವಾದವನ್ನು ಬಗೆಹರಿಸಿದರು. ಬ್ರಿಟಿಷ್ ಕಲೆಕ್ಟರ್ ಅವರ ಈ ಕೆಲಸವನ್ನು ದೊಡ್ಡ ಸಾಧನೆಯೆಂದು ಪ್ರಶಂಸಿಸಿದ್ದನು.[69] ಬಾವಾ ಹಾಜಿ ರಾಜಿಯಲ್ಲಿ ನಂಬಿಕೆ ಹೊಂದಿದ್ದ ವ್ಯಕ್ತಿಯಾಗಿದ್ದರು ಮತ್ತು ಸ್ಥಳೀಯ ವಿವಾದಗಳನ್ನು ಸುಲಭದಲ್ಲೇ ಬಗೆ ಹರಿಸುತ್ತಿದ್ದರು.

ಖಾನ್ ಬಹದೂರ್‌ರ ವರ್ತುಲದಲ್ಲಿ ಹಲವು ಗಣ್ಯ ಮುಸ್ಲಿಮರಿದ್ದರು. ವಲ್ಲಿ ಮಾಮಾಕ, ವಲ್ಲಿ ಬೆಲ್ತಾನ್ ಅಬ್ಬು ಬ್ಯಾರಿ, ಕರ್ತಬ್ಬಾಕ, ಜೈತಾನ್ ಮಾಯಬ್ಬಾಕ, ಹಸನ್ ಬಾಷಾಕ ಮತ್ತು ಬೈಲ್ ಅಬ್ಬು ಬ್ಯಾರಿ ಪ್ರಮುಖ ಬ್ಯಾರಿಗಳಾಗಿದ್ದರು. ಇವರು ಪ್ರಮುಖ ವರ್ತಕರೂ ಆಗಿದ್ದರು. ಕೆಲವರು ಭೂಮಾಲಿಕರೂ ಆಗಿದ್ದರು. ಹನಫಿಗಳ ಪೈಕಿ ಸೈಯದ್ ಹಾರೂನ್, ಸೈಯದ್ ಯೂಸುಫ್ ದಾದಾ ಸಾಹೆಬ್ ಮತ್ತು ಅಬ್ದುಲ್ ಘನಿ ಸಾಹೆಬ್ ಪ್ರಮುಖ ವರ್ತಕರಾಗಿದ್ದರು. ಇವರ ಬೆಂಬಲದೊಂದಿಗೆ ಖಾನ್ ಬಹದೂರ್ ಹಾಜಿ ಮಂಗಳೂರಿನ ತುಂಡು ರಾಜಕುಮಾರನಂತೆ ವರ್ತಿಸುತ್ತಿದ್ದರು.[70]

ಕುಂಞಾಮು ಹಾಜಿ

ಹಾಜಿ ಕುಂಞಾಮು ಬ್ಯಾರಿ ಸಜಿಪದಲ್ಲಿ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು. ಯುವಕನಾಗಿದ್ದಾಗ ಕುಸ್ತಿಯಲ್ಲಿ ಆಸಕ್ತಿ ಹೊಂದಿದ್ದರು ಮತ್ತು ಒಳ್ಳೆಯ ಕುಸ್ತಿ ಪಟುವೂ ಆಗಿದ್ದರು. ಒಬ್ಬ ಕುಸ್ತಿಪಟುವಾಗಿ ಹಲವು ಪ್ರಶಸ್ತಿಗಳನ್ನು ಅವರು ಮಂಗಳೂರಿನಲ್ಲಿ ಪಡೆದಿದ್ದರು. ಒಮ್ಮೆ ಸರ್ಕಸ್‌ನಲ್ಲಿ ಕಬ್ಬಿಣದ ಸಲಾಕೆಯನ್ನು ಬಗ್ಗಿಸುವ ಸವಾಲನ್ನು ಸ್ವೀಕರಿಸಿ ಯಶಸ್ವಿಯಾಗಿದ್ದರು ಎಂದೂ ಹೇಳಲಾಗುತ್ತದೆ. ಇವರು ಅತ್ಯಂತ ಜನಪ್ರಿಯ ವರ್ತಕರೂ ಆಗಿದ್ದರು. ಕ್ರಿ.ಶ. 1939ರಲ್ಲಿ ಮೈಸೂರಿನ ದಿವಾನ ಸರ್ ಮಿರ್ಝಾ ಇಸ್ಮಾಯಿಲ್‌ರಿಂದ ಬರಮಾಡಿಕೊಳ್ಳಲ್ಪಟ್ಟ ಗಣ್ಯ ವ್ಯಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದರು. ತಮ್ಮ ಹೆಸರಿಗೆ ತಕ್ಕುದಾಗಿ ಕುಂಞಾಮು ಹಾಜಿ ಮಂಗಳೂರಿಗೆ ಯೋಗ್ಯ ನಾಯಕತ್ವವನ್ನು ಒದಗಿಸಿದ್ದರು.

ಕುಂಞಾಮು ಹಾಜಿ ಹಲವು ಒಳ್ಳೆಯ ಕೆಲಸಗಳಿಗಾಗಿ ಕೀರ್ತಿ ಭಾಜನರಾಗಿದ್ದಾರೆ. ಅವರು ಮುಸ್ಲಿಮ್ ಎಜುಕೇಶನ್ ಎಸೋಸಿಯೇಶನ್ ಎಂಬ ಸಂಸ್ಥೆಯನ್ನು 1924ರಲ್ಲಿ ಹುಟ್ಟು ಹಾಕಿ ಅದರ ಮೊದಲ ಕಾರ್ಯದರ್ಶಿಯಾದರು. ಖಾನ್ ಬಹದೂರ್ ಸಿ. ಮಹಮೂದ್ ಅದರ ಅಧ್ಯಕ್ಷರಾಗಿದ್ದರು. ಅವರು ತಾಲೂಕು ಮಂಡಳಿ ಮತ್ತು ನಗರಸಭೆಯ ಸದಸ್ಯ



ಸೀದಿಯಬ್ಬ ಸಾಹೇಬ್
ಮಂಗಳೂರು



ಎಂ.ಸಿ. ಮುಮ್ಮಿ
ಮೊಗ್ರಾಲ್



ಪುತ್ತೂರು
ಮಹಮೂದ್ ಸಾಹೇಬ್



ವಕೀಲ್ ಉಸ್ಮಾನ್ ಸಾಹೇಬ್



ಎಫ್.ಐ. ಒಡೆಯರ್
ಮಂಗಳೂರು



ಹುಸೇನ್ ಸಾಹೇಬ್
ಎಂ.ಎಲ್.ಎ. ಕಾರ್ಕಳ



ಕುಂಞಾಮು ಹಾಜಿ
ಮಂಗಳೂರು



ಜಮಾಲುದ್ದೀನ್ ಮಾಹೆನ್ ಸಾಹೇಬ್
ಮಂಗಳೂರು




ಪಿ.ಕೆ. ಪಕ್ಕಿ
ಮಂಗಳೂರು



ಅಬ್ದುಲ್ ಖಾದರ್
ಮಂಗಳೂರು

ಬಟ್ಟೆ ಬರಹ

A Page of a Beary Dairy



— 110 —

APR. ಎಪ್ರಿಲ್ 1937 **20** Tuesday ಮಂಗಳವಾರ


ಸಫರ್ ೮] ಈಶ್ವರ ಚೈತ್ರ ಶು. ೧೦ ಫೆ. ೨೮॥ [ಮೇಷ ೭

ಮಖಾ ೫೬॥


ಅಹಂಕಾರದಿಂದ ಮುಳ್ಳ ನಾದವನೇ ನಾ ಕಂತ್ರುವೆಳ್ಳವಸು.

BEARY SETTLEMENTS

HANAFI SETTLEMENTS & MEMONS, NAVAYATHS



TULUNADU - 19TH CENTURY
(Udupi - Mangalore - Kasaragod)





ಮಹಮ್ಮದ್ ಶೆರೂಲ್
ಕಾಸರಗೋಡು



ಮಹಮ್ಮದ್ ಶಮ್ನಾಡ್
ಕಾಸರಗೋಡು



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿ



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಪಾರ್ಶ್ವಭಾಗ




ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಒಳನೋಟ



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಸುಂದರವಾದ ಕೆತ್ತನೆಯ ಕಂಬಗಳು



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಕೆತ್ತನೆಯ ಸಾಲುಕಂಬಗಳು



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಅಂಗ ಶುದ್ದಿಗೊಳಿಸುವ ಕೊಳ



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ಕೆತ್ತನೆಯ ಮೇಲ್ಛಾವಣಿ



ಮಂಗಳೂರು ಬಂದರಿನಲ್ಲಿರುವ ಝೀನತ್ ಬಕ್ಷ್ ಜುಮಾ ಮಸೀದಿಯ ನವೀಕರಿಸಲ್ಪಟ್ಟ ಹೊರಾಂಗಣ

ರಾಗಿಯೂ ಸೇವೆ ಸಲ್ಲಿಸಿದ್ದರು. ಅವರು ಸಮಾಜ ಸೇವಕ ವೈಕುಂಠ ಬಾಳಿಗರ ಜತೆಗೆ ಬೆಂಚ್ ಮ್ಯಾಜಿಸ್ಟ್ರೇಟ್ ಆಗಿದ್ದರು. ಮುಸ್ಲಿಮ್ ಎಜುಕೇಶನ್ ಎಸೋಸಿಯೇಶನ್ ಬದ್ರಿಯಾ ಮದ್ರಸಾವನ್ನು ಆರಂಭಿಸಿತು.[72] ಬದ್ರಿಯಾ ಶಾಲೆ, ವಯಸ್ಕರ ಶಿಕ್ಷಣ ಸಂಸ್ಥೆ ಮತ್ತು ವಾಚನಾಲಯವು ಅವರ ಕೊಡುಗೆಗಳಾಗಿವೆ. ಒಬ್ಬ ಪಂಡಿತನಲ್ಲದ ಮತ್ತು ಹೆಚ್ಚಿನ ಶಿಕ್ಷಣ ಹೊಂದಿರದ ಕುಂಞಾಮು ಶಿಕ್ಷಣವನ್ನು ಪ್ರೋತ್ಸಾಹಿಸಬೇಕೆಂಬ ವಿಶಾಲ ಮನಸ್ಸನ್ನು ಹೊಂದಿದ್ದರು. ಮಂಗಳೂರಿನಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವು ಅವರ ಒಂದು ಪ್ರಮುಖ ಕಾರ್ಯಕ್ರಮವಾಗಿತ್ತು. ಮಂಗಳೂರಿನ ಮುಸ್ಲಿಮರ ಮಟ್ಟಿಗೆ ಅದೊಂದು ಅನಿವಾರ್ಯ ಅಗತ್ಯವಾಗಿತ್ತು. ಚರ್ಚಾಕೂಟ ಅವರ ಇನ್ನೊಂದು ಕಾರ್ಯಕ್ರಮವಾಗಿತ್ತು.[73] ಒಬ್ಬ ಮಾತುಗಾರನಲ್ಲದಿದ್ದರೂ ಖಾನ್ ಬಹದೂರ್ ಅದರ ಅಗತ್ಯವನ್ನು ಮನಗಂಡಿದ್ದರು ಮತ್ತು ಚರ್ಚಾ ಸಮಾಜದ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು. ಕ್ರಿ.ಶ. 1905ರಲ್ಲಿ ಮಂಗಳೂರಿನಲ್ಲಿ ಪ್ಲೇಗ್ ಕಾಯಿಲೆ ಕಾಣಿಸಿಕೊಂಡಾಗ ಅಗ (ಮನೆತನ) ಪ್ರಭುಗಳು ಮತ್ತು ಕುಂಞಾಮು ಹಾಜಿ ತೊಂದರೆಗೀಡಾದವರಿಗೆ ಸಹಾಯ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಂದರ್ ಪ್ರದೇಶದಲ್ಲಿ ಪ್ಲೇಗ್ ಹೆಚ್ಚಿನ ಹಾನಿಯನ್ನುಂಟು ಮಾಡಿತ್ತು ಭಾರಿ ಸಂಖ್ಯೆಯ ಜನರು ಸಾವನ್ನಪ್ಪಿದ್ದರು. ಅಗಗಳಿಗೆ ಸೇರಿದ ಭಾರಿ ಸಂಖ್ಯೆಯ ಜನರು ಮೃತಪಟ್ಟರು. ಅದು ಮಂಗಳೂರಿನ ಮಟ್ಟಿಗೆ ಅತ್ಯಂತ ದೊಡ್ಡ ದುರಂತವಾಗಿತ್ತು. ಕಲೆಕ್ಟರ್ ಅಜೀಜುದ್ದೀನ್ ಕೈಗೊಂಡ ಕ್ರಮಗಳ ಹೊರತಾಗಿಯೂ ಮಂಗಳೂರಿನ ಮುಸ್ಲಿಮರು ಹೆಚ್ಚಿನ ಯಾತನೆ ಅನುಭವಿಸಿದರು. ಅಗಗಳು ಮತ್ತು ಅವರ ಜಾಗೀರ್ದಾರಿ ವ್ಯವಸ್ಥೆಗೆ ಪ್ಲೇಗ್ ದೊಡ್ಡ ಹೊಡೆತವನ್ನು ನೀಡಿತು. ತದನಂತರ ಈ ವ್ಯವಸ್ಥೆಯು ಕ್ಷಿಪ್ರವಾಗಿ ಪತನವಾಗುತ್ತಲೇ ಹೋಯಿತು.

6. ಜಾಗೃತಿ ಮತ್ತು ಸುಧಾರಕರು

ಹತ್ತೊಂಭತ್ತನೇ ಶತಮಾನವು ಸಾಮಾಜಿಕ ಕುಸಿತ ಮತ್ತು ಆಧುನಿಕ ಬೆಳವಣಿಗೆಗಳೊಂದಿಗೆ ತಾಕಲಾಟ ಹಾಗೂ ಸಂಪ್ರದಾಯಗಳ ಬಗ್ಗೆ ಅತಿಯಾದ ನಂಟಿಗೆ ಸಾಕ್ಷಿಯಾಯಿತು. ಈ ಅಂಶಗಳು ಸುಧಾರಣೆಯನ್ನು ಬೇಡುತ್ತಿದ್ದವು. ಬ್ರಿಟಿಷರು ಶಿಕ್ಷಣಕ್ಕೆ ಪ್ರಚಾರ ನೀಡಿದ್ದರೂ ಮುಸ್ಲಿಮರು ಮಾತ್ರ ಪ್ರತಿಕ್ರಿಯಿಸುವಲ್ಲಿ ಎಲ್ಲರಿಗಿಂತ ಹಿಂದಿದ್ದರು. ಇದು ತಮ್ಮ ಧರ್ಮ ಮತ್ತು ನಂಬಿಕೆಗೆ ಅಪಾಯಕಾರಿ ಎಂದು ಉಲೆಮಾಗಳು ಭಾವಿಸಿದ್ದರು. ಮುಸ್ಲಿಮ್ ಹುಡುಗರು ಮತ್ತು ಹುಡುಗಿಯರನ್ನು ಶಾಲೆಗೆ ಹೋಗುವುದರಿಂದ, ಕ್ರೈಸ್ತರೊಂದಿಗೆ ಬೆರೆಯುವುದರಿಂದ ಮತ್ತು ಅವರ ಬಗ್ಗೆ ತಿಳಿದುಕೊಳ್ಳುವುದರಿಂದಲೂ ತಡೆಯಲಾಯಿತು. ಅರಬಿ ಭಾಷೆಯೊಂದನ್ನು ಹೊರತುಪಡಿಸಿ ಬೇರಾವುದನ್ನಾದರೂ ಕಲಿಯುವುದು ಹರಾಮ್ ಎಂಬ ನಂಬಿಕೆಯಿತ್ತು. ಸಮಾಜದಲ್ಲಿ ಭಾರಿ ಸಂಖ್ಯೆಯ ಮೂಢನಂಬಿಕೆಗಳು ಚಾಲ್ತಿಯಲ್ಲಿದ್ದವು. ಪ್ಲೇಗ್‌ನ ಸಂದರ್ಭದಲ್ಲಿ ಎದುರಾದ ಗಂಭೀರ ಯಾತನೆಯು ಕುಂಞಾಮು ಹಾಜಿಯಂತಹ ನಾಯಕರ ಕಣ್ಣು ತೆರೆಸಿತು ಮತ್ತು ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಂತೆ ಮಾಡಿತು. ಈ ಸುಧಾರಣಾ ಚಳವಳಿಯನ್ನು ಮುಂದುವರಿಸಿಕೊಂಡು ಹೋಗಲು ಸರಣಿಯೋಪಾದಿ

ಯಲ್ಲಿ ನಾಯಕರು ಸಕ್ರಿಯ ರಾಜಕಾರಣಿಗಳಾಗಿ ಮೂಡಿ ಬಂದರು.

ಮೊಹಮ್ಮದ್ ಶೆರೂಲ್ (1897-1937)

ಸುಧಾರಣಾವಾದಿ ನಾಯಕರ ಪೈಕಿ ಬಾಡೂರಿನ ಮೊಹಮ್ಮದ್ ಶೆರೂಲ್ ಪ್ರಮುಖರಾಗಿದ್ದರು. ಬ್ರಿಟಿಷರ ಶೈಕ್ಷಣಿಕ ನೀತಿಯಿಂದಾಗಿ ಜಿಲ್ಲೆಯಲ್ಲಿ ಹಲವು ಶಾಲೆಗಳು ಆರಂಭಗೊಂಡವು. ಮುಸ್ಲಿಮರಲ್ಲಿ ಸಹಜವಾಗಿದ್ದ ಪ್ರತಿರೋಧವನ್ನು ಗುರುತಿಸಿದ ಅವರು ಮುಸ್ಲಿಮರನ್ನು ಸುಶಿಕ್ಷಿತಗೊಳಿಸುವ ನಿಟ್ಟಿನಲ್ಲಿ ವಿನೂತನವಾದ ಕ್ರಮವನ್ನು ತೆಗೆದುಕೊಂಡರು. ಇಂಗ್ಲಿಷ್ ಭಾಷೆ ಕಲಿಯುವುದು ಶೈತಾನನ ಹೆಜ್ಜೆ ಗುರುತುಗಳನ್ನು ಅನುಸರಿಸುವುದಕ್ಕೆ ಸಮ ಎಂಬ ಭಾವನೆ ಪ್ರಚಲಿತವಿತ್ತು. ಜತೆಗೆ ಪ್ರಾದೇಶಿಕ ಭಾಷೆಯನ್ನು ಕಲಿಯವುದು ಇತರ ಕೆಡುಕುಗಳಿಗೆ ದಾರಿ ಎಂದೂ ಭಾವಿಸಲಾಗುತ್ತಿತ್ತು. ವಿಜ್ಞಾನ ಮತ್ತು ಗಣಿತವು ಸೂತ್ರಗಳನ್ನು ಆಧರಿಸಿದ್ದರಿಂದ ಸ್ವರ್ಗದ ಬಾಗಿಲಿಗೆ ಅಡ್ಡಿ ಎಂದು ಹೇಳಲಾಗಿತ್ತು. ಇಂತಹ ನಂಬಿಕೆಗಳನ್ನು ಶಕ್ತಿಯುತವಾಗಿ ವಿರೋಧಿಸಲಾಯಿತು ಮತ್ತು ಸಾಮಾನ್ಯ ಪ್ರಗತಿಯಲ್ಲಿ ಶಿಕ್ಷಣದ ಅಗತ್ಯವನ್ನು ಈ ಸುಧಾರಕರು ಮುಸ್ಲಿಮರಿಗೆ ಮನದಟ್ಟು ಮಾಡಿದರು. ಮೊಹಮ್ಮದ್ ಶೆರೂಲ್ ಶಿಕ್ಷಣದ ಒಂದು ಮಾದರಿಯನ್ನು ಜಾರಿಗೊಳಿಸಿ ಮುಸ್ಲಿಮ್ ಸಮುದಾಯವನ್ನು ಅಭಿವೃದ್ಧಿಯ ಪಥದಲ್ಲಿ ಹೆಜ್ಜೆಯಿಡುವಂತೆ ಪ್ರೋತ್ಸಾಹಿಸಿದರು.

ಮೊಹಮ್ಮದ್ ಶೆರೂಲ್ ಕ್ರಿ.ಶ. 1897ರಲ್ಲಿ ಕಾಸರಗೋಡು ತಾಲೂಕಿನ ಬೇದೂರಿನ ಅಂಗಡಿ ಮೊಗರಿನಲ್ಲಿ ಜನಿಸಿದರು. ಅವರ ಅಪ್ಪ ಸ್ಥಳೀಯ ಮುಸ್ಲಿಮರಾಗಿದ್ದು ಅವರ ಅಮ್ಮ ಕೋಟಿಕುಪ್ಪಾನಮ್ ಮಲಬಾರ್‌ನವರಾಗಿದ್ದರು. ತಮ್ಮದೇ ಪ್ರಯತ್ನದಿಂದಾಗಿ ಅವರು ಕನ್ನಡ, ಮಲಯಾಳಮ್ ಮತ್ತು ಇಂಗ್ಲಿಷ್ ಭಾಷೆಯ ಒಳ್ಳೆಯ ಜ್ಞಾನವನ್ನು ಸಂಪಾದಿಸಿದರು. ಮಕ್ಕಳನ್ನು ಶಿಕ್ಷಿತರನ್ನಾಗಿಸಿ ಕತ್ತಲ ಜಗತ್ತಿನಿಂದ ಅಭಿವೃದ್ಧಿಯ ಕಡೆಗೆ ಕರೆತರುವಂತೆ ಅವರು ಸಮುದಾಯಕ್ಕೆ ಕರೆ ನೀಡಿದರು.ಅವರೊಬ್ಬ ಸಕ್ರಿಯ ರಾಜಕಾರಣಿಯಾಗಿದ್ದು ಕಾಸರಗೋಡಿನಲ್ಲಿ ಖಿಲಾಫತ್ ಚಳವಳಿಯನ್ನು ಸಂಘಟಿಸಿದರು. ಕಾಸರಗೋಡಿನಲ್ಲಿ ಖಾಝಿ ಅಲ್ಲಾಮಾ ಅಬ್ದುಲ್ ಖಾದರ್ ಮೌಲವಿ ಅವರ ಅಧ್ಯಕ್ಷತೆಯಲ್ಲಿ ಖಿಲಾಫತ್ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಮೊಯ್ದು ಮೌಲವಿ, ಪಿ. ಕುಂಞಿರಾಮನ್ ಮತ್ತು ಗೋಪಾಲಕೃಷ್ಣನ್ (ಕಾಂಗ್ರೆಸಿಗ) ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಜಿಲ್ಲೆಯಾದ್ಯಂತ ಅವರು ಖಿಲಾಫತ್ ಅಲೆಯನ್ನು ಹಬ್ಬಿಸಿದರು.[74]

ಖಿಲಾಫತ್ ಚಳವಳಿಯೊಂದಿಗೆ ಮೊಹಮ್ಮದ್ ಶೆರೂಲ್ ರಾಷ್ಟ್ರೀಯ ಕಾಂಗ್ರೆಸನ್ನು ಸೇರಿಕೊಂಡರು. ಕೆ.ಆರ್. ಕಾರಂತ್ ಮತ್ತು ಉಮೇಶ್ ರಾವ್‌ರೊಂದಿಗೆ ಅವರು ಸಕ್ರಿಯವಾಗಿ ಕಾಂಗ್ರೆಸ್‌ಗಾಗಿ ಕೆಲಸ ಮಾಡಿದರು. ಕ್ರಿ.ಶ. 1921ರಲ್ಲಿ ಮಲಬಾರ್ ದಂಗೆ ನಡೆಯಿತು. ಆದರೆ ತುಳುನಾಡು ಜಿಲ್ಲೆಯ ಮೇಲೆ ಅದು ಯಾವುದೇ ಪರಿಣಾಮ ಬೀರಲಿಲ್ಲ. ಎರ್ನಾಡ್ ತಾಲೂಕಿನ ಮೇಲೆ ಅದು ಪ್ರಭಾವ ಬೀರಿತು ಮತ್ತು ಕಾಸರಗೋಡು ತಾಲೂಕಿಗೆ ಮಲಬಾರ್ ಹತ್ತಿರವಾಗಿದ್ದರಿಂದ ಅಲ್ಲಿನ ಜನರು ಕಿರುಕುಳಕ್ಕೆ ಪ್ರತಿಕ್ರಿಯೆ ನೀಡಿದರು. ಮೊಹಮ್ಮದ್ ಶೆರೂಲ್ ಎರ್ನಾಡಿನ ಸಂತ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿ ಜನರಿಗೆ ಸಾಂತ್ವನ ಹೇಳಿದರು.

ಕಾಕಿನಾಡ, ಬೆಳಗಾಮ್, ಮದ್ರಾಸ್ ಮತ್ತು ಕರಾಚಿಯ ಕಾಂಗ್ರೆಸ್ ಅಧಿವೇಶನಗಳಲ್ಲಿ ಅವರು ದಕ್ಷಿಣ ಕೆನರಾ ಜಿಲ್ಲೆಯನ್ನು ಪ್ರತಿನಿಧಿಸಿದರು. ಒಟ್ಟಪ್ಪಾಳಮ್‌ನಲ್ಲಿ ಟಿ. ಪ್ರಕಾಶ್ ಸಂಘಟಿಸಿದ ರಾಷ್ಟ್ರೀಯ ಸಮ್ಮೇಳನದಲ್ಲೂ ಅವರು ಭಾಗವಹಿಸಿದ್ದರು. ಕ್ರಿ.ಶ. 1931ರಲ್ಲಿ ಅವರು ಕಾಸರಗೋಡಿನಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಏರ್ಪಡಿಸಿದರು. ಕ್ರಿ.ಶ. 1936ರ ವರೆಗೆ ಅವರು ಕಾಸರಗೋಡು ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು.[75] ಅವರು ರಾಜಕೀಯ ನಾಯಕರಾಗಿರುವುದರ ಜತೆಗೆ ಸಮಾಜದ ಸೇವಕರೂ ಆಗಿದ್ದರು. ಮೂಢನಂಬಿಕೆಗಳಿಗೆ ವಿರುದ್ಧವಾಗಿದ್ದ ಅವರು ಧರ್ಮವನ್ನು ಪರಿಶುದ್ಧಗೊಳಿಸಬೇಕೆಂಬ ಹಂಬಲ ಹೊಂದಿದ್ದರು. ತಿರುಚಿನಾಪಳ್ಳಿಯಲ್ಲಿ ನಡೆದ ದಕ್ಷಿಣ ಭಾರತ ಮುಸ್ಲಿಮ್ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದರು. ಕೇರಳ ಮುಸ್ಲಿಮ್ ಐಕ್ಯ ಸಂಘಮ್, ಕೊಡುಂಗಲ್ಲೂರಿನ ಸ್ಥಾಪಕ ಸದಸ್ಯರಾಗಿದ್ದರು. ಅದು ಮುಸ್ಲಿಮರ ಏಕತೆಗಾಗಿ ಪ್ರಯತ್ನಿಸಿತ್ತು. ಅವರು ಉಲೆಮಾ ಸಮ್ಮೇಳನಗಳಲ್ಲೂ ಪಾಲ್ಗೊಂಡಿದ್ದರು. ಕ್ರಿ.ಶ. 1929ರಲ್ಲಿ ಅವರು ಕೇರಳ ಮುಸ್ಲಿಮ್ ಯುವಜನ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಕ್ರಿ.ಶ. 1934ರಲ್ಲಿ ಅವರು ಐಕ್ಯ ಸಂಘಂ ಸಮ್ಮೇಳನವನ್ನು ಕಾಸರಗೋಡಿನಲ್ಲಿ ಸಂಘಟಿಸಿದ್ದರು. ಈ ಎಲ್ಲ ಚಟುವಟಿಕೆಗಳ ಮೂಲಕ ಅವರು ನಿಸ್ಸಂಶಯವಾಗಿಯೂ ಜಿಲ್ಲೆಯ ಮುಸ್ಲಿಮರಿಗೆ ಒಂದು ಸ್ಫೂರ್ತಿಯಾಗಿದ್ದರು. ಇಸ್ಲಾಮಿಕ್ ಸಾಹಿತ್ಯದಲ್ಲೂ ಅವರಿಗೆ ತೀವ್ರ ಆಸಕ್ತಿಯಿತ್ತು. ಆ ಕಾಲದಲ್ಲಿ ಜಿಲ್ಲೆಯಲ್ಲಿ ಸಾಮಾನ್ಯವಾಗಿದ್ದ ಮಾಪಿಳ್ಳ ಪಾಟ್ಟು ಎಂಬ ಮಲಬಾರ್ ಮುಸ್ಲಿಮರ ಜನಪದ ಹಾಡಿಗೆ ಅವರು ಪ್ರೋತ್ಸಾಹ ನೀಡಿದ್ದರು. ಕ್ರಿ.ಶ. 1937ರಲ್ಲಿ ಮಂಗಳೂರಿನ ಹೈದರ್ ಎಂಬವರೊಡಗೂಡಿ 'ಜ್ಯೋತಿ' ಎಂಬ ಕನ್ನಡ ಮಾಸಿಕವನ್ನು ಆರಂಭಿಸಿದ್ದರು. ಕ್ರಿ.ಶ. 1937ರಲ್ಲಿ ಅವರ ನಿಧನ ದೊಂದಿಗೆ ಪತ್ರಿಕೆಯೂ ಕಣ್ಮರೆಯಾಯಿತು. ಮೊಹಮ್ಮದ್ ಶೆರೂಲ್ ದಕ್ಷಿಣ ಕೆನರಾ ಜಿಲ್ಲೆಯ ಮುಸ್ಲಿಮರ ಮಧ್ಯೆ ಸುಧಾರಣಾ ಆಂದೋಲನದ ನೈಜ ಚೈತನ್ಯವಾಗಿದ್ದರು. ಮುಸ್ಲಿಮರನ್ನು ಒಗ್ಗೂಡಿಸಲು ಪ್ರಯತ್ನಿಸಿದ ಅವರು ಮಲಬಾರ್‌ನ ಮಾಪಿಳ್ಳೆಗಳು ಮತ್ತು ತುಳುನಾಡಿನ ಬ್ಯಾರಿಗಳ ಮಧ್ಯೆ ಸಂಪರ್ಕ ಏರ್ಪಡಿಸಿದರು. ಈ ಕಾಲದಲ್ಲಿ ಮಲಬಾರ್‌ನ ಮಾಪಿಳ್ಳೆಗಳು ಭಾರಿ ಸಂಖ್ಯೆಯಲ್ಲಿ ಇಲ್ಲಿಗೆ ಬಂದರು. ಹೊಸ ಸುಧಾರಣಾ ಆಂದೋಲನವು ಸ್ಥಳೀಯ ಬ್ಯಾರಿಗಳ ಮೇಲೆ ಆಧಿಪತ್ಯ ಸ್ಥಾಪಿಸಲು ಮಾಪಿಳ್ಳೆಗಳಿಗೆ ಅವಕಾಶವೊದಗಿಸಿತು.[76]

ಖಾನ್ ಬಹದೂರ್ ಮೊಹಮ್ಮದ್ ಶಮ್ಮಾಡ್

ಮೊಹಮ್ಮದ್ ಶಮ್ಮಾಡ್ ತುಳುನಾಡು ಜಿಲ್ಲೆಯ ಇನ್ನೊಬ್ಬ ಸುಧಾರಣಾ ಮುಖಂಡ. ಟೀಪು ಸುಲ್ತಾನನ ಪ್ರಾದೇಶಿಕ ಅಧಿಕಾರಿ ಮತ್ತು ಕಮಾಂಡರ್ ಆಗಿದ್ದ ಖಾನ್ ಅಬ್ದುಲ್ ಖಾದರ್ ಷಾ ಇವರ ತಂದೆಯಾಗಿದ್ದರು. ಸ್ಥಳೀಯ ವ್ಯಕ್ತಿಯಾಗಿದ್ದ ಇವರು ಸುಲ್ತಾನನ ಸೇವೆಯಲ್ಲಿದ್ದರು ಮತ್ತು ಅವರ ಕೇಂದ್ರ ಕಾರ್ಯಾಲಯವು ಕಾಸರಗೋಡಿನಲ್ಲಿತ್ತು. ಕಾಸರಗೋಡಿನ ದಕ್ಷಿಣದಲ್ಲಿ ಕೆಲವು ಕಿ.ಮೀ. ಅಂತರದಲ್ಲಿರುವ ಶಮ್ಮಾಡ್‌ನ ಬೆವಿಂಜೆಯಲ್ಲಿ ಅವರು ಜನಿಸಿದರು. ಬ್ರಿಟಿಷ್ ಅಧಿಕಾರದಲ್ಲಿ ಸಹಜವಾಗಿಯೇ ಶಮ್ಮಾಡ್ ಕುಟುಂಬವು ಬ್ರಿಟಿಷರ ಗೌರವಕ್ಕೆ ಪಾತ್ರವಾಗಿತ್ತು. ಅಬ್ದುಲ್ ಖಾದರ್ ಷಾ ಮೊಹಮ್ಮಡನ್ ರಿಲೀಜಿಯಸ್

ಎಂಡೋಮೆಂಟ್ ಕಮಿಟಿಯ ಅಧ್ಯಕ್ಷರಾಗಿದ್ದರು. ಮೊಹಮ್ಮದ್ ಶಮ್ನಾಡ್ ಜಿಲ್ಲೆಯ ಮುಸ್ಲಿಮರ ಪೈಕಿ ಮೆಟ್ರುಕ್ಯುಲೇಶನ್ ತೇರ್ಗಡೆಯಾದ ಮೊದಲ ವ್ಯಕ್ತಿಯಾಗಿದ್ದರು. ಮೆಡ್ರಾಸ್ ಕ್ರಿಶ್ಚಿಯನ್ ಕಾಲೇಜ್‌ನಿಂದ ಪದವಿ ಪಡೆದ ಕಾಸರಗೋಡು ಜಿಲ್ಲೆಯ ಚೊಚ್ಚಲ ಮುಸ್ಲಿಮ್ ವ್ಯಕ್ತಿ ಅವರಾಗಿದ್ದರು. ಒಬ್ಬ ಸುಶಿಕ್ಷಿತ ವ್ಯಕ್ತಿಯಾಗಿದ್ದುದರಿಂದ ಅವರು ಮೊಹಮ್ಮದ್ ಶೆರೂಲ್ ರಂತೆಯೇ ಸುಧಾರಣಾ ಚಳವಳಿಗೆ ಧುಮುಕಿದರು. ಅವರು ಕ್ರಿ.ಶ. 1905ರಲ್ಲಿ ಜಿಲ್ಲಾ ಕಲೆಕ್ಟರ್ ಅಜೀಜುದ್ದೀನ್ ಅವರ ಸಹಾಯದಿಂದ ಅಜೀಜಿಯಾ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ನೆರವಿನಿಂದ ಅವರು ಕಾಸರಗೋಡಿನಲ್ಲಿ ತಲಂಗೆರ ಮುಸ್ಲಿಮ್ ಹೈಸ್ಕೂಲ್ ಸ್ಥಾಪಿಸಿದರು. ಮುಸ್ಲಿಮರ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಅದೊಂದು ಮೈಲಿಗಲ್ಲಾಗಿತ್ತು.[77]

ಶೆರೂಲ್‌ರಂತೆ ಇವರು ಕೂಡಾ ಮುಸ್ಲಿಮ್ ಹುಡುಗರು ಮತ್ತು ಹುಡುಗಿಯರಿಗೆ ಆಧುನಿಕ ಶಿಕ್ಷಣದ ಅಗತ್ಯವನ್ನು ಪ್ರತಿಪಾದಿಸಿದರು. ಸಂಪ್ರದಾಯವಾದಿ ಮುಸ್ಲಿಮರು ಮುಸ್ಲಿಮ್ ಹೆಣ್ಮಕ್ಕಳನ್ನು ಪ್ರಾಥಮಿಕ ಶಿಕ್ಷಣದಿಂದಲೂ ವಂಚಿಸಿದ್ದರು. ವಿಜ್ಞಾನ ಮತ್ತು ಸಂಸ್ಕೃತಿಯು ಕ್ಷಿಪ್ರವಾಗಿ ಬೆಳೆಯುತ್ತಿದ್ದಂತೆಯೇ ನಾಗರಿಕ ನೀತಿ ನಿಯಮಗಳು ಮತ್ತು ತಮ್ಮ ಸುತ್ತು ಮುತ್ತಲಿನ ಪರಿಸರದ ಅರಿವು ಇಲ್ಲದೆ ಮುಸ್ಲಿಮ್ ಹೆಣ್ಮಕ್ಕಳು ಅಂಧಕಾರದಲ್ಲಿ ಉಳಿಯ ಬೇಕಾಯಿತು. ಶಮ್ನಾಡ್ ಈ ತಡೆಗೋಡೆಯನ್ನು ನಿರ್ಮೂಲಗೊಳಿಸಲು ಪ್ರಯತ್ನಿಸಿದರು ಮತ್ತು ಮಹಿಳೆಯ ಶಿಕ್ಷಣದ ಪ್ರತಿಪಾದಕರಾಗಿ ಮೂಡಿ ಬಂದರು. ಮುಸ್ಲಿಮರ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಅವರು ಪಾಲ್ಗೊಳ್ಳುತ್ತಿದ್ದರು. ಕಾಸರಗೋಡಿನಲ್ಲಿ ಲೈಬ್ರರಿ ಯನ್ನು ಸ್ಥಾಪಿಸುವ ಮೂಲಕ ಅವರು ತಮ್ಮ ಕೆಲಸ ಆರಂಭಿಸಿದರು. ಮದ್ರಾಸ್ ವಿಧಾನ ಪರಿಷತ್‌ನ ಸದಸ್ಯರಾಗಿಯೂ ಅವರು ಆಯ್ಕೆಯಾದರು. ಅವರ ಸಕ್ರಿಯ ಸೇವೆಗಳಿಗೆ ಪ್ರತಿಯಾಗಿ ಬ್ರಿಟಿಷರು ಅವರಿಗೆ ಖಾನ್ ಬಹದೂರ್ ಎಂಬ ಬಿರುದನ್ನು ನೀಡಿದ್ದರು.

ಕ್ರಿ.ಶ. 1921ರ ವೇಳೆಗೆ ಅವರೊಬ್ಬ ಕ್ರಿಯಾಶೀಲ ಕಾಂಗ್ರೆಸಿಗರಾಗಿದ್ದರು. ಅವರು ಮಲಬಾರ್‌ನ ಮುಸ್ಲಿಮ್ ಮೀಸಲು ಕ್ಷೇತ್ರ ಮತ್ತು ನೀಲಗಿರಿ ಕ್ಷೇತ್ರದಿಂದ ಕ್ರಿ.ಶ. 1921ರಲ್ಲಿ ಮದ್ರಾಸ್ ವಿಧಾನ ಸಭೆ ಸದಸ್ಯರಾಗಿ ಆಯ್ಕೆಯಾದರು. ಒಬ್ಬ ಶಾಸಕರಾಗಿ ಅವರು ಹೆಚ್ಚು ಜವಾಬ್ದಾರಿ ಮತ್ತು ಕಾಳಜಿಯೊಂದಿಗೆ ಜನಸೇವೆ ಮಾಡಿದರು. ಅವರೊಬ್ಬ ಜನಪ್ರಿಯ ನಾಯಕರಾಗಿ ಮಾರ್ಪಟ್ಟರು. ಅವರು ಕೈದಿಗಳ ಪರಿಸ್ಥಿತಿಯ ಅಧ್ಯಯನಕ್ಕಾಗಿ ನೇಮಿಸಲಾದ ಅಂಡಮಾನ್‌ನ ಮೂರನೇ ಕೈದಿ ಪರಿಹಾರ ಸಮಿತಿಯ ಸದಸ್ಯರಾಗಿದ್ದರು. ದಕ್ಷಿಣ ಕೆನರಾ ಜಿಲ್ಲೆಯ ಶಿಕ್ಷಣ ಮಂಡಳಿಯ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಅವರ ಅಧ್ಯಕ್ಷೀಯ ಅವಧಿಯಲ್ಲಿ ಹಲವಾರು ಹೈಸ್ಕೂಲ್‌ಗಳು ಜಿಲ್ಲೆಯಲ್ಲಿ ತಲೆಯೆತ್ತಿದವು. ಮುಸ್ಲಿಮ್ ಹೆಣ್ಮಕ್ಕಳ ಹೈಸ್ಕೂಲನ್ನೂ ಸ್ಥಾಪಿಸಲಾಯಿತು. ಆದರೆ ದುರದೃಷ್ಟವಶಾತ್ ಮುಸ್ಲಿಮ್ ಹೆಣ್ಮಕ್ಕಳ ಶಿಕ್ಷಣದ ಚಳವಳಿಯು ಜನರಿಗೆ ತಲುಪಲಿಲ್ಲ ಮತ್ತು ಸೂಕ್ತ ಪ್ರತಿಕ್ರಿಯೆ ಲಭ್ಯ ವಾಗಲಿಲ್ಲ. ಕೇವಲ ಮೂರು ಹೆಣ್ಮಕ್ಕಳು ಮಾತ್ರ ಶಾಲೆಗೆ ಸೇರ್ಪಡೆಯಾದರು. ಹೀಗಾಗಿ ಅದನ್ನು ಸರಕಾರಿ ಹೆಣ್ಮಕ್ಕಳ ಪ್ರೌಢಶಾಲೆಯಾಗಿ ಪರಿವರ್ತಿಸಲಾಯಿತು. ಶಮ್ನಾಡ್ ಪುನಃ ಕಾಸರಗೋಡು ಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. ಕ್ಯಾನನ್ನೂರಿನ ಆಲಿ ರಾಜನ ಪರಿವಾರ ದಲ್ಲಿ ಚಾಲ್ತಿಯಲ್ಲಿದ್ದ ಮರುಮಕ್ಕಟ್ಟಾಯಮ್ ಕಾನೂನಿಗೆ ವಿರುದ್ಧ ಹೋರಾಡಿದರು. ಅವರು

ತಾಲೂಕ್ ಬೋರ್ಡ್‌ನ ಸಕ್ರಿಯ ಸದಸ್ಯರಾಗಿದ್ದರು.

ಕ್ರಿ.ಶ. 1940 ಅವರು ರಾಜಕೀಯದ ಹೊಸ ಅಲೆಯಿಂದ ಪ್ರಭಾವಿತರಾದರು. ಅವರು ಜಸ್ಟಿಸ್ ಪಾರ್ಟಿಯನ್ನು ಸೇರಿ ಅದರ ರಾಜ್ಯ ಉಪಾಧ್ಯಕ್ಷರಾದರು. ಕ್ರಿ.ಶ. 1945ರಲ್ಲಿ ಅವರು ಮುಸ್ಲಿಮ್ ಲೀಗ್ ಸೇರಿ ಮದ್ರಾಸ್ ರಾಜ್ಯ ಘಟಕದ ಅಧ್ಯಕ್ಷರಾದರು. ಜಿಲ್ಲೆಯಲ್ಲಿ ಲೀಗನ್ನು ಜನಪ್ರಿಯಗೊಳಿಸಿದ ಅವರು ಬೇರೆ ಬೇರೆ ಕಡೆಗಳಲ್ಲಿ ಉಪಸಮಿತಿಗಳನ್ನು ರಚಿಸಿದರು. ಅವರು ಕೇರಳ ಮುಸ್ಲಿಮ್ ಐಕ್ಯ ಸಂಘಂನ ಸದಸ್ಯರಾಗಿದ್ದರು ಮತ್ತು ಮುಸ್ಲಿಮರ ಮಧ್ಯೆ ಏಕತೆಯನ್ನು ಬಲಪಡಿಸಲು ಪ್ರಯತ್ನಿಸಿದರು. ಅವರ ಸುಧಾರಣಾ ಚಳವಳಿಯು ತುಳುನಾಡಿನ ಮುಸ್ಲಿಮರ ಮನ್ನಣೆ ಗಳಿಸಿತು. ಅವರು ಕ್ರಿ.ಶ. 1948ರಲ್ಲಿ ನಿಧನರಾದರು.[78]

ಮಾಹಿನ್ ಶಮ್ನಾಡ್

ಮಾಹಿನ್ ಶಮ್ನಾಡ್, ಶಮ್ನಾಡ್ ಕುಟುಂಬದ ಇನ್ನೊಬ್ಬ ಸದಸ್ಯ. ಇವರು ಮೊಹಮ್ಮದ್ ಶಮ್ನಾಡ್‌ರ ಕಿರಿಯ ಸೋದರ. ಸಕ್ರಿಯ ಪೊಲೀಸ್ ಅಧಿಕಾರಿಯಾಗಿದ್ದ ಅವರು ಕ್ರಿ.ಶ. 1940ರಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ನಿವೃತ್ತರಾದರು. ನಂತರ ಸಕ್ರಿಯ ರಾಜಕೀಯಕ್ಕೆ ಪದಾರ್ಪಣೆ ಮಾಡಿ ತಮ್ಮ ಸೋದರನ ಧೋರಣೆಗಳನ್ನು ಮುಂದುವರಿಸಿದರು. ಮುಸ್ಲಿಮ್ ಲೀಗ್‌ನ ಸಕ್ರಿಯ ಸದಸ್ಯರಾಗಿದ್ದ ಅವರು ಕ್ರಿ.ಶ. 1945ರಲ್ಲಿ ಜಿಲ್ಲಾ ಲೀಗ್ ಅಧ್ಯಕ್ಷರಾದರು. ಅವರು ಜಿಲ್ಲೆಯಾದ್ಯಂತ ಲೀಗ್ ಘಟಕಗಳನ್ನು ಸ್ಥಾಪಿಸಿದರು. ಕ್ರಿ.ಶ. 1945ರಲ್ಲಿ ಕಾಸರಗೋಡಿನಿಂದ ಮದ್ರಾಸ್ ವಿಧಾನಸಭೆಗೆ ಆಯ್ಕೆಯಾಗಿ ಜನಸೇವೆ ಮಾಡುವ ಅವಕಾಶ ಪಡೆದರು. ಸುಧಾರಣಾ ಚಳವಳಿಯ ಪ್ರತಿಪಾದಕರಾಗಿದ್ದ ಅವರು ತುಳುನಾಡು ಜಿಲ್ಲೆಯ ಮುಸ್ಲಿಮರಿಗೆ ಅಮೂಲ್ಯ ಕೊಡುಗೆ ಸಲ್ಲಿಸಿದರು. ಅವರು ಐಕ್ಯ ಸಂಘಂನ ಸದಸ್ಯರೂ ಆಗಿದ್ದ ತಮ್ಮ ಸಹೋದರನಂತೆಯೇ ಮಲಬಾರಿನ ಮಾಪಿಳ್ಳೆ ಮತ್ತು ತುಳುನಾಡಿನ ಬ್ಯಾರಿಗಳ ಮಧ್ಯೆ ಸೇತುವೆ ಸ್ಥಾಪಿಸಲು ಸತತವಾಗಿ ಪ್ರಯತ್ನಿಸಿದರು.[79]

ಮೊಗ್ರಾಲ್ ಕುಟುಂಬ

ಶೆರೂಲ್ ಮತ್ತು ಶಮ್ನಾಡ್ ಕುಟುಂಬಗಳಂತೆ ಮೊಗ್ರಾಲ್ ಪರಿವಾರವೂ ಮುಸ್ಲಿಮ್ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡಿದೆ. ಕುಂಞಾಮದ್ ಷಾ ಕಾಸರಗೋಡಿನ ಮುಳಿಯಾರ್ ಬಳಿಯಿರುವ ಪೊವ್ವಲ್ ಕೋಟೆಯ ಕಮಾಂಡರ್ ಮತ್ತು ಪ್ರಾದೇಶಿಕ ಅಧಿಕಾರಿಯಾಗಿದ್ದರು. ಪೊವ್ವಲ್‌ನ ಕುಂಞಾಮದ್ ಷಾ ಮತ್ತು ಶಮ್ನಾಡ್‌ನ ಅಬ್ದುಲ್ ಖಾದರ್ ಷಾ ಜತೆಯಾಗಿ ಸಾಧುರಿ ಬೆಹಾರಿಯ ದಂಗೆಗೆ ಮಾಪಿಳ್ಳೆ ಪಡೆಗಳನ್ನು ಒದಗಿಸಿದ್ದರು. ಕುಂಜಾಮದ್ ಷಾ ತನ್ನ ಕುಟುಂಬವನ್ನು ಪೊವ್ವಲ್‌ನಿಂದ ಮೊಗ್ರಾಲ್‌ಗೆ ಸ್ಥಳಾಂತರಿಸಿ ಅದನ್ನು ಮುಸ್ಲಿಮ್ ವಸತಿ ಪ್ರದೇಶವಾಗಿ ಅಭಿವೃದ್ಧಿಪಡಿಸಿದರು. ಮೊಗ್ರಾಲ್ ಪರಿವಾರವು ಹಲವಾರು ಒಳ್ಳೆಯ ನಾಯಕರನ್ನು ಒದಗಿಸಿತ್ತು. ಎಂ.ಕೆ. ಮೊಹಮ್ಮದ್ ಷಾ ಎಂಬವರು ಕುಂಬ್ಳೆ ಪಂಚಾಯತ್ ಕೋರ್ಟ್‌ನ ಅಧ್ಯಕ್ಷರಾಗಿದ್ದರು. ಅವರು ಸ್ಥಳೀಯ ಮುಸ್ಲಿಮರನ್ನು ಸಂಘಟಿಸಿದರು. ಕಮಿಟಿ ಮಮ್ಮಿಂಞ ಎಂದು ಹೆಸರಾಗಿದ್ದ ಎಂ.ಸಿ. ಮಮ್ಮಿ ಒಬ್ಬ ಶ್ರೇಷ್ಠ

ಸುಧಾರಕರಾಗಿದ್ದರು. ಕ್ರಿ.ಶ. 1914ರಲ್ಲಿ ಮಾಪಿಳ್ಳೆ ಸಮ್ಮಿಶ್ರ ಸ್ಕೂಲ್ ಎಂಬ ಹೆಸರಿನ ಶೈಕ್ಷಣಿಕ ಸಂಸ್ಥೆಯು ಅವರ ಪ್ರಯತ್ನದಿಂದ ಮೊಗ್ರಾಲ್‌ನಲ್ಲಿ ಸ್ಥಾಪನೆಗೊಂಡಿತು. ಅವರು ಮೊಹಮ್ಮಡನ್ ರಿಲಿಜಿಯಸ್ ಎಂಡೊಮೆಂಟ್ ಕಮಿಟಿಯ ಸದಸ್ಯರಾಗಿದ್ದರು. ಕ್ರಿ.ಶ. 1925ರಲ್ಲಿ ಅವರು ಮೊಗ್ರಾಲ್‌ನಲ್ಲಿ ಮಲಬಾರ್- ಸೌತ್ ಕೆನರಾ ಶೈಕ್ಷಣಿಕ ಕಾನ್ಫರೆನ್ಸ್ ಸಂಘಟಿಸಿದರು. ಅವರು ಜಿಲ್ಲೆಯಾದ್ಯಂತ ಒಬ್ಬ ಸಕ್ರಿಯ ಸಾಮಾಜಿಕ ಕಾರ್ಯಕರ್ತರಾಗಿ ಹೆಸರು ಗಳಿಸಿದರು. ಅವರು ಈ ಪ್ರದೇಶದ ಮುಸ್ಲಿಮರನ್ನು ಶೈಕ್ಷಣಿಕ ಹಿಂದುಳಿಯುವಿಕೆಯಿಂದ ಪಾರು ಮಾಡಲು ಪ್ರಯತ್ನಿಸಿದರು. ಕಮಿಟಿ ಮಮ್ಮಿಂಞ ಇಂತಹದ್ದೇ ಶಾಲೆಗಳನ್ನು ಕುಂಬಳೆ, ಆರಿಕಾಡಿ, ಅಂಗಡಿಮೊಗರ್, ಬದಿಯಡ್ಕ, ಆಲಂಪಾಡಿ ಮತ್ತು ಮಂಗಳೂರಿನಲ್ಲಿ ಸ್ಥಾಪಿಸಿದರು. ಇಂತಹ ಹಲವು ಶಾಲೆಗಳನ್ನು ಅವರು ಕೇರಳದ ಹಲವೆಡೆಗಳಲ್ಲಿ ಸ್ಥಾಪಿಸಿದರು. ಅವರೊಬ್ಬ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದರು.

ಎಂ.ಸಿ. ಅಹಮದ್ ಮೊಗ್ರಾಲ್‌ನ ಮೊಟ್ಟ ಮೊದಲ ಕಾನೂನು ಪದವೀಧರರಾಗಿದ್ದರು ಮತ್ತು ಅವರು ಕಾಸರಗೋಡಿನ ಪ್ರಖ್ಯಾತ ವಕೀಲರಾಗಿ ಮಾರ್ಪಟ್ಟರು. ಮೊಗ್ರಾಲ್ ಕುಂಞ್ ಪಕ್ಕಿ ಸಾಹುಕಾರ್ ಕೇರಳದಿಂದ ಬಂದ ಮಲಬಾರಿ ಮಾಪಿಳ್ಳೆ ಆಗಿದ್ದು ಮೊಗ್ರಾಲ್‌ನಲ್ಲಿ ನೆಲೆಸಿದ್ದರು. ಇವರೋರ್ವ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಅವರಿಗೆ ಬ್ರಿಟಿಷ್ ಆಡಳಿತದೊಂದಿಗೆ ನಿಕಟ ಸಂಪರ್ಕವಿತ್ತು ಮತ್ತು ಒಬ್ಬ ಜನಪ್ರಿಯ ನಾಯಕರಾಗಿದ್ದರು. ಇಪ್ಪತ್ತನೇ ಶತಮಾನದ ಕೊನೆಯ ಭಾಗದಲ್ಲಿ ಅವರ ಕುಟುಂಬವು ಹಲವಾರು ಸಮಾಜಸೇವಕರನ್ನು ಒದಗಿಸಿತು. ಅವರೊಬ್ಬ ಕವಿ ಮತ್ತು ಬರಹಗಾರರಾಗಿದ್ದರು. ಮೊಗ್ರಾಲ್ ಮತ್ತು ದಕ್ಷಿಣ ಕೆನರಾದ ಅಭಿವೃದ್ಧಿಗೆ ಮೊಗ್ರಾಲ್ ಕುಟುಂಬದ ಕೊಡುಗೆ ಗಮನಾರ್ಹ.[80]

ಎಚ್.ಎಸ್. ಹುಸೇನ್ ಸಾಹೆಬ್

ಬ್ಯಾರಿ ಮುಸ್ಲಿಮರಂತೆಯೇ ಹನಫಿಗಳೂ ಸುಧಾರಣಾ ಚಳವಳಿಗೆ ಕೊಡುಗೆ ನೀಡಿದ್ದಾರೆ. ಈ ಪೈಕಿ ಕಾರ್ಕಳದ ಎಚ್.ಎಸ್. ಹುಸೇನ್ ಒಬ್ಬ ಜನಪ್ರಿಯ ರಾಜಕೀಯ ನೇತಾರರಾಗಿದ್ದರು. ಇವರು ಕಾರ್ಕಳದಲ್ಲಿ ಟೀಪು ಸುಲ್ತಾನನ ಅಧಿಕಾರಿಯಾಗಿದ್ದ ಹೈದರ್ ಸಾಹೇಬ್ ಎಂಬವರ ವಂಶಸ್ಥರು. ಉಡುಪಿ, ಅಲಿಘಡ ಮತ್ತು ಮದ್ರಾಸ್‌ನಲ್ಲಿ ಶಿಕ್ಷಣ ಪಡೆದ ಅವರು ಕಾರ್ಕಳದಲ್ಲಿ ಕ್ರಿ.ಶ. 1928ರಲ್ಲಿ ವಕೀಲರಾಗಿ ತನ್ನ ವೃತ್ತಿಜೀವನವನ್ನು ಆರಂಭಿಸಿದರು. ಯುವಕನಾಗಿದ್ದಾಗ ಕಾಂಗ್ರೆಸನ್ನು ಸೇರಿದ ಅವರು ಇದಿನಬ್ಬ ಒಡೆಯರ್, ಕುಂಞಾಮು ಹಾಜಿ ಮತ್ತು ಉಸ್ಮಾನ್ ಸಾಹೆಬರೊಂದಿಗೆ ಸೇರಿ ಮಂಗಳೂರಿನಲ್ಲಿ ಖಿಲಾಫತ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕ್ರಿ.ಶ. 1932ರಲ್ಲಿ ಅವರು ಮೂಡಬಿದ್ರೆ ಮುಸ್ಲಿಮ್ ಮೀಸಲು ಕ್ಷೇತ್ರದಿಂದ ಮದ್ರಾಸ್ ಅಸೆಂಬ್ಲಿಗೆ ಆಯ್ಕೆಯಾದರು. ಅವರು ದಕ್ಷಿಣ ಕೆನರಾದ ಜನರಿಗೆ ಅದರಲ್ಲೂ ಮುಖ್ಯವಾಗಿ ಮುಸ್ಲಿಮರಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವರು ಅಖಿಲ ಭಾರತ ರೈಲ್ವೆ ಮಂಡಳಿಯ ಸದಸ್ಯರಾಗಿದ್ದರು. ಕ್ರಿ.ಶ. 1942ರಲ್ಲಿ ಅವರು ಊಟಿಯ ತೋಟಗಾರರ ಸಂಘಕ್ಕೆ ಕಾನೂನು ಸಲಹೆಗಾರರಾಗಿದ್ದರು. ಯುದ್ಧ ಪ್ರಚಾರವನ್ನು ಸಂಘಟಿಸಿದ್ದ ಅವರನ್ನು ಬ್ರಿಟಿಷರು ಖಾನ್ ಬಹದೂರ್ ಎಂಬ ಬಿರುದಿನಿಂದ ಸನ್ಮಾನಿಸಲು

ಮುಂದಾಗಿದ್ದರು. ಆದರೆ ಅವರು ಆ ಬಿರುದನ್ನು ತಿರಸ್ಕರಿಸಿದರು. ಅವರು ರಾಷ್ಟ್ರೀಯ ಪ್ರಜ್ಞೆಯ ಕಡೆಗೆ ಒಲವು ಹೊಂದಿದ್ದರು.

ಹನಫಿ ಮುಸ್ಲಿಮರ ಪೈಕಿ ಅವರು ಮೊಟ್ಟಮೊದಲ ಕ್ರಿಯಾಶೀಲ ಸುಧಾರಕರಾಗಿದ್ದರು. ಅವರು ಆಧುನಿಕ ಶಿಕ್ಷಣವನ್ನು ಪ್ರಚುರಪಡಿಸಿದರು ಮತ್ತು ಮುಸ್ಲಿಮರನ್ನು ಮೂಢನಂಬಿಕೆಗಳಿಂದ ಹೊರಬರುವಂತೆ ಪ್ರೇರೇಪಿಸಿದರು. ಮಸೀದಿ ಮತ್ತು ಉರ್ದು ಶಾಲೆಗಳನ್ನು ಸ್ಥಾಪಿಸಲು ಅವರು ನೆರವು ನೀಡಿದರು. ಕೈಕಂಬ ಮಸೀದಿಯು ಅವರ ಸಹಾಯದಿಂದಲೇ ನಿರ್ಮಾಣಗೊಂಡಿತು. ಅವರ ಒತ್ತಾಸೆಯಿಂದಾಗಿ ಕಾರ್ಕಳದ ಕೆಲವು ಮಹಿಳೆಯರು ಮದ್ರಾಸ್‌ನಿಂದ ಪದವಿಯನ್ನು ಪಡೆಯಲು ಸಾಧ್ಯವಾಯಿತು. ಹುಸೇನ್ ಸಾಹೆಬ್ ಜಿಲ್ಲೆಯ ಮುಸ್ಲಿಮರ ಮಟ್ಟಿಗೆ ಸ್ಫೂರ್ತಿ ಕೇಂದ್ರವಾಗಿದ್ದರು.[81]

ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಕಾಸಿಮ್ ಸೇಠ್

ಹಾಜಿ ಅಬ್ದುಲ್ಲಾ ಕಾಸಿಮ್ ಸೇಠ್ ಉಡುಪಿಯ ಇನ್ನೋರ್ವ ಪ್ರಮುಖ ಮುಸ್ಲಿಮ್ ವ್ಯಾಪಾರಿ. ಅವರು ಹತ್ತೊಂಭತ್ತನೇ ಶತಮಾನದಲ್ಲಿ ಉಡುಪಿಯಲ್ಲಿ ನೆಲೆಸಿದ್ದ ಮೆಮನ್ ಕುಟುಂಬಕ್ಕೆ ಸೇರಿದ್ದರು. ಅವರ ಅಜ್ಜ ಬುಡಾನ್ ಸೇಠ್ ಉಡುಪಿಯಲ್ಲಿ ನೆಲೆಸಿದ್ದರು ಮತ್ತು ಮುಂಚೂಣಿಯ ವರ್ತಕರಾಗಿ ಮಾರ್ಪಟ್ಟರು. ಅವರೊಬ್ಬ ಗಂಧದ ವ್ಯಾಪಾರಿಯಾಗಿದ್ದರು. ಕ್ರಮೇಣ ಅವರ ಕುಟುಂಬವು ವ್ಯಾಪಾರವನ್ನು ವಿಸ್ತರಿಸಿಕೊಂಡಿತು. ಅವರ ಕುಟುಂಬವು ಹಲವಾರು ಉದ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿತ್ತು. ಉದಾ: ಮೀನು, ವಜ್ರ ಇತ್ಯಾದಿ. ಬುಡಾನ್ ಸೇಠ್ ಮತ್ತು ಅವರ ಮಗ ಕಾಸಿಮ್ ಸೇಠ್ ಮಲ್ಪೆಯ ಪ್ರಮುಖ ಮೀನು ರಫ್ತುದಾರರಾಗಿದ್ದರು ಮತ್ತು ಉಡುಪಿ, ಉದ್ಯಾವರ ಮತ್ತು ಶಿರ್ವದಲ್ಲಿ ವರ್ತಕರನ್ನು ನೇಮಿಸಿಕೊಂಡಿದ್ದರು. ಕಾಸಿಮ್ ಸೇಠ್‌ರ ಮಗನಾಗಿದ್ದ ಅಬ್ದುಲ್ಲಾ ಸೇಠ್ ವ್ಯಾಪಾರದಲ್ಲಿ ಪುರೋಗತಿ ಹೊಂದಿ ಉಡುಪಿ ಮತ್ತು ಕಾರ್ಕಳ ತಾಲೂಕಿನಲ್ಲಿ ವಿಶಾಲವಾದ ಜಮೀನನ್ನು ಹೊಂದಿದ್ದರು.

ಹಾಜಿ ಅಬ್ದುಲ್ಲಾ ಸೇಠ್ ಒಬ್ಬ ಪ್ರಸಿದ್ಧ ದಾನಿಯಾಗಿದ್ದರು. ಪ್ರತಿ ದಿನ ಮಧ್ಯಾಹ್ನದ ನಮಾಝ್ ನಂತರ ಅವರು ಒಂದು ಮುಡಿ ಅಕ್ಕಿಯನ್ನು ದಾನ ಮಾಡುತ್ತಿದ್ದರು. ಜಾತಿ ಮತ್ತು ಧರ್ಮದ ಭೇದವಿಲ್ಲದೆ ಅವರು ಉದಾರವಾಗಿ ದಾನ ಮಾಡುತ್ತಿದ್ದರು. ಉಡುಪಿ ದೇವಸ್ಥಾನಕ್ಕೂ ಅವರು ದೇಣಿಗೆಯನ್ನು ನೀಡಿದ್ದರು. ಪರ್ಯಾಯದ ಸಂದರ್ಭದಲ್ಲಿ ಅವರಿಗೆ ದೇಗುಲದ ಆನೆಯಿಂದ ಹಾರಾರ್ಪಣೆ ಮಾಡಿಸಲಾಗಿತ್ತು ಮತ್ತು ಮಠದಲ್ಲಿ ಒಂದು ಆಸನವನ್ನೂ ನೀಡಲಾಗಿತ್ತು. ಸಂಪೂರ್ಣ ಬಡಗುಪೇಟೆ ಅವರಿಗೆ ಸೇರಿತ್ತು.

ಅವರೊಬ್ಬ ದೇವಭಕ್ತ ಮನುಷ್ಯರಾಗಿದ್ದರು ಮತ್ತು ಸಮುದಾಯದ ಅಗತ್ಯಗಳಿಗೆ ಅವರು ಕೊಡುಗೆ ನೀಡಿದ್ದರು. ಅವರ ತಾತ ಬುಡಾನ್ ಸಾಹೆಬ್ ಉಡುಪಿ ಮಸೀದಿಯನ್ನು ನಿರ್ಮಿಸಿದರು ಮತ್ತು ಸಮರ್ಪಕವಾಗಿ ದತ್ತಿ ಒದಗಿಸಿದರು. ಅವರು ಆ ಮಸೀದಿಯ ಮುತವಲ್ಲಿಯಾಗಿದ್ದರು. ಅವರು ಮುಸ್ಲಿಮ್ ಮಕ್ಕಳಿಗಾಗಿ ಒಂದು ಉರ್ದು ಶಾಲೆಯನ್ನು ಪ್ರಾರಂಭಿಸಿದರು. ಅವರು ಉಡುಪಿ ಪಟ್ಟಣದ ಕೇಂದ್ರ ಭಾಗದಲ್ಲಿ ಕಲ್ಯಾಣ ಸಂಸ್ಥೆಗೆ ಜಮೀನು ದಾನ ಮಾಡಿದರು. ತಮ್ಮ ತಾತನ ನೆನಪಿಗಾಗಿ 'ಹಾಜಿ ಬುಡಾನ್ ಲೈಯಿಂಗ್ ಹಾಸ್ಪಿಟಲ್'

ಆರಂಭಿಸಿದರು. ಸರಕಾರವು ಅದೇ ಜಾಗದಲ್ಲಿ ಹಾಜಿ ಅಬ್ದುಲ್ಲಾ ಮೆಮೋರಿಯಲ್ ಆಸ್ಪತ್ರೆಯನ್ನು ಸ್ಥಾಪಿಸಿತು. ಕ್ರಿ.ಶ. 1920ರ ವೇಳೆಗೆ ಹಾಜಿ ಅಬ್ದುಲ್ಲಾ ಸೇಠ್ ಅತ್ಯಂತ ಪ್ರಮುಖ ಮುಸ್ಲಿಮ್ ನಾಯಕನಾಗಿ ಮಾರ್ಪಟ್ಟರು. ಅವರು ಉಡುಪಿಯಲ್ಲಿ ಮೋಟಾರು ಕಾರು (ಹಾರ್ಪ್ ಮೊಬೈಲ್ ಕಾರು) ಪರಿಚಯಿಸಿದ ಮೊದಲ ವ್ಯಕ್ತಿಯಾಗಿದ್ದರು.

ಹಾಜಿ ಅಬ್ದುಲ್ಲಾ ಸೇಠ್‌ರನ್ನು ಗುರುತಿಸಿದ ಬ್ರಿಟಿಷ್ ಸರಕಾರವು ಅವರಿಗೆ ಖಾನ್ ಬಹದೂರ್ ಎಂಬ ಬಿರುದನ್ನು ನೀಡಿತು. ಅವರು ಮದ್ರಾಸ್ ವಿಧಾನ ಪರಿಷತ್‌ನ ಸದಸ್ಯ ರಾಗಿದ್ದರು. ಮಲಬಾರ್-ನೀಲಗಿರಿ ಕ್ಷೇತ್ರದಿಂದ ಅವರು ಮದ್ರಾಸ್ ಅಸೆಂಬ್ಲಿಗೂ ಆಯ್ಕೆ ಯಾದರು ಮತ್ತು ಶಾಸಕರಾಗಿ ಸೇವೆ ಸಲ್ಲಿಸಿದರು. ಅವರು ಜಿಲ್ಲಾ ಬೋರ್ಡ್‌ನ ಸದಸ್ಯರೂ ತಾಲೂಕ್ ಬೋರ್ಡ್‌ನ ಅಧ್ಯಕ್ಷರೂ ಆಗಿದ್ದರು. ಅವರು ವೈಸ್‌ರಾಯ್ ಕೌನ್ಸಿಲ್ (1930)ನ ಸದಸ್ಯರೂ ಆಗಿದ್ದರು. ಅವರೊಬ್ಬ ಸಕ್ರಿಯ ಕ್ರೀಡಾಪಟುವಾಗಿದ್ದರು ಮತ್ತು ಒಳ್ಳೆಯ ಟೆನಿಸ್ ಆಟಗಾರರಾಗಿದ್ದರು. ಒಬ್ಬ ಉದಾರಿ ವ್ಯಕ್ತಿಯಾಗಿ ಅವರು ಜನರಿಗೆ ಸಹಾಯ ಮಾಡಿದರು ಮತ್ತು ಕಷ್ಟದಲ್ಲಿರುವವರಿಗೆ ನೆರವಾದರು. ಕ್ರಿ.ಶ. 1938ರಲ್ಲಿ ನಿಧನರಾದ ಬಳಿಕ ಅವರ ಉತ್ತರಾಧಿಕಾರಿಗಳು (ದಾವೂದ್ ಸೇಠ್ ಮತ್ತು ಆದಮ್ ಸೇಠ್) ಅವರ ಸತ್ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ವಿಫಲರಾದರು. ವಾಣಿಜ್ಯ ಮತ್ತು ಬ್ಯಾಂಕಿಂಗ್ ಕ್ಷೇತ್ರಕ್ಕೂ ಹಾಜಿ ಅಬ್ದುಲ್ಲಾ ಗಮನಾರ್ಹ ಕೊಡುಗೆ ಸಲ್ಲಿಸಿದ್ದಾರೆ.[82]

ಕಲೆಕ್ಟರ್‌ಗಳ ಪಾತ್ರ

ಕ್ರಿ.ಶ. 1800 ಮತ್ತು ಕ್ರಿ.ಶ. 1947ರ ಮಧ್ಯೆ ಭಾರಿ ಸಂಖ್ಯೆಯ ಕಲೆಕ್ಟರ್‌ಗಳು ಜಿಲ್ಲೆ ಯಲ್ಲಿ ಆಡಳಿತ ನಡೆಸಿದ್ದರು. ಕಂಪನಿಯ ಆಳ್ವಿಕೆಯ ಅವಧಿಯಲ್ಲಿ 19 ಮಂದಿ ಕಲೆಕ್ಟರ್ ಗಳು ಶ್ಲಾಘನಾರ್ಹವಾದ ರೀತಿಯಲ್ಲಿ ಜಿಲ್ಲೆಯನ್ನು ನಿಯಂತ್ರಿಸಿದ್ದರು. ಆದರೆ ಈ ಅವಧಿಯಲ್ಲಿ ಯಾವನೇ ಮುಸ್ಲಿಮ್ ಕಲೆಕ್ಟರ್ ಇರಲಿಲ್ಲ. ಆದರೆ ಕ್ರಿ.ಶ. 1868ರಿಂದ ಕ್ರಿ.ಶ. 1947ರವರೆಗೆ ಐವರು ಮುಸ್ಲಿಮ್ ಕಲೆಕ್ಟರ್‌ಗಳು ಮಂಗಳೂರಿನಲ್ಲಿ ಸೇವೆ ಸಲ್ಲಿಸಿದರು. ಇವರೆಂದರೆ 1. ಮೊಹಮ್ಮದ್ ಅಜೀಜುದ್ದೀನ್ ಹುಸೇನ್ ಸಾಹೆಬ್ ಬಹದೂರ್ (1905), 2. ಜೆ ಹುಸೇನ್ (1931), 3. ಮೊಹಮ್ಮದ್ ಹುಮಾಯೂನ್ ಸಾಹೆಬ್ ಬಹದೂರ್ (1938), 4. ಖಾನ್ ಬಹದೂರ್ ಶರೀಫ್ ಅಹ್ಮದಾಲಿ ಸಾಹೆಬ್ ಬಹದೂರ್ (1939) ಮತ್ತು ಎಮ್. ಕರಾಮತುಲ್ಲಾ (1942). ಈ ಪೈಕಿ ಅಜೀಜುದ್ದೀನ್ ಜಿಲ್ಲೆಯ ಮುಸ್ಲಿಮರಿಗೆ ದೊಡ್ಡ ಕೊಡುಗೆ ಯನ್ನೇ ನೀಡಿದ್ದಾರೆ. ಅವರ ನೆನಪು ಇಂದಿಗೂ ಜನರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಕ್ರಿ.ಶ. 1905ರ ಮಹಾ ಪ್ಲೇಗ್‌ನ ಸಂದರ್ಭದಲ್ಲಿ ಅವರು ಜನರಿಗೆ ದೊಡ್ಡ ಉಪಕಾರವನ್ನು ಮಾಡಿದ್ದರು ಮತ್ತು ಹಲವಾರು ಮಂದಿ ರಕ್ಷಣೆ ಹೊಂದಿದ್ದರು. ಅವರು ಬಂದರನ್ನು ಸ್ವಚ್ಛ ಗೊಳಿಸಲು ಆದೇಶಿಸಿದರು.[83] ಅಂತೆಯೇ ರಸ್ತೆಗಳನ್ನು ಶುಚಿಗೊಳಿಸಲಾಯಿತು ಮತ್ತು ಮರು ನಿರ್ಮಾಣ ಮಾಡಲಾಯಿತು. ಜತೆಗೆ ಬಂದರ್‌ನಲ್ಲಿ ರೋಗಿಗಳನ್ನು ಏಕಾಂಗಿಯಾಗಿ ಇಡುವ ಒಂದು ಸ್ಥಳವನ್ನು ನಿರ್ಮಿಸಲಾಯಿತು.

ಅಜೀಜುದ್ದೀನ್ ಸುಧಾರಣಾ ಚಳವಳಿಯ ಬೆಂಬಲಿಗರಾಗಿದ್ದರು ಮತ್ತು ಮುಸ್ಲಿಮ್

ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಸಹಾಯ ಮಾಡಿದರು. ಅವರು ಮುಸ್ಲಿಮರಿಗೆ ಶಾಲೆಗಳನ್ನು ತೆರೆಯಲು ಸಹಾಯ ಮಾಡಿದರು. ವಲ್ಲಿ ಹುಸೈನಬ್ಬ ಎಂಬವರ ಮನೆಯಲ್ಲಿ ಮುಸ್ಲಿಮ್ ಹೆಣ್ಮಕ್ಕಳಿಗಾಗಿ ಶಾಲೆಯನ್ನು ತೆರೆಯಲಾಯಿತು. ಅದು ಜಿಲ್ಲೆಯಲ್ಲೇ ಮೊಟ್ಟ ಮೊದಲ ಮುಸ್ಲಿಮ್ ಹೆಣ್ಮಕ್ಕಳ ಶಾಲೆಯಾಗಿತ್ತು. ಕ್ರಮೇಣ ಅದನ್ನು ಹುಡುಗಿಯರ ಪ್ರಾಥಮಿಕ ಶಾಲೆಯಾಗಿ ಅಭಿವೃದ್ಧಿ ಪಡಿಸಲಾಯಿತು. ಗ್ರಾಮೀಣ ಪ್ರದೇಶದಲ್ಲೂ ಶಾಲೆಗಳನ್ನು ತೆರೆಯಲು ಅವರು ಸಹಾಯ ನೀಡಿದರು. ಅಜೀಜಿಯಾ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಲಾಯಿತು ಮತ್ತು ಕಾಸರಗೋಡಿನಲ್ಲಿ ಶಾಲೆಗಳನ್ನು ತೆರೆಯಲು ನೆರವು ನೀಡಲಾಯಿತು. ಮುಸ್ಲಿಮರ ಮಧ್ಯೆ ಶಿಕ್ಷಣವನ್ನು ವ್ಯಾಪಕಗೊಳಿಸುವ ಈ ಯೋಜನೆಗೆ ಸಂಬಂಧಿಸಿ ಶಮ್ಮಾಡ್ ಮತ್ತು ಶೆರೂಲ್ ಕೂಡಾ ಅಜೀಜುದ್ದೀನ್‌ರಿಂದ ಪ್ರಭಾವಿತರಾಗಿದ್ದರು. ಅವರು ಮುಸ್ಲಿಮರ ಸಾಂಸ್ಕೃತಿಕ ಸಂಸ್ಥೆಗಳಿಗೂ – ಉದಾ: ಮಾಪಿಳ್ಳೆ ಪಾಟ್ಟು – ಪ್ರೋತ್ಸಾಹ ನೀಡಿದರು.

ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಹೆಸರು ಕ್ರಿ.ಶ. 1914ರಲ್ಲಿ ಡೆಪ್ಯೂಟಿ ಕಲೆಕ್ಟರ್ ಆಗಿ ಮಂಗಳೂರಿಗೆ ಆಗಮಿಸಿದ್ದ ಆಮಿರ್ ಅವರದ್ದು. ಇವರು ಮುಸ್ಲಿಮರ ನಡುವೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು. ಮಂಗಳೂರಿನ ತರುಣರು ಅಂದು ಇಸ್ಲಾಮಿಯಾ ಕ್ಲಬ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ವಾಚನಾಲಯ, ಗ್ರಂಥಾಲಯ ಮತ್ತು ಆಟದ ಕ್ಲಬ್ ನಡೆಸುತ್ತಿದ್ದರು. ಆಮಿರ್ ಅವರಿಗೆ ಈ ಎಲ್ಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ನೆರವಾದರು. ಅವರು ಮುಸ್ಲಿಮ್ ನಾಯಕರಿಗೆ ಸಮುದಾಯದಲ್ಲಿ ಶಿಕ್ಷಣವನ್ನು ವ್ಯಾಪಕ ಪಡಿಸುವಂತೆ ಪ್ರೋತ್ಸಾಹ ನೀಡುತ್ತಿದ್ದರು. ಅವರು ಮುಸ್ಲಿಮ್ ಸ್ವಯಂಸೇವಕರ ಒಂದು ಒಳ್ಳೆಯ ತಂಡವನ್ನು ಕಟ್ಟಿದ್ದರು. ಮಹಮೂದ್ ಶಮ್ಮಾಡ್, ಮಾಹಿನ್ ಶಮ್ಮಾಡ್, ಶೆರೂಲ್, ಕಮಿಟಿ ಸೀದಿಯಬ್ಬ ಇದಿನಬ್ಬ ಒಡೆಯರ್, ಕಮಿಟಿ ಅಬ್ದುಲ್‌ಕಾದರ್, ಜಮಾಲುದ್ದೀನ್ ಮಿಯಾನ್ ಸಾಹೆಬ್ ಮತ್ತು ವಕೀಲ್ ಉಸ್ಮಾನ್ ಸಾಹೆಬ್ ಈ ಪೈಕಿ ಪ್ರಮುಖ ಹೆಸರುಗಳು.[84]

ಮುಸ್ಲಿಮರು ಮತ್ತು ರಾಜಕೀಯ

ಹತ್ತೊಂಭತ್ತನೇ ಶತಮಾನದಲ್ಲಿ ಜಿಲ್ಲೆಯ ಮುಸ್ಲಿಮ್ ವರ್ತಕರು ಟೀಪುವಿನ ಪತನದ ನಂತರ ತಮ್ಮ ವಾಣಿಜ್ಯ ಮತ್ತು ಪ್ರಾಬಲ್ಯದ ಮೇಲಾಗಿದ್ದ ಪ್ರಭಾವದಿಂದ ಹೊರಬರಲು ಪರಿಶ್ರಮಿಸುತ್ತಿದ್ದರು. ಮಂಗಳೂರಿನ ಶ್ರೀಮಂತ ವರ್ತಕರು ಮತ್ತು ಜಾಗೀರ್ದಾರಿ ಲಕ್ಷಣಗಳನ್ನು ಹೊಂದಿದ್ದ ಪ್ರಭುಗಳು ಸಹಜವಾಗಿಯೇ ಬ್ರಿಟಿಷ್ ಅಧಿಕಾರಶಾಹಿಯೆಡೆಗೆ ಆಕರ್ಷಿತರಾಗಿದ್ದರು ಮತ್ತು ಬ್ರಿಟಿಷ್ ಅಧಿಕಾರಿಗಳ ಮಿತ್ರರಾಗಿ ಮಾರ್ಪಟ್ಟರು. ಬ್ರಿಟಿಷ್ ಅಧಿಕಾರಿಗಳೊಂದಿಗೆ ಆತ್ಮೀಯ ಒಡನಾಟಕ್ಕೆ ಪ್ರಯತ್ನಿಸುವುದು ಮಂಗಳೂರಿನ ಆ ಕಾಲದ ಶ್ರೀಮಂತ ವ್ಯಾಪಾರಿಗಳಲ್ಲಿ ಕಂಡುಬರುತ್ತಿದ್ದ ಒಂದು ಸಾಮಾನ್ಯ ಪ್ರವೃತ್ತಿಯಾಗಿತ್ತು. ಪದಿನಾರಗಗಳು ಬಿಳಿಯ ಸಾಹೇಬರ ಔತಣಕೂಟದಲ್ಲಿ ಮುಳುಗಿ ಹೋಗಿದ್ದವು. ಕ್ರಮೇಣ ಈ ಪ್ರವೃತ್ತಿಯು ಗ್ರಾಮೀಣ ಪ್ರದೇಶಗಳಿಗೂ ಹಬ್ಬಿತು. ಇದು ಒಂದು ರೀತಿಯಲ್ಲಿ ಬ್ರಿಟಿಷರಿಗೂ ವ್ಯಾಪಾರಿಗಳಿಗೂ ಅನುಕೂಲಕರವೇ ಆಯಿತು. ಬ್ರಿಟಿಷರಿಗೆ ತಮ್ಮ ಅಧಿಕಾರವನ್ನು ಸ್ಥಾಪಿಸಲು ಸಾಧ್ಯವಾಯಿತು. ಮತ್ತೊಂದೆಡೆ ವ್ಯಾಪಾರಿಗಳಿಗೆ ತಮ್ಮ ವಾಣಿಜ್ಯ ಮತ್ತು ಸಂಪತ್ತನ್ನು ಹೆಚ್ಚಿಸಲು

ನೆರವಾಯಿತು. ಈ ಸಂಬಂಧದಿಂದ ಶ್ರೀಮಂತರು ಮತ್ತಷ್ಟು ಶ್ರೀಮಂತರಾದರು.

ಮತ್ತೊಂದೆಡೆ ಸಾಮಾನ್ಯ ಮುಸ್ಲಿಮರು ದಾರಿದ್ರ್ಯಕ್ಕೆ ತಳ್ಳಲ್ಪಟ್ಟರು. ಅವರ ಪರಿಸ್ಥಿತಿ ಕರುಣಾಜನಕವಾಯಿತು. ಶ್ರೀಮಂತರು ಮತ್ತು ಬಡವರ ಮಧ್ಯೆ ದೊಡ್ಡ ಕಂದರ ಏರ್ಪಟ್ಟಿತು. ಬ್ರಿಟಿಷರ ಪ್ರಗತಿಶೀಲ ಕ್ರಮಗಳು ಶ್ರೀಮಂತರನ್ನಷ್ಟೆ ತಲುಪಿದವು. ಬಡವರು ಅಂಧಕಾರಕ್ಕೆ ತಳ್ಳಲ್ಪಟ್ಟರು. ಇದರ ಮಧ್ಯೆ ಮಹಾ ಪ್ಲೇಗ್ ನೂರಾರು ಜೀವಗಳನ್ನು ಬಲಿತೆಗೆದುಕೊಂಡು ಜಿಲ್ಲೆಯನ್ನೇ ಗಂಡಾಂತರಕ್ಕೆ ಸಿಲುಕಿಸಿತು. ಇದು ನಿಜವಾಗಿ ಶ್ರೀಮಂತ ಮುಸ್ಲಿಮ್ ವರ್ತಕರಿಗೆ ಪ್ರಕೃತಿ ನೀಡಿದ ಎಚ್ಚರಿಕೆಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ಚಿಂತನೆಗಳು ದಕ್ಷಿಣ ಕೆನರಾದ ಮುಸ್ಲಿಮರಿಗೆ ತಲುಪಲಿಲ್ಲ. ಶ್ರೀಮಂತರು ತಮ್ಮ ವೈಭೋಗದಲ್ಲೇ ತಲ್ಲೀನರಾಗಿದ್ದರು ಮತ್ತು ತಾವು ಖರ್ಚು ಮಾಡಲು ಸಾಧ್ಯವಿದೆಯೆಂದು ಊಹಿಸಲಿಕ್ಕೂ ಸಾಧ್ಯವಾಗದಷ್ಟು ಸಂಪತ್ತನ್ನು ಕೂಡಿ ಹಾಕಿದರು. ಬಡವರು ಜೀವಿಸಲಿಕ್ಕಾಗಿ ಸಂಕಷ್ಟ ಪಡಬೇಕಾಯಿತು. ಅವರಿಗೆ ರಾಜಕೀಯ ಅಧಿಕಾರಗಳ ಬಗ್ಗೆ ಯೋಚಿಸುವಷ್ಟು ಸಮಯವಿರಲಿಲ್ಲ. ಪಟ್ಟಣದಲ್ಲಿ ಮುಸ್ಲಿಮ್ ವರ್ತಕರ ಒಂದು ಗುಂಪು ಬೆಳೆಯುತ್ತಾ ಹೋದರೆ ಇನ್ನೊಂದು ಗುಂಪು ಬಡತನದ ಬೇಗೆಯನ್ನು ಅನುಭವಿಸುತ್ತಿತ್ತು. ಗ್ರಾಮಗಳಲ್ಲಿ ಹೆಚ್ಚಿನ ಮುಸ್ಲಿಮರು ಕೃಷಿ ಭೂಮಿಯನ್ನೇ ಆಶ್ರಯಿಸಿಕೊಂಡಿದ್ದರು. ಕೇವಲ ಸುಶಿಕ್ಷಿತ ಯುವಕರು ಮಾತ್ರ ರಾಜಕೀಯ ಚಿಂತನೆಗಳು ಮತ್ತು ಜನರ ಕಲ್ಯಾಣದ ಬಗ್ಗೆ ಯೋಚಿಸಿದ್ದರು.

ಕ್ರಿ.ಶ. 1914ರಲ್ಲಿ ಕಾಂಗ್ರೆಸ್ ಚಳವಳಿ ಮಂಗಳೂರಿನ ಮುಸ್ಲಿಮರನ್ನು ತಲುಪಿತು. ಹೆಚ್ಚಿನ ಶ್ರೀಮಂತ ಮತ್ತು ಕುಲೀನ ಮುಸ್ಲಿಮರು ಬ್ರಿಟಿಷ್ ಕಲೆಕ್ಟರ್‌ಗಳೊಂದಿಗೆ ಸ್ನೇಹ ಹೊಂದಿದ್ದರಿಂದ ಅವರು ಸ್ವಾತಂತ್ರ್ಯದ ಕಲ್ಪನೆಯನ್ನು ಒಪ್ಪಲು ಸಿದ್ಧರಿರಲಿಲ್ಲ. ಅವರು ಚಳವಳಿಯನ್ನು ಸ್ವೀಕರಿಸಲು ತಯಾರಿರಲಿಲ್ಲ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಮುಸ್ಲಿಮರು ಮಹಾತ್ಮಾ ಗಾಂಧಿಯ ಕರೆಗೆ ಪ್ರತಿಕ್ರಿಯಿಸಲು ಸಾಧ್ಯವಾಯಿತು. ವಾಸ್ತವದಲ್ಲಿ ಮಲಬಾರ್‌ನ ಮುಸ್ಲಿಮರಿಗೆ ಹೆಚ್ಚಿನ ರಾಜಕೀಯ ಮೆದುಳು ಇತ್ತು ಮತ್ತು ಅವರು ಆ ಸ್ಫೂರ್ತಿಯನ್ನು ತುಳುನಾಡಿನ ಮುಸ್ಲಿಮರೊಳಗೆ ತುಂಬಿದರು. ಕಾರ್ನಾಡ್ ಸದಾಶಿವ ರಾವ್, ರಾಮ ರಾವ್, ಉಮೇಶ್ ರಾವ್, ಕಾರಂತ್ ಮತ್ತು ಎ.ಬಿ. ಶೆಟ್ಟಿಯಂತಹ ನಾಯಕರು ಸ್ವಾತಂತ್ರ್ಯ ಮತ್ತು ಗಾಂಧಿವಾದಿ ಚಿಂತನೆಗಳ ಅಗತ್ಯವನ್ನು ಜನರಿಗೆ ಮನದಟ್ಟು ಮಾಡಲು ಪ್ರಯತ್ನಿಸುತ್ತಿದ್ದರು. ಜಿಲ್ಲೆಯ ಪ್ರಭಾವಿ ಜನರು ಈ ಆಂದೋಲನವನ್ನು ಸೇರಲು ಹಿಂದೇಟು ಹಾಕಿದರು.

ರಾಜಕೀಯ ಅಲೆಯನ್ನು ಅಪ್ಪಿಕೊಂಡ ಆರಂಭ ಕಾಲದ ನಾಯಕರು ಕೇವಲ ಬೆರಳೆಣಿಕೆಯಷ್ಟು ಮೊಹಮ್ಮದ್ ಶೆರೂಲ್ ಮತ್ತು ಮೊಹಮ್ಮದ್ ಶಮ್ಮಾಡ್ ಕಾಸರಗೋಡು ತಾಲೂಕಿನ ಇಬ್ಬರು ಪ್ರಮುಖ ಮುಖಂಡರು. ಚಳವಳಿಯಲ್ಲಿ ಅದಾಗಲೇ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಮಲಬಾರಿನ ಮಾಪಿಳ್ಳೆಗಳಿಂದ ಇವರಿಬ್ಬರೂ ಪ್ರಭಾವಿತರಾಗಿದ್ದರು. ಕಾರ್ಕಳದ ಎಚ್.ಎಸ್. ಹುಸೇನ್, ಬಂಟ್ವಾಳದ ಬಿ.ಎಲ್. ಅಹಮದ್, ಉಡುಪಿಯ ಹಾಜಿ ಅಬ್ದುಲ್ಲಾ ಸೇಠ್, ಅರ್ಕುಳದ ಇದಿನಬ್ಬ ಒಡೆಯರ್ ಮತ್ತು ಮೊಹಮ್ಮದ್ ಪುತ್ತೂರ್ ಸಾಹೆಬ್ ಜಿಲ್ಲೆಯ ಸಕ್ರಿಯ ರಾಜಕಾರಣಿಗಳಾಗಿದ್ದರು. ಮಂಗಳೂರು ನಗರವು ನಿಧಾನಗತಿಯ ರಾಜಕೀಯ ಭಾಗೀದಾರಿಕೆಯನ್ನು ಹೊಂದಿತ್ತು. ಖಿಲಾಫತ್ ಚಳವಳಿಯು ಜಿಲ್ಲೆಯ ಮೊಟ್ಟ

ಮೊದಲ ರಾಜಕೀಯ ಆಂದೋಲನವಾಗಿತ್ತು. ಶೆರೂಲ್ ಮತ್ತು ಶಮ್ನಾಡ್ ಈ ಚಳವಳಿಯನ್ನು ಜಿಲ್ಲೆಯಲ್ಲಿ ಪ್ರಾರಂಭಿಸಿದ ಪ್ರಮುಖ ನಾಯಕರಾಗಿದ್ದರು. ಸ್ಥಳೀಯ ಸಮಿತಿ ಗಳನ್ನು ಪ್ರಾರಂಭಿಸಲಾಯಿತು. ಇದಿನಬ್ಬ ಒಡೆಯರ್‌ರ ನಾಯಕತ್ವದಲ್ಲಿ ಮಂಗಳೂರು ಖಿಲಾಫತ್ ಚಳವಳಿ ಆರಂಭಗೊಂಡಿತು. ಮಂಗಳೂರಿನ ಕುಂಞಾಮು ಹಾಜಿ, ಕಾರ್ಕಳದ ಎಚ್.ಎಸ್. ಹುಸೇನ್, ಉಡುಪಿಯ ಉಸ್ಮಾನ್ ಸಾಹೆಬ್ ಮತ್ತು ಮೊಹಮ್ಮದ್ ಪುತ್ತೂರ್ ಸಾಹೆಬ್ ಇದರ ಸದಸ್ಯರಾಗಿದ್ದರು. ಅದು ಕಾಸರಗೋಡಿನಲ್ಲಿ ದೊಡ್ಡ ಪ್ರಭಾವ ಬೀರಿತ್ತು. ಶಮ್ನಾಡ್ ಕಾಸರಗೋಡಿನಲ್ಲಿ ಖಿಲಾಫತ್ ಸಮ್ಮೇಳನವನ್ನು ಆಯೋಜಿಸಿದ್ದರು. ಕ್ರಿ.ಶ. 1931ರಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಶಮ್ನಾಡ್ ಮತ್ತು ಶೆರೂಲ್ ಜತೆಯಾಗಿ ಕಾಸರಗೋಡು ಮತ್ತು ಕುಂಬಳೆಯಲ್ಲಿ ಸಂಘಟಿಸಿದರು. ಇತರ ಕಡೆಗಳಲ್ಲಿ ಅದು ನಿರೀಕ್ಷಿತ ಪರಿಣಾಮ ಬೀರಲಿಲ್ಲ.[85]

ಕ್ರಿ.ಶ. 1930 ಮುಸ್ಲಿಮ್ ಲೀಗ್ ದಕ್ಷಿಣ ಕೆನರಾವನ್ನು ಪ್ರವೇಶಿಸಿತು. ಧಾರ್ಮಿಕ ಸಂಬಂಧ ಮತ್ತು ಅದರ ಮತೀಯ ಸ್ವರೂಪವು ಕೆಲವು ಮುಸ್ಲಿಮರನ್ನು ಅದರೆಡೆಗೆ ಆಕರ್ಷಿಸಿತು. ಅದು ಹಳ್ಳಿಯ ಮುಸ್ಲಿಮರಿಗಿಂತಲೂ ನಗರದ ಮುಸ್ಲಿಮರನ್ನು ಹೆಚ್ಚಾಗಿ ಆಕರ್ಷಿಸಿತು. ಗ್ರಾಮಗಳಲ್ಲಿ ಅದಾಗಲೇ ಕಾಂಗ್ರೆಸ್ ಬೇರು ಬಿಟ್ಟಿದ್ದರಿಂದ ಲೀಗ್ ಅಲ್ಲಿ ಹೆಚ್ಚಿನ ಮುನ್ನಡೆ ಸಾಧಿಸಲಿಲ್ಲ. ಕ್ರಿ.ಶ. 1930 ಅಹಮದ್ ಹುಸೇನ್ ಅವರು ನಗರ ಮುಸ್ಲಿಮ್ ಲೀಗನ್ನು ಸಂಘಟಿಸಿದರು. ಎಡ್ವೊಕೇಟ್ ಮೂಸಬ್ಬ ಮತ್ತು ಮೊಹಮ್ಮದ್ ಪುತ್ತೂರ್ ಸಾಹೆಬ್ ಇತರ ನಾಯಕರಾಗಿದ್ದರು. ಕ್ರಿ.ಶ. 1936ರಲ್ಲಿ ಶೌಕತ್ ಅಲಿ ಮಂಗಳೂರಿಗೆ ಭೇಟಿ ನೀಡಿದ್ದರು. ಖಾಜಿ ಮೊಹಮ್ಮದ್ ಈಸಾ, ಅಬ್ದುರ್ರಬ್ ಮುಂತಾದ ರಾಷ್ಟ್ರೀಯ ನಾಯಕರೂ ನಗರಕ್ಕೆ ಭೇಟಿ ನೀಡಿದರು. ಕ್ರಿ.ಶ. 1945 ಶೆರೂಲ್ ಮತ್ತು ಶಮ್ನಾಡ್‌ರಂತಹ ಪ್ರಮುಖ ನಾಯಕರೂ ಲೀಗನ್ನು ಸೇರಿದರು. ಲೀಗ್ ಹೆಚ್ಚು ಕ್ರಿಯಾಶೀಲವಾಯಿತು. ಶಮ್ನಾಡ್ ಮದ್ರಾಸ್ ರಾಜ್ಯ ಮುಸ್ಲಿಮ್ ಲೀಗ್‌ನ ಉಪಾಧ್ಯಕ್ಷರಾಗಿದ್ದರು. ಅವರ ಸೋದರ ಮಾಹಿಮ್ ಶಮ್ನಾಡ್ ಕೂಡಾ ಕಾಸರಗೋಡು ತಾಲೂಕು ಮತ್ತು ಜಿಲ್ಲೆಯಲ್ಲಿ ಲೀಗ್‌ಗೆ ಒಳ್ಳೆಯ ಕೊಡುಗೆ ನೀಡಿದರು.[86] ಕಾಂಗ್ರೆಸ್ ಹೆಚ್ಚು ಸಕ್ರಿಯವಾಗಿದ್ದರಿಂದ ಮಂಗಳೂರು ವಿಭಾಗದಲ್ಲಿ ಲೀಗ್ ನಿಧಾನಗತಿ ಬೆಳೆಯತೊಡಗಿತು. ರಸ್ತೆ ಮತ್ತು ಸಂಪರ್ಕದಲ್ಲಾದ ಪ್ರಗತಿಯ ಪರಿಣಾಮವಾಗಿ ವ್ಯಾಪಾರ ವಹಿವಾಟು ಕರಾವಳಿಯ ಕಡೆಗೆ ಕ್ಷಿಪ್ರವಾಗಿ ಸ್ಥಳಾಂತರಗೊಳ್ಳುತ್ತಿದ್ದುದರಿಂದ ಬಾರ್ಕೂರು ವಿಭಾಗವು ತನ್ನ ಸರದಿಯನ್ನು ಕಾಯುತ್ತಿತ್ತು. ಹೀಗಾಗಿ ಮುಸ್ಲಿಮ್ ಲೀಗ್ ಈ ಪ್ರದೇಶದಲ್ಲಿ ಯಾವುದೇ ಪ್ರಭಾವ ಹೊಂದಿರಲಿಲ್ಲ. ಆ ಪ್ರದೇಶದಲ್ಲಿ ನಾಯಕತ್ವದ ಕೊರತೆಯೂ ಇತ್ತು. ಹತ್ತೊಂಭತ್ತನೇ ಶತಮಾನದ ವೇಳೆಗೆ ಬಸ್ರೂರು ಸಹಿತ ಬಾರ್ಕೂರು ವಿಭಾಗವು ಮುಸ್ಲಿಮ್ ಪ್ರಭಾವವನ್ನು ಕಳೆದುಕೊಂಡಿತು. ನಿಜವಾಗಿ ದಕ್ಷಿಣ ಕೆನರಾವು ಅತ್ಯಂತ ಸೀಮಿತವಾದ ರಾಜಕೀಯ ಪ್ರತಿಕ್ರಿಯೆಯನ್ನು ಪ್ರದರ್ಶಿಸಿತ್ತು. ಅದರಲ್ಲೂ ಮುಸ್ಲಿಮರು ಅತ್ಯಂತ ಕನಿಷ್ಠ ಪಾತ್ರವನ್ನು ಹೊಂದಿದ್ದರು.

★★★

1. ಲೋಗನ್ ಮಲಬಾರ್ ಮ್ಯಾನುವಲ್, ಸಂಚಿಕೆ 1, ಪು. 221
2. ಮೇಲಿನಂತೆಯೇ ಪು. 223
3. ಮೇಲಿನಂತೆಯೇ ಪು. 227-228
4. ಮೇಲಿನಂತೆಯೇ ಪು. 238
   ಸೂಚನೆ: ನಾಲ್ಕನೆಯ ವೇದ ಎಂದರೆ ಇಸ್ಲಾಮ್ ಮತ್ತು ಕೇರಳದಲ್ಲಿ ಮುಸ್ಲಿಮರನ್ನು ನಾಲಾನ್ ವೇದಕ್ಕಾರ್ ಅಂದರೆ ನಾಲ್ಕನೆಯ ವೇದದ ಅನುಯಾಯಿಗಳು
5. ಮೇಲಿನಂತೆಯೇ ಪು. 239
6. ಮೇಲಿನಂತೆಯೇ ಪು. 239
7. ಮೇಲೆ ಉದ್ದರಿಸಲಾಗಿದೆ. ಅಧ್ಯಾಯ 1
8. ಸ್ಪರ್ಕ್‌ರ ಎಸ್.ಕೆ. ಮ್ಯಾನುವಲ್, ಸಂಚಿಕೆ 1
9. ಗಣಪತಿ ರಾವ್ ಐಗಲ್, ಡಿ.ಕೆ. ಜಿಲ್ಲೆಯ ಪ್ರಾಚೀನ ಇತಿಹಾಸ ಪು. 389-423
10. ಮೇಲಿನಂತೆಯೇ ಪು. 421-423
11. ಸೂಚನೆ: ಹಾಲರು ಅಂದರೆ ವರ್ತಕರು. ಹಂಜಮಾನದ ವರ್ತಕರು ಹಾಗೂ ಇತರ ವರ್ತಕರು
12. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಚಿಕೆ 8, ಪು. 77-78, ಸಂಖ್ಯೆ 182
13. ಮೇಲಿನಂತೆಯೇ ಸಂಖ್ಯೆ 182
14 ಮೇಲಿನಂತೆಯೇ ಸಂಖ್ಯೆ 182
15. ಈಲಿಯಟ್ ಎಂಡ್ ಡೌಸನ್, ಹಿಸ್ಟರಿ ಆಫ್ ಇಂಡಿಯಾ ಆಸ್ ಟೋಲ್ಡ್ ಬೈ ಹಿಸ್ ವೋನ್ ಹಿಸ್ಟಾರಿಯನ್ಸ್, ಪು. 27-34
17. ಆನ್ಯುವಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಪಿಗ್ರಾಫಿ 1929, 30 ಸಂಖ್ಯೆ 579-580 (ಆರ್ಸಿ)
18. ಹೆರಾಸ್ ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ 6 ಪು. 65, ಶಾಸ್ತ್ರಿ ಬಿ.ಎಸ್. ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ 1974 ಪು. 150
19. ಎಸ್, 2, 9, ಪು. 1 ಮತ್ತು 2 ನಂಬ್ರ 459
20. ಭೂತದರ್ಶನ ಅಂದರೆ ನೇಮ ಅಥವಾ ದೇವಸ್ಥಾನದ ಹಬ್ಬ
21. ಡಿ.ಎ. ಸಾಲಿಟೋರ್, ಏನ್‌ಷಿಯಂಟ್ ಕರ್ನಾಟಕ ಭಾಗ ಒಂದು
22. ಪದಿನಾರಗ ಅಂದರೆ ಮಂಗಳೂರಿನಲ್ಲಿ ಹತ್ತೊಂಭತ್ತನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಹದಿನಾರು ಜಾಗೀರ್ದಾರಿ ಮನೆಗಳು
23. ನೋಡಿ, ಬ್ಯಾರಿ ಕಲ್ಚರ್, ಅಧ್ಯಾಯ 5
24. ಗಣಪತಿ ರಾವ್ ಐಗಲ್ ಅವರ ಡಿ.ಕೆ. ಜಿಲ್ಲೆಯ ಪ್ರಾಚೀನ ಇತಿಹಾಸ ಪು. 173
25. ಲೋಗನ್ ಮಲಬಾರ್ ಮ್ಯಾನುವಲ್, ಸಂಚಿಕೆ 1, ಪು. 311
26. ಮೇಲಿನಂತೆಯೇ 330 ಸೂಚನೆ: ಫ್ರಾನ್ಸಿಸಿಯನ್ ಪ್ರಯರ್‌ಗಳು ಧರ್ಮಪ್ರಚಾರ ಚಟುವಟಿಕೆಯಲ್ಲಿ ತೊಡಗಿದ್ದರು.

27. ವಿ.ಎನ್. ಕುಡ್ವ, ಹಿಸ್ಟರಿ ಆಫ್ ದಕ್ಷಿಣತ್ಯ ಸಾರಸ್ವತ್ಸ್, ಪುಟ. 43
28. ಸ್ಪರ್ಕ್, ಡಿ.ಕೆ. ಡಿಸ್ಟ್ರಿಕ್ಟ್ 1978 (ಮ್ಯಾನುವಲ್ ಸಂಚಿಕೆ 1 ಪುಟ 68-69)
29. ಮೇಲಿನಂತೆಯೇ ಪು. 55
30. ವಿ.ಎನ್. ಕುಡ್ವ, ಹಿಸ್ಟರಿ ಆಫ್ ದಕ್ಷಿಣತ್ಯ ಸಾರಸ್ವತ್ಸ್, ಪುಟ 107-108
31 ಸ್ಪರ್ಕ್, ಡಿ.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್ ಸಂಚಿಕೆ 1 ಪು. 68-69
32. ಮೇಲಿನಂತೆಯೇ ಪು. 169
33. ಆ. ವಿ.ಎನ್. ಕುಡ್ವ ಹಿಸ್ಟರಿ ಆಫ್ ದಕ್ಷಿಣತ್ಯ ಸಾರಸ್ವತ್ಸ್ ಪು. 108-110 ಆ. ಡಾ. ಸೂರ್ಯನಾಥ್ ಕಾಮತ್, ಅಬ್ಬಕ್ಕ ದೇವಿ ಪು. 11-20
34. ಸ್ಪರ್ಕ್, ಡಿ.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್ ಪು. 6, 69
35. ವಿ.ಎನ್. ಕುಡ್ವ ಹಿಸ್ಟರಿ ಆಫ್ ದಕ್ಷಿಣತ್ಯ ಸಾರಸ್ವತ್ಸ್ ಪು. 108-110
36. ತೆಂಕನಾಡು 1947, ಪು. 89-92, ಬೇಕಲ್ ರಾಮ ನಾಯಕ್, ಲೇಖನ: ಇಕ್ಕೇರಿ ನಾಯಕಾಸ್
37. ಡಾ. ಸೂರ್ಯನಾಥ ಕಾಮತ್, ಅಬ್ಬಕ್ಕ ದೇವಿ, ಪು. 11-70
38. ಮೇಲಿನಂತೆಯೇ ಪು. 33-43
39. ತೆಂಕನಾಡು 1947, ಪು. 89-92, ಬೇಕಲ ರಾಮ ನಾಯಕ್
40. ಆ. ಗಣಪತಿ ರಾವ್ ಐಗಲ್, ಡಿ.ಕೆ. ಪ್ರಾಚೀನ ಇತಿಹಾಸ ಪು. 226-227, ಆ. ಕೈಫಿಯಾತ್ಸ್ ಮೆಕೆಂಜಿಸ್ ಕಲೆಕ್ಷನ್ಸ್ ಎಮ್ 381, ಪು. 359-301, ಇ. ಕೈಫಿಯಾತ್ಸ್ ಎಡಿಟೆಡ್: ಕುಶಾಲಪ್ಪ ಎಂಡ್ ಚಿನ್ನಪ್ಪ ಗೌಡ, ಡಿ.ಕೆ. ಜಿಲ್ಲೆಯ ಕೈಫಿಯತ್‌ಗಳು
41. ಲೋಕಲ್ ಮಲಬಾರ್ ಮ್ಯಾನುವಲ್ ಸಂಚಿಕೆ 1, ಪು. 405
42. ಮೇಲಿನಂತೆಯೇ ಪು. 402
43. ಮೇಲಿನಂತೆಯೇ ಪು. 231
44. ಗಣಪತಿ ರಾವ್ ಐಗಲ್, ಡಿ.ಕೆ. ಪ್ರಾಚೀನ ಇತಿಹಾಸ ಪು. 312
45. ಮೇಲಿನಂತೆಯೇ ಪು. 231
46. ಮೇಲಿನಂತೆಯೇ ಪು. 232
47. ಮೇಲಿನಂತೆಯೇ ಪು. 237-238
48. ಸ್ಪರ್ಕ್ ಎಸ್.ಕೆ. ಮ್ಯಾನುವಲ್ ಸಂಚಿಕೆ 1, ಪು. 77-78
49. ಮೇಲಿನಂತೆಯೇ ಪು. 78
50. ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ 1974 ಪು. 312
51. ಮೇಲಿನಂತೆಯೇ ಪು. 214-15
52. ಮೇಲಿನಂತೆಯೇ ಪು. 238
53. ಅಜಿಲಮೊಗರಿನ ಪಿ.ಬಿ. ಹುಸೇನ್ ಕುಂಞ ಅವರ ಕಂದಾಯ ದಾಖಲೆಗಳು
54. ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ ಪು. 289-292
55. ಕುಶಾಲಪ್ಪ ಮತ್ತು ಚಿನ್ನಪ್ಪ ಗೌಡ, ಡಿ.ಕೆ. ಜಿಲ್ಲೆಯ ಕೈಫಿಯತ್‌ಗಳು

56. ಮೇಲಿನಂತೆಯೇ ಪು. 150-151
57. ಗಣಪತಿ ರಾವ್ ಐಗಲ್, ಡಿ.ಕೆ. ಪ್ರಾಚೀನ ಇತಿಹಾಸ, ಪು. 312
58. ಸ್ಪರ್ರಕ್, ಡಿ.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್ ಪು. 79
59. ಕುಶಾಲಪ್ಪ ಮತ್ತು ಚಿನ್ನಪ್ಪ ಗೌಡ, ಡಿ.ಕೆ. ಜಿಲ್ಲೆಯ ಕೈಫಿಯತ್‌ಗಳು
60. ಸ್ಪರ್ರಕ್, ಡಿ.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್ ಪು. 79-80
61. ಗಣಪತಿ ರಾವ್ ಐಗಲ್, ಡಿ.ಕೆ. ಪ್ರಾಚೀನ ಇತಿಹಾಸ, ಪು. 373
62. ಸ್ಪರ್ರಕ್, ಡಿ.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್ ಪು. 82
63.. ಮೇಲಿನಂತೆಯೇ ಪು. 83
64. ಮೇಲಿನಂತೆಯೇ ಪು. 84-85
65. ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಪ್ರದರ್ಶನ ಫಲಕದಿಂದ ಕಲೆಕ್ಟರ್‌ಗಳ ಪಟ್ಟಿಯನ್ನು ತೆಗೆದುಕೊಳ್ಳಲಾಗಿದೆ.
66. ಸೂಚನೆ: ಪದಿನಾರಗ ಈಗ ಶಿಥಿಲಗೊಂಡಿದ್ದು ಕೆಲವು ಮನೆಗಳನ್ನು ನವೀಕರಿಸಲಾಗಿದೆ ಮತ್ತು ಅವರ ವಂಶಸ್ಥರು ಅಲ್ಲೇ ನೆಲೆಸಿದ್ದಾರೆ, ನಿವೃತ್ತ ನ್ಯಾಯಮೂರ್ತಿ ಅಬ್ದುರ್ರಹೀಂ ಅಹಮದ್ ಹಾಗೂ ಇತರ ನಾಲ್ವರು ನಿರೂಪಿಸಿದ ಮೌಖಿಕ ಇತಿಹಾಸ.
67. ಅ. ಮೌಖಿಕ ಇತಿಹಾಸ, ಮೇಲಿನಂತೆಯೇ ಆ. ಎ.ಆರ್. ನೂರಿ - ಮೈಕಾಲ ಪು. 34-36
68. ಮೌಖಿಕ ಇತಿಹಾಸ. ಎ.ಆರ್. ಹಮೀದ್ (ನ್ಯಾಯಾಧೀಶ) ಹಾಗೂ ಇತರರು
69. ಅ. ಮೇಲಿನಂತೆಯೇ ಆ. ಎ.ಆರ್. ನೂರಿ - ಮೈಕಾಲ ಪು. 35-36
70. ಅ. ಮೇಲಿನಂತೆಯೇ ಆ. ಮೇಲಿನಂತೆಯೇ ಪು. ಮೇಲಿನಂತೆಯೇ
71. ಅ. ಎ.ಆರ್. ಹಮೀದ್ (ಜಡ್ಜ್) ಮತ್ತು ಇತರರು ನಿರೂಪಿಸಿದ ಮೌಖಿಕ ಇತಿಹಾಸ ಆ. ತವನಿಧಿ ಪತ್ರಿಕೆ ಸಂಚಿಕೆ 1, ಸಂಪುಟ 1, ಹಾಜಿ ಕುಂಞಾಮು ಸಾಹೇಬ್‌ರ ಲೇಖನ, 1983
72. ಮುಸ್ಲಿಮ್ ಎಜುಕೇಶನ್ ಎಸೋಸಿಯೇಶನ್ ಮಂಗಳೂರು ಇದರ ಬೈಲಾ ಮತ್ತು ಆರ್ಟಿಕಲ್‌ಗಳು
73. ತವನಿಧಿ ಪತ್ರಿಕೆ ಸಂಚಿಕೆ 1, ಸಂಪುಟ 7, ಹಾಜಿ ಕುಂಞಾಮು ಸಾಹೇಬ್‌ರ ಲೇಖನ, 1983
74. ಶೆರೂಲ್, ಉತ್ತರದೇಶಮ್ ಪತ್ರಿಕೆಯ ಕಾಸರಗೋಡು ಜಿಲ್ಲಾ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನ, 1984
75. ಅಹಮದ್ ಅಲಿ ಶೆರೂಲ್, ಇಚ್ಲಂಗೋಡಿನ ಜುಮಾ ಮಸೀದಿಯ ಮೊಕ್ತೇಸರ್ ನಿರೂಪಿಸಿದ ಮೌಖಿಕ ಇತಿಹಾಸ
76. ಅ. ಉತ್ತರದೇಶಮ್ ಪತ್ರಿಕೆಯ ಕಾಸರಗೋಡು ಜಿಲ್ಲಾ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನ, 1984 ಆ. ತವನಿಧಿ ಪತ್ರಿಕೆ ಸಂಪುಟ 8, ಸಂಚಿಕೆ 4, 1985 ಶೆರೂಲ್ ಲೇಖನ

77. ಉತ್ತರದೇಶಮ್ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನ, 1984, ಎಂ.ಡಿ. ಶಮ್ಮಾಡುಂ, ಮಾಹಿಮ್ ಶಮ್ಮಾಡುಂ
78. ಆ. ಮಲಯಾಳ ಮನೋರಮಾದ ಲೇಖನ: ಮೊಹಮ್ಮದ್ ಶಮ್ಮಾಡ್ ತಾಂಜ್ ವೀಣ ದೈತ್ಯಮ್, ಮೇ 23, 1984 ಆ. ತವನಿಧಿ ಪತ್ರಿಕೆ ಸಂಪುಟ 9. ಸಂಚಿಕೆ 9, 1986, ಲೇ: ಮೊಹಮ್ಮದ್ ಶಮ್ಮಾಡ್ ಇ. ಎ.ಎ. ಶೆರೂಲೆ ಮಂಗಳೂರು ನಿರೂಪಿಸಿದ ಮೌಖಿಕ ಇತಿಹಾಸ
79. ಮೇಲಿನಂತೆಯೇ
80. ಆ. ಮೇಲಿನಂತೆಯೇ 1984, ಮೊಗ್ರಾಲ್ ಪುದಿಯ ಜಿಲ್ಲ ಆ. ಎಚ್. ಟಿ ಮಾಮುಂಞ ಮಾಸ್ಟರ್ ಮೊಗ್ರಾಲ್, ಮಾಜಿ ಶಾಸಕರು ಮೊಗ್ರಾಲ್, ಇ. ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್‌ನ ಸ್ಮರಣ ಸಂಚಿಕೆ 1983, ಲೇಖನ ಮೊಗ್ರಾಲ್
81. ಕುರ್ಶಿದ್ ಹಸನ್ ಸಾಹೆಬ್, ಕಾರ್ಕಳ, ಹಾರೂನ್ ಸಾಹೆಬ್, ಮಂಗಳೂರು ನಿರೂಪಿಸಿದ ಮೌಖಿಕ ಇತಿಹಾಸ
82, ಕುರ್ಶಿದ್ ಹಸನ್ ಸಾಹೆಬ್, ಕಾರ್ಕಳ, ಡಾ. ಸಾಲಿಮ್ ಸಾಹೆಬ್, ಉಡುಪಿ, ನಿರೂಪಿಸಿದ ಮೌಖಿಕ ಇತಿಹಾಸ
83. ಎ.ಆರ್. ನೂರಿ, ಮೈಕಾಲ ಪು. 36–39
84. ಮೇಲಿನಂತೆಯೇ
85. ಆ. ಮಲಯಾಳ ಮನೋರಮ, ಕಾಸರಗೋಡು ಜಿಲ್ಲಾ ವಿಶೇಷ ಸಂಚಿಕೆ, ಮೇ 23, 1984, ಲೇಖನ: ಎಂ.ಡಿ. ಶಮ್ಮಾಡ್, ಆ. ಉತ್ತರದೇಶಮ್ ಪತ್ರಿಕೆಯ ವಿಶೇಷ ಸಂಚಿಕೆ, 1994 ಇ. ತವನಿಧಿ, ಸಂಪುಟ 9, ಸಂಚಿಕೆ 9, 1984
86. ಮೇಲಿನಂತೆಯೇ

ಅಧ್ಯಾಯ 3

ಮುಸ್ಲಿಮರ ಆರ್ಥಿಕ ಜೀವನ

ವಿದೇಶ ವ್ಯಾಪಾರಕ್ಕೆ ಸಂಬಂಧಿಸಿ ಕೆನರಾ ಕರಾವಳಿಯು ಕರ್ನಾಟಕದ ಅತ್ಯಂತ ಮುಖ್ಯ ಪ್ರದೇಶ. ಪ್ರಾಚೀನ ಕಾಲದಿಂದಲೂ ಇತರ ದೇಶಗಳೊಂದಿಗೆ ವಾಣಿಜ್ಯ ಸಂಬಂಧವು ಸ್ಥಾಪಿಸಲ್ಪಟ್ಟಿತ್ತು. ಪೆರಿಪ್ಲಸ್ ಆಫ್ ಎರಿತ್ರಿಯನ್ ಸೀ ಎಂಬ ಪುಸ್ತಕವು ಈಜಪ್ತಿಯನರು ಹತ್ತಿ ಮತ್ತು ನಾರಿನ ಬಟ್ಟೆಯನ್ನೂ ದ್ರಾಕ್ಷಾರಸ, ಚಿನ್ನ ಮತ್ತು ಬೆಳ್ಳಿಯನ್ನು ಭಾರತಕ್ಕೆ ರಫ್ತು ಮಾಡುತ್ತಿದ್ದರು ಎಂದು ಉಲ್ಲೇಖಿಸಿದೆ. ಇದಕ್ಕೆ ಪ್ರತಿಯಾಗಿ ಮಸಾಲೆ, ಮುತ್ತು, ಸಿಲ್ಕ್, ಕರಿಮೆಣಸು, ಆನೆಯ ದಂತ, ಹತ್ತಿ, ಸಾಂಬಾರ ವಸ್ತು ಮತ್ತು ಆಮೆಯ ಚಿಪ್ಪನ್ನು ಭಾರತ ರಫ್ತು ಮಾಡುತ್ತಿತ್ತು.[1] ಭಾರತದ ಕರಾವಳಿ ಮತ್ತು ಪರ್ಷಿಯಾ ಹಾಗೂ ಸಿಲೋನ್ ನಡುವೆ ಕುದುರೆಯ ವ್ಯಾಪಾರ ನಡೆಯುತ್ತಿತ್ತೆಂದು ಆರನೇ ಶತಮಾನದಲ್ಲಿ ಕೋಸ್ಮೋಸ್ ಇಂಡಿಕೋ ಪ್ಲಾಸ್ಟ್ಸ್ ಉಲ್ಲೇಖಿಸಿದೆ.[2] ಅರಬರು ಕರಾವಳಿಯ ವಾಣಿಜ್ಯ ಚಟುವಟಿಕೆಗಳ ಮೇಲೆ ಸಂಪೂರ್ಣ ಏಕಸ್ವಾಮ್ಯ ಹೊಂದಿದ್ದರು.[3] ಪಶ್ಚಿಮದ ಪ್ರವೇಶದೊಂದಿಗೆ ವಾಣಿಜ್ಯ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಲು ಸ್ಪರ್ಧೆ ಆರಂಭಗೊಂಡಿತು. ಹೀಗಾಗಿ ಅರಬರು ಮತ್ತು ಮುಸ್ಲಿಮರು ವಾಣಿಜ್ಯದ ಏಕಸ್ವಾಮ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಡಬೇಕಾಯಿತು.[4] ಅಂದಾಜು 150 ಲಕ್ಷ ಮೌಲ್ಯದ ಸಮುದ್ರ-ಕೇಂದ್ರಿತ ವ್ಯಾಪಾರದ ಮೂರನೇ ಎರಡರಷ್ಟು ಭಾಗವು ಮಂಗಳೂರು ಬಂದರಿನ ಮೂಲಕ ನಡೆಯುತ್ತಿತ್ತು.[6] ಬಸ್ರೂರು ವಾಣಿಜ್ಯದ ಇನ್ನೊಂದು ಕೇಂದ್ರವಾಗಿತ್ತು. ಮಸ್ಕತ್‌ಗೆ ಅಕ್ಕಿಯ ದಾಸ್ತಾನನ್ನು ಸಾಗಿಸುತ್ತಿದ್ದ ಹಡಗುಗಳು ವಾಪಸ್ ಬರುವಾಗ ಕುದುರೆ, ಖರ್ಜೂರ, ಹವಳ ಮತ್ತಿತರ ಸಾಮಗ್ರಿಗಳನ್ನು ಅರೇಬಿಯಾದಿಂದ ಹೊತ್ತು ತರುತ್ತಿದ್ದವು. ಕುಂಬಳೆಯು ಮಾಲ್ದೀವ್ಸ್, ಅರೇಬಿಯಾ ಮತ್ತು ಪರ್ಷಿಯಾದೊಂದಿಗೆ ವಾಣಿಜ್ಯ ಸಂಬಂಧ ಹೊಂದಿದ್ದ ಇನ್ನೊಂದು ಪ್ರಮುಖ ಬಂದರಾಗಿದ್ದು ಇದರ ಮೂಲಕ ಅಕ್ಕಿ, ಕರಿಮೆಣಸು, ತೆಂಗಿನ ಎಣ್ಣೆ, ಬೆಲ್ಲ, ಸಕ್ಕರೆ,

ಕಬ್ಬಿಣ ಮತ್ತು ತಾಮ್ರದ ವ್ಯಾಪಾರ ನಡೆಯುತ್ತಿತ್ತು.[7] ಅರಬರು ಮತ್ತು ತುಳುನಾಡಿನ ಬ್ಯಾರಿಗಳ ನಡುವಿನ ಸುದೀರ್ಘ ವ್ಯಾಪಾರ ಸಂಬಂಧವು ಬ್ಯಾರಿಗಳು ವಾಣಿಜ್ಯವನ್ನೇ ತಮ್ಮ ಮುಖ್ಯ ಕಸುಬಾಗಿ ಮುಂದುವರಿಸಿಕೊಂಡು ಹೋಗುವಂತೆ ಮಾಡಿತು. ಬ್ರಿಟಿಷ್ ಕಂಪನಿ ಆಡಳಿತದ ಆರಂಭದವರೆಗೆ ಮುಸ್ಲಿಮರು ವಾಣಿಜ್ಯದಲ್ಲಿ ಏಕಸ್ವಾಮ್ಯ ಹೊಂದಿದ್ದರು. ಆದರೆ ಹತ್ತೊಂಭತ್ತನೇ ಶತಮಾನದಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು ಸೇರಿದಂತೆ ಇತರರು ವ್ಯಾಪಾರವನ್ನು ಕೈಗೆತ್ತಿಕೊಂಡರು. ಹಾಗಿದ್ದರೂ ಮುಸ್ಲಿಮರು ಜಿಲ್ಲೆಯ ಪ್ರಮುಖ ವಾಣಿಜ್ಯ ಶಕ್ತಿಯಾಗಿ ಮುಂದುವರಿದರು.

1. ವಾಣಿಜ್ಯ, ಒಂದು ಆದ್ಯತೆಯ ವೃತ್ತಿ

ಬ್ಯಾರಿಗಳು ಮತ್ತು ಹನಫಿಗಳು ಸೇರಿದಂತೆ ಎಲ್ಲ ಮುಸ್ಲಿಮರು ವ್ಯಾಪಾರವನ್ನು ಮುಖ್ಯ ಕಸುಬಾಗಿ ಮಾಡಿಕೊಂಡಿದ್ದರು. ಇಸ್ಲಾಮ್ ಧರ್ಮವು ವ್ಯಾಪಾರ ಮತ್ತು ವೈಯಕ್ತಿಕ ಸಂಪಾದನೆಗೆ ಹೆಚ್ಚಿನ ಒತ್ತು ನೀಡಿದ್ದೇ ಇದಕ್ಕೆ ಕಾರಣ. ಇಸ್ಲಾಮ್ ಎಲ್ಲ ರೀತಿಯ ದುಡಿಮೆ, ವೃತ್ತಿ ಮತ್ತು ಕೆಲಸಕ್ಕೆ ಗೌರವ ಕೊಡುತ್ತದೆ. ಮದಿರೆ, ಹಂದಿ ಮಾಂಸ, ಅಮಲು ಪದಾರ್ಥ, ಮಹಿಳೆಯರ ಸಾಗಾಟ ಇತ್ಯಾದಿಗಳು ಧರ್ಮ ನಿಷಿದ್ಧ (ಹರಾಮ್) ವ್ಯಾಪಾರವಾಗಿದ್ದವು. ಇವುಗಳ ಬಳಕೆ ಕೂಡಾ ಮುಸ್ಲಿಮರಿಗೆ ನಿಷಿದ್ಧವಾಗಿತ್ತು. ಆದರೆ ಜಿಲ್ಲೆಯಲ್ಲಿ ನಡೆಯುತ್ತಿದ್ದ ವ್ಯಾಪಾರದಲ್ಲಿ ಯಾವುದೇ ಧರ್ಮ ನಿಷಿದ್ಧವಾದ ವಸ್ತುಗಳು ಇರಲಿಲ್ಲ. ಸೇಂದಿ ಮತ್ತು ಶರಾಬು ಮಾತ್ರ ಇದಕ್ಕೆ ಅಪವಾದವಾಗಿತ್ತು. ಇವೆರಡೂ ಬಿಲ್ಲವರ ಕಸುಬಾಗಿದ್ದವು. ಇತರ ಮೇಲ್ಜಾತಿಯವರಿಗೆ ಇದ್ದಂತೆ ವ್ಯಾಪಾರದಲ್ಲಿ ಸ್ಥಾನಮಾನ ಅಥವಾ ಘನತೆಯ ಯಾವುದೇ ನಿಯಂತ್ರಣ ಇರಲಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಅವಕಾಶವಿತ್ತು ಮತ್ತು ಉದ್ಯಮ ನಡೆಸುವ ಸ್ವಾತಂತ್ರ್ಯವನ್ನೂ ಆತ ಪಡೆದಿದ್ದ. ಒಬ್ಬ ಸಂಪ್ರದಾಯವಾದಿ ಮುಸ್ಲಿಮನಂತೆಯೇ ಹೊಸದಾಗಿ ಇಸ್ಲಾಮ್ ಸ್ವೀಕರಿಸಿದ ಕೆಳ ಜಾತಿಯ ವ್ಯಕ್ತಿ ಕೂಡಾ ತನಗಿಷ್ಟವಾದ ಯಾವುದೇ ವ್ಯಾಪಾರವನ್ನು ಕೈಗೆತ್ತಿಕೊಳ್ಳಬಹುದಾಗಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಉದ್ಯಮಶೀಲತೆಯ ಈ ಸ್ವಾತಂತ್ರ್ಯವು ಕೆಳ ಜಾತಿಯವರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸಿತು.

ಇದರ ಮೂಲಕ ಅವರು ಸ್ವತಂತ್ರ ಉದ್ಯಮಿಯಾಗಿ ಬೆಳೆದು ಬರುವಂತಾಯಿತು. ವೈಯಕ್ತಿಕ ಗಳಿಕೆಯನ್ನು ಇಸ್ಲಾಮ್ ಅತ್ಯಂತ ಅಮೂಲ್ಯವಾದ ಸಂಪತ್ತು ಎಂದು ಪರಿಗಣಿಸುತ್ತದೆ. ವ್ಯಾಪಾರಕ್ಕೆ ಸಂಬಂಧಿಸಿದಂತೆ ಇಸ್ಲಾಮಿನ ಈ ತತ್ವದ ಪರಿಣಾಮವಾಗಿ ತನ್ನ ನ್ಯಾಯೋಚಿತ ಮತ್ತು ಪ್ರಾಮಾಣಿಕ ಜೀವನೋಪಾಯಕ್ಕಾಗಿ ವ್ಯಾಪಾರ ರಂಗವನ್ನು ಪ್ರವೇಶಿಸುವುದು ತನ್ನ ಧಾರ್ಮಿಕ ಕರ್ತವ್ಯ ಎಂದು ಮುಸ್ಲಿಮರು ಪರಿಗಣಿಸತೊಡಗಿದರು. ಪ್ರತಿಯೊಬ್ಬ ಕಾರ್ಮಿಕನಿಗೂ ನ್ಯಾಯಬದ್ಧವಾದ ವೇತನ ಪಡೆಯುವ ಹಕ್ಕೂ ಇದೆ. ನ್ಯಾಯೋಚಿತವಾದ ವೇತನವನ್ನು ಕೊಡದೇ ಇರುವುದು ಅಲ್ಲಾಹನ ಕಾನೂನು (ಷರಿಯತ್) ಪ್ರಕಾರ ಘೋರ ಕೃತ್ಯ. ಇಸ್ಲಾಮ್ ಮುಸ್ಲಿಮರಿಗೆ ಎರಡು ಪ್ರಮುಖ ಹಕ್ಕುಗಳನ್ನು ನೀಡಿದೆ. ಮೊದಲನೆಯದು ವ್ಯಾಪಾರದ ಹಕ್ಕು ಮತ್ತು ಸ್ವತಂತ್ರ ಹಾಗೂ ಪ್ರಾಮಾಣಿಕ ಜೀವನ ಸಾಗಿಸುವ ಹಕ್ಕು. ಎರಡನೆಯದು, ಕೆಲಸದ ಹಕ್ಕು ಮತ್ತು ಮಾಡಿದ ಕೆಲಸಕ್ಕಾಗಿ ವೇತನ ಕೇಳುವ ಹಕ್ಕು. ಎರಡರಲ್ಲೂ ಇಸ್ಲಾಮ್ ಸಮಾನತೆ

ಮತ್ತು ಭ್ರಾತೃತ್ವದ ತತ್ವವನ್ನು ನೆಚ್ಚಿಕೊಂಡಿದೆ. ಇದರ ಪರಿಣಾಮವಾಗಿ ಜಗತ್ತಿನಾದ್ಯಂತ ಪ್ರತಿಯೊಬ್ಬ ಮುಸ್ಲಿಮನೂ ಶ್ರಮಜೀವಿಯಾಗಿರುತ್ತಾನೆ ಅಥವಾ ವರ್ತಕನೋ ಪ್ರಾಮಾಣಿಕ ಸೇವಕನೋ ಆಗಿರುತ್ತಾನೆ. ''ಇಸ್ಲಾಮ್ ವ್ಯಾಪಾರದಲ್ಲಿ ಪ್ರಾಮಾಣಿಕತೆಯನ್ನು ಅಪೇಕ್ಷಿಸುತ್ತದೆ. ವಂಚಕನಿಗೆ ಎಚ್ಚರಿಕೆ ನೀಡುತ್ತದೆ, ಸಭ್ಯ ಕೆಲಸವನ್ನು ಪ್ರೋತ್ಸಾಹಿಸುತ್ತದೆ ಮತ್ತು ಅಪೇಕ್ಷಿತನಿಗೆ ಹಣ ನೀಡಿದ್ದಕ್ಕೆ ಪ್ರತಿಯಾಗಿ ಬಡ್ಡಿ ಪಡೆಯುವುದನ್ನು ನಿಷೇಧಿಸುತ್ತದೆ.''[8] ಪವಿತ್ರ ಕುರ್‌ಆನ್ ಹೇಳುತ್ತದೆ: ''ದೇವನು ನಿಮಗೆ ವ್ಯಾಪಾರವನ್ನು ಧರ್ಮಸಮ್ಮತಗೊಳಿಸಿದ್ದಾನೆ ಮತ್ತು ಬಡ್ಡಿಯನ್ನು ನಿಷಿದ್ಧಗೊಳಿಸಿದ್ದಾನೆ.''[9] ವ್ಯಾಪಾರಕ್ಕೆ ಸಂಬಂಧಿಸಿದಂತೆ ಇರುವ ಧಾರ್ಮಿಕ ಆದೇಶವು ಮುಸ್ಲಿಮರನ್ನು ವ್ಯಾಪಾರ ಕ್ಷೇತ್ರಕ್ಕೆ ಪ್ರವೇಶಿಸುವಂತೆ ಮಾಡಿತು. ವ್ಯಾಪಾರಕ್ಕೆ ಸಂಬಂಧಿಸಿದ ಈ ನಂಟಿನಿಂದಾಗಿ ಅದು ಮುಸ್ಲಿಮರ ಏಕಸ್ವಾಮ್ಯವಾಗಿ ಮಾರ್ಪಟ್ಟಿತು. ಅಲ್ಲದೆ, ಇಸ್ಲಾಮ್‌ಗೆ ಹೊರತಾಗಿ ಬೇರಾವ ಧರ್ಮವೂ ವ್ಯಾಪಾರಕ್ಕೆ ಇಷ್ಟೊಂದು ಮಹತ್ವನ್ನು ನೀಡಿಲ್ಲ. ತುಳುನಾಡಿನಲ್ಲಿ ಮೀನುಗಾರಿಕೆಯಂತಹ ಕೆಲವು ವ್ಯಾಪಾರಗಳು ಕೆಳಜಾತಿಯವರಿಗೆ ಮೀಸಲಾಗಿದ್ದವು. ಇಂತಹ ವ್ಯಾಪಾರಗಳನ್ನು ಮುಸ್ಲಿಮರು ಕೈಗೆತ್ತಿಕೊಂಡಾಗ ಹೆಚ್ಚಿನ ಆಕರ್ಷಣೆ ಪಡೆಯಿತು. ಇದು ಅವರಿಗೆ ಬ್ಯಾರಿಗಳೆಂಬ ಅರ್ಥಾತ್ ವ್ಯಾಪಾರಿಗಳು ಎಂಬ ಸಮಾನ ಹೆಸರನ್ನೂ ತಂದು ಕೊಟ್ಟಿತು. ಬ್ಯಾರಿಗಳು ಎಂಬ ಹೆಸರು ವ್ಯಾಪಾರವನ್ನು ವೃತ್ತಿಯಾಗಿ ಕೈಗೆತ್ತಿಕೊಂಡ ಎಲ್ಲರಿಗೂ ಅನ್ವಯವಾಯಿತು. ಜೀವನೋಪಾಯಕ್ಕೆ ಇತರ ಮಾರ್ಗಗಳನ್ನು ಆಯ್ದುಕೊಂಡ ವ್ಯಕ್ತಿಗಳು ಮತ್ತು ಗುಂಪುಗಳೂ ಇದ್ದವು. ಬ್ರಿಟಿಷ್ ವಾಣಿಜ್ಯ ನೀತಿಯಿಂದಾಗಿ ಹಲವರು ವಾಣಿಜ್ಯವನ್ನು ತಮ್ಮ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಇದರ ಪರಿಣಾಮವಾಗಿ ಕ್ರಮೇಣ ಮುಸ್ಲಿಮರಿಗೆ ವ್ಯಾಪಾರದ ಮೇಲೆ ಇದ್ದ ವಿಶೇಷ ಆಸಕ್ತಿ ಕಡಿಮೆಯಾಗುತ್ತಾ ಹೋಯಿತು. ಮುಸ್ಲಿಮ್ ಕುಟುಂಬಗಳಲ್ಲಿ ಮಹಿಳೆಯರು ಮನೆಯೊಳಗೆ ಏಕಾಂತದಲ್ಲಿ ಇರುತ್ತಿದ್ದರು. ಕುಟುಂಬವನ್ನು ಪೋಷಿಸುವ ಜವಾಬ್ದಾರಿ ಕುಟುಂಬದ ಮುಖ್ಯಸ್ಥನ ಮೇಲೆ ಬೀಳುತ್ತಿತ್ತು. ಮಾರುಕಟ್ಟೆ ಸ್ಪರ್ಧೆಯಿಂದಾಗಿ ವ್ಯಾಪಾರವು ತನ್ನ ಆಕರ್ಷಣೆಯನ್ನು ಕಳೆದುಕೊಂಡಾಗ ಮುಸ್ಲಿಮರ ಮಧ್ಯೆ ಬಡತನ ಹೆಚ್ಚಾಗಿ ಕಾಣಿಸಿಕೊಂಡಿತು. ಜನಸಂಖ್ಯೆ ಹೆಚ್ಚಿದಂತೆ ಬ್ಯಾರಿಗಳ ಪೈಕಿ ಬಡ ಕುಟುಂಬಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಹಳ್ಳಿಗಳಲ್ಲಿ ಹೆಚ್ಚಿನ ಮುಸ್ಲಿಮರು ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಹಲವು ವ್ಯಾಪಾರಿಗಳು ಜಮೀನನ್ನು ಖರೀದಿಸುವ ಮೂಲಕ ಅಥವಾ ಭೂಮಾಲಿಕರಿಂದ ಜಮೀನನ್ನು ಭೋಗ್ಯಕ್ಕೆ ತೆಗೆದುಕೊಳ್ಳುವ ಮೂಲಕ ಬೆಳೆಗಾರರಾಗಿಯೂ ರೈತರಾಗಿಯೂ ಮಾರ್ಪಟ್ಟರು. ಮುಸ್ಲಿಮರು ಪ್ರಾಮಾಣಿಕರೂ ಶ್ರಮಜೀವಿಗಳೂ ಆಗಿದ್ದರಿಂದ ಸ್ಥಳೀಯ ಭೂಮಾಲಿಕರು ಜಮೀನನ್ನು ಗೇಣಿಗೆ ನೀಡುವ ವಿಚಾರದಲ್ಲಿ ಅವರಿಗೆ ಆದ್ಯತೆ ನೀಡಿದರು.[10]

ಒಂದು ದೊಡ್ಡ ಸಂಖ್ಯೆಯ ಮುಸ್ಲಿಮರು ಸಾಂಪ್ರದಾಯಿಕವಾಗಿ ದೋಣಿಗಾರರಾಗಿ ಕೆಲಸ ಮಾಡುತ್ತಿದ್ದರು. ಆರಂಭದ ಶತಮಾನಗಳಲ್ಲಿ ನದಿ ಮತ್ತು ಹಿನ್ನೀರೇ ಸಂಪರ್ಕದ ಜಾಲಗಳಾಗಿದ್ದವು. ದೋಣಿಗಾರರು ಸಾಮಾನ್ಯವಾಗಿ ಬ್ಯಾರಿಗಳು ಅಥವಾ ಮಾಪಳ್ಳಗಳಾಗಿರುತ್ತಿದ್ದರು. ಅವರು ಸರಕನ್ನು ಹಳ್ಳಿಗಳಿಂದ ಪಟ್ಟಣಗಳಿಗೆ ಒಯ್ಯುತ್ತಿದ್ದರು. ಪಟ್ಟಣಗಳು ಹೆಚ್ಚಾಗಿ ನದಿ ದಂಡೆಯ ಮೇಲೆ ಇರುತ್ತಿದ್ದವು. ಆರಂಭದ ಶತಮಾನಗಳಿಂದಲೂ ನೇತ್ರಾವತಿ ನದಿ

ಗುಂಟ ಬಂಟ್ವಾಳ ಮತ್ತು ಪಾಣೆಮಂಗಳೂರುವರೆಗೆ ಹಾಗೂ ಫಲ್ಗುಣಿ ನದಿ ತಟದಲ್ಲಿ ಗುರುಪುರದವರೆಗೆ ಹೆಚ್ಚಾಗಿ ಮುಸ್ಲಿಮರೇ ವಾಸವಾಗಿದ್ದರು. ದೋಣಿಗಳು ಸರಕಿನೊಂದಿಗೆ ಹಳ್ಳಿಗಳಿಗೆ ತೆರಳುತ್ತಿದ್ದವು ಮತ್ತು ಅಲ್ಲಿಂದ ಸರಕನ್ನು ತುಂಬಿಸಿ ಮಂಗಳೂರು ಬಂದರಿಗೆ ವಾಪಸ್ ಬರುತ್ತಿದ್ದವು. ಇದೇ ರೀತಿ ಕುಂಬಳ ಮತ್ತು ಸಿರಿಯ ನದಿಯು ಹಲವು ಹಳ್ಳಿಗಳು, ಮಾರುಕಟ್ಟೆಗಳು ಮತ್ತು ಸಾಗಣೆ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದವು. ಕುಂಬಳೆ ಒಂದು ಒಳ್ಳೆಯ ಬಂದರಾಗಿ ಬೆಳೆದು ಬಂತು. ಸೀತಾ, ಸುವರ್ಣ ಮತ್ತು ಗಂಗೊಳ್ಳಿ ನದಿಗಳು ಬಸ್ರೂರು ಮತ್ತು ಬಾರ್ಕೂರಿನವರೆಗೂ ವ್ಯಾಪಾರಕ್ಕೆ ಮಾರುಕಟ್ಟೆಗಳನ್ನು ಒದಗಿಸಿದವು. ಹಂಗರಕಟ್ಟೆ ಕುಂದಾಪುರ ಮತ್ತು ಗಂಗೊಳ್ಳಿಯ ಮೂಲಕ ಈ ವಹಿವಾಟು ನಡೆಯುತ್ತಿತ್ತು. ದೋಣಿಗಳು ದಿನನಿತ್ಯದ ಬಳಕೆಗಾಗಿ ಹಳ್ಳಿಗಳಿಂದ ಅಕ್ಕಿ ಮತ್ತು ಒಣ ತೆಂಗಿನ ಕಾಯಿಯನ್ನು ಪಟ್ಟಣಗಳಿಗೆ ಸಾಗಿಸುತ್ತಿದ್ದವು. ದೊಡ್ಡ ಸಂಖ್ಯೆಯ ಬ್ಯಾರಿಗಳು ದೋಣಿಗಾರರಾಗಿ ಕೆಲಸ ಮಾಡುತ್ತಿದ್ದರು. ಈ ಪೈಕಿ ಹೆಚ್ಚಿನವರು ದೋಣಿಯ ಮಾಲಕರೂ ಆಗಿದ್ದರು. ದೋಣಿಗಳು ಜನರನ್ನು ಮಂಗಳೂರಿನಿಂದ ಅಥವಾ ಬೇರೆ ಪಟ್ಟಣಗಳಿಂದ ಹಳ್ಳಿಗಳಿಗೆ ಒಯ್ಯಲಿಕ್ಕೂ ಬಳಕೆಯಾಗುತ್ತಿದ್ದವು. ದೋಣಿ ಪ್ರಯಾಣವು ಹತ್ತೊಂಭತ್ತನೇ ಶತಮಾನದಲ್ಲಿ ಜಾರಿಯಲ್ಲಿದ್ದ ಏಕೈಕ ಸಾರಿಗೆ ಸಾಧನವಾಗಿತ್ತು. ಆಂದು ರಸ್ತೆಗಳಾಗಲಿ ಸೇತುವೆಗಳಾಗಲಿ ಇರಲಿಲ್ಲ. ಇದು ಎಲ್ಲ ನದಿಗಳು ಮತ್ತು ಹಿನ್ನೀರಿನಲ್ಲಿ ಸಾಮಾನ್ಯವಾಗಿತ್ತು. ಇಪ್ಪತ್ತನೇ ಶತಮಾನದಲ್ಲಿ ರಸ್ತೆಗಳು ಮತ್ತು ಸೇತುವೆಗಳು ನಿರ್ಮಾಣವಾದವು. ಎತ್ತಿನ ಗಾಡಿ ಮತ್ತು ಟಾಂಗಾಗಳ ಮೂಲಕ ಕೆಲವು ಸೌಕರ್ಯಗಳು ಪಟ್ಟಣಗಳಲ್ಲಿ ಬಳಕೆಗೆ ಬಂದವು. ಹತ್ತೊಂಬತ್ತನೇ ಶತಮಾನದಲ್ಲಿ ಮಣ್ಣಿನ ರಸ್ತೆಗಳು ತಲೆಯೆತ್ತಿದವು ಮತ್ತು ಎತ್ತಿನ ಗಾಡಿಗಳು ಜನಪ್ರಿಯವಾದವು. ಆದರೆ ನದಿಗಳನ್ನು ದಾಟುವುದಕ್ಕೆ ಯಾವುದೇ ವ್ಯವಸ್ಥೆ ಇರಲಿಲ್ಲ. ನದಿಗಳನ್ನು ದಾಟಬೇಕಾಗಿ ಬಂದಾಗ ಫೆರ್ರಿ ಗಳನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. ಕ್ರಿ.ಶ. 1920ರಲ್ಲಿ ಬಸ್ ಸಾರಿಗೆ ಪ್ರಾರಂಭ ಗೊಂಡಾಗಲೂ ನದಿ ದಾಟಲು ದೋಣಿಗಳನ್ನೇ ಅವಲಂಬಿಸಬೇಕಾಗಿತ್ತು. ಕುಂಬಳ, ಉಪ್ಪಳ, ಮಂಗಳೂರು, ಮುಲ್ಕಿ, ಉದ್ಯಾವರ ಮತ್ತು ಗಂಗೊಳ್ಳಿಗಳಲ್ಲಿ ಇಂತಹ ದೋಣಿ ಸೇವೆ ಆರಂಭ ಗೊಂಡಿತು. ಬ್ಯಾರಿಗಳೇ ಎಲ್ಲೆಡೆ ದೋಣಿಗಾರರಾಗಿದ್ದಾರೆ.[11] ಹೀಗೆ ದೋಣಿಗಳೇ ಸಾರಿಗೆಯ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು ಹೊಂದಿದ್ದವು. ಗಣ್ಯ ಸಂಖ್ಯೆಯ ಮುಸ್ಲಿಮರು ಇದನ್ನೇ ತಮ್ಮ ವೃತ್ತಿಯಾಗಿ ನೆಚ್ಚಿಕೊಂಡಿದ್ದರು.[12]

ದೋಣಿಗಳನ್ನು ಮೀನುಗಾರಿಕೆಗೂ ಬಳಸಲಾಗುತ್ತಿತ್ತು. ಪುಸಲ್ಲಾರ್‌ಗಳು ಹೆಚ್ಚಾಗಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೊಗವೀರರು, ಖಾರ್ವಿ ಗಳು ಮತ್ತು ಮರಕಲರಂತೆ ಪುಸಲ್ಲಾರ್‌ಗಳು ಕೂಡಾ ಸಮುದ್ರದ ಮಕ್ಕಳಂತೆ ಜೀವಿಸಿದ್ದರು. ಅವರು ಮುಸ್ಲಿಮರ ಮಧ್ಯೆ ಪ್ರತ್ಯೇಕ ಗುಂಪನ್ನು ಕಟ್ಟಿಕೊಂಡಿದ್ದರು. ಆದರೂ ಅವರಿಗೆ ಬೇರೆ ಮುಸ್ಲಿಮರಿಗೆ ಸಮಾನವಾದ ಹಕ್ಕುಗಳಿದ್ದವು. ತಮ್ಮದೇ ವೃತ್ತಿಯಲ್ಲಿ ತೊಡಗಿರುವ ಇತರ ಜಾತಿ ಗಳ ಜನರೊಂದಿಗೆ ಅವರು ಬೆರೆತು ಜೀವಿಸುತ್ತಿದ್ದರು. ಕುಂಬಳೆಯ ಪುಸಲ್ಲಾರ್ ಕೇರಿಯು ಈಗಲೂ ಮುಸ್ಲಿಮ್ ಮೀನುಗಾರರ ಒಂದು ಪ್ರಮುಖ ಕೇಂದ್ರವಾಗಿದೆ. ಹೆಚ್ಚಾಗಿ ಅವರು ವ್ಯಾಪಾರಕ್ಕಾಗಿ ಅಥವಾ ಮನರಂಜನೆಗಾಗಿ ಸ್ಥಳೀಯ ನದಿಗಳಲ್ಲಿ ಮೀನು ಹಿಡಿಯುತ್ತಿದ್ದರು.

ಪ್ರತಿಯೊಂದು ಕುಟಂಬವೂ ಒಂದು ಮೀನು ಹಿಡಿಯುವ ಬಲೆ, ಕೊಕ್ಕೆ ಮತ್ತು ಬೋನು (ಕುಜಿ) ಹೊಂದಿರುತ್ತಿದ್ದವು. ಕೆಲವೊಮ್ಮೆ ಅವರು ರಾತ್ರಿಯ ವೇಳೆ ಪಂಜು ಹಿಡಿದು ನದಿಯ ತೀರದಲ್ಲಿ ಮೀನು ಹಿಡಿಯುತ್ತಿದ್ದರು. ಪಂಜಿನ ಬೆಳಕಿಗೆ ಆಕರ್ಷಿತ ವಾಗಿ ಕೆಲವು ಮೀನುಗಳು ಆಳವಿಲ್ಲದ ನೀರಿನಲ್ಲಿ ಬಂದು ಸೇರುತ್ತಿದ್ದವು. ಮೀನುಗಾರರು ತಮ್ಮ ಖಡ್ಗ ಮತ್ತು ಕತ್ತಿಯಿಂದ ಅವುಗಳನ್ನು ಸೀಳಿ ತಮಗೆ ದೊರೆತ ಮೀನನ್ನು ಬುಟ್ಟಿಗೆ ಹಾಕುತ್ತಿದ್ದರು. ಇಪ್ಪತ್ತನೇ ಶತಮಾನದ ಹೊತ್ತಿಗೆ ನದಿಗಳಲ್ಲಿ ಮೀನು ಹಿಡಿಯಲು ಡೈನಮೈಟ್ ಬಳಕೆ ಮಾಡುವ ಪ್ರವೃತ್ತಿ ಆರಂಭ ಗೊಂಡಿತು. ಸಣ್ಣ ಗಾತ್ರದ ಡೈನಮೈಟನ್ನು ನೀರಿನೊಳಗೆ ಸ್ಫೋಟಿಸುವ ಮೂಲಕ ಭಾರಿ ಸಂಖ್ಯೆಯ ಮೀನುಗಳು ಸತ್ತು ಹೋಗುತ್ತಿದ್ದವು. ನೀರಿಗೆ ಹಾರಿ ಈ ಮೀನುಗಳನ್ನು ಹಿಡಿಯಲಾಗುತ್ತಿತ್ತು. ಮಂಗಳೂರು ಮತ್ತು ಕಾಸರಗೋಡು ತಾಲೂಕುಗಳ ಬ್ಯಾರಿಗಳಲ್ಲಿ ಈ ಮೀನುಗಾರಿಕಾ ಹವ್ಯಾಸವು ಹೆಚ್ಚಾಗಿ ಕಂಡು ಬರುತ್ತದೆ. ನಗರ ಪ್ರದೇಶಗಳಲ್ಲಿ ಇಂತಹ ವಿಸ್ಮಯಕರ ಅಭ್ಯಾಸಗಳು ಅಷ್ಟಾಗಿ ಕಂಡುಬರುತ್ತಿರಲಿಲ್ಲ.[13]

ಮುಸ್ಲಿಮರ ಮಟ್ಟಿಗೆ ಮೀನು ವ್ಯಾಪಾರವು ಅತ್ಯಂತ ಜನಪ್ರಿಯ ವಾಣಿಜ್ಯ ಚಟುವಟಿಕೆ ಯಾಗಿತ್ತು. ದೋಣಿ ತುಂಬಾ ಮೀನುಗಳನ್ನು ತುಂಬಿ ದೂರದ ಹಳ್ಳಿ ಮತ್ತು ಪಟ್ಟಣಗಳಿಗೆ ಸಾಗಿಸಿ ಮಾರಾಟ ಮಾಡುವುದು ಒಂದು ಸಾಮಾನ್ಯ ದೃಶ್ಯವಾಗಿತ್ತು. ನದಿ ತಟದಲ್ಲಿರುವ ಪ್ರತಿಯೊಂದು ಹಳ್ಳಿಯಲ್ಲೂ ಮಸೀದಿಯ ಪಕ್ಕ ಸಾಮಾನ್ಯವಾಗಿ ಒಂದು ಮಾರುಕಟ್ಟೆ ಇರುತ್ತದೆ. ಅವರು ಅಲ್ಲಿ ಮೀನುಗಳನ್ನು ಮಾರುತ್ತಿದ್ದರು. ಇದಕ್ಕೆ ಪ್ರತಿಯಾಗಿ ಅವರು ಅಕ್ಕಿ ಮತ್ತಿತರ ವಸ್ತುಗಳನ್ನು ಪಟ್ಟಣಗಳಿಗೆ ಒಯ್ಯುತ್ತಿದ್ದರು. ಸಾಮಾನ್ಯವಾಗಿ ಮೀನನ್ನು ಅಕ್ಕಿ ಮತ್ತು ತೆಂಗಿನಕಾಯಿಗೆ ಬದಲಾಗಿ ವಿನಿಮಯ ಮಾಡಲಾಗುತ್ತಿತ್ತು. ಇದನ್ನು ಅವರು ಪಟ್ಟಣಗಳಲ್ಲಿ ಮಾರಾಟ ಮಾಡುತ್ತಿದ್ದರು. ಹಳ್ಳಿಯಲ್ಲಿ ಮೀನಿನ ಮಾರಾಟ ಮತ್ತು ಪಟ್ಟಣದಲ್ಲಿ ಅಕ್ಕಿ ಮತ್ತು ತೆಂಗಿನಕಾಯಿಯ ಮಾರಾಟ – ಹೀಗೆ ಎರಡೆರಡು ವ್ಯಾಪಾರಗಳು ಒಂದೇ ಟ್ರಿಪ್‌ನಲ್ಲಿ ನಡೆಯುತ್ತಿದ್ದುದರಿಂದ ಈ ವ್ಯಾಪಾರದ ಮೂಲಕ ಅವರು ದುಪ್ಪಟ್ಟು ಲಾಭ ಸಂಪಾದಿಸು ತ್ತಿದ್ದರು. ದೋಣಿಯಲ್ಲಿ ಜಾಗ ಉಳಿದಿದ್ದರೆ ಕೆಲವೊಮ್ಮೆ ಪಟ್ಟಣಗಳಿಗೆ ಪ್ರಯಾಣಿಕರನ್ನೂ ಕೊಂಡೊಯ್ಯುತ್ತಿದ್ದರು. ಇಂತಹ ಪ್ರತಿಯೊಬ್ಬ ಮೀನು ವ್ಯಾಪಾರಿಯೂ ಒಳ್ಳೆಯ ವರಮಾನ ಹೊಂದಿದ್ದ. ಹಿನ್ನೀರಿನಲ್ಲಿಯೂ ದೋಣಿಗಳು ಸಂಚರಿಸುತ್ತಿದ್ದುದರಿಂದ ಇದೇ ರೀತಿಯ ವ್ಯಾಪಾರ ಅಲ್ಲೂ ನಡೆಯುತ್ತಿತ್ತು.[14]

ವ್ಯಾಪಾರದ ಸರಕುಗಳು

ಆರಂಭದ ಶತಮಾನದಲ್ಲಿ ಅಕ್ಕಿಯು ಪ್ರಮುಖ ವ್ಯಾಪಾರ ಸರಕು ಆಗಿತ್ತು. ಅದನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಲಬಾರ್, ಮೂಲ್ಕಿ, ಮುಂಬೈ, ಕುಂಬಳೆ, ಮಂಜೇಶ್ವರ, ಮಂಗಳೂರು, ಹಂಗರಗಟ್ಟೆ ಮತ್ತು ಬಸ್ರೂರು ಪ್ರಮುಖ ಬಂದರುಗಳಾಗಿದ್ದವು. ಜಿಲ್ಲೆಯೊಳಗೆ ಭಾರಿ ಸಂಖ್ಯೆಯ ಜನರು ಅಕ್ಕಿಯ ವ್ಯಾಪಾರದಲ್ಲಿ ತೊಡಗಿದ್ದರು. ಪ್ರತಿಯೊಂದು ಜೀನಸು ಅಂಗಡಿಯಲ್ಲೂ ಅಕ್ಕಿಯ ವ್ಯಾಪಾರ ನಡೆಯುತ್ತಿತ್ತು. ಹಲವಾರು ಮುಸ್ಲಿಮರು ಅಕ್ಕಿ ವ್ಯಾಪಾರಿಗಳಾಗಿ ಬೆಳೆದು ಬಂದರು. ಅಕ್ಕಿಯನ್ನು ಹಳ್ಳಿಗಳಿಂದ ಸಂಗ್ರಹಿಸಿ

ಬಂಡಸಾಲೆಗಳಲ್ಲಿ ದಾಸ್ತಾನು ಇಡಲಾಗುತ್ತಿತ್ತು. ಹಲವು ಶ್ರೀಮಂತ ಮುಸ್ಲಿಮ್ ವ್ಯಾಪಾರಿಗಳು ದೊಡ್ಡ ದೊಡ್ಡ ಬಂಡಸಾಲೆಗಳನ್ನು ಹೊಂದಿದ್ದರು. ಹಲವು ಮುಸ್ಲಿಮರು ಬಂಡಸಾಲೆ ಎಂಬ ಅಡ್ಡ ಹೆಸರನ್ನು ಹೊಂದಿದ್ದರು. ಉದಾ: ಬಂಡಸಾಲೆ ಕದ್ರಿ ಬ್ಯಾರಿ, ಬಂಡಸಾಲೆ ಇಬ್ರಾಹಿಂ ಬ್ಯಾರಿ ಇತ್ಯಾದಿ. ಬಂದರಿಗೆ ಬಂದ ಸರಕುಗಳನ್ನು ಹಡಗುಗಳಿಗೆ ತುಂಬಿಸಲು ಸಜ್ಜಾಗಿ ಇಡಲಾಗುತ್ತಿತ್ತು. ಇಂತಹ ಲೋಡಿಂಗ್ ಜಾಗಗಳನ್ನು ಪಾಂಡ್ಯಾಲ್‌ಗಳು ಎಂದು ಕರೆಯಲಾಗುತ್ತಿತ್ತು. ಹೆಚ್ಚಿನ ಬಂದರುಗಳು ಇಂತಹ ಪಾಂಡ್ಯಾಲ್‌ಗಳನ್ನು ಹೊಂದಿದ್ದವು. ಇವು ವರ್ತಕರ ವೈಯಕ್ತಿಕ ಮಾಲಕತ್ವಕ್ಕೆ ಒಳಪಟ್ಟಿತ್ತು. ಮೊಗ್ರಾಲ್ ಕುಂಞಿಪಕ್ಕಿಗೆ ಕುಂಬಳೆಯಲ್ಲಿ ಪಾಂಡ್ಯಾಲ್ ಗಳಿದ್ದವು ಮತ್ತು ಮಮ್ಮಿ ಸೂಪಿ ಬ್ಯಾರಿಗೆ ಮಂಜೇಶ್ವರದಲ್ಲಿ ಪಾಂಡ್ಯಾಲ್ ಇತ್ತು. ಇತರೆಡೆಗಳಲ್ಲೂ ಇಂತಹ ಪಾಂಡ್ಯಾಲ್‌ಗಳಿದ್ದವು. ಆದರೆ ಆಧುನಿಕ ಕಾಲದಲ್ಲಿ ಪಾಂಡ್ಯಾಲ್ ಗಳು ಮತ್ತು ಬಂಡಸಾಲೆಗಳು ತಮ್ಮ ಮಹತ್ವವನ್ನು ಕಳೆದುಕೊಂಡಿವೆ.[15]

ತೆಂಗು ಇನ್ನೊಂದು ವ್ಯಾಪಾರ ಸರಕಾಗಿತ್ತು. ಮಲಬಾರ್‌ನಂತೆಯೇ ತುಳುನಾಡು ಜಿಲ್ಲೆ ಯಲ್ಲೂ ತುಂಬಾ ತೆಂಗಿನ ತೋಪುಗಳಿದ್ದವು. ಮತ್ತು ಇದರಿಂದಾಗಿ ಇಡೀ ಜಿಲ್ಲೆಯೇ ಒಂದು ಉದ್ಯಾನ ತೀರದಂತೆ ಕಾಣುತ್ತಿತ್ತು. ಮರಳು ಮಣ್ಣು ಈ ಬೆಳೆಗೆ ಅತ್ಯಂತ ಸೂಕ್ತವಾಗಿದ್ದು ನದಿ ನೀರು ಸಮಂಜಸ ನೆಲವನ್ನು ಒದಿಗಿಸಿತ್ತು. ತೆಂಗಿನ ತೋಪಿನ ಬಹುಪಯೋಗಿ ಗುಣ ದಿಂದಾಗಿ ಅದನ್ನು ಕಲ್ಪವೃಕ್ಷ ಎಂದೂ ಕರೆಯಲಾಗುತ್ತಿತ್ತು. ತೆಂಗಿನ ಮರವು ಮನೆ ನಿರ್ಮಾಣಕ್ಕೆ ಅಗತ್ಯ ವಿರುವ ಬೀಮ್ ಮತ್ತು ಪಕ್ಕಾಸಿಗೆ ಬಳಕೆಯಾಗುತ್ತದೆ. ಜತೆಗೆ ಮನೆಯ ಹೆಂಚಾಗಿ, ಉರುವಲಾಗಿ, ಖಾದ್ಯ ತೈಲವಾಗಿ, ಲೇಪನವಾಗಿ, ಪದಾರ್ಥ ಮತ್ತು ಸಿಹಿ ತಿನಿಸಿನಲ್ಲೂ ಸೇಂದಿ ಮತ್ತು ಮದ್ಯದ ತಯಾರಿಕೆಗೂ ಇದು ಬಳಕೆಯಾಗುತ್ತದೆ. ಇದು ಅತ್ಯಮೂಲ್ಯವಾದ ಮರ. ಹೆಚ್ಚಿನ ಹಳ್ಳಿಗಳಲ್ಲಿ ಎತ್ತನ್ನು ಬಳಸಿ ಎಣ್ಣೆಯ ಗಾಣಗಳನ್ನು ನಡೆಸಲಾಗುತ್ತಿತ್ತು. ಎಣ್ಣೆಗೆ ಸ್ಥಳೀಯ ಮಟ್ಟದಲ್ಲಿ ಮಾರುಕಟ್ಟೆ ಇತ್ತು. ಒಣಗಿದ ಕೊಬ್ಬರಿಯನ್ನು ಕೊಪ್ಪರ ಎಂದು ಕರೆಯಲಾಗುತ್ತಿತ್ತು ಮತ್ತು ಹತ್ತೊಂಭತ್ತನೇ ಶತಮಾನದಲ್ಲಿ ಇದು ಅತ್ಯಂತ ಮುಖ್ಯ ರಫ್ತು ಪದಾರ್ಥವಾಗಿತ್ತು. ಮುಂಬೈ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಒಣ ಕೊಬ್ಬರಿಗೆ ಒಳ್ಳೆಯ ಮಾರುಕಟ್ಟೆ ಇತ್ತು.[16]

ಕಬ್ಬು ಜಿಲ್ಲೆಯ ಇನ್ನೊಂದು ಸಾಮಾನ್ಯ ಬೆಳೆಯಾಗಿತ್ತು. ಅದನ್ನು ಹೆಚ್ಚಾಗಿ ಬೆಲ್ಲದ ಉತ್ಪಾದನೆಗಾಗಿ ಬೆಳೆಯಲಾಗುತ್ತಿತ್ತು. ಬೆಲ್ಲ ಅಂದು ಚಹಾ ಕಾಫಿಗಳಿಗೆ ಬಳಸಲಾಗುತ್ತಿತ್ತು. ಉಳ್ಳಾಲ, ಕೂಳೂರು ಮತ್ತು ಉಡುಪಿಯಲ್ಲಿ ಅದನ್ನು ಬೆಳೆಸಲಾಗುತ್ತಿತ್ತು.[17] ಇದಲ್ಲದೆ ತರಕಾರಿಗಳು, ಧಾನ್ಯ, ಬೇಳೆ ಮತ್ತಿತರ ಸ್ಥಳೀಯ ಉತ್ಪನ್ನಗಳೂ ಮಾರುಕಟ್ಟೆಯಲ್ಲಿ ಬಿಕರಿ ಯಾಗುತ್ತಿದ್ದವು. ಮೂಡಬಿದ್ರೆ, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರಗಳಲ್ಲಿ ವಾರದ ಸಂತೆ ನಡೆಯುತ್ತಿತ್ತು.[18] ಬ್ಯಾರಿಗಳು ಈ ಸಂತೆಗಳಲ್ಲಿ ಭಾಗವಹಿಸುತ್ತಿದ್ದರು. ಸಾಮಾನ್ಯವಾಗಿ ಈ ಸಂತೆಗಳಲ್ಲಿ ತೆಂಗಿನ ಕಾಯಿ, ಮೆಣಸು, ಅಕ್ಕಿ ಮತ್ತು ತರಕಾರಿ ಮಾರಾಟವಾಗುತ್ತಿತ್ತು. ದರ್ಗಾ ಗಳಲ್ಲಿ ನಡೆಯುತ್ತಿದ್ದ ಉರೂಸ್ ಹಾಗೂ ಭೂತ ಸ್ಥಾನಗಳಲ್ಲಿ ನಡೆಯುತ್ತಿದ್ದ ನೇಮಗಳ ಸಂದರ್ಭದಲ್ಲೂ ಹೆಚ್ಚುವರಿಯಾಗಿ ಸಂತೆಗಳು ನಡೆಯುತ್ತಿದ್ದವು. ಇಪ್ಪತ್ತನೇ ಶತಮಾನದ ಆರಂಭ (1930)ದ ಘಟ್ಟದಲ್ಲಿ ಈ ಪ್ರವೃತ್ತಿ ಸಾಮಾನ್ಯವಾಗಿತ್ತು. ಮುಸ್ಲಿಮ್ ವರ್ತಕರು ಆಯನಗಳಲ್ಲೂ ನಿರಂತರವಾಗಿ ಭಾಗವಹಿಸುತ್ತಿದ್ದರು. ಜಾನುವಾರು ಮೇಳಗಳನ್ನು

ಆಯೋಜಿಸಲಾಗುತ್ತಿತ್ತು. ಸುಬ್ರಹ್ಮಣ್ಯದ ಬಳಿಯ ಕುಲ್ಕುಂದಾದಲ್ಲಿ ನಡೆಯುತ್ತಿದ್ದ ಸೀತಾನದಿ ಜಾನುವಾರು ಜಾತ್ರೆ ತುಂಬಾ ಪ್ರಸಿದ್ಧವಾಗಿತ್ತು. ಬ್ಯಾರಿಗಳು ಭಾರಿ ಸಂಖ್ಯೆಯ ಜಾನುವಾರು ಗಳನ್ನು ಖರೀದಿಸಿ ಊರೂರು ಅಲೆದಾಡುತ್ತಿದ್ದರು. ಅವರು ಹಳ್ಳಿಗರಿಂದಲೂ ಜಾನುವಾರು ಗಳನ್ನು ಖರೀದಿಸುತ್ತಿದ್ದರು. ಆಡುಗಳಿಗೆ ಭಾರಿ ಬೇಡಿಕೆಯಿತ್ತು. ಹೆಚ್ಚಾಗಿ ಬ್ಯಾರಿಗಳು ಜಾನುವಾರುಗಳ ವ್ಯಾಪಾರ ಮಾಡುತ್ತಿದ್ದರು.[19]

ಟೇಬಲ್ 5. ಮಾರುಕಟ್ಟೆಯ ನೋಟ (1800-1945)

1.	ಅಕ್ಕಿ	ರಫ್ತು	ಮುಂಬೈ, ಅರೇಬಿಯಾ	ಮಾಲ್ದೀವ್ಸ್ ಮತ್ತು ಯುರೋಪ್
2.	ಕೊಬ್ಬರಿ	ಮೇಲಿನಂತೆಯೇ	ಮೇಲಿನಂತೆಯೇ	ಮೇಲಿನಂತೆಯೇ
3.	ಸಾಂಬಾರ ಪದಾರ್ಥಗಳು	ಮೇಲಿನಂತೆಯೇ	–	ಮೇಲಿನಂತೆಯೇ
4.	ಮೀನು	ಮೇಲಿನಂತೆಯೇ	ಮುಂಬೈ	ಮೇಲಿನಂತೆಯೇ ಮತ್ತು ಸಿಲೋನ್
5.	ಚಿನ್ನ, ಬಟ್ಟೆ ಇತ್ಯಾದಿ	ಆಮದು	ಮುಂಬೈ	ಅರೇಬಿಯಾ ಮತ್ತು ಯುರೋಪ್
6.	ಕಬ್ಬು	–	ಸ್ಥಳೀಯ ಮಾರುಕಟ್ಟೆ	–
7.	ಖರ್ಜೂರ	ಆಮದು	–	ಅರೇಬಿಯಾ

ಕೈಗಾರಿಕೆಗಳು ಮತ್ತು ವೃತ್ತಿಗಳು

ಮುಸ್ಲಿಮರು ಒಳ್ಳೆಯ ಉದ್ಯಮಿಗಳಾಗಿರುವಂತೆಯೇ ಬುದ್ಧಿವಂತ ವ್ಯಾಪಾರಿಗಳೂ ಹೌದು. ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಅವರು ದಿನಸಿ ಅಂಗಡಿಗಳನ್ನು ತೆರೆದರು. ಇದು ಮುಸ್ಲಿಮರ ಪ್ರಮುಖ ವ್ಯಾಪಾರವಾಗಿತ್ತು. ಅಕ್ಕಿ, ಬೇಳೆ ಮತ್ತು ಬೆಲ್ಲ ಈ ಅಂಗಡಿಗಳಲ್ಲಿ ಮಾರಾಟಕ್ಕಿರುತ್ತಿದ್ದವು. ಹಳ್ಳಿಗಳಲ್ಲಿದ್ದ ಜಮೀನ್ದಾರರೂ ಕೂಡಾ ಬಿಡುವಿನ ವೇಳೆಯಲ್ಲಿ ಈ ವ್ಯಾಪಾರವನ್ನು ಆರಂಭಿಸಿದರು. ಈ ವ್ಯಾಪಾರಿಗಳು ಕೇವಲ ಸರಕುಗಳನ್ನು ಮಾರಾಟ ಮಾಡುವುದರ ಜೊತೆಗೆ ತಮ್ಮ ಪ್ರದೇಶದಲ್ಲಿ ದೊರೆಯುವ ಉತ್ಪನ್ನಗಳಾದ ಅಕ್ಕಿ, ತೆಂಗಿನ ಕಾಯಿ, ಅಡಿಕೆ ಮತ್ತು ಗೋಡಂಬಿಯನ್ನು ಖರೀದಿಸುತ್ತಲೂ ಇದ್ದರು. ಒಂದು ರೀತಿಯಲ್ಲಿ ಈ ಅಂಗಡಿಗಳು ಮಾರಾಟ ಮತ್ತು ಖರೀದಿಗಳೆರಡರ ಕೇಂದ್ರವೂ ಆಗಿದ್ದವು. ಸರಕಿನ ವಿನಿಮಯ ಕೂಡಾ ಇಲ್ಲಿ ಸಾಮಾನ್ಯವಾಗಿತ್ತು. 19ನೇ ಶತಮಾನದಲ್ಲಿ ಈ ಬಗೆಯ ವ್ಯಾಪಾರ ಬ್ಯಾರಿಗಳ ಏಕಸ್ವಾಮ್ಯದಲ್ಲಿತ್ತು. ನಂತರ ಇತರ ಸಮುದಾಯದವರೂ ಈ ಬಗೆಯ ವ್ಯಾಪಾರಗಳನ್ನು ಆರಂಭಿಸಿದರು.

ಬಟ್ಟೆ ವ್ಯಾಪಾರ 19ನೇ ಶತಮಾನದಲ್ಲಿ ನವಾಯತರು ಮತ್ತು ಮೇಮನ್‌ಗಳ

ಏಕಸ್ವಾಮ್ಯದಲ್ಲಿತ್ತು. ಮಂಗಳೂರಿನಲ್ಲಿ ಅವರೇ ಮುಖ್ಯ ಬಟ್ಟೆ ವ್ಯಾಪಾರಿಗಳು. ದಾದಾ ಹಾಜಿ ಇವರಲ್ಲಿ ಪ್ರಖ್ಯಾತರು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಕೊಂಕಣಿಗಳು ಮತ್ತು ಇತರ ಸಮುದಾಯದವರು ಈ ವ್ಯಾಪಾರಕ್ಕೆ ಪ್ರವೇಶ ಪಡೆದರು. ಆದರೆ ಹಳ್ಳಿಗಳಲ್ಲಿ ಈಗಲೂ ಮುಸ್ಲಿಂ ಬಟ್ಟೆ ವ್ಯಾಪಾರಿಗಳದ್ದೇ ಪಾರಮ್ಯ.

ಹೊಟೇಲುಗಳು ಮುಸ್ಲಿಮರು ನಡೆಸುತ್ತಿದ್ದ ಮತ್ತೊಂದು ಮುಖ್ಯ ಉದ್ಯಮ. ಪಟ್ಟಣ ಮತ್ತು ಗ್ರಾಮೀಣ ಭಾಗಗಳೆರಡರಲ್ಲೂ ಮುಸ್ಲಿಮರು ನಡೆಸುವ ಹೊಟೇಲುಗಳು ವ್ಯಾಪಕ ವಾಗಿವೆ. ಆದರೂ ಈ ಉದ್ಯಮ ಬ್ರಾಹ್ಮಣರ ಏಕಸ್ವಾಮ್ಯದಲ್ಲಿದೆ. ಸಣ್ಣ ಟೀ ಅಂಗಡಿಗಳು ಮತ್ತು ಮೀನು ಊಟದ ಹೊಟೇಲುಗಳನ್ನು ಮುಸ್ಲಿಮರು ನಡೆಸುತ್ತಾರೆ. ಮಂಗಳೂರಿ ನಲ್ಲಿರುವ ಭಟ್ಕಳೀ ಹೊಟೇಲುಗಳು ತಮ್ಮ ರುಚಿಕರ ಬಿರಿಯಾನಿಗಾಗಿ ಪ್ರಸಿದ್ಧವಾಗಿವೆ.[20]

1930ರಲ್ಲಿ ಬೀಡಿ ಉದ್ಯಮ ವ್ಯಾಪಕವಾಯಿತು. ಬೀಡಿಗೆ ಬಂದ ಬೇಡಿಕೆಯಿಂದಾಗಿ ಈ ಉದ್ಯಮ ಬಹುವೇಗವಾಗಿ ಅಭಿವೃದ್ಧಿ ಹೊಂದಿತು. ಬೀಡಿ ಉದ್ಯಮದಲ್ಲಿ ಕಾರ್ಮಿಕರಾಗಿ ದುಡಿಯುವುದು ಮುಸ್ಲಿಮರಿಗೆ ಅನಿವಾರ್ಯವಾಯಿತು. ಇದಕ್ಕೆ ಹಲವು ಕಾರಣಗಳಿವೆ:-

1. ಸಂಪ್ರದಾಯ ಬದ್ಧತೆ ಮುಸ್ಲಿಮ್ ಮಹಿಳೆಯರನ್ನು ಮನೆಗೇ ಸೀಮಿತವಾಗಿ ಉಳಿಸಿತ್ತು. ಅವರಿಗೆ ಹೊಲ-ಗದ್ದೆಗಳಲ್ಲಿ ದುಡಿಯುವ ಅವಕಾಶವಿರಲಿಲ್ಲ ಮಾತ್ರವಲ್ಲ ಅವರು ಹೊರಗೆ ಹೋಗಿ ಯಾವುದೇ ದುಡಿಮೆಯಲ್ಲಿ ತೊಡಗಿಕೊಳ್ಳಲು ಸಾಧ್ಯವಿರಲಿಲ್ಲ. ಇಂಥ ಕುಟುಂಬಗಳಲ್ಲಿ ತಂದೆಯೊಬ್ಬ ಮಾತ್ರ ದುಡಿಯುವ ಸದಸ್ಯ. ಒಬ್ಬನ ದುಡಿಮೆ ಕನಿಷ್ಠ ಆರು ಹೊಟ್ಟೆಗಳನ್ನು ತುಂಬಿಸಬೇಕಾಗಿತ್ತು. ಇದು ಕುಟುಂಬಗಳನ್ನು ತೀವ್ರ ಬಡತನಕ್ಕೆ ದೂಡಿತ್ತು. ಇಂಥ ಕುಟುಂಬಗಳ ಮಹಿಳೆಯರಿಗೆ ಬೀಡಿ ಸುತ್ತುವ ಕೆಲಸ ಒಂದು ವರದಾನವಾಯಿತು. ಮನೆಯಲ್ಲೇ ಇದ್ದುಕೊಂಡು ಸಂಪಾದಿಸುವ ಅವಕಾಶ ದೊರೆಯಿತು.

2. ಮುಸ್ಲಿಂ ಕುಟುಂಬಗಳು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಆಧುನಿಕ ಶಾಲಾ ಶಿಕ್ಷಣಕ್ಕೆ ಒಂದು ರೀತಿಯಲ್ಲಿ ಧಾರ್ಮಿಕ ಸಂಪ್ರದಾಯ ಶರಣತೆಯೂ ಅಡ್ಡಿಯಾಗಿತ್ತು. ಪರಿಣಾಮವಾಗಿ ಬಾಲಕ ಬಾಲಕಿಯರೂ ಬೀಡಿ ಕಾರ್ಮಿಕರಾದರು.

3. ಮೂರನೆಯದಾಗಿ ಬೀಡಿ ಉದ್ಯಮವೆಂಬುದು ಒಂದು ಗುಡಿ ಕೈಗಾರಿಕೆ ಯಾದ್ದರಿಂದ ಒಳ್ಳೆಯ ಸ್ಥಿತಿಯಲ್ಲಿದ್ದು ಬಡತನದ ದವಡೆಗೆ ದೂಡಲ್ಪಟ್ಟ ಅನೇಕ ಮುಸ್ಲಿಂ ಕುಟುಂಬಗಳೂ ಈ ವೃತ್ತಿಯನ್ನು ತಮ್ಮ ಜೀವನಾಧಾರವಾಗಿ ಸ್ವೀಕರಿಸಿದವು.

ವ್ಯಾಪಾರ ಮತ್ತು ಉದ್ದಿಮೆಗಳಲ್ಲಿ ಕಾರ್ಖಾನೆಗಳು ಮತ್ತು ಮರದ ನಾಟಾ ವ್ಯಾಪಾರ ಆ ಕಾಲದಲ್ಲಿ ಅಷ್ಟೇನೂ ಮಹತ್ವ ಪಡೆದಿರಲಿಲ್ಲ. ಹಂಚು ತಯಾರಿಕಾ ಉದ್ಯಮವನ್ನು ಪರಿಚಯಿಸಿದ್ದು ಪಶ್ಚಿಮದ ದೇಶಗಳು. ಈ ಉದ್ಯಮದಲ್ಲಿ ಕ್ರೈಸ್ತರು ಮುಂಚೂಣಿಯಲ್ಲಿದ್ದರು. 20ನೇ ಶತಮಾನದಲ್ಲಿ ಕೆಲವು ಶ್ರೀಮಂತ ಮುಸ್ಲಿಮರು ಈ ಕ್ಷೇತ್ರಕ್ಕೆ ಪ್ರವೇಶ ಪಡೆದು ಯಶಸ್ವಿಯಾದರು. ಇಟ್ಟಿಗೆ ತಯಾರಿಕೆ ಎಲ್ಲಾ ನದೀ ತಟಗಳನ್ನೂ ವ್ಯಾಪಿಸಿತ್ತು. ಕ್ರಮೇಣ ಇದು ಬ್ಯಾರಿಗಳ ಉದ್ದಿಮೆಯಾಯಿತು. 19 ಮತ್ತು 20ನೇ ಶತಮಾನದಲ್ಲಿ ಅಡ್ಯಾರ್-ಕಣ್ಣೂರು, ಗುರುಪುರ ನದಿ ದಂಡೆಗಳಲ್ಲಿ ಇಟ್ಟಿಗೆ ತಯಾರಿಕಾ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದ ಅನೇಕ ಬ್ಯಾರಿಗಳಿದ್ದರು. 20ನೇ ಶತಮಾನದಲ್ಲಿ ಮರದ ನಾಟಾದ ವ್ಯಾಪಾರ ಬ್ಯಾರಿಗಳನ್ನು

ಆಕರ್ಷಿಸಿತು. ಕೆಲವು ನಾಟಾ ವ್ಯಾಪಾರಿಗಳು ದೊಡ್ಡ ಉದ್ಯಮಿಗಳಾಗಿ ಬೆಳೆದರು. ನಾಟಾದ ವ್ಯಾಪಾರ ಅಥವಾ ಹಂಚು ತಯಾರಿಕೆಯ ಜೊತೆಗೆ ಮುಸ್ಲಿಮರಿಗೆ ಯಾವುದೇ ಪಾರಂಪರಿಕ ಸಂಬಂಧಗಳಿರಲಿಲ್ಲ.[21]

ಈ ಪ್ರದೇಶದಲ್ಲಿ ಮುಸ್ಲಿಮರ ಜನಸಂಖ್ಯೆಯಲ್ಲಿ ಕಂಡುಬಂದ ಹೆಚ್ಚಳ ಅವರ ಆರ್ಥಿಕ ಬದುಕಿನಲ್ಲಿ ಬಹುಮುಖ್ಯ ಪಲ್ಲಟಕ್ಕೆ ಕಾರಣವಾಯಿತು. ಗಮನಾರ್ಹ ಸಂಖ್ಯೆಯ ಮುಸ್ಲಿಮರು ಹೊರಗೆ ಹೋಗಿ ಉದ್ಯೋಗ ಮತ್ತು ವ್ಯಾಪಾರಗಳನ್ನು ಹುಡುಕಿಕೊಳ್ಳಲು ಆರಂಭಿಸಿದರು. 19ನೇ ಶತಮಾನದಲ್ಲಿ ಮುಸ್ಲಿಮ್ ಯುವಕರು ಉದ್ಯೋಗ ಅರಸಿ ಮುಂಬೈಗೆ ಪ್ರಯಾಣ ಬೆಳಸಲಾರಂಭಿಸಿದರು. ಗಮನಾರ್ಹ ಸಂಖ್ಯೆಯ ಯುವಕರು ಮುಂಬೈ, ಮಲೆನಾಡು ಮತ್ತು ಕೊಡಗುಗಳಲ್ಲಿ ತಮ್ಮ ಬದುಕು ಕಂಡುಕೊಂಡರು. ಮುಂಬೈಗೆ ಹೋದವರು ಹೊಟೇಲ್‌ಗಳು ಮತ್ತು ಅಂಗಡಿಗಳಲ್ಲಿ ಉದ್ಯೋಗ ಕಂಡುಕೊಂಡರೆ, ಮಲೆನಾಡು ಮತ್ತು ಕೊಡಗಿಗೆ ಹೋದವರು ತೋಟ ಕಾರ್ಮಿಕರಾಗಿ ಬದುಕು ಆರಂಭಿಸಿದರು. ಕಾಸರಗೋಡಿನಿಂದ ಉಡುಪಿಯ ತನಕದ ಕರಾವಳಿಯ ಅನೇಕರು ಹಡಗುಗಳಲ್ಲಿ ನಾವಿಕರಾಗಿ ಉದ್ಯೋಗ ಪಡೆದರು. 20ನೇ ಶತಮಾನದ ಪೂರ್ವಾರ್ಧದಲ್ಲಿ ಹಡಗಿನಲ್ಲಿ ನಾವಿಕರಾಗಿ ದುಡಿಯುವುದು ಮುಸ್ಲಿಮರ ಸಾಮಾನ್ಯ ಉದ್ಯೋಗವಾಗಿತ್ತು. ಈ ಉದ್ಯೋಗದಲ್ಲಿ ಬ್ಯಾರಿಗಳು ಮತ್ತು ಹನಫಿಗಳಿಬ್ಬರೂ ಸಮಾನ ಆಸಕ್ತಿಯಲ್ಲಿ ತೊಡಗಿಸಿಕೊಂಡಿದ್ದರು. ಈ ಕಾಲಘಟ್ಟದಲ್ಲಿ ಹೆಚ್ಚಿನ ಮುಸ್ಲಿಮ್ ಯುವಕರು ನಾವಿಕರಾಗಿ ದುಡಿಯುವುದು ಇಲ್ಲವೇ ಮುಂಬೈಯಲ್ಲಿ ಉದ್ಯೋಗ ಕಂಡುಕೊಳ್ಳುವುದನ್ನು ಆದ್ಯತೆಯಾಗಿ ಪರಿಗಣಿಸಿದ್ದರು. ಮುಂಬೈಯಲ್ಲಿ ಹೀಗೆ ಉದ್ಯೋಗ ಕಂಡುಕೊಂಡವರ ಸಂಖ್ಯೆ ಹೆಚ್ಚುತ್ತಿದ್ದಂತೆ ವಿವಿಧ ಪ್ರದೇಶಗಳಿಂದ ಹೋಗಿದ್ದವರು ತಮ್ಮದೇ ಆದ ರೀತಿಯಲ್ಲಿ ಸಂಘಟಿತರಾಗತೊಡಗಿದರು. ಆಯಾ ಜಮಾತ್‌ಗಳ ಅಥವಾ ಹಳ್ಳಿಗಳ ಹೆಸರಿನಲ್ಲಿ ಸಂಘಟಿತರಾದ ಇವರು ತಮ್ಮದೇ ಕೋಣೆಗಳನ್ನು ಬಾಡಿಗೆಗೆ ಪಡೆದು ಒಟ್ಟಾಗಿ ವಾಸಿಸುತ್ತಿದ್ದರು. ಈ ಬಗೆಯ ಸಂಘಟನೆಗಳ ವಾಸ ಸ್ಥಳಗಳು 'ಜಮಾತ್ ಮುರಿ'ಗಳು ಎಂದೇ ಗುರುತಿಸಿಕೊಂಡವು. ಊರಿನಿಂದ ಮುಂಬೈಗೆ ಪ್ರಯಾಣಿಸುತ್ತಿದ್ದವರೂ ಇಂಥ 'ಜಮಾತ್ ಮುರಿ'ಗಳಲ್ಲೇ ಉಳಿದುಕೊಳ್ಳುತ್ತಿದ್ದರು. ಮುಂಬೈಯಲ್ಲಿ ಇಂಥ ಹಲವು ಜಮಾತ್ ಮುರಿಗಳಿದ್ದವು. ಉದಾಹರಣೆಗೆ ಉಳುವಾರ್ ಜಮಾತ್, ಕುಂಬಳೆ ಜಮಾತ್ ಅಥವಾ ಉದ್ಯಾವರ ಜಮಾತ್ ಹೀಗೆ. ಈ ಜಮಾತ್‌ಗಳು ಈಗಲೂ ಹಿಂದಿನಂತೆಯೇ ಕಾರ್ಯನಿರ್ವಹಿಸುತ್ತಿವೆ. ಈ ಬಗೆಯ ಸಂಘಟಿತ ಪ್ರಯತ್ನ ಮತ್ತು ಸಹಕಾರ ಮನೋಭಾವ ಮುಸ್ಲಿಮರ ಕೊಡುಗೆ. ಮುಸ್ಲಿಮರು ಶಿಕ್ಷಣದಲ್ಲಿ ಹಿಂದುಳಿದಿದ್ದರೂ ಅವರು ಅನುಸರಿಸುತ್ತಿದ್ದ ಇಸ್ಲಾಮ್ ಧರ್ಮ ಅವರನ್ನು ತಮ್ಮ ಸಮುದಾಯವನ್ನು ಪ್ರೀತಿಸುವ ಮತ್ತು ಅದಕ್ಕಾಗಿ ಸಂಘಟಿತರಾಗುವುದನ್ನು ಕಲಿಸಿತ್ತು. ಈ ಸಹೋದರತೆಯ ಭಾವನೆ ಅವರನ್ನು ಒಗ್ಗಟ್ಟಾಗಿರುವುದಕ್ಕೆ ಪರಸ್ಪರ ಸಹಾಯ ಮಾಡುವುದಕ್ಕೆ ಪ್ರೇರೇಪಿಸಿತ್ತು.[23]

ಕುರಿ ಫಂಡ್‌ಗಳು

ಕುರಿ ಫಂಡ್‌ಗಳು ಚಿಟ್ ಫಂಡ್‌ಗಳಂತೆಯೇ ಕಾರ್ಯನಿರ್ವಹಿಸುತ್ತವೆ. 19ನೇ

ಶತಮಾನದಲ್ಲಿ ಇದೊಂದು ಬಹುಮುಖ್ಯ ಸಾಲ ಸಂಗ್ರಹದ ಯೋಜನೆಯಾಗಿತ್ತು. ಇದಕ್ಕೆ ಯಾವುದೇ ಜಾಮೀನು ಇತ್ಯಾದಿಗಳ ಅವಶ್ಯಕತೆ ಇರಲಿಲ್ಲ. ಮುಸ್ಲಿಮರು ಬಡ್ಡಿಗೆ ಸಾಲ ಪಡೆಯುವುದು ಧರ್ಮ ಬಾಹಿರವಾದುದರಿಂದ ಅವರಿಗೆ ಸಾಂಸ್ಥಿಕ ಸಾಲಗಳು ದೊರೆಯುತ್ತಿರಲಿಲ್ಲ. ಧಾರ್ಮಿಕ ಕಟ್ಟುಪಾಡುಗಳಿದ್ದರೂ ಬಡ್ಡಿಯನ್ನು ಪಡೆಯುವ ಖಾಸಗಿ ಲೇವಾದೇವಿದಾರರಿದ್ದರು. ಕುರಿ ಫಂಡ್‌ಗಳು ಕರಾವಳಿಯ ಗ್ರಾಮೀಣ ಪ್ರದೇಶದ ಮುಸ್ಲಿಮರಿಗೆ ಚಿರಪರಿಚಿತ. ಉದ್ದೇಶ ಮತ್ತು ಗಾತ್ರಕ್ಕೆ ಅನುಗುಣವಾಗಿ ಹಲವು ಬಗೆಯ ಕುರಿ ಫಂಡ್‌ಗಳಿವೆ. ಪಳ್ಳಿ ಕುರಿ ಅಥವಾ ಜಮಾತ್ ಕುರಿ ಎಂಬುದು ಮಗ ಅಥವಾ ಮಗಳ ಮದುವೆಗಾಗಿ ಹಣ ಸಂಗ್ರಹಿಸುವುದಕ್ಕೆ ಬಳಕೆಯಾಗುತ್ತಿದ್ದ ಕುರಿ ಫಂಡ್. ಚಂಜಾಯಿ ಕುರಿ ಎಂಬುದು ಗೆಳೆಯರು ಸೇರಿ ಮಾಡಿಕೊಳ್ಳುತ್ತಿದ್ದ ಚಿಟ್ ಫಂಡ್ ವ್ಯವಸ್ಥೆ. ಇದು ಸಾಮಾನ್ಯವಾಗಿ ವ್ಯಾಪಾರದ ಉದ್ದೇಶಕ್ಕೆ ಅಗತ್ಯವಿರುವ ಬಂಡವಾಳಕ್ಕಾಗಿ ರೂಪಿಸಲಾಗಿದ್ದ ನಿಧಿ ವ್ಯವಸ್ಥೆ. ಹಣಕಾಸಿನ ಅಗತ್ಯವಿದ್ದ ಸಂದರ್ಭದಲ್ಲಿ ಮುಸ್ಲಿಮರಿಗೆ ಸಹಾಯ ಮಾಡುತ್ತಿದ್ದ ಏಕೈಕ ದೇಸಿ ಸಾಲ ವ್ಯವಸ್ಥೆ ಇದೊಂದೇ ಆಗಿತ್ತು. ಇದು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಎಲ್ಲಾ ಸದಸ್ಯರಿಂದ ಹಣ ಸಂಗ್ರಹಿಸುವ ವ್ಯವಸ್ಥೆ. ಮೊದಲ ಬಾರಿಗೆ ಸಂಗ್ರಹಿಸಿದ ಮೊತ್ತವನ್ನು ಯಾವುದೇ ಹರಾಜು ಅಥವಾ ವಾರ್ ಇಲ್ಲದೆಯೇ ಸಂಗ್ರಹದ ಉದ್ದೇಶಕ್ಕೆ ನೀಡಲಾಗುತ್ತದೆ. ಆದೊಂದು 'ಚಂಜಾಯಿ ಕುರಿ' ಆಗಿದ್ದರೆ ಮೊದಲ ಸಂಗ್ರಹದಿಂದಲೇ ಹರಾಜು ಆರಂಭವಾಗುತ್ತದೆ. ಈ ಹರಾಜು ಅಥವಾ ವಾರ್ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೊತ್ತವನ್ನು ಕಳೆದುಕೊಳ್ಳುವವನು ಉಳಿಕೆ ಮೊತ್ತವನ್ನು ಪಡೆಯಲು ಅರ್ಹನಾಗುತ್ತಾನೆ. ವಾರ್‌ನಲ್ಲಿ ಭಾಗವಹಿಸುವ ಸದಸ್ಯ ಬಿಟ್ಟುಕೊಡುವ ಮೊತ್ತವನ್ನು 'ಶಿಲ್ಕು' ಎಂದು ಕರೆಯಲಾಗುತ್ತದೆ. ಕೆಲವೊಮ್ಮೆ ಸದಸ್ಯರ ನಡುವೆ ಹಣ ಪಡೆಯುವುದಕ್ಕೆ ತೀವ್ರ ಸ್ಪರ್ಧೆ ಏರ್ಪಟ್ಟಾಗ ಹೆಚ್ಚು 'ಶಿಲ್ಕು' ಉಳಿಯುತ್ತದೆ. ಹೀಗೆ ಉಳಿದ ಹಣ ಮತ್ತೊಬ್ಬ ಸದಸ್ಯನಿಗೆ ಕೊಡುವಷ್ಟು ದೊಡ್ಡ ಮೊತ್ತಕ್ಕೆ ಬೆಳೆದಾಗ ಅದನ್ನು ಮತ್ತೆ ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ 'ಕುರಿ' ಉದ್ದೇಶಿದ ಅವಧಿಗೆ ಮೊದಲೇ ಕೊನೆಗೊಳ್ಳುತ್ತದೆ. ಇದರಿಂದ ಸದಸ್ಯರು ಪಾವತಿಸಬೇಕಾದ ಕಂತುಗಳ ಪ್ರಮಾಣ ಕಡಿಮೆಯಾಗುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಎರಡರಿಂದ ಮೂರು ಕಂತುಗಳಿಗೆ ಮುನ್ನವೇ 'ಕುರಿ'ಗಳು ಕೊನೆಗೊಳ್ಳುತ್ತವೆ. ಈ ಬಗೆಯ ನಿಧಿಗಳಿಗೆ ಯಾವುದೇ ಹೆಚ್ಚುವರಿ ಭದ್ರತೆ ಗಳಿಲ್ಲದಿದ್ದರೂ ದುರ್ಬಳಕೆಯ ಸಾಧ್ಯತೆಗಳು ಕಡಿಮೆ. ಇಂಥದ್ದೇನಾದರೂ ಸಂಭವಿಸಿದರೆ ಎಲ್ಲಾ ಸದಸ್ಯರೂ ನಷ್ಟವನ್ನು ಹಂಚಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಈ ಬಗೆಯ 'ಕುರಿ'ಗಳನ್ನು ಆರಂಭಿಸುವಾಗ ಪಳ್ಳಿ ಜಮಾತ್ (ಮಸೀದಿ ಸಮಿತಿ)ನಿಂದ ಅನುಮತಿ ಪಡೆಯಬೇಕಾಗುತ್ತದೆ.

ಜಮಾತ್ ವ್ಯವಸ್ಥೆ

'ಜಮಾತ್' ಎಂಬುದನ್ನು ಸ್ಥಳೀಯವಾಗಿ ಸಂಘಟನೆ ಎಂಬುದಕ್ಕೆ ಸ್ಥಳೀಯರು ಪರ್ಯಾಯವಾಗಿ ಬಳಸುವ ಶಬ್ದ. ಅರಬಿ ಮೂಲದ ಈ ಪದದ ಅರ್ಥ ಜನರ ಸಂಘಟನೆ ಎಂದೇ. ಇಸ್ಲಾಮಿಕ್ ಆಚರಣೆಗಳು ನಡೆಯುವ ಎಲ್ಲಾ 'ಪಳ್ಳಿ'ಗಳಲ್ಲಿಯೂ ಒಂದು ಜಮಾತ್ ಅಥವಾ ಮಸೀದಿಯ ಸದಸ್ಯತ್ವ ಇರುತ್ತದೆ. ಈ ಜಮಾತ್ ಮಸೀದಿಯನ್ನು ನಿರ್ವಹಿಸುತ್ತದೆ.

ಮಸೀದಿಯ ಆಡಳಿತ ಸಾಮಾನ್ಯವಾಗಿ ಮಸೀದಿಗೆ ಉಂಬಳಿ ನೀಡಿರುವ ಕುಟುಂಬಕ್ಕೆ ಸೇರಿದ ಮುತವಲ್ಲಿಯದ್ದಾಗಿರುತ್ತದೆ. ಇದು ವಂಶಪಾರಂಪರ್ಯವಾಗಿ ದೊರೆಯುವ ಆಡಳಿತ. ಹಾಗೆಯೇ ಮಸೀದಿ ಸಮಿತಿ ಆಯ್ಕೆ ಮಾಡಿದ ವ್ಯಕ್ತಿಯೂ ಆಡಳಿತ ಮುಖ್ಯಸ್ಥನಾಗಿರಬಹುದು. ಕೆಲವೊಮ್ಮೆ ಮಸೀದಿ ಸಮಿತಿಗೆ ಅಧ್ಯಕ್ಷರನ್ನೂ ಆಯ್ಕೆ ಮಾಡಲಾಗುತ್ತಿತ್ತು. ಜಮಾತ್‌ನ ಸ್ಥಾನವನ್ನು ಸಂಖ್ಯೆಯ ಮೂಲಕ ಗುರುತಿಸಲಾಗುತ್ತಿತ್ತು. ಉದಾಹರಣೆಗೆ ಕುಂಬಳೆಯ ಸಾವಿರದ ಜಮಾತ್, ಉಳುವಾರ್‌ನ ಐದುನೂರರ ಜಮಾತ್ ಹೀಗೆ. ಈ ಸಾವಿರ ಅಥವಾ ಐದು ನೂರು ಗಳು ಆಯಾ ಜಮಾತ್‌ಗಳ ಸದಸ್ಯರ ನಿಖರವಾದ ಸಂಖ್ಯೆಯೇನಲ್ಲ ಹಾಗೆಯೇ ಜಮಾತ್‌ನ ಸ್ಥಾನಮಾನದ ದ್ಯೋತಕವೂ ಇಲ್ಲ. ಕೇವಲ ಜಮಾತ್‌ನ ಗಾತ್ರವನ್ನು ಚಿಕ್ಕದೇ ಅಥವಾ ದೊಡ್ಡದೇ ಎಂದು ಹೇಳುವುದಕ್ಕೆ ಬಳಕೆಯಾಗುತ್ತಿದ್ದ ಪ್ರಯೋಗ. ಜಮಾತ್‌ನಲ್ಲಿ ಇರುತ್ತಿದ್ದ ಪ್ರತಿಯೊಂದು ಕುಟುಂಬವೂ ಮಸೀದಿಯ ನಿರ್ವಹಣೆ ಇತ್ಯಾದಿಗಳಿಗಾಗಿ ನಿಯತ ಅವಧಿಯ ಚಂದಾವನ್ನು ಪಾವತಿಸಬೇಕಾಗುತ್ತದೆ. ಕೆಲವು ಮಸೀದಿಗಳು ಆದಾಯ ತರುವ ತಮ್ಮದೇ ಸ್ಥಿರಾಸ್ತಿಯನ್ನು ಹೊಂದಿದ್ದವು. ಇಂತಲ್ಲಿ ಪ್ರಾಸಂಗಿಕವಾಗಿ ಸದಸ್ಯರು ದೇಣಿಗೆ ನೀಡಬೇಕಾಗುತ್ತದೆ. ಇವು ಸಾಮಾನ್ಯವಾಗಿ ನಾಮ ಮಾತ್ರದ ಶುಲ್ಕಗಳು. ಮದುವೆ, ಅಂತ್ಯ ಸಂಸ್ಕಾರ ಮುಂತಾದ ವಿಧಿಗಳಿಗಾಗಿ ಈ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಜಮಾತ್‌ಗಳು ದಫನ ಮಾಡುವ ಭೂಮಿಯನ್ನು ಒದಗಿಸುತ್ತವೆ. ಹಾಗೆಯೇ ಧಾರ್ಮಿಕ ಕ್ರಿಯೆಗಳಿಗೆ ನೇತೃತ್ವ ನೀಡುವ ಖತೀಬ್ ಮತ್ತು ಮುಸ್ಲಿಯಾರ್‌ಗಳ ಸೇವೆಯನ್ನು ನೀಡುತ್ತವೆ. ಮುಸ್ಲಿಮರು ಎಲ್ಲೆಂದರಲ್ಲಿ ಮೃತರನ್ನು ದಫನ ಮಾಡುವಂತಿಲ್ಲ. ದಫನಕ್ಕಾಗಿ ಮೀಸಲಿಟ್ಟ ಭೂಮಿಯಲ್ಲೇ ಇದನ್ನು ಮಾಡಬೇಕಾಗುತ್ತದೆ. ಹಾಗಾಗಿ ಜಮಾತ್‌ನಂಥ ಸಂಘಟಿತ ಪ್ರಯತ್ನ ಅಗತ್ಯ ವಾಗುತ್ತದೆ. ಸಾಮಾನ್ಯವಾಗಿ ಮಸೀದಿಯ ಸುತ್ತಮುತ್ತಲಿನ ಸ್ಥಳವೇ ದಫನ ಭೂಮಿಯಾಗಿರು ತ್ತದೆ. ಹಾಗೆಯೇ ಮದ್ರಸಾಗಳೂ ಕೂಡಾ ಜಮಾತ್‌ನ ನಿರ್ವಹಣೆಗೇ ಒಳಪಟ್ಟಿರುತ್ತದೆ.

'ಪಿಡಿಯರಿ' ಅಥವಾ 'ಹಿಡಿ ಅಕ್ಕಿ' ಎಂಬ ವ್ಯವಸ್ಥೆಯೊಂದಿತ್ತು. ಜಮಾತ್‌ನ ಏಜೆಂಟರು ಎಲ್ಲಾ ಮನೆಗಳಲ್ಲಿ ಮಣ್ಣಿನ ಪಾತ್ರೆಯೊಂದನ್ನು ಇಡುತ್ತಿದ್ದರು. ಮನೆಯೊಡತಿ ಪ್ರತಿದಿನ ಅಡುಗೆಗೆ ಅಕ್ಕಿಯನ್ನು ತೆಗೆದುಕೊಳ್ಳುವಾಗ ಅದರಿಂದ ಒಂದು ಹಿಡಿಯನ್ನು ಈ ಪಾತ್ರೆಗೆ ಹಾಕಿಡುತ್ತಿದ್ದಳು. ಎಲ್ಲಾ ಮನೆಗಳಲ್ಲಿ ಹೀಗೆ ಸಂಗ್ರಹವಾದ ಅಕ್ಕಿಯನ್ನು ತಿಂಗಳಿಗೊಮ್ಮೆ ಜಮಾತ್‌ನ ಅಧಿಕೃತರು ಒಟ್ಟುಗೂಡಿಸುತ್ತಿದ್ದರು. ಜಮಾತ್‌ಗೆ ನೀಡಬೇಕಾದ ಮಾಸಿಕ ಚಂದಾದ ಹೊರೆಯನ್ನು ಕಡಿಮೆ ಮಾಡುವುದಕ್ಕೆ ಇದೊಂದು ಉತ್ತಮ ಉಪಾಯವಾಗಿತ್ತು. ಬಡವರ ಮಟ್ಟಿಗೆ ಇದು ಬಹಳ ಅನುಕೂಲಕರ. ಮಸೀದಿಗೆ ಕೊಡಬೇಕಾದ ದೇಣಿಗೆಯನ್ನು ಸರಿಯಾಗಿ ಪಾವತಿ ಮಾಡದಿದ್ದರೆ ಅಂಥ ಸದಸ್ಯರು ತೊಂದರೆ ಎದುರಿಸಬೇಕಾಗುತ್ತದೆ. ವಸೂಲಿಗೆ ಜಮಾತ್ ತೆಗೆದುಕೊಳ್ಳುವ ಕ್ರಮಗಳು ಹಲವು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಇವು ಅಷ್ಟೇನೂ ಪರಿಣಾಮಕಾರಿಯಾಗಿರುತ್ತಿರಲಿಲ್ಲ. ಮದುವೆ, ಅಂತ್ಯ ಸಂಸ್ಕಾರಗಳಂಥ ಸಂದರ್ಭಗಳಲ್ಲಿ ಜಮಾತ್ ಹಳೆಯ ಬಾಕಿಯನ್ನು ಪಾವತಿಸುವಂತೆ ಒತ್ತಾಯಿಸುತ್ತಿತ್ತು. ಹೀಗೆ ಪಾವತಿಸದೇ ಇದ್ದವರಿಗೆ ದಫನ ಭೂಮಿಯಲ್ಲಿ ಅವಕಾಶವನ್ನು ನಿರಾಕರಿಸಲಾಗುತ್ತಿತ್ತು. ಇಂಥ ದಂಡ ಪ್ರಕ್ರಿಯೆಯ ಬಲಿಪಶುಗಳು ಸಾಮಾನ್ಯವಾಗಿ ಬಡವರೇ. ಈ ಬಗೆಯ ವಿಷಯಗಳಲ್ಲಿ

ತಪ್ಪು ಅಭಿಪ್ರಾಯಗಳು ಕೆಲವೊಮ್ಮೆ ಘರ್ಷಣೆಗೂ ಜಗಳಕ್ಕೂ ಕಾರಣವಾಗುತ್ತಿತ್ತು. ಆದೇನೇ ಇದ್ದರೂ 19 ಮತ್ತು 20ನೇ ಶತಮಾನದಲ್ಲಿ ಜಮಾತ್ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿತ್ತು.[25]

ಭಾರೀ ಸಂಖ್ಯೆಯ ಮುಸ್ಲಿಮರು ಎತ್ತಿನ ಗಾಡಿ ನಡೆಸುವುದನ್ನು ವೃತ್ತಿಯಾಗಿ ಸ್ವೀಕರಿಸಿದ್ದರು. 19ನೇ ಶತಮಾನದಲ್ಲಿ ಗಮನಾರ್ಹ ಸಂಖ್ಯೆಯ ಬ್ಯಾರಿಗಳು ಎತ್ತಿನ ಗಾಡಿಯ ಮಾಲೀಕರಾಗಿದ್ದರು. ಕೆಲ ಬ್ಯಾರಿಗಳ ಹೆಸರಿನ ಜೊತೆಗೂ 'ಗಾಡಿ' ಇತ್ತು. ಉದಾಹರಣೆಗೆ ಗಾಡಿ ಇಬ್ರಾಯಿ, ಗಾಡಿ ಮಮ್ಮದೆ ಹೀಗೆ. ಮಂಗಳೂರು ಮತ್ತು ಇತರ ಪಟ್ಟಣ ಪ್ರದೇಶಗಳಲ್ಲಿ ಕುದುರೆಗಳು ಎಳೆಯುವ ಟಾಂಗಾಗಳಿದ್ದವು. ಇವುಗಳನ್ನು ನಡೆಸುವವರಲ್ಲಿ ಹೆಚ್ಚಿನವರು ದಕ್ಷಿಣದಿಂದ ಬಂದ ಹನಫಿಗಳಾಗಿದ್ದರು. ಮುಸ್ಲಿಮೇತರರು ಈ ವೃತ್ತಿಯಲ್ಲಿದ್ದರೂ ಅವರ ಸಂಖ್ಯೆ ಬಹಳ ಸಣ್ಣದು.[26]

ಸ್ಥಳೀಯ ಜಮೀನ್ದಾರರು ಮತ್ತು ಅಂಗಡಿ ಮಾಲಿಕರು ಬ್ಯಾರಿಗಳಿಗೆ ಆದ್ಯತೆಯ ಮೇರೆಗೆ ಕೆಲಸ ನೀಡುತ್ತಿದ್ದರು. ಇಸ್ಲಾಮಿನ ಮೂಲ ತತ್ವವಾದ ಪ್ರಾಮಾಣಿಕತೆ ಮತ್ತು ಕಷ್ಟಪಟ್ಟು ದುಡಿಯುವ ಗುಣ ಬ್ಯಾರಿಗಳದ್ದಾಗಿರುತ್ತಿದ್ದುದು ಇದಕ್ಕೆ ಮುಖ್ಯ ಕಾರಣ. ಹಲವು ಮುಸ್ಲಿಮರು ಕೃಷಿ ಕಾರ್ಮಿಕರಾಗಿ ಮತ್ತು ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಹಲಬಗೆಯ ಕೆಲಸಗಳನ್ನು ಅವರು ಮಾಡುತ್ತಿದ್ದರು. ಇತರ ಸಮುದಾಯಗಳಿಗೆ ಹೋಲಿಸಿದರೆ ಸಮಾಜದಲ್ಲಿದ್ದ ಮುಸ್ಲಿಮ್ ಕಾರ್ಮಿಕರ ಸಂಖ್ಯೆ ಶೇಕಡಾ 10ಕ್ಕೂ ಕಡಿಮೆ. 20ನೇ ಶತಮಾನದಲ್ಲಿ ಕೂಲಿಯ ದರ ಭಾರೀ ಪ್ರಮಾಣದಲ್ಲಿ ಹೆಚ್ಚಿತು.

ಕೋಷ್ಟಕ 6 : ಕೂಲಿಯ ದರಗಳು - ಹೋಲಿಕೆ[27]

ಕ್ರ.ಸಂ.	ಸ್ವರೂಪ	ವರ್ಷ 1917	ವರ್ಷ 1947
1	ದಿನಗೂಲಿ	0-4-0	1-4-0
2	ಬಡಗಿಗಳು ಮತ್ತಿತರ	0-6-0	2-0-0
	ಕುಶಲ ಕೆಲಸಗಳು		
3	ತೆಂಗಿನಕಾಯಿ ಕೀಳುವುದು	ನಾಲ್ಕು ಮರಕ್ಕೆ ಒಂದು ತೆಂಗಿನಕಾಯಿ	ಎರಡು ಮರಕ್ಕೆ ಒಂದು ತೆಂಗಿನಕಾಯಿ

ಟಿಪ್ಪಣಿ : ದರ ರೂಪಾಯಿ, ಆಣೆ, ಪೈ ಲೆಕ್ಕದಲ್ಲಿ.

3. ಭೂಮಿ-ಹಿಡುವಳಿ

ಹತ್ತೊಂಬತ್ತನೇ ಶತಮಾನದಲ್ಲಿ ವ್ಯಾಪಾರಿ ಚಟುವಟಿಕೆಗಳ ಮೇಲಿನ ಆಕರ್ಷಣೆ ಕಡಿಮೆಯಾದ ಮೇಲೆ ಮುಸ್ಲಿಮರು ಕೃಷಿಯತ್ತ ಗಮನಹರಿಸಿದರು. ಗಮನಾರ್ಹ ಸಂಖ್ಯೆಯ ಮುಸ್ಲಿಮರು ಹಿಡುವಳಿದಾರರಾದರು. ಇದಕ್ಕೂ ಮುನ್ನ ಕೃಷಿ ಎಂಬುದು ಬ್ರಾಹ್ಮಣರು, ಜೈನರು, ಬಂಟರು ಮುಂತಾದ ಜಾತಿಗಳ ಹಿಡಿತದಲ್ಲಿತ್ತು. 17 ಮತ್ತು 18ನೇ ಶತಮಾನ

ದಲ್ಲಿಯೇ ಗಮನಾರ್ಹ ಸಂಖ್ಯೆಯ ಮುಸ್ಲಿಮರೂ ಹಿಡುವಳಿದಾರರಾಗ ತೊಡಗಿದರು.

ವಿಜಯನಗರ ಅರಸರ ಆಡಳಿತ ತೊಡಗುವುದಕ್ಕೆ ಮುನ್ನ ಭೂ ಹಿಡುವಳಿಗೆ ಸಂಬಂಧಿಸಿದಂತೆ ಯಾವುದೇ ಸಂಘಟಿತ ವ್ಯವಸ್ಥೆ ಇರಲಿಲ್ಲ. ವಿಜಯನಗರ ಅರಸರ ನಂತರ ಬೈಂದೂರಿನಿಂದ ಆಳ್ವಿಕೆ ನಡೆಸುತ್ತಿದ್ದವರು ಭೂ ಕಂದಾಯವನ್ನು ನಿಗದಿಪಡಿಸಿ ಅದರ ವಸೂಲಿಗೆ ವ್ಯವಸ್ಥೆ ಮಾಡಿದರು. ಧಾರ್ಮಿಕ ಸಂಸ್ಥೆಗಳಿಗೆ ಭೂಮಿಯನ್ನು ಉಂಬಳಿಯಾಗಿ ನೀಡಿ ಅದರ ಕಂದಾಯ ಸಂಗ್ರಹಿಸುವ ಜವಾಬ್ದಾರಿ ಮತ್ತು ಅಧಿಕಾರವನ್ನೂ ಅವುಗಳಿಗೆ ನೀಡಲಾಯಿತು. ಮೈಸೂರಿನ ನವಾಬರು ಈ ವ್ಯವಸ್ಥೆಯನ್ನು ರದ್ದುಪಡಿಸಿದರು. ಧಾರ್ಮಿಕ ಸಂಸ್ಥೆಗಳ ನಿರ್ವಹಣ ವೆಚ್ಚವನ್ನು ಖಜಾನೆಯಿಂದಲೇ ನೇರವಾಗಿ ನೀಡುವ 'ತಸ್ದೀಕ್' ವ್ಯವಸ್ಥೆಯನ್ನು ಜಾರಿಗೆ ತಂದರು. ಇದು ಧಾರ್ಮಿಕ ಸಂಸ್ಥೆಗಳ ಮಟ್ಟಿಗೆ ಹೆಚ್ಚು ಅನುಕೂಲಕರ ವ್ಯವಸ್ಥೆಯಾಗಿತ್ತು 28. ಪಗೋಡ ಅಥವಾ ಮಸೀದಿ ಭತ್ಯೆ ಮತ್ತು ಜರೆ ಬ್ರಹ್ಮೋದಯ ಇನಾಮ್ ಎಂಬ ಎರಡು ಬಗೆಯ ಇನಾಮ್ ಅಥವಾ ಅನುದಾನಗಳಿದ್ದವು. ಇದು ಭೂಮಿಯನ್ನು ಹೆಚ್ಚು ಮಂದಿ ಹಿಡುವಳಿದಾರರಿಗೆ ಹಂಚಲು ಸಹಾಯ ಮಾಡಿತು.

1817ರಲ್ಲಿ ಬ್ರಿಟಿಷರು ಠರಾವ್ ಹೆಸರಿನಲ್ಲಿ ಭೂ ಕಂದಾಯವನ್ನು ನಿಗದಿಪಡಿಸಿದರು. 1829ರಲ್ಲಿ ಇದನ್ನು ಪರಿಷ್ಕರಿಸಲಾಯಿತು. ಇದು ಬಹಳ ಹೆಚ್ಚು ಎಂಬ ದೂರುಗಳು ಕೇಳಿಬಂದವು. 1833ರಲ್ಲಿ ಕಲೆಕ್ಟರ್ ವಿವೆಶ್ ಅವರು 1831ರ ಸ್ಟೋಕ್ಸ್ ವರದಿಯನ್ನು ಆಧಾರವಾಗಿಟ್ಟುಕೊಂಡು ಹೊಸ ಸುಧಾರಣೆಗಳನ್ನು ತಂದರು. ಎರಡು ಬಗೆಯ ಹಿಡುವಳಿದಾರರಿದ್ದರು.

(1) ಭರ್ತಿ: ಠರಾವನ್ನು ಪಾವತಿ ಮಾಡಲು ಸಮರ್ಥರಿರುವ ಹಿಡುವಳಿದಾರರು.

(2) ಖಮ್ ಭರ್ತಿ: ಠರಾವನ್ನು ಪಾವತಿ ಮಾಡಲು ಸಮರ್ಥರಿಲ್ಲದ ಹಿಡುವಳಿದಾರರು.

ಖಮ್ ಭರ್ತಿ ವಿಭಾಗದಲ್ಲಿ ಮೂರು ಉಪ ವಿಭಾಗಗಳನ್ನು ಮಾಡಲಾಗಿತ್ತು. (1) ವಾಯ್ದೆ-ಅಥವಾ ಪಾವತಿಯನ್ನು ಪೂರ್ಣಗೊಳಿಸಲು ಕಾಲಾವಕಾಶ ನೀಡಬಹುದಾದ ಹಿಡುವಳಿದಾರರು. (2) ಬೋರ್ಡ್ ಸಿಪಾರಸ್- ಕಂದಾಯದ ಪ್ರಮಾಣವನ್ನು ಕಡಿಮೆ ಮಾಡಲು ಕಂದಾಯ ಮಂಡಳಿಯ ಶಿಫಾರಸು (3) ತನಿಖೆ: ಹಿಡುವಳಿದಾರನನ್ನು ತನಿಖೆಗೆ ಒಳಪಡಿಸುವುದು 29. 1934ರ ಅಕ್ಟೋಬರ್ 24ರಂದು ಹೊರಡಿಸಲಾದ ಸುತ್ತೋಲೆಯೊಂದರಲ್ಲಿ ಕಲೆಕ್ಟರ್ ವಿವೆಶ್ ಅರ್ಜಿಗಳ ಆಧಾರದ ಮೇಲೆ ಮುಳಿ ಪಟ್ಟಾಗಳನ್ನು ನೀಡಲಾಗುವುದು ಇಲ್ಲವೇ ಖಾತೆಗಳಲ್ಲಿ ಮುಳಿಯೆಂದು ದಾಖಲಿಸುವ ಅವಕಾಶ ನೀಡಿದ. ಪರಿಣಾಮವಾಗಿ ಕುಡ್ತಲೆದಾರರು ಪಟ್ಟಾದಾರರು ಅಥವಾ ಜಂಟಿ ಪಟ್ಟಾದಾರರಾದರು. ಇದು ಜಿಲ್ಲೆಯಲ್ಲಿ ಭೂ ಹಿಡುವಳಿಯ ಕುರಿತಾದ ನಿಖರವಾದ ಚಿತ್ರಣವನ್ನು ನೀಡಿತು. ಕ್ರಮಬದ್ಧವಾದ ಸರ್ವೇ ಕಾರ್ಯವನ್ನು 1891ರಲ್ಲಿ ನಡೆಸಲಾಯಿತು. 1904-1905ರಲ್ಲಿ ಕೌಚ್‌ಮನ್ ಇದನ್ನು ಸರ್ವೇ ಅಂಡ್ ಸೆಟ್ಲ್‌ಮೆಂಟ್ ಆಫ್ ಸೌತ್ ಕೆನರಾ ಎಂಬ ಹೆಸರಿನಲ್ಲಿ ಪ್ರಕಟಿಸಿದ. ಕೌಚ್‌ಮೆನ್ ಸರ್ವೇಯಲ್ಲಿ ದಾಖಲಿಸಿದ ವಿವರಗಳು ಜಿಲ್ಲೆಯ ಭೂ ಹಿಡುವಳಿದಾರರ ಕುರಿತಂತೆ ಮಹತ್ವದ ವಿವರಗಳನ್ನು ಒದಗಿಸುತ್ತವೆ. ADANGALU ಎಂದು ಗುರುತಿಸ

ಲಾಗುವ ಈ ದಾಖಲೆಗಳು ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿಯೂ ಮುಸ್ಲಿಮ್ ಹಿಡುವಳಿದಾರರಿದ್ದರೆಂಬ ವಿವರವನ್ನು ಒದಗಿಸುತ್ತದೆ. ವ್ಯಾಪಾರಿಗಳು ಭೂ ಹಿಡುವಳಿದಾರರಾಗಿ ಪರಿವರ್ತನೆಗೊಂಡದ್ದೂ ಈ ಅವಧಿಯಲ್ಲೇ. ಭಾರೀ ಪ್ರಮಾಣದ ಭೂ ಒಡೆತನವನ್ನು ಹೊಂದಿದ್ದವರೂ ಇದ್ದರು. ಮಂಜೇಶ್ವರದ ಮಮ್ಮಿ ಸೂಫಿ ಬ್ಯಾರಿಯವರಿಗಿದ್ದ ಹಿಡುವಳಿ ಅಕ್ಕಿಯನ್ನು ರಫ್ತು ಮಾಡುವಷ್ಟು ದೊಡ್ಡ ಪ್ರಮಾಣದ್ದಾಗಿತ್ತು. ಹಾಗೆಯೇ ಸಣ್ಣ ಹಿಡುವಳಿದಾರರು ಹಾಗೂ ವಾಯ್ದೆ ಗೇಣಿ (ನಿರ್ದಿಷ್ಟ ಅವಧಿಗೆ ಕೃಷಿ ಮಾಡಲು ಭೂಮಿ ಪಡೆದವರು), ಚಾಲಗೇಣಿ (ವಾರ್ಷಿಕ ಗೇಣಿ ಪಾವತಿಸುವವರು), ಮೂಲಗೇಣಿ ಹೀಗೆ ಹಲ ಬಗೆಯಲ್ಲಿ ಭೂಮಿಯನ್ನು ಗೇಣಿಗೆ ಪಡೆದ ಕೃಷಿಕರೂ ಇದ್ದರು. ಹಲವು ಹಿಂದೂ ಮತ್ತು ಜೈನ ಭೂಮಾಲೀಕರೂ ತಮ್ಮ ಭೂಮಿಯನ್ನು ಮುಸ್ಲಿಮರಿಗೆ ಗೇಣಿಗೆ ಕೊಟ್ಟಿದ್ದರು. ದೇವಸ್ಥಾನದ ಭೂಮಿಯೂ ಮುಸ್ಲಿಮರಿಗೆ ಗೇಣಿಗೆ ದೊರೆತಿತ್ತು. ಬಪ್ಪ ನಾಡಿನ ಇಸ್ಮಾಯಿಲ್ ಬ್ಯಾರಿ ಹಾಗೂ ಹಮ್ಮಬ್ಬ ಬ್ಯಾರಿ, ಮತ್ತು ಕಣ್ಣೂರಿನ ಹಸನೆ ಬ್ಯಾರಿಗಳು ಶ್ರೀಕೃಷ್ಣ ದೇವಸ್ಥಾನದ ಮೂಲಗೇಣಿದಾರರಾಗಿದ್ದರು.

ಮುಸ್ಲಿಮ್ ಭೂ ಮಾಲೀಕರು ಪ್ರಬಲರಾಗುತ್ತಾ ಬಂದರೂ ನಿಧಾನವಾಗಿ ಅವರ ಸಂಖ್ಯೆಯೂ ಹೆಚ್ಚಿತು. ಇದಕ್ಕೆ ಒಂದು ಉದಾಹರಣೆಯಾಗಿ ಮಂಗಳೂರು ತಾಲೂಕಿನ ಮಂಜನಾಡಿ ಗ್ರಾಮದ ಉದಾಹರಣೆ ಇಲ್ಲಿದೆ

ಕೋಷ್ಟಕ 5 ಗ್ರಾಮ ಸಂಖ್ಯೆ 239 ಮಂಜನಾಡಿ, ಮಂಗಳೂರು ತಾಲೂಕು

ಕ್ರ.ಸಂ.	ಪಿ. ಸಂಖ್ಯೆ	ಹಿಡುವಳಿದಾರ ಹೆಸರು
1	2	ಬಾವ ಅಲಿಯಾಸ್ ಮಾಮ್ ಬ್ಯಾರಿ
2	4	ಮಮ್ಮು ಬ್ಯಾರಿ ನಕ್ರೆ
3	9	ಶೇಕ್ ಬ್ಯಾರಿ
4	10	ಹುಸೈನ್ ಬ್ಯಾರಿ
5	14	ಹಮ್ಮದೆ ಬ್ಯಾರಿ ನಕ್ರೆ
6	19	ವಾರಿಸೊಲೆ ಹಮ್ಮದೆ ಬ್ಯಾರಿ
		(Check this for pronouniciation)
7	25	ಲಾಡಾದ ಮಮ್ಮದ್
8	36	ಗುಲಾಂ ಅಲಿಯಾಸ್ ಇಬ್ರಾಯಿ ಬ್ಯಾರಿ
9	39	ಬಾವ ಮುಕ್ರಿ
10	42	ತೋಟಕ್ಕರೆ ಇಸ್ಮಾಯಿಲ್ ಬ್ಯಾರಿ
11	44	ಉದ್ಯಾವರ ಅಬ್ದುಲ್ ರಹ್ಮಾನ್ ಬ್ಯಾರಿ
12	53	ಕುನ್ನಂತಿಲ ಇಸ್ಮಾಯಿಲ್ ಬ್ಯಾರಿ
13	54	ಬಬರ್ಯ ಬ್ಯಾರಿ

14	62	ಅಬ್ಬಾಸ್ ಬ್ಯಾರಿ
15	81	ಬೀಯಮ್ಮನವರ ಮಗ ಬಡುವ ಬ್ಯಾರಿ
16	82	ಉಳ್ಳಾಲ ಇಸ್ಮಾಯಿಲ್ ಬ್ಯಾರಿ
17	84	ಉಮರೆ ಮುಕ್ರಿ

ಕ್ರಮ ಸಂಖ್ಯೆ 16ರಿಂದ 26ರವರೆಗಿನ ಪ್ರದೇಶ ಮುಸ್ಲಿಮರದ್ದಾಗಿತ್ತು. ಈ ಪ್ರದೇಶದಲ್ಲಿ ಮಂಜನಾಡಿ ಮಸೀದಿಯೂ ಇತ್ತು. ಮಸೀದಿಗೂ ಭಾರೀ ಪ್ರಮಾಣದ ಭೂಮಿಯಿತ್ತು.

ಈ ದಾಖಲೆಗಳು ಮತ್ತು ಜಿಲ್ಲೆಯ ಹಿರಿಯರ ಹೇಳಿಕೆಗಳ ಆಧಾರದ ಮೇಲೆ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಭೂ ಹಿಡುವಳಿದಾರರು ಮತ್ತು ಭೂ ಮಾಲೀಕರಾಗಿದ್ದರು ಹಾಗೂ ಜಿಲ್ಲೆಯ ಆರ್ಥಿಕತೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದ್ದರೆಂಬ ನಿರ್ಣಯಕ್ಕೆ ಬರಬಹುದು. 20ನೇ ಶತಮಾನದ ಮಧ್ಯ ಭಾಗದಲ್ಲಿ ಜಿಲ್ಲೆಯ ಬಹುತೇಕ ಮುಸ್ಲಿಮರು ವ್ಯಾಪಾರದಲ್ಲಿ ತೊಡಗಿಕೊಳ್ಳುವುದಕ್ಕಿಂತ ಹೆಚ್ಚಾಗಿ ಕೃಷಿಯಲ್ಲಿ ಮಗ್ನರಾದರು.

★★★

1. ಸ್ಟರ್ಲಕ್ ಎಸ್. ಕೆ. ಮಾನ್ಯುಯಲ್ ಪುಟ 218
2. ಅದೇ ಪುಟ 218
3. ನೈನಾರ್ ಮೊಹಮ್ಮದ್ ಹುಸೈನ್, ದ ಅರಬ್ ಜಿಯೋಗ್ರಾಫರ್ಸ್ ನಾಲೆಜ್ ಆಫ್ ಸದರ್ನ್ ಇಂಡಿಯಾ (ಮದ್ರಾಸ್ ಯೂನಿವರ್ಸಿಟಿ ಇಸ್ಲಾಮಿಕ್ ಸೊಸೈಟಿ ನಂ. 6/ ಪುಟ 28)
4. ಸ್ಟರ್ಲಕ್ ಎಸ್. ಕೆ. ಮಾನ್ಯುಯಲ್ ಪುಟ 218
5. ಅದೇ ಪುಟ 220
6. ಪೇದ್ರೊ ಡೆಲ್ಲಾ ವೆಲ್ಲಾ- ಟ್ರಾವೆಲ್ಸ್ ಫಾ. ಎಡ್ವರ್ಡ್ ಗ್ರೇ (ಲಂಡನ್) 1892, ಪುಟ 272
7. ಎಚ್. ಆರ್. ಕರುಣಾಕರ್ ಎ. ಸೊಷಿಯೋ-ಎಕನಾಮಿಕ್ ಕಂಡೀಷನ್ಸ್ ಆಫ್ ಎಸ್. ಕೆ. 1860-1956 ಮೈಸೂರು ವಿಶ್ವವಿದ್ಯಾಲಯ, ಅಪ್ರಕಟಿತ ಸಂಶೋಧನಾ ಮಹಾ ಪ್ರಬಂಧ, ಪುಟ 274
8. Hummudah Abalathi, ಇಸ್ಲಾಂ ಇನ್ ಫೋಕಸ್, 1975 ಅಲೆಗಾರು ಪುಟ 129
9. ಕುರ್‌ಆನ್ 2: 275
10. ಓ. ಎಚ್. ಹುಸೇನ್ ಕುಂಞ, ಭೂ ಮಾಲೀಕರು ಹಾಗೂ ಇತರರು.
11. ಟಿಪ್ಪಣಿ: ಫೆರಿ ರಸ್ತೆಗಳೂ ಈಗಲೂ ತಮ್ಮ ಹಳೆಯ ಹೆಸರನ್ನು ಉಳಿಸಿಕೊಂಡಿರುವುದನ್ನು ಮಂಗಳೂರು, ಕುಂದಾಪುರ, ಮುಲ್ಕಿಗಳಲ್ಲಿ ಕಾಣಬಹುದು.
12. ಓ. ಎಚ್ ಝಕರಿಯಬ್ಬ ಮತ್ತು ಇತರರು ಹಾಗೂ ಕಂದಾಯ ದಾಖಲೆಗಳು

13. ಓ. ಎಚ್. ಬಾಪುಂಞ್ ಬ್ಯಾರಿ, ಅಬ್ದುಲ್ಲಾ ಬ್ಯಾರಿ ಮತ್ತು ಇತರರು. ಟಿಪ್ಪಣಿ : ಮೀನಿನ ಬಲೆಗಳು, ಗಾಳ ಮತ್ತು ಡೈನಮೈಟ್‌ಗಳು ಈಗಲೂ ಕೆಲವೆಡೆ ಬಳಕೆಯಲ್ಲಿರುವುದನ್ನು ಕಾಣಬಹುದು.
14. ಓ.ಎಚ್. ಅಬ್ದುಲ್ ಖಾದರ್, ವ್ಯಾಪಾರಿ, ಬಂಟ್ವಾಳ
15. ಓ.ಎಚ್. ಮಾಮಿಂಞ್ ಮಾಸ್ಟರ್, ಮೊಗ್ರಾಲ್. ಟಿಪ್ಪಣಿ: ಭಂಡಸಾಲೆ, ಪಂಡ್ಯಾಲ್‌ಗಳು ಈಗಲೂ ಇವೆ.
16. ಟಿಪ್ಪಣಿ: ಕೊಬ್ಬರಿ ಮಾಡುವುದು ಮತ್ತು ಮಾರಾಟ ಈಗಲೂ ಜನಪ್ರಿಯ.
17. ಎಚ್. ಆರ್. ಕರುಣಾಕರ್ ಎ. ಸೊಷಿಯೋ-ಎಕನಾಮಿಕ್ ಕಂಡೀಷನ್ಸ್ ಆಫ್ ಎಸ್. ಕೆ. 1860-1956 ಮೈಸೂರು ವಿಶ್ವವಿದ್ಯಾಲಯ, ಅಪ್ರಕಟಿತ ಸಂಶೋಧನಾ ಮಹಾ ಪ್ರಬಂಧ, ಪುಟ 43
18. ಟಿಪ್ಪಣಿ: ವಾರದ ಸಂತೆಗಳು ಈ ಪ್ರದೇಶಗಳಲ್ಲಿ ಈಗಲೂ ನಡೆಯುತ್ತವೆ.
19. ಓ.ಎಚ್. ಉಮರಬ್ಬ ಬ್ಯಾರಿ, ದನಗಳ ವ್ಯಾಪಾರಿ
20. ಹಲವು ಹಿರಿಯ ಸಂದರ್ಶನಗಳನ್ನು ಆಧಾರವಾಗಿಟ್ಟುಕೊಂಡ ನಿರ್ಣಯ
21. ಓ.ಎಚ್. ಮುಹಮ್ಮದ್ ಹಾರೂನ್, ಮಂಗಳೂರು, ಎ.ಆರ್. ಅಹಮದ್ (ನ್ಯಾಯಾಧೀಶರು), ಮಂಗಳೂರು
22. ಓ.ಎಚ್. ಹಾಜಿ ಅಬ್ದುಲ್ ಖಾದರ್. ಉಪ್ಪಳ
23. ಓ.ಎಚ್. ಖಾಸಿಂ ಸಾರಂಗ್, ಉಪ್ಪಳ
24. ಓ.ಎಚ್. ಹಾಜಿ ಅಬ್ದುಲ್ಲಾ, ಮಂಜೇಶ್ವರ
25. ಓ.ಎಚ್. ರಹೀಮ್ ಅಹ್ಮದ್ (ನಿವೃತ್ತ ನ್ಯಾಯಾಧೀಶರು)
26. ಅದೇ
27. ದರಗಳ ಹೋಲಿಕೆಗಳನ್ನು ಅಬ್ದುಲ್ಲಾ ಹಾಜಿಯವರ ದಿನಚರಿಯಿಂದ ತೆಗೆದುಕೊಳ್ಳಲಾಗಿದೆ.
28. ಜಿ.ಓ 29, 1877, ಎನ್. 3171, ಸ್ಪರ್ಕ್ ಎಸ್. ಕೆ. ಮಾನ್ಯುಯಲ್ ಪುಟ 132
29. ಸ್ಪರ್ಕ್ ಎಸ್. ಕೆ. ಮಾನ್ಯುಯಲ್ ಪುಟ 119
30. ಅದೇ ಪುಟ 121
31. ಕೌಚ್‌ಮನ್, ಡಿಸ್ಕ್ರಿಪ್ಟಿವ್ ಸರ್ವೇ 1904-1905 (ADANGAL)

ಅಧ್ಯಾಯ 4

ನಂಬಿಕೆ ಅನುಷ್ಠಾನ ಮತ್ತು ಆಚರಣೆಗಳು

1. ಜಿಲ್ಲೆಯಲ್ಲಿ ಇಸ್ಲಾಮ್

ಕರಾವಳಿ ಜಿಲ್ಲೆ ದಕ್ಷಿಣ ಕನ್ನಡದ ಮುಸ್ಲಿಮರಲ್ಲಿ ಬಹುತೇಕರು ಸುನ್ನಿಗಳು. 19ನೇ ಶತಮಾನ ಮತ್ತು 20ನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ ಶಿಯಾಗಳ ಸಂಖ್ಯೆ ನಗಣ್ಯ ವಾಗಿತ್ತು. ಇಸ್ಲಾಮಿನ ಮೂಲಭೂತ ತತ್ವ ಕಲಿಮಾ.[1] ದಿನದ ಐದು ಸಮಯಗಳ ನಮಾಜು (ಸಲಾತ್) ನಿರ್ವಹಿಸುವುದು, ರಮಝಾನ್ ತಿಂಗಳ ಉಪವಾಸ (ಸೌಮ್) ಮತ್ತು ದಾನ (ಝಕಾತ್) ನೀಡುವುದನ್ನು ಇಸ್ಲಾಮಿನ ಅನುಯಾಯಿಗಳ ಮಟ್ಟಿಗೆ ಕಡ್ಡಾಯ. ಆಯಸ್ಸು ಆರೋಗ್ಯ ಮತ್ತು ಐಶ್ವರ್ಯ ಗಳುಳ್ಳವರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಹಜ್ಜ್ (ಮಕ್ಕಾ ಯಾತ್ರೆ) ಯಾತ್ರೆ ಮಾಡುವುದೂ ಕಡ್ಡಾಯವೇ. ಮಸೀದಿ ಇದ್ದ ಸ್ಥಳದಲ್ಲಿ ಸಮೂಹ ಪ್ರಾರ್ಥನೆ (ಜುಮಾ) ಕೂಡಾ ಕಡ್ಡಾಯ.

ಅರಬ್ ಜಗತ್ತಿನೊಂದಿಗೆ ನೇರ ಸಂಪರ್ಕದಲ್ಲಿದ್ದ ದೀನಾರ್ ಮಿಷನರಿಗಳ ಕೆಲಸ ಮಲಬಾರ್‌ನಿಂದ ವಿಸ್ತರಿಸಿಕೊಂಡದ್ದು ಮತ್ತು ಸೂಫಿ ಸಂತರ ಪ್ರಚಾರಗಳ ಮೂಲಕ ಇಸ್ಲಾಮ್ ಈ ಪ್ರದೇಶಕ್ಕೂ ಬಂತು. ಮಂಗಳೂರು, ಬಾರಕೂರು ಮತ್ತು ಬಸ್ರೂರು ಮತ್ತು ಕರಾವಳಿಯುದ್ದಕ್ಕೂ ಇದ್ದ ಬಂದರುಗಳು ಇಸ್ಲಾಮಿನ ಪ್ರಸಾರಕ್ಕೆ ಪ್ರೋ ದಕ್ಷಿಣದ ಕಾಸರಗೋಡು ಪ್ರದೇಶಕ್ಕೆ ಮಲಬಾರ್‌ನ ಮಾಪಿಳ್ಳೆ ಗಳೊಂದಿಗೆ ಇದ್ದ ಸಂಬಂಧದಿಂದಾಗಿ ಇಸ್ಲಾಮ್ ಬಹುಬೇಗ ಬೆಳೆಯಿತು. ಇದರ ಜೊತೆ ಜೊತೆಯಲ್ಲೇ ಇಸ್ಲಾಮೀ ಜ್ಞಾನ ಶಾಖೆ ಹಾಗೂ ನಂಬಿಕೆಗಳೂ ಬೆಳೆದವು. ನವಾಬರ ಆಳ್ವಿಕೆ ಕೂಡಾ ಈ ಪ್ರದೇಶದಲ್ಲಿ ಇಸ್ಲಾಮ್ ಹರಡಲು ಕಾರಣವಾಯಿತು. ಹನಫಿ ಗಳನ್ನು ಈ ಪ್ರದೇಶಕ್ಕೆ ಪರಿಚಯಿಸಿದ್ದೇ ಈ ಆಳ್ವಿಕೆ. ಕಾಸರಗೋಡು, ಮಂಗಳೂರು ಮತ್ತು ಬಾರಕೂರುಗಳು ಈ ಪ್ರದೇಶದ ಪ್ರಾಚೀನ ಇಸ್ಲಾಮೀ ಕೇಂದ್ರಗಳಾಗಿದ್ದವು ಎನ್ನಲಾಗುತ್ತದೆ. ಮಾಲಿಕ್ ಬಿನ್

ದೀನಾರ್ ಮತ್ತು ಅವರ ತಂಡ ಈ ಊರುಗಳಲ್ಲಿ ಮಸೀದಿಗಳನ್ನೂ ಸ್ಥಾಪಿಸಿದರು. ಈಗ ಬಾರಕೂರಿನ ಮಸೀದಿ ಇಲ್ಲವಾಗಿದೆ. ಮಂಗಳೂರು ಮತ್ತು ಕಾಸರಗೋಡುಗಳು ಈಗಲೂ ಇಸ್ಲಾಮೀ ಕೇಂದ್ರಗಳಾಗಿಯೇ ಉಳಿದಿವೆ. ಈ ಪ್ರದೇಶವನ್ನು ಸಂದರ್ಶಿಸಿದ ಮುಸ್ಲಿಮ್ ಸಂತರು ಒಳನಾಡುಗಳಿಗೂ ಇಸ್ಲಾಮ್‌ನ ಸಂದೇಶವನ್ನು ತಲುಪಿಸಿದರು. ಬಹಳ ಮೊದಲಿನಿಂದಲೇ ಬಾಬಾ ಫಕ್ರುದ್ದೀನ್, ಯೂಸುಫ್ ವಲಿ, ಸೈಯದ್ ಮದನಿ, ಶಾ ಮಿರಾವಲಿ ಮುಂತಾದ ಅನೇಕ ಸಂತರು ವಿವಿಧ ಪ್ರದೇಶಗಳಲ್ಲಿ ಕಾಣಿಸಿಕೊಂಡು ಇಸ್ಲಾಮ್ ಅನ್ನು ತಲುಪಿಸುವುದಕ್ಕೆ ಪ್ರಯತ್ನಿಸಿದರು. ಪರಿಣಾಮವಾಗಿ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಲೇ ಹೋಯಿತೇ ಹೊರತು ಅವರಲ್ಲಿ ಇಸ್ಲಾಮಿ ನಂಬಿಕೆಗಳಿರಲಿಲ್ಲ.[2]

ಸೂಫಿಗಳು ಸಂಚಾರಿಗಳಾಗಿದ್ದರಿಂದ ಯಾವುದೇ ಕೇಂದ್ರವನ್ನು ಬಲಪಡಿಸಲು ಅವರಿಂದ ಸಾಧ್ಯವಾಗಲಿಲ್ಲ. ಈ ಸ್ಥಿತಿ ಹತ್ತೊಂಬತ್ತನೇ ಶತಮಾನದ ಅಂತ್ಯದ ತನಕವೂ ಮುಂದುವರಿಯಿತು. 20ನೇ ಶತಮಾನದ ತನಕವೂ ಧಾರ್ಮಿಕ ಶಿಕ್ಷಕರ ತೀವ್ರ ಕೊರತೆ ಇತ್ತು. ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೂ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಹತ್ತಿರದ ಇಸ್ಲಾಮೀ ಕೇಂದ್ರವಾಗಿದ್ದ ಪೊನ್ನಾಣಿಯನ್ನೇ ಅವಲಂಬಿಸಿದ್ದರು. ಎಡ್ವರ್ಡ್ ಥರ್ಸ್ಟನ್ ಕೂಡಾ ತುಳುನಾಡಿನ ಮುಸ್ಲಿಮರ ಪೊನ್ನಾಣಿ ಅವಲಂಬನೆಯನ್ನು ದೃಢಪಡಿಸುತ್ತಾನೆ. ತೀರಾ ಇತ್ತೀಚಿನ ತನಕವೂ ಪಶ್ಚಿಮ ಕರಾವಳಿಯಲ್ಲಿ ಯಾವುದೇ ಪ್ರಬಲ ಧಾರ್ಮಿಕ ಸಂಸ್ಥೆ ಇಲ್ಲದೇ ಇದ್ದುದರಿಂದ ಪೊನ್ನಾಣಿಯ ಮರ್ಹೂಮ್‌ಗಳೇ ಎಲ್ಲವನ್ನೂ ನಿಯಂತ್ರಿಸುತ್ತಿದ್ದರು. ಪೊನ್ನಾಣಿ ಮತ್ತು ಮಲಬಾರ್‌ಗಳು ಈ ಪ್ರದೇಶಕ್ಕೆ ಅಗತ್ಯವಿದ್ದ ಮೌಲವಿಗಳು ಮತ್ತು ಶಿಕ್ಷಕರನ್ನು ಪೂರೈಸುತ್ತಿದ್ದವು. ಈ ಪ್ರದೇಶದಲ್ಲಿರುವ ಬ್ಯಾರಿಗಳ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳೆಲ್ಲವನ್ನೂ ಕಲಿಸಿಕೊಟ್ಟದ್ದು ಮಲಬಾರ್ ಮತ್ತು ಪೊನ್ನಾಣಿಗಳಿಂದ ಆಮದಾದ ಧರ್ಮ ಪಂಡಿತರು. ಈ ಪ್ರದೇಶದ ಶ್ರೀಮಂತರಾರೂ ಇಲ್ಲಿಯೇ ಒಂದು ಇಸ್ಲಾಮಿಕ್ ಕೇಂದ್ರವನ್ನು ಅಥವಾ ಇಸ್ಲಾಮೀ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಪ್ರಯತ್ನ ಮಾಡದೇ ಇದ್ದದ್ದು ಆಶ್ಚರ್ಯಕರ ವಿಚಾರ.

ಜಿಲ್ಲೆಯಲ್ಲಿ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಯತ್ನ ಇಪ್ಪತ್ತನೇ ಶತಮಾನದಲ್ಲಿ ನಡೆಯಿತು. ಮಲಬಾರ್ ನಿಂದ ವಿದ್ವಾಂಸರನ್ನು ಕರೆಯಿಸಿಕೊಳ್ಳಲಾಯಿತು. ಅವರು ಮಾಪಿಳ್ಳ ಪಠ್ಯಗಳು ಮತ್ತು ಹಾಡುಗಳನ್ನು ತಂದು ಕಲಿಸಿದರು. ಪರಿಣಾಮವಾಗಿ ತುಳುನಾಡಿನ ಬ್ಯಾರಿಗಳು ಇಸ್ಲಾಮ್‌ನ ಬಗ್ಗೆ ತಿಳಿದುಕೊಂಡದ್ದೆಲ್ಲವೂ ಕೇರಳದ ಮಾಪಿಳ್ಳೆಗಳಿಂದ ಎಂಬಂತಾಯಿತು. ಎಲ್ಲಾ ಮುಸ್ಲಿಮರ ಊರುಗಳಲ್ಲಿ ಮಾಪಿಳ್ಳೆ ಬೋಧಕರಿದ್ದರು. ಪರಿಣಾಮವಾಗಿ ಬ್ಯಾರಿಗಳ ಮೇಲೆ ಸಹಜವಾಗಿಯೇ ಅವರ ಪ್ರಭಾವವಿತ್ತು. ಹನಫಿಗಳಿಗೆ ಈ ಸಮಸ್ಯೆ ಇರಲಿಲ್ಲ. ಅವರು ಧಾರ್ಮಿಕ ಶಿಕ್ಷಣಕ್ಕಾಗಿ ದಕ್ಖನದ ವಿದ್ವಾಂಸರು ಅಥವಾ ಉತ್ತರ ಭಾರತದ ವಿದ್ವಾಂಸರನ್ನು ಅವಲಂಬಿಸಿದ್ದರು. ಆದರೆ ಇಲ್ಲಿ ಉರ್ದು ಭಾಷೆ ಸಾಮಾನ್ಯವಾದ ಅಂಶವಾಗಿದ್ದರಿಂದ ಹೆಚ್ಚಿನ ಸಮಸ್ಯೆಯಾಗಲಿಲ್ಲ. ಬ್ಯಾರಿಗಳ ಭಾಷೆ ಮತ್ತು ಮಾಪಿಳ್ಳೆಗಳ ಭಾಷೆಗಳೆರಡೂ ಭಿನ್ನವಾಗಿದ್ದವು. ಇದರಿಂದ ಬ್ಯಾರಿಗಳಿಗೆ ಕಲಿಕೆ ಕಷ್ಟವಾಯಿತು. ಕಾಸರಗೋಡು ಪ್ರದೇಶದಲ್ಲಿ ಮಲಬಾರ್‌ನ ಮಾಪಿಳ್ಳೆಗಳೊಂದಿಗೆ ಬ್ಯಾರಿಗಳ ಸಂಪರ್ಕ ಹೆಚ್ಚಿತ್ತು. ಮಾಪಿಳ್ಳೆಗಳು ಒಂದು ರೀತಿಯಲ್ಲಿ ಬ್ಯಾರಿ

ಭಾಷೆಯನ್ನು ಆಕ್ರಮಿಸಿಕೊಂಡರು. ಪರಿಣಾಮವಾಗಿ ಈ ಪ್ರದೇಶದ ಬ್ಯಾರಿ ಭಾಷೆ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡು ಮಲಯಾಳಂಗೆ ಹೆಚ್ಚು ಹತ್ತಿರವಾದ ಭಾಷೆಯಾಯಿತು. ಆದರೆ ಮಂಗಳೂರು ಪ್ರದೇಶದಲ್ಲಿ ಇಂಥ ಪ್ರಭಾವಗಳಿರಲಿಲ್ಲ. ಅದರಿಂದಾಗಿ ಮುಸ್ಲಿಮರಿಗೆ ತಮ್ಮವರೇ ಆದ ವಿದ್ವಾಂಸರನ್ನು ಕಂಡುಕೊಳ್ಳುವ ಅಗತ್ಯ ಹೆಚ್ಚಾಗಿ ಕಾಣಿಸಿತು.

20ನೇ ಶತಮಾನದಲ್ಲಿ ದಕ್ಷಿಣ ಕನ್ನಡದಲ್ಲಿ ಸುಮಾರು 50ಕ್ಕೂ ಹೆಚ್ಚು ಮುಸ್ಲಿಮರ ಗ್ರಾಮಗಳಿದ್ದವು. ಇಲ್ಲಿ ಮಸೀದಿಗಳಿದ್ದವಷ್ಟೇ ಅಲ್ಲದೆ ಮುಸ್ಲಿಮರಿಗೆ ಸರಿಯಾದ ಮನೆಗಳು ಮತ್ತು ಭೂ ಒಡೆತನವೂ ಇತ್ತು.

ಪಟ್ಟಿ 6 : ಮುಸ್ಲಿಮ್ ವಸತಿ ಪ್ರದೇಶಗಳು[3]

(ಎ)ಮಂಗಳೂರು ನಗರ-ಮಸೀದಿ

1.	ಝೀನತ್ ಭಕ್ಷ್ ಮಸೀದಿ-ದಿನಾರ್ ಪಳ್ಳಿ	ಗೋಳಿಕಟ್ಟ ಬಜಾರ್
2.	ಕಚ್ಚಿ ಮೇಮನ್ ಮಸೀದಿ	(ಹನಫಿ)
3.	ಶಾಮೀರ್ ಮಸೀದಿ	(ಹನಫಿ) ಡೊಂಗರಕೇರಿ
4.	ಜೋಡುಪಳ್ಳಿ ಮಸೀದಿ	ಕುದ್ರೋಳಿ
5.	ನಡುಪಳ್ಳಿ ಮಸೀದಿ	ಕುದ್ರೋಳಿ
6.	ಕಂಡತ್‌ಪಳ್ಳಿ ಮಸೀದಿ	ಕರ್ಬಲಾ ರೋಡ್
7.	ಮುಹಿಯುದ್ದೀನ್ ಮಸೀದಿ	ಬೋಳಾರ
8.	ಬದ್ರಿಯಾ ಮಸೀದಿ	ಕಂದಕ
9.	ಅಸಾರುಲ್ ಇಸ್ಲಾಂ ಮಸೀದಿ	ಕಸಾಯಿಗಲ್ಲಿ

ಈ ಸಂಸ್ಥೆಗಳಲ್ಲಿ ಮದ್ರಸತುಲ್ ಅಝಾರಿಯಾ (1934), ಮದ್ರಸ್ಸತದ್ದರಿಯಾ (ಕಚ್ಚಿ ಮಸೀದಿ) 1945 ಮತ್ತು ಮದ್ರಸಾ ಝೈನುಲ್ ಉಲೂಂ (ಷಾ ಮಿರ್ ಮಸೀದಿ)ಗಳು ಮುಖ್ಯವಾದವು.[4]

(ಬ) ಮಂಗಳೂರು ಪ್ರದೇಶ

1. ಉಳ್ಳಾಲ-ಅಲೇಕಳ
2. ಕೋಟೆಕಾರ್
3. ಮಂಜನಾಡಿ
4. ಕಿನ್ಯ
5. ತಲಪಾಡಿ
6. ಮುನ್ನೂರು
7. ಅಂಬ್ಲಮೊಗರು
8. ಬಂಟ್ವಾಳ

9. ವಳವೂರು
   ಕಡೇಶ್ವಾಲ್ಯ (ಅಜಿಲಮೊಗರು)
10. ಸಜಿಪ
11. ಪಾಣೆಮಂಗಳೂರು (ನಂದಾವರ)
12. ತೋಕೂರು
13. ಸುರತ್ಕಲ್
14. ಬೈಕಂಪಾಡಿ
15. ಅದ್ಯಪಾಡಿ
16. ಮೊಳವೂರು
17. ಮೊಗರ್ (ಪೊಳಲಿ)
18. ಕಣ್ಣೂರು (ಅಡ್ಯಾರ್)
19. ಕಂದಾವರ (ಬೈಲ್)
20. ಮೂಲ್ಕಿ- ಬಪ್ಪನಾಡು
21. ಹಳೆಯಂಗಡಿ
22. ಹೆಜಮಾಡಿ
23. ಕುಂಜಾರ್
24. ಉಳಾಯಿಬೆಟ್ಟು
25. ತೆಂಕ ಉಳಿಪ್ಪಾಡಿ
26. ಬಡಗ ಉಳಿಪ್ಪಾಡಿ
27. ಕರಿಯಂಗಳ
28. ಕಜೆಕಾರ್
29. ಮಣಿನಾಲ್ಕೂರು
30. ತೋಡಾರ್
31. ಸಾಣೂರು
32. ಮೂಲಾರ್ ಪಟ್ಣ
33. ಕೋಟೆ ಬಾಗಿಲು

(ಸಿ) ಕಾಸರಗೋಡು ಪ್ರದೇಶ

1. ಕಾಸರಗೋಡು-ದಿನಾರ್ ಮಸೀದಿ
2. ಮೊಗ್ರಾಲ್
3. ಮುಳಿಯಾರ್-ಪೂವಲ್
4. ಕುಂಬಳೆ-ಕುಂಬೋಲ್
5. ಸಿರಿಯ-ಒಳೆಯಂ

6. ಇಚ್ಲಂಗೋಡು-ದಿನಾರ್ ಪಳ್ಳಿ
7. ಮಂಜೇಶ್ವರ-ಉದ್ಯಾವರ ಪೊಸೊಟ್ಟು
8. ಉಪ್ಪಿನಂಗಡಿ
9. ಪುತ್ತೂರು
10. ಬೆಳ್ಳಾರೆ
11. ಜಮಾಲಾಬಾದ್-ಬೆಳ್ತಂಗಡಿ

(ಡಿ) ಬಾರ್ಕೂರು ಪ್ರದೇಶ

1. ಬಾರ್ಕೂರು
2. ಬಸ್ರೂರು
3. ಬೈಂದೂರು
4. ತೋನ್ಸೆ
5. ಉದ್ಯಾವರ
6. ಉಡುಪಿ

ಟಿಪ್ಪಣಿ

ಈ ಪ್ರದೇಶಗಳಲ್ಲಿ ಹೆಚ್ಚಿನವು ನದಿ ದಡದಲ್ಲಿದ್ದು ಎಲ್ಲೆಡೆಯೂ ಮಸೀದಿಗಳಿವೆ. ಮುಸ್ಲಿಮರ ಜನವಸತಿ ಇರುವ ಎಲ್ಲಾ ಪ್ರದೇಶಗಳನ್ನು ಇಲ್ಲಿ ಸೇರಿಸಲಾಗಿಲ್ಲ. ಇಲ್ಲಿ ಪಟ್ಟಿ ಮಾಡಿರುವುದು ಮುಖ್ಯವಾದ ಸ್ಥಳಗಳನ್ನು ಮಾತ್ರ.

ತುಳುನಾಡು ಜಿಲ್ಲೆಯ ಬ್ಯಾರಿಗಳು ಮತ್ತು ನವಾಯತರು ಶಾಫಿಗಳು. ಇತರರು (ಮೇಮನ್‌ಗಳು ಮತ್ತು ದಕ್ಖನಿಗಳು) ಹನಫಿಗಳು. ಆರಂಭ ಕಾಲದ ಮುಸ್ಲಿಮರು ಇಸ್ಲಾಮಿನ ಮೂಲಭೂತ ವಿಚಾರಗಳೊಂದಿಗೆ ಸ್ಥಳೀಯ ಸಂಪ್ರದಾಯಗಳನ್ನು ಮತ್ತು ಪದ್ಧತಿಗಳನ್ನು ಅನುಸರಿಸುತ್ತಿದ್ದರು. ಎಲ್ಲ ಮುಸ್ಲಿಮರೂ ಕಲಿಮಾ ಎಂಬ ಇಸ್ಲಾಮಿನ ಅತ್ಯಂತ ಮುಖ್ಯ ಕಲ್ಪನೆಗೆ ಬದ್ಧರಾಗಿದ್ದರು. ಇದು ತೌಹೀದ್ ಅಥವಾ ಏಕದೇವತ್ವ ಎಂಬ ಕಲ್ಪನೆಯಾಗಿತ್ತು. ಈ ಕರಾವಳಿಯಲ್ಲಿ ಇಸ್ಲಾಮಿನ ಬೀಜ ಬಿತ್ತಿದ ಅರಬರು ಈ ಕಲಿಮಾವನ್ನು ಮುಸ್ಲಿಮರ ಮನದಲ್ಲಿ ಭದ್ರವಾಗಿ ಬೇರೂರಿಸಿಬಿಟ್ಟರು. ಈ ಪ್ರದೇಶದ ಪ್ರತಿಯೊಬ್ಬ ಮುಸ್ಲಿಮನೂ ಕಲಿಮಾವನ್ನು ಅರಬಿಯಲ್ಲಿ ಪಠಿಸುವುದರೊಂದಿಗೆ ಅದರ ಅರ್ಥವನ್ನೂ ಬಲ್ಲವರಾಗಿದ್ದರು. ಅದು ದೇವರ ಧರ್ಮವಾಗಿತ್ತು. ಪ್ರವಾದಿ ಮುಹಮ್ಮದ್‌ರನ್ನು ಮುಸ್ಲಿಮರು ಹೆಚ್ಚಾಗಿ ಗೌರವಿಸುತ್ತಿದ್ದರು. ಪ್ರವಾದಿಗೆ ನೀಡಲಾಗಿದ್ದ ಈ ವಿಶೇಷ ಮಹತ್ವದಿಂದಾಗಿ ಪಾಶ್ಚಾತ್ಯರು ಮುಸ್ಲಿಮರನ್ನು ಮಹಮ್ಮದೀಯರು ಎಂದು ಕರೆಯುವಂತೆ ಮಾಡಿತು. ಧರ್ಮ ಬೋಧಕರನ್ನು (ಮೌಲವಿಗಳನ್ನು) ಮಲಬಾರ್‌ನಿಂದ ಕರೆಸಿಕೊಳ್ಳುವುದು ಅನಿವಾರ್ಯವಾಗಿದ್ದರಿಂದ ಅವರು ಮತ್ತು ಸ್ಥಳೀಯ ಮುಸ್ಲಿಮರ ನಡುವೆ ಇದ್ದ ಭಾಷೆಯ ಅಂತರವು ತರಬೇತಿಯ ಪ್ರಕ್ರಿಯೆಯನ್ನು ಸಂಕೀರ್ಣಗೊಳಿಸಿತು. ಕಲಿಮಾ ಓದುವುದನ್ನು ಹೊರತುಪಡಿಸಿ ಇಸ್ಲಾಮಿನ ಬೇರಾವ

ಜ್ಞಾನವನ್ನೂ ಹೊಂದಿರದ ಮುಸ್ಲಿಮರ ದೊಡ್ಡದೊಂದು ವಿಭಾಗ ಅಸ್ತಿತ್ವದಲ್ಲಿತ್ತು. ಹೊಸ ಧರ್ಮ ಸ್ವೀಕರಿಸಿದ ನಂತರವೂ ಅವರ ಹಳೆಯ ಪದ್ಧತಿ ಮತ್ತು ಸಂಪ್ರದಾಯಗಳು ಇನ್ನೂ ಭದ್ರವಾಗಿದ್ದವು. ಪಳ್ಳಿಯನ್ನು ದೇವಸ್ಥಾನ (ಟೆಂಪಲ್ ಆಫ್ ಗಾಡ್) ಎಂದು ಭಾವಿಸುತ್ತಿದ್ದ ಮತ್ತು ಮಸೀದಿಗೆ ನೇರ್ಚೆ (ಹರಕೆ) ಹೊರುತ್ತಿದ್ದ ಮುಸ್ಲಿಮರೂ ಇದ್ದರು. ನಾಣ್ಯಗಳಲ್ಲದೆ ತೈಲ, ಚಿನ್ನದಿಂದ ತಯಾರಿಸಿದ ಅಂಗಾಂಗಗಳನ್ನು ಮಸೀದಿ ಅಥವಾ ದರ್ಗಾಗಳಿಗೆ ಕಾಣಿಕೆ ನೀಡಲಾಗುತ್ತಿತ್ತು. ಈ ದರ್ಗಾಗಳು ಮಸೀದಿಗೆ ಅಂಟಿಕೊಂಡಿರುತ್ತಿದ್ದವು. ಇದೊಂದು ಸಾಮಾನ್ಯ ಪದ್ಧತಿಯಾಗಿತ್ತು. ಪ್ರತಿಯೊಂದು ಮಸೀದಿಯಲ್ಲೂ ಒಂದು ಹಣದ ಡಬ್ಬಿ ಅಥವಾ ಸಾಮಾನ್ಯ ಡಬ್ಬಿಯನ್ನು ಇಂತಹ ನೇರ್ಚೆಗಳನ್ನು ಹಾಕುವುದಕ್ಕಾಗಿ ಇರಿಸಲಾಗುತ್ತಿತ್ತು. ತುಳುನಾಡು ಜಿಲ್ಲೆಯಲ್ಲಿ ಇಂದಿಗೂ ದೇವಸ್ಥಾನ ಮತ್ತು ಮಸೀದಿಗಳಲ್ಲಿ ಹರಕೆ ಅಥವಾ ನೇರ್ಚೆಯ ಡಬ್ಬಿಗಳು ಅತ್ಯಂತ ಸಾಮಾನ್ಯವಾಗಿವೆ. ಹತ್ತೊಂಭತ್ತನೇ ಶತಮಾನದ ಹೊತ್ತಿಗೆ ಹಿಂದೂಗಳು ಮತ್ತು ಮುಸ್ಲಿಮರು ಸಮಾನವಾಗಿ ಇಂತಹ ಡಬ್ಬಿಗಳಿಗೆ ನಾಣ್ಯಗಳನ್ನು ಹಾಕುವ ಪರಿಪಾಠ ರೂಢಿಸಿಕೊಂಡಿದ್ದರು. ಅದೇ ರೀತಿ ಮಸೀದಿಗಳಲ್ಲಿ ದೀಪ ಉರಿಸಲು ಎಣ್ಣೆಯನ್ನು ಕಾಣಿಕೆ ನೀಡುವುದು ಅಥವಾ ಅಗರಬತ್ತಿ ಅಥವಾ ಪೌಡರ್‌ಗಳನ್ನು ಕಾಣಿಕೆ ನೀಡುವುದು ಮಾಮೂಲಾಗಿತ್ತು. ಇಂತಹ ಎಲ್ಲ ಸಂಪ್ರದಾಯಗಳ ಮೂಲ ಇದ್ದದ್ದು ಸ್ಥಳೀಯ ಕಟ್ಟಳೆಗಳಲ್ಲಿ. ಕಾಸರಗೋಡು ವಿಭಾಗದಲ್ಲಿ ಇಸ್ಲಾಮ್‌ನಿಂದ ಆದ ಪ್ರಭಾವಕ್ಕೆ ಇನ್ನೊಂದು ವಿಶೇಷತೆಯಿದೆ.[5] ಮಲಬಾರ್‌ನ ಮಾಪಿಳ್ಳೆಗಳಿಗೆ ಅತ್ಯಂತ ಹತ್ತಿರದಲ್ಲಿದ್ದ ಕಾರಣ ಅವರ ಸಂಪ್ರದಾಯ, ಸಂಸ್ಕೃತಿಗಳು ಕೂಡಾ ಮಾಪಿಳ್ಳೆಗಳಿಗೆ ಹೆಚ್ಚು ನಿಕಟವಾಗಿದ್ದವು. ಜಿಲ್ಲೆಯ ಇತರ ಭಾಗಗಳ ಮುಸ್ಲಿಮರಿಗೆ ಹೋಲಿಸಿದರೆ ಇವರು ಹೆಚ್ಚು ಧಾರ್ಮಿಕ ನಿಷ್ಠೆಯನ್ನು ಹೊಂದಿದ್ದರು.

ಸಲಾತ್ ಅಥವಾ ಪ್ರಾರ್ಥನೆ ಎಂಬುದು ಇನ್ನೊಂದು ಮುಖ್ಯ ಸಂಪ್ರದಾಯ. ಮಾಪಿಳ್ಳೆಗಳು ಇದನ್ನು ನಿಸ್ಕಾರಮ್ ಎಂದು ಕರೆದರು. ಇದು ನಮಸ್ಕಾರಮ್ ಎಂಬುದರ ಸಂಕ್ಷಿಪ್ತ ರೂಪವಾಗಿತ್ತು. ಬ್ಯಾರಿಗಳು ಇದನ್ನೇ ನಿಸ್ಕಾರ ಎಂದು ಕರೆದರು. ಈ ಕಡ್ಡಾಯ ಸಂಪ್ರದಾಯವನ್ನು ಪರಿಪೂರ್ಣವಾಗಿ ನಿರ್ವಹಿಸಬೇಕಾದರೆ ಹಲವು ಷರತ್ತುಗಳಿದ್ದವು. ಮೌಲ್ವಿಗಳು ಅತ್ಯಂತ ಸಣ್ಣ ವಯಸ್ಸಿನಲ್ಲೇ ಮಕ್ಕಳಿಗೆ ಇದನ್ನು ಕಲಿಸುತ್ತಿದ್ದರು. ಜಿಲ್ಲೆಯಲ್ಲಿ ಮೌಲ್ವಿಗಳು ಅತ್ಯಂತ ವಿರಳವಾಗಿದ್ದರಿಂದ ಈ ಬೋಧನೆಯನ್ನು ನಿರ್ಲಕ್ಷಿಸಲಾಯಿತು. ಕೆಲವೊಮ್ಮೆ ಪೋಷಕರು ಶ್ರದ್ಧಾವಂತ ಮುಸ್ಲಿಮರಾಗಿದ್ದರೆ ಅವರು ತಮ್ಮ ಮಕ್ಕಳಿಗೆ ಇದನ್ನು ಕಲಿಸುತ್ತಿದ್ದರು. ಆದರೆ ಮಂಗಳೂರು ಪ್ರದೇಶದಲ್ಲಿ ಹಲವರು ಇದನ್ನು ಕಡೆಗಣಿಸಿದರು ಮತ್ತು ಮಸೀದಿಗಳಲ್ಲಿ ಮೌಲ್ವಿಗಳು ಮಾಡುತ್ತಿದ್ದುದನ್ನೇ ಅನುಕರಿಸಿದರು. ಅದೇ ರೀತಿ ವಾರಕ್ಕೊಮ್ಮೆ ಶುಕ್ರವಾರ ಮಾತ್ರ ಮಸೀದಿಗೆ ಹೋಗುವ ದೊಡ್ಡ ಸಂಖ್ಯೆಯ ಮುಸ್ಲಿಮರೂ ಇದ್ದರು. ಇವರು ಉಳಿದ ನಿಸ್ಕಾರಗಳನ್ನು ಮನೆಗಳಲ್ಲೇ ನಿರ್ವಹಿಸುತ್ತಿದ್ದರು.[6] ಅವರು ಮೌಲ್ವಿಗಳನ್ನು ಆದರಿಸುತ್ತಿದ್ದರು ಮತ್ತು ಎಲ್ಲ ರೀತಿಯ ದೇಣಿಗೆಗಳನ್ನು ನೀಡುತ್ತಿದ್ದರು. ಧಾರ್ಮಿಕ ಶಿಕ್ಷಣ ಮತ್ತು ಜ್ಞಾನದ ಕೊರತೆಯಿಂದಾಗಿ ಈ ಪರಿಸ್ಥಿತಿ ಉದ್ಭವವಾಗಿತ್ತು.

ಶುದ್ಧಿಯು ನಿಸ್ಕಾರದ ಅತ್ಯಂತ ಮುಖ್ಯ ಷರತ್ತು. ಮದ್ರಸಾಗಳಲ್ಲಿ ವುಝೂ (ಅಂಗ ಸ್ನಾನ) ಮತ್ತು ಗುಸ್ಲ್ (ಕಡ್ಡಾಯ ಸ್ನಾನ)ವನ್ನು ಬೋಧಿಸಲಾಗುತ್ತಿತ್ತು. ಇದರ ಪ್ರಾಯೋಗಿಕ

ಕಲಿಕೆಯನ್ನು ಪೋಷಕರಿಗೆ ಬಿಟ್ಟುಬಿಡಲಾಗಿತ್ತು. ಕಾಸರಗೋಡು ಜಿಲ್ಲೆಯು ಮಲಬಾರ್‌ಗೆ ಹತ್ತಿರವಾಗಿದ್ದುದರಿಂದ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತಿದ್ದರು. ಕಾಸರಗೋಡಿನಲ್ಲಿ ಇಸ್ಲಾಮೀ ಬೋಧನೆಯ ಅತ್ಯಂತ ಹಳೆಯ ಕೇಂದ್ರ ಅಸ್ತಿತ್ವದಲ್ಲಿತ್ತು. ಇಸ್ಲಾಮೀ ಆಚರಣೆ ಮತ್ತು ಆದರ್ಶಗಳಲ್ಲಿ ಕಾಸರಗೋಡು ಪ್ರದೇಶವು ಹೆಚ್ಚು ಪರಿಪೂರ್ಣತೆಯನ್ನು ಸಾಧಿಸಿತ್ತು. ಇದಕ್ಕಿಂತಲೂ ಹೆಚ್ಚಾಗಿ ಕಾಸರಗೋಡು ಸಹಿತ ಮಲಬಾರ್‌ನ ಮೌಲ್ವಿಗಳಿಗೆ ಬ್ಯಾರಿ ಭಾಷೆ ಅತ್ಯಂತ ಕಠಿಣ ಮಾಧ್ಯಮವಾಗಿತ್ತು. ಅವರನ್ನು ಅಧ್ಯಾಪಕರಾಗಿ ನೇಮಿಸಿಕೊಂಡರೂ ಕುರ್‌ಆನ್ ಪಠಣವೊಂದನ್ನು ಹೊರತು ಪಡಿಸಿ ಅವರು ಪಾಠ ಮಾಡುತ್ತಿದ್ದುದು ಮಕ್ಕಳಿಗೆ ಅರ್ಥವಾಗುತ್ತಿರಲಿಲ್ಲ. ಇಪ್ಪತ್ತನೇ ಶತಮಾನದಲ್ಲೂ ಈ ರೀತಿಯ ಕೊರತೆಯು ಮಂಗಳೂರಿನಲ್ಲಿ ಸಾರ್ವತ್ರಿಕವಾಗಿತ್ತು. ಆದರೆ ಇದನ್ನು ಸುಧಾರಿಸಲು ಹಲವಾರು ಪ್ರಯತ್ನಗಳು ನಡೆದವು. ಹತ್ತೊಂಭತ್ತನೇ ಶತಮಾನದಲ್ಲಿ ಮಸೀದಿಗಳ ಸಂಖ್ಯೆ ವಿರಳವಾಗಿತ್ತು ಮತ್ತು ಮಸೀದಿಗಾಗಿ ಮೈಲುಗಟ್ಟಲೆ ನಡೆಯಬೇಕಾಗಿತ್ತು. ಹೀಗಾಗಿ ಶ್ರದ್ಧಾವಂತ ಮುಸ್ಲಿಮರು ಮಾತ್ರ ಮಸೀದಿಗೆ ಹೋಗುತ್ತಿದ್ದರು. ಇಪ್ಪತ್ತನೇ ಶತಮಾನದ ವೇಳೆಗೆ ಜಿಲ್ಲೆಯಲ್ಲಿ ಇಸ್ಲಾಮಿನ ಪುನಶ್ಚೇತನದ ಒಂದು ಹೊಸ ಶಕೆ ಆರಂಭಗೊಂಡಿತು.

ಉಪವಾಸ (ಸೌಮ್) ಇಸ್ಲಾಮಿನ ಇನ್ನೊಂದು ಪ್ರಮುಖ ಆಚರಣೆ. ಪ್ರತಿಯೊಬ್ಬ ಮುಸ್ಲಿಮನೂ ರಮ್‌ಝಾನ್ ತಿಂಗಳಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಉಪವಾಸ ಆಚರಿಸಬೇಕು. ಇದನ್ನು ನೋಂಬು ಎಂದು ಮಾಪಿಳ್ಳೆ ಭಾಷೆಯಲ್ಲಿ ಕರೆಯಲಾಗುತ್ತದೆ. ಸಾಮಾನ್ಯವಾಗಿ ಶ್ರದ್ಧಾವಂತ ಮುಸ್ಲಿಮ್ ಪುರುಷರು ಮತ್ತು ಮಹಿಳೆಯರು ಇದನ್ನು ಆಚರಿಸುತ್ತಾರೆ. ಇದೊಂದು ಕಠಿಣ ಆಚರಣೆ. ಹೀಗಾಗಿ ಸಂಕಲ್ಪ ಶಕ್ತಿಯ ಕೊರತೆ ಹೊಂದಿದವರು ಇದನ್ನು ಕಡೆಗಣಿಸುತ್ತಿದ್ದರು. ಝಕಾತ್ ಅಥವಾ ದಾನ ನೀಡುವುದನ್ನು ಎಲ್ಲ ಶ್ರೀಮಂತ ವರ್ತಕರು ಮತ್ತು ಭೂಮಾಲಿಕರು ಶ್ರದ್ಧೆಯಿಂದ ಪಾಲಿಸುತ್ತಿದ್ದರು. ಭಾರಿ ಸಂಖ್ಯೆಯ ಬಡವರು ಮತ್ತು ನಿರ್ಗತಿಕರು ಅವರನ್ನು ಸಂಪರ್ಕಿಸುತ್ತಿದ್ದುದರಿಂದ ಇದಕ್ಕೆ ಒಂದು ವಿಶೇಷ ಆಕರ್ಷಣೆಯಿತ್ತು. ಮುಸ್ಲಿಮೇತರರು ಕೂಡಾ ದಾನವನ್ನು ಪಡೆಯುತ್ತಿದ್ದರು. ಅಮಾಯಕ ಮುಸ್ಲಿಮ್ ವರ್ತಕರನ್ನು ದಾರಿ ತಪ್ಪಿಸಿ ಝಕಾತನ್ನು ಕಬಳಿಸುತ್ತಿದ್ದ ಮೌಲ್ವಿಗಳೂ ಇದ್ದರು. ಆದರೆ ಇಂತಹ ಚಟುವಟಿಕೆಗಳು ಇಪ್ಪತ್ತನೇ ಶತಮಾನದ ವೇಳೆಗೆ ಕಡಿಮೆಯಾಗತೊಡಗಿದವು. ಹಜ್ಜ್ ಇನ್ನೊಂದು ಮೂಲಭೂತ ಕಲ್ಪನೆಯಾಗಿತ್ತು. ಪ್ರತಿಯೊಬ್ಬ ಸ್ಥಿತಿವಂತ ಮುಸ್ಲಿಮನೂ ಜೀವನದಲ್ಲಿ ಕನಿಷ್ಠ ಒಂದು ಬಾರಿಯಾದರೂ ಹಜ್ಜ್ - ಮಕ್ಕಾದ ತೀರ್ಥಯಾತ್ರೆ ಕೈಗೊಳ್ಳಲೇಬೇಕು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಕೇವಲ ಕೆಲವು ಹಾಜಿಗಳು ಮಾತ್ರ ಇದ್ದರು. ನಂತರದ ವರ್ಷಗಳಲ್ಲಿ ಅವರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಇಪ್ಪತ್ತನೇ ಶತಮಾನದ ಆರಂಭ ಕಾಲದಲ್ಲಿ ಕಾಸರಗೋಡಿನಲ್ಲಿ ಮಂಗಳೂರಿಗಿಂತ ಹೆಚ್ಚಿನ ಸಂಖ್ಯೆಯ ಹಾಜಿಗಳಿದ್ದರು. ಗ್ರಾಮೀಣ ಪ್ರದೇಶದಲ್ಲೂ ಸಾಕಷ್ಟು ಸಂಖ್ಯೆಯ ಹಾಜಿಗಳಿದ್ದರು. ಬಾವಾ ಹಾಜಿ, ಮಂಗಳೂರಿನಲ್ಲಿದ್ದ ಹಾಜಿಗಳೆಂದರೆ ಕುಂಞಾಮು ಹಾಜಿ, ಅಬ್ದುಲ್ ಕಾದರ್ ಹಾಜಿ (ಬೆಂಡಿ ಹಾಜಾರ್) ಇತ್ಯಾದಿ. ಇಚ್ಲಂಗೋಡಿನ ಅಬ್ದುಲ್ಲಾ ಹಾಜಿ ಮತ್ತು ಮಂಜೇಶ್ವರದ ಅಬ್ದುಲ್ ಕಾದರ್ ಹಾಜಿ ಗ್ರಾಮೀಣ ಪ್ರದೇಶಗಳಲ್ಲಿದ್ದ ಹಾಜಿಗಳು. ಈ ಸಾಕ್ಷ್ಯಾಧಾರಗಳಿಂದ ತುಳುನಾಡಿನ ಮುಸ್ಲಿಮರು

ಇಸ್ಲಾಮನ್ನು ನಿಧಾನಗತಿಯಿಂದ ಬೆಳೆಸುತ್ತಾ ಹೋದರು ಎಂಬುದು ಸ್ಪಷ್ಟವಾಗುತ್ತದೆ. ಮಾಪಿಳ್ಳೆಗಳು ಅವರ ಮೇಲೆ ಇಸ್ಲಾಮನ್ನು ಹೇರಿದರು ಎಂಬುದು ಕೂಡಾ ಸ್ಪಷ್ಟ. ಆರಂಭದ ಕಾಲದಲ್ಲಿ ಕಾಸರಗೋಡನ್ನು ಹೊರತುಪಡಿಸಿ ಪ್ರಮುಖ ಶಾಲೆಗಳು (ಮದ್ರಸಾಗಳು) ಬೇರೆಲ್ಲೂ ಅಸ್ತಿತ್ವದಲ್ಲಿರಲಿಲ್ಲ. ಕ್ರಿ.ಶ. 1892, ಜಿಲ್ಲೆಯಲ್ಲಿ ಕೇವಲ 77 ಮದ್ರಸಾಗಳಿದ್ದವು. ಇಲ್ಲಿ 1238 ವಿದ್ಯಾರ್ಥಿಗಳು ಕಲಿಯುತ್ತಿದ್ದರು.[7] ಈ ಪೈಕಿ ಹೆಚ್ಚಿನವು ಕಾಸರಗೋಡಿನಲ್ಲಿದ್ದವು. ಆದರೆ ಇವೆಲ್ಲವೂ ಕುರ್‌ಆನ್ ಸ್ಕೂಲ್‌ಗಳಾಗಿದ್ದವು. ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಜಿಲ್ಲೆಯ ಮುಸ್ಲಿಮರಿಗೆ ಇದು ಅತ್ಯಂತ ಕಡಿಮೆಯೆಂಬುದು ಸ್ವಯಂ ವೇದ್ಯವಾಗುತ್ತದೆ. ಇದು ಈ ಪ್ರದೇಶದಲ್ಲಿ ಧರ್ಮವನ್ನು ಕಡೆಗಣಿಸಲಾಗಿತ್ತೆಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಹತ್ತೊಂಭತ್ತನೇ ಶತಮಾನದಲ್ಲಿ ಮಲಬಾರ್ ಇದಕ್ಕಿಂತ ಉತ್ತಮ ಸ್ಥಿತಿಯಲ್ಲಿತ್ತು.

ಇಪ್ಪತ್ತನೇ ಶತಮಾನದಲ್ಲಿ ಮುಸ್ಲಿಮರಿಗೆ ಧಾರ್ಮಿಕ ಮತ್ತು ಭೌತಿಕ ವಿಷಯಗಳಲ್ಲಿ ಶಿಕ್ಷಣ ನೀಡುವ ಕುರಿತು ಒಂದು ಸಕ್ರಿಯ ಆಂದೋಲನವೇ ನಡೆಯಿತು. ಪರಿಸ್ಥಿತಿಯನ್ನು ಸುಧಾರಿಸಲು ಹಲವಾರು ಗಣ್ಯರು ಪ್ರಯತ್ನಿಸಿದರು. ಅವರು ಮುಸ್ಲಿಮ್ ಸಂಸ್ಕೃತಿಯ ಪುನಶ್ಚೇತನಕ್ಕೂ ಪ್ರಯತ್ನಿಸಿದರು. ಸಮುದಾಯಕ್ಕೆ ಸೇವೆ ಸಲ್ಲಿಸಿದವರಲ್ಲಿ ಹಾಜಿ ಕುಂಞ್ ಮೌಲವಿಯವರ ಹೆಸರು ಉಲ್ಲೇಖಾರ್ಹವಾಗಿದೆ. ಅವರು ಧಾರ್ಮಿಕ ಶಿಕ್ಷಣವನ್ನು ಆರಂಭಿಸಿದರು. ಅವರು ಮುನೀರುಲ್ ಇಸ್ಲಾಮ್ ಎಸೋಸಿಯೇಶನ್ ಎಂಬ ಸಂಸ್ಥೆಯನ್ನು ಮುಸ್ಲಿಮರ ಶಿಕ್ಷಣದ ಪುರೋಗತಿಗಾಗಿ ಸ್ಥಾಪಿಸಿದರು. ಅವರು ಕ್ರಿ.ಶ. 1904ರಲ್ಲಿ ಮುನೀರುಲ್ ಇಸ್ಲಾಮ್ ಶಾಲೆಯನ್ನು ಆರಂಭಿಸಿದರು ಮತ್ತು ಅಲ್ಲಿನ ಮೊದಲ ಶಿಕ್ಷಕರಾಗಿದ್ದರು. ಅವರು ಬದ್ರಿಯಾ ಮಸೀದಿಯ ಮೊದಲ ಇಮಾಮರೂ ಆಗಿದ್ದರು. ಅವರು ಮುಸ್ಲಿಮ್ ಮಕ್ಕಳ ಶಿಕ್ಷಣ ಮಟ್ಟವನ್ನು ಸುಧಾರಿಸಲು ಸತತ ಪ್ರಯತ್ನ ನಡೆಸಿದರು.[8]

ಖಾಜಿ ಅಬ್ದುಲ್ಲಾ ಹಾಜಿ

ಅಬ್ದುಲ್ಲಾ ಮುಸ್ಲಿಯಾರ್ ಹಿ.ಶ. 1261ರಲ್ಲಿ ತೃಕರಿಪುರದ ಕೋಝುಂಕಾನ್‌ನಲ್ಲಿ ವಲಿಯ ಅಹಮದ್ ಮೌಲವಿಯ ಮಗನಾಗಿ ಜನಿಸಿದರು. ಅವರು ತಮ್ಮ ಬದುಕನ್ನು ಧರ್ಮದ ಕಲಿಕೆಗಾಗಿ ಮುಡಿಪಾಗಿಟ್ಟು ಅರಬ್ ಮತ್ತು ಇಸ್ಲಾಮಿಕ್ ಸಿದ್ಧಾಂತದ ದೊಡ್ಡ ಪಂಡಿತರಾಗಿ ಮಾರ್ಪಟ್ಟರು. ಅವರು ಪೊನ್ನಾನಿಗೆ ತೆರಳಿ ಅಲ್ಲಿಂದ ದೊಡ್ಡ ಬಿರುದು ಮತ್ತು ಸಮ್ಮಾನವನ್ನು ಪಡೆದು ಹಿಂದಿರುಗಿದರು. ಅನಂತರ ಅವರು ಮಕ್ಕಾಕ್ಕೆ ತೆರಳಿ ಅಲ್ಲಿನ ಇಮಾಮರ ಅಧೀನದಲ್ಲಿ ಶಿಕ್ಷಣ ಪಡೆದರು. ಜತೆಗೆ ಹೆಚ್ಚುವರಿ ವಿದ್ವತ್ತನ್ನು ಗಳಿಸಿದರು. ಕಾಸರಗೋಡಿನ ಖಾಝಿಯ ನಿಧನಾ ನಂತರ ಅವರು ಕಾಸರಗೋಡಿನ ಖಾಜಿಯಾಗಿ ನೇಮಕಗೊಂಡರು. ಕಾಸರಗೋಡಿನ ಖಾಜಿಯಾಗಿ ಅವರು 40 ವರ್ಷ ಸೇವೆ ಸಲ್ಲಿಸಿದರು. ಕಾಸರಗೋಡು ಮತ್ತು ಇಸ್ಲಾಮ್ ಧರ್ಮಕ್ಕಾಗಿ ಅವರು ಶ್ರೇಷ್ಠ ಕೊಡುಗೆಗಳನ್ನು ನೀಡಿದರು. ಕಾಸರಗೋಡು ದಕ್ಷಿಣ ಕೆನರಾ ಜಿಲ್ಲೆಯ ಪ್ರಖ್ಯಾತ ಧಾರ್ಮಿಕ ಕೇಂದ್ರವಾಗಿ ಪರಿವರ್ತನೆಗೊಂಡಿತು ಮತ್ತು ಅದು ಇಸ್ಲಾಮಿಕ್ ಶಿಕ್ಷಣದ ಕೇಂದ್ರವಾಗಿಯೂ ಮಾರ್ಪಟ್ಟಿತು. ಅವರ ಪ್ರಸಿದ್ಧಿ ನಾಲ್ದೆಸೆಗೂ ಹರಡಿತು ಮತ್ತು ಅವರು ಜಿಲ್ಲೆಯ ಅತಿ ದೊಡ್ಡ ವಿದ್ವಾಂಸರಾಗಿ

ಮಾರ್ಪಟ್ಟರು. ಕ್ರಿ.ಶ. 1893ರಲ್ಲಿ (ಹಿ.ಶ. 1312) ಅವರು ಮಂಗಳೂರಿನ ಖಾಜಿಯಾಗಿ ಚುನಾಯಿತರಾದರು. ಅವರ ಪ್ರಯತ್ನಗಳಿಂದ ಶಿಕ್ಷಣ ಸಂಸ್ಥೆಗಳು (ಕುರ್‌ಆನ್ ಸ್ಕೂಲ್‌ಗಳು) ಮತ್ತಿತರ ಒಳ್ಳೆಯ ಕಾರ್ಯಗಳು ನಡೆದವು. ಅವರ ಪ್ರಯತ್ನಗಳಿಂದಾಗಿ ಮುನೀರುಲ್ ಇಸ್ಲಾಮ್ ಸ್ಕೂಲ್ ಆರಂಭಗೊಂಡಿತು. ಅವರು ಸ್ಕೂಲ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅವರು ಅಝೀಝಿಯಾ ಎಜುಕೇಶನ್ ಸೊಸೈಟಿ, ಕಾಸರಗೋಡು, ಇದರ ಅಧ್ಯಕ್ಷರೂ ಆಗಿದ್ದರು. ಕ್ರಿ.ಶ. 1898ರಲ್ಲಿ ಒಮ್ಮೆ ಬರ ಪರಿಸ್ಥಿತಿ ತಲೆದೋರಿತ್ತು. ಮಳೆಯ ಅಭಾವದಿಂದಾಗಿ ಜನರು ನೀರಿಗಾಗಿ ಹಾಹಾಕಾರ ಪಡುವಂತಾಗಿತ್ತು. ಅವರು ದೇವರಲ್ಲಿ ಪ್ರಾರ್ಥಿಸಿದ ಪರಿಣಾಮವಾಗಿ ಮಳೆ ಬಂತು ಮತ್ತು ಜನರು ಬರದಿಂದ ಮುಕ್ತಿ ಪಡೆದರು ಎಂದು ಹೇಳಲಾಗುತ್ತದೆ. ಇಂತಹ ಹಲವಾರು ಪವಾಡಸದೃಶ ಸಾಧನೆಗಳನ್ನು ಅವರು ಮಾಡಿದ್ದರು ಎನ್ನಲಾಗುತ್ತದೆ.

ಅವರು ಕೈಗೊಂಡ ಸುಧಾರಣೆಗಳ ಪೈಕಿ ಮೊಹರ್ರಮ್ ಆಚರಣೆಯನ್ನು ನಿಲ್ಲಿಸಲು ಅವರು ನಡೆಸಿದ ಪ್ರಯತ್ನ ಮಂಗಳೂರಿನ ಮುಸ್ಲಿಮರಲ್ಲಿ ಅಸಮಾಧಾನ ಮೂಡಿಸಿತು. ಮೊಹರ್ರಮ್‌ನಲ್ಲಿ ಅಲಾವಿ ಹಬ್ಬ ಎಂಬ ಒಂದು ಜನಪ್ರಿಯ ಆಚರಣೆ ಮಂಗಳೂರಿನಲ್ಲಿ ನಡೆಯುತ್ತಿತ್ತು. ಇತರ ಯಾವುದೇ ಸ್ಥಳೀಯ ಹಬ್ಬಗಳಂತೆ ಜನಪದ ನೃತ್ಯ, ಸಂಗೀತ, ಪಟಾಕಿ ಸಿಡಿತ, ಮೆರವಣಿಗೆ ಇತ್ಯಾದಿಗಳ ಜತೆಗೆ ಇದನ್ನೂ ಆಚರಿಸಲಾಗುತ್ತಿತ್ತು. ಅದರ ಬಹುಮುಖಿ ಸ್ವರೂಪದಿಂದಾಗಿ ಜಾತಿ ಮತ್ತು ಧರ್ಮದ ಭೇದವಿಲ್ಲದೆ ಎಲ್ಲರೂ ಅದರಲ್ಲಿ ಪಾಲ್ಗೊಳ್ಳುತ್ತಿದ್ದರು. ಕರ್ಬಲಾ ಮೈದಾನದ ಆಶೂರಾ ದೇಗುಲದ ಬಳಿ ಭಾರಿ ಸಂಖ್ಯೆಯ ಜನರು ಸೇರುತ್ತಿದ್ದರು. ಅಲ್ಲಿ ಅಗ್ನಿಕುಂಡಕ್ಕೆ ನೇರ್ಚೆಗಳನ್ನು ಸಲ್ಲಿಸಲಾಗುತ್ತಿತ್ತು. ಇದು ಜನರ ಆಕರ್ಷಣೆಯ ಕೇಂದ್ರವಾಗಿತ್ತಾದರೂ ಈ ಆಚರಣೆಗೆ ಇಸ್ಲಾಮಿನ ಮಾನ್ಯತೆ ಇರಲಿಲ್ಲ. ಹೀಗಾಗಿ ಜಿಲ್ಲೆಯ ಖಾಜಿ ಇದನ್ನು ನಿಲ್ಲಿಸಲು ಪ್ರಯತ್ನಿಸಿದರು. ಆದರೆ ಈ ಬಗೆಯ ಸುಧಾರಣೆಗಳಿಗೆ ಜಿಲ್ಲೆಯ ಪ್ರಮುಖ ಮುಸ್ಲಿಮ್ ನಾಯಕರಿಂದ ವಿರೋಧ ವ್ಯಕ್ತವಾಯಿತು. ಇದರಿಂದ ಅಸಂತುಷ್ಟರಾದ ಖಾಜಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಹುಟ್ಟೂರಿಗೆ ವಾಪಸ್ ಹೋದರು. ಸ್ವಲ್ಪ ಸಮಯದ ನಂತರ ಮಂಗಳೂರಿನಲ್ಲಿ ಪ್ಲೇಗ್ ಕಾಣಿಸಿಕೊಂಡಿತು. ನೂರಾರು ಜನರು ಸಾವಿಗೀಡಾದರು. ಜನರು ಇದಕ್ಕೂ ಖಾಜಿಯ ಅತೃಪ್ತಿಗೂ ತಾಳೆ ಹಾಕತೊಡಗಿದರು. ನಂತರ ಮಂಗಳೂರಿನ ಮುಸ್ಲಿಮ್ ನಾಯಕರು ಕಾಸರಗೋಡಿಗೆ ತೆರಳಿ ಖಾಜಿಯೊಂದಿಗೆ ಕ್ಷಮೆ ಕೋರಿ ಅವರನ್ನು ವಾಪಸ್ ಬರುವಂತೆ ಮನವೊಲಿಸಿದರು ಎನ್ನಲಾಗುತ್ತದೆ. ಅವರು ಸಮಾಧಾನಗೊಂಡು ಮತ್ತೆ ಮಂಗಳೂರಿಗೆ ಆಗಮಿಸಿದರು. ಅವರ ದುವಾ ಮತ್ತು ದೇವರ ಅನುಗ್ರಹದಿಂದ ಪ್ಲೇಗ್ ಹೆಮ್ಮಾರಿಯ ಉಪಟಳ ನೀಗಿತು ಮತ್ತು ಮಂಗಳೂರು ರಕ್ಷಿಸಲ್ಪಟ್ಟಿತು.[9] ಮಂಗಳೂರಿನ ಅಬ್ದುಲ್ಲಾ ಹಾಜಿ, ಅಥವಾ ಔಲಾ ಹಾಜಿ ಒಬ್ಬ ಸುಧಾರಕರೂ ಸಂತರೂ ಆಗಿದ್ದರು. ಅವರು ಕಾಸರಗೋಡಿನಲ್ಲಿ ಹಿ.ಶ. 1377ರಲ್ಲಿ ನಿಧನ ರಾದರು. ಅವರ ಗೋರಿಗೆ ಮುಸ್ಲಿಮರು ಈಗಲೂ ಗೌರವ ಸಲ್ಲಿಸುತ್ತಾರೆ. ಆದರೆ ಇಲ್ಲಿ ಉರೂಸ್ ಆಚರಣೆ ನಡೆಯುವುದಿಲ್ಲ. ಕಾಸರಗೋಡಿನ ಮಾಲಿಕ್ ದೀನಾರ್‌ರ ಸಮಾಧಿಗೆ ಅತ್ಯಂತ ಹತ್ತಿರದಲ್ಲಿರುವುದು ಇದಕ್ಕೆ ಕಾರಣವಾಗಿರಬಹುದು. ಅದೇನೇ ಇದ್ದರೂ

ಹತ್ತೊಂಭತ್ತನೇ ಮತ್ತು ಇಪ್ಪತ್ತನೇ ಶತಮಾನದಲ್ಲಿ ಅಬ್ದುಲ್ಲಾ ಹಾಜಿಯವರಷ್ಟು ಪ್ರಭಾವಶಾಲಿ ನಾಯಕರು ಬೇರಾರೂ ಇರಲಿಲ್ಲ.

ಇಸ್ಲಾಮಿನಲ್ಲಿರುವ ಏಕತೆ, ಸಹೋದರತೆ ಮತ್ತು ಸಮಷ್ಠಿ ಹಿತದ ಪ್ರಜ್ಞೆಯು ಒಂದು ಒಳ್ಳೆಯ ಸಮಾಜದ ಅಡಿಪಾಯವಾಗಿದೆ. ಈ ಗುಣಗಳೂ ಜಿಲ್ಲೆಯ ಮುಸ್ಲಿಮರಲ್ಲಿ ಧಾರಾಳವಾಗಿದ್ದವು. ಮುಸ್ಲಿಮರಲ್ಲಿ ಸಾಮುದಾಯಿಕ ಪ್ರಜ್ಞೆಯು ಗರಿಷ್ಠ ಮಟ್ಟದಲ್ಲಿತ್ತು. ಅವರ ಇಸ್ಲಾಮೀ ನಡವಳಿಕೆಗಳು ಮಾಪಿಳ್ಳೆಗಳನ್ನೂ ಆಕರ್ಷಿಸಿತು ಮತ್ತು ಅವರು ಭಾಷೆ ಮತ್ತು ಸಂಸ್ಕೃತಿಯ ಅಂತರದ ಹೊರತಾಗಿಯೂ ಬ್ಯಾರಿಗಳೊಂದಿಗೆ ಮುಕ್ತವಾಗಿ ಬೆರೆತರು. ಇದು ಜಿಲ್ಲೆಯ ಹನಫಿಗಳು, ಶಾಫಿಗಳು, ನವಾಯತರು ಮತ್ತು ಮೇಮನ್‌ಗಳನ್ನೂ ಒಗ್ಗೂಡಿಸಿತು. ಪಂಗಡ, ಭಾಷೆ ಮತ್ತು ಪ್ರದೇಶದ ಭೇದವಿಲ್ಲದೆ ಎಲ್ಲ ಮುಸ್ಲಿಮರೂ ಒಂದೇ ಮಸೀದಿಗೆ ಪ್ರಾರ್ಥನೆಗೆ ತೆರಳುತ್ತಿದ್ದರು ಮತ್ತು ಒಬ್ಬ ಇಮಾಮನ ಹಿಂದೆ ನಮಾಝ್ ನಿರ್ವಹಿಸುತ್ತಿದ್ದರು. ಎಲ್ಲರೂ ಜತೆಗೂಡಿ ಹಬ್ಬ ಆಚರಿಸುತ್ತಿದ್ದರು ಹಾಗೂ ಮದುವೆ, ಮರಣ ಮುಂತಾದ ಕಾರ್ಯಕ್ರಮಗಳಲ್ಲೂ ಜತೆಗೂಡುತ್ತಿದ್ದರು. ಮುಸ್ಲಿಮರ ಮಧ್ಯೆ ಯಾವುದೇ ಭಿನ್ನತೆ ಇರಲಿಲ್ಲ. ಈ ಏಕತೆ ಮತ್ತು ಸಮಾನತೆಯ ಪ್ರಜ್ಞೆಯು ನಂತರದ ಕಾಲಗಳಲ್ಲಿ ಇನ್ನಷ್ಟು ಗಟ್ಟಿಯಾಗುತ್ತಾ ಹೋಯಿತು. ಇಸ್ಲಾಮಿನ ಈ ಗುಣದಿಂದಾಗಿ ಬ್ಯಾರಿಗಳು ತಮ್ಮ ಬ್ಯಾರಿ ಸಂಸ್ಕೃತಿಯ ಗುರುತನ್ನು ಮರೆತರು ಮತ್ತು ಮಾಪಿಳ್ಳೆಗಳೆಂದೇ ಗುರುತಿಸಲ್ಪಟ್ಟರು.

ಉರೂಸ್

ಗೋರಿಗಳಿಗೆ ಗೌರವ ಸಲ್ಲಿಸುವುದು ಭಾರತದ ಸುನ್ನಿಗಳ ಇನ್ನೊಂದು ಪ್ರಮುಖ ಲಕ್ಷಣ. ಸುಲ್ತಾನರು ಮತ್ತು ಮೊಘಲರ ಕಾಲದಲ್ಲಿ ಇದು ಬೆಳೆದು ಬಂತು. ಉತ್ತರ ಭಾರತದ ಸೂಫಿ ಸಂತರ ಪ್ರಭಾವವೂ ಇದಕ್ಕೆ ಕಾರಣವಾಗಿತ್ತು. ದಕ್ಷಿಣದಲ್ಲಿ, ಅದರಲ್ಲೂ ಕರಾವಳಿ ಜಿಲ್ಲೆಗಳಲ್ಲಿ ಇದೊಂದು ಸಾಮಾನ್ಯ ಲಕ್ಷಣವಾಗಿತ್ತು. ಉರೂಸ್ ಹಬ್ಬಗಳನ್ನು ಆಚರಿಸ ಲಾಗುತ್ತಿತ್ತು ಮತ್ತು ಹಲವು ಸ್ಥಳೀಯ ವಿಶೇಷತೆಗಳೂ ಇದಕ್ಕೆ ಸೇರ್ಪಡೆಗೊಂಡಿತ್ತು. ಹತ್ತೊಂಭತ್ತನೇ ಮತ್ತು ಇಪ್ಪತ್ತನೇ ಶತಮಾನದಲ್ಲಿ ದಕ್ಷಿಣ ಕೆನರಾ ಜಿಲ್ಲೆಯಲ್ಲಿ ಉರೂಸ್ ಹೆಚ್ಚಿನ ಆಕರ್ಷಣೆ ಪಡೆದುಕೊಂಡಿತು. ಮೊಹರ್ರಮ್ ಆಚರಣೆ ನಿಂತ ನಂತರ ಉರೂಸ್ ಜಿಲ್ಲೆಯ ಮುಸ್ಲಿಮರ ಅತ್ಯಂತ ಮುಖ್ಯ ಸಾಂಸ್ಕೃತಿಕ ಚಟುವಟಿಕೆಯಾಗಿ ಮಾರ್ಪಟ್ಟಿತು. ಸಂಗೀತ ಗೋಷ್ಠಿ, ಪಟಾಕಿ, ಪುಷ್ಪಾಲಂಕಾರ, ಮೆರವಣಿಗೆ ಇತ್ಯಾದಿಗಳು ಸ್ಥಳೀಯ ಭೂತ ಸ್ಥಾನದ ಜಾತ್ರೆಗಳಲ್ಲಿ ಕಂಡುಬರುತ್ತಿದ್ದವು. ಉರೂಸ್ ಆಚರಣೆಯು ಒಂದು ಸ್ಥಳೀಯ ಜಾತ್ರೆಯ ಸ್ವರೂಪವನ್ನು ಹೊಂದಿತ್ತು. ವ್ಯಾಪಾರ ವಹಿವಾಟು, ಮನರಂಜನೆಯ ಅವಕಾಶಗಳು, ಆಟ ಮತ್ತು ದೊಡ್ಡ ಜನಜಂಗುಳಿ ಇಲ್ಲಿ ಕಂಡುಬರುತ್ತಿತ್ತು. ಸಾಮಾನ್ಯವಾಗಿ ಅದನ್ನು ಮುಸ್ಲಿಮರ ಜಾತ್ರೆಯೆಂದೇ ಕರೆಯಲಾಗುತ್ತಿತ್ತು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಜಿಲ್ಲೆಯಲ್ಲಿ ನೇಮಗಳು ಮತ್ತು ದೈವಸ್ಥಾನಗಳ ಜಾತ್ರೆಗಳು ಪ್ರಸಿದ್ಧಿ ಪಡೆದಾಗ ಇದು ಕೂಡಾ ಹೆಚ್ಚು ಜನಪ್ರಿಯವಾಯಿತು. ಇದು ಮುಸ್ಲಿಮೇತರರ ಜಾತ್ರೆಯ ತದ್ರೂಪದಂತೆಯೇ ಇತ್ತು. ಜಿಲ್ಲೆಯಲ್ಲಿ ಇಂತಹ ಹಲವು ಉರೂಸ್ ಉತ್ಸವಗಳು ನಡೆಯುತ್ತಿದ್ದವು. ಕಾಸರಗೋಡಿನ ಮಾಲಿಕ್ ದೀನಾರ್,

ಇಚ್ಲಂಗೋಡಿನ ರಾಫಿವು ಬಿನ್ ಮಾಲಿಕ್ ದೀನಾರ್ ಮತ್ತು ಉಳ್ಳಾಲದ ಸೈಯದ್ ಮದನಿ ಹತ್ತೊಂಭತ್ತು ಮತ್ತು ಇಪ್ಪತ್ತನೇ ಶತಮಾನದ ಪ್ರಸಿದ್ಧ ಉರೂಸ್‌ಗಳಾಗಿದ್ದವು. ಕ್ರಿ.ಶ. 1920ರ ಬಳಿಕ ಉಳ್ಳಾಲದ ಸೈಯದ್ ಮದನಿ ದರ್ಗಾದ ಉರೂಸನ್ನು ಐದು ವರ್ಷಕ್ಕೊಮ್ಮೆ ಆಚರಿಸುವುದು ರೂಢಿಗೆ ಬಂತು ಮತ್ತು ಜಿಲ್ಲೆಯ ಅತ್ಯಂತ ಜನಪ್ರಿಯ ಉರೂಸ್ ಆಗಿ ಇದು ಮೂಡಿ ಬಂತು. ಇದಲ್ಲದೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ಪರಿಚಿತ ಮತ್ತು ಅಪರಿಚಿತ ಸಮಾಧಿಗಳ ಸುತ್ತ ಇಂತಹ ಹಲವಾರು ಉರೂಸ್‌ಗಳು ಆಚರಿಸಲ್ಪಡುತ್ತಿದ್ದವು ಮತ್ತು ಇವು ಸ್ಥಳೀಯ ಹಬ್ಬಗಳ ರೂಪವನ್ನು ಪಡೆದುಕೊಂಡವು. ಮುಸ್ಲಿಮರು ಸಮಾಧಿಗಳಿಗೆ ಗೌರವ ಸಲ್ಲಿಸುತ್ತಾರೆ, ನೇರ್ಚೆಗಳನ್ನು ನೀಡುತ್ತಾರೆ ಮತ್ತು ಅವರ ಆಶೀರ್ವಚನವನ್ನು ಪಡೆದುಕೊಳ್ಳುತ್ತಾರೆ. ಇಪ್ಪತ್ತನೇ ಶತಮಾನದ ಮಧ್ಯ ಭಾಗದವರೆಗೂ ಮುಸ್ಲಿಮರು ಈ ಸಂತರ ಪವಾಡಗಳಲ್ಲಿ ನಂಬಿಕೆ ಹೊಂದಿದ್ದರು. ಭಯಾನಕ ರೋಗಗಳಾಗಲೀ ಆಪಘಾತವಾಗಲೀ ಇನ್ನಿತರ ಕಷ್ಟದ ಪರಿಸ್ಥಿತಿ ತಲೆದೋರಿದಾಗ ಷರತ್ತಿನ ನೇರ್ಚೆಗಳನ್ನು ಸಮರ್ಪಿಸಲಾಗುತ್ತಿತ್ತು ಮತ್ತು ತದನಂತರದ ಪರಿಣಾಮ ಅವರನ್ನು ಸಂತೃಪ್ತಿಗೊಳಿಸುತ್ತಿತ್ತು.[10] ಇದಲ್ಲದೆ ಮುಂಗಡವಾಗಿ ಕಾಣಿಕೆ ಹೊರುವುದು ಯಾವುದಾದರೂ ಕೆಲಸಕ್ಕೆ ಮುಂಚೆ – ಉದಾಹರಣೆಗೆ ವ್ಯಾಪಾರದಲ್ಲಿ ಲಾಭ, ಕೆಲಸದ ಯಶಸ್ಸು, ಒಳ್ಳೆಯ ವೈವಾಹಿಕ ಜೀವನ ಅಥವಾ ಸುಖೀ ಕೌಟುಂಬಿಕ ಜೀವನ ಅಥವಾ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಪಡೆಯುವುದು – ಹೀಗೆ ಹಲವಾರು ಉದ್ದೇಶಗಳಿಗಾಗಿ ದರ್ಗಾಗಳಿಗೆ ಭೇಟಿ ಕೊಡುವ ಮತ್ತು ಹರಕೆ ಹೊರುವ ಸಂಪ್ರದಾಯ ಇತ್ತು. ಇದಲ್ಲದೆ ಇಲ್ಲಿಗೆ ನಿಯಮಿತವಾಗಿ ಬರುವ ಶ್ರದ್ಧಾವಂತ ಭಕ್ತರೂ ಇದ್ದಾರೆ. ಇವರು ತಮ್ಮ ಕುಟುಂಬ ಮತ್ತು ವ್ಯಾಪಾರದ ಸುರಕ್ಷೆಗಾಗಿ ನಿತ್ಯ ಹರಕೆ ಹೊರುತ್ತಾರೆ. ಮುಸ್ಲಿಮೇತರರು ಕೂಡಾ ನೇರ್ಚೆ ಸಲ್ಲಿಸುತ್ತಿದ್ದರು. ಸಂತರ ಆಶೀರ್ವಾದ ಪಡೆಯುವುದು ದಕ್ಷಿಣ ಕೆನರಾದ ಮುಸ್ಲಿಮರಲ್ಲಿ ಕಂಡು ಬರುತ್ತಿದ್ದ ಒಂದು ಸಾಮಾನ್ಯ ಆಚರಣೆಯಾಗಿತ್ತು. ಇವುಗಳಿಂದ ದರ್ಗಾಗಳಿಗೆ ಒಳ್ಳೆಯ ವರಮಾನವೂ ಬರುತ್ತಿತ್ತು. ಕ್ರಿ.ಶ. 1947ರ ನಂತರ ಉರೂಸ್ ಆಚರಣೆಗಳು ಜಿಲ್ಲೆಯಾದ್ಯಂತ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಉರೂಸ್ ನಿರ್ದಿಷ್ಟ ಸಂತರ ಗೋರಿಯ ಬಳಿ ಸುದೀರ್ಘ ಕಾಲ ನಡೆಯುವ ಆಚರಣೆಯಾಗಿತ್ತು. ಕೆಲವೊಮ್ಮೆ ಸಂತರ ಪೀಠ ಅಥವಾ ಅವಶೇಷವು ಉರೂಸ್ ಆಚರಣೆಗೆ ಸಾಕಾಗುತ್ತಿತ್ತು. ಅಜಿಲ ಮೊಗರುವಿನಲ್ಲಿ ನಡೆಯುವ ವಾರ್ಷಿಕ ಮಾಲಿದಾ ಉರೂಸ್ ಬಾಬಾ ಫಕ್ರುದ್ದೀನ್ ಎಂಬವರ ಧರ್ಮಪ್ರಚಾರ ಆರಂಭದ ದ್ಯೋತಕವಾಗಿ ಆಚರಿಸಲಾಗುತ್ತದೆ. ಫಕ್ರುದ್ದೀನ್‌ರ ಸಮಾಧಿಯು ನಿಜವಾಗಿ ಪೆನುಕೊಂಡಾದಲ್ಲಿದೆ. ಜಿಲ್ಲೆಯಲ್ಲಿ ಇಂತಹ ಹಲವು ಉರೂಸ್ ಆಚರಣೆಗಳು ಚಾಲ್ತಿಯಲ್ಲಿದ್ದವು. ಸಾಕಷ್ಟು ಮುಂಚಿತವಾಗಿಯೇ ಉರೂಸ್‌ನ ದಿನಾಂಕವನ್ನು ನಿಗದಿಪಡಿಸಿ ಸಿದ್ಧತೆಗಳನ್ನು ನಡೆಸಲಾಗುತ್ತಿತ್ತು. ಇದೊಂದು ಧಾರ್ಮಿಕ ಉತ್ಸವವಾಗಿದ್ದ ಕಾರಣ ಕೇವಲ ಮಾಹಿತಿಯ ಆಧಾರದಲ್ಲೇ ಜನರು ಸಮಾಧಿಯ ಬಳಿಗೆ ಬರುತ್ತಿದ್ದರು. ಸಾಮಾನ್ಯವಾಗಿ ಉರೂಸ್‌ಗೆ ಮುಂಚೆ ನಲ್ವತ್ತು ದಿನಗಳ ರಾತ್ರಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗುತ್ತಿತ್ತು. ಉಪನ್ಯಾಸಗಳ ಮೂಲಕ ಧರ್ಮ ಮತ್ತು ಸಮಾಜಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಇಲ್ಲಿ ಬೋಧಿಸಲಾಗುತ್ತಿತ್ತು. ಮುಸ್ಲಿಮರಿಗೆ ಉಪನ್ಯಾಸ

ನೀಡಲು ಖ್ಯಾತ ವಾಗ್ಮಿಗಳನ್ನು ಕರೆಸಲಾಗುತ್ತಿತ್ತು. ಈ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳು ಹಲವು ವಿಧದಲ್ಲಿ ಉಪಕಾರಿಯಾಗಿದ್ದವು. 1. ಇದು ಇಸ್ಲಾಮಿನ ಸಿದ್ಧಾಂತವನ್ನು ಬೋಧಿಸುವುದಕ್ಕೆ ಒಂದು ವೇದಿಕೆಯಾಗಿತ್ತು. 2. ಸಾಮಾಜಿಕ ಬದುಕಿನಲ್ಲಿ ತಮ್ಮ ಕರ್ತವ್ಯ ಮತ್ತು ಪಾತ್ರ ಏನು ಎಂಬುದನ್ನು ಮುಸ್ಲಿಮರಿಗೆ ತಿಳಿ ಹೇಳುವುದಕ್ಕೂ ಇದು ಬಳಕೆಯಾಗುತ್ತಿತ್ತು. 3. ಇದು ದುವಾ ಅರ್ಥಾತ್ ಅಲ್ಲಾಹನ ಅನುಗ್ರಹವನ್ನು ಸಂತರ ಸಮಾಧಿಯ ಸಮಕ್ಷಮ ಯಾಚಿಸುವುದರ ಮಹತ್ವವನ್ನೂ ಕಲಿಸುತ್ತಿತ್ತು. ಉರೂಸ್‌ನ ದುವಾ ಒಂದು ಸತ್ಕರ್ಮ ಎಂದು ಪರಿಗಣಿಸಲಾಗುತ್ತಿತ್ತು ಮತ್ತು ಇದರಿಂದಾಗಿಯೇ ಇಂತಹ ದುವಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಸ್ಲಿಮರು ಉತ್ಸುಕತೆ ತೋರುತ್ತಿದ್ದರು. ಉರೂಸ್‌ನ ದಿನ ಹತ್ತಿರವಾದಂತೆ ದುವಾಗಳೂ ಹೆಚ್ಚುತ್ತಿದ್ದವು ಮತ್ತು ಉರೂಸ್‌ನ ದಿನದಂದು ದೊಡ್ಡ ಮೌಲ್ವಿಯೊಬ್ಬರನ್ನು ಕರೆಸಿ ಅವರಿಂದ ದುವಾ ಮಾಡಿಸಲಾಗುತ್ತಿತ್ತು. ಅವರು ತಮ್ಮ ಭಾಷಣದ ಮೂಲಕ ಜನರನ್ನು ಮೋಡಿ ಮಾಡುತ್ತಿದ್ದರು ಮತ್ತು ನರಕದ ಶಿಕ್ಷೆಯ ಭಯ ಹುಟ್ಟಿಸುತ್ತಿದ್ದರು. ಸ್ವರ್ಗದ ಪ್ರೀತಿಯನ್ನು ಹುಟ್ಟಿಸಿ ಕರುಣೆಯನ್ನು ಉಕ್ಕಿಸಿ ವಿಶ್ವಾಸದ ಸ್ಫೂರ್ತಿಯನ್ನು ಜಾಗೃತಗೊಳಿಸು ತ್ತಿದ್ದರು. ಕೆಲವೊಮ್ಮೆ ಅವರ ನಾಟಕೀಯ ಭಾಷಣಗಳಿಂದ ಪ್ರಭಾವಿತರಾಗಿ ಜನರು ಕಣ್ಣೀರು ಹಾಕುತ್ತಿದ್ದರು ಮತ್ತು ತಮ್ಮ ಬಳಿಯಿದ್ದ ಎಲ್ಲವನ್ನೂ ದರ್ಗಾಕ್ಕೆ ದಾನ ಮಾಡುತ್ತಿದ್ದರು. ಬಳೆ, ಕಿವಿಯ ಆಭರಣ, ಉಂಗುರ ಮುಂತಾದ ನಿತ್ಯ ಬಳಕೆಯ ಆಭರಣಗಳನ್ನು ಕೂಡಾ ದೇಣಿಗೆ ನೀಡುತ್ತಿದ್ದರು. ಹೀಗೆ ಇಪ್ಪತ್ತನೇ ಶತಮಾನದಲ್ಲಿ ಉರೂಸ್ ಜನರಿಗೆ ಸ್ಫೂರ್ತಿಯನ್ನು ಉಕ್ಕಿಸುವ ಒಂದು ಹಬ್ಬವಾಗಿತ್ತು. ಆದರೆ ತಿಳುವಳಿಕೆ ಮತ್ತು ಧಾರ್ಮಿಕ ಜ್ಞಾನ ಹೆಚ್ಚಿದಂತೆ ಇಂತಹ ಆಚರಣೆಗಳು ಕಡಿಮೆಯಾದವು ಮತ್ತು ಇಂದು ಇವು ಬಹುತೇಕ ಅಳಿದು ಹೋಗಿವೆ.

ಎಲ್ಲ 40 ದಿನವೂ ಸಮಾಧಿಯನ್ನು ಅಲಂಕರಿಸಲಾಗುತ್ತಿತ್ತು ಮತ್ತು ಹಸಿರು ಚದ್ದರವನ್ನು ಅದರ ಮೇಲೆ ಹಾಸಲಾಗುತ್ತಿತ್ತು. ಇಡೀ ಹಳ್ಳಿಯನ್ನೇ ಹಸಿರು ಧ್ವಜಗಳಿಂದ ಅಲಂಕರಿಸ ಲಾಗುತ್ತಿತ್ತು. ದೀಪಾಲಂಕಾರ ಮತ್ತು ಇತರ ಉತ್ಸವಸಹಜ ಸಿದ್ಧತೆಗಳನ್ನೂ ಮಾಡಲಾಗುತ್ತಿತ್ತು. ಉರೂಸ್‌ನ ದಿನದಂದು ಒಂದು ಸಂದಲ್ ಮೆರವಣಿಗೆ ಹೊರಡುವ ಸಂಪ್ರದಾಯವೂ ಇತ್ತು. ಪಟ್ಟಣ ಅಥವಾ ಹಳ್ಳಿಯ ಮುಖ್ಯ ರಸ್ತೆಗಳಲ್ಲಿ ಸಮಾಧಿಗೆ ಸಂಬಂಧಿಸಿದ ಏನಾದರೊಂದು ಪ್ರತಿಮೆ ಅಥವಾ ಮರದ ಹಲಗೆಯನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವುದು ಸಂಪ್ರದಾಯವಾಗಿತ್ತು.[11] ಇದು ಉರೂಸ್‌ನ ಒಂದು ಸಾಂಕೇತಿಕ ಆಚರಣೆಯಾಗಿತ್ತು.

2. ಮುಸ್ಲಿಮ್ ಹಬ್ಬಗಳು

1. ಮೊಹರ್ರಮ್ ಅಥವಾ ಆಲಾವಿ ಹಬ್ಬ ಮೊಹರ್ರಮ್ ಒಂದರಂದು
2. ರಬೀವುಲ್ ಅವ್ವಲ್ ಹನ್ನೆರಡರಂದು ಈದ್ ಮಿಲಾದ್ ಅಥವಾ ಮೌಲೂದ್
3. ರಬೀವುಲ್ ಆಖಿರ್ 11ರಂದು ರಾತೀಬ್ ಅಥವಾ ಗ್ಯಾರವೀನ್ ಶರೀಫ್
4. ಶಾಬಾನ್ 15ರಂದು ಶಬೆ ಬರಾತ್
5. ಶವ್ವಾಲ್ ಒಂದರಂದು ರಮ್‌ಝಾನ್, ಈದುಲ್ ಫಿತ್ರ್
6. ದುಲ್‌ಹಜ್ಜ್ 10ರಂದು ಈದುಲ್ ಅಝ್‌ಹಾ ಅಥವಾ ಹಜ್ ಅಥವಾ ಬೆಲ್ಯೊ ಪೆರ್ನಾಲ್

1. ಮೊಹರ್ರಮ್

ಮೊಹರ್ರಮ್‌ನ ತಿಂಗಳು ಇಸ್ಲಾಮೀ ಇತಿಹಾಸದಲ್ಲಿ ದು:ಖದ ತಿಂಗಳಾಗಿದೆ. ಏಕೆಂದರೆ ಮೊಹರ್ರಮ್ ಹತ್ತರಂದು ಪ್ರವಾದಿಯವರ ಮೊಮ್ಮಗ ಹುಸೈನ್ ಕರ್ಬಲಾ ಮೈದಾನದಲ್ಲಿ ಹುತಾತ್ಮರಾದರು. ಅವರು ಹುತಾತ್ಮರಾದುದನ್ನು ನೆನಪಿಸುತ್ತಾ ಮೊಹರ್ರಮ್ ಹತ್ತನ್ನು ದುಖದ ದಿನವಾಗಿ ಆಚರಿಸಲಾಗುತ್ತದೆ. ಪ್ರವಾದಿಯವರು ಮೊಹರ್ರಮ್ ಒಂಬತ್ತು ಮತ್ತು ಹತ್ತರಂದು ಉಪವಾಸವಿಡಲು ಆದೇಶಿಸಿದ್ದು ಈ ದಿನಗಳನ್ನು ಅಶೂರ ಎಂದು ಕರೆಯಲಾಗುತ್ತದೆ. ಆಶೂರಾದ ದಿನ ಉಪವಾಸ ವೃತವನ್ನಾಚರಿಸುವ ಪದ್ಧತಿ ಸುನ್ನಿ ಮತ್ತು ಶಿಯಾ ಪಂಗಡಗಳೆರೆಡರಲ್ಲೂ ಇವೆ. ಭಾರತದಲ್ಲಿ ಮೊಹರ್ರಮ್ ದಿನದ ಆಚರಣೆಯು ಪ್ರಸಿದ್ಧಿಯನ್ನು ಪಡೆದಿರುವುದು ದಕ್ಖನ್‌ನ ಶಿಯಾ ಸುಲ್ತಾನರಿಂದಾಗಿದೆ.[12]

ಬಿಜಾಪುರವನ್ನು ಶಾಹಿ ಸುಲ್ತಾನರು ಆಳುತ್ತಿದ್ದ ಸಂದರ್ಭದಲ್ಲಿ ಮೊಹರ್ರಮ್ ದಿನದ ಆಚರಣೆಯು ಪ್ರಸಿದ್ಧಿಗೆ ಬಂತು. ದಕ್ಷಿಣ ಕನ್ನಡ ಜಿಲ್ಲೆಗೆ ಮೊಹರ್ರಮ್‌ನ ಆಚರಣೆಯು ಬಿಜಾಪುರದ ಕೂಡುಗೆಯಾಗಿದ್ದರೂ ಇದರಲ್ಲಿ ಹಲವು ರೀತಿಯ ಪ್ರಾಂತೀಯ ಬದಲಾವಣೆ ಗಳು ಕಂಡುಬರುತ್ತದೆ. 19ನೇ ಶತಮಾನದಲ್ಲಿ ಕೇವಲ ಬೆರಳಣಿಕೆಯಷ್ಟು ಮಂದಿ ಶಿಯಾಗಳು ಇಲ್ಲಿದ್ದರೂ ಮೊಹರ್ರಮ್‌ನ ಆಚರಣೆಯು ಇಲ್ಲಿ ಜನಜನಿತವಾಗಿರುವುದು ಒಂದು ವಿಶೇಷ ವಾಗಿದೆ. ಮೊಹರ್ರಮ್‌ನ ಆಚರಣೆಯು ಹನಫೀ ಪಂಗಡದವರು ಹೆಚ್ಚಿರುವಡೆಯಲೆಲ್ಲಾ ಬಹಳ ಪ್ರಸಿದ್ಧವಾಗಿರಲು ಕಾರಣ ದಕ್ಖನ್ನಿನವರಾದ ಇವರು ಈ ದಿನವನ್ನು ಬಹಳ ಉತ್ಸಾಹ ದಿಂದ ಆಚರಿಸುತ್ತಿದ್ದರು. ಮೊಹರ್ರಮ್ ಅನ್ನು ಆಚರಿಸುವ ಪ್ರದೇಶವನ್ನು ಕರ್ಬಲಾ ಮೈದಾನ ಎಂದು ಕರೆಯಲಾಗುತ್ತದೆ. ಮಂಗಳೂರು, ಮುಲ್ಕಿ, ಕಾರ್ಕಳ ಹಾಗೂ ಇನ್ನಿತರೆಡೆ'ಳಲ್ಲಿ ಹಲವು ಕರ್ಬಲಾ ಮೈದಾನಗಳಿದ್ದುವು. ಇಂದಿಗೂ ಹಲವು ಕಡೆಗಳಲ್ಲಿ ಈ ಹೆಸರಿನ ಸ್ಥಳಗಳಿರುವುದು ಕಂಡುಬರುತ್ತದೆ. ಹಾಗೆಯೇ ರಸ್ತೆ, ಬೀದಿಗಳಿಗೂ ಈ ಹೆಸರಿಟ್ಟಿರುವುದು ಕರ್ಬಲಾದ ಘಟನೆಯನ್ನು ನೆನಪಿಸುವ ಉದ್ದೇಶದಿಂದಲೇ ಆಗಿದೆ. ಕರ್ಬಲಾ ಮೈದಾನದಲ್ಲಿ ಆಶೂರಖಾನ ಎಂಬ ಸಣ್ಣ ಕಟ್ಟಡಗಳನ್ನು ನಿರ್ಮಿಸಲಾಗುತ್ತಿತ್ತು. ಮಂಗಳೂರಿನ ಕುದ್ರೋಳಿಯ ನಡುಪಳ್ಳಿ ಬಳಿ ಇರುವ ಬೀಬಿ ಅಲಾಬಿ ಅಶೂರ ಖಾನವು ಇಂದಿಗೂ ಇದೆ. ನಿರ್ಜಾಮ ಸ್ಥಿತಿಯಲ್ಲಿರುವ ಈ ಕಟ್ಟಡವು ಈ ಆಚರಣೆಯ ಸ್ಮಾರಕವಾಗಿದೆ. ಮಂಗಳೂರಿನಲ್ಲಿ ಕರ್ಬಲಾ ರಸ್ತೆ, ಬೀಬಿ ಅಲಾಬಿ ರಸ್ತೆಗಳಿದ್ದು ಇವು ಮೊಹರ್ರಮ್ ಆಚರಣೆಯ ದ್ಯೋತಕವಾಗಿದೆ. ಮೊಹರ್ರಮ್ ಅತ್ಯಂತ ಪ್ರಮುಖ ಆಚರಣೆಯಾಗಿದ್ದು ಸುಮಾರು ಹತ್ತು ದಿನಗಳವರೆಗೂ ಈ ಆಚರಣೆ ನೆರವೇರುತ್ತಿತ್ತು.[13]

2. ಈದ್ ಮಿಲಾದ್

ಈದ್ ಮಿಲಾದ್ ಮುಸ್ಲಿಮರ ಇನ್ನೊಂದು ಪ್ರಮುಖ ಹಬ್ಬವಾಗಿದೆ. ಪ್ರವಾದಿಯವರ ಜನ್ಮದಿನವನ್ನು ಈದ್‌ಮಿಲಾದ್ ಎಂದು ಆಚರಿಸಲಾಗುತ್ತದೆ. ರಬೀಉಲ್ ಅವ್ವಲ್ 12 ಪ್ರವಾದಿಯವರ ಜನ್ಮದಿನವಾಗಿದ್ದು ಇದೇ ದಿನಾಂಕದಂದು ಪ್ರವಾದಿಯವರು ನಿಧನ ರಾಗಿದ್ದರು. ಆದ್ದರಿಂದ ಈ ದಿನದ ಆಚರಣೆಯು ಪ್ರವಾದಿಯವರ ಜನನ ಮರಣವೆರಡನ್ನೂ ಸಂಕೇತಿಸುತ್ತದೆ. ಈ ಇಡೀ ತಿಂಗಳನ್ನು ಪ್ರವಾದಿಯವರ ತಿಂಗಳಾಗಿ ಆಚರಿಸಲಾಗುತ್ತದೆ.

ಮುಸ್ಲಿಮರು ಈ ತಿಂಗಳಲ್ಲಿ ತಮ್ಮ ಮನೆಗಳಲ್ಲಿ ಮೌಲೂದ್ ಪಠಣ ಮಾಡುತ್ತಾರೆ ಹಾಗೂ ಬಡವರಿಗೆ ಉಣಿಸುತ್ತಾರೆ. ಮುಖ್ಯವಾಗಿ 12ನೇ ತಾರೀಖಿನಂದು ಎಲ್ಲ ಜಮಾತ್‌ಗಳಲ್ಲಿ ಮೌಲೂದ್ ಪಠಣದ ನಂತರ ಊಟ, ಸಿಹಿ ತಿಂಡಿಗಳನ್ನು ಹಂಚುವುದರ ಮೂಲಕ ಇದನ್ನು ಅದ್ದೂರಿಯಾಗಿ ಆಚರಿಸುತ್ತಾರೆ.[14]

ಇದು ಮಲಬಾರಿನ ಮಾಪಿಳ್ಳರ ಹಾಗೂ ತುಳುನಾಡಿನ ಬ್ಯಾರಿಗಳ ಸಂಪ್ರದಾಯವಾಗಿದ್ದು ಇವರು ಇದನ್ನು ಅತ್ಯಂತ ಉತ್ಸಾಹದಿಂದ, ಪ್ರವಾದಿಯವರನ್ನು ಕೊಂಡಾಡುವ ಸ್ತುತಿ ಗಾನಗಳಿರುವ ಮೌಲೂದ್ ಪಾರಾಯಣ ಮಾಡುತ್ತಾ, ಹಾಡುತ್ತಾ ಸಂಭ್ರಮದಿಂದ ಆಚರಿಸುತ್ತಾರೆ. ಈ ಮೌಲೂದ್ ಅನ್ನು ಮಂಕೂಸ್ ಮೌಲೂದ್ ಎಂದು ಕರೆಯಲಾಗುತ್ತದೆ, ಇದು ಬ್ಯಾರಿ ಮತ್ತು ಮಾಪಿಳ್ಳೆ ಜನಾಂಗದಲ್ಲಿ ಬಹಳ ಪ್ರಸಿದ್ಧವಾಗಿದೆ. ಮೂಲತ: ಇದರ ಲೇಖಕರು ಪೊನ್ನಾಣಿಯ ಝೈನುದ್ದೀನ್ ಬಿನ್ ಅಲಿ ಎಂಬವರಾಗಿದ್ದು ಇದನ್ನು ಕ್ರಿ.ಶ.1521 (ಹಿಜರಿ 723)ರಲ್ಲಿ ರಚಿಸಲಾಗಿದೆ. ಮಾಪಿಳ್ಳೆ ಜನಾಂಗದಲ್ಲಿ ಜನಜನಿತವಾಗಿದ್ದ ಇದು ಕಾಲಕ್ರಮೇಣ ಜಿಲ್ಲೆಯ ಮುಸಲ್ಮಾನರಲ್ಲೂ ಪಸರಿಸಿತು. ಇದು ಅರಬಿ ಭಾಷೆಯಲ್ಲಿದ್ದು ಕುರ್‌ಆನ್ ಪಾರಾಯಣದಂತೆ ಅರ್ಥವರಿಯದೆ ಕೇವಲ ಸಾಂಪ್ರದಾಯಿಕ ಪಠಣವಾಗಿಯೇ ರೂಢಿಯಲ್ಲಿದೆ. ಇದನ್ನು ಪಠಿಸುವುದರಿಂದ ದೇವನ ಹಾಗೆಯೇ ಪ್ರವಾದಿಯವರ ಪ್ರೀತಿ, ರಕ್ಷಣೆಗೆ ಪಾತ್ರರಾಗುತ್ತೇವೆ ಎಂಬ ಬಲವಾದ ನಂಬಿಕೆಯನ್ನು ಬ್ಯಾರಿಗಳು ಹೊಂದಿದ್ದಾರೆ. ಇದು ಹಬ್ಬದ ಸಂಭ್ರಮದಲ್ಲಿ ಹಾಡುವ ಗೀತೆಯಾಗಿದ್ದು ಇದರಲ್ಲಿ ಪ್ರವಾದಿಯವರ ಗುಣಗಾನ ಮಾಡುತ್ತಾ ಅವರನ್ನು ಕೊಂಡಾಡಲಾಗಿದೆ.[15] ಮಂಕೂಸ್ ಮೌಲೂದ್ ಅನ್ನು ಕೇವಲ ರಬೀವುಲ್ ಅವ್ವಲ್ ತಿಂಗಳಲ್ಲಿ ಮಾತ್ರ ಪಠಿಸುವುದಲ್ಲ ಬದಲಾಗಿ ಇನ್ನಿತರ ಸಂದರ್ಭಗಳಲ್ಲೂ ಇದನ್ನು ಪಠಿಸಲಾಗುತ್ತದೆ. ಎಲ್ಲ ಶುಭ ಸಂದರ್ಭಗಳಲ್ಲಿ ಇದನ್ನು ಪಠಿಸಲಾಗುತ್ತದೆ, ಗೃಹ ಪ್ರವೇಶ, ಹೊಸ ಅಂಗಡಿಯನ್ನು ಉದ್ಘಾಟಿಸುವ ಸಂದರ್ಭ, ಬಸುರಿಯರಿಗೆ ಮಾಡುವ ಬಯಕೆ, ಮರಣದ ನಂತರದ ಮೂರನೆ ದಿನ, ಏಳನೇ ದಿನ ಹಾಗೂ ನಲ್ವತ್ತನೇದಿನದ ಸಂದರ್ಭದಲ್ಲಿ, ಹಜ್ಜ್‌ನ ಅಥವಾ ಯಾವುದೇ ಯಾತ್ರೆಯ ಮುಂಚಿನ ದಿನದಲ್ಲೂ ಮೌಲೂದನ್ನು ಪಠಿಸಲಾಗುತ್ತದೆ. ಈ ಮೌಲೂದ್ ಪಠಣದ ಸಂಪ್ರದಾಯವು ತುಂಬಾ ಪ್ರಸಿದ್ಧವಾಗಿದ್ದು ಮಂಕೂಸ್ ಮೌಲೂದ್ ನಂತೆಯೇ ಬದ್ರ್ ಮೌಲೂದನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಓದಲಾಗುತ್ತದೆ. ಇದರಲ್ಲಿ ಪ್ರವಾದಿಯವರ ಕಾಲದಲ್ಲಿ ನಡೆದ ಬದ್ರ್ ಯುದ್ಧದಲ್ಲಿ ಹುತಾತ್ಮರಾದ ಮಹಾನುಭಾವರ ಗುಣಗಾನವನ್ನು ಮಾಡಲಾಗಿದೆ. ಸಾಂಪ್ರದಾಯಿಕ ಮೌಲೂದ್ ಪಠಣದೊಂದಿಗೆ ಇತ್ತೀಚಿನ ದಿನಗಳಲ್ಲಿ ಹೊಸ-ಹೊಸ ಕಾರ್ಯಕ್ರಮಗಳನ್ನು, ಹಾಡುಗಳನ್ನು ಈದ್ ಮಿಲಾದ್‌ನ ಆಚರಣೆಯ ಭಾಗವನ್ನಾಗಿ ಮಾಡಿಕೊಳ್ಳಲಾಗಿದೆ.[16]

3 ರಾತೀಬ್, ಝಿಕ್ರ್ ಅಥವಾ ಗೈರ್‌ವಿನ್ ಶರೀಫ್

ಪ್ರವಾದಿಯವರ ಜನ್ಮದಿನದಂತೆ ಬಗ್ದಾದ್‌ನ ಸಂತರಾದ ಶೇಖ್ ಮೊಹಿಯದ್ದೀನ್ ಅಬ್ದುಲ್ ಖಾದರ್ ಜೀಲಾನಿಯವರ ಜನ್ಮದಿನವನ್ನು ಸ್ಮರಿಸಲಾಗುತ್ತದೆ. ಮುಸ್ಲಿಮ್

ಸಮುದಾಯದಲ್ಲಿ ಇವರು ಅತ್ಯಂತ ಗೌರವಕ್ಕೆ ಪಾತ್ರರಾದ ಸಂತರಾಗಿದ್ದಾರೆ. ಇವರನ್ನು ಕೊಂಡಾಡುವ ಗಾನವನ್ನು ರಚಿಸಲಾಗಿದ್ದು ಇದನ್ನು ಮೊಹಿಯುದ್ದೀನ್ ಮಾಲ ಎಂದು ಕರೆಯಲಾಗುತ್ತದೆ. ಮಾಪಿಳ್ಳೆ ವಿದ್ವಾಂಸರು ದೇವನ ಮಹಿಮೆಯನ್ನು ಕೊಂಡಾಡುವ ಗೀತೆಗಳನ್ನು ರಚಿಸಿದ್ದು ಅವುಗಳನ್ನು ರಾತೀಬ್ ಮತ್ತು ಝಿಕ್ರ್ ಎಂದು ಕರೆಯಲಾಗುತ್ತದೆ. ದೇವನ ಮಹಿಮೆಯನ್ನು ಕೊಂಡಾಡುವ ಪಂಕ್ತಿಗಳಿರುವ ಈ ಗೀತೆಯನ್ನು ಅತ್ಯಂತ ಮಧುರವಾಗಿ ಪುನರುಚ್ಚರಿಸಲಾಗುತ್ತದೆ. ರಾತೀಬ್‌ನಲ್ಲಿ ಅತ್ಯಂತ ಪ್ರಸಿದ್ಧವಾದ ರಾತೀಬ್ ಮೊಹಿಯದ್ದೀನ್ ರಾತೀಬ್ ಮತ್ತು ಕುತುಬೀಯ್ಯತ್ ಆಗಿದೆ. ಕುತುಬೀಯ್ಯತನ್ನು ದಫ್ ನೊಂದಿಗೆ ಹಾಡಲಾಗುತ್ತದೆ. ಇದನ್ನು 'ದಫ್‌ರಾತೀಬ್' ಎಂದೂ ಕರೆಯಲಾಗುತ್ತದೆ. ಇದನ್ನು ರಬೀವುಲ್ ಆಖಿರ್ ತಿಂಗಳಲ್ಲಿ ಆಚರಿಸಲಾಗುತ್ತದೆ. ಝಿಕ್ರ್ ಎಂಬುದು ಇಂತಹದೇ ಒಂದು ರಚನೆಯಾಗಿದೆ. ಇದನ್ನು ರಬೀವುಲ್ ಆಖಿರ್‌ನ ಹನ್ನೊಂದನೇ ದಿನದಂದು ಖ್ಯಾತ ಸಂತರಾದ ಶೇಖ್ ಮೊಹಿಯದ್ದೀನ್‌ರವರ ನೆನಪಿನಲ್ಲಿ ಆಚರಿಸಲಾಗುತ್ತದೆ. ಮೌಲೂದ್‌ನಂತೆ ಇದನ್ನು ಮಸೀದಿಗಳಲ್ಲಿ ಸಾಮೂಹಿಕವಾಗಿ ಆಚರಿಸುತ್ತಾರೆ. ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಮೌಲೂದ್ ಓದುತ್ತಾ, ಬೆಳಗ್ಗಿನ ಸಮಯದಲ್ಲಿ ಮನೆಮನೆಗೆ ಊಟವನ್ನು ಹಂಚಿ ಇದನ್ನು ಆಚರಿಸುತ್ತಾರೆ. ಇತರ ದಿನಗಳಲ್ಲಿ ಇದನ್ನು ನಿರ್ದಿಷ್ಟ ಕಾರಣ ಕ್ಕಾಗಿರುವ ಹರಕೆ(ನೇರ್ಚೆ)ಯಾಗಿ ಆಚರಿಸಲಾಗುತ್ತದೆ. ಇದನ್ನು ಆಚರಿಸುವುದರಿಂದ ದೇವನ ಹಾಗೂ ಸಂತರ ಪ್ರೀತಿಗೆ ಪಾತ್ರರಾಗುವರು ಎಂಬ ನಂಬಿಕೆಯಿದೆ. ಹನಫೀಗಳು ರಾತೀಬನ್ನು ಗಾರ್‌ವಿನ್ ಶರೀಫ್ ಎಂದು ಆಚರಿಸುತ್ತಾರೆ. ಈ ರಿವಾಜು ಗ್ರಾಮಾಂತರ ಪ್ರದೇಶಗಳಲ್ಲಿ, ವಿಶೇಷವಾಗಿ ಕಾಸರಗೋಡು ಪ್ರದೇಶದಲ್ಲಿ ಸುಪ್ರಸಿದ್ಧವಾಗಿದೆ.[17]

4. ಬರಾಅತ್

ಬರಾಅತ್ ಎಂಬುದು ಮುಸ್ಲಿಮ್ ಸಮುದಾಯದಲ್ಲಿ ಸಾಮಾನ್ಯವಾಗಿರುವ ಒಂದು ಆಚರಣೆಯಾಗಿದೆ, ಇದನ್ನು ಶಅಬಾನ್ ತಿಂಗಳ ಹದಿನೈದನೇ ದಿನದಂದು ಆಚರಿಸಲಾಗುತ್ತದೆ. ಈ ದಿನವನ್ನು ಅಲ್ಲಾಹ್ ಮನುಷ್ಯನ ಜೀವನೋಪಾದಿಯಾಗಿರುವ ಆಹಾರವನ್ನು ನಿರ್ಧರಿಸುವಂತಹ ಹಾಗೂ ಮನುಷ್ಯನ ಅದೃಷ್ಟವನ್ನು ನಿರ್ಧರಿಸುವ ದಿನ ಎಂದು ನಂಬುತ್ತಾರೆ. ಈ ಕಾರಣಕ್ಕಾಗಿಯೇ ಈ ದಿನ ಸೂರ್ಯಾಸ್ತದ ನಂತರ ಉಪಾಸನೆಗಳನ್ನು ನೆರವೇರಿಸುತ್ತಾರೆ. ಮುಸ್ಲಿಮರೆಲ್ಲರೂ ಸೂರ : ಯಾಸೀನ್ (ಕುರ್‌ಆನ್‌ನ ಒಂದು ಅಧ್ಯಾಯ), ಸೂರ : ಫಾತಿಹ (ಕುರ್‌ಆನ್‌ನ ಪ್ರಥಮ ಅಧ್ಯಾಯ)ವನ್ನು ಓದುತ್ತಾರೆ ಹಾಗೂ ದೇವನಲ್ಲಿ ತನ್ನ ಜೀವಿತಾವಧಿಯನ್ನು ದೀರ್ಘಗೊಳಿಸಲು ಅದೇ ರೀತಿ ತನಗೂ ತನ್ನ ಕುಟುಂಬಕ್ಕೂ ಮಕ್ಕಳಿಗೂ ಆಗತ್ಯ ಆಹಾರವನ್ನು ಕರುಣಿಸಲು ಪ್ರಾರ್ಥನೆ (ದುಆ)ಯನ್ನು ನೆರವೇರಿಸಲಾಗುತ್ತದೆ. ಮುಸ್ಲಿಮರು ರಾತ್ರಿ ಸುನ್ನತ್ (ಐಚ್ಛಿಕ) ನಮಾಝ್‌ನ್ನು ಮಾಡುತ್ತಾರೆ. ಹಾಗೂ ತಮ್ಮ ತಂದೆ ತಾಯಿಗಳ, ಹಿರಿಯರ, ಆಪ್ತರ ಗೋರಿಯನ್ನು ಸಂದರ್ಶಿಸುತ್ತಾರೆ. ಏಕೆಂದರೆ ಈ ದಿನದಂದು ಗೋರಿಯಲ್ಲಿರುವವರು ಭೂಮಿಯಲ್ಲಿರುವ ತಮ್ಮ ಸಂಬಂಧಿಕರನ್ನು ನೆನಪಿಸಿಕೊಳ್ಳುವ ದಿನವಾಗಿದೆ ಎಂಬ ನಂಬಿಕೆ ಇದೆ. ಬರಾಅತ್‌ಅನ್ನು ಮಸೀದಿ ಜಮಾಅತ್‌ಗಳಲ್ಲೂ ಆಚರಿಸಲಾಗುತ್ತದೆ.

ಆದರೆ ಇದು ಮೌಲೂದ್, ರಾತೀಬ್‌ನಂತೆ ವಿಜೃಂಭಣೆಯ ಆಚರಣೆಯಾಗಿಲ್ಲ. ದಕ್ಷಿಣ ಕನ್ನಡದ ಮುಸ್ಲಿಮರು ಬರಾಅತ್ ಅನ್ನು ಪವಿತ್ರ ದಿನವನ್ನಾಗಿ ಕಂಡು ಆದನ್ನು ವಿಧಿವತ್ತಾಗಿ ಆಚರಿಸುತ್ತಾರೆ.[18] ಬರಾಅತ್ ಆಚರಣೆಯು ಈಗಲೂ ಚಾಲ್ತಿಯಲ್ಲಿದೆ.

ಈದುಲ್ ಫಿತ್ರ್ ಅಥವಾ ಚೆರಿಯ ಪೆರ್ನಾಲ್

ಈದ್ ಅಥವಾ ಪೆರ್ನಾಲ್ ಹಬ್ಬವನ್ನು ದಕ್ಷಿಣ ಕನ್ನಡದ ಎಲ್ಲಾ ಮುಸಲ್ಮಾನರು 19ನೇ ಮತ್ತು 20ನೇ ಶತಮಾನದಲ್ಲೂ ಆಚರಿಸುತ್ತಾ ಬಂದಿದ್ದಾರೆ. ಇದು ರಮಝಾನ್ ತಿಂಗಳ ಉಪವಾಸದ ಕೊನೆಗೆ ಶವ್ವಾಲ್ ತಿಂಗಳ ಪ್ರಥಮ ದಿನ ಆಚರಿಸುವ ಹಬ್ಬವಾಗಿದ್ದು ವಿಶ್ವದಾದ್ಯಂತ ಮುಸ್ಲಿಮರು ಈ ಹಬ್ಬವನ್ನು ಆಚರಿಸುತ್ತಾರೆ. ವಿಧವಿಧದ ಖಾದ್ಯಗಳನ್ನು ತಯಾರಿಸಿ ಹೊಸಬಟ್ಟೆಯನ್ನು ಧರಿಸಿ ತುಂಬಾ ಸಡಗರದೊಂದಿಗೆ ಮುಸಲ್ಮಾನರ ಎಲ್ಲಾ ಮನೆಗಳಲ್ಲಿ ಈ ಹಬ್ಬಾಚರಣೆಯು ಕಾಣಸಿಗುತ್ತದೆ. ಈದ್‌ನ ದಿನ ಮಸೀದಿ ಅಥವಾ ಈದ್ಗಾ (ಅಂದರೆ ಈದ್ ನಮಾಝ್ ನೆರವೇರಿಸಲಿಕ್ಕಾಗಿಯೇ ಮೀಸಲಿಟ್ಟಿರುವ ವಿಶೇಷ ಸ್ಥಳ)ದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಲಾಗುತ್ತದೆ.[19] ಈ ದಿನ ಬಂಧು ಮಿತ್ರರ ಮನೆ ಗಳಿಗೂ ಭೇಟಿ ನೀಡಲಾಗುವುದು. ಇದು ಅತ್ಯಂತ ಸಡಗರದಿಂದ ಆಚರಿಸುವ ಹಬ್ಬವಾಗಿದೆ. ರಮಝಾನ್‌ನಲ್ಲಿ ಝಕಾತ್(ಕಡ್ಡಾಯ ದಾನ)ನ್ನು ನೀಡಲಾಗುತ್ತದೆ ಹಾಗೂ ಈದ್‌ನ ದಿನ ಫಿತ್ರ್ ಝಕಾತ್ ಅಂದರೆ ಆಹಾರ ಧಾನ್ಯಗಳನ್ನು ವ್ಯಕ್ತಿಯೋರ್ವನ ಮೇಲೆ 2.6 ಕಿಲೋಗ್ರಾಂ ನಂತೆ ಈದ್ ನಮಾಝ್ ನಿರ್ವಹಿಸುವ ಮೊದಲು ವಿತರಿಸಲಾಗುವುದು. ಈ ಝಕಾತ್ ದಾನವು ಪ್ರತಿಯೋರ್ವ ಅನುಕೂಲಸ್ಥ ಅರ್ಹ ಮುಸ್ಲಿಮನ ಮೇಲೆ ಕಡ್ಡಾಯ ವಾಗಿದೆ. ದಕ್ಷಿಣ ಕನ್ನಡದ ಎಲ್ಲಾ ಮುಸ್ಲಿಮರು ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಫಿತ್ರ್ ಝಕಾತ್‌ನ ಮಹತ್ವದ ಆಧಾರದಲ್ಲೇ ಈ ಹಬ್ಬವನ್ನು ಈದುಲ್ ಫಿತ್ರ್ ಎಂದು ಕರೆಯ ಲಾಗುತ್ತದೆ. ಈ ಹಬ್ಬದಂದು ಬಡವರಿಗೆ ವಿವಿಧ ಮೂಲಗಳಿಂದ ಝಕಾತ್ ದೊರೆಯುವುದರಿಂದ ಅವರೂ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಇದು ಬಡವರ ಹಬ್ಬವಾಗಿದೆ. ಇತರ ಯಾವುದೇ ಹಬ್ಬದಂದು ಝಕಾತ್‌ಗೆ ಈದುಲ್ ಫಿತ್ರ್‌ನ ದಿನದಂದು ದೊರೆಯುವಷ್ಟು ಮಹತ್ವ ದೊರೆಯುವುದಿಲ್ಲ. ಈ ಹಬ್ಬವನ್ನು ಈಗಲೂ ಆಚರಿಸಲಾಗುತ್ತದೆ.

6. ಈದುಲ್ ಅಝ್‌ಹಾ ಅಥವಾ ಬಕ್ರೀದ್ ಅಥವಾ ಬೆಲಿಯ ಪೆರ್ನಾಲ್

ಈದುಲ್ ಅಝ್‌ಹಾವನ್ನು ಸಾಮಾನ್ಯವಾಗಿ ಬಕ್ರೀದ್ ಅಂದರೆ ದೊಡ್ಡ ಹಬ್ಬ ಎಂದು ಕರೆಯುತ್ತಾರೆ. ಬ್ಯಾರಿಗಳು ಇದನ್ನು ಬೆಲಿಯ ಪೆರ್ನಾಲ್ ಎಂದು ಕರೆಯುತ್ತಾರೆ. ಇದನ್ನು ಈದುಲ್ ಫಿತ್ರ್‌ನಂತೆಯೇ ಆಚರಿಸಲಾಗುತ್ತದೆ. ಇಲ್ಲಿ ಫಿತ್ರ್‌ನ ರೂಪದಲ್ಲಿ ಧಾನ್ಯಕ್ಕೆ ಬದಲಾಗಿ ಉಳ್ಳವರು ಕುರಿಮಾಂಸ, ದನದ ಮಾಂಸಗಳನ್ನು ಬಡಬಗ್ಗರಿಗೆ, ಸಂಬಂಧಿಕರಿಗೆ ಈದ್ ನಮಾಝ್‌ನ ನಂತರ ಹಂಚುತ್ತಾರೆ.

ಈದ್‌ಗಾಹ್‌ಗಳಲ್ಲಿ ಈದುಲ್ ಫಿತ್ರ್‌ನಂತೆ ಈ ಹಬ್ಬದಂದೂ ಪ್ರಾರ್ಥನೆ(ನಿಸ್ಕಾರ) ಸಲ್ಲಿಸಲಾಗುತ್ತದೆ.[20] ಈದುಲ್ ಝುಹಾ ಎಂದರೆ ಬಲಿದಾನದ ಹಬ್ಬವಾಗಿದ್ದು ದೇವನಿಗಾಗಿ

ಬಲಿದಾನಗಳನ್ನು ಅರ್ಪಿಸುವುದು ಈ ಹಬ್ಬದ ಮಹತ್ವವಾಗಿದೆ. ಈದ್ ನಮಾಝ್‌ನ ನಂತರ ದೇವನ ಹೆಸರಲ್ಲಿ ಜಾನುವಾರುಗಳನ್ನು ಬಲಿ ಕೊಡಲಾಗುವುದು ಮತ್ತು ಅದನ್ನು ಬಡಬಗ್ಗರಿಗೆ ಹಂಚಲಾಗುವುದು. ಇಸ್ಲಾಮಿನ ಸಂಪ್ರದಾಯದಂತೆ ಪ್ರತಿಯೋರ್ವ ವ್ಯಕ್ತಿ ಅಥವಾ ಒಂದು ಕುಟುಂಬ ಸಾಮರ್ಥ್ಯವಿದ್ದಲ್ಲಿ ಈ ಬಲಿದಾನವನ್ನು ನೀಡುವುದು ಕಡ್ಡಾಯವಾಗಿದೆ. ಆದರೆ 19ನೇ ಮತ್ತು 20ನೇ ಶತಮಾನದ ಆರಂಭದಲ್ಲಿ ಕೆಲವೇ ಮಂದಿ ಈ ಕುರ್ಬಾನಿ (ಬಲಿದಾನ) ಯನ್ನು ನೀಡುತ್ತಿದ್ದರು. ಎಲ್ಲಾ ಅನುಕೂಲಸ್ಥರು ಇದನ್ನು ನೆರವೇರಿಸುತ್ತಿರಲಿಲ್ಲ. ಪ್ರವಾದಿ ಇಬ್ರಾಹೀಮ್ (ಅಬ್ರಹಾಂ) ತನ್ನ ಮಗ ಇಸ್ಮಾಯೀಲ್‌ರನ್ನು ಬಲಿ ಕೊಡಲು ತಯಾರಾದಾಗ ಅದರ ಬದಲು ಆಡೊಂದು ಅಲ್ಲಿ ಪ್ರತ್ಯಕ್ಷಗೊಂಡು ಅವರು ಪವಾಡ ಸದೃಶವಾಗಿ ಪಾರಾದ ಘಟನೆಯನ್ನು ನೆನಪಿಸಲಿಕ್ಕಾಗಿ ಈ ಹಬ್ಬವನ್ನು ಆಚರಿಸ ಲಾಗುತ್ತದೆ. ಹೀಗೆ ಪ್ರವಾದಿ ಇಬ್ರಾಹೀಮ್‌ರ ಸಂಪ್ರದಾಯವನ್ನು ಜಾನುವಾರುಗಳನ್ನು ಬಲಿ ನೀಡುವ ಮೂಲಕ ನೆನಪಿಸಲಾಗುತ್ತದೆ. ಇದನ್ನು ಹಜ್ಜ್ ಪೆರ್ನಾಲ್ ಎಂದೂ ಕರೆಯ ಲಾಗುತ್ತದೆ. ಈ ದಿನದಂದು ಹಜ್ಜ್ ಯಾತ್ರಿಗಳು ಮಕ್ಕಾ ನಗರದಲ್ಲಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಹಾಗೆಯೇ ಪ್ರತಿಯೊಂದು ಮಸೀದಿಗಳಲ್ಲಿ ನಡೆಯುವ ಪ್ರಾರ್ಥನೆಯನ್ನು ಸಣ್ಣ ಹಜ್ಜ್ ಅಥವಾ ಬಡವರ ಹಜ್ಜ್ ಎಂದು ಕರೆಯಲಾಗುತ್ತದೆ. ಹಜ್ಜ್ ಪೆರ್ನಾಲ್ ಮುಸ್ಲಿಮರು ಸಂಭ್ರಮದಿಂದ ಆಚರಿಸುವ ಒಂದು ಪ್ರಮುಖ ಹಬ್ಬಗಳಲ್ಲೊಂದಾಗಿದೆ.[21]

ಸಂಪ್ರದಾಯ ಮತ್ತು ಮೂಢನಂಬಿಕೆಗಳು

ಸಮುದಾಯದಲ್ಲಿ ಪ್ರಾಮುಖ್ಯವಾಗಿರುವ ಹಲವು ಆಚರಣೆಗಳಿಗೆ ಭಿನ್ನವಾಗಿ ದಕ್ಷಿಣ ಕನ್ನಡದ ಮುಸ್ಲಿಮರ ಆಚರಣೆಗಳಲ್ಲಿ ನೆರೆಹೊರೆಯ ಸಂಪ್ರದಾಯಗಳ ಪ್ರಭಾವವಿರುವುದು ಕಂಡುಬರುತ್ತದೆ. ಸ್ಥಳೀಯ ಪಂಗಡಗಳ ಹೊಸ ತಲೆಮಾರಿನವರಾದ ದಕ್ಷಿಣದ ಮುಸ್ಲಿಮರ ಆಚರಣೆಗಳಲ್ಲಿ ತಮ್ಮ ಪೂರ್ವಿಕರ ಕಟ್ಟುಪಾಡುಗಳ ಸಂಪ್ರದಾಯದ ಪ್ರಭಾವವಿರುವುದು ಎದ್ದು ಕಾಣುತ್ತದೆ.[22] ಇಸ್ಲಾಮ್‌ನಲ್ಲಿ ಸಂಪ್ರದಾಯ, ಆಚರಣೆಗಳು ಹೇಗಿರಬೇಕೆಂಬುದನ್ನು ಕುರ್‌ಆನ್ ಮತ್ತು ಪ್ರವಾದಿಚರ್ಯೆ(ಹದೀಸ್) ಯಿಂದ ತಿಳಿಯಬಹುದು. ಇದನ್ನು ಎರಡು ಸೈದ್ಧಾಂತಿಕ ವರ್ಗಗಳಾದ ಶಾಫಿ ಮತ್ತು ಹನಫೀ ಮದ್‌ಹಬ್‌ಗಳವರು ತಮ್ಮ ತಮ್ಮ ವ್ಯಾಖ್ಯೆ ಗನುಸಾರ ಆಚರಿಸುತ್ತಾರೆ. ಶಾಫಿ ಮತ್ತು ಹನಫೀ ಮದ್‌ಹಬ್‌ಗಳ ಆಚರಣೆಯಲ್ಲಿ ಅಲ್ಪ ವ್ಯತ್ಯಾಸಗಳು ಕಂಡುಬರುತ್ತದೆ. ಈ ರೀತಿ ಧಾರ್ಮಿಕ ಆಚರಣೆಗಳಲ್ಲಿ ಯಾವುದೇ ರೀತಿಯ ಧಾರ್ಮಿಕ ನಂಬಿಕೆಗಳಿಗೆ ತೊಂದರೆ ಉಂಟಾಗದಂತೆ ಸ್ಥಳೀಯ ಸಂಪ್ರದಾಯಗಳು ಬೆರೆತಿರುವುದು ಕಂಡುಬರುತ್ತದೆ. ಮುಸ್ಲಿಮರ ಪಾಲಿಗೆ ಈ ಕೆಳಗಿನ ಸಂದರ್ಭಗಳು ಅತ್ಯಂತ ಮಹತ್ವದ್ದಾಗಿದೆ. 1) ಮಗುವಿನ ಜನನ 2) ಸುನ್ನತಿ 3) ಮದುವೆ (ನಿಕಾಹ್) 4) ಮರಣ ಅಥವಾ ಮರಣದ ನಂತರ ಮಾಡುವ ಆಚರಣೆಗಳು.[23]

1) ಮಗುವಿನ ಜನನವು ಒಂದು ನೈಸರ್ಗಿಕ ಕ್ರಿಯೆಯಾಗಿದೆ. ನವಜಾತ ಶಿಶುವಿಗೆ ಆ ಕೂಡಲೇ ಆಝಾನ್ ಅಥವಾ ಬಾಂಗನ್ನು ಅದರ ಕಿವಿಯಲ್ಲಿ ಕೇಳಿಸಲಾಗುತ್ತದೆ.. ಆಝಾನ್ ಮುಸ್ಲಿಮರಲ್ಲಿ ನಮಾಝ್‌ಗಾಗಿ ನೀಡುವಂತಹ ಪ್ರಸಿದ್ಧ ಕರೆಯಾಗಿದೆ. ಇದರಲ್ಲಿ ಅಲ್ಲಾಹನ

ಮಹಾನತೆಯನ್ನು ಕೊಂಡಾಡುವ ಪದಗಳಿವೆ. ಮಗುವಿನ ಸಂಬಂಧಿಕರು ಅಥವಾ ಅಲ್ಲಿ ಹಾಜರಿರುವ ಯಾವನೇ ಮುಸ್ಲಿಮ್ ವ್ಯಕ್ತಿ ಈ ವಿಧಿಯನ್ನು ನೆರವೇರಿಸಬಹುದು. ಮಗುವನ್ನು ಬಟ್ಟೆಯಲ್ಲಿ ಸುತ್ತಿ ಕೈಯಲ್ಲಿ ಹಿಡಿದುಕೊಂಡು ಅದರ ಕಿವಿಯ ಬಳಿಯಲ್ಲಿ ಈ ಆಝಾನ್‌ನ ಕರೆಯನ್ನು ಹೇಳಲಾಗುವುದು. ಅದರೊಂದಿಗೆ ಕುರ್‌ಆನ್‌ನ ಕೆಲವು ಸೂಕ್ತಗಳನ್ನು ಪಠಿಸಲಾಗುವುದು.

2) ಸುನ್ನತಿ ಮುಸ್ಲಿಮ್ ಬಾಲಕರಿಗೆ ಮಾಡುವ ಇನ್ನೊಂದು ಮಹತ್ವದ ಧಾರ್ಮಿಕ ಕರ್ಮವಾಗಿದೆ. ಬ್ಯಾರಿಗಳು ಇದನ್ನು ಸುನ್ನತ್ ಸಮಾರಂಭ ಎಂದು ಕರೆಯುತ್ತಾರೆ. ಜಮಾತ್‌ನ ಎಲ್ಲಾ ಬಾಂಧವರನ್ನು ಊಟಕ್ಕೆ ಆಹ್ವಾನಿಸಿ ಅತ್ಯಂತ ಆಡ್ಡೂರಿಯಾಗಿ ಈ ಸಮಾರಂಭವನ್ನು ಆಚರಿಸಲಾಗುತ್ತದೆ. ಬಾಲಕರಿಗೆ ಹತ್ತು ವರ್ಷವಾಗುವ ಮೊದಲು ಇದನ್ನು ಮಾಡಲಾಗುತ್ತದೆ. ಈ ಕಾರ್ಯಕ್ಕಾಗಿಯೇ ಪರಿಣತರಾದ ವಸಾಗಳು ಇರುತ್ತಾರೆ.[24] ಮುಸ್ಲಿಮ್ ಹುಡುಗರಿಗೆ ಕಡ್ಡಾಯವಾಗಿ ಮಾಡಬೇಕಾದ ಧಾರ್ಮಿಕ ವಿಧಿ ಇದಾಗಿದೆ. ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಪುರುಷರೆಲ್ಲರೂ ಈ ಕಾರ್ಯವನ್ನು ಮಾಡಬೇಕು. ಹೊಸದಾಗಿ ಮುಸ್ಲಿಮರಾದವರು ಎಷ್ಟೇ ವಯಸ್ಸಿನವರಾದರೂ ಅವರಿಗೆ ಈ ವಿಧಿಯನ್ನು ನಿರ್ವಹಿಸಬೇಕು. ಅವರನ್ನು ಪೊನ್ನಾನಿಗೆ ಈ ಕಾರ್ಯವನ್ನು ನೆರವೇರಿಸಲಿಕ್ಕಾಗಿ ಕಳುಹಿಸಲಾಗುವುದು.

3) ನಿಕಾಹ್ ಎಂಬುದು ಇಸ್ಲಾಮಿನಲ್ಲಿರುವ ಇನ್ನೊಂದು ಪವಿತ್ರ ಧಾರ್ಮಿಕ ಆಚರಣೆಯಾಗಿದೆ. ಮದುವೆ ಎಂಬುದು ಪ್ರತಿಯೋರ್ವ ಮುಸ್ಲಿಮ್ ವ್ಯಕ್ತಿಗೂ ಕಡ್ಡಾಯವಾಗಿದೆ. ಮದುವೆ ಸಮಾರಂಭದಲ್ಲಿ ಸ್ಥಳೀಯ ಪ್ರಭಾವವಿರುವುದು ಅತ್ಯಂತ ಹೆಚ್ಚಾಗಿ ಕಂಡು ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಈ ಸಮಾರಂಭವನ್ನು ಮೌಲವಿ ಅಂದರೆ ಮಸೀದಿಯ ಖತೀಬರ (ಇಮಾಮ) ಉಪಸ್ಥಿತಿಯಲ್ಲಿ ನೆರವೇರಿಸುತ್ತಾರೆ. ಮದುಮಗ (ಪುದಿಯಾಂಪುಲೆ) ಹಾಗೂ ಮದುಮಗಳ ತಂದೆ ಖತೀಬರ ಸಮ್ಮುಖದಲ್ಲಿ ಕುಳಿತುಕೊಳ್ಳುತ್ತಾರೆ. ಖತೀಬರು ನಿಖಾಹ್ ಖುತ್‌ಬಾ ಪಠಿಸಿ ಧಾರ್ಮಿಕ ವಿಧಿಯನ್ನು ನೆರವೇರಿಸುವುದರೊಂದಿಗೆ ಮದುವೆ ಎಂಬ ಕರಾರಿಗೆ ಎರಡೂ ಕಡೆಯವರು ಬದ್ಧರಾಗುತ್ತಾರೆ. ಇದರೊಂದಿಗೆ ಮಹರನ್ನು ನಿರ್ಧರಿಸಲಾಗುತ್ತದೆ[25] ಮತ್ತು ಅದನ್ನು ಈ ಸಮಾರಂಭದಲ್ಲಿ ಪ್ರಕಟಿಸಲಾಗುತ್ತದೆ. ನಂತರ ದುಆವನ್ನು ನೆರವೇರಿಸಲಾಗುತ್ತದೆ. ಇದು ಅತ್ಯಂತ ಸರಳ ಧಾರ್ಮಿಕ ಸಮಾರಂಭವಾಗಿದ್ದು[26] ಮದುಮಗ ಮತ್ತು ಮದುಮಗಳು (ಆಕೆಯ ಹೆಸರನ್ನು ನಿಕಾಹ್‌ನ ಸಂದರ್ಭದಲ್ಲಿ ಹೇಳಲಾಗುತ್ತದೆ) ಪತಿ ಪತ್ನಿಯರಾಗಿ ಮಾರ್ಪಡುತ್ತಾರೆ. ವಲಿಮ ಅಥವಾ ದಾವತ್ (ಮದುವೆಯ ಊಟ) ಅನ್ನು ನಿಕಾಹ್‌ನ ಮೊದಲು ಅಥವಾ ನಂತರ ನೀಡಲಾಗುತ್ತದೆ.[27]

4) ಮರಣಶಯ್ಯೆಯಲ್ಲಿ ಅಥವಾ ವ್ಯಕ್ತಿಯ ಮರಣಾ ನಂತರ ನಡೆಸುವ ವಿಧಿ ಕಾರ್ಯಗಳೂ ಅತ್ಯಂತ ಮಹತ್ವದ್ದಾಗಿವೆ. ಮರಣಶಯ್ಯೆಯಲ್ಲಿರುವ ವ್ಯಕ್ತಿಗೆ ಕಲಿಮಾವನ್ನು ಪಠಿಸಿ ಕೇಳಿಸಲಾಗುವುದು. ಮರಣಸನ್ನನಾದ ವ್ಯಕ್ತಿಯ ಬಳಿಯಿರುವ ಕುಟುಂಬಿಕರು ಆತನಿಗೆ ಕಲಿಮಾವನ್ನು ಪುನಃ ಪುನಃ ಪಠಿಸಿ ಕೇಳಿಸುತ್ತಿರುತ್ತಾರೆ. ಮರಣ ಹೊಂದುವ ವ್ಯಕ್ತಿಗೆ ಕಲಿಮಾವನ್ನು ಪಠಿಸಲು ಸಾಧ್ಯವಾಗದಿದ್ದರೆ ಆತನಿಗೆ ಪರಲೋಕದಲ್ಲಿ ಮೋಕ್ಷ ದೊರೆಯಲಾರದು ಎಂಬ ನಂಬಿಕೆಯಿದೆ. ಮರಣ ಸನ್ನದ್ಧನಾದ ವ್ಯಕ್ತಿಯ ಮಂಚದ ಬಳಿ ಕುಳಿತು ಕುರ್‌ಆನ್‌ನ

ಸೂಕ್ತಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ಸೂರಃ ಯಾಸೀನ್ ಅನ್ನು ಪಠಿಸಲಾಗುತ್ತದೆ. ಯಾಸೀನ್ ಪಠಣವನ್ನು ವ್ಯಕ್ತಿ ಮರಣ ಹೊಂದಿದ ನಂತರ ಶವವನ್ನು ಕಬರಸ್ಥಾನಕ್ಕೆ ಕೊಂಡೊಯ್ಯಲು ಅಣಿಯಾಗುವವರೆಗೂ ಓದಲಾಗುತ್ತದೆ. ಮೌಲವಿಗಳು ಹಾಗೂ ಸಂಬಂಧಿಕರು ಶವದ ಬಳಿ ಕುಳಿತುಕೊಂಡು ಅಗರಬತ್ತಿಯನ್ನು ಹೊತ್ತಿಸಿ ಯಾಸೀನನ್ನು ಅಥವಾ ಕುರ್‌ಆನ್‌ನ ಇತರ ಯಾವುದಾದರೂ ಅಧ್ಯಾಯವನ್ನು ಓದುತ್ತಿರುತ್ತಾರೆ. ಶವಕ್ಕೆ ಸ್ನಾನ ಮಾಡಿಸಿ, ಕರ್ಪೂರವನ್ನು ಸಿಂಪಡಿಸಿ, ಸುಗಂಧವನ್ನು ಬಳಿಯಲಾಗುತ್ತದೆ. ಬಿಳಿ ಬಟ್ಟೆಯಿಂದ ತಯಾರಿಸಲಾದ ಕೇವಲ ಮಯ್ಯತ್(ಮೃತದೇಹ)ಗೆ ಉಡಿಸಲಾಗುವ ವಿಶೇಷ ವಸ್ತ್ರವಾದ ಕಮೀಸ್ (ಉಡುಪು) ಅನ್ನು ತೊಡಿಸಲಾಗುವುದು. ದುಆ ಪಠಿಸಿದ ನಂತರ ಮೃತ ದೇಹವನ್ನು ಎತ್ತಿ ಬೆತ್ತದಿಂದ ತಯಾರಿಸಲಾದ ಶವ ಸಾಗಿಸುವ ಮಂಚದಲ್ಲಿ ಇಟ್ಟು ಕಬರಸ್ಥಾನಕ್ಕೆ ಕೊಂಡೊಯ್ಯಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 19 ಮತ್ತು 20ನೇ ಶತಮಾನದ ಆರಂಭದಲ್ಲಿ ಬೆತ್ತದಿಂದ ತಯಾರಿಸಲಾದ ಶವ ಮಂಚಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತಿತ್ತು. ಹಾಗೆಯೇ ಮರದ ಶವ ಪೆಟ್ಟಿಗೆಗಳನ್ನು ಉಪಯೋಗಿಸುತ್ತಿದ್ದರು. ಶವ ಪೆಟ್ಟಿಗೆಯನ್ನು ಭುಜದ ಮೇಲೆ ಹೊತ್ತುಕೊಂಡು ಸಾಗಿಸಲಾಗುತ್ತದೆ. ಗೆಳೆಯರು, ಬಂಧುಗಳು ಶವ ಪೆಟ್ಟಿಗೆಗೆ ಹೆಗಲು ಕೊಡಲೇಬೇಕು ಎಂಬ ನಂಬಿಕೆ ಇದೆ. ಆದ್ದರಿಂದ ಮೃತದೇಹವನ್ನು ಕಬರಸ್ಥಾನದ ಬಳಿ ತಲುಪಿಸುವವರೆಗೂ ಭುಜ ಕೊಡುವ ವ್ಯಕ್ತಿಗಳ ಬದಲಾವಣೆಯಾಗುತ್ತಿರುತ್ತದೆ. ಶವ ಮಂಚವನ್ನು ಮಸೀದಿಯ ಹಜಾರದಲ್ಲಿಟ್ಟು ಅದರ ಮುಂದೆ ನೆರೆದ ಮುಸ್ಲಿಮರೆಲ್ಲರೂ ನಿಂತು ಜನಾಝ ನಮಾಝನ್ನು ನೆರವೇರಿಸುತ್ತಾರೆ. ನಂತರ ಮಯ್ಯತ್ತನ್ನು ಕಬರ್ ಅಂದರೆ ಮೃತದೇಹವನ್ನು ಇಡಲು ಅಗೆಯಲಾದ ಗೋರಿಯಲ್ಲಿ ಇಡಲಾಗುತ್ತದೆ. ಗೋರಿಯ ಸುತ್ತಲೂ ಕಲ್ಲನ್ನು ಕಟ್ಟಿ ಮಣ್ಣು ಮೃತದೇಹದ ಮೇಲೆ ಬೀಳದಂತೆ ಜಾಗೃತೆ ವಹಿಸಲಾಗುತ್ತದೆ. ಕಬರ್‌ನಲ್ಲಿ ಇರುವ ವ್ಯಕ್ತಿ ಎದ್ದು ಕುಳಿತುಕೊಂಡು ದೇವಚರರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲಿಕ್ಕಿದೆ ಎಂಬ ನಂಬಿಕೆಯನ್ನು ಮುಸ್ಲಿಮರು ಹೊಂದಿರುತ್ತಾರೆ. ಗೋರಿಯನ್ನು ಮುಚ್ಚಿದ ನಂತರ ಅದನ್ನು ಸ್ವಲ್ಪ ಎತ್ತರಿಸಿ ಅದರ ತಲೆ ಮತ್ತು ಕಾಲಿನ ಪಕ್ಕದಲ್ಲಿ ಕಲ್ಲುಗಳನ್ನು ಇಡಲಾಗುತ್ತದೆ. ಈ ಕಲ್ಲನ್ನು ಮೀಝಾನ್ ಕಲ್ಲು ಎಂದು ಕರೆಯುತ್ತಾರೆ. ಮೌಲವಿಗಳು ಕಬರಿನ ತಲೆಯ ಪಕ್ಕದಲ್ಲಿ ಕುಳಿತು ಇಸ್ಲಾಮಿನ ಸಂದೇಶಗಳ ಸಾರವಿರುವ ತಲ್ಕೀನ್ ಅನ್ನು ಪಠಿಸುತ್ತಾರೆ. ಇದರೊಂದಿಗೆ ಮಯ್ಯತ್ ಸಂಸ್ಕಾರದ ವಿಧಿಯು ಪೂರ್ಣಗೊಳ್ಳುತ್ತದೆ.[28] ಯಾಸೀನ್ ಮತ್ತು ಮೌಲೂದ್ ಪಾರಾಯಣಗಳನ್ನು ವ್ಯಕ್ತಿ ಮರಣ ಹೊಂದಿದ ಮೂರನೇ, ಏಳನೇ ಮತ್ತು ನಲ್ವತ್ತನೇ ದಿನಗಳಲ್ಲಿ ನಡೆಸಲಾಗುತ್ತದೆ. ಈ ಪದ್ಧತಿಯಲ್ಲಿ ಕೆಲವೊಂದು ಕುಟುಂಬದಲ್ಲಿ ಕೆಲವು ರೀತಿಯ ಬದಲಾವಣೆಗಳಿರುತ್ತವೆ. ಪತಿ ಮರಣಹೊಂದಿದ ಸಂದರ್ಭದಲ್ಲಿ ಪತ್ನಿಯಾದವಳು ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಇದ್ದತ್‌ನಲ್ಲಿರಬೇಕಾಗುತ್ತದೆ. ಇದ್ದತ್‌ನ ಸಂದರ್ಭದಲ್ಲಿ ಮಹಿಳೆ ತನ್ನ ಮಕ್ಕಳು, ಅಣ್ಣ ತಮ್ಮಂದಿರು ಮತ್ತು ರಕ್ತ ಸಂಬಂಧಿಗಳನ್ನು ಹೊರತು ಪಡಿಸಿ ಇತರ ಎಲ್ಲ ಪರುಷರಿಂದ ತನ್ನನ್ನು ತಾನೇ ಮರೆಯಲ್ಲಿರಿಸಿಕೊಳ್ಳಬೇಕು. ಇದು ಮುಸ್ಲಿಮರಲ್ಲಿ ಕಡ್ಡಾಯವಾಗಿರುವ ಸಂಪ್ರದಾಯವಾಗಿದೆ. ಜಮಾ ಎಂಬುದು ಮರಣದ ಸಮಯದಲ್ಲಿ ನಡೆಸುವ ಇನ್ನೊಂದು ವಿಧಿಯಾಗಿದ್ದು ಮಯ್ಯತ್ ಸಂಸ್ಕಾರದ ನಂತರ ನಿಗದಿತ ದಿನದವರೆಗೆ ಮೌಲವಿಗಳು ಅಥವಾ ಇನ್ನಾವುದೇ

ಪಾರಾಯಣಗಾರರು ನಿರಂತರವಾಗಿ ರಾತ್ರಿ, ಹಗಲು ಕುರ್‌ಆನ್ ಪಾರಾಯಣ ಮಾಡುತ್ತಿರುತ್ತಾರೆ. ಕೆಲವರು ಇದನ್ನು 7 ದಿನಗಳವರೆಗೂ ಇನ್ನು ಕೆಲವರು ಇದನ್ನು 14 ದಿನಗಳವರೆಗೆ ನೆರವೇರಿಸುತ್ತಾರೆ. ಇದನ್ನು ಜಮಾ ಎಂದು ಕರೆಯಲಾಗುತ್ತದೆ. ಹೀಗೆ ಪಾರಾಯಣ ಮಾಡುವವರು ಮುಲ್ಲಾಗಳಾಗಿದ್ದರೂ ಅಥವಾ ಇತರ ಯಾರೇ ಆಗಿದ್ದರೂ ಅವರ ಊಟ, ಉಪಚಾರದ ವ್ಯವಸ್ಥೆಯನ್ನು ಮೃತರ ಮನೆಯವರು ಮಾಡಬೇಕು. ಹೀಗೆ ಓದುವುದರಿಂದ ಮೃತ ವ್ಯಕ್ತಿ ದೇವಚರರು ಗೋರಿಯಲ್ಲಿ ನೀಡುವ ಶಿಕ್ಷೆಗಳಿಂದ ರಕ್ಷಣೆ ಹೊಂದುತ್ತಾನೆ ಎಂಬ ನಂಬಿಕೆ ಇದೆ. ಇದು ದುಬಾರಿ ಸಂಪ್ರದಾಯವಾಗಿದ್ದು, ಶೀಮಂತರು ಮಾತ್ರ ಈ ವಿಧಿಯನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. 19ನೇ ಶತಮಾನದಲ್ಲಿ ಈ ಆಚರಣೆ ಸಾಮಾನ್ಯವಾಗಿತ್ತಾದರೂ 20ನೇ ಶತಮಾನದಲ್ಲಿ ಇದು ಅಪರೂಪದ ಆಚರಣೆಯಾಗಿ ಮಾರ್ಪಟ್ಟಿದೆ.[29]

ಮೂಢನಂಬಿಕೆಗಳು

ಸ್ಥಳೀಯ ಮುಸ್ಲಿಮರು ಇತರ ಧರ್ಮಗಳಿಂದ ಮತಾಂತರಗೊಂಡವರಾಗಿರುವುದರಿಂದ ಇವರಲ್ಲಿ ತಮ್ಮ ಪೂರ್ವಜರ ಹಲವಾರು ಸಾಂಪ್ರದಾಯಿಕ ನಂಬಿಕೆಗಳು ಉಳಿದುಕೊಂಡಿವೆ. ತುಳುನಾಡು ಭೂತಗಳ ನಾಡಾಗಿದ್ದು ಇಲ್ಲಿ ಹೆಚ್ಚಿನ ಜನರು ಈ ಭೂತಗಳಲ್ಲಿ ನಂಬಿಕೆ ಉಳ್ಳವರಾಗಿದ್ದಾರೆ. ಭೂತಾರಾಧನೆ ಇಲ್ಲಿ ಸಾಮಾನ್ಯ ಆಚರಣೆ ಯಾಗಿದ್ದು ಇಲ್ಲಿ ಹಲವು ಭೂತಸ್ಥಾನಗಳಿವೆ. ಭೂತಾರಾಧನೆ (ನೇಮ)ಗಳು ಭೂತಸ್ಥಾನಗಳಲ್ಲಿ ಸಾಮಾನ್ಯವಾಗಿದೆ, ಮುಸಲ್ಮಾನರಲ್ಲಿ ಈ ಅದೃಶ್ಯ ಶಕ್ತಿಗಳು ಮನುಷ್ಯನನ್ನು ತಪ್ಪು ದಾರಿ ಗೆಳೆಯುತ್ತವೆ ಎಂಬ ನಂಬಿಕೆ ಇದೆ, ಕುರ್‌ಆನ್ ಮನುಷ್ಯರಿಗೆ ಶೈತಾನನ (ದುಷ್ಟಶಕ್ತಿ) ಅನುಸರಣೆ ಮಾಡದಂತೆ ಎಚ್ಚರಿಸುತ್ತದೆ. ಹಾಗೆಯೇ ಶೈತಾನನ ಹಾದಿಯನ್ನು ತುಳಿದರೆ ಆಗುವ ನಷ್ಟದ ಬಗ್ಗೆಯೂ ಅದು ಮನುಷ್ಯನನ್ನು ಎಚ್ಚರಿಸುತ್ತದೆ. ಮುಸಲ್ಮಾನರು ಈ ದುಷ್ಟಶಕ್ತಿ ಮಹಿಳೆಯರು ಮೈಲಿಗೆಯಲ್ಲಿರುವಾಗ, ಗರ್ಭಿಣಿಯಾಗಿರುವಾಗ ಅದರ ಪ್ರಭಾವ ಉಂಟಾಗುತ್ತದೆ ಎಂದು ನಂಬುತ್ತಾರೆ, ಅದೇ ರೀತಿ ಮಕ್ಕಳನ್ನು ಹೊರಗಡೆ ಒಬ್ಬರೇ ಕಳುಹಿಸಲಿಕ್ಕೂ ಹಿಂಜರಿಯುತ್ತಾರೆ.[30] ಇಂತಹ ಇನ್ನೊಂದು ನಂಬಿಕೆಯು ದೆವ್ವಗಳ ಬಗ್ಗೆಯಾಗಿದ್ದು, ಇದು ದಕ್ಷಿಣ ಕನ್ನಡದಲ್ಲಿ ಸಾಮಾನ್ಯವಾಗಿರುವ ನಂಬಿಕೆಯಾಗಿದೆ. ಮನುಷ್ಯ ತನ್ನ ಜೀವಿತಾವಧಿಯಲ್ಲಿ ಸಂತೃಪ್ತ ಜೀವನವನ್ನು ಸಾಗಿಸದಿದ್ದರೆ ಅವನು ದೆವ್ವವಾಗಿ ಬಂದು ಕಾಡುತ್ತಾನೆ ಎಂಬ ನಂಬಿಕೆ ಇದೆ. ಆತ್ಮಹತ್ಯೆ ಮಾಡಿದ, ಕೊಲೆಯಾದ ಅಥವಾ ಅಪಘಾತದಲ್ಲಿ ಮಡಿದ ವ್ಯಕ್ತಿಗಳ ಆತ್ಮವು ದೆವ್ವವಾಗಿ ಮಾರ್ಪಡುತ್ತದೆ ಎಂಬ ನಂಬಿಕೆ ಸಾಮಾನ್ಯವಾಗಿದೆ. ಇಸ್ಲಾಮಿನಲ್ಲಿ ಈ ದೆವ್ವಗಳ ಕುರಿತು ಸ್ಪಷ್ಟ ಕಲ್ಪನೆ ಇಲ್ಲದಿದ್ದರೂ ವ್ಯಕ್ತಿಯೋರ್ವನಿಗೆ ರೂಹ್ ಮತ್ತು ರುಹಾನಿ ಇರುತ್ತದೆ ಹಾಗೂ ಮರಣದ ಸಂದರ್ಭದಲ್ಲಿ ರೂಹ್‌ಅನ್ನು ದೇವಚರರು ಕೊಂಡೊಯ್ಯುತ್ತಾರೆ, ರುಹಾನಿಯನ್ನು ಹೂಳಲಾಗುತ್ತದೆ ಎಂಬ ನಂಬಿಕೆ ಇದೆ. ಮನುಷ್ಯ ತನ್ನ ಜೀವನದಲ್ಲಿ ಸಂತೃಪ್ತನಲ್ಲದಿದ್ದರೆ ಈ ರುಹಾನಿಯು ಅತ್ತಿತ್ತ ಸುತ್ತಾಡಲಾರಂಭಿಸುತ್ತದೆ. ಈ ನಂಬಿಕೆಯಿಂದಾಗಿಯೇ ಮುಸ್ಲಿಮರಲ್ಲೂ ದೆವ್ವಗಳ ಕಲ್ಪನೆ ಇದೆ ಎಂದು ಹೇಳಲಾಗುತ್ತದೆ. ದೆವ್ವಗಳ ಕಾಟದಿಂದಾಗಿಯೇ ನವವಿವಾಹಿತೆ

– ವಧು ಮತಿಭ್ರಾಂತಳಾಗುವುದು, ಮಗು ಮಾನಸಿಕವಾಗಿ ಅಸ್ವಸ್ಥವಾಗಿರುವುದು, ಗರ್ಭಿಣಿ ಮಹಿಳೆ ಖಿನ್ನತೆಗೊಳಗಾಗುವುದು ಇತ್ಯಾದಿಗಳು ಸಂಭವಿಸುತ್ತದೆ ಎಂಬ ಪ್ರತೀತಿ ಇದೆ. ದೆವ್ವಗಳ ಕಾಟಗಳನ್ನು ನೀಗಿಸಲಿಕ್ಕಾಗಿಯೇ ಹಲವು ಮಂತ್ರವಾದಿಗಳಿದ್ದಾರೆ. ಈ ಮಂತ್ರವಾದಿಗಳು ದೆವ್ವಗಳನ್ನು ಸಂತುಷ್ಟಗೊಳಿಸಿ ಅದು ಕಾಡಿಸುತ್ತಿರುವ ವ್ಯಕ್ತಿಯ ದೇಹದಿಂದ ನಿರ್ಗಮಿಸುವಂತೆ ಮಾಡುತ್ತಾರೆ ಎಂಬ ಕಲ್ಪನೆ ಶತಮಾನಗಳಿಂದಲೂ ತುಳುನಾಡಿನಲ್ಲಿ ಚಾಲ್ತಿಯಲ್ಲಿದೆ. ದೆವ್ವ ಗಳಿಂದಾಗಿ ಹಲವು ಆಸೌಖ್ಯ ಲಕ್ಷಣಗಳು ಕಂಡುಬರುತ್ತದೆ ಎಂಬ ನಂಬಿಕೆ ಇದ್ದು ಇದನ್ನು ಪರಿಹರಿಸಲು ಮಂತ್ರವಾದಿಗಳ ಮೊರೆ ಹೋಗಲಾಗುತ್ತದೆ. ಇಲ್ಲಿನ ಸ್ಥಳೀಯ ಮುಸ್ಲಿಮರು ಬೊಬ್ಬರ್ಯ ಮತ್ತು ಆಲಿಭೂತಗಳು ತಮ್ಮ ದುಷ್ಟಶಕ್ತಿಯನ್ನು ಜನರ ಮೇಲೆ ತೋರಿಸುತ್ತದೆ ಎಂದು ನಂಬುತ್ತಾರೆ, ಕೆಲವು ಮೌಲವಿಗಳೂ ಈ ಮಂತ್ರವಾದಿಗಳ ಪಾತ್ರವನ್ನು ನಿರ್ವಹಿಸುತ್ತಿದ್ದು ಇದು ದೆವ್ವಗಳಲ್ಲಿರುವ ಮುಸ್ಲಿಮರ ನಂಬಿಕೆಯನ್ನು ಬಲಗೊಳಿಸಿದೆ. ಆದರೆ 20ನೇ ಶತಮಾನದಲ್ಲಿ ಇಸ್ಲಾಮಿನ ನೈಜ ಶಿಕ್ಷಣದೊರೆತು ಮುಸ್ಲಿಮರಲ್ಲಿ ಇಂತಹ ನಂಬಿಕೆಗಳು ಕ್ಷೀಣಿಸುತ್ತಾ ಬಂತು.

ರೋಗಿಗಳಿಗೆ ಶುಶ್ರೂಷೆ ನೀಡುವಲ್ಲಿಯೂ ಹಲವು ಮೂಢನಂಬಿಕೆಗಳು ಚಾಲ್ತಿಯಲ್ಲಿ ರುವುದು ಕಾಣಸಿಗುತ್ತದೆ. ದೆವ್ವಗಳು ಮನುಷ್ಯರಲ್ಲಿ ಭಯವನ್ನುಂಟು ಮಾಡಿದರೆ ಜ್ವರಬಾಧೆ ಯುಂಟಾಗುತ್ತದೆ. ಹಾಗೆಯೇ ಹಲವು ರೀತಿಯಲ್ಲಿ ಕಾಡುವ ಜ್ವರವು ದೆವ್ವಗಳಿಂದಲೇ ಆಗಿದೆ ಎಂಬ ನಂಬಿಕೆಯಿದೆ. ದೆವ್ವಗಳು ಮರಳು ಎಸೆದರೆ ಈ ರೀತಿ ಜ್ವರ ಕಾಡುತ್ತದೆ ಎನ್ನಲಾಗುತ್ತದೆ. ಇದಕ್ಕಿರುವ ಸಾಮಾನ್ಯ ಚಿಕಿತ್ಸೆ ಎಂದರೆ 'ಕುರ್‌ತಿ'ಯಾಗಿದೆ. ಕೆಲವು ಮೌಲ್ವಿಗಳು ಅಥವಾ ಮಹಿಳೆಯರು ಈ ಕುರುತಿಯಲ್ಲಿ ನೈಪುಣ್ಯತೆಯನ್ನು ಹೊಂದಿರುತ್ತಾರೆ. ಕುರುತಿಯನ್ನು ಹಳದಿ ಮತ್ತು ಸುಣ್ಣವನ್ನು ನೀರಿನಲ್ಲಿ ಬೆರಸಿ ತಯಾರಿಸಲಾಗುತ್ತದೆ. ಇದರಿಂದ ಧೂಳಕಣದಂತಹ ಮರಳನ್ನು ನೀರಿನಿಂದ ಬೇರ್ಪಡಿಸಲಾಗುತ್ತದೆ.[31] ಬೇರ್ಪಡಿಸಲಾದ ಈ ಮರಳ ಕಣವನ್ನು ತೋರಿಸಿ ಅದನ್ನು ದೆವ್ವ ಬಿಸಾಡಿದ ಮರಳು ಎಂದು ಹೇಳುತ್ತಾರೆ. ಹಾಗೆಯೇ ಹೊಟ್ಟೆ ನೋವಿಗೂ ಇಂತಹ ಚಿಕಿತ್ಸೆಯನ್ನು ಮಾಡಲಾಗುತ್ತದೆ. ಮೆಣಸು, ಹುಳಿ ಮತ್ತು ಉಪ್ಪನ್ನು ಬೆರಸಿ ಮಾಡಿರುವ ಮಿಶ್ರಣವನ್ನು ಮಂತ್ರವಾದಿ ಅಥವಾ ಮೌಲ್ವಿಗಳೊಂದಿಗೆ ಕೊಟ್ಟು ಅದನ್ನು ಮಂತ್ರಿಸಿಕೊಡಲು ಕೇಳಲಾಗುತ್ತದೆ. ಇದನ್ನು ಮಂತ್ರಿಸಿದ ನಂತರ ಹೊಟ್ಟೆ ನೋವಿರುವ ವ್ಯಕ್ತಿಗೆ ತಿನ್ನಲು ಕೊಡಲಾಗುವುದು. ಮಂತ್ರಿಸಿದ ನೀರನ್ನು ಕುಡಿಯುವುದರಿಂದ ಹಾಗೆಯೇ ಮಂತ್ರಿಸಿ ಗಂಟು ಕಟ್ಟಲಾದ ದಾರಗಳನ್ನು ಕೈಗೆ ಕಟ್ಟುವುದರಿಂದ ಎಲ್ಲ ರೋಗ ರುಜಿನಗಳು ಪರಿಹಾರ ಗೊಳ್ಳುತ್ತದೆ ಎಂದು ಹೇಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ನಂಬಿಕೆಗಳು ಸಾಮಾನ್ಯ ವಾಗಿದ್ದು, ಇದರಲ್ಲಿ ನುರಿತ ಹಕೀಮ್‌ಗಳು (ಮಂತ್ರವಾದಿಗಳು) ಈ ರೀತಿಯ ಚಿಕಿತ್ಸೆಯನ್ನು ನೀಡುತ್ತಾರೆ. ಕೊದಿ ಎಂಬುದು ಈ ರೀತಿಯ ಇನ್ನೊಂದು ಚಿಕಿತ್ಸೆಯಾಗಿದೆ. ಮಗುವೊಂದು ಸ್ವಾದಿಷ್ಟ ಖಾದ್ಯವನ್ನು ಹಸಿದಿರುವ ವ್ಯಕ್ತಿಯ ಮುಂದೆ ತಿಂದಾಗ ಆ ವ್ಯಕ್ತಿ ಅದಕ್ಕಾಗಿ ಆಸೆ ಪಟ್ಟರೆ ಮಗುವಿಗೆ ಈ 'ಕೊದಿ' ತಾಗಿ ಹೊಟ್ಟೆನೋವಾಗುತ್ತದೆ ಎಂಬ ನಂಬಿಕೆಯಿದೆ. ಇದಕ್ಕಿರುವ ಚಿಕಿತ್ಸೆ ಅತ್ಯಂತ ಕುತೂಹಲಕಾರಿಯಾಗಿದೆ. ಸೂರ್ಯಾಸ್ತದ ಸಮಯದಲ್ಲಿ ಪಾತ್ರೆಯಲ್ಲಿ ನೀರನ್ನಿಟ್ಟು ಅದರ ಮಂದೆ 'ಕೊದಿ' ತಾಗಿದ ಮಗುವನ್ನು ಕುಳ್ಳಿರಿಸಲಾಗುವುದು. ಖಾಲಿ ಕೊಡವೊಂದನ್ನು ತೆಗೆದು ಒಣ ಹುಲ್ಲನ್ನು ಹೊತ್ತಿಸಿ ಅದನ್ನು ಬಾಧಿತ ಮಗುವಿನ ತಲೆಯ ಸುತ್ತಾ ಮೂರು ಸುತ್ತು

ಸುತ್ತಿ ಅದನ್ನು ಖಾಲಿ ಕೊಡದೊಳಗೆ ತುಂಬಿಸಲಾಗುವುದು. ಕೂಡಲೇ ಅದನ್ನು ನೀರಿರುವ ಪಾತ್ರೆಗೆ ಸುರಿದಾಗ ನೀರನ್ನು ಕೊಡವು ಆವಿ ಮಾಡುತ್ತದೆ. ನೀರು ಆವಿಯಾಗುವುದು ಈ ಕೊದಿ ಹೋಗುವ ಲಕ್ಷಣವಾಗಿದ್ದು ಇದರಿಂದ ರೋಗಬಾಧಿತ ಮಗುವು ಗುಣಮುಖವಾಗುವುದು. ಹಿಂದೆ ಈ ಪದ್ಧತಿಯು ಹಳ್ಳಿಗಳಲ್ಲಿ ಸರ್ವೇಸಾಮಾನ್ಯವಾಗಿತ್ತು, 19ನೇ ಶತಮಾನದಲ್ಲಿದ್ದ ಇಂತಹ ರೂಢಿಗಳು ಈಗ ಕಂಡು ಬರುವುದಿಲ್ಲ. ನುರಿತ ಮಂತ್ರವಾದಿಗಳು 'ತಾಯಿತ' ಅಥವಾ 'ಇಸ್ಮ್' ಅನ್ನು ವಿತರಿಸುತ್ತಿದ್ದರು. ಕುರ್‌ಆನ್‌ನ ವಾಕ್ಯಗಳನ್ನು ಬರೆಯಲಾಗಿರುವ 'ಇಸ್ಮುಲ್ ಉಲಾಮ್' ಎಂಬ ತಾಯಿತವನ್ನು ಕಟ್ಟಿದರೆ ಎಲ್ಲ ವಿಧದ ದುಷ್ಟ ಶಕ್ತಿಗಳಿಂದ ಮುಕ್ತಿ ಹೊಂದಬಹುದು ಎಂಬ ಕಲ್ಪನೆಯಿದೆ.[32] ಹೀಗಾಗಿ ಕೆಲವು ನುರಿತ ಮೌಲವಿಗಳು ಮೊದಲೇ ಸಿದ್ಧಗೊಳಿಸಿರುವ ತಾಮ್ರದ ಹಾಳೆಗಳಲ್ಲಿ ಬರೆದಿರುವ ಇಸ್ಮ್‌ನ್ನು ನೀಡುತ್ತಾರೆ. ಹತ್ತೊಂಬತ್ತನೆ ಶತಮಾನದಲ್ಲಿ ಹಾಗೂ 20ನೇ ಶತಮಾನದ ಆರಂಭದಲ್ಲಿ ಈ ಇಸ್ಮ್‌ನ ಮೇಲಿನ ನಂಬಿಕೆಯು ಸರ್ವೇಸಾಮಾನ್ಯವಾಗಿತ್ತು. ಇದನ್ನು 'ಉರ್ಕು' ಎಂಬ ಲೋಹದ ಮಡಚುಗಳಲ್ಲಿ ಹಾಕಿ ಕುತ್ತಿಗೆಯಲ್ಲಿ ಅಥವಾ ಕೈ ರಟ್ಟೆಯ ಸುತ್ತ ಕಟ್ಟುತ್ತಿದ್ದರು. ಈ ಉರ್ಕನ್ನು ಗೋರಿಯೊಳಗೆ ಮೃತ ದೇಹವನ್ನಿರಿಸುವಾಗ ಅದರೊಂದಿಗೆ ಇಡಲಾಗುತ್ತಿತ್ತು.[33] ಈ ರೀತಿಯ ಇಸ್ಮ್ ಉರ್ಕುಗಳು ಬರುಬರುತ್ತಾ ಕಾಣೆಯಾಗಿದ್ದರೂ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಕಂಡು ಬರುತ್ತದೆ. ಈಗಲೂ ಹಳ್ಳಿಗಳಲ್ಲಿ ಇಸ್ಮ್ ಮೌಲವಿಗಳಿದ್ದು ಇಂತಹ ನಂಬಿಕೆಗಳಿರುವ ಜನರ ಸಮಸ್ಯೆಗಳಿಗೆ ಇವರು ಪರಿಹಾರವನ್ನು ನೀಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಅಭಿಯಾನ ಗಳ ಸಹಾಯದಿಂದ ಈ ರೀತಿಯ ಮೂಢನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನ ನಡೆಸಲಾಗುತ್ತದೆ.

★★★

1. ಹಿಂದಿನ ಅಧ್ಯಾಯದಲ್ಲಿ ತಿಳಿಸಲಾಗಿದೆ.
2. ಹಿಂದಿನ ಅಧ್ಯಾಯದಲ್ಲಿ ತಿಳಿಸಲಾಗಿದೆ.
3. ಎ.ಆರ್. ನೂರಿ ಮೈಕಾಲ ಪುಟ 50- 51
4. ಕೋಚುಮನ್ ಸರ್ವೆ (1904-05) ಮತ್ತು ಇತರ ಮೂಲಗಳಿಂದ ಸಂಗ್ರಹಿಸಲಾಗಿದೆ.
5. ಮೌಖಿಕ ಇತಿಹಾಸ, ಝಕರಿಯ್ಯಾ ಬಜ್ಪೆ ಮತ್ತು ಇತರರು.
6. ಮೌಖಿಕ ಇತಿಹಾಸ, ಬಿ.ಆರ್ ಅಹಮದ್ ಮತ್ತು ಇತರರು.
7. ಸ್ಟುವರ್ಟ್ ಎಸ್.ಕೆ. ಮ್ಯಾನುವೆಲ್ ಭಾಗ 11, ಪುಟ 115
8. ಎ.ಆರ್. ನೂರಿ ಮೈಕಾಲ ಪುಟ 35
9. ಟಿ.ಉಬೈದ್, ಅಬ್ದುಲ್ಲಾ ಖಾದಿ (ಟಿ.ಆರ್) ಸಿ.ಕೆ.ಹುಸೈನ್ 1964
10. ಸೂಚನೆ: ನೇರ್ಚ ಎಂದರೆ ಒಂದು ನಿರ್ದಿಷ್ಟ ಮೊತ್ತವನ್ನು ಹರಕೆಯಾಗಿ ಸಲ್ಲಿಸುವುದು. ಇದು ತಾವು ನಿರ್ಧರಿಸಿದ ಕಾರ್ಯ ನೆರವೇರಿದರೆ ಮಾತ್ರ ನೀಡಬೇಕಾವುದು, ಇಲ್ಲದಿದ್ದರೆ

ನೀಡಬೇಕಾಗಿಲ್ಲ

11. ಉಳ್ಳಾಲದ ಸೈಯದ್ ಮದನಿ ಉರೂಸ್‌ನಲ್ಲಿ ಗೋರಿಗೆ ಮುಚ್ಚಲಾಗುವ ಮರದ ಮುಚ್ಚಳವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು.
12. ದಫ್ ಒಂದು ಸಂಗೀತದ ಪರಿಕರ. ಅದು ಒಂದು ಚಿಕ್ಕ ಬ್ಯಾಂಡ್ ಅಥವಾ ಡೋಲಿನಂತಿದೆ. ಇದರ ಒಂದು ಭಾಗದಲ್ಲಿ ವೃತ್ತಾಕಾರದ ಮರದ ಕೋಲಿಗೆ ಹದಮಾಡಲ್ಪಟ್ಟ ಚರ್ಮವನ್ನು ಅಂಟಿಸಲಾಗಿದೆ. ಇದು ಪ್ರತಿಧ್ವನಿಸುವ ನಾದವನ್ನು ಹೊರಡಿಸುತ್ತದೆ. ಇದರ ಬಳಕೆಯು ಈಗಲೂ ಇದೆ.
13. ತಾಲೀಮು ಎಂಬುದು ಸಾಂಪ್ರದಾಯಿಕ ಯುದ್ಧ ಕೌಶಲ್ಯವಾಗಿದೆ. ಇದೊಂದು ಉಲ್ಲಾಸದಾಯಕ ಕಸರತ್ತಾಗಿದೆ. ಈ ತಾಲೀಮು ನೀಡುವ ಸಂಸ್ಥೆಗಳು ಮಸೀದಿ ಮತ್ತು ಮಂದಿರದ ಅಧೀನದಲ್ಲಿರುತ್ತದೆ. ಸಾರ್ವಜನಿಕರಿಂದ ಇದಕ್ಕೆ ಸರಿಯಾದ ಪ್ರೋತ್ಸಾಹ ಸಿಗದ್ದರಿಂದ ಕಾಲಕ್ರಮೇಣ ಇದು ಕಣ್ಮರೆಯಾಗುತ್ತಿದೆ.
14. ಧಾರ್ಮಿಕ ಪಠಣ ಮತ್ತು ಪಾರಾಯಣ. ಈ ಪದ್ಧತಿಯು ಈಗಲೂ ಚಾಲ್ತಿಯಲ್ಲಿದೆ.
15. ಎ.ಆರ್. ನೂರಿ ಮೈಕಾಲ ಪುಟ 53–57 – ನಿವೃತ್ತ ನ್ಯಾಯಾಧೀಶ ಓ.ಹೆಚ್. ರಹೀಮ್ ಅಹಮದ್‌ರವರ ಲೇಖನವೊಂದರಲ್ಲಿ ಉಲ್ಲೇಖಿಸಲಾಗಿದೆ.
16. ಮೌಖಿಕ ಇತಿಹಾಸ, ಮೊಯ್ದಿನ್ ಮೌಲವಿ ಹೆಜಮಾಡಿ, ಝಕರಿಯ್ಯಾ ಮತ್ತು ಇತರರು.
17. ಮೌಖಿಕ ಇತಿಹಾಸ, ಮೇಲಿನಂತೆಯೇ
18. ಮೌಖಿಕ ಇತಿಹಾಸ, ಮೇಲಿನಂತೆಯೇ
19. ಮಂಗಳೂರಿನ ಬಾವುಟಗುಡ್ಡೆಯ ಸಂತ ಅಲೋಶಿಯಸ್ ಕಾಲೇಜಿನ ಬಳಿ ಇರುವ ಈದ್ಗಾವು ಟಿಪ್ಪು ಸುಲ್ತಾನರಿಂದ ನಿರ್ಮಿಸಲ್ಪಟ್ಟಿದೆ. ಈದ್ ನಮಾಝನ್ನು ಈಗಲೂ ಅಲ್ಲಿ ನೆರವೇರಿಸಲಾಗುತ್ತಿದೆ. ಈ ರೀತಿಯ ಈದ್ಗಾಗಳು ಜಿಲ್ಲೆಯ ಹಲವು ಕಡೆಗಳಲ್ಲಿವೆ.
20. ವಿವರಣೆಗೆ ಮುಂದಿನ ಅಧ್ಯಾಯವನ್ನು ನೋಡಿ.
21. ಮೌಖಿಕ ಇತಿಹಾಸ, ಮೊಯ್ದಿನ್ ಮೌಲವಿ, ಝಕರಿಯ್ಯಾ, ಅಬ್ದುಲ್ ರಝಾಕ್ ಮತ್ತು ಇತರರು.
22. ಮೇಲಿನಂತೆಯೇ
23. ವಿವರಣೆಗೆ ಮುಂದಿನ ಅಧ್ಯಾಯವನ್ನು ನೋಡಿ.
24. ವಸಾಗಳು ಮುಂಜಿ ಕಾರ್ಯ ನಿರ್ವಹಿಸಲು ತರಬೇತಿಗೊಳಿಸಲ್ಪಟ್ಟವರು. ಇವರಿಗೆ ರಕ್ತ ಹರಿಯುವುದನ್ನು ತಕ್ಷಣ ನಿಲ್ಲಿಸಲು ಬೇಕಾದ ವೈದ್ಯಕೀಯ ಜ್ಞಾನ ಮತ್ತು ನೈಪುಣ್ಯದ ಅಗತ್ಯವಿದೆ.
25. ಮೆಹರ್ ಅಂದರೆ ವಿವಾಹದ ಸಂದರ್ಭದಲ್ಲಿ ಪರಸ್ಪರರ ಒಪ್ಪಿಗೆಯಂತೆ ವರನು ವಧುವಿಗೆ ನೀಡುವ ಮೊತ್ತವಾಗಿದೆ.
26. ವಿವರಣೆಗೆ ಪುಟ 134 ನೋಡಿ.
27. ಮೌಖಿಕ ಇತಿಹಾಸ, ಮೊಯ್ದಿನ್ ಮೌಲವಿ ಹೆಜಮಾಡಿ, ಝಕರಿಯ್ಯಾ, ಅಬ್ದುಲ್ ರಝಾಕ್ ಮಂಗಳೂರು ಮತ್ತು ಇತರರು.

28. ಮೌಖಿಕ ಇತಿಹಾಸ, ಮೇಲಿನಂತೆಯೇ
29. ಮೌಖಿಕ ಇತಿಹಾಸ, ಮೊಯ್ದು ಮೌಲವಿ, ಝಕರಿಯ್ಯಾ ಮತ್ತು ಇತರರು.
30. ಮೌಖಿಕ ಇತಿಹಾಸ, ಝಕರಿಯ್ಯಾ ಬಜ್ಪೆ, ಡಾ. ಅಬೂಬಕರ್ ಬಂಟ್ವಾಳ್ ಮತ್ತು ಇತರರು.
31. ಮೌಖಿಕ ಇತಿಹಾಸ, ಮೇಲಿನಂತೆಯೇ
32. ಮೌಖಿಕ ಇತಿಹಾಸ, ಅಬ್ದುಲ್ ರಝಾಕ್, ಡಾ. ಅಬೂಬಕರ್ ಮತ್ತು ಇತರರು.
33. ಮೌಖಿಕ ಇತಿಹಾಸ, ಅಬ್ದುಲ್ಲಾ ಬ್ಯಾರಿ ಕುಂಬ್ಳೆ, ಡಾ. ಝಕರಿಯ್ಯಾ ಮತ್ತು ಇತರರು.

ಅಧ್ಯಾಯ - 5

ಸಮಾಜ ಮತ್ತು ಸಂಸ್ಕೃತಿ

ದಕ್ಷಿಣ ಕನ್ನಡದ ಮುಸಲ್ಮಾನರಲ್ಲಿ ಸುಮಾರು 80%ರಷ್ಟು ಬ್ಯಾರಿಗಳಿದ್ದಾರೆ. ಅರಬರು ವ್ಯಾಪಾರ ಕುದುರಿಸುವ ನಿಟ್ಟಿನಲ್ಲಿ ಈ ಪ್ರದೇಶಕ್ಕೆ ಬರುತ್ತಿದ್ದರು. ಅವರಿಂದ ಪ್ರಭಾವಿತರಾಗಿ ಇಸ್ಲಾಮ್ ಮತಾನುಯಾಯಿಗಳಾಗಿ ಪರಿಣಮಿಸಿದ ಇಲ್ಲಿನ ಸ್ಥಳೀಯ ಮುಸ್ಲಿಮರಾದ ಬ್ಯಾರಿಗಳಲ್ಲಿ ತಮ್ಮ ಪೂರ್ವಿಕರಾದ ಇತರ ಧರ್ಮಾನುಯಾಯಿಗಳ ಸಂಸ್ಕೃತಿಯ ಪ್ರಭಾವ ಅತ್ಯಂತ ಹೆಚ್ಚಾಗಿರುವುದು ಕಂಡುಬರುತ್ತದೆ, ತಮಗೆ ಪರಿಚಿತವಿರುವ ಸ್ಥಳೀಯ ಭಾಷೆಗಳನ್ನು ಆಡುತ್ತಿದ್ದ ಇವರು ತಮ್ಮ ಪ್ರದೇಶದಲ್ಲಿದ್ದ ಜೀವನ ಶೈಲಿ, ಹವ್ಯಾಸಗಳನ್ನು ರೂಢಿಸಿಕೊಂಡು ಒಂದು ಹೊಸ ವರ್ಗವಾಗಿ ರೂಪುಗೊಂಡರು.

ಇದೇ ರೀತಿಯ ಮೂಲವಿರುವ ಮಲಬಾರ್ ತೀರದ ಮಾಪಿಳ್ಳೆಗಳು ಇಂತಹುದೇ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದು ತಮ್ಮ ಆಡುಭಾಷೆಯಾಗಿ ಮಲಯಾಳಂ ಅನ್ನು ಆರಿಸಿಕೊಂಡಿದ್ದರು, ಬ್ಯಾರಿಗಳು ಮತ್ತು ಮಾಪಿಳ್ಳೆಗಳಲ್ಲಿರುವ ಸಾಮ್ಯತೆಯ ಬಗ್ಗೆ ಅರಿವಿರುವುದು ಅಗತ್ಯ.

1) ಬ್ಯಾರಿಗಳು ಮತ್ತು ಮಾಪಿಳ್ಳೆಗಳು ಒಂದೇ ಮೂಲದಿಂದ ಬಂದವರಾಗಿದ್ದರೂ ಅವರಲ್ಲಿ ವಿವಿಧ ಭಿನ್ನತೆಗಳು ಕಾಣಸಿಗುತ್ತವೆ. ಇಲ್ಲಿನ ಸ್ಥಳೀಯ ಸಂಪ್ರದಾಯಗಳ ಮೂಲದಿಂದ ಬಂದ ಈ ಎರಡು ವರ್ಗಗಳಲ್ಲಿ ಸ್ಥಳೀಯ ಸಂಸ್ಕೃತಿಯ ಹಾಗೆಯೇ ಯಮನ್ ಮತ್ತು ಅರಬ್ ರಾಷ್ಟ್ರಗಳ ಸಂಸ್ಕೃತಿಯ ಪ್ರಭಾವವಿರುವುದು ಕಂಡುಬರುತ್ತದೆ.

2) ಬ್ಯಾರಿಗಳು ಮತ್ತು ಮಾಪಿಳ್ಳೆಗಳು ತಮ್ಮ ಮೂಲ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಂಡವರಾಗಿದ್ದು, ತಮ್ಮ ಪೂರ್ವಿಕರಾದ ಭಾರತೀಯರು ಯಾವ ಭಾಷೆಯನ್ನು ಮಾತನಾಡುತ್ತಿದ್ದರೊ ಅದೇ ಭಾಷೆಯನ್ನು ಇಸ್ಲಾಮ್ ಧರ್ಮ ಸ್ವೀಕರಿಸಿದ ನಂತರ ಆಡುತ್ತಿದ್ದರು. ಮಲಬಾರಿನ ಭಾಷೆ ಮಲಯಾಳಂ ಆಗಿದ್ದು ಈ

ಭಾಷೆಯನ್ನು ಮಾಪಿಳ್ಳೆಗಳು ರೂಢಿಸಿಕೊಂಡರು. ಬ್ಯಾರಿಗಳು ತಮ್ಮದೇ ಆದ ಆಡುಭಾಷೆಯನ್ನು ಹೊಂದಿದ್ದು ಇದರಲ್ಲಿ ತುಳು ಭಾಷೆಯ ಮೂಲ ಪದಗಳು ಕಂಡುಬರುತ್ತದೆ ಹಾಗೂ ಇದಕ್ಕೆ ಮಲಯಾಳಂನಂತೆ ಉಚ್ಚಾರ ಇದೆ. ಇಲ್ಲಿನ ಬಿಲ್ಲವರು ಮತ್ತು ಮೊಗವೀರರ ಮಾತೃ ಭಾಷೆಯು ತುಳುವಾಗಿದೆ. ಕೊಡಗಿನ ಕೊಡವ ಭಾಷೆಯು ಮಲಯಾಳಂ ಭಾಷೆಯ ಹಾಗೆ ಕೇಳುವಂತೆಯೇ ಬ್ಯಾರಿ ಭಾಷೆಯೂ ಮಲಯಾಳಂನಂತೆ ಕೇಳುತ್ತದೆ. ಆದರೆ ಇದರ ರಚನೆಯಲ್ಲಿ ಭಿನ್ನತೆಯಿರುವುದು ಕಂಡುಬರುತ್ತದೆ.[1] ಇತಿಹಾಸಕಾರರು, ಬರಹಗಾರರು ಮತ್ತು ವಿದ್ವಾಂಸರು ಬ್ಯಾರಿ ಭಾಷೆಯನ್ನು ಮಾಪಿಳ್ಳೆ ಭಾಷೆ ಎಂದು ತಪ್ಪು ತಿಳುವಳಿಕೆ ಹೊಂದಿದ್ದಾರೆ. ಇದೊಂದು ಸ್ವತಂತ್ರ ಆಡು ಭಾಷೆಯಾಗಿದ್ದು ಇದನ್ನು ಬ್ಯಾರಿ ಭಾಷೆ ಎಂದು ಕರೆಯಲಾಗುತ್ತದೆ.[2]

3) ಮಾಪಿಳ್ಳೆಗಳಲ್ಲಿರುವ ಸಂಸ್ಕೃತಿಯು ಮಲಬಾರಿನ ಸ್ಥಳೀಯ ಸಂಸ್ಕೃತಿಯಿಂದ ಪ್ರಭಾವಿತಗೊಂಡಿದ್ದರೆ ಬ್ಯಾರಿ ಸಂಸ್ಕೃತಿಯು ಇಲ್ಲಿನ ತುಳುನಾಡಿನ ಸಂಸ್ಕೃತಿಯೊಂದಿಗೆ ಅವಿನಾಭಾವ ನಂಟನ್ನು ಹೊಂದಿದೆ.

4) ಬ್ಯಾರಿಗಳು ಹಾಗೂ ಮಾಪಿಳ್ಳೆಗಳು ಇಸ್ಲಾಮಿ ಜೀವನ ಶೈಲಿಯನ್ನು ಸ್ವೀಕರಿಸಿದವರಾಗಿದ್ದಾರೆ. ಮಲಬಾರಿನಲ್ಲಿ ದೀನಾರ್ ಶಾಲೆ ಎಂಬ ಹೆಸರಿನಲ್ಲಿ ಮತೀಯ ಚಟುವಟಿಕೆಗಳು ನಡೆಯುತ್ತಿದ್ದು ಹಲವು ಇಸ್ಲಾಮೀ ವಿದ್ವಾಂಸರು ಮಲಬಾರಿನಲ್ಲಿ ನೆಲೆಸಿದ್ದಾರೆ. ಇವರು ಮಾಪಿಳ್ಳೆಗಳಲ್ಲಿ ಬಹಳ ಪ್ರಭಾವಪೂರ್ಣವಾಗಿ ಇಸ್ಲಾಮೀ ತತ್ವಗಳನ್ನು ಬೋಧಿಸಿದ್ದಾರೆ. ಆದರೆ ತುಳುನಾಡಿನಲ್ಲಿ ಈ ರೀತಿಯ ಧಾರ್ಮಿಕ ಬೋಧನಾ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಹೀಗಾಗಿ ಬ್ಯಾರಿಗಳು ಧಾರ್ಮಿಕ ಶಿಕ್ಷಣಕ್ಕಾಗಿ ಈ ಮೌಲ್ವಿಗಳನ್ನೇ ಅವಲಂಬಿಸಿದ್ದರು. ಇಸ್ಲಾಮ್ ಈ ಬ್ಯಾರಿಗಳ ಮತ್ತು ಮಾಪಿಳ್ಳೆಗಳ ಮಧ್ಯೆ ಸಂಪರ್ಕ ಸೇತುವಾಗಿ ಪರಿಣಮಿಸಿತು.

5) ಬ್ಯಾರಿಗಳ ಮಾಪಿಳ್ಳರ ಮೇಲಿನ ಅವಲಂಬನೆಯು ಈ ಮಾಪಿಳ್ಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ತುಳುನಾಡಿಗೆ ಬರುವಂತಾಯಿತು. ಮುಸ್ಲಿಮ್ ಸಂಘಟನೆಗಳು (ಜಮಾತ್) ಮತ್ತು ಸಂಪ್ರದಾಯ ಅಥವಾ ಇಸ್ಲಾಮೀ ಆಚಾರಗಳು ಈ ಮಾಪಿಳ್ಳೆಗಳ ಮಾರ್ಗದರ್ಶನದಂತೆ ರೂಪುಗೊಳ್ಳುತ್ತಿದ್ದವು. ಎಲ್ಲ ಜಮಾತ್‌ಗಳೂ ಅಥವಾ ಮುಸ್ಲಿಮ್ ಸಂಘಟನೆಗಳೂ ಮಾಪಿಳ್ಳೆ ಶಿಕ್ಷಕರು ಅಥವಾ ಮೌಲವಿಗಳ ಮಾರ್ಗದರ್ಶನದಂತೆ ನಡೆಯುತ್ತಿತ್ತು. ಹಾಗೆಯೇ ಎಲ್ಲಾ ಬ್ಯಾರಿ ವಿದ್ಯಾರ್ಥಿಗಳೂ ಮಾಪಿಳ್ಳೆ ಅಧ್ಯಾಪಕ (ಮೌಲ್ವಿ)ಗಳಿಂದ ಶಿಕ್ಷಣ ಪಡೆಯುತ್ತಿದ್ದರು. ಈ ರೀತಿ ಮಾಪಿಳ್ಳೆ ಸಂಸ್ಕೃತಿಯು ಕಾಲಕ್ರಮೇಣ ಬ್ಯಾರಿ ಸಂಸ್ಕೃತಿಯೊಳಗೆ ನುಸುಳುವಂತಾಯಿತು. ಬ್ಯಾರಿಗಳ ಧಾರ್ಮಿಕ ವಿಧಿಗಳು, ಆಚರಣೆಗಳು, ಸಾಹಿತ್ಯ ಹಾಗೂ ಧಾರ್ಮಿಕ ಬೋಧನೆಗಳೂ ಮಾಪಿಳ್ಳೆ ಶೈಲಿಯಲ್ಲಿದ್ದವು.

6) ಕೊನೆಯದಾಗಿ ಕಾಸರಗೋಡಿನಲ್ಲಿ ಬಲಿಷ್ಠವಾಗಿರುವ ಮಾಪಿಳ್ಳರ ಧಾರ್ಮಿಕ ಪ್ರಭಾವವು ಬ್ಯಾರಿ ಸಂಸ್ಕೃತಿಯನ್ನು ಮಾಪಿಳ್ಳೆ ಸಂಸ್ಕೃತಿಯಾಗಿ ಪರಿವರ್ತಿಸಿತು. ಆದರೆ ಮಂಗಳೂರಿನಲ್ಲಿರುವ ಬ್ಯಾರಿಗಳು ಮಾಪಿಳ್ಳೆ ಸಂಸ್ಕೃತಿಯನ್ನು ಅಳವಡಿಸಲು ಸಿದ್ಧರಿಲ್ಲದ್ದರಿಂದ ಅವರು ಬ್ಯಾರಿ ಸಂಸ್ಕೃತಿಯನ್ನು 20ನೇ ಶತಮಾನದಲ್ಲೂ ಉಳಿಸಿಕೊಂಡಿದ್ದಾರೆ.

ಮಾಪಿಳ್ಳೆ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದ ಬ್ಯಾರಿಗಳು ತಮ್ಮ ಅನನ್ಯ ಸಂಸ್ಕೃತಿ

ಯನ್ನು ದೃಢಗೊಳಿಸಿಕೊಂಡರು. ಈ ಪುಸ್ತಕದಲ್ಲಿ ಬ್ಯಾರಿಗಳ ಸಾಂಸ್ಕೃತಿಕ ವೈವಿಧ್ಯಗಳ ಬಗ್ಗೆ ಬೆಳಕು ಚೆಲ್ಲಲು ನಾನು ಇಚ್ಚಿಸುತ್ತೇನೆ.

ಬ್ಯಾರಿಗಳು, ಬ್ಯಾರಿಗಳೇ ಹೊರತು ಮಾಪಿಳ್ಳರಲ್ಲ

ಕರಾವಳಿಯಲ್ಲಿನ ಪ್ರಥಮ ಮುಸ್ಲಿಮ್ ವರ್ಗದವರಾದ ಬ್ಯಾರಿಗಳು ಅರಬರು ವ್ಯಾಪಾರ ವಹಿವಾಟುಗಳಿಗಾಗಿ ಭಾರತಕ್ಕೆ ಬಂದುದರಿಂದ ಅವರಿಂದ ಪ್ರಭಾವಿತರಾಗಿ ಇಸ್ಲಾಮ್ ಮತಾನುಯಾಯಿಗಳಾದರು. ಇವರು ಮೂಲತಃ ಇಲ್ಲಿನ ಸ್ಥಳೀಯ ಧಾರ್ಮಿಕ ಪಂಗಡಗಳಿಂದ ಇಸ್ಲಾಮಿಗೆ ಮತಾಂತರಗೊಂಡ ಹೊಸ ತಲೆಮಾರಿನ ಜನಾಂಗದವರಾಗಿದ್ದಾರೆ. ಅರಬರಂತೆಯೇ 90% ಬ್ಯಾರಿಗಳು ವ್ಯಾಪಾರವನ್ನು ತಮ್ಮ ಮೂಲ ಉದ್ಯೋಗವಾಗಿ ಆರಿಸಿಕೊಂಡವರಾಗಿದ್ದಾರೆ.[3] ವ್ಯಾಪಾರದೊಂದಿಗೆ ಅವರಿಗಿದ್ದ ಅವಿನಾಭಾವ ನಂಟಿನಿಂದಾಗಿಯೇ ಈ ವರ್ಗವನ್ನು ಬ್ಯಾರಿಯೆಂದು ಹೆಸರಿಸಲಾಗಿದ್ದು ಬ್ಯಾರಿಗಳು ತಮ್ಮ ಹೆಸರಿನ ಹಿಂದೆ ಈ ಪದವನ್ನು ಹೆಮ್ಮೆಯಿಂದ ಸೇರಿಸಿಕೊಳ್ಳುತ್ತಿದ್ದರು. ಆದರೆ 20ನೇ ಶತಮಾನದ ಕೊನೆಯಲ್ಲಿ ಬ್ಯಾರಿಗಳ ಬಹು ದೊಡ್ಡ ಸಂಖ್ಯೆಯ ಜನರು ಜಮೀನುದಾರರಾಗಿದ್ದು ವ್ಯಾಪಾರದೊಂದಿಗಿದ್ದ ಇವರ ಆಸಕ್ತಿ ಕುಂಟಿತವಾಗುತ್ತಾ ಬಂತು. ಇತರ ಉದ್ಯೋಗಗಳಲ್ಲೂ ಇವರು ಆಸಕ್ತಿ ತಳೆಯುವಂತಾಯಿತು. ಹಿಂದೆ ಹೆಚ್ಚಿನ ಬ್ಯಾರಿಗಳು ತಮ್ಮ ಹೆಸರಿನೊಂದಿಗೆ ಬ್ಯಾರಿ ಎಂಬ ಪದವನ್ನು ಹೊಂದಿದ್ದರು. ಕೋಚುಮನ್ 1905ರಲ್ಲಿ ನಡೆಸಿದ ಹಳ್ಳಿಗಳ ಸಮೀಕ್ಷೆ ಮತ್ತು ಅಂಕಿ ಅಂಶಗಳ ಸಂಗ್ರಹದಲ್ಲಿ ಈ ರೀತಿಯ ಹಲವು ಹೆಸರುಗಳಿದ್ದ ಉದಾಹರಣೆಗಳು ಕಾಣಸಿಗುತ್ತವೆ.[4]

ಟೇಬಲ್ 7 ಬ್ಯಾರಿ ಜಮೀನುದಾರರು – ಹೆಸರುಗಳು						
	ಹಳ್ಳಿ ಸಂಖ್ಯೆ	ಹಳ್ಳಿಯ ಹೆಸರು	ಪಟ್ಟಿ ಸಂಖ್ಯೆ	ಯಜಮಾನನ ಹೆಸರು	ಪಟ್ಟಿ ಸಂಖ್ಯೆ	ಯಜಮಾನನ ಹೆಸರು
1	134	ಅರ್ಲ	2	ಶೇಖೆ ಬ್ಯಾರಿ	24	ಸಾವುಂಞ ಬ್ಯಾರಿ
			37	ಉಞ ಬ್ಯಾರಿ	45	ಚೆಯ್ಯ ಬ್ಯಾರಿ
			28	ಕೊಯ್ಸ ಬ್ಯಾರಿ	46	ಪಚ್ಚಮ್ಮ
2	143	ಬಂಟ್ವಾಳ	119	ಬಾಪಮ್ಮ	120	ಅಯಿಂತಿಯಮ್ಮ ಫಕ್ರು ಬ್ಯಾರಿಯ ಪತ್ನಿ
			232	ಅಚ್ಚಮುಕ್ರಿ	232	ಜೊತೆ ಪಟ್ಟಅಚ್ಚಮುಕ್ರಿ ಮತ್ತು ಪಾಪಮ್ಮ, ಯಾನೆ ವೆನ್ನಮ್ಮ
3.	99	ಬಜಾಲ್	29	ಹಮ್ಮದೆ ಬ್ಯಾರಿ	46	ಮಮ್ಮಾತಿಯಮ್ಮ
				ಬೀಮಮ್ಮರ ಮಗ		
4.	85	ಕಾಂದಾವರ			76	ಅಞಬ್ಯಾರ್ತಿ
5.	100	ಜಪ್ಪಿನಮೊಗರು	64	ಕಾಡೋಜ ಬ್ಯಾರ್ತಿ		
6.	115	ಅರೇಕಳ	28	ಚೆಮ್ಮ ಬ್ಯಾರ್ತಿ	3	ಮಮ್ಮಾತಿ ಬ್ಯಾರ್ತಿ
7.	228	ಇರಾ	16	ಐಸಮ್ಮ ಬ್ಯಾರ್ತಿ		
			17	ಉಮ್ಮಾತುಮ್ಮ ಬ್ಯಾರ್ತಿ	31	ಬಡುವ ಬ್ಯಾರಿ
8	227	ಮಂಚಿ	3	ಐಸಮ್ಮ ಬ್ಯಾರ್ತಿ		
			41	ಮಣಿಯಮ್ಮ ಬ್ಯಾರ್ತಿ		
			43	ಉಮ್ಮಾರುಮ್ಮ ಬ್ಯಾರ್ತಿ		
			45	ಪಾತುಮ್ಮ ಬ್ಯಾರ್ತಿ		
			2	ಅಲಿಯಮ್ಮ ಬ್ಯಾರ್ತಿ		
			44	ಬಾಪು ಬ್ಯಾರಿ		

ಈ ರೀತಿಯ ಹಲವು ಉದಾಹರಣೆಗಳು ಕೋಚ್‌ಮೆನ್‌ನ ಸಮೀಕ್ಷೆಯ ವರದಿಯಲ್ಲಿ ಕಾಣಸಿಗುತ್ತದೆ. ಶೇಖೆ, ಚೇಯ, ಕೋಯ್ಸ ಐತಮ್ಮ, ಪಚ್ಚಮ್ಮ, ಪಾಪಮ್ಮ, ವೆನ್ನಮ್ಮ, ಚೆಮ್ಮ, ಬಡುವ, ಉಮಾಮ, ಅಲಿಯಮ್ಮ ಇತ್ಯಾದಿ ಹೆಸರುಗಳು ಇಲ್ಲಿನ ಸ್ಥಳೀಯ ಹಿಂದೂ ಮತಾನುಯಾಯಿಗಳಲ್ಲಿಯೂ ಕಾಣಸಿಗುತ್ತದೆ. ಬ್ಯಾರಿಗಳು, ಅದರಲ್ಲೂ ಮುಖ್ಯವಾಗಿ ಬ್ಯಾರಿ ಮಹಿಳೆಯರು ತಮ್ಮ ಹೆಸರಿನ ಹಿಂದೆ ಬ್ಯಾರಿ ಅಥವಾ ಬ್ಯಾರ್ತಿ ಎಂಬ ಉಪನಾಮವನ್ನು ಹೆಮ್ಮೆಯಿಂದ ಸೇರಿಸಿಕೊಳ್ಳುತ್ತಾರೆ. ಮುಸ್ಲಿಮರಲ್ಲಿ ಬ್ಯಾರಿ ಎಂಬ ಉಪನಾಮವನ್ನು ಸೇರಿಸಿಕೊಳ್ಳುವುದು ಸಾಮಾನ್ಯ ರೂಢಿಯಾಗಿತ್ತು. ತಮ್ಮ ಸಹಿಯಲ್ಲಿಯೂ ಇದನ್ನು ಸೇರಿಸಿಕೊಳ್ಳುತ್ತಿದ್ದರು.[5] ಹತ್ತೊಂಬತ್ತನೇ ಶತಮಾನದಲ್ಲಿ ಬ್ಯಾರಿ ಎಂಬ ಈ ಉಪನಾಮವನ್ನು ಬ್ಯಾರಿಯೋರ್ವನು ತನ್ನ ಹೆಸರಿನ ಹಿಂದೆ ಸೇರಿಸಿಕೊಳ್ಳದಿದ್ದರೆ ಅದು ಅವನ ಜನಾಂಗಕ್ಕೊಂದು ಅಪಮಾನವಾಗಿತ್ತು.[6] ಬ್ಯಾರಿಗಳು ತಮ್ಮನ್ನು ಬ್ಯಾರಿ ಎಂದು ಕರೆಸಿಕೊಳ್ಳುವುದು ಗೌರವದ ಸಂಕೇತ ಎಂದು ಭಾವಿಸುತ್ತಿದ್ದರು. ಇದು ಅವರಿಗೆ ಹೆಮ್ಮೆಯ ವಿಚಾರವಾಗಿತ್ತು. ಇಲ್ಲಿನ ಸ್ಥಳೀಯ ಹಿಂದೂಗಳಾದ ಬಂಟರು, ಕೊಂಕಣಿಗಳು ತಮ್ಮ ಉಪನಾಮಗಳಾದ ಶೆಟ್ಟಿ, ಆಳ್ವ, ಹೆಗ್ಡೆ, ಪ್ರಭು, ಕಾಮತ್ ಇತ್ಯಾದಿಗಳನ್ನು ತಮ್ಮ ಹೆಸರಿನ ಹಿಂದೆ ಸೇರಿಸಿಕೊಳ್ಳುತ್ತಿದ್ದುದರಿಂದ ಬ್ಯಾರಿಗಳೂ ತಮ್ಮ ಉಪನಾಮದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು. ದಕ್ಷಿಣ ಕನ್ನಡದಲ್ಲಿ ಹಿಂದುಗಳು ತಮ್ಮ ಕುಟುಂಬ ಮತ್ತು ಜನಾಂಗದ ಹೆಸರನ್ನೂ ಎರಡು ಉಪನಾಮಗಳ ರೂಪದಲ್ಲಿ ಸೇರಿಸಿ ಇಟ್ಟುಕೊಳ್ಳುವುದು ರೂಢಿಯಲ್ಲಿತ್ತು. ಉದಾಹರಣೆಗೆ ಬ್ರಾಹ್ಮಣರಲ್ಲಿ ಭಟ್ಟ, ತಂತ್ರಿ, ರಾವ್ ಇತ್ಯಾದಿ ಹೆಸರುಗಳು ಕಾಣಸಿಗುತ್ತದೆ. ಬ್ಯಾರಿಗಳೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಬ್ಯಾರಿ ಎಂಬ ಪದವು ಉಪನಾಮವಾಗಿ 15ನೇ ಮತ್ತು 16ನೇ ಶತಮಾನದಲ್ಲಿ ಹೆಚ್ಚಾಗಿ ಬಳಕೆಯಲ್ಲಿತ್ತು. ಈ ರಿವಾಜು ತುಳುವರ ಪಾಡ್ದನಗಳಲ್ಲಿ ಕಾಣಸಿಗುತ್ತದೆ. ಈ ಪಾಡ್ದನಗಳನ್ನು ಆ ಕಾಲದ ವಿದ್ವಾಂಸರು ರಚಿಸಿದ್ದರು.[7] ಬ್ಯಾರಿಗಳು ಮೂಲತಃ ಸ್ಥಳೀಯರೇ ಆದ್ದರಿಂದ ಬ್ಯಾರಿಗಳಿಗೆ ಜಾತಿ ನೀತಿ ಬ್ಯಾರಿಗಳು ಎಂಬ ಬಿರುದನ್ನು ಹಿಂದಿನ ಕಾಲದಲ್ಲಿ ಇತರ ಜನಾಂಗದ ಜನರು ನೀಡಿದ್ದರು.[8] ಈ ಬಿರುದಿನ ಬಗ್ಗೆ 20ನೇ ಶತಮಾನದಲ್ಲೂ ಬ್ಯಾರಿಗಳು ಹೆಮ್ಮೆ ಪಡುತ್ತಿದ್ದರು. ಆದ್ದರಿಂದ ಇಂತಹ ಬ್ಯಾರಿಗಳನ್ನು ಮಾಪಿಳ್ಳರು ಎಂದು ಹೇಳುವುದು ಪುರಾವೆಗಳಿಲ್ಲದ ವಾದವಾಗಿವೆ.

ಬ್ಯಾರಿಗಳದ್ದು ಮಾತೃಮೂಲದ ಸಮಾಜ

ಮಾತೃ ಸಂತತಿ ಎಂಬುದು ತಾಯಿಯಿಂದ ವಂಶೋದ್ಧಾರ ಎಂಬ ನಿಯಮವಾಗಿದ್ದು ಇಂತಹ ಪದ್ಧತಿ ಮುಸ್ಲಿಮರಲ್ಲಿ ಅತ್ಯಂತ ವಿರಳವಾಗಿ ಕಂಡುಬರುತ್ತದೆ. ಭಾರತದಲ್ಲಿ ಹೆಚ್ಚಿನ ಜನಾಂಗಗಳಲ್ಲಿ ಪಿತೃ ಆಧಾರಿತ ವಂಶ ಪದ್ಧತಿಯೇ ಚಾಲ್ತಿಯಲ್ಲಿದೆ. ಇಸ್ಲಾಮ್ ಧರ್ಮವೂ ಪಿತೃ ಆಧಾರಿತ ವಂಶ ಪದ್ಧತಿಯನ್ನೇ ಪ್ರೋತ್ಸಾಹಿಸುತ್ತದೆ ಹಾಗೂ ಮುಸ್ಲಿಮರಲ್ಲಿ ಈ ಪದ್ಧತಿಯೇ ಸಾಮಾನ್ಯವಾಗಿ ಕಾಣಸಿಗುತ್ತದೆ. ಲೋಗನ್‌ನ ಪ್ರಕಾರ ಉತ್ತರ ಮಲಬಾರ್‌ನ ಮುಹಮ್ಮದೀಯರು ತಮ್ಮ ಪೂರ್ವಿಕರು ಅನುಸರಿಸುತ್ತಿದ್ದಂತಹ ಉತ್ತರದಾಯಿತ್ವದ ವಿಧಿಯನ್ನು ಅನುಸರಿಸದೆ ಮರುಮಕ್ಕತ್ತಯನ್ ಪದ್ಧತಿಯನ್ನು ಅನುಸರಿಸಲು ತೊಡಗಿದರು.[9]

ಉತ್ತರ ಮಲಬಾರಿನಲ್ಲಿ ಈ ಪದ್ಧತಿಯು ಅರಕ್ಕಲ್ ಎಂಬ ರಾಜಮನೆತನದಲ್ಲಿ ಕಾಣಸಿಗುತ್ತದೆ. ಇದು ಸಂಪೂರ್ಣ ಮಾತೃ ಪ್ರಧಾನ ವಂಶ ಪದ್ಧತಿಯಲ್ಲದಿದ್ದರೂ ಇದರಲ್ಲಿ ಹಲವು ಭಿನ್ನತೆಗಳಿತ್ತು. ಬ್ಯಾರಿಗಳಲ್ಲಿರುವ ಈ ಮಾತೃ ವಂಶಸ್ಥ ಕುಟುಂಬ ಪದ್ಧತಿ ಇತರ ಜನಾಂಗದಿಂದ ದತ್ತು ಪಡೆದುಕೊಂಡದ್ದಲ್ಲ, ಬದಲಾಗಿ ಅದು ಇಲ್ಲಿನ ಸ್ಥಳೀಯ ಜಾತಿಗಳವರು ಅನುಸರಿಸುತ್ತಿದ್ದ ಪದ್ಧತಿಯಾಗಿತ್ತು. ಬ್ಯಾರಿಗಳಲ್ಲಿ ಇಲ್ಲಮ್ ಎಂಬ ಒಂದು ಪದ್ಧತಿಯಿದ್ದು ಈ ಪದ್ಧತಿಯು ಇಲ್ಲಿನ ಪ್ರಾಂತೀಯ ಜಾತಿಗಳಲ್ಲಿ ಬಲಿ ಅಥವಾ ಬರಿ ಎಂದು ಪ್ರಸಿದ್ಧಿ ಪಡೆದಿತ್ತು. ವಿಶೇಷವಾಗಿ ಇದು ಬಿಲ್ಲವರು ಮತ್ತು ಬಂಟ ಸಮುದಾಯಗಳಲ್ಲಿ ಕಂಡುಬರುತ್ತಿತ್ತು. ಮಲಬಾರಿನಲ್ಲಿ ಈ ಮಾತೃ ವಂಶಸ್ಥ ಸಂಪ್ರದಾಯವು ಉತ್ತರದ ಮಲಬಾರಿನ ಮುಸ್ಲಿಮರಲ್ಲಿ ಮತ್ತು ಲಕ್ಷದ್ವೀಪ ಮತ್ತು ಅಮಿನ್‌ದೇವಿ ದ್ವೀಪಗಳಲ್ಲಿ ಕಾಣಸಿಗುತ್ತಿತ್ತು. ಇಲ್ಲಿನ ಇಡೀ ಜನಸಂಖ್ಯೆಯು ಮುಸ್ಲಿಮರದ್ದೇ ಆಗಿತ್ತು. ಈ ಪದ್ಧತಿಯನ್ನು ಮಂಗಳೂರು ಹಾಗೆಯೇ ಸಮೀಪದ ಉತ್ತರ ಕನ್ನಡ ಜಿಲ್ಲೆಯ ಕೆಲವು ಮುಸ್ಲಿಮರು ವಿಶೇಷವಾಗಿ ರಾಜಮನೆತನದ ಮಾಪಿಳ್ಳರು ಅನುಸರಿಸುತ್ತಿದ್ದರು.[10] ಕಣ್ಣೂರಿನ ಆಲಿರಾಜರುಗಳೂ ಉತ್ತರದಾಯಿತ್ವದ ವಿಚಾರದಲ್ಲಿ ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಅರಕ್ಕೋಲ್ ರಾಜಮನೆತನವು ಮುಸ್ಲಿಮರಲ್ಲಿ ಮಾತೃವಂಶಸ್ಥ ಉತ್ತರದಾಯಿತ್ವಕ್ಕೆ ಸೂಕ್ತ ಉದಾಹರಣೆಯಾಗಿದೆ.[11] ಈ ಕುಟುಂಬದಲ್ಲಿ ಉತ್ತರದಾಯಿತ್ವವು ಮಹಿಳೆಯರಿಂದ ಮತ್ತು ಬೀಬಿಗಳಿಂದ ಆಗುತ್ತಿತ್ತು. ಆದರೆ ಇಸ್ಲಾಮೀ ಕಾನೂನು ಮಹಿಳೆಯರಿಂದ ಉತ್ತರದಾಯಿತ್ವ ಸ್ವೀಕರಿಸುವ ಪದ್ಧತಿಯನ್ನು ಹೊಂದಿಲ್ಲ.[12] ತಾಯಿಯಿಂದ ವಂಶೋದ್ಧಾರ ಎಂಬ ಕಲ್ಪನೆ ಇಸ್ಲಾಮೀ ವಿಧಿಯಲ್ಲಿ ಎಲ್ಲೂ ಕಂಡು ಬರುವುದಿಲ್ಲ. 20ನೇ ಶತಮಾನದಲ್ಲಿ ಶರೀಅತ್ ಕಾನೂನನ್ನು ಮುಸ್ಲಿಮರು ಅನುಸರಿಸುವಂತಾಗಿ 1937ರಿಂದ ಈ ಮಾಪಿಳ್ಳೆ ಮುರುಮಕ್ಕ ತಾಯಮ್ ಕಾಯ್ದೆ (1939)ಯನ್ನು ತೆಗೆದು ಹಾಕಿ ರಾಜ ಮನೆತನಗಳಲ್ಲಿ ಉತ್ತರದಾಯಿತ್ವವನ್ನು ಮಾತೃವಂಶಸ್ಥರಿಂದ ಪಿತೃ ವಂಶಸ್ಥರಿಗೆ ವರ್ಗಾವಣೆ ಮಾಡಲಾಯಿತು. ಬ್ಯಾರಿ ಜನಾಂಗದಲ್ಲಿದ್ದ ತಾಯಿಯಿಂದ ಉತ್ತರದಾಯಿತ್ವದ ಪದ್ಧತಿಯು ಭಿನ್ನತರವಾಗಿದ್ದು ಇದರ ಮೂಲವು ಮೇಲೆ ತಿಳಿಸಲಾದ ರೀತಿಯಿಂದಲೇ ಹುಟ್ಟಿಕೊಂಡಿದೆ. ಬ್ಯಾರಿಗಳಲ್ಲಿನ ಈ ಪದ್ಧತಿಯು ಇಲ್ಲಿನ ಪ್ರಾಂತೀಯ ಪ್ರಭಾವದಿಂದಲೇ ಆಗಿವೆ ಎಂಬುದಕ್ಕೆ ಯಾವುದೇ ಸಂಶಯವಿಲ್ಲ. ತುಳುವರ ಹಲವು ಜಾತಿಗಳಲ್ಲಿ ಉಪಜಾತಿಗಳಿದ್ದು ಅವುಗಳನ್ನು ಬರಿ ಎಂದು ಕರೆಯಲಾಗುತ್ತದೆ. ಒಂದೇ ಬರಿಯ ಸದಸ್ಯರ ಮಧ್ಯೆ ಪರಸ್ಪರ ವಿವಾಹವನ್ನು ನಡೆಸುವಂತಿಲ್ಲ. ಈ ರೀತಿಯ ಉಪವರ್ಗಗಳು ದ್ರಾವಿಡ ಜಾತಿಗಳಲ್ಲಿ ಮತ್ತು ಪಂಗಡಗಳಲ್ಲಿ ಕಾಣಸಿಗುತ್ತದೆ. ತುಳುವರ ಬರಿಗಳು ತಮ್ಮ ಮಾತೃವಂಶಸ್ಥ ಸಂಪ್ರದಾಯದ ಕುಡಿ ಗಳಾಗಿದ್ದಾರೆ.[13] ಬೆಲಿ ಬನ್ನಯ ಎಂಬ ಪದ್ಧತಿಯು ತುಳುವರಲ್ಲಿ ಚಾಲ್ತಿಯಲ್ಲಿತ್ತು. ಹಾಗೆಯೇ ಪೆರ್‌ಗಡಿ ಬನ್ನಯ್ಯ, ಸಿರಿ ಬರಿ ಮುಂತಾದ ಹೆಸರುಗಳು ಇದ್ದವು. ಮಕ್ಕಳು ತಮ್ಮ ತಾಯಿಯಂದಿರ ಬರಿಗೆ ಸೇರುತ್ತಾರೆ. ಒಂದೇ ಬರಿಯ ಇಬ್ಬರು ವಿವಾಹ ಬಂಧನಕ್ಕೆ ಒಳಗಾಗುವಂತಿಲ್ಲ. 'ಪುಟ್ಟಿ-ಬರಿ' 'ಕೂಡಿ ಬರಿ' ಪದ್ಧತಿಯೂ ಚಾಲ್ತಿಯಲ್ಲಿತ್ತು.[14] ಬರಿ ಮತ್ತು ಬರಿ ಪದ್ಧತಿಗಳು ಕುಟುಂಬದ ಕೊಂಡಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತದೆಯೇ ಹೊರತು ಉತ್ತರದಾಯಿತ್ವದ ವಿಚಾರಕ್ಕಲ್ಲ. ಬ್ಯಾರಿಗಳಲ್ಲಿ ಇದನ್ನು 'ಇಲ್ಲಮ್'

ಎಂದು ಕರೆಯಲಾಗುತ್ತದೆ. ತುಳುನಾಡಿನ ಬ್ಯಾರಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸ ಬಹುದು. ಅವು ಯಾವುದೆಂದರೆ 1) ತಲಕ್ಕಾರ್‌ನ ಇಲ್ಲಮ್ ಗುಂಪು 2) ಇಲ್ಲಮ್ ಗುಂಪಿಗೆ ಸೇರದ ತಾಲ-ಇಲ್ಲಾತ್ತೋರು ಮತ್ತು 3) ಮಂಗಳೂರಿನ ಪಡಿಞ್ಞಾರ್‌ನವರು (ಅಗಕ್ಕಾರ್).

1) ತಾಲಕ್ಕಾರ್ ಅಥವಾ ಇಲ್ಲಮ್ ಗ್ರೂಪ್

ಬ್ಯಾರಿಗಳಲ್ಲಿ ಹಲವು ಇಲ್ಲಮ್‌ಗಳಿದ್ದು ಪ್ರತಿಯೊಂದು ಇಲ್ಲಮ್‌ಗೂ ಒಂದೊಂದು ದರ್ಜೆ ಇರುತ್ತದೆ, ಇಲ್ಲಮ್‌ನ ದರ್ಜೆಯನ್ನು ಅಳೆಯುವ ಮಾಪನವೇನೆಂದರೆ ಮದುವೆ ಸಂದರ್ಭದಲ್ಲಿ ತಮ್ಮ ಮಗಳಿಗೆ ಎಷ್ಟು ಮಹರ್ ಅನ್ನು ನಿಗದಿ ಪಡಿಸುತ್ತಾರೆ ಎಂಬ ವಿಚಾರದ ಮೇಲಾಗಿತ್ತು. ಕುಟುಂಬದ ಘನತೆಗೆ ತಕ್ಕಂತೆ ತಮ್ಮ ಮಕ್ಕಳ ಮದುವೆಗೆ ಮಹರನ್ನು ನಿರ್ಧರಿಸುತ್ತಾರೆ. ಈ ಇಲ್ಲಮ್ ಪದ್ಧತಿಯು ಮಂಗಳೂರು ಹಾಗೂ ಕಾಸರಗೋಡು ಪ್ರಾಂತ್ಯಗಳಲ್ಲಿ ಚಾಲ್ತಿಯಲ್ಲಿತ್ತು. ಆದರೆ ಈ ಎರಡು ಪ್ರಾಂತ್ಯಗಳ ಇಲ್ಲಮ್‌ನ ಹೆಸರುಗಳಲ್ಲಿ ಭಿನ್ನತೆ ಕಂಡುಬರುತ್ತದೆ.

ಮಂಗಳೂರು ಪ್ರಾಂತ್ಯದ ಇಲ್ಲಮ್[15]

ಕ್ರ.ಸಂ.	ಹೆಸರು		ಮೆಹರ್
1.	ಕೈಸರ್ ಇಲ್ಲಮ್	21	ಆಮಾಡ ಪೊನ್ನು (ಸವರಿನ್)
2.	ಸುಲ್ತಾನ್ ಬೆಲಿಯೆ	21	,,
3.	ಅಕ್ಕ ಬೆಲಿಯೆ	21	,,
4.	ಚಮಕ್ ಬೆಲಿಯೆ	21	,,
5.	ಪಟಿಲ್ಲಮ್	11	,,
6.	ಅಂಜಿಲ್ಲಮ್	11	,,
7.	ಚಂದವಲ್ಲಿ	11	,,
8.	ಕುಡಿಂಗರ್	11	,,

ಕಾಸರಗೋಡು ಪ್ರಾಂತ್ಯದ ಇಲ್ಲಮ್

ಕ್ರ.ಸಂ.	ಹೆಸರು		ಮೆಹರ್
1.	ಬಿರಾನ್ ಇಲ್ಲಮ್	21	ಆಮಾಡ ಪೊನ್ನು (ಸವರಿನ್)
2.	ಮಿಯಾನ್ ಇಲ್ಲಮ್	21	,,
3.	ತಲ ಇಲ್ಲಮ್	21	,,
4.	ಮುತುಲ್ ಇಲ್ಲಮ್	21	,,
5.	ಕುಚಿಲ್ಲಮ್	11	,,
6.	ಅಂಜಿಲ್ಲಮ್	11	,,
7.	ಪಾಟ್ಟಿಲ್ಲಮ್	11	,,
8.	ಅಪ್ಪಾಟ್ಟಿ ಇಲ್ಲಮ್	11	,,

ಇವುಗಳು ಮುಖ್ಯ ಇಲ್ಲಮ್‌ಗಳಾಗಿವೆ. ಇವುಗಳಲ್ಲದೆ ಇನ್ನೂ ಕೆಲವು ಇಲ್ಲಮ್‌ಗಳಿದ್ದುವು. ಆದರೆ ಅವುಗಳ ಕುರುಹುಗಳು ಕಂಡುಬಂದಿಲ್ಲ. ಈ ಇಲ್ಲಮ್‌ನ ಹಿರಿತಲೆಗಳು ಕಾಲ ಕ್ರಮೇಣ ಮಾಯವಾಗುತ್ತಾ ಬಂತು. ಈಗಲೂ ಕೆಲವು ವ್ಯಕ್ತಿಗಳು ತಮ್ಮ ಇಲ್ಲಮ್‌ಗಳ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವುದು ಕೇಳಿ ಬರುತ್ತದೆ. ಅಂಜಿಲ್ಲಮ್‌ನ ಡಾ। ಮುಹಮ್ಮದ್ ಶರೀಫ್, ಚಮಕ್ ಬೆಲ್ಯದ ಡಾ। ಝಕರಿಯ್ಯಬ್ಬ ಹಾಗೂ ಮಿಯಾನ್ ಇಲ್ಲಮ್‌ನ ಬಾಪು ಬ್ಯಾರಿ ಇತ್ಯಾದಿಗಳು ... ಇಲ್ಲಮ್ ವ್ಯವಸ್ಥೆಯ ಕೆಲವು ಉದಾಹರಣೆಗಳು.

ಇಲ್ಲಮ್‌ನ ಗುಣಲಕ್ಷಣಗಳು

1) ಇಲ್ಲಮ್‌ಗಳು ಸರಂಜಾಮಿ (ಊಳಿಗಮಾನ್ಯ) ಪದ್ಧತಿಯಂತೆ ಕಂಡು ಬರುತ್ತದೆ. ಇವು ಕುಟುಂಬವೊಂದರ ಆರ್ಥಿಕ ಅಂತಸ್ತಿಗೆ ತಕ್ಕಂತೆ ರೂಪುಗೊಂಡಿದೆ. ಈ ಘನತೆಯನ್ನು ಎಲ್ಲ ಸಾಮಾಜಿಕ ಸಂಬಂಧಗಳಲ್ಲೂ ಉಳಿಸಿಕೊಳ್ಳಲಾಗುತ್ತದೆ.

2) ಇಲ್ಲಮ್‌ಗಳು ತಾಯಿಯ ಸಂತಾನದಿಂದ ಬಂದುದಾಗಿದ್ದು ತಾಯಿಯ ಇಲ್ಲಮ್ ಅನ್ನು ಮಕ್ಕಳು ಅನುಸರಿಸುತ್ತಾರೆ, ಇದು ತಾಯಿಯ ಘನತೆಯನ್ನು ಹೆಚ್ಚಿಸುತ್ತದೆ.

3) ಒಂದೇ ಇಲ್ಲಮ್‌ನ ಸದಸ್ಯರ ಮಧ್ಯೆ ವಿವಾಹ ಸಂಬಂಧಗಳೇರ್ಪಡುವಂತಿಲ್ಲ. ಇಲ್ಲಮ್ ಎಂದರೆ ಭಾರತೀಯ ಪದ್ಧತಿಯಂತೆ ಒಂದು ಗೋತ್ರಕ್ಕೆ ಸಮಾನ. ಈ ಪದ್ಧತಿ ತುಳುವರಲ್ಲಿರುವ ಬರಿ ಪದ್ಧತಿಯಿಂದ ಉಗಮಿಸಿದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಪುಟ್ಟಿ ಬರಿ, ಕೂಡಿ ಬರಿ ಪದ್ಧತಿಯ ಪ್ರಕಾರ ಹುಟ್ಟಿದ ಗೋತ್ರ ಮತ್ತು ಮದುವೆ ಸಂಬಂಧವನ್ನು ಬೆಳೆಸಿದ ಗೋತ್ರಗಳೆರಡೂ ಒಂದೇ ಆಗಿರುವುದು ಸಾಧ್ಯವಿಲ್ಲ. 20ನೇ ಶತಮಾನದ ಮಧ್ಯದವರೆಗೂ ಈ ಭಿನ್ನ ಗೋತ್ರಗಳ ಮದುವೆಯ ಪದ್ಧತಿ ಬ್ಯಾರಿಗಳಲ್ಲಿ ಚಾಲ್ತಿಯಲ್ಲಿತ್ತು.

4) ವಿವಾಹ ಸಂಬಂಧಗಳಲ್ಲಿ ಈ ಇಲ್ಲಮ್‌ಗಳ ಮಹತ್ವದ ಪಾತ್ರವಿರುತ್ತದೆ. ಇಲ್ಲಮ್‌ನ ಆಧಾರದಲ್ಲಿ ವರನ ಕಡೆಯಿಂದ ವಧುವಿಗೆ ನೀಡಲಾಗುವ ಮಹರನ್ನು ನಿರ್ಧರಿಸಲಾಗುತ್ತದೆ. 21 ಆಮಾದ ಪೊನ್ನು (ಸವರಿನ್) ಮತ್ತು 11 ಆಮಾದ ಪೊನ್ನು ಎಂಬ ಇಲ್ಲಮ್‌ಗಳಿದ್ದುವು. ಮಹರ್ ಪೂರ್ವ ನಿರ್ಧರಿತವಾಗಿದ್ದು ಯಾವುದೇ ರೀತಿಯ ರಿಯಾಯಿತಿ ಪಡೆಯಲು ಅವಕಾಶವಿರಲಿಲ್ಲ. ಇಲ್ಲಮ್‌ಗಳೇ ಮಹರನ್ನು ನಿರ್ಧರಿಸಿ ಮದುವೆಯ ಕಾರ್ಯವನ್ನು ನಿಗದಿಪಡಿಸುತ್ತಿತ್ತು. ಹೀಗಾಗಿ ಹೆಚ್ಚಿನ ಮಹರ್ ನೀಡುವವರ ಮತ್ತು ಕಡಿಮೆ ಮಹರ್ ನೀಡುವವರ ವರ್ಗ ಎಂದು ಎರಡು ವರ್ಗಗಳು ರೂಪುಗೊಂಡವು ಹಾಗೂ ಮದುವೆಯ ನಿಯಮಗಳು ಇನ್ನಷ್ಟು ಸಂಕೀರ್ಣಗೊಂಡವು. ಮದುಮಗನಿಗೆ ಉನ್ನತವರ್ಗದ ಅಂತಸ್ತಿಗೆ ತಕ್ಕಂತೆ ಮಹರ್ ನೀಡಲು ಸಾಧ್ಯವಿದ್ದರೆ 11 ಮತ್ತು 21 ಮಹರ್ ವರ್ಗಗಳ ಮಧ್ಯೆ ವಿವಾಹ ಸಂಬಂಧವೇರ್ಪಡುವುದರಲ್ಲಿ ಯಾವುದೇ ನಿರ್ಬಂಧವಿರಲಿಲ್ಲ. ಇದು ಒಂದು ವಿಶಿಷ್ಟ ಸರಂಜಾಮಿ ಪದ್ಧತಿಯಾಗಿದೆ.

5) ಉತ್ತರದಾಯಿತ್ವ ಮತ್ತು ಆಸ್ತಿಗೆ ಉತ್ತರಾಧಿಕಾರಿಯಾಗಿ ಯಾರನ್ನು ನಿರ್ಣಯಿಸುವುದು ಎಂಬುದರ ವಿಚಾರದಲ್ಲಿ ಇಲ್ಲಮ್‌ಗಳ ಯಾವುದೇ ಪಾತ್ರವಿಲ್ಲ. ಉತ್ತರ ಮಲಬಾರ್‌ನ

ಮಾಪಿಳ್ಳೆಗಳು ಮತ್ತು ರಾಜ ಮನೆತನದವರಿಗೆ ಹೊರತಾಗಿ ಬ್ಯಾರಿಗಳು ಉತ್ತರದಾಯಿತ್ವದ ನಿಯಮವನ್ನು ಇಸ್ಲಾಮೀ ಕಾನೂನಿನನ್ವಯ ಪಾಲಿಸುತ್ತಾರೆ. ಮಾತೃ ವಂಶಸ್ಥ ಪದ್ಧತಿಯನ್ನು ಈ ಉತ್ತರದಾಯಿತ್ವ ಹಾಗೂ ಆಸ್ತಿಯ ವಿಚಾರದಲ್ಲಿ ಪಾಲಿಸಲಾಗುವುದಿಲ್ಲ. ಈ ನಿಯಮವು ಬ್ಯಾರಿಗಳನ್ನು ಮಾಪಿಳ್ಳೆಗಳ ರಿವಾಜುಗಳಿಂದ ಬೇರ್ಪಡಿಸುತ್ತದೆ.

6) ಬ್ಯಾರಿಗಳ ಇಲ್ಲಮ್‌ಗಳಲ್ಲಿ ಪರಸ್ಪರ ಹೋಲುವ ಅಂಶಗಳು ಕಂಡು ಬರುತ್ತದೆ. ಎಲ್ಲ ಬ್ಯಾರಿಗಳು ತಮ್ಮ ಇಲ್ಲಮ್ ಉನ್ನತ ವರ್ಗವಾಗಿದ್ದರೂ ಕೆಳ ವರ್ಗವಾಗಿದ್ದರೂ ಅವರನ್ನು 'ತಾಲಕ್ಕಾರ್' ಎಂದು ಗುರುತಿಸಿಕೊಳ್ಳಲಾಗುತ್ತದೆ. 'ತಾಲ' ಎಂದರೆ ಅಂತಸ್ತು. ಅವರು ಎಲ್ಲ ಸಮಾರಂಭಗಳಿಗೂ ಆಹ್ವಾನಿತರು ಮತ್ತು ಅವರನ್ನು ಬಹಳ ಆದರಪೂರ್ವಕ ಸತ್ಕರಿಸಲಾಗುತ್ತಿತ್ತು. ಈ ಪದ್ಧತಿಯು ಮಂಗಳೂರು ಮತ್ತು ಕಾಸರಗೋಡು ಪ್ರಾಂತ್ಯದಲ್ಲಿಯೂ ಕಂಡುಬರುತ್ತದೆ.

7) ಕೆಲವು ಬ್ಯಾರಿಗಳಲ್ಲಿ ಯಾವುದೇ ಇಲ್ಲಮ್‌ಗೆ ಸೇರಿರದವರೂ ಇದ್ದರು. ಇಂತಹ ಮುಸ್ಲಿಮರನ್ನು 'ತಾಲ-ಇಲ್ಲಾತ್ತೋರು' ಎಂದು ಪರಿಗಣಿಸಲಾಗುತ್ತಿತ್ತು. ಇವರು ಸಾಮಾಜಿಕ ಅಂತಸ್ತಿನ ಆಧಾರದಲ್ಲಿ ಕೆಳವರ್ಗದವರಾಗಿದ್ದು 19ನೇ ಶತಮಾನದಲ್ಲಿ ಅವರನ್ನು ಕೆಳಜಾತಿಯವರೊಂದಿಗೆ ವ್ಯವಹರಿಸುವ ರೀತಿಯಲ್ಲಿ ವ್ಯವಹರಿಸಲಾಗುತ್ತಿತ್ತು. ಇದಕ್ಕೆ ಹೊರತಾಗಿ ಮಂಗಳೂರಿನ ಮುಸ್ಲಿಮರಾದ 'ಪದಿನಾರಗ' ಒಂದು ಭಿನ್ನ ವರ್ಗದವರಾಗಿದ್ದರು. ಈ 'ಪದಿನಾರಗ'ರ ಮಧ್ಯೆ ವಿವಾಹ ಸಂಬಂಧಗಳೇರ್ಪಡುವುದು ಬಹಳ ವಿರಳವಾಗಿತ್ತು. ಆದರೆ ಅವರ ಮಧ್ಯೆಯಿಂದ ಇಬ್ಬರು ಮದುವೆ ಸಂಬಂಧವೇರ್ಪಡಿಸಲು ಇಚ್ಛಿಸಿದರೆ ಅದಕ್ಕೆ ಅನುಮತಿಯಿತ್ತು. 19ನೇ ಶತಮಾನ ಆಗಗಳ ಶತಮಾನವಾದ್ದರಿಂದ ಅಂತಹ ವಿವಾಹ ಸಂಬಂಧಗಳೇರ್ಪಡುತ್ತಿರಲಿಲ್ಲ.

2. ಇಲ್ಲಮ್ ವರ್ಗಕ್ಕೆ ಸೇರದವರು ಅಥವಾ ತಾಲ-ಇಲ್ಲಾತ್ತೋರು

ಇಲ್ಲಮ್ ವರ್ಗಕ್ಕೆ ಸೇರದ ಬ್ಯಾರಿಗಳ ಗುಂಪು ಒಂದು ಬಹುಮುಖ್ಯ ಜನವರ್ಗವಾಗಿತ್ತು. ಯಾವುದೇ ಇಲ್ಲಮ್‌ಗೆ ಸೇರುವ ಅರ್ಹತೆ ಇಲ್ಲದವರು ಅಥವಾ ತಮ್ಮ ಬಡತನ, ನಿರುದ್ಯೋಗ ಅಥವಾ ಅಂತಸ್ತಿನ ಲೆಕ್ಕಾಚಾರದಲ್ಲಿ ಇತರ ವರ್ಗಗಳಿಗಿಂತ ಭಿನ್ನರಾದವರ ಗುಂಪೇ 'ತಾಲ-ಇಲ್ಲಾತ್ತೋರು' ಆಗಿದೆ.

ಈ ಕೆಳಗಿನ ವರ್ಗದವರು ಇಲ್ಲಮ್ ವರ್ಗಕ್ಕೆ ಸೇರದವರು (ತಾಲ-ಇಲ್ಲಾತ್ತೋರು).

1. ಬಡುಗರ್ ಅಥವಾ ಬಡುವರ್
2. ಚೀನಿಕ್ಕಾರ
3. ಪುದು ಇಸ್ಲಾಮ್
4. ಪರ್ಷಿಯಾದಿಂದ ಬಹಿಷ್ಕರಿಸಲಾದವರು
5. ವಸಗಳು

ಬಡುಗರಗಳು ಅಥವಾ ಬಡುವಗಳು ತುಂಬಾ ಬಡವರ್ಗದ ಜನರಾಗಿದ್ದರು. ಹೆಚ್ಚಾಗಿ ಇವರು 19ನೇ ಶತಮಾನದ ಆರಂಭದಲ್ಲಿ ಕೂಲಿಕಾರ್ಮಿಕರಾಗಿದ್ದರು. ಇವರು ಬ್ಯಾರಿ

ವ್ಯಾಪಾರಿಗಳ ಅಥವಾ ಜಮೀನ್ದಾರರ ಕೈ ಕೆಳಗೆ ಕೆಲಸ ಮಾಡುವವರಾಗಿದ್ದು ತಮ್ಮ ಜೀವನೋಪಾಯಕ್ಕಾಗಿ ಉನ್ನತವರ್ಗದವರನ್ನು ಅವಲಂಬಿಸಿದವರಾಗಿದ್ದರು. ಇಸ್ಲಾಮ್ ಗುಲಾಮಗಿರಿಯನ್ನು ನಿಷೇಧಿಸಿದೆ ಮತ್ತು ಗುಲಾಮನ ವಿಮೋಚನೆಯನ್ನು ಅತ್ಯಂತ ಪುಣ್ಯ ಕಾರ್ಯ ಎಂದು ಸಾರಿದೆ. ಆದರೆ 19ನೇ ಶತಮಾನದ ಆರಂಭದಲ್ಲಿ ಬ್ಯಾರಿ ಸಮುದಾಯದಲ್ಲಿಯೂ ಒಂದು ವಿಧದ ಗುಲಾಮಗಿರಿಯ ಪದ್ಧತಿ ಇದ್ದಂತಿತ್ತು. ಕೆಳ ವರ್ಗದ ಬಾಲಕ, ಬಾಲಕಿಯರನ್ನು ಉನ್ನತ ವರ್ಗದ ವ್ಯಾಪಾರಿಗಳಿಗೆ ಅವರ ಸೇವೆ ಮಾಡಲಿಕ್ಕಾಗಿ ಮಾರಲಾಗುತ್ತಿತ್ತು. ಈ ವ್ಯಾಪಾರಿಗಳು ಅವರನ್ನು ಗುಲಾಮರಂತೆ ಬಳಸುತ್ತಿದ್ದರು. ಈ ಗುಲಾಮರು ಯಾವುದೇ ಒಂದು ಶುಭ ಕಾರ್ಯದ ಸಂದರ್ಭದಲ್ಲಿ ಮುಕ್ತರಾಗುತ್ತಿದ್ದರು ಮತ್ತು ಸಮಾಜದ ಸ್ವತಂತ್ರ ಅಭ್ಯರ್ಥಿಯಾಗಿ ಮಾರ್ಪಡುತ್ತಿದ್ದರು. ಈ ಜನವರ್ಗವನ್ನೇ ಬಡುಗರು ಅಥವಾ ಬಡುವರು ಎಂದು ಕರೆಯಲಾಗುತ್ತದೆ. ಈ ವರ್ಗದ ಮುಂದಿನ ತಲೆಮಾರಿನ ಜನರು ಒಂದು ಭಿನ್ನವರ್ಗವಾಗಿ ಇಲ್ಲಮ್ ವರ್ಗಕ್ಕೆ ಸೇರದವರಾಗಿ ಮಾರ್ಪಟ್ಟರು. 20ನೇ ಶತಮಾನದಲ್ಲಿ ಗುಲಾಮಗಿರಿಯು ಸಂಪೂರ್ಣ ನಿರ್ಮೂಲನವಾಗಿದ್ದರೂ ಈ ಬಡುವಗಳನ್ನು ಕೆಳವರ್ಗದ ಜನರಾಗಿ ಕಾಣುತ್ತಿದ್ದರು. 1940ರ ನಂತರ ಕ್ರಮೇಣ ಇಲ್ಲಮ್ ಪದ್ಧತಿಯು ಮಾಯವಾಗುತ್ತಾ ಬಂದಾಗ ಈ ಸಾಮಾಜಿಕ ಅಸಮತೋಲನವೂ ನಿರ್ಮೂಲನೆಯಾಯಿತು.[16]

ಚೀನಿಕ್ಕಾರ್ ಎಂಬುದು ಇನ್ನೊಂದು ಇಲ್ಲಮ್ ವರ್ಗಕ್ಕೆ ಸೇರದ ಪಂಗಡವಾಗಿತ್ತು. ಸಂಗೀತ ಈ ಜನ ವರ್ಗದವರ ಸಂಪ್ರದಾಯವಾಗಿತ್ತು. ಬ್ಯಾಂಡ್, ಡ್ರಮ್ ಮತ್ತು ಚೀನಿ (ಶತ್‌ಮಲ್ ರೂಪದ ವಾದ್ಯ)ಯು ಇವರಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತಿತ್ತು. ಕೊಟ್ಟು ಮುರ್ಸೆ ಮತ್ತು ಚೀನಿ ಪಂಗಡಗಳು ಮುಸ್ಲಿಮರಲ್ಲಿ ಪ್ರಸಿದ್ಧವಾಗಿತ್ತು. ದುಡಿ ಮತ್ತು ಕೊಳಲು ಹಿಂದೂ ಬಾಂಧವರಲ್ಲಿ ಕೆಳವರ್ಗದವರ (ಕೊರಗರ) ಸಂಗೀತ ವಾದ್ಯವಾಗಿತ್ತು. ಆದ್ದರಿಂದ ಬ್ಯಾರಿಗಳು ಈ ವರ್ಗದವರನ್ನು ಕೆಳಜಾತಿಯವರಂತೆ ನೋಡಿಕೊಳ್ಳುತ್ತಿದ್ದರು. ಬ್ರಾಹ್ಮಣರು ಮತ್ತು ಜೈನರು ಸಂಗೀತವನ್ನು ನುಡಿಸುವ ಜನವರ್ಗವನ್ನು ಕೆಳಜಾತಿಯವರೆಂದು ಪರಿಗಣಿಸುತ್ತಿದ್ದರು. ಜೈನರ ಸಂಸ್ಕೃತಿಯ ಪ್ರಭಾವ ಮುಸ್ಲಿಮರ ಮೇಲೆ ಬಹಳವಾಗಿತ್ತು. ಹಾಗಾಗಿ ಬ್ಯಾರಿಗಳು ಈ 'ಚೀನೀ'ಗಳನ್ನು ಇಲ್ಲಮ್ ವರ್ಗಕ್ಕೆ ಸೇರಿದವರೆಂದು ಪರಿಗಣಿಸುತ್ತಿರಲಿಲ್ಲ.

ಪುದು-ಇಸ್ಲಾಮ್ ಎಂಬುದು ಇಸ್ಲಾಮ್ ಮತಕ್ಕೆ ಇತರ ಕೆಳಜಾತಿಗಳಿಂದ ಮತಾಂತರಗೊಂಡ ಜನರ ವರ್ಗವಾಗಿತ್ತು. 19ನೇ ಶತಮಾನದಲ್ಲಿ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡ ಜನರ ಸಂಖ್ಯೆ ಬಹಳ ಕಡಿಮೆಯಾಗಿತ್ತು ಅಥವಾ ಈ ಪ್ರಕ್ರಿಯೆ ಸಂಪೂರ್ಣ ನಿಂತಿತು ಎಂದೇ ಹೇಳಬಹುದು. ಇದಕ್ಕೆ ಕಾರಣ ಕ್ರಿಶ್ಚಿಯನ್ ಮಿಶನರಿಗಳು ತಮ್ಮ ಧರ್ಮಕ್ಕೆ ಜನರನ್ನು ಆಕರ್ಷಿಸುವಲ್ಲಿ ಸಫಲರಾಗುತ್ತಿದ್ದರು. ಆದರೂ ಕೆಲವೊಂದು ಕೆಳ ವರ್ಗದ ಜನರು ತಮ್ಮ ಸಾಮಾಜಿಕ ಅಂತಸ್ತನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದರು. ಪುದು ಇಸ್ಲಾಮ್ ಎಂಬ ವರ್ಗದ ಜನರಿಗೆ ಎಲ್ಲ ವಿಧದ ಸಹಕಾರವನ್ನು ಒದಗಿಸಲಾಗುತ್ತಿತ್ತು ಹಾಗೂ ಉದ್ಯೋಗಗಳನ್ನು ಅವರಿಗೆ ನೀಡಲಾಗುತ್ತಿತ್ತು. ಹೀಗಾಗಿಯೇ

ಅವರ ಮೂಲ ಮತ್ತು ಆರ್ಥಿಕ ಸ್ಥಿತಿಯ ಆಧಾರದಲ್ಲಿ ಅವರನ್ನು ಇಲ್ಲಮ್ ಪಂಗಡದ ಸದಸ್ಯರೆಂದು ಪರಿಗಣಿಸಲಾಗುತ್ತಿರಲಿಲ್ಲ. ಇನ್ನೊಂದು ವರ್ಗವಾದ 'ಚೇರಕೂಟನ್' ಎಂಬುದೂ ಇಲ್ಲಮ್ ಗುಂಪಿಗೆ ಸೇರದ ವರ್ಗವಾಗಿತ್ತು. 'ವಸಗಳು' ಸುನ್ನತಿ ಕಾರ್ಯ ಮಾಡುವುದರಲ್ಲಿ ಪರಿಣತ ವ್ಯಕ್ತಿಗಳಾಗಿದ್ದರು. ಸುನ್ನತಿ ಎಂಬುದು ಒಂದು ಧಾರ್ಮಿಕ ವಿಧಿಯಾಗಿದ್ದು ಈ ವಸಗಳು ಸುನ್ನತಿಯ ಸಂದರ್ಭದ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ತಲೆಯ ಕೂದಲನ್ನು ತೆಗೆಯುವುದರಿಂದ ಹಿಡಿದು ಗಾಯ ಒಣಗಿಸುವ ಕಾರ್ಯದವರೆಗಿನ ಎಲ್ಲ ಕೆಲಸವನ್ನು ಈ ವಸಗಳು ನಿಭಾಯಿಸುತ್ತಿದ್ದರು. ಹೀಗಾಗಿ ವಸಗಳು ಕ್ಷೌರಿಕನ ಕೆಲಸವನ್ನು ನಿರ್ವಹಿಸುತ್ತಿದ್ದರು. ಮುಸ್ಲಿಮರಲ್ಲಿ ಕ್ಷೌರಿಕರಿಲ್ಲದಿದ್ದುದ್ದರಿಂದ ವಸಗಳೇ ಈ ಕೆಲಸಗಳನ್ನು ಮಾಡುತ್ತಿದ್ದರು. ಹಾಗಾಗಿ ವಸಗಳನ್ನು 'ಪರಿಕ್ಷೌರಿಕ'ರಂತೆ ಗಣಿಸಲಾಗುತ್ತಿತ್ತು. ಬ್ಯಾರಿಗಳು ಈ ವರ್ಗದ ಜನರನ್ನು ಇಲ್ಲಮ್ ಗುಂಪಿಗೆ ಸೇರದವರೆಂದು ಪರಿಗಣಿಸಿದರು. ಬಹಿಷ್ಕಾರ ಕ್ಕೊಳಗಾದ ಜನವರ್ಗವನ್ನು ಸಾಮಾನ್ಯವಾಗಿ ಅಪರಾಧಿಗಳು ಎಂದೇ ಪರಿಗಣಿಸಲಾಗುತ್ತಿತ್ತು. ಇಸ್ಲಾಮ್‌ನಲ್ಲಿ ಧರ್ಮದಿಂದ ಬಹಿಷ್ಕರಿಸಲಾದವರು ಎಂಬ ಕಲ್ಪನೆ ಇಲ್ಲ. ಅತ್ಯಾಚಾರ, ವ್ಯಭಿಚಾರ, ಮಾನಭಂಗದಂತಹ ಗುರುತರ ಅಪರಾಧವೆಸಗಿದ ಜನರನ್ನು ಜಮಾಅತ್‌ಗಳಿಂದ ಬಹಿಷ್ಕರಿಸಲಾಗುತ್ತಿತ್ತು. ಇಸ್ಲಾಮ್ ಈ ಅಪರಾಧವೆಸಗಿದವರಿಗೆ ಮರಣ ದಂಡನೆ ವಿಧಿಸುತ್ತದೆ. ಆದರೆ ಭಾರತೀಯ ಕಾನೂನಿನಲ್ಲಿ ಇದಕ್ಕೆ ಅನುಮತಿ ಇಲ್ಲ. ಅಂತಹ ಜನರಿಗೆ ಬ್ಯಾರಿ ಜನಾಂಗದಲ್ಲಿ ಯಾವುದೇ ಸ್ಥಾನವಿಲ್ಲ.[17]

'ತಾಲ ಇಲ್ಲಾತ್ತೋರು' ಎಂಬುದು ಒಂದು ಭಿನ್ನ ವರ್ಗವಾಗಿದ್ದು ಇವರು ಇಸ್ಲಾಮ್ ನೀಡಿದ ಎಲ್ಲಾ ಹಕ್ಕುಗಳನ್ನು ಪಡೆದಿದ್ದರು. ಆದರೆ ಇವರು ತಾಲಕ್ಕಾರ್‌ಗೆ ಸಮಾನರಾದವರಾಗಿರಲಿಲ್ಲ. ಇದು ಧಾರ್ಮಿಕ ವಿಂಗಡನೆಯಾಗಿರದೆ ಸಾಮಾಜಿಕ ವ್ಯವಸ್ಥೆಯ ಆಧಾರದಲ್ಲಿ ಉಂಟಾದ ಭಿನ್ನತೆಯಾಗಿತ್ತು. 20ನೇ ಶತಮಾನದಲ್ಲಿ ಈ 'ಇಲ್ಲಮ್' ಪದ್ಧತಿಯು ಯಾವುದೇ ಮಹತ್ವವನ್ನು ಪಡೆಯದೆ ನಗಣ್ಯವಾಗಿ ಪರಿಣಮಿಸಿತು. ಬ್ಯಾರಿಗಳ ಪ್ರಭಾವ, ಹೊಸ ಚಳುವಳಿಗಳು ಮತ್ತು ಶೈಕ್ಷಣಿಕ ಬೆಳವಣಿಗೆಯು ಈ ಇಲ್ಲಮ್ ವ್ಯವಸ್ಥೆಯನ್ನು ಇಲ್ಲವಾಗಿಸಿತು. ಈ ಪದ್ಧತಿ ನಿರ್ಮೂಲನೆಗೊಂಡದ್ದರಿಂದ ಇಲ್ಲಮ್‌ಗೆ ಹೊರತಾದ ಪಂಗಡಗಳಿಗೂ ಸಾಮಾಜಿಕ ಮನ್ನಣೆ ದೊರೆತು ಸಾಮಾಜಿಕ ಅಸಮತೋಲನದ ನಿವಾರಣೆಯಾಯಿತು.

3. ಅಗಕ್ಕಾರ್ ಮತ್ತು ಜೈನರ ಪ್ರಭಾವ

ಅಗ ಪದ್ಧತಿಯ ಉಗಮವು ಅಸ್ಪಷ್ಟವಾಗಿದೆ. ಇಲ್ಲಮ್ ಪಂಗಡ ಮತ್ತು ಅಗ ಪದ್ಧತಿಯ ನಡುವಿನ ಸಂಬಂಧದ ಬಗ್ಗೆಯೂ ಸರಿಯಾದ ಮಾಹಿತಿಗಳು ಲಭ್ಯವಿಲ್ಲ. ಆದರೂ ಅಗ ಪದ್ಧತಿಯು ಮಂಗಳೂರಿನಲ್ಲಿ ಮಾತ್ರವಿದ್ದು ಇದು ಕೇವಲ 16 ಕುಟುಂಬಗಳಿಗೆ ಸೀಮಿತವಾಗಿತ್ತು.[18] ಮಂಗಳೂರಿನ ಹಂಜಮಾನಗಳ ಬಗ್ಗೆ ಹಲವು ದಾಖಲೆಗಳಿದ್ದರೂ ಪೋರ್ಚುಗೀಸರ ಆಗಮನದ ನಂತರ ಈ ಹಂಜಮಾನರು ಇಲ್ಲವಾಗಿದ್ದು ಅವರ ಬಗೆಗಿನ ಮಾಹಿತಿಗಳು ಅಲಭ್ಯವಾಗಿದೆ. ಹಿಂದೆ ಈ ಅಗ ಪದ್ಧತಿಯು ಮಂಗಳೂರಿನಲ್ಲಿ ವ್ಯಾಪಾರಿಗಳ ಹೊಸ ವರ್ಗವಾಗಿದ್ದು ಇದು ಬಹಳ ಪ್ರಭಾವಿ ಊಳಿಗಮಾನ್ಯ ವ್ಯವಸ್ಥೆಯಾಗಿ ಪರಿಣಮಿಸಿತ್ತು.

ಪೋರ್ಚುಗೀಸರು ಉಳ್ಳಾಲದ ಜೈನ ರಾಣಿಯೊಂದಿಗೆ ಮತ್ತು ಮಂಗಳೂರಿನ ಬಂಗ ರಾಜರುಗಳೊಂದಿಗೆ ನಡೆಸಿದ ರಾಜಕೀಯ ಯುದ್ಧದ ಪ್ರಭಾವದಿಂದ ಈ ಪ್ರದೇಶದ ವ್ಯಾಪಾರ ಸ್ಥಿತಿಯಲ್ಲಿ ಹಲವು ಬದಲಾವಣೆಗಳುಂಟಾದವು. ಇನ್ನೂರು ವರ್ಷಗಳಲ್ಲಿ (1600 ರಿಂದ 1800) ಒಮ್ಮಿಂದೊಮ್ಮೆಲೆ ಹಂಜಮಾನಗಳು ಇಲ್ಲವಾಗಿ ಹೊಸ ಹಾಗೂ ಅಷ್ಟೇ ಪ್ರಭಾವ ಪೂರ್ಣವಾದ ಒಂದು ವ್ಯಾಪಾರಿ ವರ್ಗವು ಬೆಳೆದು ಬಂತು ಎಂದರೆ ಅದು ನಂಬಲಸಾಧ್ಯ ವಾದುದು. ಹಂಜಮಾನಗಳೇ[19] ಕಾಲಕ್ರಮೇಣ ಜಹಗೀರು ಪದ್ಧತಿಯಾಗಿ ಪರಿಣಮಿಸಿ ಮಂಗಳೂರಿನಲ್ಲಿ ಹದಿನಾರು ಅಗ (ಮನೆ)ಗಳಾಗಿ ಪರಿಣಮಿಸಿರಬಹುದು.

ಹದಿನಾರು ಮನೆಗಳು ಯಾಕಾಗಿ? ಇವರು ಭಿನ್ನ ವ್ಯಾಪಾರಿ ವರ್ಗದವರೇ? ಎಂಬ ಪ್ರಶ್ನೆಗಳೂ ಸಾಮಾನ್ಯವಾಗಿ ಉದ್ಭವಿಸುತ್ತದೆ. ಹದಿನಾರು ಸಂಖ್ಯೆಯ ಕಲ್ಪನೆ ಈ ಅಗ ಪದ್ಧತಿಯಿಂದುಂಟಾದುದಲ್ಲ. ವಿಜಯನಗರ ಮತ್ತು ಅಲುಪರ ಆಳ್ವಿಕೆಯ ಕಾಲದಲ್ಲಿ ನಗರ ಹಂಜಮಾನ್‌ಗಳು ಮತ್ತು ಸೆಟ್ಟಿಕಾರ ಸಂಘಗಳು ಸಮಾಜದಲ್ಲಿ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದವು ಎಂಬುದು ಹಂಜಮಾನರ ಇತಿಹಾಸದಿಂದ ತಿಳಿದು ಬರುತ್ತದೆ. ಶಿಲಾ ಲೇಖನಗಳ ಪ್ರಕಾರ ಹಂಜಮಾನಗಳು ಮತ್ತು ಸೆಟ್ಟಿಕಾರ ಸಂಘಗಳು ಬಾರ್ಕೂರು ಮತ್ತು ಮಂಗಳೂರಿನಲ್ಲಿ ತುಂಬ ಪ್ರಸಿದ್ಧಿ ಪಡೆದಿದ್ದರು ಎಂದು ತಿಳಿದುಬರುತ್ತದೆ.[20] ಹಿಂದಿನ ಶತಮಾನದಲ್ಲಿ ಜೈನರ ಮತ್ತು ಮುಸ್ಲಿಮರ ನಡುವೆ ವ್ಯಾಪಾರೀ ಸಂಬಂಧವು ಬಹಳ ನಿಕಟವಾಗಿತ್ತು. ಜೈನ ಸೆಟ್ಟಿಕಾರ ಸಂಘಗಳು 16 ಕುಟುಂಬವನ್ನು ನಗರಗಳಲ್ಲೂ 8 ಕುಟುಂಬವನ್ನು ಪಟ್ಟಣಗಳಲ್ಲೂ ಹೊಂದಿತ್ತು. ಬಾರ್ಕೂರು ಮತ್ತು ಮಂಗಳೂರುಗಳು ಎರಡು ನಗರಗಳಾಗಿದ್ದು ಇಲ್ಲಿ ಹಂಜಮಾನ್‌ಗಳು ಮತ್ತು ಸೆಟ್ಟಿಕಾರ ಸಂಘಗಳೂ ಇದ್ದುವು. ಸೆಟ್ಟಿಕಾರ ಸಂಘದಲ್ಲಿ 16 ಕುಟುಂಬಗಳಿದ್ದುವು. ಜೈನ ಧರ್ಮದಿಂದ ಮತಾಂತರಗೊಂಡ ಮುಸ್ಲಿಮರಲ್ಲಿ ಜೈನರದೇ ಆದ ವ್ಯಾಪಾರಿ ವಿಧಾನಗಳ ಪ್ರಭಾವ ಬಹಳವಾಗಿದ್ದುದು ಕಂಡುಬರುತ್ತಿತ್ತು. ಹಂಜಮಾನ್‌ಗಳು ಸೆಟ್ಟಿಕಾರ ಸಂಘದಂತೆಯೇ ಒಂದು ವರ್ಗವಾಗಿದ್ದು ಇಲ್ಲಿಯೂ ಸೆಟ್ಟಿಕಾರ ಸಂಘದಂತೆ ಹದಿನಾರು ಕುಟುಂಬಗಳ ಒಂದು ಗುಂಪಿತ್ತು. ಇದೇ ಹದಿನಾರು ಕುಟುಂಬಗಳ ಕಲ್ಪನೆಯು 18ನೇ ಶತಮಾನದಲ್ಲಿ ಅಗ (ಮನೆ)ವಾಗಿ ಮಾರ್ಪಟ್ಟಿತ್ತು. ಅಗ ಪದ್ಧತಿಯನ್ನು ಈ ಕೆಳಗಿನ ಮಾಹಿತಿಯ ಆಧಾರದಲ್ಲಿ ತಿಳಿದುಕೊಳ್ಳಬಹುದು.

'ಅಗ' ಪದ್ಧತಿಯ ಮುಖ್ಯ ಗುಣ ಲಕ್ಷಣಗಳು ಈ ರೀತಿ ಇವೆ:

1. 'ಅಗ'ಗಳವರು ಮತ್ತು ಜೈನರಲ್ಲಿ ಹಲವು ಸಾಮ್ಯತೆ ಕಾಣಸಿಗುತ್ತವೆ. ಪೋರ್ಚುಗೀಸರ ಆಕ್ರಮಣಕ್ಕಿಂತ ಮುಂಚೆ ಮಂಗಳೂರು ಜೈನರ ನೆಲೆವೀಡಾಗಿತ್ತು. ಭಂಗ ದೊರೆ ಲಕ್ಷ್ಮಪ್ಪರಸ ಮಂಗಳೂರಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದನು. ಇಲ್ಲಿ ಜೈನಬಸದಿ, ಮಂದಿರ, ಜೈನ ಮಠ ಮತ್ತು ಅರಮನೆ (ಉರ್ವದಲ್ಲಿ)ಗಳಿದ್ದು, ಇವೆಲ್ಲವೂ ಬಂದರು ಪ್ರದೇಶ ಗಳಲ್ಲಿತ್ತು. ಪೋರ್ಚುಗೀಸರ ಧಾಳಿಯಿಂದಾಗಿ ಜೈನರ ಆಳ್ವಿಕೆ ಕೊನೆಗೊಂಡಿತು. ವ್ಯಾಪಾರ ವಹಿವಾಟುಗಳನ್ನು ಮುಸ್ಲಿಮರು ನಿಭಾಯಿಸುತ್ತಿದ್ದರು. ಚೆಟ್ಟಿ ಎಂಬ ವ್ಯಾಪಾರಿ ಮಲಬಾರಿನ ರಾಜರೊಂದಿಗೆ ನಿಕಟ ಸಂಬಂಧ ಹೊಂದಿದ್ದ ಎಂಬ ಹೇಳಿಕೆ ಇದೆ. ಪೋರ್ಚುಗೀಸರು ಆತನ ಮೇಲೆ ದಾಳಿ ನಡೆಸಿದಾಗ ತಪ್ಪಿಸಿಕೊಳ್ಳಲಾಗದೆ ಆತ ಮೃತಪಟ್ಟನು ಎಂಬ ಪ್ರತೀತಿ ಇದೆ.[21] ಚೆಟ್ಟಿ

ಮುಸ್ಲಿಮನಾಗಿದ್ದು ಅವನ ಮನೆತನವನ್ನು ಚೆಟ್ಟಿಅಗ ಎಂದು ಕರೆಯಲಾಗುತ್ತಿತ್ತು. ಈ ಜೈನ ಮುಸ್ಲಿಮ್ ಸಂಬಂಧವು ಮಂಗಳೂರಿನಲ್ಲಿ ಅಧಿಕವಾಗಿ, ಈ ಹದಿನಾರು ಮನೆಗಳವರೂ ಮುಸ್ಲಿಮ್ ಮತಾನುಯಾಯಿಗಳಾಗಿ ಮಾರ್ಪಟ್ಟ ಜೈನ ವ್ಯಾಪಾರೀ ಮನೆತನದವರೇ ಆಗಿದ್ದರು. ಈ ಮನೆಗಳಿಗಿರುವ ಹೆಸರುಗಳಲ್ಲಿ ಚೆಟ್ರ ಅಗ, ಬಲ್ಲಾಳ್ ಅಗ, ಪಾಂಡ್ಯಲಗ (ಚೆರಿಯ ಬಲ್ಲಾಳಗ) ಇತ್ಯಾದಿಗಳೂ ಜೈನರ ಪ್ರಭಾವವನ್ನು ತೋರಿಸುತ್ತದೆ.

2. ಅಗ ಎಂದರೆ ಮನೆ. ಇಸ್ಲಾಮಿನಲ್ಲಿ ಮನೆ ಅಥವಾ ಮನೆತನಕ್ಕೆ ಹೆಚ್ಚಿನ ಮಹತ್ವವಿಲ್ಲ ಆದರೆ ಜೈನ ಸಂಸ್ಕೃತಿಯಲ್ಲಿ ಬೀಡು. ಅಂದರೆ ಮನೆಗೆ ಹೆಚ್ಚಿನ ಮಹತ್ವವಿದೆ. ದಕ್ಷಿಣ ಕನ್ನಡದಲ್ಲಿ ಹಲವಾರು ಜೈನ ಬೀಡುಗಳಿದ್ದು ಈ ಬೀಡುಗಳಲ್ಲಿ ಜಹಗೀರು ಪದ್ಧತಿಯ ವ್ಯವಸ್ಥೆ ಕಾಣಸಿಗುತ್ತಿತ್ತು. ಅಗವೂ ಈ ಬೀಡುಗಳ ನಕಲಾಗಿದ್ದು ಇವುಗಳು ಜಹಗೀರು ಪದ್ಧತಿಯನ್ನವಲಂಬಿಸಿ ರೂಪುಗೊಂಡಿತ್ತು. ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡ ಜೈನರು, ಈ ಮನೆತನದ ಹೆಸರುಗಳನ್ನು ಬೀಡಿನಿಂದ ಅಗಕ್ಕೆ ಪರಿವರ್ತಿಸಿದರು. ಈ ಅಗ ಎಂಬುದು ಬೀಡು ಎಂಬ ಪದದ ಬ್ಯಾರಿ ಭಾಷಾಂತರವಾಗಿದೆ.

3. ಜೈನ ಸೆಟ್ಟಿಕಾರ ಸಂಘಗಳೊಂದಿಗೆ ಗುರುತಿಸಿಕೊಂಡಿದ್ದ ಹದಿನಾರನೇ ಸಂಖ್ಯೆಯನ್ನು ಜೈನರಿಂದ ಪಡೆದುಕೊಂಡಿದ್ದರು. ಜಮೀನ್ದಾರಿ ಸಂಪರ್ಕ ಮತ್ತು 16ಸೀಟುಗಳು ಸಮಾಜದಲ್ಲಿ ಅವರನ್ನು ಇತರರಿಂದ ಪ್ರತ್ಯೇಕಿಸಿತ್ತು. 16 ಅಗ ಅಥವಾ ಮನೆಗಳಲ್ಲಿ ಜೈನರ ಎಲ್ಲಾ ಗುಣಲಕ್ಷಣಗಳು ಇದ್ದವು.

4. 19ನೇ ಶತಮಾನದಲ್ಲಿ ಈ ಅಗಗಳು ಇಡೀ ಬಂದರು ಪ್ರದೇಶವನ್ನು ಅಗ ಮಯವನ್ನಾಗಿಸಿತು. ಕೆಳ ಜಾತಿ ಜನರು ಹಾಗೂ ಬಡವರು ಈ ಪ್ರದೇಶಕ್ಕೆ ಭೇಟಿ ನೀಡುವ ಧೈರ್ಯ ತೋರುತ್ತಿರಲಿಲ್ಲ. ಅಗದ ಜನರ ಎದುರು ಬಡವರು ಚಪ್ಪಲಿ ಧರಿಸಿ ಅಥವಾ ನೆರಳಿಗಾಗಿ ಕೊಡೆ ಹಿಡಿದು ನಡೆಯುತ್ತಿರಲಿಲ್ಲ. ಈ ರೀತಿಯ ಜಮೀನ್ದಾರಿ ಪದ್ಧತಿ ಇಲ್ಲಿ ಜಾರಿಯಲ್ಲಿತ್ತು.

5. ಅಗ ಮನೆಗಳ ನಿರ್ಮಾಣ ಯೋಜನೆ ಮತ್ತು ಸ್ವರೂಪ ಜೈನರ ಮನೆಗಳನ್ನು ಹೋಲುತ್ತಿತ್ತು. ಒಳಾಂಗಣದ ಕೋಣೆಗಳು ಸಹ ಜೈನರ ಮನೆಯ ಮಾದರಿಯದ್ದಾಗಿತ್ತು.

6. ಬ್ಯಾರಿಗಳು ಧರಿಸುತ್ತಿದ್ದ ಆಭರಣಗಳು ಸಹ ಜೈನರ ಆಭರಣಗಳನ್ನು ಬಹುಮಟ್ಟಿಗೆ ಹೋಲುತ್ತಿತ್ತು. ಗೆಜ್ಜೆಟಿಕ್ಕಿ ಮಾಲೆ, ಸಿರಿಮಾಲೆ, ಎಳೆಬಲೆ, ಪಿರಿಬಲೆ, ಮಿಸ್ರಿಮಾಲೆ, ಜಕ್ಕೆಟ್ಟ್, ಸಿಂಗಾರ, ಚೌರಿ, ಜಡೆ ಸಾಲೆ, ಅರೋಪಟ್ಟಿ ಅರಞಾನ ಮಾತ್ರವಲ್ಲ ಆಭರಣ ಪೆಟ್ಟಿಗೆ ಖರ್‌ಜಾನಾ ಎಲ್ಲವೂ ಜೈನ ಪದಕೋಶದಲ್ಲಿನ ಶಬ್ದಗಳೇ ಆಗಿದ್ದವು. ಬಹುತೇಕ ಈ ಆಭರಣಗಳನ್ನು ಇಂದು ಜೈನ ಅಥವಾ ಮುಸ್ಲಿಮರು ಬಳಸುತ್ತಿಲ್ಲ.

7. ಅಗಕ್ಕಾರ್ (ಜನರು) 19ನೇ ಶತಮಾನದ ಮಧ್ಯ ಭಾಗದವರೆಗೂ ಸೂರ್ಯಾಸ್ತಮಾನಕ್ಕಿಂತ ಮೊದಲೇ ಅಥವಾ ಆದ ತಕ್ಷಣ ಊಟ ಮಾಡುತ್ತಿದ್ದರು. ಆದರೆ ಬ್ರಿಟಿಷ್ ಅಧಿಕಾರಿಗಳ ಪ್ರಭಾವದಿಂದಾಗಿ ರಾತ್ರಿ ಡಿನ್ನರ್ ಇವರಿಗೂ ಅಭ್ಯಾಸವಾಗಿ ಸೂರ್ಯಾಸ್ತ ಸಂದರ್ಭದ ರಾತ್ರಿ ಆಹಾರ ಸೇವನೆ ಪದ್ಧತಿ ಕಣ್ಮರೆಯಾಯಿತು.

ಜೈನರ ಮತಾಂತರದಿಂದ ಇಂತಹ ಅಗಗಳು ರೂಪುಗೊಂಡಿರುವುದನ್ನು ಮತ್ತು

ಅಗಗಳ ಮೇಲೆ ಜೈನರ ಪ್ರಭಾವ ಇರುವುದನ್ನು ಈ ಎಲ್ಲಾ ಹೋಲಿಕೆಗಳು ಸ್ಪಷ್ಟಪಡಿಸುತ್ತದೆ. 15 ಮತ್ತು 16ನೇ ಶತಮಾನದ ಹಂಜಮಾನರು 19ನೇ ಶತಮಾನದಲ್ಲಿ ಪ್ರಭಾವಶಾಲಿ 16 ಮನೆ ಗಳಾಗಿ ರೂಪಾಂತರಗೊಂಡರು. ಇವರು ಇವರದ್ದೇ ಆದ ಜಮೀನ್ದಾರಿ ವ್ಯವಸ್ಥೆಯನ್ನು ರೂಪಿಸಿದರು. ಇವರು 16 ಅಗಗಳನ್ನು ಗಿಲ್ಡ್ ಎಂದು ಪರಿಗಣಿಸಿದರು. ಇವರು ತಮ್ಮ ದಾವತ್‌ಗಳಲ್ಲಿ 'ತಾಲ' ಎಂಬ ಚತುಷ್ಕೋಣ ಆಕೃತಿಯ ಅಥವಾ ಎಕ್ಲಿಪ್ಟಿಕ್ ಆಕೃತಿಯ ಮೇಜು ಮತ್ತು 16 ವಿಶೇಷ ಕುರ್ಚಿಗಳನ್ನು ಬಳಸುತ್ತಿದ್ದರು. ಈ 16ಕುರ್ಚಿಗಳು ಅವರಿಗೇ ಮೀಸಲಾಗಿದ್ದವು ಹಾಗೂ ಇದರಲ್ಲಿ ಕುಳಿತು ಅವರು ಆಹಾರ ಸೇವಿಸುತ್ತಿದ್ದರು. ಮೇಜಿನ ನಡುವೆ ವೃತ್ತಾಕಾರದ ಪಾತ್ರೆಯನ್ನು ಇಟ್ಟು ಎಲ್ಲರೂ ಇದೇ ಪಾತ್ರೆಯಿಂದ ಆಹಾರವನ್ನು ಹಂಚಿಕೊಂಡು ತಿನ್ನುತ್ತಿದ್ದರು. ಈ ತಾಲ ವ್ಯವಸ್ಥೆ 16 ಅಗಗಳಲ್ಲಿ ಮಾತ್ರ ಕಾಣಬಹುದಾಗಿತ್ತು. ದಕ್ಷಿಣ ಕನ್ನಡದಲ್ಲಿನ ಬೇರೆ ಯಾವುದೇ ಜನರಲ್ಲಿ ಈ ರೀತಿಯ ಆಚರಣೆ ಇರಲಿಲ್ಲ. ಮದುವೆ ಯಂತಹ ಸಮಾರಂಭಗಳಲ್ಲಿ 16 ಮನೆಯವರಿಗೆ ಮಾತ್ರ ತಾಲ ವ್ಯವಸ್ಥೆ ಮಾಡಲಾಗುತ್ತಿತ್ತು. ಬೇರೆ ಎಲ್ಲರಿಗೆ ಸಾಮಾನ್ಯ ಡಿನ್ನರ್ ವ್ಯವಸ್ಥೆ ಇರುತ್ತಿತ್ತು.[22]

6) ಬ್ಯಾರಿಗಳ ಸಾಮಾನ್ಯ ಜೀವನ ವಿವರ

ಬ್ಯಾರಿ ಸಮಾಜದಲ್ಲಿ ಕುಟುಂಬ ಪ್ರಮುಖ ಸ್ಥಾನ ಹೊಂದಿದೆ. ಬ್ಯಾರಿ ಕುಟುಂಬ ಹಲವು ಸ್ಥಳೀಯ ಅಂಶಗಳು ಹಾಗೂ ಇಸ್ಲಾಮಿನ ಕಟ್ಟಳೆಗಳನ್ನು ಒಳಗೊಂಡ ಹೊಸ ಅರೆ ಜಮೀನ್ದಾರಿ ವ್ಯವಸ್ಥೆಯಾಗಿದೆ. ಇವರ ಹೊಸ ಕುಟುಂಬ ವ್ಯವಸ್ಥೆ ಹಲವು ವಿಷಯಗಳಲ್ಲಿ ಸ್ಥಳೀಯ ಹನಫಿ ಹಾಗೂ ಮಾಪಿಳ್ಳೆಯವರಿಗಿಂತ ಭಿನ್ನವಾಗಿದೆ. ಧಾರ್ಮಿಕ ಆಚರಣೆಗಳು ಸಮಾನವಾಗಿದ್ದರೂ, ಇವರ ಜೀವನ ಶೈಲಿ, ಸ್ಥಳೀಯ ಸಂಪ್ರದಾಯ ಮತ್ತು ಆಚರಣೆಗಳಿಂದ ಪ್ರಭಾವಿತಗೊಂಡು ಇತರರಿಗಿಂತ ಭಿನ್ನವಾಗಿವೆ. ಮೂಲತಃ ಸ್ಥಳೀಯ ತುಳುವರಾಗಿದ್ದ ಬ್ಯಾರಿಗಳು ಮತಾಂತರಗೊಂಡರೂ ಮೂಲ ಸಂಸ್ಕೃತಿಯ ಕುರುಹುಗಳು ಕೆಲಮಟ್ಟಿಗೆ ಇನ್ನೂ ಬಾಕಿ ಉಳಿದಿದೆ. ಆದರೆ 20ನೇ ಶತಮಾನದ ಮೊದಲ ಭಾಗದಲ್ಲಿ ನಡೆದ ಧಾರ್ಮಿಕ ಶಿಕ್ಷಣ ಮತ್ತು ಪರಿಣಾಮಕಾರಿ ಸುಧಾರಣೆಗಳು ಸಮಾಜದಲ್ಲಿ ನಿಧಾನವಾಗಿ ಬದಲಾವಣೆಗಳಿಗೆ ಹಾದಿ ಮಾಡಿತು. ಇದರ ಪರಿಣಾಮವಾಗಿ ಅವರು ಮಾಪಿಳ್ಳೆ ಮೌಲ್ವಿಗಳ ಮಾರ್ಗದರ್ಶನದ ಪ್ರಕಾರ ಮುಸ್ಲಿಮರಂತೆ ಬದುಕಲು ಆರಂಭಿಸಿದರು. ಆದರೆ ಯಾವುದೇ ಸುಧಾರಣೆಗಳ ಹೊರತಾಗಿಯೂ ಸ್ಥಳೀಯ ಸಂಪ್ರದಾಯಗಳು ಮುಂದುವರಿದವು.

ಮದುವೆಗಳು ಹಾಗೂ ಇತರ ಸಮಾರಂಭಗಳು (ಮಂಜೂಲ)

ಕುಟುಂಬ ಜೀವನ ಕುರಿತು ಇಸ್ಲಾಮ್ ಉತ್ತಮ ಚಿತ್ರಣ ಒದಗಿಸುತ್ತದೆ. ಕುಟುಂಬ ಅಂದರೆ ಗಂಡ, ಹೆಂಡತಿ ಮತ್ತು ಅವರ ಮಕ್ಕಳು. ಇಸ್ಲಾಮ್ ಗಂಡ, ಹೆಂಡತಿ ಮತ್ತು ಮಕ್ಕಳ ಕರ್ತವ್ಯಗಳನ್ನು ನಿಗದಿಪಡಿಸಿದೆ. ಇವುಗಳನ್ನು ಮೌಲ್ವಿಗಳು ಮದರಸಾ (ಶಾಲೆ)ಗಳಲ್ಲಿ ಕಲಿಸುತ್ತಾರೆ. ಕುಟುಂಬದ ಎಲ್ಲಾ ಸದಸ್ಯರು ಸಾಮಾನ್ಯವಾಗಿ ಅವರ ಜವಾಬ್ದಾರಿ ಬಗ್ಗೆ ಅರಿವು ಹೊಂದಿರುತ್ತಾರೆ. ಸರಿಯಾದ ಮದುವೆ ಸಂಬಂಧದ ಮೂಲಕ ಕುಟುಂಬ ರೂಪುಗೊಳ್ಳುತ್ತದೆ.

ಸೂಕ್ತ ವಿವಾಹದ ಮೂಲಕ ಅಲ್ಲದ ಲೈಂಗಿಕ ಅಥವಾ ಇನ್ನಾವುದೇ ಸಂಬಂಧವನ್ನು ಇಸ್ಲಾಂ ನಿಷೇಧಿಸಿದೆ.

ವಿವಾಹ ಇಸ್ಲಾಮಿನಲ್ಲಿ ಕಡ್ಡಾಯವಾಗಿದೆ. ಹೆಣ್ಣುಮಕ್ಕಳ ಪಾಲಕರು ತಮ್ಮ ಮಗಳ ಮದುವೆ ಕುರಿತು ತುಂಬಾ ಮೊದಲೇ ಆಲೋಚನೆ ಹೊಂದಿರುತ್ತಾರೆ. ಸಾಮಾನ್ಯವಾಗಿ ಪಾಲಕರು ತಮ್ಮ ಮಗಳು ಋತುಮತಿಯಾಗುವ ಪೂರ್ವದಲ್ಲೇ ಮದುವೆ ಮಾಡಿ ಬಿಡುವ ಇಚ್ಛೆ ಹೊಂದಿರುತ್ತಾರೆ. ಇಸ್ಲಾಂ ಬಾಲ್ಯ ವಿವಾಹಕ್ಕೆ ಅನುಮತಿ ನೀಡುತ್ತದೆ. ಇಲ್ಲಿ ಮದುವೆಗೆ ನಿರ್ದಿಷ್ಟ ವಯಸ್ಸು ನಿಗದಿಪಡಿಸಲಾಗಿಲ್ಲ. ಬಾಲ್ಯ ವಿವಾಹ ಈ ಪ್ರದೇಶದ ಸ್ಥಳೀಯ ಸಂಪ್ರದಾಯವಾಗಿದ್ದು ಶತಮಾನದ ಆರಂಭದಿಂದಲೇ ನಡೆಯುತ್ತಿತ್ತು. ಬ್ಯಾರಿಗಳು ಋತುಮತಿ ಪೂರ್ವದಲ್ಲೇ ಅಂದರೆ ಬಾಲ್ಯ ವಿವಾಹ ನಡೆಸಿಕೊಡುವುದನ್ನು ಸಾಮಾನ್ಯವಾಗಿ ಬಯಸುತ್ತಾರೆ.

ಮದುವೆಯನ್ನು ಮಂಙ್ಲ ಎಂದು ಕರೆಯಲಾಗುತ್ತದೆ. ಮದುವೆ ಪ್ರಸ್ತಾವನೆಯನ್ನು ಸಾಮಾನ್ಯವಾಗಿ ಹೆಣ್ಣಿನ ಪಾಲಕರು ಗಂಡಿನ ಕಡೆಯವರಿಗೆ ಕಳುಹಿಸುತ್ತಾರೆ. ಇಲ್ಲಂ (illum) ಗುಂಪುಗಳ ಮೆಹ್ರ್ ಅನ್ನು ಇಲ್ಲಂ ನಿಗದಿಪಡಿಸುತ್ತಿದ್ದರು. ಆಗ ಕುಟುಂಬದವರಲ್ಲಿ ಮಾತ್ರವಲ್ಲದೆ ಇತರ ಕೆಳಸ್ತರದ ಕುಟುಂಬಗಳಲ್ಲಿ ಸಹ ಮೆಹ್ರ್ ಕುರಿತಾಗಿ ಸಂಧಾನ ಮಾತುಕತೆಗಳು ನಡೆಯುತ್ತಿದ್ದವು. ಇಲ್ಲಂ ಗುಂಪುಗಳಲ್ಲಿ ಕೆಳಸ್ತರದವರು ಮೇಲು ಸ್ತರದವರೊಂದಿಗೆ ಸಂಬಂಧ ಕುದುರಿಸಲು ಯಾವುದೇ ತೊಡಕು ಎದುರಾಗುತ್ತಿರಲಿಲ್ಲ. ಪರಸ್ಪರ ಮಾತುಕತೆ ಬಳಿಕ ಪೊದು (ಪ್ರಸ್ತಾಪ)ವನ್ನು ಅಂತಿಮಗೊಳಿಸಲಾಗುತ್ತಿತ್ತು. ತನಗೆ ಪ್ರಸ್ತಾಪ ಮಾಡಿರುವ ಹುಡುಗಿಯನ್ನು ನೋಡುವುದನ್ನು ಹುಡುಗರು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಆದರೆ ಇಸ್ಲಾಮಿನಲ್ಲಿ ತನಗೆ ಪ್ರಸ್ತಾಪ ಬಂದಿರುವ ಹುಡುಗಿಯನ್ನು ನೋಡಲು ಅನುಮತಿ ಇದೆ. ಆದರೆ 19ನೇ ಶತಮಾನದ ಬ್ಯಾರಿಗಳು ವರ್ಣನೆಗಳ ಮೇಲೆ ಹೆಚ್ಚು ಅವಲಂಬಿತರಾಗುತ್ತಿದ್ದರು. ಕೆಲವು ಸಲ ಹುಡುಗನ ಪಾಲಕರು ಅಥವಾ ಕೆಲವು ಬಂಧುಗಳು ಹುಡುಗಿಯ ಮನೆಗೆ ತೆರಳಿ ಹುಡುಗಿ ಕುರಿತಾದ ವರ್ಣನೆಗಳನ್ನು ದೃಢಪಡಿಸುತ್ತಿದ್ದರು. ಈ ಎಲ್ಲಾ ಔಪಚಾರಿಕತೆಗಳು ಮುಗಿದ ಬಳಿಕ ಮದುವೆಯ ಪ್ರಥಮ ಹೆಜ್ಜೆಯಾದ ಉರಪ್ಪು ಅಥವಾ ಪರಂಞರಪ್ಪು (ಕಾಸರಗೋಡು ಪ್ರದೇಶದಲ್ಲಿ) ನಡೆಯುತ್ತಿತ್ತು. ಸಾಮಾನ್ಯವಾಗಿ ಇದು ಹುಡುಗನ ಮನೆಯಲ್ಲಿ ನಡೆಯುತ್ತಿತ್ತು. ಪ್ರಮುಖ ಸಂಬಂಧಿಗಳು, ಗೆಳೆಯರು, ಮಸೀದಿಯ ಮೌಲ್ವಿ ಇದರಲ್ಲಿ ಭಾಗವಹಿಸುತ್ತಿದ್ದರು ಮತ್ತು ಮದುವೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮಹ್ರ್, ಚಿನ್ನ, ವರದಕ್ಷಿಣೆ, ಬಟ್ಟೆಬರೆ, ಔತಣ, ಮದುವೆ ದಿನಾಂಕ ಮತ್ತು ಸಮಯ ಇತ್ಯಾದಿ ಪ್ರಮುಖ ವಿಷಯಗಳನ್ನು ಇಲ್ಲಿ ಚರ್ಚಿಸಿ ಅಂತಿಮಗೊಳಿಸಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ವರದಕ್ಷಿಣೆ ಕುರಿತು ಇಲ್ಲಿ ಮಾತುಕತೆ ನಡೆಯುತ್ತಿತ್ತು. ಮದುವೆಯ ದಿನ ಮತ್ತು ಸಮಯವನ್ನು ಸಾಮಾನ್ಯವಾಗಿ ನಿಗದಿಪಡಿಸಲಾಗುತ್ತಿತ್ತು. ಕೆಲವೊಮ್ಮೆ ದಿನಾಂಕ ಮತ್ತು ಸಮಯವನ್ನು ಬಳಿಕ ಅಂತಿಮಗೊಳಿಸಲಾಗುತ್ತಿತ್ತು. ಮದುವೆ ದಿನಾಂಕ ನಿಗದಿಪಡಿಸಲು ಯಾವುದೇ ಸಮಯದ ಮಿತಿ ಇರುತ್ತಿರಲಿಲ್ಲ. ಸಾಮಾನ್ಯವಾಗಿ ಒಂದು ಅಥವಾ ಎರಡು ತಿಂಗಳು, ಅಪರೂಪಕ್ಕೆ ಉರಪ್ಪು ನಡೆದ ಒಂದು ವರ್ಷದ ಬಳಿಕ ಮದುವೆಗಳು ನಡೆಯುತ್ತಿದ್ದವು. ಉರಪ್ಪು ನಡೆದ ಬಳಿಕ ಮುಂದೆ ನಡೆಯುವ ಎಲ್ಲಾ ಸಮಾರಂಭಗಳ ಸಂದರ್ಭದಲ್ಲಿ ಎರಡು ಕುಟುಂಬಗಳು

ಪರಸ್ಪರ ಆಹ್ವಾನ ನೀಡುತ್ತಿದ್ದವು. ಮದುವೆಗೆ ಮೊದಲು ಹೆಣ್ಣಿನ ಒಪ್ಪಿಗೆ ಪಡೆಯಬೇಕು ಎಂದು ಇಸ್ಲಾಂ ಸ್ಪಷ್ಟಪಡಿಸಿದೆ. ಸಾಮಾನ್ಯವಾಗಿ ಹೆಣ್ಣು ಇನ್ನೂ ಪ್ರಾಯಕ್ಕೆ ಬಂದಿರದ ಕಾರಣ ಅವಳ ಪಾಲಕರ ಒಪ್ಪಿಗೆಯನ್ನು ಪಡೆಯಲಾಗುತ್ತಿತ್ತು.[23]

ಮುಸ್ಲಿಮರು ಮದುವೆಯನ್ನು ಒಂದು ಪ್ರಮುಖ ಧಾರ್ಮಿಕ ಆಚರಣೆಯಾಗಿ ಮತ್ತು ಅದು ಬದಲಾಯಿಸಲು ಸಾಧ್ಯವಿಲ್ಲದ ಕರಾರು ಎಂದು ನಂಬಿದ್ದರು. ಈ ಕರಾರು ನೆರವೇರಿಸುವುದನ್ನು ಕಾಯನ ಅಥವಾ ಕಾಯಂತ್ ಎನ್ನುತ್ತಿದ್ದರು. ಕಾಯನ ಒಂದು ಸರಳ ಪ್ರಕ್ರಿಯೆಯಾಗಿತ್ತು. ಇಸ್ಲಾಮಿನ ಸಂಪ್ರದಾಯ ಪ್ರಕಾರ[24] ಮದುಮಗ ಮತ್ತು ಮದುಮಗಳ ತಂದೆ ಅಥವಾ ಆಕೆಯ ಪರವಾಗಿ ನಿಯೋಜಿಸಲಾದ ಅಧಿಕೃತ ವ್ಯಕ್ತಿ (ಆಕೆಯ ತಂದೆ ಮೃತ ಪಟ್ಟಿದ್ದರೆ), ಮೌಲ್ವಿ (ನಿಕಾಹ್ ಪಠಿಸಲು) ಮತ್ತು ಕೆಲವು ಮಂದಿ (ಕನಿಷ್ಠ ಇಬ್ಬರು ಪುರುಷರು ಅಥವಾ ನಾಲ್ವರು ಮಹಿಳೆಯರು) ಮದುವೆ ನೆರವೇರಿಸಬಹುದಾಗಿತ್ತು. ಬ್ಯಾರಿಗಳು ಇಸ್ಲಾಮಿನ ಆದೇಶಗಳನ್ನು ಪಾಲಿಸುತ್ತಿದ್ದರು ಮತ್ತು ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು. ಸಾಮಾನ್ಯವಾಗಿ ಮದುವೆಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿತ್ತು. ಜಮಾಅತ್‌ನ ಅನುಮತಿ ಪಡೆದುಕೊಳ್ಳುವುದು ಅಥವಾ ಮದುವೆಯ ದಿನ ಮತ್ತು ಸಮಯದ ಬಗ್ಗೆ ಜಮಾಅತ್‌ಗೆ ಮಾಹಿತಿ ನೀಡುವುದು ಮದುವೆಯ ಪ್ರಥಮ ಹೆಜ್ಜೆಯಾಗಿತ್ತು. ಮದುವೆಗೆ ಸಾಕಷ್ಟು ದಿನ ಪೂರ್ವದಲ್ಲಿ ಅಥವಾ ಒಂದು ಶುಕ್ರವಾರ ಹುಡುಗಿಯ ಅಥವಾ ಹುಡುಗನ ಸೋದರ ಮಾವ ಜಮಾಅತ್‌ನವರಿಗೆ ಬೆತ್ತಲೆ – ಅಡಕೆ ನೀಡುತ್ತಿದ್ದರು. ಪ್ರಾರ್ಥನೆ ಬಳಿಕ ಜಮಾಅತ್‌ನವರಿಗೆ ಕೆಲವು ಅಡಿಕೆ ಮತ್ತು ವೀಳ್ಯದ ಎಲೆಯನ್ನು ನಿಗದಿತ ಶುಲ್ಕದೊಂದಿಗೆ (ಒಂದು ರೂಪಾಯಿಂದ 11 ರೂಪಾಯಿವರೆಗೆ) ನೀಡಿ ಮದುವೆಯ ದಿನ, ಸಮಯ, ವಧು ವರರ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತಿದ್ದರು. ದುವಾ ಮಾಡಿದ ಬಳಿಕ ಬೆತ್ತಲೆ – ಅಡಕೆಯನ್ನು ಅಲ್ಲಿ ಇರುವವರಿಗೆ ಹಂಚಲಾಗುತ್ತಿತ್ತು.

ಮದುವೆಯ ದಿನಾಂಕ ಮತ್ತು ಸಮಯವನ್ನು ಮೊದಲೇ ಜಮಾಅತ್‌ನವರಿಗೆ ಹೇಳುವ ಮೂಲಕ ಅದೇ ದಿನ ಬೇರೆ ಮದುವೆ ನಡೆಯುವುದನ್ನು ತಡೆಯುವ ಉತ್ತಮ ವ್ಯವಸ್ಥೆ ಇದಾಗಿತ್ತು. ಮೌಲ್ವಿಯ ಕಾರ್ಯಕ್ರಮವನ್ನು ಮೊದಲೇ ನಿಗದಿಪಡಿಸಲು ಜಮಾಅತ್‌ಗೆ ಈ ಮೂಲಕ ಸಾಧ್ಯವಾಗುತ್ತಿತ್ತು. ಮದುವೆ ಸಾಮಾನ್ಯವಾಗಿ ರಾತ್ರಿ ನಡೆಯುತ್ತಿತ್ತು. ಬೆಳಕು ಮತ್ತು ಅಲಂಕಾರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಮ್ಯಾಕ್ಸ್ ಬಳಸಲಾಗುತ್ತಿತ್ತು. ಪೆಟ್ರೋಮ್ಯಾಕ್ಸ್, ಲ್ಯಾಂಟನ್, ಚಿಮಿಣಿ ಮತ್ತು ಮೆಟಲ್ ಲ್ಯಾಂಪ್ (ಬೆಳಕು)ಗಳನ್ನು ಬೆಳಕಿಗಾಗಿ ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿತ್ತು. ಮದುವೆ ಸಮಾರಂಭ ಒಂದು ದೊಡ್ಡ ಪ್ರಕ್ರಿಯೆಯಾಗಿತ್ತು. ಎಲ್ಲಾ ಸಂಬಂಧಿಕರನ್ನು ಮತ್ತು ಜಮಾಅತ್‌ನವರನ್ನು ಮದುವೆ ಮನೆಗೆ ಆಮಂತ್ರಿಸಲಾಗುತ್ತಿತ್ತು. ಸಾಮಾನ್ಯವಾಗಿ ನಿಕಾಹ್ ಹುಡುಗಿಯ ಮನೆಯಲ್ಲಿ ನಡೆಯುತ್ತಿತ್ತು. ಆದರೆ ಮಂಗಳೂರು ಪ್ರದೇಶದಲ್ಲಿ ನಿಕಾಹ್‌ಗೆ ಮದುಮಗನ ಮನೆಯನ್ನು ಆಯ್ಕೆ ಮಾಡಲಾಗುತ್ತಿತ್ತು. 20ನೇ ಶತಮಾನದಲ್ಲಿ ಮದುಮಗನ ಮನೆಯಲ್ಲಿ ನಿಕಾಹ್ ನಡೆಯುವುದು ಮತ್ತು ಅದೇ ದಿನ ರಾತ್ರಿ ಮದುಮಗ ಮದುಮಗಳ ಮನೆಗೆ ತೆರಳುವ ಸಂಪ್ರದಾಯ ಸಾಮಾನ್ಯವಾಯಿತು. ಮದುಮಗನನ್ನು ಮೆರವಣಿಗೆಯಲ್ಲಿ ಸ್ನಾನಕ್ಕಾಗಿ ಗ್ರಾಮದ ಕೆರೆಗೆ (ಮಸೀದಿ) ಕರೆದುಕೊಂಡು

ಹೋಗಿ ಬಳಿಕ ಪೆಂಡಾಲ್‌ನಲ್ಲಿ ಕುಳ್ಳಿರಿಸಿ, ಹಾಡು ಸಂಗೀತದೊಂದಿಗೆ ಸಾಂಪ್ರದಾಯಿಕ ಉಡುಗೆ ನೀಡಲಾಗುತ್ತಿತ್ತು. ಈ ರೀತಿಯ ಪಂದಲ್ ಡ್ರೆಸ್ಸಿಂಗ್ ಕೂರ್ಗ್‌ನ ಕೊಡವರಲ್ಲಿ ಸಾಮಾನ್ಯವಾಗಿತ್ತು. ನಿಕಾಹ್ ಬಳಿಕ ಮದುಮಗಳ ಮನೆಗೆ ಮದುಮಗ ತನ್ನ ಜತೆಗಾರ ರೊಂದಿಗೆ ಸಾಂಪ್ರದಾಯಿಕ ಮೆರವಣಿಗೆಯಲ್ಲಿ ತೆರಳುತ್ತಿದ್ದ. ಕೆಲವೊಮ್ಮೆ ಎರಡು ಪಾರ್ಟಿ ಯವರಿಗೆ ಅನುಕೂಲವಾಗುವಂತೆ ನಿಕಾಹ್ ಮಸೀದಿಯಲ್ಲಿ ನಿರ್ವಹಿಸಲಾಗುತ್ತಿತ್ತು. ಸಾಮಾನ್ಯ ವಾಗಿ ಮದುಮಗ ಪುದಿಯಾಪುಲೆ ಮದುಮಗಳ ಮನೆಗೆ ಮಧ್ಯರಾತ್ರಿ ಆಗಮಿಸುತ್ತಿದ್ದ. ಪುದಿಯಾಪುಲೆ ಮೆರವಣಿಗೆಯಲ್ಲಿ ಬಹಳಷ್ಟು ಜನರು ಭಾಗವಹಿಸುತ್ತಿದ್ದರು. ಇವರಲ್ಲಿ ಕೈಗಳನ್ನು ತಟ್ಟಿ ಹಾಡುವ (ಕೈಕೊಟ್ಟು ಪಾಟ್ಟು) ಹಾಡುವವರು, ಬ್ಯಾಂಡ್, ಡ್ರಮ್, ಕುಟ್ಟು ಮುರ್ಸೆ ಮತ್ತು ಚೀನಿ ಮ್ಯೂಸಿಕ್‌ಗಳನ್ನು ಮೆರವಣಿಗೆಯಲ್ಲಿ ಪ್ರಮುಖವಾಗಿ ಬಳಸಲಾಗುತ್ತಿತ್ತು. ದಪ್ಪು, ಕಾರ್ಯಕ್ರಮದ ಒಂದು ಅಂಗವಾಗಿತ್ತು. ಮದುವೆ ಪಾರ್ಟಿ ಶ್ರೀಮಂತವಾಗಿದ್ದರೆ ಪುದಿಯಾಪುಲೆ ಕುದುರೆ ಮೇಲೆ ಬರುತ್ತಿದ್ದ (ಮಂಗಳೂರಿಗೆ ಟಾಂಗಾ ಬಂದ ಮೇಲೆ ಕುದುರೆ ಸಿಗುವುದು ಸಾಮಾನ್ಯವಾಗಿತ್ತು.) ಪುದಿಯಾಪುಲೆ ಮದುಮಗಳ ಮನೆ ತಲುಪಿದ ಕೂಡಲೇ ಮ್ಯೂಸಿಕ್ ರಂಗೇರುತ್ತಿತ್ತು ಹಾಗೂ ಪಟಾಕಿಗಳನ್ನು ಸಿಡಿಸಲಾಗುತ್ತಿತ್ತು. ಕೆಲವೊಮ್ಮೆ ಪುದಿಯಾಪುಲೆ ಆನೆ ಮೇಲೆ ಬರುತ್ತಿದ್ದ ಎಂದು ಹೇಳಲಾಗುತ್ತದೆ.[25] ಮದುವೆ ಸಮಾರಂಭ ದಲ್ಲಿ ಮದುಮಗನ ಮೆರವಣಿಗೆ ಅತ್ಯಂತ ವೈಭವದ ಕಾರ್ಯಕ್ರಮವಾಗಿತ್ತು. ಮದುಮಗನನ್ನು ರಸ್ತೆ ಬಳಿ ಸ್ವೀಕರಿಸಿ, ಶರಬತ್ ಅಥವಾ ಹಾಲು ನೀಡಿ ಹೂಹಾರ ಹಾಕಿ ಸ್ವಾಗತಿಸುವುದು 19ನೇ ಶತಮಾನದಲ್ಲಿ ಬ್ಯಾರಿಗಳಲ್ಲಿ ಸಾಮಾನ್ಯವಾಗಿತ್ತು. ಮದುವೆ ಸಮಾರಂಭಗಳ ವೈಭವತೆ ಪಾರ್ಟಿಗಳ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸಿತ್ತು.

ಮದುಮಗಳ ಮನೆ ಸಹ ಮದುವೆಯ ಮಹಾ ಸಂಭ್ರಮಕ್ಕೆ ಅಣಿಯಾಗುತ್ತಿತ್ತು. ಮದುವೆ ಹಿಂದಿನ ರಾತ್ರಿ ಮೈಲಾಂಜಿ (ಹೆನ್ನಾ ಅಥವಾ ಮೆಹೆಂದಿ) ಸಮಾರಂಭ ಇರುತ್ತಿತ್ತು. ಮೌಲ್ವಿ ಅವರಿಂದ ಮೌಲೀದ್ ಪಾರಾಯಣದ ಬಳಿಕ ಮೈಲಾಂಜಿ ಕಾರ್ಯಕ್ರಮ ನಡೆಯುತ್ತಿತ್ತು. ವಿಶೇಷ ಆಹಾರ ಬಡಿಸಲಾಗುತ್ತಿತ್ತು. ಮಹಿಳೆಯರು ಮದುಮಗಳಿಗೆ ಸ್ನಾನ ಮಾಡಿಸಿ, ಮೈಲಾಂಜಿ ಪಾಟ್ಟು[26] ಹಾಡಿ, ಆಕೆಯ ಕೈ ಮೇಲೆ ಮೈಲಾಂಜಿ ಇಡುತ್ತಿದ್ದರು. ಅದೊಂದು ಉತ್ಸವ ದಿನವಾಗಿತ್ತು.

ಮದುವೆಯ ದಿನ ಮದುಮಗನ ಕೋಣೆ (ಅರ)ಯನ್ನು ವಿಶೇಷವಾಗಿ ಸಜ್ಜುಗೊಳಿಸು ವುದು ಮದುವೆಯ ಪ್ರಮುಖ ಅಂಗವಾಗಿತ್ತು. ಮದುಮಗ ಹಾಗೂ ಮದುಮಗಳು ಕೂಡುವ ಕೋಣೆಯನ್ನು 'ಅರ' ಎನ್ನಲಾಗುತ್ತದೆ. ಅದನ್ನು ಸುಗಂಧ ಹಾಗೂ ಹೂವುಗಳಿಂದ ಅಲಂಕರಿಸ ಲಾಗುತ್ತಿತ್ತು. ಹಾಸಿಗೆ, ಬಟ್ಟೆಬರೆ, ಕೋಣೆಯ ಗೋಡೆ ಎಲ್ಲವನ್ನೂ ಆಕರ್ಷಣೀಯವಾಗುವಂತೆ ಸಿದ್ಧಪಡಿಸಲಾಗುತ್ತಿತ್ತು. ನೆಲ ಬೆಳಕು ಅಥವಾ ಒಂದು ಬೆಲ್‌ಮೆಟಲ್ ಲ್ಯಾಂಪ್ ಕೋಣೆಯಲ್ಲಿ ಇರಿಸುತ್ತಿದ್ದರು. ಮದುಮಗನ ಆಗಮನ ಆದಾಗ ಒಂದು ಲ್ಯಾಂಪ್ ಇಡುವುದು ಬ್ಯಾರಿಗಳ ಸಂಪ್ರದಾಯವಾಗಿತ್ತು. ಇದು ಕೆಲವು ದಿನ ಅಥವಾ ಎಲ್ಲಾ ಕಾರ್ಯಕ್ರಮಗಳು ಮುಗಿಯುವ ತನಕ ಇರುತ್ತಿತ್ತು. ನಿಕಾಹ್[27] ಆದ ತಕ್ಷಣ, ಮದುಮಗನ ಕಡೆಯವರು ಅರ ನೋಡುವ ಬೇಡಿಕೆ ಮುಂದಿರಿಸುತ್ತಿದ್ದರು. ಕೆಲವು ಹಿರಿಯರು ಅರವನ್ನು ಪರಿಶೀಲಿಸಿ ತಮ್ಮ ತೃಪ್ತಿ ವ್ಯಕ್ತಪಡಿಸು

ತ್ತಿದ್ದರು. ನೆರೆದವರ ಅನುಮತಿ ಪಡೆದು ಮದುಮಗ ಅರವನ್ನು ಪ್ರವೇಶಿಸುತ್ತಿದ್ದ. ಬ್ಯಾಂಡ್, ಮ್ಯೂಸಿಕ್ ಸದ್ದು ಆರಂಭವಾಗುತ್ತಿತ್ತು. ಹಾಡು, ದಫ್ ಸದ್ದು ಜತೆಗಾರರ ಕೈಕೊಟ್ಟು ಪಾಟ್ಟು ಮಾತ್ರವಲ್ಲ ಹೊರಗಡೆ ಪಟಾಕಿಗಳು ಆಕಾಶವನ್ನು ಮತ್ತೆ ಬೆಳಗುತ್ತಿದ್ದವು. ಗರ್ನಾಲ್ ಸಾಮಾನ್ಯವಾಗಿ ಬಳಸುತ್ತಿದ್ದ ಪಟಾಕಿಯಾಗಿತ್ತು. ಪುದಿಯಾಪುಲೆ ಅರ ಪ್ರವೇಶದ ಸದ್ದು ಎಲ್ಲರಿಗೂ ಕಾಣುತ್ತಿತ್ತು ಹಾಗೂ ಕೇಳುತ್ತಿತ್ತು.

ಪುದಿಯಾಪ್ಲೆ ಅರ ಪ್ರವೇಶಿಸುವಾಗ ಮದುಮಗಳ ಸಹೋದರ, ಒಬ್ಬ ಹುಡುಗ ಹಾಲು ತುಂಬಿದ ಗಿಂಡಿ (ಒಂದು ರೀತಿಯ ಪಾತ್ರೆ) ಹಿಡಿದು ಸ್ವಾಗತಿಸಿ ಸ್ವಲ್ಪ ಹಾಲನ್ನು ಮದುಮಗನ ಬಲಗಾಲಿಗೆ ಸುರಿಯುತ್ತಿದ್ದ ಮದುಮಗ ಉಡುಗೊರೆಯಾಗಿ ಚಿನ್ನದ ಆಭರಣವನ್ನು ಗಿಂಡಿಯ ಒಳಗೆ ಹಾಕುತ್ತಿದ್ದ. ಇದು ಮದುಮಗಳಿಗೆ ನೀಡುವ ಪ್ರಥಮ ಉಡುಗೊರೆ. ಮದುಮಗ ಅರ ಪ್ರವೇಶಿಸಿದ ಬಳಿಕ ಆತನನ್ನು ಹಾಸಿಗೆ ಮೇಲೆ ಕುಳ್ಳಿರಿಸಲಾಗುತ್ತಿತ್ತು. ಸುಮಾರು ಅರ್ಧ ತಾಸು ಕಾಲ ಹಾಡುವ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆ ಬಳಿಕ ಡಿನ್ನರ್ ಸರಬರಾಜು ಮಾಡಲಾಗುತ್ತಿತ್ತು. ಅಲ್ಲಿಗೆ ಮದುವೆಯ ಪ್ರಮುಖ ಭಾಗ ಮುಗಿಯುವ ಹಂತಕ್ಕೆ ಬರುತ್ತಿತ್ತು. ಕಾಸರಗೋಡು ಪ್ರದೇಶದಲ್ಲಿ ಬಂಧಿ ಕಾರ್ಯಕ್ರಮ ಚಾಲ್ತಿಯಲ್ಲಿ ಇರಲಿಲ್ಲ. ಅಲ್ಲಿ ಅರಕೂಡಲ್ ಕಾರ್ಯಕ್ರಮ ನಡೆಯುತ್ತಿದ್ದವು. ಪುದಿಯಾಪುಲೆ ಮನೆಯಲ್ಲೇ ಇರುತ್ತಿದ್ದ ಮದುವಣಗಿತ್ತಿಯ ಉಡುಗೆಯಲ್ಲಿರುವ ಮದುಮಗಳು ಒಂದು ಕಪ್ ಹಾಲಿನೊಂದಿಗೆ ಅರ ಪ್ರವೇಶಿಸುತ್ತಿದ್ದಳು. ಹಾಡಿನೊಂದಿಗೆ (ಕೈಕೊಟ್ಟು ಪಾಟ್) ಮಹಿಳೆಯರು ಆಕೆಯ ಜತೆಗೆ ಇರುತ್ತಿದ್ದರು. ಮದುಮಗಳು ಕೋಣೆ ಪ್ರವೇಶಿಸಿದ ತಕ್ಷಣ ಮದುಮಗ ಬಾಗಿಲು ಮುಚ್ಚಿ ಮೆಹ್ರ್ ನೀಡುವ ಕಾರ್ಯಕ್ರಮ ನಡೆಯುತ್ತಿತ್ತು. 19ನೇ ಶತಮಾನದಲ್ಲಿ ಮದುಮಗ 7 ದಿನಗಳ ಕಾಲ ಮದುಮಗಳ ಮನೆಯಲ್ಲೇ ಇರುತ್ತಿದ್ದ. ಆದರೆ ಆ ಬಳಿಕ ಇದು ನಿಧಾನವಾಗಿ ಕೆಲವು ದಿನಗಳ ಕಾಲ ಪ್ರತಿದಿನ ಆಗಮಿಸುವುದಕ್ಕೆ ಬದಲಾವಣೆ ಗೊಂಡಿತು.[28] ಆದರೆ ಮಂಗಳೂರು ಪ್ರದೇಶದಲ್ಲಿ ಅರ ಆಚರಣೆ ಬದಲು ಬಂಧಿ ಆಚರಣೆ ಚಾಲ್ತಿಯಲ್ಲಿತ್ತು. ಬಂಧಿ ಎಂದರೆ ಒಂದು ಚಿನ್ನದ ನೆಕ್ಲೆಸ್. ನಿಕಾಹ್ ಆದ ತಕ್ಷಣ ಅಥವಾ ಮದುಮಗ ಬಂದ ತಕ್ಷಣ ಕೆಲವು ಹಿರಿಯರು ಮದುಮಗನನ್ನು ಬರಮಾಡಿಕೊಂಡು, ಮದುಮಗಳು ಕುಳಿತಿರುವ ಕೋಣೆಗೆ ಕರೆದೊಯ್ಯುತ್ತಿದ್ದರು. ಬಳಿಕ ಮದುಮಗ ಬಂಧಿ ನೀಡುವ ವೇಳೆ ಮಹಿಳೆಯರು ಅವರಿಬ್ಬರ ಮೇಲೆ ಹೂವನ್ನು ಎಸೆಯುತ್ತಿದ್ದರು. ಮದುಮಗ ನಿಗೆ ಒಂದು ಲೋಟ ಹಾಲು ನೀಡಲಾಗುತ್ತಿತ್ತು. ಆ ಬಳಿಕ ಆತ ಅಲ್ಲಿಂದ ಹೊರ ಬರುತ್ತಿದ್ದ. ಇದನ್ನು ಬಂಧಿ ವ್ಯವಸ್ಥೆ ಎನ್ನಲಾಗುತ್ತದೆ. ಮರುದಿನ ಪುದಿಯಾಪುಲೆ ತನ್ನ ಗೆಳೆಯರೊಂದಿಗೆ ಬರುತ್ತಿದ್ದ. ಅವರಿಗೆ ತಾಲದ ವ್ಯವಸ್ಥೆ ಮಾಡಲಾಗುತ್ತಿತ್ತು. ಡಿನ್ನರ್ ಮುಗಿದ ಬಳಿಕ ಗೆಳೆಯರು ಹಿಂದಿರುಗುತ್ತಿದ್ದರು. ನಂತರ ಪುದಿಯಾಪುಲೆಗೆ ಮದುಮಗಳನ್ನು ಒಪ್ಪಿಸಲಾಗುತ್ತಿತ್ತು. ಆ ಬಳಿಕ ಕೆಲವು ದಿನ ಆತ ನಿರಂತರವಾಗಿ ಮದುಮಗಳ ಮನೆಗೆ ಬರುತ್ತಿದ್ದ ಅಥವಾ ಅಲ್ಲೇ ಇರುತ್ತಿದ್ದ. ಮಂಗಳೂರು ಮತ್ತು ಕಾಸರಗೋಡು ಎರಡೂ ಪ್ರದೇಶಗಳಲ್ಲಿ ಮದುವೆ ಕಾರ್ಯಕ್ರಮ ಎಂಟು ದಿನಗಳ ಕಾಲ ನಡೆಯುತ್ತಿದ್ದವು. ಉಳ್ಳಾಲದಂತಹ ಕೆಲವು ಪ್ರದೇಶಗಳಲ್ಲಿ ಮದುಮಗ ಮದುಮಗಳ ಮನೆಗೆ ಭೇಟಿ ನೀಡಬೇಕಾಗಿತ್ತು. ಮದುಮಗಳು ತನ್ನ ಗಂಡನ ಮನೆಗೆ ಹೋಗಲು ಅವಕಾಶ

ನೀಡುತ್ತಿರಲಿಲ್ಲ. ಇನ್ನೂ ಕೆಲವು ಪ್ರದೇಶಗಳಲ್ಲಿ ಮದುವೆಯಾದ ಪ್ರಥಮ ವರ್ಷ ಮದುಮಗಳು ತನ್ನ ಪಾಲಕರ ಮನೆಯಲ್ಲೇ ಇರುತ್ತಿದ್ದಳು. ಇದು ಯಾಕೆಂದರೆ, ಹುಡುಗಿ ತನ್ನ ಗಂಡನ ಮನೆಯಲ್ಲಿ ಬದುಕುವಷ್ಟು ದೊಡ್ಡವಳಾಗಿರುತ್ತಿರಲಿಲ್ಲ. ಆವಳು ಪ್ರಾಯಕ್ಕೆ ಬಂದ ಬಳಿಕ ಸಾಮಾನ್ಯ ಜೀವನ ಆರಂಭವಾಗುತ್ತಿತ್ತು. ಅದುವರೆಗೆ ಗಂಡನಿಗೆ ಮದುಮಗಳು ಆಟಕ್ಕೆ ಜತೆಗಾರ್ತಿಯಂತಿರುತ್ತಿದ್ದಳು. ಬಾಲ್ಯ ವಿವಾಹ ಸಾಮಾನ್ಯವಾಗಿ ಇದ್ದ ಕಾರಣ ಈ ವ್ಯವಸ್ಥೆ ಕಾಲದ ಆಗತ್ಯವಾಗಿತ್ತು.

ಎರಡು ಕಡೆಯವರಿಗೆ ಅನುಕೂಲವಾಗುವಂತೆ ಕೆಲವೊಮ್ಮೆ ನಿಕಾಹ್ ಮಸೀದಿಯಲ್ಲಿ ನಡೆಯುತ್ತಿತ್ತು. ಮದುಮಗ 'ಪುದಿಯಾಪುಳೆ' ಮದುಮಗಳ ಮನೆಗೆ ಮಧ್ಯರಾತ್ರಿ ಹೊತ್ತಿಗೆ ಬರುತ್ತಿದ್ದ.

ಪುದಿಯಾಪುಲೆಯನ್ನು ಸಾಧಾರಣವಾಗಿ ಒಂದು ವರ್ಷ ಕಾಲ ಕೆಲವೊಮ್ಮೆ ಆತ ಮಗುವಿನ ತಂದೆ ಆಗುವವರೆಗೆ ಬಹಳ ಗೌರವದಿಂದ ಬರಮಾಡಿಕೊಂಡು ಸತ್ಕರಿಸಲಾಗುತ್ತಿತ್ತು. ಪ್ರತಿ ಹಬ್ಬದ ಸಂದರ್ಭದಲ್ಲಿ ಮದುಮಗನಿಗೆ ವಿವಿಧ ರೀತಿಯ ಉಡುಗೊರೆಗಳನ್ನು ಕಳುಹಿಸಲಾಗುತ್ತಿತ್ತು. ಇದರಲ್ಲಿ ಸಿಹಿ ತಿಂಡಿಗಳು, ಹೂವು, ಬೆತ್ತಲೆ – ಅಡಕೆ (ವೀಳ್ಯದೆಲೆ ಮತ್ತು ಅಡಿಕೆ) ಇನ್ನೂ ಹಲವು ವಸ್ತುಗಳು ಒಳಗೊಳ್ಳುತ್ತಿದ್ದವು.

ಬ್ಯಾರಿಗಳು ಹೊಸದಾಗಿ ಮದುವೆಯಾದ ಜೋಡಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಮದುಮಗಳು ಗರ್ಭಿಣಿಯಾದಾಗ ಇಡೀ ಕುಟುಂಬ ಸಂತಸಪಡುತ್ತಿತ್ತು. ಏಳನೇ ತಿಂಗಳಲ್ಲಿ ಅಪ್ಪತೆ ಮಂಙಲವನ್ನು ಆಚರಿಸಲಾಗುತ್ತಿತ್ತು. ಈ ಸಮಾರಂಭ ಮದುಮಗಳ ಅಮ್ಮನ ಮನೆಯಲ್ಲಿ ನಡೆಯುತ್ತಿತ್ತು. ಸ್ನೇಹಿತರು, ಸಂಬಂಧಿಕರನ್ನು ಆಹ್ವಾನಿಸಲಾಗುತ್ತಿತ್ತು. ಮೌಲ್ವಿಯವರು ಮೌಲೂದ್ ಪಾರಾಯಣ ನಡೆಸುತ್ತಿದ್ದರು. ಆ ದಿನ ರಾತ್ರಿ ಹುಡುಗಿಗೆ ಮದುಮಗಳ ಉಡುಗೆಯನ್ನು ತೊಡಿಸಲಾಗುತ್ತಿತ್ತು. ಮಹಿಳೆಯರು ಆಕೆಯ ಸುತ್ತ ಹಾಡುತ್ತಿದ್ದರು. ಸಂಬಂಧಿಕರು ಉಡುಗೊರೆಗಳನ್ನು ನೀಡುತ್ತಿದ್ದರು. ಈ ಸಂದರ್ಭದಲ್ಲಿ ಗಂಡ ಸಾಮಾನ್ಯವಾಗಿ ಚಿನ್ನದ ಆಭರಣಗಳು ಮತ್ತು ಹೊಸ ಬಟ್ಟೆಬರೆಗಳನ್ನು ಉಡುಗೊರೆಯಾಗಿ ನೀಡುತ್ತಿದ್ದ. ಬಳಿಕ ಮದುಮಗಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗಲಾಗುತ್ತಿತ್ತು. ಮೊದಲ ಪ್ರಸವ ಸಂದರ್ಭದಲ್ಲಿ ಈ ಸಮಾರಂಭ ಮಾಡಲಾಗುತ್ತಿತ್ತು.

ಗರ್ಭವತಿ ಮತ್ತು ಪ್ರಸವ ಸಂದರ್ಭದಲ್ಲಿ ಸ್ಥಳೀಯ ನಂಬಿಕೆಗಳನ್ನು ಸಹ ಆಚರಿಸಲಾಗುತ್ತಿತ್ತು. ಈ ಕುರಿತು ಎಪ್ಪತ್ತರ ಹರೆಯದ ಡಾ.ಶರೀಫ್ ಅಲ್ ಖಾದಿ ಎಂಬವರು ಒಂದು ಆಸಕ್ತಿದಾಯಕ ಪ್ರಸಂಗ ಉಲ್ಲೇಖಿಸಿದ್ದಾರೆ. ಆವರ ತಂದೆ ಮುಹಮ್ಮದ್ ಆವರನ್ನು ಆದ್ಯನ್ ಕುಟ್ಟಿ ಅಂದರೆ ಹರಿಜನರ ಮಗ ಎಂದು ಕರೆಯಲಾಗುತ್ತಿತ್ತು. ಹೆರಿಗೆ ನಂತರ ನಿರಂತರವಾಗಿ ಸಾವನ್ನಪ್ಪುತ್ತಿದ್ದ ಹಿನ್ನೆಲೆಯಲ್ಲಿ ಆವರ ತಾತನಿಗೆ ಗಂಡು ಮಕ್ಕಳು ಇರಲಿಲ್ಲ. ಕೊನೆಗೆ ಸ್ಥಳೀಯ ನಂಬಿಕೆಯಂತೆ ಗಂಡು ಮಗುವಿನ ಜನನ ಆದ ತಕ್ಷಣ ನವಜಾತ ಶಿಶುವನ್ನು ಪಾಲನೆಗಾಗಿ ಹರಿಜನ ಮಹಿಳೆಯ ಮಡಿಲಲ್ಲಿರಿಸಿ ಅದನ್ನು ಆಕೆಗೆ ಒಪ್ಪಿಸುವ ಹರಕೆಯೊಂದಿಗೆ ಹಾಕಲಾಗಿತ್ತಂತೆ. ಬಳಿಕ ಗಂಡು ಮಗು ಬದುಕಿ ಉಳಿಯಿತು. ಮಗುವನ್ನು ಆದ್ಯನ್‌ಕುಟ್ಟಿ ಎಂದು ಕರೆಯಲಾಯಿತು. ಈ ರೀತಿಯ ಸ್ಥಳೀಯ ನಂಬಿಕೆ ಆಧಾರದಲ್ಲಿ ಬದುಕಿ ಉಳಿದ

ಹಲವು ಅದ್ಯನ್‌ಕುಟ್ಟಿಗಳು ಇಲ್ಲಿದ್ದರು. ಈ ಪ್ರದೇಶದಲ್ಲಿ ಬೇರೆ ಜಾತಿಯ ಜನರಲ್ಲೂ ಇದನ್ನು ಕಾಣಬಹುದು.[29]

ಮೊದಲ ಪ್ರಸವ ಯಾವಾಗಲೂ ಆಕೆಯ ಪಾಲಕರ ಮನೆಯಲ್ಲಿ ಆಗುತ್ತಿತ್ತು. ಪ್ರಸವದ ಪೂರ್ವ ಎಲ್ಲಾ ಸಿದ್ಧತೆಗಳನ್ನು ಮುಂಚಿತವಾಗಿಯೇ ಮಾಡಲಾಗುತ್ತಿತ್ತು ಮತ್ತು ಆಕೆಯನ್ನು ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತಿತ್ತು. ಹೆರಿಗೆಯಾದ ತಕ್ಷಣ ಮಗುವಿಗೆ ಸ್ನಾನ ಮಾಡಿಸಿ ಯಾರಾದರೂ ಹಿರಿಯ ಪುರುಷರು ಅಥವಾ ಅವರು ಇಲ್ಲದಿದ್ದರೆ ಮಹಿಳೆಯ ಕೈಗೆ ನೀಡಿ ಮಗುವಿನ ಕಿವಿಯಲ್ಲಿ ಬಾಂಗ್ (ಆದಾನ್) ಹೇಳಲಾಗುತ್ತಿತ್ತು. ಮುಂದಿನ 40 ದಿನಗಳ ಕಾಲ ಬಾಣಂತಿಯ ಆರೈಕೆಗೆ ಪ್ರತ್ಯೇಕ ಆಯಾಳನ್ನು ನಿಯೋಜಿಸಲಾಗುತ್ತಿತ್ತು. ತಾಯಿ ಮತ್ತು ಮಗುವಿಗೆ ಪ್ರತಿದಿನ ಬಿಸಿ ನೀರ ಸ್ನಾನ ಸಾಮಾನ್ಯವಾಗಿ ಮಾಡಲಾಗುತ್ತಿತ್ತು. ತಾಯಿಯ ಮೈಗೆ 40 ದಿನಗಳ ಕಾಲ ಎಣ್ಣೆಯಿಂದ ಮಸಾಜ್ ಮಾಡಿಸಲಾಗುತ್ತಿತ್ತು. ಆಕೆಗೆ ಉತ್ತಮ ಪೌಷ್ಟಿಕ ಆಹಾರ ನೀಡಲಾಗುತ್ತಿತ್ತು ಮತ್ತು ಸಂಪೂರ್ಣ ವಿಶ್ರಾಂತಿಗೆ ಸಲಹೆ ನೀಡಲಾಗುತ್ತಿತ್ತು. ನೇಮಕ ಮಾಡಲಾದ ಆಯಾ ಯಾವಾಗಲೂ ಬಳಿಯೇ ಇದ್ದು ಮಗು ಮತ್ತು ತಾಯಿಯ ಆರೈಕೆ ಮಾಡಬೇಕಾಗಿತ್ತು. ಇಲ್ಲಿ ಮದುವೆ ಮತ್ತು ಹೆರಿಗೆ ಮಾತೃಪ್ರಧಾನತೆಯನ್ನು ತೋರಿಸುತ್ತದೆ. ಹನ್ನೊಂದನೇ (ಕೆಲವೊಮ್ಮೆ 27ನೇ) ದಿನ ತೊಟ್ಟಿಲು ಸಮಾರಂಭ ಆಯೋಜಿಸಲಾಗುತ್ತಿತ್ತು. ಮಗುವನ್ನು ತೊಟ್ಟಿಲಲ್ಲಿ ಮಲಗಿಸಲಾಗುತ್ತಿತ್ತು. ಇದು ಮಗುವಿನ ನಾಮಕರಣ ಕಾರ್ಯಕ್ರಮವೂ ಆಗಿತ್ತು. ಗೆಳೆಯರು ಮತ್ತು ಸಂಬಂಧಿಕರನ್ನು ಆಹ್ವಾನಿಸಿ ಔತಣ ನೀಡಲಾಗುತ್ತಿತ್ತು. ಬಡವರಿಗೆ ಸಿಹಿ ಹಾಗೂ ನಗನಾಣ್ಯಗಳನ್ನು ವಿತರಿಸಲಾಗುತ್ತಿತ್ತು. ಬ್ಯಾರಿಗಳ ಸಂಭ್ರಮ ಆಚರಣೆ ಸಂದರ್ಭದಲ್ಲಿ ನಾಣ್ಯಗಳನ್ನು ವಿತರಿಸುವುದನ್ನು ಇದೊಂದು ವೇಳೆ ಮಾತ್ರ ಕಾಣಬಹುದಾಗಿತ್ತು. ಇದೇ ದಿನ ಮಗುವಿನ ಸಣ್ಣ ಕೂದಲನ್ನು ಕತ್ತರಿಸಲಾಗುತ್ತಿತ್ತು. ಅದನ್ನು ಕೂದಲು ಕತ್ತರಿಸು ಸಮಾರಂಭ ಎನ್ನಲಾಗುತ್ತಿತ್ತು. ಆದರೆ ಮಂಗಳೂರು ಪ್ರದೇಶದಲ್ಲಿ ತೊಟ್ಟಿಲು ಸಮಾರಂಭಕ್ಕೆ ಹೆಚ್ಚಿನ ಮಹತ್ವ ಇರಲಿಲ್ಲ. ಆದರೆ ಕೂದಲು ಕತ್ತರಿಸುವ ಸಮಾರಂಭಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಆಡು ಅಥವಾ ಜಾನುವಾರನ್ನು ಬಲಿ ನೀಡಿ ಮಾಂಸವನ್ನು ಹಂಚಲಾಗುತ್ತಿತ್ತು. ಹನಫಿಗಳು ಇದನ್ನು 'ಅಕೀಕ' ಸಮಾರಂಭ ಎಂದು ಕರೆಯುತ್ತಿದ್ದರು. ಅಕೀಕ ಪ್ರವಾದಿ[30] ಅವರ ಸಂಪ್ರದಾಯ ಎಂದು ಮುಸ್ಲಿಮರು ವಿಶ್ವಾಸ ಇಡುತ್ತಿದ್ದರು. 40ನೇ ದಿನ ಅಂದರೆ ಮಗುವಿನ ತಾಯಿ ಆಕೆಯ ಕೊನೆಯ ಸ್ಥಾನ ಮುಗಿಸಿ, ವಿಶ್ರಾಂತಿಯಿಂದ ಎದ್ದೇಳುವ ದಿನ ದೊಡ್ಡ ಪ್ರಮಾಣದ 'ದಾವತ್' (ಡಿನ್ನರ್) ನೀಡಲಾಗು ತ್ತಿತ್ತು. ಇದನ್ನು 'ನಾಪೊ ಕುಲಿ' ಸಮಾರಂಭ ಎಂದು ಕರೆಯಲಾಗುತ್ತಿತ್ತು. ಇದರೊಂದಿಗೆ ಮದುವೆಯೊಂದಿಗೆ ಆರಂಭವಾದ ಸಮಾರಂಭಗಳು ಒಂದು ಅಂತ್ಯಕ್ಕೆ ಬರುತ್ತಿದ್ದವು. ಮದುಮಗಳು ಜವಾಬ್ದಾರಿಯುತ ತಾಯಿ ಮತ್ತು ಗೃಹಿಣಿಯಾಗಿ ಮಾರ್ಪಡುತ್ತಿದ್ದಳು.[31]

ಬ್ಯಾರಿಗಳು ಹೆಣ್ಣು ಮಕ್ಕಳಿಗೆ 'ಕಾದುಕುತ್ತು ಮಂಜಿಲ' ಎಂಬ ಸಣ್ಣ ಸಮಾರಂಭ ಆಯೋಜಿಸುತ್ತಿದ್ದರು. ಇದನ್ನು ಕಿವಿಚುಚ್ಚುವ ಸಂದರ್ಭದಲ್ಲಿ ನಡೆಸಲಾಗುತ್ತಿತ್ತು. ಬ್ಯಾರಿ ಮಹಿಳೆಯರು ಕಿವಿತುಂಬಾ ಆಭರಣಗಳನ್ನು ಧರಿಸುತ್ತಿದ್ದ ಕಾರಣ, ಕಿವಿಗೆ ಐದರಿಂದ ಏಳು ತೂತು ಮಾಡಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಸಿಹಿ (ಸಕ್ಕರೆ ಮಿಠಾಯಿ) ಹಂಚಲಾಗು

ತ್ತಿತ್ತು. ಇದು ಸಾಧಾರಣವಾಗಿ ಮೂರರಿಂದ ಐದು ವರ್ಷದ ಅವಧಿಯಲ್ಲಿ ಮಾಡಲಾಗುತ್ತಿತ್ತು.

ಸುನ್ನತ್ ಮಂಜ್‌ಲ

ಮುಂಜಿ ಮಾಡಿಸುವ ಸಂದರ್ಭವನ್ನು ಸುನ್ನತ್ ಮಂಜ್‌ಲ ಎಂದು ಆಚರಿಸ ಲಾಗುತ್ತದೆ. ಇದು ಹುಡುಗರ ಸಂಭ್ರಮ. ಎರಡು ಸಂದರ್ಭಗಳಲ್ಲಿ ಅಂದರೆ 1) ಮುಂಜಿ ಮಾಡಿಸುವ ಸಂದರ್ಭದಲ್ಲಿ ಮತ್ತು 2) ಮುಂಜಿ ಆದ ಬಳಿಕ ಹಾಸಿಗೆಯಿಂದ ಎದ್ದು ಗುಣಮುಖ ಆಗುವ ಸಂದರ್ಭದಲ್ಲಿ ಎಲ್ಲಾ ಗೆಳೆಯರು ಮತ್ತು ಜಮಾಅತ್‌ನವರನ್ನು ಆಹ್ವಾನಿಸಿ ಮೌಲೂದ್ ಪಠಣ ನಡೆಸಲಾಗುತ್ತದೆ. ಸುನ್ನತ್‌ನ ದಿನ ಹುಡುಗನ ತಲೆಯನ್ನು ಬೋಳಿಸಿ, ವಸ ಮುಂಜಿ ನಡೆಸುತ್ತಿದ್ದರು. ಮುಂದಿನ ಎಲ್ಲಾ ಏಳುದಿನಗಳ ಕಾಲ ರಾತ್ರಿ ಸಮಯದಲ್ಲಿ ಪ್ರವಾದಿ ಅವರ ಬದ್ರ್ ವಿಜಯೋತ್ಸವವನ್ನು ಬಣ್ಣಿಸುವ 'ಬದ್ರ್‌ಪಾಟ್ಟು' ಹಾಡಲಾಗುತ್ತಿತ್ತು.[32] ನೆರೆಹೊರೆಯವರು ಮತ್ತು ಸಂಬಂಧಿಕರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಪ್ರತಿದಿನ ಉಡುಗೊರೆಗಳನ್ನು ನೀಡಲಾಗುತ್ತಿತ್ತು. ಹುಡುಗ ಚೇತರಿಸಿ ಕೊಂಡ ಬಳಿಕ ದೊಡ್ಡ ಮಂಜ್‌ಲ ನಡೆಸಲಾಗುತ್ತಿತ್ತು. ಈ ದೊಡ್ಡ ಸಮಾರಂಭಕ್ಕೆ ಊರಿನ ಎಲ್ಲರನ್ನೂ ಆಹ್ವಾನಿಸಲಾಗುತ್ತಿತ್ತು. ಮಂಜ್‌ಲದ ರೀತಿಯಲ್ಲೇ ಮೆರವಣಿಗೆಯಲ್ಲಿ ಊರಿನ ಕೆರೆ (ಮಸೀದಿ)ಗೆ ತೆರಳಿ ಸ್ನಾನ, ಪಂದಾಲ್ ಉಡುಗೆ ಮಾಡಲಾಗುತ್ತಿತ್ತು. ಈ ಹುಡುಗ ರನ್ನು ಆ ಸಂದರ್ಭದ ಪುದಿಯಾಂಪುಲೆ ಎಂಬಂತೆ ಪರಿಗಣಿಸಲಾಗುತ್ತಿತ್ತು. ಇದರೊಂದಿಗೆ ಹುಡುಗ ನನ್ನು ಮಸೀದಿಗೆ ದೊಡ್ಡ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಗುತ್ತಿತ್ತು. ಈ ಸಂದರ್ಭದಲ್ಲಿ ಹೂವಿನ ಹಾರ ಹಾಕುವುದು, ಹಾಲು ಕುಡಿಸುವುದು ಇತ್ಯಾದಿಗಳು ನಡೆಯುತ್ತಿದ್ದವು. ಬ್ಯಾಂಡ್, ದಪ್ಪ್ ಕೂಟ್ಟಮುರಿಸೆ, ಚೀನಿ ಇತ್ಯಾದಿಗಳು ಇರುತ್ತಿದ್ದವು. ಪಾಟ್ಟುಕ್ಕಳಿ, ತಾಲೀಮ್ ಇತ್ಯಾದಿಗಳನ್ನು ಸಹ ಕೆಲವೊಮ್ಮೆ ಏರ್ಪಡಿಸಲಾಗುತ್ತಿತ್ತು. ಉಡುಗೊರೆ ಗಳನ್ನು ಸಂಗ್ರಹಿಸಲು ದೊಡ್ಡ ಪಾತ್ರೆಯನ್ನು ಇರಿಸುವ ಸಂಪ್ರದಾಯ ಇತ್ತು. ಈ ಎಲ್ಲಾ ಉಡುಗೊರೆಗಳನ್ನು ನಮೂದಿಸಿ, ಬಳಿಕ ಇಂತಹದ್ದೇ ಸಂದರ್ಭಗಳಲ್ಲಿ ಅದನ್ನು ನೀಡಿದವರಿಗೆ ಉಡುಗೊರೆಗಳಾಗಿ ಹಿಂದಿರುಗಿಸಲಾಗುತ್ತಿತ್ತು. ಇದು ಬ್ಯಾರಿಗಳ ಇನ್ನೊಂದು ಆಕರ್ಷಕ ಮದುವೆ ಸಮಾರಂಭ. ಈ ಮಂಜ್‌ಲಗಳು ಮಂಗಳೂರು ಪ್ರದೇಶಕ್ಕಿಂತ ಕಾಸರಗೋಡು ಪ್ರದೇಶದಲ್ಲಿ ಹೆಚ್ಚು ಸಾಮಾನ್ಯವಾಗಿತ್ತು. ಮಂಜ್‌ಲ ಮತ್ತು ಸುನ್ನತ್ ಮಂಜ್‌ಲಗಳು ಪ್ರಮುಖ ಸಮಾರಂಭಗಳಾಗಿದ್ದವು. ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ನಡೆಸಿದರೆ ಅದನ್ನು ಪಡಮಂಜ್‌ಲ ಎನ್ನಲಾಗುತ್ತಿತ್ತು.

ಬುಲೂಖ್ ಮಂಜ್‌ಲ ಬ್ಯಾರಿಗಳ ಇನ್ನೊಂದು ಸಂಭ್ರಮದ ಆಚರಣೆ. ಇದನ್ನು ಹುಡುಗಿ ಮೊದಲ ಸಲ ಋತುಮತಿಯಾದಾಗ ಆಚರಿಸಲಾಗುತ್ತಿತ್ತು. ಆದರೆ ಹುಡುಗಿ ಮದುವೆಗೂ ಮೊದಲೇ ಋತುಮತಿಯಾದರೆ ಇದನ್ನು ದೊಡ್ಡದಾಗಿ ಆಚರಿಸುತ್ತಿರಲಿಲ್ಲ. ಆದರೆ 19ನೇ ಶತಮಾನದಲ್ಲಿ ಬ್ಯಾರಿ ಹುಡುಗಿಯರು ಪ್ರಾಯಕ್ಕೆ ಬರುವ ಮೊದಲೇ ಮದುವೆ ಯಾಗುತ್ತಿದ್ದ ಹಿನ್ನೆಲೆಯಲ್ಲಿ ಬುಲೂಖ್ ಮಂಜ್‌ಲಗಳು ಸಾಮಾನ್ಯವಾಗಿದ್ದವು. ಪ್ರಥಮ ಬಾರಿಗೆ ಋತುಸ್ರಾವ ಆರಂಭವಾದಾಗ ಈ ಸುದ್ದಿಯನ್ನು ಒಬ್ಬ ದೂತನ ಮೂಲಕ ಗಂಡನ

ಮನೆಗೆ ತಲುಪಿಸಲಾಗುತ್ತಿತ್ತು. ಸಾಮಾನ್ಯವಾಗಿ ಏಳನೇ ದಿನದ ಶುದ್ಧಿಯ ದಿನ ದೊಡ್ಡ ಸಮಾರಂಭ ಆಯೋಜಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಕರನ್ನು ವಿಶೇಷವಾಗಿ ಗಂಡನ ಕುಟುಂಬದವರನ್ನು ಆಹ್ವಾನಿಸಲಾಗುತ್ತಿತ್ತು. ಇದು 'ತಾಲ' ರೀತಿಯ ಸಮಾರಂಭವಾಗಿರುತ್ತಿತ್ತು. ಗಂಡನಿಗೆ ಸಂತಸದ ಸಂದರ್ಭ ಇದಾಗಿತ್ತು. ಆ ರಾತ್ರಿ ನವದಂಪತಿಗೆ ಪ್ರಥಮ ರಾತ್ರಿಯಂತೆ ಇರುತ್ತಿತ್ತು. ಹುಡುಗಿಯನ್ನು ಮದುಮಗಳಂತೆ ಸಿಂಗರಿಸಲಾಗುತ್ತಿತ್ತು. ಪಾಟ್ಟುಕ್ಕಳಿ ನಡೆಯುತ್ತಿತ್ತು. ರಾತ್ರಿ ಆಕೆಯನ್ನು ಗಂಡನ ಮುರಿಗೆ ಹಾಲು ಮತ್ತು ಹಣ್ಣಿನೊಂದಿಗೆ ಕಳುಹಿಸಲಾಗುತ್ತಿತ್ತು. ನಿಜವಾಗಿ ಆ ರಾತ್ರಿ ದಂಪತಿಗೆ ಪ್ರಥಮ ರಾತ್ರಿಯಾಗಿರುತ್ತಿತ್ತು. ಆ ರಾತ್ರಿ ಆಕೆ ವಿಶೇಷ ಉಡುಗೊರೆ (ಆಭರಣ) ಪಡೆಯುತ್ತಿದ್ದಳು. ಈ ಸಂಪ್ರದಾಯ ಕಾಸರಗೋಡು ಪ್ರದೇಶದಲ್ಲಿ ಸಾಮಾನ್ಯವಾಗಿತ್ತು.[33] ಬಹುತೇಕ ಈ ಎಲ್ಲಾ ಸಮಾರಂಭಗಳು ಮದುಮಗಳ ಮನೆಯಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದು. ಮದುಮಗ ಈ ಸಮಾರಂಭಗಳಲ್ಲಿ ಭಾಗವಹಿಸಲು ಆಗಮಿಸುತ್ತಿದ್ದ. ಜಿಲ್ಲೆಯ ಬ್ಯಾರಿಗಳ ವೈವಾಹಿಕ ಜೀವನದಲ್ಲಿ ಮಾತೃ ಪ್ರಧಾನತೆ ಪ್ರಮುಖವಾಗಿರುವುದನ್ನು ಕಾಣಬಹುದು. ಆದರೆ 20ನೇ ಶತಮಾನದಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಮತ್ತು 'ಇಲ್ಲಂ' ಬಹುತೇಕ ಕಣ್ಮರೆಯಾಗಿ ಮರೆತು ಹೋದಂತಾಯಿತು.

ಮಾಪಿಳ್ಳೆಗಳಲ್ಲಿ ಸಾಮಾನ್ಯವಾಗಿ ಕಾಣುವ ಗುಂಪುಹಾಡಿಗೆ ಒಪ್ಪನ ಪಾಟ್ಟು ಎನ್ನಲಾಗುತ್ತದೆ. ಆದರೆ ಬ್ಯಾರಿಗಳಲ್ಲಿ ಇದು ಬೇರೆ ಸಂದರ್ಭದಲ್ಲಿ ಬಳಕೆಯಾಗುತ್ತದೆ. ಇಲ್ಲಿ ಪದಿನಾರಗ ಪದ್ಧತಿಯನ್ನು ಒಪ್ಪ ನ ಎನ್ನಲಾಗುತ್ತದೆ. ಮದುವೆಯ ಮರುದಿನ ಮದುಮಗಳನ್ನು ಮದುವಣಗಿತ್ತಿಯ ದಿರಿಸಿನಲ್ಲಿ ಕುಳ್ಳಿರಿಸಿ, ಎಲ್ಲಾ ಮಹಿಳೆಯರಿಗೆ ಆಕೆಯನ್ನು ನೋಡುವ ಅವಕಾಶ ಕಲ್ಪಿಸಲಾಗುತ್ತದೆ. ಇದೇ ವೇಳೆ ಮಹಿಳೆಯರ ಒಂದು ಗುಂಪು ಆಕೆಯ ಸುತ್ತ ಹಾಡು ಹಾಡುತ್ತಾ ಆಟ ಆಡುತ್ತಾರೆ. ಮೊದಲು ಮದುಮಗ ಮತ್ತು ಮದುಮಗಳು ಈ ರೀತಿ ಕುಳಿತುಕೊಳ್ಳುತ್ತಿದ್ದರು ಎಂದು ತೋರುತ್ತದೆ. ಬಳಿಕ ಕೇವಲ ಮದುಮಗಳು ಕುಳಿತುಕೊಳ್ಳುವ ಪದ್ಧತಿ ಬಂತು. ಈ ಕಾರ್ಯಕ್ರಮ ಗಂಡ ಮತ್ತು ಹೆಂಡತಿ ಇಬ್ಬರ ಮನೆಯಲ್ಲೂ ನಡೆಸಲಾಗುತ್ತಿತ್ತು. ಈ ಒಪ್ಪನಪಾಟ್ಟು ಮಾಪಿಳ್ಳೆ ಮೂಲದಿಂದ ಬಂದಿದೆ. ಒಪ್ಪನವನ್ನು ಇಲ್ಲಂ ಗುಂಪುಗಳಲ್ಲೂ ಕಾಣಬಹುದು. ಆದರೆ 20ನೇ ಶತಮಾನದಲ್ಲಿ ಉಲೇಮಾಗಳ ಆಕ್ಷೇಪಣೆಯಿಂದಾಗಿ ಒಪ್ಪನ ವ್ಯವಸ್ಥೆ ಕಣ್ಮರೆಯಾಯಿತು.[34]

ಬ್ಯಾರಿಗಳು ತಮ್ಮ ದೈನಂದಿನ ಜೀವನದಲ್ಲಿ ಸಂಪ್ರದಾಯಗಳನ್ನು ವ್ಯವಸ್ಥಿತವಾಗಿ ಪಾಲಿಸುತ್ತಿದ್ದರು. ಇಸ್ಲಾಮಿನ ಆದೇಶದಂತೆ ಅವರು ಸ್ವಚ್ಛತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರು. ಇಸ್ಲಾಮಿನಲ್ಲಿ ಹೇಳಿರುವ ಅಶುದ್ಧಿಗಳಿಗೆ ವಿಶೇಷ ಗಮನ ನೀಡುತ್ತಿದ್ದರು. ಋತುಸ್ರಾವ, ಸಂಭೋಗದ ಬಳಿಕ ದೇಹದಿಂದ ಸ್ರವಿಸುವ ವೀರ್ಯದಂತಹ ವಸ್ತುಗಳು ಪ್ರಮುಖ ಅಶುದ್ಧಿಯಾಗಿದ್ದು, ಇಂತಹ ಸಂದರ್ಭಗಳಲ್ಲಿ ಕ್ರಿಯಾವಿಧಿಗಳ ಸ್ನಾನ ಕಡ್ಡಾಯವಾಗಿತ್ತು. ಅಂತಹ ಸ್ಥಿತಿಯಲ್ಲಿ ಎಲ್ಲಾ ಧಾರ್ಮಿಕ ಆಚರಣೆಗಳು, ಪ್ರಾರ್ಥನೆ, ದುವಾ ಇತ್ಯಾದಿ ನಿಷಿದ್ಧವಾಗಿತ್ತು. ಮಲ ಮತ್ತು ಮೂತ್ರ ಸಹ ಅಶುದ್ಧಿಯಾಗಿದ್ದರೂ, ಸರಿಯಾದ ಸ್ವಚ್ಛತೆ ಬಳಿಕ ಶುದ್ಧ ಮಾಡಬಹುದಾಗಿತ್ತು. ಸರಿಯಾದ ತರಬೇತಿ ಇಲ್ಲದ ಕಾರಣ ಬ್ಯಾರಿಗಳು ಮನೆ ಮತ್ತು ಪರಿಸರವನ್ನು ನಿರ್ಲಕ್ಷಿಸುತ್ತಿದ್ದರು.

ವೀಳ್ಯದೆಲೆ ಬ್ಯಾರಿಗಳ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬೆತ್ತಲೆ ಮತ್ತು ಅಡಕೆ ಮೆಲ್ಲುವುದು ಅವರಿಗೆ ಅಭ್ಯಾಸವಾಗಿತ್ತು. ಪ್ರತಿ ಮನೆಯಲ್ಲೂ ಅತಿಥಿಗಳಿಗೆ ಬೆತ್ತಲೆ-ಅಡಕೆ ನೀಡುತ್ತಿದ್ದರು. ಶುಭ ಸಮಾರಂಭಗಳಲ್ಲಿ ಇದು ಕಡ್ಡಾಯವಾಗಿತ್ತು. ಮಸೀದಿಯಲ್ಲಿ ಬೆತ್ತಲೆ-ಅಡಕೆ ನೀಡುವುದು ಮದುವೆ ಸಮಾರಂಭದ ಪ್ರಮುಖ ಭಾಗವಾಗಿ ಪರಿಗಣಿಸಲಾಗುತ್ತಿತ್ತು. ಗಂಡ ತನ್ನ ಹೆಂಡತಿ ಮತ್ತು ಆಕೆಯ ಮನೆಯವರಿಗೆ ಬೆತ್ತಲೆ-ಅಡಕೆ ನೀಡುತ್ತಿದ್ದ. ಬ್ಯಾರಿಗಳಲ್ಲಿ ಬೆತ್ತಲೆ-ಅಡಕೆ ಬಹಳ ಪ್ರಾಮುಖ್ಯತೆಯನ್ನು ಹೊಂದಿತ್ತು. ಕೊಡಗಿನ ಕೊಡವರು ಸಹ ಇದೇ ರೀತಿ ಮೆಲ್ಲುವ ಅಭ್ಯಾಸ ಹೊಂದಿದ್ದರು. ಬ್ಯಾರಿಗಳಿಗೆ ತಂಬಾಕು ಸೇವಿಸುವ ಹವ್ಯಾಸ ಇತ್ತು. ತಂಬಾಕಿನ ಚುರುಟು ಬಳಕೆ ಸಾಮಾನ್ಯವಾಗಿತ್ತು. ತಂಬಾಕು ತುಂಬಿಸಿ ಬಳಸುವ ಪೈಪ್ 'ಗುಡು ಗುಡು' ತಂಬಾಕು ಸೇವನೆಯ ಇನ್ನೊಂದು ಉಪಕರಣ. 1930ರ ಬಳಿಕ ಬೀಡಿ ಸೇವನೆ ಜನಪ್ರಿಯವಾಯಿತು. ಆದರೆ ಚುರುಟು ಮತ್ತು ಪೈಪ್‌ನ ಸ್ಥಳದಲ್ಲಿ ಬೀಡಿ ಮತ್ತು ಸಿಗರೇಟು ಬಂದವು. 20ನೇ ಶತಮಾನದಲ್ಲಿ ಬ್ಯಾರಿಗಳ ಬದುಕಿನಲ್ಲಿ ವ್ಯಾಪಕ ಸುಧಾರಣೆಗಳು ಉಂಟಾದವು.

5. ಬ್ಯಾರಿಗಳು ಮತ್ತು ಕೊಡವರು

ಬ್ಯಾರಿಗಳು ಮತ್ತು ಕೊಡವರ ಸಂಸ್ಕೃತಿಗಳ ನಡುವೆ ಆಶ್ಚರ್ಯಕರ ಸಾಮ್ಯತೆ ಇರುವುದನ್ನು ಕಾಣಬಹುದು. ಕೊಡವ ಭಾಷೆ ಹಲವು ರೀತಿಯಲ್ಲಿ ಬ್ಯಾರಿ ಭಾಷೆಯನ್ನು ಹೋಲುತ್ತದೆ. ಉಚ್ಚಾರ ಮಾತ್ರವಲ್ಲ ಹಲವು ಶಬ್ದಗಳು ಎರಡು ಭಾಷೆಗಳಲ್ಲಿ ಸಾಮಾನ್ಯ ವಾಗಿವೆ. ಉದಾಹರಣೆಗೆ: ಕೆಟ್, ಪೆಂಜಾಯಿ ಮತ್ತಿತರ. ಹಲವು ಸಾಮ್ಯತೆಗಳನ್ನು ಇಲ್ಲಿ ಕಾಣಬಹುದು.

ಪಟ್ಟಿ-08

	ಸಂಸ್ಕೃತಿ	ಬ್ಯಾರಿ	ಕೊಡವರು
1	ಮದುವೆ	ಮಂಙ್ಲ	ಮಂಗಿಲ
2	ನಿಶ್ಚಿತಾರ್ಥ	ಉರಪ್ಪು	ಮೌರ್ತ
3	ಋತುಮತಿ ಕಾರ್ಯಕ್ರಮ	ಬುಲೂಕ್ ಮಂಙ್ಲ	ಪೊಲಿಕೊಂಡ್ ಮಂಙ್ಲ
4	ಚೊಚ್ಚಲ ಗರ್ಭಿಣಿ	ಆಪ್ಪತ ಮಂಙ್ಲ	ಕುಲಿಯಾಮೆ ಮಂಙ್ಲ
5	ಸಾಂಪ್ರದಾಯಿಕ ಸ್ನಾನ	ಹೌದು	ಹೌದು
6	ಪಂದಲ್ ಡ್ರೆಸ್ಸಿಂಗ್	ಹೌದು	ಹೌದು
7	ಮದುಮಗನಿಗೆ ಕಿಂಡಿಯಲ್ಲಿ ಹಾಲು ಹಾಕುವುದು	ಹೌದು	ಹೌದು
8	Belmetal lamp	ಹೌದು	ಹೌದು
9	ವೀಳ್ಯದೆಲೆ ಜಗಿಯುವ ಅಭ್ಯಾಸ	ಹೌದು	ಹೌದು

ಪ್ರೊ.ಎಂ.ಎನ್.ಶ್ರೀನಿವಾಸ್ ಅವರು ತಮ್ಮ ಪುಸ್ತಕ Religion, Society among the Coorgis of South Indiaದಲ್ಲಿ ಕೊಡವರ ಆಚರಣೆಗಳನ್ನು ಉಲ್ಲೇಖಿಸುತ್ತಾರೆ.[35]

ಮಂಗಿಲ, ಮೌರ್ತ, ಪೊಲಿಕೊಂಡ ಮಂಗಿಲ, ಪೊಲಿಯಮೆ ಮಂಗಿಲ, ಪೈಂತಲ್ ಮಂಗಿಲ (ಮಗು ಜನನದ 11ನೇ ದಿನದ ಬಳಿಕ) ಇತ್ಯಾದಿಗಳು ಬ್ಯಾರಿ ಆಚರಣೆಗಳನ್ನು ಹೋಲುತ್ತವೆ. ಜ್ಯೋತಿಷ್ಯರ ಬಳಿ ಹೋಗುವುದು ಕೊಡವರ ಅಭ್ಯಾಸವಾಗಿದೆ. ಇದೇ ರೀತಿ ಬ್ಯಾರಿಗಳು ಧಾರ್ಮಿಕ ಕಾರ್ಯಗಳಿಗೆ ದಿನ ಮತ್ತು ಸಮಯ ನಿಗದಿಪಡಿಸಲು ಜ್ಯೋತಿಷಿಗಳ ಸಲಹೆ ಕೇಳುತ್ತಿದ್ದರು. ಬ್ಯಾಂಡ್ ಮತ್ತು ಮ್ಯೂಸಿಕ್ ಬಳಕೆ ಇಬ್ಬರಲ್ಲೂ ಕಾಣಬಹುದು. ಮದುವೆಗೆ ಮೊದಲು ಹುಡುಗಿಯ ಸ್ನಾನ ಮಾಡಿಸುವುದು ಬ್ಯಾರಿ ಹಾಗೂ ಕೊಡವರಲ್ಲಿ ಸಾಮಾನ್ಯವಾಗಿದೆ. ಮದುಮಗಳ ಮೇಲೆ ನೀರು ಹಾಕಲು ವಿಧವೆಯರಿಗೆ ಅವಕಾಶ ಇರಲಿಲ್ಲ. ಮೆಟಲ್ ಲ್ಯಾಂಪ್ ಬಳಕೆ ಇತ್ತು. ಪುರುಷರು ಮತ್ತು ಮಹಿಳೆಯರು ಧರಿಸುವ ಉಡುಪನ್ನು ಕುಪ್ಪಾಯ ಎನ್ನಲಾಗುತ್ತಿತ್ತು ಮತ್ತು ಬಹುತೇಕ ಆಭರಣಗಳು ಸಾಮಾನ್ಯವಾಗಿದ್ದವು. ಪರಸ್ಪರ ಸಂಪರ್ಕದಿಂದ ಈ ಸಾಮ್ಯತೆ ಬಂದಿರುವ ಸಾಧ್ಯತೆ ಇದೆ.

6. ಬ್ಯಾರಿಗಳ ಉಡುಪು ಮತ್ತು ಆಭರಣಗಳು

ಬ್ಯಾರಿಗಳು ಬಹುತೇಕ ಸರಳ ಉಡುಪು ಧರಿಸುತ್ತಿದ್ದರು. ಒಂದು 'ಮುಂಡು' ಅಥವಾ ಸಾದಾ ಉಡುಪನ್ನು ನಡುಪಟ್ಟಿಯೊಂದಿಗೆ ಧರಿಸುತ್ತಿದ್ದರು. ಮಕ್ಕಳು ಮಾತ್ರವಲ್ಲದೆ ವಯಸ್ಕರು ಸಹ ಲುಂಗಿ ಅಂದರೆ ಬಣ್ಣದ ಮುಂಡು ಧರಿಸುವುದು ಸಾಮಾನ್ಯವಾಗಿತ್ತು. ಶರ್ಟ್ ಅನ್ನು ಕುಪ್ಪಾಯ ಎನ್ನಲಾಗುತ್ತಿತ್ತು. ಮಹಿಳೆಯರು ಸಹ ಎದುರು ಬದಿಯಲ್ಲಿ ಕುಸುರಿ ಕೆಲಸ ಹೊಂದಿದ್ದ ಕುಪ್ಪಾಯ ಧರಿಸುತ್ತಿದ್ದರು. ಬ್ಯಾರಿಗಳು ತಮ್ಮ ತಲೆಯನ್ನು ಬೋಳಿಸಿ ರುಮಾಲು ಅಥವಾ ಟೊಪ್ಪಿ ಧರಿಸುತ್ತಿದ್ದರು. ದೊಡ್ಡದಾದ ಟೊಪ್ಪಿ ಧರಿಸುವುದು ರೂಢಿಯಾಗಿತ್ತು. ಮಹಿಳೆಯರು ಸಾಮಾನ್ಯವಾಗಿ ರಾತ್ರಿ ಉಡುಪಾಗಿ 'ಕಾಚಿ ಮುಂಡು'ವಿನ ರೀತಿಯ ಧರಿಸು ಧರಿಸುತ್ತಿದ್ದರು. ಅವರು ಚಿನ್ನದ ಕುಸುರಿ ಕೆಲಸ ಹೊಂದಿರುವ ಬಣ್ಣದ ಪಟ್ಟು (ರೇಷ್ಮೆ) ಸೀರೆ ಉಡುತ್ತಿದ್ದರು. ಮಹಿಳೆಯರಿಗೆ ಆಭರಣಗಳು ಬಹಳ ಇಷ್ಟವಾಗಿದ್ದವು. ಬಂಗಾರದ ನಾಣ್ಯದ 'ಚಾವಡ', ಚಿನ್ನದ ಎಸಳುಗಳು, ಬಳೆ ಮತ್ತು ಉಂಗುರಗಳು ಸಾಮಾನ್ಯವಾಗಿದ್ದವು.

ಬ್ಯಾರಿಗಳ ಸಾಮಾನ್ಯ ಆಭರಣಗಳು

ಕೈ ಒಡವೆಗಳು	ಕಿವಿ ಆಭರಣಗಳು	ತಲೆ ಆಭರಣಗಳು	ಕುತ್ತಿಗೆ ಆಭರಣಗಳು	ಕಾಲು/ನಡು ಆಭರಣಗಳು
ಬಳೆ	ಅಲಿಕತ್	ತಲೆ ಸಿಂಗಾರ	ತಾಳಿ ಮಾಲೆ	ಕಾಲ್‌ಪಟ್ಟಿ
ಎಳಬಳೆ	ಕಾಯಿಲಂ	ಕೂಕಟ್ಟು	ಗೆಜ್ಜೆಟಿಕ್	ಸರಪಳಿ
ಸುರ್ಗಿಪಿರಿ	ಕೊಪ್ಪು	ಕೇದಗೆ	ಚಾವಡ	ನಡುಪಟ್ಟಿ
ಮುರ್ಗಿಪಿರಿ	ಸರಪಳಿ	ಜಡಪೊಳ್ಳ	ಉರುಕು ಪೀಸ್	ಅರಪಟ್ಟಿ
ಎಡೆಬಳೆ	ಕುಡುಕ್ಕ	ಕುರಿ	ಮಿಸ್ರಿ ಮಾಲೆ	ಅರಂಞನ
ತಟ್ಟು ಬಳೆ	ಅರುಲಿ	ಚೌರಿ	ಒಟ್ಟಉರುಕ್	ನೂಲು
ಕಾದು ಬಳೆ	ಬೆಂಡೋಲೆ	ತಿರ್ಪು	ಪೂಮಾಲೆ, ಇತರ	ಅರಞನ ಇತರ

ಆಗಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಆಭರಣಗಳು ಇರುತ್ತಿದ್ದವು. ಇವುಗಳನ್ನು ಬಹುತೇಕ ಸ್ಥಳೀಯ ಕುಸುರಿಯ ಒಡವೆಗಳಿಂದ ಮಾಡಿಸಲಾಗುತ್ತಿತ್ತು. ಚಿನ್ನದ ಕೆಲಸಗಾರರು ಬಹುತೇಕ ಅಮುಸ್ಲಿಮರಾಗಿದ್ದು, ಬ್ಯಾರಿಗಳು ಅವರಿಂದ ಬೇಕಾದ ಒಡವೆಗಳನ್ನು ಮಾಡಿಸುತ್ತಿದ್ದರು. 19ನೇ ಶತಮಾನದಲ್ಲಿ ಬ್ಯಾರಿಗಳು ಏಳಿಗೆ ಹೊಂದಿದರು. ಸುಧಾರಣಾ ಚಳುವಳಿಯಿಂದಾಗಿ ಅವರ ಸಮಾಜದಲ್ಲಿ ಬಹಳಷ್ಟು ಬದಲಾವಣೆಗಳು ಉಂಟಾದವು.

★★★

1. ವಿವರಗಳಿಗೆ ಮುಂದಿನ ಅಧ್ಯಾಯ ನೋಡಿ
2. ವಿವರಗಳಿಗೆ ಮುಂದಿನ ಅಧ್ಯಾಯ ನೋಡಿ
3. ಅಧ್ಯಾಯ 2ರಲ್ಲಿ ಉಲ್ಲೇಖಿಸಲಾಗಿದೆ
4. ಕೂಚ್‌ಮೆನ್, ಡಿಸ್ಕಪ್ಷನ್ ಮೆನೊರ್ ಆಫ್ ವಿಲೇಜಸ್ ಆಫ್ ಎಸ್.ಕೆ. ಡಿಸ್ಟ್ರಿಕ್ಟ್ 1905 ಆಂಡ್ ಸೆಟ್ಲಮೆಂಟ್
5. ಲೇಖಕರು ಬ್ಯಾರಿ ಅಂತ್ಯ ಪ್ರತ್ಯಯಗಳನ್ನು ಒಳಗೊಂಡ ಇಂತಹ 10ಕ್ಕೂ ಅಧಿಕ ಅಂಕಿತ ಗಳನ್ನು ಪ್ರಮಾಣೀಕರಿಸಿದ್ದಾರೆ.
6. ಒ.ಎಚ್.ಅಬ್ದುಲ್ಲಾ ಬ್ಯಾರಿ ಮತ್ತು ಇತರರು
7. ಕನರಾಡಿ ವಾದಿರಾಜ ಭಟ್ಟ ಪಿ.ಒ. ಒತಂಗಲ್ಲು- ಇಂಟರ್ ಎಜುಕೇಶನ್
8. ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ.
9. ಲೊಗಾನ್, ಮಲಬಾರ್ ಮ್ಯಾನ್ಯುವಲ್ vol. 1 (1951), ಪು. 272.
10. ಎಸ್.ಎಂ.ಮುಹಮ್ಮದ್ ಕೋಯಾ, ಮಾಪಿಲ್ಲಾಸ್ ಆಫ್ ಮಲಬಾರ್, ಪು.67
11. ibid
12. ibid ಪು. 68
13. ಸ್ಟರ್ಕ್ ಎಸ್.ಕೆ., ಮ್ಯಾನ್ಯುವಲ್ vol. 1
14. ಎನ್.ಎಸ್.ಕಿಲ್ಲೆ ಪ್ರಾಚೀನ ತುಳುನಾಡು (1912), ಪು.106-107
15. ಒ.ಎಚ್.ಡಾ.ಮಹಮ್ಮದ್ ಶರೀಫ್, ಅಬ್ದುಲ್ ಕಾದರ್ ಹಾಜಿ ಮತ್ತು ಇತರರು
16. ಒ.ಎಚ್. ಝಕರೀಯಬ್ಬ ಅಬ್ದುಲ್ಲಾ ಬ್ಯಾರಿ ಮತ್ತು ಇತರರು
17. ಒ.ಎಚ್. ibid
18. 16ನೇ ಆಗಗಳಿಗಾಗಿ ಅಧ್ಯಾಯ 3 ನೋಡಿ
19. ಅಧ್ಯಾಯ 3 ನೋಡಿ
20. ಅಧ್ಯಾಯ 3 ನೋಡಿ
21. ಶೇಖಿರ್ ಇಡ್ಯಾ, ಮಂಗಳೂರು ಪು.30 (1977)
22. ಒ.ಎಚ್.ಅಬ್ದುಲ್ ಹಮೀದ್ (ಲೀಗ್ ಅಧ್ಯಕ್ಷರು) ಝಕರಿಯಬ್ಬ ಮತ್ತು ಇತರರು
23. ಒ.ಎಚ್.ಎ.ಆರ್. ಅಹ್ಮದ್ ಮತ್ತು ಝಕರಿಯಬ್ಬ ಮತ್ತು ಇತರರು

24. ವಿವರಗಳಿಗೆ ಅಧ್ಯಾಯ 4 ನೋಡಿ
25. ಈ ವಿಷಯದ ಬಗ್ಗೆ ಯಾವುದೇ ಕುರುಹುಗಳು ಸಿಕ್ಕಿಲ್ಲ
26. ಮಾಪಿಳ್ಳೆಗಳ ಒಂದು ಜಾನಪದ ಹಾಡು
27. ವಿವರಗಳಿಗೆ ಅಧ್ಯಾಯ 4ನೋಡಿ
28. ಒ.ಎಚ್.ಬಾಪು ಬ್ಯಾರಿ, ಅಬ್ದುಲ್ಲಾ ಬ್ಯಾರಿ, ಮಹಮ್ಮದ್ ಮಾಸ್ಟರ್
29. ಒ.ಎಚ್. ಡಾ.ಶರೀಫ್ ಅಲ್ ಖ್ವಾದಿ, ಮಂಗಳೂರು ಮತ್ತು ಝಕರಿಯಬ್ಬ ಮತ್ತು ಇತರರು
30. ibid
31. ibid
32. ಒಂದು ಮಾಪಿಳ್ಳೆ ಪಾಟ್ಟು ಬದ್ರು ಕಿಸ್ಸಾ ಪಾಟ್ಟುಗಳು, ಮೊಯಿನ್‌ಕುಟ್ಟಿ ವೈದ್ಯರ್
33. ಒ.ಎಚ್. ಅಲ್ ಖ್ವಾದಿ, ಬಾಪು ಬ್ಯಾರಿ, ಅಬ್ದುಲ್ಲಾ ಬ್ಯಾರಿ ಮತ್ತು ಇತರರು
34. ಒ.ಎಚ್. ಎ.ಆರ್. ಅಹ್ಮದ್ ಮತ್ತು ಇತರರು
35. ಎಂ.ಎನ್.ಶ್ರೀನಿವಾಸ್: ರಿಲೀಜಿಯನ್ ಅಂಡ್ ಸೊಸೈಟಿ ಅಮಂಗ್ ದ ಕೂರ್ಗ್ಸ್ ಆಫ್ ಇಂಡಿಯಾ, ಅಧ್ಯಾಯ 3.

ಅಧ್ಯಾಯ 6

ಬೌದ್ಧಿಕ ಕೊಡುಗೆಗಳು
ಭಾಷೆ, ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆ

1. ಬ್ಯಾರಿಭಾಷೆ, ಒಂದು ನಾಡ ಭಾಷೆ

ಬ್ಯಾರಿ ಭಾಷೆಯು ತುಳುನಾಡಿನಲ್ಲಿ ಬ್ಯಾರಿಗಳು ಮಾತನಾಡುವ ಒಂದು ನಾಡ ಭಾಷೆಯಾಗಿದೆ. ಮಂಗಳೂರು ಪ್ರದೇಶದಲ್ಲಿ ಈ ಭಾಷೆ ತನ್ನ ಮೂಲ ಸ್ವರೂಪವನ್ನು ಈಗಲೂ ಉಳಿಸಿಕೊಂಡಿದೆ. ಆದರೆ ಮಲಬಾರಿನ ಮಾಪಿಳ್ಳೆಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವ ಕಾಸರಗೋಡು ಪ್ರದೇಶದಲ್ಲಿ ಇದರಲ್ಲಿ ಮಾಪಿಳ್ಳೆ ಮಲಯಾಳ ಮಿಶ್ರಣಗೊಂಡಿದೆ. ಆದರೂ ತನ್ನದೇ ಆದ ವಿಭಿನ್ನತೆಯನ್ನು ಹೊಂದಿದೆ. ಈ ಭಾಷೆಯ ವರ್ಣನಾತ್ಮಕ ಮತ್ತು ತುಲನಾತ್ಮಕ ಅಧ್ಯಯನವನ್ನು ಉಡುಪಿಯ ಡಾ.ಸುಶೀಲಾ ಉಪಾಧ್ಯಾಯ ಅವರು ಮಾಡಿದ್ದಾರೆ. ಅವರು ತಮ್ಮ 'ಮಾಪಿಳ್ಳಾ ಮಲಯಾಳಂ' ಥೀಸಿಸ್‌ನಲ್ಲಿ ಈ ಭಾಷೆಯ ಹಲವು ಗುಣಲಕ್ಷಣಗಳನ್ನು ವಿವರಿಸಿದ್ದಾರೆ. ಅವರ ಪ್ರಕಾರ, ಬ್ಯಾರಿ ಭಾಷೆಯಲ್ಲಿ ತುಳುವಿನ ಹಲವು ಪ್ರಭಾವ ಕಾಣಬಹುದು.[1] ಈ ಭಾಷೆಯನ್ನು ಪ್ರಮುಖವಾಗಿ ಮಂಗಳೂರು ಭಾಗದ ಬ್ಯಾರಿಗಳು ಹಾಗೂ ಕಾಸರಗೋಡು ಪ್ರದೇಶದಲ್ಲಿ ಮಿಶ್ರಣಗೊಂಡ ಸ್ವರೂಪದಲ್ಲಿ ಮಾತನಾಡುತ್ತಾರೆ. ಬ್ಯಾರಿ ಭಾಷೆಯು ಮಲಯಾಳದ ಒಂದು ಆಡುಭಾಷೆ. ಆದರೆ ಪರ್ಷಿಯ ಮತ್ತು ಅರೇಬಿಕ್‌ನಿಂದ ಹಲವು ಎರವಲುಗಳನ್ನು ಪಡೆದ ಕಾರಣ ಇದು ಇತರ ನಾಡ ಭಾಷೆಗಳಿಂದ ಭಿನ್ನವಾಗಿದೆ. ಈ ಭಾಷೆ ಕೇರಳದ ಇತರ ಮುಸ್ಲಿಮ್ ಪ್ರಾಂತೀಯ ಭಾಷೆಗಳಿಗಿಂತ ಬಹಳ ಭಿನ್ನವಾಗಿದೆ. ತುಳು ಬಾಹುಳ್ಯ ಇರುವ ಪ್ರದೇಶದಲ್ಲಿ ಇದನ್ನು ಬಳಸುತ್ತಿರುವುದು ಇದಕ್ಕೆ ಕಾರಣ.[2] ಬ್ಯಾರಿ ಭಾಷೆಯ ಮೇಲೆ ತುಳುವಿನ ಶಬ್ದ ಬಳಕೆ, ವ್ಯಾಕರಣ ಮತ್ತು (ಧ್ವನಿಶಾಸ್ತ್ರ ಮತ್ತು ನಿಘಂಟು) ಪ್ರಭಾವ ಕಾಣಬಹುದು.[3] ಈ

ಪ್ರಾಂತೀಯ ಭಾಷೆಯ ರಚನೆಯಲ್ಲಿ ಮಾಪಿಳ್ಳ ಮಲಯಾಳಕ್ಕಿಂತ ತುಳು ಭಾಷೆಯ ಮೇಲೆ ಹೆಚ್ಚು ಅವಲಂಬಿತವಾಗಿರುವುದನ್ನು ಕಾಣಬಹುದು.

ಈ ಭಾಷೆಯಲ್ಲಿ ಅಂತಹ ಹಲವಾರು ಅಂಶಗಳನ್ನು ಕಾಣಬಹುದು.

1) ಇದರ ಧ್ವನಿಶಾಸ್ತ್ರ ತುಳು ಭಾಷೆಗೆ ಬಹಳಷ್ಟು ಸಾಮ್ಯತೆ ಹೊಂದಿದೆ. ಈ ಭಾಷೆಯಲ್ಲಿ ಮಲಯಾಳಂನಲ್ಲಿ ಕಾಣುವ ಆರ್, ರ್, ಟ ಮತ್ತು ನ ಮುಂತಾದ ಶಬ್ದಗಳು ಕಂಡು ಬರುವುದಿಲ್ಲ. ವ ಬದಲು ಬ, ಅ ಬದಲು ಇ ಮತ್ತು ಕಡೆಯ ಅನುನಾಸಿಕ ಬಿಟ್ಟು ಬಿಡುವುದು ಮೊದಲಾದ ಪ್ರಮುಖ ಶಬ್ದ ಬದಲಾವಣೆಗಳನ್ನು ಕಾಣಬಹುದು.

2) ಪರ್ಷಿಯ ಮತ್ತು ಅರಬಿ ಪ್ರಭಾವದಿಂದಾಗಿ 'ಎಫ್' ಮತ್ತು 'ಎಕ್ಸ್'ನಂತಹ ಕೆಲವು ಪದಗಳು ಬ್ಯಾರಿ ಭಾಷೆಯ ಸ್ವರಶಾಸ್ತ್ರದಲ್ಲಿ ಸೇರಿಕೊಂಡಿವೆ.

3) ವ್ಯಕ್ತಿ, ಸಂಖ್ಯೆ ಮತ್ತು ಲಿಂಗವನ್ನು ಕ್ರಿಯಾಕಾಲದಲ್ಲಿ ತೋರಿಸುವಾಗ ಕಾಣುವ ಅಂತ್ಯಪ್ರತ್ಯಯ ಬ್ಯಾರಿ ಭಾಷೆಯ ಪ್ರಮುಖ ಅಂಶವಾಗಿದ್ದು ಇದು ಮಲಯಾಳಂನ ಇತರ ಯಾವುದೇ ಪ್ರಾಂತೀಯ ಭಾಷೆಗಳಲ್ಲಿ ಕಂಡುಬರುವುದಿಲ್ಲ.[4]

4) ಇಲ್ಲಿನ ವೈಯಕ್ತಿಕ ಅಂತ್ಯಪ್ರತ್ಯಯಗಳು ತುಳುಭಾಷೆಯಲ್ಲಿ ಬಳಕೆಯಾಗುವ ವೈಯಕ್ತಿಕ ಅಂತ್ಯಪ್ರತ್ಯಯಗಳನ್ನು ಬಹಳಷ್ಟು ಹೋಲುತ್ತವೆ. ವೈಯಕ್ತಿಕ ಅಂತ್ಯಪ್ರತ್ಯಯ ಉದಾಹರಣೆಗೆ 'ಲಾ' ಅಗೌರವ ಮತ್ತು ಸಲಿಗೆಯನ್ನು ಧ್ವನಿಸುತ್ತದೆ. ಉದಾಹರಣೆಗೆ, ಪೋಲಾ (ಅಂದರೆ ಮಂಗಳೂರು ಬ್ಯಾರಿಯಲ್ಲಿ ಹೋಗು), ಪೋರಾ (ಕಾಸರಗೋಡು, ಸುಳ್ಯ ಪ್ರದೇಶದಲ್ಲಿ), ಪೋಡಾ (ಮಾಪಿಳ್ಳ ಮಲಬಾರ್). ಇದೇ ರೀತಿ ಬಾಲಾ, ತಾಲಾ ಇತ್ಯಾದಿ. ಇದೇ ರೀತಿ ಭಾವಕ್ರಿಯಾ ರೂಪ ಅಂತ್ಯಪ್ರತ್ಯಯ, 'ಆಂತೆ' ಉದಾಹರಣೆಗೆ ಪೋವಾಂತೆ ಅಂದರೆ ಹೋಗಬಹುದಿತ್ತು. 'ಬರಾಂತೆ' ಬರಬಹುದಿತ್ತು ಇತ್ಯಾದಿಗಳನ್ನು ಬ್ಯಾರಿಗಳು ವ್ಯಾಪಕವಾಗಿ ಬಳಸುತ್ತಿದ್ದರು. ಆದರೆ ಕಾಸರಗೋಡು ಪ್ರದೇಶದಲ್ಲಿ ಇವು ಸಾಮಾನ್ಯವಾಗಿರಲಿಲ್ಲ.

ವ್ಯಾಕರಣದಲ್ಲಿ ಪ್ರಥಮ ಪುರುಷ ಸರ್ವನಾಮಗಳು ಏಕವಚನ ಮತ್ತು ನಪುಂಸಕ ಲಿಂಗ ವಚನಗಳ ಬಳಕೆಯಲ್ಲಿ ಏಕವಚನಗಳನ್ನು ಹೊಂದಿದೆ.[5]

ಹೆಚ್ಚಿನ ಪದಬಂಧಗಳು ತುಳು ಭಾಷೆಯಿಂದಲೇ ಬಂದಿವೆ. ಒಟ್ಟು 24 ಧ್ವನಿಸಾಮ್ಯವುಳ್ಳ ಉಚ್ಚಾರಗಳಿದ್ದು ಅವುಗಳಲ್ಲಿ ನಾಲ್ಕು ಮಾತ್ರ ವಿರಳವಾಗಿ ಬಳಕೆಯಾಗುತ್ತವೆ.

ಮಲಯಾಳಂ ಭಾಷೆಗೆ ಸಂಬಂಧವಿಲ್ಲದಂತಹ ಅನೇಕ ಶಬ್ದಗಳಿವೆ. ಇದು ಈ ಭಾಷೆಯ ಪ್ರತ್ಯೇಕತೆಯನ್ನು ಎತ್ತಿ ತೋರಿಸಿದೆ. ಉದಾ :

	ಇಂಗ್ಲಿಷ್	ಬ್ಯಾರಿ	ಮಲಯಾಳಂ
1	Much	ಚೆಮ್ಮೆ	ಕುರೆ
2	Vessel	ಬಿಸಲಿ	ಪಾತ್ರಂ
3	Wife	ಪೆಂಞಾಯಿ	ಭಾರ್ಯ
4	Rooster	ಚೆಗಲೆಪೂವಂ	ಕೋಯಿ
5	Buffalo	ಗೋಣ	ಪೋತು

6	Sit	ದೆಯಿ	ಇರಿಕ್ಕು
7	Home	ಅಗ	ವೀಡು
8	Dark	ಚಿಮ್ಮೆ	ಇರಿಟ್ಟು
9	Win	ಗೆಲ್ಸ್, ಗೆಂದ್	ಜಯಿಕ್ಕು
10	Defeat, loose	ಸೋಲ್	ತೋಲ್ವಿ
11	Entry ceremony	ವೊಕ್ಕಲು	ಪ್ರವೇಶಂ
12	Brides home	ಪುದಿಯೊಪೆನ್ನೆರೆ ಅಗ	ಪುದುನಾಟ್ಟಿ ವೀಡು
13	Grand-father	ಅಜ್ಜ	ಉಪ್ಪಾಪ
14	Grand mother	ಅಜ್ಜಿ	ಉಮ್ಮಾಮ
15	Surprise	ಅದಿಸ್ಸ	ಆಶ್ಚರ್ಯಂ
16	I jump	ಲಾಯ್‌ಕ್ಕೆ	ತುಳ್ಳುವೆ
17	Climb	ಪತ್ತ್, ಏರ್	ಕಯರ್
18	I weep	ಕೇಲ್ದೆ ಬುಲೆಪಿಡ್‌ರೆ	ಕರಂಞ್

7) ಬ್ಯಾರಿ ಭಾಷೆಗೆ ಹಸ್ತಲೇಖನ ಇಲ್ಲದಿದ್ದರೂ ವ್ಯವಸ್ಥಿತವಾಗಿ ವಿಕಾಸಗೊಂಡಿರುವ ಸ್ವರೂಪವನ್ನು ಕಾಣಬಹುದು. ಒಂದು ಕ್ರಿಯಾಪದ, ವಿರುದ್ಧಾರ್ಥ ಸೇರಿದಂತೆ ಹಲವು ಆಯಾಮಗಳನ್ನು ಸೂಚಿಸುವುದನ್ನು ಕಾಣಬಹುದು. ಉದಾಹರಣೆಗೆ Tell = ಚೊಲ್ಲು.

1	I Tell	ಚೆಲ್ಲುರೆ	(ಡೆ) (ಏಕವಚನ) ಚೆಲ್ಲುಡಾರ?
2	I told	ಚೆನ್ನೆ	ಚೆನ್ನಾರಾ?
3	I will tell	ಚೆಲ್ಲುವೆ	ಚೆಲ್ಲುವಾಲ್, ಚೆಲ್ಲುವಾರ್
4	I ought to Have told	ಚೆಲ್ಲಾತೆ	ಚೆಲ್ಲೊನುಗು
5	I would have told	ಚೆಲ್ಲಾತೆ	ಚೊಲ್ಲಾತಾಲ್, ಚೆಲ್ಲಾತಾರ್
6	I tell	ಚೆಲ್ಲ್	ಚೆಲ್ಲಾರ್
7	I can say	ಚೆಲ್ಲಾನ್	ಚೆಲ್ಲುನು (have to say)
8	Not to be told	ಚೆಲ್ಲಂಡ	
9	If told	ಚೆನ್ನೆಂಗ್	
10	Having told	ಚೆನ್ನೆ	
11	For telling	ಚೆಲ್ಲೆ	
12	Without telling	ಚೆಲ್ಲಾಂತೆ	

8) ಬ್ಯಾರಿ ಭಾಷೆಯ ಕೆಲವು ಬಳಕೆ ಮತ್ತು ವ್ಯಾಕರಣ ರಚನೆ ಬಹಳ ಸರಳ ಮತ್ತು ಆಕರ್ಷಕವಾಗಿದೆ. ಉದಾಹರಣೆಗೆ

Want	ಬೇಣು	Do not want	ಬೇಂಡ
Can	ತೀರು	Cannot	ತೀರಲೆ
Yes	ಒಕ್ಕು	No	ಅಲ್ಲೆ
ಂಟ್ ಅಂದರೆ ಉಲ್ಲ			
I am	ಉಲ್ಲೆ	We are	ಉಲ್ಲ
You are?	ಉಲ್ಲೆ	You are	ಉಲ್ಲಾರಾ?
He is?	ಉಲ್ಲಾನಾ?	They are	ಉಲ್ಲಾರಾ?
She is	ಉಲ್ಲಾಲ?		
It is	ಉಂಡಾ?		

9) The personal suffixes have decent variations and indicated ten's legibly

1)	**person 'I'**	**'Come' - ಬಾ**	
	Tense	**ಏಕವಚನ**	**ಬಹುವಚನ**
ಎ)	Non past	ಬಂಡೆ	ಬಂಡ
ಎ)	Past	ಬನ್ನು	ಬನ್ನ
ಸಿ)	Past perfect	ಬನ್ನೊಡ	ಬನ್ನೊಡ
ಡಿ)	Subjective(f)	ಬರುವೆ	ಬರುವ
ಇ)	Unreal past	ಬರಾತೆ	ಬರಾತ
2)	Person 'you'		
ಎ)	Non-past	ಬಂಡೆ	ಬಂಡಾರಿ
ಎ)	Past	ಬನ್ನಾನ್	ಬನ್ನಾರಿ
ಸಿ)	Past perfect	ಬನ್ನಿಡ	ಬನ್ನಡಾರಿ
ಡಿ)	Subjenctive(F)	ಬರುವೆ	ಬರುವಾರಿ
ಇ)	Unreal past	ಬರಾತೆ	ಬರಾತಾರಿ

೩ Person He, She & it

	ಪುಲ್ಲಿಂಗ	ಸ್ತ್ರೀ	ಪುರುಷ ಮತ್ತು ಸ್ತ್ರೀ	ನಪುಂಸಕ ಲಿಂಗ (ಬಹುವಚನ)
ಎ) Non-past	ಬಂಡ	ಬಂಡಾಲ್	ಬಂಡಾರ್	ಬಂಡ್
ಬಿ) Past	ಬನ್ನ	ಬನ್ನಾಲ್	ಬನ್ನಾರ್	ಬನ್ನ್ತ್
ಸಿ) Past perfect	ಬನ್ನ್ಡಾ	ಬನ್ನ್ಡಾಲ್	ಬನ್ನ್ಡಾರ್	ಬನ್ನ್ತ್
ಡಿ) Subjenctive(F)	ಬರು	ಬರುವಾಲ್	ಬರುವಾರಿ	ಬರಾತ್

೩) Unreal past ಬರಾತ ಬರಾತಾಲ್ ಬರಾತಾರ್ ಬರಾತ್

ಈ ಬಳಕೆಗಳನ್ನು ಗಮನಿಸಿ:

ನಾನ್ (ಐ)	ನಕ್ಕ್ (ಟು ಮಿ)	ನಜಕ್ (ಟು ಅಸ್)
ನೀನ್ (ಯು)	ನಿಕ್ಕ್ (ಟು ಯು)	ನಿಜಕ್ (ಟು ಯು)
ತುಂಬಿಸು-ತುಂಬ	ನೊರ	ನೊರೋಡಿ
ಕಡಿಮೆ	ಕೊರ	ಕೊರೋಡಿ
ಹೊಸಬ	ಪೊಸಬ	ಪೊಸಬತಿ (ಹೊಸ ಮಹಿಳೆ)
ವೃದ್ಧ	ಪರಬ	ಪರಬತಿ (ವೃದ್ಧೆ)

ಈ ಎಲ್ಲಾ ಪ್ರಕರಣಗಳಲ್ಲಿ ಅಂತ್ಯಪ್ರತ್ಯಯಗಳು ಬಹಳ ಆಕರ್ಷಕವಾಗಿದ್ದು, ಮಲಯಾಳಂನಿಂದ ಸಂಪೂರ್ಣ ಭಿನ್ನವಾಗಿವೆ.

ಈ ಕೆಳಕಂಡ ಉದಾಹರಣೆಗಳು ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ.

1. ಬ್ಯಾರಿ : ನಾನ್ ಔತುರೆ ಬಂಡೆ
   ತುಳು : ಯಾನ್ ಇಲ್ಲಡ್ದ್ ಬರ್ಪುನೆ
   ಮಾಪಿಳ್ಳೆ : ಞ್ಞಾನ್ ವೀಟಿಲ್‌ನಿನ್ನು ವರುನ್ನು
   ಇಂಗ್ಲಿಷ್ : I am coming from home.
2. ಬ್ಯಾರಿ : ನಾನ್ ಸೊರಂ ಆಕ್‌ಪಾಟುವೆ (ಚೆಯ್‌ಪಾಟುವೆ)
   ತುಳು : ಯಾನ್ ಕೆಲ್ಸ (ಸೊರ) ಮಲ್ಪಾವೆ
   ಮಾಪಿಳ್ಳೆ : ಞ್ಞಾನ್ ಪಣಿ ಎಡಿಪ್ಪಿಕ್ಕುಂ (ಚೆಯ್ಯಿಕ್ಕುಂ)
   ಇಂಗ್ಲಿಷ್ : I will get the work done.
3. ಬ್ಯಾರಿ : (ಎ) ಕೇನ್ ಕೇನ್ ಕನ್ನ್ ಚೋನ್ನುತು
   (ಬಿ) ಬುಲ್ಪಿಟ್ಟ್ ಬುಲ್ಪಿಟ್ಟ್ ಕನ್ನ್ ಚೋನ್ನುತ್ತು (ಮಂಗಳೂರು)
   ತುಳು : ಬುಲ್ತ್ದ್ ಬುಲ್ತ್ದ್ ಕನ್ನ್ ಕೆಂಪಾಂಡ್
   ಮಾಪಿಳ್ಳೆ : ಕರಂನ್ನು ಕರಂನ್ನು ಕನ್ನ್ ಚುವನ್ನು
   ಇಂಗ್ಲಿಷ್ : wept and wept, eyes turned red.
4. ಬ್ಯಾರಿ : ಮಕ್ಕಲೆ ಎಂದ್‌ಕ್ ಗೌಜಿ ಆಕುರೆ?
   ತುಳು : ಜೋಕುಲೆ ದಾಯೆಗ್ ಗೌಜಿ ಮಲ್ಪುವಾರ್?
   ಮಾಪಿಳ್ಳೆ : ಕುಟ್ಟಿಗಲೆ ಎಂದಿನು ಗೌಜಿ ಆಕುನ್ನು?
   ಇಂಗ್ಲಿಷ್ : children why are you making noise?
5. ಬ್ಯಾರಿ : ಈ ಔತುರೆ ಬಾಕಿಲ್ ಚಿರಿಯೆ
   ತುಳು : ಈ ಇಲ್ಲತ ಬಾಕಿಲ್ ಎಲ್ಲಿಯೆ
   ಮಾಪಿಳ್ಳೆ : ಈ ವೀಟ್ಟಿಲೆ ವಾದಿಲ್ ಚೆರುದು

ಇಂಗ್ಲಿಷ್ : The door ot this house is small.

6. ಬ್ಯಾರಿ : ನಿಜ ಅಬ್ಬರೆ(ಡೆ) ಮುಟ್ಪೊ ಚೊಲ್ಲೊರು

ತುಳು : ಈರ್ ಅಮ್ಮೆರ್ದ (ಮುಟ್ಪ) ಪನ್ಲೆ

ಮಾಪಿಳ್ಳೆ : ನಿಂಗಳ್ ವಾಪ್ಪ ನೋಡು ಪರಯೂ

ಇಂಗ್ಲಿಷ್ : You, tell to your father.

7. ಬ್ಯಾರಿ : ಕಿಡಾವು ಲಾಯ್ಟೋಂ ಲಾಯ್ಟೋಂ ಬೀದಿಗ್ ಬಂತ್

ತುಳು : ಬಾಲೆ ಲಾಯಿತ್ದ್ ಲಾಯಿತ್ದ್ ಬೀದಿಗ್ ಬತ್ತ್ಂಡ್

ಮಾಪಿಳ್ಳೆ : ಕುಂಞಿ ಥುಲ್ಲಿ ಥುಲ್ಲಿ ಬೀದಿಲ್ ಬನ್ನು

ಇಂಗ್ಲಿಷ್ : Baby, jumping and jumping reached the street.

ಈ ಎಲ್ಲಾ ಭಾಷಾ ಸಾಮ್ಯತೆಗಳ ಅಧ್ಯಯನದಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ.

1) ಬ್ಯಾರಿ ಭಾಷೆಯು ತುಳುನಾಡಿನ ಬ್ಯಾರಿಗಳು ಆಡುವ ಪ್ರಾದೇಶಿಕ ಭಾಷೆಯಾಗಿದೆ. ಅರಬ್ಬರೊಂದಿಗಿನ ಸಂಪರ್ಕದಿಂದಾಗಿ ಅದರಲ್ಲಿ ಪರ್ಷಿಯ-ಅರೇಬಿಕ್ ಶಬ್ದಗಳು ಸೇರ್ಪಡೆಯಾದವು. ಅದರ ಮೂಲ ತುಳು ಆದ ಕಾರಣ, ತುಳು ವ್ಯಾಕರಣ ಮತ್ತು ಹಿನ್ನೆಲೆ ಬ್ಯಾರಿ ಭಾಷೆಗೆ ಮೂಲ ಆದವು. ಧಾರ್ಮಿಕ ಸಂಪರ್ಕದಿಂದಾಗಿ ಮಾಪಿಳ್ಳೆ ಮಲಯಾಳಂ ಹೇರಿಕೆಯಾಗಿ ಮಲಯಾಳ ಶಬ್ದಗಳು ಇದರಲ್ಲಿ ತುಂಬಿದವು. ಕೊಡವ (ಕೂರ್ಗ್) ಪ್ರಾದೇಶಿಕ ಭಾಷೆಯಂತೆ ಅದು ತನ್ನ ಮೂಲ ಗುಣಮಟ್ಟವನ್ನು ಹೊಂದಿದೆ.

2) ಬ್ಯಾರಿ ಭಾಷೆಯು ಮಾಪಿಳ್ಳೆ ಭಾಷೆಯಲ್ಲ. ಮಾಪಿಳ್ಳೆ ಭಾಷೆ ಕೇರಳದಲ್ಲಿ ಸಮಗ್ರವಾಗಿ ಅಭಿವೃದ್ಧಿ ಹೊಂದಿರುವ ಭಾಷೆಯಾಗಿದೆ. ಮಲಬಾರಿನಲ್ಲಿ ಬಳಕೆಯಲ್ಲಿರುವ ಮಾಪಿಳ್ಳೆ ಮಲಯಾಳಂ (ಮಾಪಿಳ್ಳೆಗಳು ಮಾತನಾಡುವ ಭಾಷೆ) ಸ್ವರವೊಂದನ್ನು ಬಿಟ್ಟರೆ ಮಲಯಾಳ ಭಾಷೆಗಿಂತ ಹೆಚ್ಚು ಭಿನ್ನವಾಗಿಲ್ಲ. ಅದರ ವ್ಯಾಕರಣ ಮತ್ತು ರಚನೆ ಮಲಯಾಳ ಭಾಷೆಯೇ ಆಗಿದೆ. ಇಡೀ ಮಲಬಾರ್ ಪ್ರದೇಶದಲ್ಲಿ ಹರಡಿರುವ ಮಾಪಿಳ್ಳೆಗಳು ಪ್ರಾದೇಶಿಕ ಭಾಷೆಯಾಗಿ ಗುರುತಿಸಿಕೊಳ್ಳುತ್ತಾರೆ. ಆದರೆ ನಿಜವಾಗಿ ಮಾಪಿಳ್ಳೆ ಎಂಬ ಪ್ರತ್ಯೇಕ ಪ್ರಾದೇಶಿಕ ಭಾಷೆ ಇಲ್ಲ. ಹಲವರು ಬ್ಯಾರಿ ಭಾಷೆಯನ್ನು ಮಾಪಿಳ್ಳೆ ಪ್ರಾದೇಶಿಕ ಭಾಷೆಯೆಂದು ತಪ್ಪಾಗಿ ತಿಳಿದುಕೊಂಡಿದ್ದಾರೆ. ಕೊಡವ ಭಾಷೆಯನ್ನು ಪ್ರತ್ಯೇಕ ಪ್ರಾದೇಶಿಕ ಭಾಷೆಯೆಂದು ನಾವು ಒಪ್ಪಿಕೊಳ್ಳುವುದಾದರೆ, ಬ್ಯಾರಿ ಭಾಷೆಯು ಸಹ ಪ್ರತ್ಯೇಕ ಸ್ವತಂತ್ರ ಭಾಷೆಯಾಗಿದೆ. ಅದು ಸ್ಥಳೀಯ ತುಳು ಭಾಷೆ ಮತ್ತು ಸಂಸ್ಕೃತಿಯೊಂದಿಗೆ ನಿಕಟ ಸಾಮ್ಯತೆ ಹೊಂದಿದೆ. ಕೊಡವ ಭಾಷೆಯಲ್ಲಿ ಇರುವಂತೆ ಬ್ಯಾರಿಯಲ್ಲೂ ಹಲವು ಮಲಯಾಳಂ ಶಬ್ದಗಳು ಇವೆ. ಧಾರ್ಮಿಕ ಕಾರಣಗಳಿಗಾಗಿ ಮಾಪಿಳ್ಳೆಗಳೊಂದಿಗೆ ಇದ್ದ ನಿಕಟ ಸಂಪರ್ಕ ಇದಕ್ಕೆ ಮುಖ್ಯ ಕಾರಣ.[7] ಕಾಸರಗೋಡು ಪ್ರದೇಶದಲ್ಲಿ ಶೇ.80ಕ್ಕಿಂತ ಅಧಿಕ ಶಬ್ದಗಳು ಮಲಯಾಳಂ ಆಗಿದ್ದು ಮೂಲ ಬ್ಯಾರಿ ಭಾಷೆ ಸ್ವರೂಪ ಬಹುತೇಕ ಕಣ್ಮರೆಯಾಗಿದೆ. ಆ ಪ್ರದೇಶದಲ್ಲಿ ತುಳು ಸಹ ಬಹುತೇಕ ಅಳಿವಿನ ಅಂಚಿನಲ್ಲಿರುವುದನ್ನು ಕಾಣಬಹುದು.

ಕೊಡವ ಹಾಗೂ ಬ್ಯಾರಿಗಳಲ್ಲಿ ಸಮಾನವಾಗಿರುವ ಕೆಲವು ನಾಣ್ನುಡಿಗಳು:[8]

1. ಕೊಡವ : ಅಂಗೈ ಪುಣ್ಣುಕ್ ಕನ್ನಾಡಿ ಬೊಂಡ

ಬ್ಯಾರಿ : ಅಂಗೈ ಪುನ್ನುಕ್ ಕನ್ನಾಟಿ ಬೇಂಡ
ಇಂಗ್ಲಿಷ್ : no need of a Mirror to see the wound in the palm.

2. ಕೊಡವ : ಉಪ್ಪು ತಿಂಡವನ್ ನೀರ್ ಕುಡಿಕ್ಕುಮ್
ಬ್ಯಾರಿ : ಉಪ್ಪು ತಿಂಡವನ್ ತನ್ನಿ ಕುಡಿಕ್ಕುಮ್
ಇಂಗ್ಲಿಷ್ : The man who eats salt, will drink water

3. ಕೊಡವ : ಗೆದ್ದ ಎತ್ತ್‌ರ ಬಾಲ್ ಪುಡಿಚೆಂಕೆ
ಬ್ಯಾರಿ : ಗೆಂದಿ ಎರ್ದ್‌ರೆ ಬೀಲ ಪುಡಿಚಪೋಲೆ
ಇಂಗ್ಲಿಷ್ : Like cacthing the tail of an won bull.

4. ಕೊಡವ : ಊರುಕ್ ಉಪಕಾರಿ, ಮನೆಕ್ ಮಾರಿ
ಬ್ಯಾರಿ : ರಾಯತ್‌ಕ್ ಉಪಕಾರಿ ಔತುಗು ಮಾರಿ
ಇಂಗ್ಲಿಷ್ : Helpful to people, harm to house.

5. ಕೊಡವ : ಒರು ಕಣ್ಣುಕು ಚುನ್ನ ಒರು ಕಣ್ಣುಕು ಬೆಣ್ಣೆ
ಬ್ಯಾರಿ : ಒರು ಕನ್ನ್‌ಕ್ ನೂರು, ಒರು ಕನ್ನ್‌ಕ್ ಬೆಲ್ನಿ
ಇಂಗ್ಲಿಷ್ : Calcium for one eye, butter for another.

6. ಕೊಡವ : ಒರ್‌ಮೆಕ್ ಒಯಿಂಬೊದು ಬೆರ್ಕತ್, ಇನ್ಮಕ್ ಇರ್ವೊದು ದರಿದ್ರ
ಬ್ಯಾರಿ : ಒರ್‌ಮಕ್ ಒಲುಂಬೊದು ಬರ್ಕತ್, ಹಿನ್ಮಕ್ ಇರ್ವದ್ ದರಿದ್ರ.
ಇಂಗ್ಲಿಷ್ : Even nine is nice unity, but pride making twenty poor.

7. ಕೊಡವ : ದೂರತ್ ಬಂಧುನ ಕಾಣಂ ಪಕ್ಕತಿ ಶತ್ರು ನಲ್ಲದ್
ಬ್ಯಾರಿ : ದೂರತ್ತೆ ಸಂಬಂಧಿ ಕಾನನ್ ಪಕ್ಕತ್ತಿ ಶತ್ರು ನಲ್ಲದ್
ಇಂಗ್ಲಿಷ್ : Next door enemy's is better than distant relation.

8. ಕೊಡವ : ಮೀಸೆ ಬಪ್ಪಾಗ ದೇಶ ಕಾಂಗ, ಮೊಲೆ ಬಪ್ಪಾಗ ನೆಲ ಕಾಂಗ.
ಬ್ಯಾರಿ : ಮೀಸೆ ಬರುಂಬಕ್ ದೇಶ ಕಾನಲ, ಮೊಲೆ ಬರುಂಬಕ್ ನೆಲ ಕಾನಲೆ.
ಇಂಗ್ಲಿಷ್ : When mustache come up cannot see the nation, When breasts come up cannot see the land.

9. ಕೊಡವ : ಪಯ್ಯ ಕರ್‌ತದಾಚೆಂಗಿ ಪಾಲ್ ಕರ್‌ತದಾ?
ಬ್ಯಾರಿ : ಪಯ್ ಕರ್‌ತಿನ್ನೆಂಗ್ ಪಾಲ್ ಕರ್‌ತೆದಾ?
ಇಂಗ್ಲಿಷ್ : If cow is black, is milk black?

10. ಕೊಡವ : ಒಕ್ಕಂಡ, ಒತ್ತೆ ಪಿನ್ನೆ ತಪ್ಪಂಡ
ಬ್ಯಾರಿ : ಒಕ್ಕಂಡ, ಒತ್ತೆ ಪಿನ್ನ ತಪ್ಪಂಡ
ಇಂಗ್ಲಿಷ್ : Don't agree, If agreed don't miss it.

ಬಟ್ಟಬರಹ

ಬ್ಯಾರಿ ಭಾಷೆಗೆ ಲಿಪಿ ಇಲ್ಲ. 19ನೇ ಶತಮಾನದಲ್ಲಿ ಕೆಲವರಿಗೆ ಮಾತ್ರ ಕನ್ನಡ ಓದಲು ಬರುತ್ತಿತ್ತು. ಧಾರ್ಮಿಕ ಶಿಕ್ಷಣ ಗಿಳಿಪಾಠದಂತಿತ್ತು. ಯಾರಿಗೂ ಬರೆಯಲು ಬರುತ್ತಿರಲಿಲ್ಲ. ಆದರೆ ಕುರ್‌ಆನ್ ಪಠಣ ಮಾಡಲು ಮತ್ತು ಧಾರ್ಮಿಕ ಆಚರಣೆ ಮಾಡುತ್ತಿದ್ದರು. ಮಾತಿನ ಮಾಧ್ಯಮ ಮಲಯಾಳ ಆಗಿತ್ತು. ಆದರೆ ಬರವಣಿಗೆ ಅರಬಿ ಮಲಯಾಳ ಆಗಿತ್ತು. ಅರಬಿ ಮಲಯಾಳ ಅಂದರೆ, ಅರಬ್ಬಿ ಲಿಪಿಯಲ್ಲಿ ಬರೆದಿರುವ ಮಲಯಾಳಂ. ಆದರೆ ಈ ದ್ವಿಭಾಷಾ ಬಳಕೆ ಕಷ್ಟಕರವಾಗಿತ್ತು. ಇದು ಹೇಗಿತ್ತು ಅಂದರೆ, ಮಾತೃ ಭಾಷೆಯ ಶಬ್ದಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಬರೆದ ಹಾಗೆ. ಮಲಯಾಳದ ಸ್ವರಗಳನ್ನು ಇದರ ಮೂಲಕ ಸರಿಯಾಗಿ ಅಭಿವ್ಯಕ್ತಿ ಮಾಡಲು ಆಗುತ್ತಿರಲಿಲ್ಲ. ಇದು ಮಲಬಾರಿನ ಮಾಪಿಳ್ಳೆಗಳ ವಿಶೇಷ ಕೊಡುಗೆಯಾಗಿದೆ. ಈ ದ್ವಿಭಾಷೆಯ ಮಲಯಾಳಂ ತುಳುನಾಡಿಗೆ ಮಾಪಿಳ್ಳೆಗಳು ಬಿಟ್ಟು ಹೋದ ಕೊಡುಗೆ ಎನ್ನಬಹುದು. ಆದರೆ ಇದು ಕಷ್ಟಕರವಾಗಿದ್ದರಿಂದ ಕೆಲವು ಬ್ಯಾರಿಗಳು ಮಾತ್ರ ಇದನ್ನು ರೂಢಿಸಿಕೊಂಡಿದ್ದರು. ಕೆಲವು ಬ್ಯಾರಿಗಳು 'ಬಟ್ಟಬರಹ' ಎಂಬ ಸಾಮಾನ್ಯ ಲಿಪಿಯನ್ನು ಬಳಸುತ್ತಿದ್ದರು. ಆದರೆ ಶಾಲೆಯ ವ್ಯವಸ್ಥೆ ಬಂದ ಬಳಿಕ ಬ್ಯಾರಿಗಳು ಪ್ರಾದೇಶಿಕ ಲಿಪಿಗೆ ತೆರೆದುಕೊಂಡರು.[9] ಶತಮಾನದ ಆರಂಭದಲ್ಲಿ ಬಟ್ಟಬರಹ ಬ್ಯಾರಿಗಳಲ್ಲಿ ಸಾಮಾನ್ಯವಾಗಿತ್ತು ಎಂದು ಕಾಣುತ್ತದೆ.

ಬ್ಯಾರಿ ಭಾಷೆಯಲ್ಲಿ ಸಾಹಿತ್ಯ

ಹಲವು ಕಥೆಗಳು ಬರವಣಿಗೆ ಮಾಧ್ಯಮ ಇಲ್ಲದ ಕಾರಣ ಬಾಯಿಯಿಂದ ಬಾಯಿಗೆ ಹರಡಿ ಜನಪ್ರಿಯವಾಗಿದ್ದವು. ಇದೇ ರೀತಿ ಹಲವು ಹಾಡುಗಳು ಸಹ ಇದ್ದವು. ಆದರೆ ಅರಬ್ಬಿ ನಕಲು ಭಾಷೆಯೊಂದಿಗೆ ಬಂದ ಮಾಪಿಳ್ಳೆಪಾಟ್ಟು ಸಹಜವಾಗಿಯೇ ಬ್ಯಾರಿ ಸಾಹಿತ್ಯದ ಬೆಳವಣಿಗೆಗೆ ಅಡ್ಡಿಯಾಯಿತು. ಮಾಪಿಳ್ಳೆ ಗುರುಗಳು (ಮೌಲ್ವಿಗಳು) ಬ್ಯಾರಿ ಭಾಷೆ ಬಗ್ಗೆ ಆಸಕ್ತಿ ತೋರಿಸಲಿಲ್ಲ ಮತ್ತು ಈ ಬ್ಯಾರಿ ಕಥೆಗಳನ್ನು ಸಹ ಪ್ರೋತ್ಸಾಹಿಸಲಿಲ್ಲ. ಇದರಿಂದಾಗಿ ಅವುಗಳು ಕಣ್ಮರೆಯಾಗ ತೊಡಗಿದವು. ಡಾ.ಸುಶೀಲಾ ಉಪಾಧ್ಯಾಯ ಅಂತಹ ಕೆಲವು ಬ್ಯಾರಿ ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳಲ್ಲಿ ಕೆಲವು ಬಹಳ ಆಸಕ್ತಿದಾಯಕವಾಗಿವೆ.

1. ಆಫಂಡಿ ರಾಜಾವು
2. ಪೆಣ್ಣರಸಿಡೆ ರಾಯ
3. ಮೂಸಾನೆಬಿ
4. ಬಂಗಾರಡೆ ತೂಸಿ
5. ಪೋಕರಾಕಡೆ ನೇರ್ಚ

ಆಫಂಡಿ ರಾಜಾವು ಒಂದು ಸಣ್ಣ ಕಥೆ. ಇದರಲ್ಲಿ ದೇವರು ಬಯಸಿದರೆ ಒಬ್ಬ ಬಡವ ಹೇಗೆ ಶ್ರೀಮಂತ ಆಗಬಹುದು, ಅದೇ ರೀತಿ ಒಬ್ಬ ಶ್ರೀಮಂತ ಯಾವ ರೀತಿ ಬಡವ ಆಗಬಹುದು ಎಂಬ ವಿವರ ಇವೆ. ವರ್ಣನೆ ಬಹಳ ಸೊಗಸಾಗಿದೆ.

ಒರು ನಾಲ್ ಒರು ರಾಜಾವು ಕುರ್‌ಆನ್ ಓದುಂಬೊ ಒರು ಆಯತ್‌ರೆ ಮಾನ

ಇಜನೆ ಬಂತ್. ''ಕನ್ನ್ ಮುಚ್ಚಿ ತುರಕುಂಬೊ ರಾಜಾವುಡೆ ಫಕೀರುಂ, ಫಕೀರ್‌ಡೆ ರಾಜಾವುಂ ಆಕುವೆ.''

ನಾನ್ ಇತ್ತರೆ ಬೆಲಿಯೆ ರಾಜಾವು - ಎಜನೆ ಫಕೀರ್ ಆವುಡೆ? ಬ್ಯಾರಿಷ್ಟ್ ಆಯಾಲ್...

ಒಮ್ಮೆ ರಾಜ ಕುರ್‌ಆನ್ ಪಠಿಸುತ್ತಾ ಇದ್ದ. ಆದರಲ್ಲಿ ಒಂದು ವಾಕ್ಯ ಈ ರೀತಿ ಬಂತು. ದೇವರು ಇಚ್ಛಿಸಿದರೆ, ಒಬ್ಬ ರಾಜನನ್ನು ದರಿದ್ರನನ್ನಾಗಿ ಮತ್ತು ಒಬ್ಬ ದರಿದ್ರನನ್ನು ರಾಜನನ್ನಾಗಿ ಮಾಡುತ್ತಾನೆ. ಆಗ, ನಾನು ಇಷ್ಟು ಶಕ್ತಿಶಾಲಿ ಇದ್ದೇನೆ. ನಾನು ಹೇಗೆ ದರಿದ್ರನಾಗಲು ಸಾಧ್ಯ ಎಂಬ ಆಲೋಚನೆ ರಾಜನ ತಲೆಯಲ್ಲಿ ಬಂತು. (ಕಥೆ ಈ ರೀತಿ ಮುಂದುವರಿಯುತ್ತದೆ) ಆಗ ಒಬ್ಬ ಬಂದು ರಾಜಾ, ಬಾಗಿಲ ಬಳಿ ಒಂದು ಹುಲಿ ಬಂದಿದೆ ಎಂದ. ಆಗ ರಾಜ ಹುಲಿಯನ್ನು ಬೆನ್ನಟ್ಟಿ ಹಿಂದೆ ಹೋದ. ಹುಲಿ ದಟ್ಟ ಅರಣ್ಯದ ಒಳಗೆ ನುಗ್ಗಿತು. ರಾಜನಿಗೆ ಹುಲಿ ಕಾಣಲೇ ಇಲ್ಲ. ಆಗ ಒಂದು ಕಳ್ಳರ ಗುಂಪು ರಾಜನ ಮೇಲೆ ದಾಳಿ ಮಾಡಿ ಅವನ ಬಳಿ ಇದ್ದ ಎಲ್ಲವನ್ನೂ ದೋಚಿ ಪರಾರಿಯಾಯಿತು. ಇದರಿಂದ ಕೆಲವು ಕ್ಷಣಗಳ ಹಿಂದೆ ರಾಜನಾಗಿದ್ದವ ದರಿದ್ರನಾಗಿ ಬಿಟ್ಟ. ಅದೇ ಸ್ಥಳದಲ್ಲಿ ಒಂದು ಕಳ್ಳತನ ನಡೆದಿತ್ತು. ಪೊಲೀಸರು ಕಳ್ಳತನದ ಪ್ರಕರಣದಲ್ಲಿ ಆತನನ್ನು ತಪ್ಪಾಗಿ ಹಿಡಿದು ಜೈಲಿಗೆ ಹಾಕಿದರು. ಒಂದು ದಿನ ಆ ಊರಿನ ರಾಜನ ಮಗಳು ಅಲ್ಲಿಗೆ ಬಂದಳು. ಅವಳು ರಾಜ ಜೈಲಿನಲ್ಲಿ ಬಂಧಿಯಾಗಿರುವುದನ್ನು ಗುರುತಿಸಿ, ತನ್ನ ತಂದೆಗೆ ಎಲ್ಲಾ ವಿಷಯ ತಿಳಿಸಿದಳು. ಕೂಡಲೆ ಆತನನ್ನು ಬಿಡುಗಡೆ ಮಾಡಿ ತಪ್ಪಿಗೆ ಕ್ಷಮೆಯಾಚಿಸಿದ. ಬಳಿಕ ಅವನು ರಾಜಕುಮಾರಿಯನ್ನು ಮದುವೆಯಾದ. ಈ ರೀತಿ ಸ್ವಲ್ಪ ಸಮಯದ ಒಳಗೆ ರಾಜ ಫಕೀರನಾದ ಮತ್ತು ಫಕೀರ ರಾಜನಾದ.[10]

ಪೆನ್ನರಸಿಡೆ ರಾಯ ಇದು ಇನ್ನೊಂದು ಕಥೆ. ಒಬ್ಬ ರಾಜನಿಗೆ ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಒಂದು ದಿನ ರಾಜ ತನ್ನ ಮೂವರು ಗಂಡು ಮಕ್ಕಳನ್ನು ಕರೆದು ಪ್ರತಿಯೊಬ್ಬರಿಗೆ ಒಂದೊಂದು ಕೆಲಸ ಹೇಳಿ ಕಳುಹಿಸಿದ. ಒಬ್ಬನಿಗೆ ವ್ಯಾಪಾರ ಮಾಡಿ ಹಣ ಗಳಿಸಲು ಹೇಳಿದ. ಇನ್ನೊಬ್ಬನಿಗೆ ಕಲಿತು ಪಂಡಿತನಾಗಲು ತಿಳಿಸಿದ, ಮೂರನೇ ಮಗನಿಗೆ ಒಳ್ಳೆ ಕುಸ್ತಿಪಟು ಆಗಿ ಬರಲು ತಿಳಿಸಿದ. ಹೀಗಿರುವಾಗ ವ್ಯಾಪಾರಕ್ಕೆಂದು ಹೊರಟ ಮಗ, ಒಬ್ಬಳು ಹೆಣ್ಣು (ಪೆನ್ನರಸಿ) ಆಳುತ್ತಿದ್ದ ರಾಜ್ಯ ಪ್ರವೇಶಿಸಿದ. ಅಪರಿಚಿತನನ್ನು ಬಂಧಿಸಿ ಆಕೆ ಜೈಲಿನಲ್ಲಿ ಇಟ್ಟಳು. ತನ್ನ ಮೊದಲ ಮಗನನ್ನು ಹುಡುಕಲು ರಾಜ ಬಹಳ ಪ್ರಯತ್ನಿಸಿದ, ತನ್ನ ಜನರನ್ನು ನಾನಾ ಕಡೆಗಳಿಗೆ ಕಳುಹಿಸಿದ. ಕೊನೆಗೆ ತನ್ನ ಇನ್ನಿಬ್ಬರು ಮಕ್ಕಳನ್ನು ಕರೆಯಿಸಿ ತಮ್ಮ ಬುದ್ಧಿಶಕ್ತಿ ಉಪಯೋಗಿಸಿ ಅವನನ್ನು ಕಂಡು ಹುಡುಕಲು ತಿಳಿಸಿದ. ವಿದ್ಯೆ ಕಲಿತು ಪಾರಂಗತ ನಾಗಿದ್ದ ಎರಡನೇ ಮಗ ತನ್ನ ಬುದ್ಧಿಶಕ್ತಿ ಉಪಯೋಗಿಸಿ ತನ್ನ ಅಣ್ಣ ಎಲ್ಲಿದ್ದಾನೆ ಎಂಬುದನ್ನು ಕಂಡುಹಿಡಿದ. ಕುಸ್ತಿಪಟುವಾಗಿದ್ದ ಮೂರನೇ ಮಗ ತನ್ನ ಶಕ್ತಿ ಉಪಯೋಗಿಸಿ ರಾಣಿಯನ್ನು ಸೋಲಿಸಿ, ಕೊಂದು ಹಾಕಿ ಅಣ್ಣನನ್ನು ಬಿಡಿಸಿಕೊಂಡು ಬಂದ.

ಮೂಸಾನೆಬಿ ಇದೊಂದು ಕುರ್‌ಆನ್‌ನಲ್ಲಿ ಬರುವ ಕಥೆ. ಫರೋವನ ನಾಶದೊಂದಿಗೆ ಕಥೆ ಮುಗಿಯುತ್ತದೆ. ಮೂಸಾನೆಬಿ ನಯಿಲ್ ಬಹಾರುಡೊ ಅರ್ಲ್ ಪೋಂಡಾರ್. ಕೈಲ್ ಇನ್ನೊ ಬೆತ್ತತೆ ಬಹಾರ್‌ಗಿಡ್‌ರ್. ಬಹ್ರ್ ಪೊಳಪ್ಪ ಗ್ ನಿಕ್ಕ್‌ರ್. ಇದ್ಲ್ ಇಂಜಿತ್ ಅಕ್ಕರೆ ಎತ್ತ್‌ರ್.

ಫಿರ್‌ಔನುಂ ಲಷ್ಕರುಂ ಬಹಾರಿಲ್ ಇಲಿಡಾರ್. ಮೂಸಾನೆಬಿ ಬೆತ್ತತೆ ಎಡ್‌ಕ್‌ಡಾರ್. ಎಡುಕುಂಬೆ ತನ್ನಿ ಬನ್ನ್‌ತ್ ಕೂಡ್ರು. ಫಿರ್‌ಔನುಂ ಅವುಂಡೆ ಲಷ್ಕರುಂ ಹಲಾಕಾಯಿಟ್ಟ್ ಪೋಂಡು.

ಪ್ರವಾದಿ ಮೂಸಾ ನೈಲ್ ನದಿ ಬಳಿ ತಲುಪಿದ ಬಳಿಕ ತಮ್ಮಲ್ಲಿದ್ದ ಬೆತ್ತವನ್ನು ಅದಕ್ಕೆ ಹಾಕುತ್ತಾರೆ. ಆಗ ನದಿ ಇಬ್ಭಾಗವಾಗಿ ಅವರು ಅದರ ಮೂಲಕ ನದಿ ದಾಟುತ್ತಾರೆ. ಫರೋವಾ ಮತ್ತು ಆತನ ಸೇನೆ ಸಹ ನದಿಗೆ ಇಳಿಯುತ್ತದೆ. ಆಗ ಮೂಸಾನೆಬಿ ತಮ್ಮ ಬೆತ್ತವನ್ನು ಎತ್ತಿಕೊಳ್ಳುತ್ತಾರೆ. ಇಬ್ಭಾಗವಾಗಿದ್ದ ನದಿ ಮತ್ತೆ ಕೂಡಿಕೊಳ್ಳುತ್ತದೆ. ಫರೋವಾ ಮತ್ತು ಆತನ ಸೇನೆ ನೀರಿನಲ್ಲಿ ಮುಳುಗಿ ನಾಶವಾಗಿ ಹೋಗುತ್ತದೆ.

ಬಂಗಾರ್‌ಡೆ ತೂಸಿ ಇದೊಂದು ಕಟ್ಟುಕಥೆ ಆದರೆ ಹೇಳುವ ಶೈಲಿ ಉತ್ತಮವಾಗಿದೆ.

ರಾಜಾವುಂಡೆ ಮೋನುಂ ಪ್ರಧಾನಿಂಡೆ ಮೋನುಂ ಕುದುರೆ ಸವಾರಿ ಪೋಂಡಾರ್. ಆ ರಾಯತ್ತ್ ಏಲ್ ಆಜಲೆಮಾರ್. ಆಂಜಕ್ ಒರು ಪೆಂಜಲ್. ಪೆಂಜಲ್‌ಕ್ ಮೋಲಿ (muoli) ಮುತ್ತು ಕೋಕೊಂಬುತ್‌ಗ್ ಒರು ಮುತ್ತು ಕೊರೊಡಿಯಾಯಿತ್. ಆಂಜಲೆಮಾರ್ ಮುತ್ತು ಕೊನ್ ಬರೋಕು ಪೋಯಾರ್. ಆಂಜಲೆಮಾರೆ ಪೆಂಞಾಯಿಮಾರ್ ಚೊನ್ನಾರ್: 'ಏ ಮದತ್ತೆ ಮಾಂಗೆ, ನೀ ಉಲ್ಲಿಲ್ ದೆಯ್ಯಿತ್ತ್ ನೆಲ್ಲಿಲ್ ಕೈಯಿಡ್.' ನೆಲ್ಲಿಲ್ ಕೈಯಿಡ್‌ಂಬೊತ್ತುಗು ಒರು ತಂಗ್ (thung) ತರಚ್ಚಿತ್ತ್. ದಾದಾ ದಾದಾ ನಂಡೆ ಕೈಯಿಡೆ ತಂಗ್ ಎಡುಕ್ಕೊರು. ಅದ್‌ಕ್ಕ್ ಮೂತೊಲು ಚೊನ್ನಾಲ್ : ಚತ್ತೆ ಕುಮಾರರೆ ವರ್ತನೊ ಮುದ್ದು ಕುಮಾರರೆ ಪೆರನೊ. ನಾನ್ ಬಂಗಾರ್‌ಡೆ ಕುರ್ಸಿಲ್ ದೆಕ್ಕೊನು. ನೀ ಬೆಳ್ಳಿಡೆ ಕುರ್ಸಿಲ್ ದೆಕ್ಕೊನು. ಬಂಗಾರ್‌ಡೆ ಬಟ್ಟಲ್ ಬಂಗಾರ್‌ಡೆ ಬೆತ್ತಲೆರ್ ಬಂಗಾರ್‌ಡೆ ತೂಸಿ ಬೆಯಿ. ಆ ನೆಲಕ್ಕ್ ಕೈಡೆ ತಂಗ್ ಎಡುಕ್ಕುವೆ. ದಾದಮಾರ್ ಅವುಲೆ ಬುಟ್ಟುತ್ ಪೋಂಡಾರ್. ಜಾವುಗು ಒರು ರಕ್ಕಸ ಬಂತ್. ಒರು ಪಲ್ಲ್ ಕಡಿಚಿಟ್ಟ್ ಬುಟ್ಟುತು ಪೋಯಿತ್. ಪಲ್ಲ್‌ನೆತ್ತಿಕ್ ತರಚ್ಚಿತ್ತ್ ಬೆರ್ನಾಲ್ (bernal). ಆಂಜಲೆಮಾರ್ ಬಂಡಾರ್. ಬುಲ್ಪು ಡ್‌ರಾರ್. ಒರು ಪೆಟ್ಟಿ ಆಕ್‌ಪಾಟಿಯಾರ್. ಅದ್ಲ್ ಓಲೆ ಒರ್‌ಕಿಯಾರ್. ಮರತ್ತ್‌ಕ್ ಕೆಟ್ಟಿಯಾರ್.

ರಾಜಾವುಂಡೆ ಮೋನುಗು ಪೆಟ್ಟಿ ಕಿಟ್ಟಿತ್. ಪೆಟ್ಟಿ ಗಿಲಿಚಿಟ್ಟ್ ಬಾಯಿಲ್ ಎಡುತ್ತ. ಬಾಲಕಾರ್ತಿ ಪೆನ್ನ್‌ಮೋಲು. ತಲೆ ನೊರೋಡಿ ಮುಡಿ ಉಂಡು. ರಕ್ಕಸ ಪಲ್ಲ್ ಎಡುಕ್ಕುಡಾರ್. ರಾಜಾವುಂಡೆ ಮೋನು ಮಂಬೂಲ ಆಯಿತ್. ಪೆಂಞಾಯಿಕ್ ಕರ್ಪ ಬಂತ್. ಬಂಗಾರ್‌ಡೆ ಕುರ್ಸಿ, ಬೆಲ್ಲಿಡೆ ಕುರ್ಸಿ, ಬಂಗಾರ್‌ಡೆ ತೂಸಿ ಆಕ್‌ಪಾಟಿಯಾರ್. ಆಜಲೆಮಾರ್ ಎಲ್ಲಾರುಂ ಪೆಂಞಾಯಿಮಾರ್ ಎಲ್ಲಾರುಂ ಬಂಡಾರ್. ಓಲ್‌ಚೆಲ್ದಾಲ್: ದಾದಾ, ದಾದಾ. ನಾನ್ ಬೆಳ್ಳಿಡೆ ಕುರ್ಸಿಲ್ ದೆಯ್ಯೆ ನಿಜ ಬಂಗಾರ್‌ಡೆ ಕುರ್ಸಿಲ್ ದೆಯ್‌ಕೊರು. ಬಂಗಾರ್‌ಡೆ ತೂಸಿಲ್ ನಂಡೊ ಕೈಡೆ ತಂಗ್ ಎಡುಕ್ಕೊರು.

ಓಲ್ ನಡನ್ನ ಬಿಸಯತ್ತೆ ಚೊನ್ನಾಲ್. ಆಜಲೆಮಾರ್ ಪೆಂಞಾಯಿಮಾರೊ ಬುಟ್ಟುತ್ ಅವುಲೊಟ್ಟುಗು ಇಕ್ಕ್‌ಡಾರ್.

ಸಾರಾಂಶ: ಒಬ್ಬ ರಾಜ ಇದ್ದ. ಆತನ ಮಗ ಹಾಗೂ ಮಂತ್ರಿಯ ಮಗ ಒಂದು ಹಳ್ಳಿಗೆ ಹೋಗುತ್ತಾರೆ. ಮರದಲ್ಲಿ ನೇತಾಡುತ್ತಿದ್ದ ಒಂದು ಪೆಟ್ಟಿಗೆ ಅವರ ಕಣ್ಣಿಗೆ ಬೀಳುತ್ತದೆ. ಅದನ್ನು

ತೆರೆದು ನೋಡಿದಾಗ ಒಬ್ಬಳು ಚೆಲುವೆ ಆದರಲ್ಲಿ ಇರುತ್ತಾಳೆ. ರಾಜನ ಮಗ ಆಕೆಯನ್ನು ಮದುವೆಯಾಗುತ್ತಾನೆ. ಆ ರಾಣಿ ಗರ್ಭಿಣಿಯಾಗುತ್ತಾಳೆ. ಆಕೆ ಒಂದು ಬಂಗಾರದ ಕುರ್ಚಿ, ಬೆಳ್ಳಿಯ ಕುರ್ಚಿ ಮತ್ತು ಒಂದು ಬಂಗಾರದ ಸೂಜಿಯನ್ನು ಮಾಡಿ ತನ್ನ ಸಹೋದರರನ್ನು ಔತಣಕ್ಕೆ ಕರೆಯುತ್ತಾಳೆ. ತನ್ನ ಸಹೋದರರ ಪತ್ನಿಯರಿಗೆ ಆಕೆ ಹೇಳುತ್ತಾಳೆ: ದಾದಾ ದಾದಾ, ನೀವು ದಯವಿಟ್ಟು ಬಂಗಾರದ ಕುರ್ಚಿಯಲ್ಲಿ ಕುಳಿತುಕೊಳ್ಳಿ, ನಾನು ಬೆಳ್ಳಿಯ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೇನೆ. ಬಂಗಾರದ ಸೂಜಿ ರೆಡಿಯಿದೆ. ಬನ್ನಿ.. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯ ಆಗುತ್ತದೆ. ಆಕೆ ಎಲ್ಲಾ ಕಥೆಯನ್ನು ಹೇಳುತ್ತಾಳೆ. ಆಕೆಯ ಸಹೋದರರ ಹೆಂಡತಿಯರು ಆಕೆಯನ್ನು ಮನೆಯಿಂದ ಹೊರಗೆ ಅಟ್ಟಿರುವುದು ಎಲ್ಲರಿಗೂ ಅರಿವಾಗುತ್ತದೆ. ಆಕೆಯ ಸಹೋದರರು ಹೊರಗೆ ಹೋಗಿದ್ದಾಗ, ಆಕೆಯ ಕೈಗೆ ಚುಚ್ಚಿದ್ದ ಮೊಳೆಯನ್ನು ತೆಗೆಯಲು ಅವರು ನಿರಾಕರಿಸಿದ್ದರು. ಆಕೆ ನಿಶ್ಶಕ್ತಿಯಿಂದ ಸಾಯಬೇಕು ಎಂಬುವುದು ಅವರ ಬಯಕೆಯಾಗಿತ್ತು. ಇದನ್ನು ಕೇಳಿ ಸಹೋದರರು ತಮ್ಮ ಹೆಂಡತಿಯರನ್ನು ಬಿಟ್ಟು ಬಿಟ್ಟರು.

ಪೋಕರಾಕಡೆ ನೇರ್ಚ ಎಂಬ ಸಣ್ಣ ಕಥೆ ಉಲ್ಲಾಸದಾಯಕವಾಗಿದ್ದು ಆಕರ್ಷಿಸುತ್ತದೆ.

ಪೋಕರಾಕಡೆ ಪೈ ನಲ್ಲೆ ಪಾಲ್ ಕೊಡುತ್ತೋಂಟು ಇಂತ್. ಒರುನಾಲ್ ಪೈಕ್ ಸೀಕ್ ಸುರುವಯಿತ್. ಪೋಕರಾಕಡೆ ಪೆಂಞಾಯಿ ಒರು ನೇರ್ಚ ವೆಯಿಪಾಟ್ಟಿತ್ತ್. ಸೀಕ್ ಸುಮರಾಯೆಂಗ್ ಅದ್ರೆ ಬಿತ್ತ್ ಕಾಸ್ ಮುಕಾಮುಗು ಕೊಡುಕ್ಕುರೆ. ಸೀಕ್ ಕೊರೋಡಿ ಆಯೋಂಟು ಬಂತ್. ಎಂದಾಕ್‌ರೊ, ಇತ್ತರೆ ನಲ್ಲೆ ಪೈಡೊ ಬಿಕ್ಕ್‌ರೆ, ಮುಕಾಮುಗು ಕೊಡುಕ್ಕುರೊ ಚೊನ್ನೆಂಗ್ ಬೇಜಾರ್‌ಡೆ ಬಿಸಯ ಅಲ್ಲೆ. ಆಯಾಲ್‌ಗೆ ಒರು ಬಿಯಾರ ಬಂತ್. ಈ ಪೈಡೆ ಪಿನ್ನೆ ಒರು ಪೂಚೆಡೆ ಎಡುತ್ತೋಂಡು ಸಂತೆಗ್ ಪೋಯಿತ್ತ್. ಅವುಡೆ ಒರು ಬೋರ್ಡ್. ಪೈಯಿಡೆ ಬೆಲೆ 5 ಉರುಪೆ ಪೂಚೆಡೊ ಬೆಲೆ 2000ಉರುಪೆ. ಪೂಚೆ ಎಡುತ್ತಂಕ್ ಮಾತ್ರ ಪೈಡೆ ಬಿಕ್ಕ್‌ಡೆ. ಗಿರಾಕಿ ಬಂತ್. ಪೋಕರಾಕ ಮುಕಾಮುಗ್ ಪೋಯಿತ್ 5ಉರುಪೆ ಇಟ್ಟ್‌ತ್ ದುವಾರ್ನ್‌ತ್ ಬಂತ್. 2000 ಉರುಪೆಲ್ ಕಚ್ಚವಡ ಆಕಿತ್ತ್, ಕಚ್ಚವಡಕಾರ್ ಆಯಿತ್.[11]

ಸಾರಾಂಶ : ಪೋಕರಾಕನಿಗೆ ಒಂದು ಒಳ್ಳೆ ಹಾಲು ನೀಡುವ ಹಸು ಇತ್ತು. ಆದಕ್ಕೆ ಒಂದು ದಿನ ಆರೋಗ್ಯ ಕೈಕೊಟ್ಟಿತು. ಹಸುವಿನ ಆರೋಗ್ಯ ಸರಿಯಾದರೆ ಅದನ್ನು ಮಾರಿ ದರ್ಗಾಕ್ಕೆ ಹಣ ನೀಡುವುದಾಗಿ ಹೆಂಡತಿ ನೇರ್ಚ ಇಟ್ಟಳು. ಹಸುವಿನ ಆರೋಗ್ಯ ಸರಿಯಾಯಿತು. 2000 ರೂ. ಬೆಲೆಬಾಳುವ ಹಸುವನ್ನು ಮಾರಿ ದರ್ಗಾಕ್ಕೆ ಹಣ ನೀಡುವ ವಿಷಯ ನೆನಪಿಸಿ ಪೋಕರಾಕನಿಗೆ ತಲೆಬಿಸಿಯಾಯಿತು. ಆತ ಒಂದು ಪ್ಲಾನ್ ಮಾಡಿದ. ಒಂದು ಬೋರ್ಡ್ ಹಾಕಿದ. ಹಸುವಿಗೆ ರೂ. 5, ಬೆಕ್ಕಿಗೆ ರೂ. 2000. ಯಾರು ಬೆಕ್ಕನ್ನು ಕೊಳ್ಳುತ್ತಾರೊ ಅವರಿಗೆ ಮಾತ್ರ ಹಸುವನ್ನು ಸಹ ಮಾರಲಾಗುವುದು. ಹಸುವಿನ ವ್ಯಾಪಾರ ಆಯಿತು. ಪೋಕರಾಕ 5 ರೂ. ಮುಕಾಮಿಗೆ ಹಾಕಿ ಉಳಿದ 2000 ರೂ. ವ್ಯಾಪಾರ ಮಾಡಿ ಮುಂದೆ ವ್ಯಾಪಾರಿಯಾದ.

2. ಅರಬ್ಬಿ ಮಲಯಾಳಂ ಮತ್ತು ಮಾಪಿಳ್ಳೆಪಾಟ್ಟು

ಬ್ಯಾರಿ ಭಾಷೆ ಒಂದು ಆಡು ಭಾಷೆಯಾಗಿದ್ದು, ಮಾಪಿಳ್ಳೆ ಮೌಲವಿಗಳು ಧಾರ್ಮಿಕ ಶಿಕ್ಷಣವನ್ನು ಮದ್ರಸಾಗಳಲ್ಲಿ ಅರಬ್ಬಿ ಮಲಯಾಳದಲ್ಲಿ ಕಲಿಸುತ್ತಿದ್ದರು. ಈ ಮೂಲಕ ಅರಬ್ಬಿ ಮಲಯಾಳ ಧಾರ್ಮಿಕ ಶಿಕ್ಷಣ ಕಲಿಕೆಯ ಮಾಧ್ಯಮವಾಯಿತು. ಇಸ್ಲಾಂ ಹಲವು ಆಚರಣೆಗಳ ಧರ್ಮವಾಗಿದೆ. ದಿನನಿತ್ಯದ ಸಲಾತ್ (ಪ್ರಾರ್ಥನೆ), ಉಪವಾಸ, ಝಕಾತ್ ಕಡ್ಡಾಯ ವಾಗಿದೆ. ಇವುಗಳನ್ನು ನಿರ್ವಹಿಸಲು ಕುರ್‌ಆನಿನ ಬಗ್ಗೆ ಜ್ಞಾನ, ಪ್ರಾರ್ಥನೆಗಳಲ್ಲಿ ಆದರ ಪಾರಾಯಣ, ಶುದ್ಧಿ ಖಿಸುಲು, ವಝು, ಫರ್ಝ್ ಮತ್ತು ಸುನ್ನತ್, ಉಪವಾಸ ಮತ್ತು ಇತರ ಆಚರಣೆಗಳ ಬಗ್ಗೆ ಜ್ಞಾನದ ಅಗತ್ಯವಿದೆ. ಧಾರ್ಮಿಕ ಕಾರ್ಯಗಳ ಪಾರಾಯಣ ಮತ್ತು ನಿರ್ವಹಣೆಗೆ ಪ್ರತಿಯೊಬ್ಬ ಮುಸ್ಲಿಮ್ ತರಬೇತಿ ಪಡೆಯುವ ಆವಶ್ಯಕತೆಯಿದೆ. ಮಸೀದಿಗಳು ಮೊದಲ ತರಬೇತಿ ಕೇಂದ್ರಗಳಾಗಿದ್ದವು. ಮತ್ತು ಮೊತ್ತಮೊದಲ ಶಿಕ್ಷಕರೆಂದರೆ ಧರ್ಮ ಬೋಧಕರು ಮತ್ತು ಮೌಲ್ವಿಗಳು. ಇವರು ಪ್ರತಿಯೊಂದು ಮಸೀದಿಗಳಲ್ಲಿ ಧರ್ಮಬೋಧನೆ ಕಾರ್ಯ ಮಾಡುತ್ತಿದ್ದರು. ಮುಸ್ಲಿಮರ ಮಸೀದಿ ಅಥವಾ ಪಳ್ಳಿ ಧಾರ್ಮಿಕ ತರಬೇತಿ, ಮುಸ್ಲಿಮರ ಸಂಸ್ಕೃತಿ ಎಲ್ಲದಕ್ಕೂ ಕೇಂದ್ರವಾಗಿತ್ತು. ಇದನ್ನು 'ಓತುಪಳ್ಳಿ' ಎನ್ನಲಾಗುತ್ತಿತ್ತು. ಆದರೆ ಕ್ರಮೇಣ ಶಿಕ್ಷಣಕ್ಕೆ ಸಂಘಟಿತ ಸ್ವರೂಪ ಬಂದ ಬಳಿಕ ಈ 'ಓತುಪಳ್ಳಿ' ಮಸೀದಿಯಿಂದ ಪ್ರತ್ಯೇಕಗೊಂಡು ಮದ್ರಸಾ ರೂಪುಗೊಂಡಿತು. ಇದನ್ನು ಕುರ್‌ಆನ್ ಶಾಲೆ ಅಥವಾ ಅರಬ್ಬಿ ಶಾಲೆ ಎನ್ನಲಾಗುತ್ತಿತ್ತು. ಖಾಸಗಿಯಾಗಿ ಕೆಲವು ಮನೆ ಮತ್ತು ಅಂಗಡಿಗಳು ಓತುಪಳ್ಳಿಯಾಗಿ ಮುಸ್ಲಿಮರಿಗೆ ತರಬೇತಿ ನೀಡಲು ಆರಂಭಿಸಿದವು. ತುಳುನಾಡು ಜಿಲ್ಲೆಯಲ್ಲಿ[12] ಇಂತಹ ಹಲವು ಓತುಪಳ್ಳಿಗಳು ಇದ್ದವು. ಈ ಮದ್ರಸಾಗಳಲ್ಲಿ ಸಾಮಾನ್ಯವಾಗಿ ಇಸ್ಲಾಮಿಗೆ ಸಂಬಂಧಿಸಿದ ಧಾರ್ಮಿಕ ವಿಚಾರಗಳು ಮತ್ತು ಮಲಬಾರಿನ ಮಾಪಿಳ್ಳೆಗಳಲ್ಲಿ ಸಾಮಾನ್ಯವಾಗಿರುವ ಧರ್ಮಕ್ಕೆ ಸಂಬಂಧಿಸಿದ ಸಂಸ್ಕೃತಿಯನ್ನು ಕಲಿಸಲಾಗುತ್ತಿತ್ತು. ಈ ಮೂಲಕ ತುಳುನಾಡಿನ ಬ್ಯಾರಿಗಳ ಮೇಲೆ ಅರಬ್ಬಿ ಮಲಯಾಳವನ್ನು ಹೇರಲಾಯಿತು. ಮಾಪಿಳ್ಳೆಗಳ ಪ್ರಮುಖ ಕೊಡುಗೆಯಾದ 'ಮಾಪಿಳ್ಳಪಾಟ್ಟು' ಬ್ಯಾರಿ ಸಂಸ್ಕೃತಿಯ ಪ್ರಮುಖ ಭಾಗವಾಯಿತು. ಧಾರ್ಮಿಕ ಶಿಕ್ಷಣದ ಪ್ರಾಥಮಿಕ ಪಠ್ಯಪುಸ್ತಕ ಅರಬ್ಬಿ ಮಲಯಾಳ ಭಾಷೆಯಲ್ಲಿತ್ತು. ಧಾರ್ಮಿಕ ಶಿಕ್ಷಣ ಪಡೆಯಲು ಬೇರೆ ಭಾಷಾ ಮಾಧ್ಯಮ ಇರಲಿಲ್ಲ.

ಧಾರ್ಮಿಕ ಶಿಕ್ಷಣ ನೀಡಲು ಮಾಪಿಳ್ಳೆ ಮಲಯಾಳಿಗಳು ಬಳಸುತ್ತಿದ್ದ ಭಾಷೆ ಅರಬ್ಬಿ ಮಲಯಾಳಂ ಆಗಿತ್ತು. ಇಲ್ಲಿ ಮಲಯಾಳಂ ಬರೆಯಲು ಅರಬ್ಬಿ ಅಕ್ಷರಗಳನ್ನು ಬಳಸಲಾಗುತ್ತಿತ್ತು. ಮೂಲದಲ್ಲಿ ಒಟ್ಟು 35 ಅಕ್ಷರಗಳನ್ನು ಈ ಭಾಷೆಗೆ ಹೊಂದಿಸಲಾಗಿತ್ತು. ಆದರೆ ಮಲಯಾಳಂ ಶಬ್ದಗಳನ್ನು ಸಮರ್ಪಕವಾಗಿ ಪ್ರತಿನಿಧಿಸಲು ಸಾಧ್ಯವಾಗದ ಕಾರಣ ಬಳಿಕ ಕೆಲವು ಹೊಸ ಅಕ್ಷರಗಳನ್ನು ಸೇರಿಸಿ ಅದನ್ನು 50 ಮಾಡಲಾಯಿತು. ಈ ಮೂಲಕ ಧಾರ್ಮಿಕ ಶಿಕ್ಷಣ ನೀಡಲು ಅದನ್ನು ಸೂಕ್ತವಾಗಿ ಮಾರ್ಪಡಿಸಲಾಯಿತು. ದೊಡ್ಡ ಸುಧಾರಕರಾಗಿದ್ದ ಸೈಯದ್ ಸನಾವುಲ್ಲಾ ಮಖ್ತಿ ತಂಙಳ್ ಅವರು ಅದಕ್ಕೆ ಉದ್ದೇಶ ಸಾಧನೆಗೆ ಬೇಕಾದ ರೂಪು ನೀಡಿದರು. ಅವರು ಅರಬ್ಬಿ ಮಲಯಾಳಂನ ಸುಧಾರಣೆ ಮತ್ತು ಬೆಳವಣಿಗೆ ಬಗ್ಗೆ ಮುಅಲ್ಲಿಮುಲಿಖ್ವಾನ್ ರಚಿಸಿದರು. ಅರಬ್ಬಿ ಮಲಯಾಳಂ ಅನ್ನು ಬರವಣಿಗೆಯ ಮತ್ತು ಕಲಿಕೆಯ ಮಾಧ್ಯಮವನ್ನಾಗಿ

ಮಾಡಲು ವಕ್ಕಂ ಅಬ್ದುಲ್ ಖಾದರ್ ಮೌಲ್ವಿ, ಕುಂಞಮ್ಮದ್ ಹಾಜಿ ಮತ್ತು ಮೊಯಿದು ಮುಸ್ಲಿಯಾರ್ ಪ್ರಮುಖ ಪಾತ್ರ ವಹಿಸಿದರು.[13] ಮಾಪಿಳ್ಳೆ ಸಾಹಿತ್ಯವನ್ನು ಪ್ರೋತ್ಸಾಹಿಸಿದ ಅವರು, ಹಲವು ಧಾರ್ಮಿಕ ಪುಸ್ತಕಗಳು ಹಾಗೂ ಮದ್ರಸಾ ಪಠ್ಯಗಳನ್ನು ರಚಿಸಿದರು. 19ನೇ ಶತಮಾನದ ವೇಳೆಗೆ ಜಾನಪದ ಹಾಡುಗಳು ಮತ್ತು ಪ್ರಶಂಸಿಸುವ ಹಾಡುಗಳಾದ ಮೌಲೂದ್ ಗಳು, ರಾತೀಬ್‌ಗಳು ಮತ್ತು ಮಾಲಾಪಾಟ್ಟುಗಳನ್ನು ಒಳಗೊಂಡ ಮಾಪಿಳ್ಳೆ ಪಾಟ್ಟುಗಳು ಸಾಮಾನ್ಯವಾಗಿದ್ದವು. ಇವುಗಳಲ್ಲಿ ಹಲವು 19ನೇ ಶತಮಾನ ಅಥವಾ ಅದಕ್ಕೂ ಮೊದಲೇ ರಚನೆಯಾಗಿದ್ದವು. ಅರಬ್ಬಿ ಮಲಯಾಳಂ ಭಾಷೆಗೆ ಕುರ್‌ಆನ್‌ನ ಭಾಷಾಂತರ ಕಾರ್ಯ ಮೊದಲು ಮಾಡಿದವರು ಅರಕ್ಕಾಡ್ ಮಾಹಿನ್ ಕುಟ್ಟಿ ಎಲಿಝು ಎಂದು ಕಾಣುತ್ತದೆ. ಇದೇ ರೀತಿ ಧಾರ್ಮಿಕ ಬೋಧನೆಗೆ ಉಪಯುಕ್ತವಾದ ಹಲವು ಕೃತಿಗಳು ಸಹ ಇದ್ದವು. ಉಮದತುಲ್ ಮುಸಲ್ಲೀನ್, ಫತಹುಲ್ ಫತಾಹ್, (ಶುಜಾಯಿ ಮುಬಿದುದ್ದೀನ್ ಮುಸ್ಲಿಯಾರ್) ಮತ್ತು ವಕ್ಕಂ ಮೌಲಾ ಅವರು ಅನುವಾದಿಸಿದ ಕೀಮಿಯ ಸಆದ ಪ್ರಮುಖ ಕೃತಿಗಳು. ಫಿಕ್ಹ್ ಬಗ್ಗೆ 1574ರಲ್ಲಿ ಪೊನ್ನಾನಿ ಮುಖದ್ದಮ್ ಆಗಿದ್ದ ಝೈನುದ್ದೀನ್ ಸೀನಿಯರ್ ಅವರು ಬರೆದ ಫತಹುಲ್ ಮುಯೀನ್ ಜನಪ್ರಿಯವಾಗಿತ್ತು. ಝೈನುದ್ದೀನ್ ಜೂನಿಯರ್ ಅವರು 'ತುಹ್ಫತುಲ್ ಮುಜಾಹಿದೀನ್' ಎಂಬ ಕೃತಿಯನ್ನು ಬರೆದು ಸುಲ್ತಾನ್ ಅಲಿ ಆದಿಲ್ ಶಾಹ ಬಿಜಾಪುರ ಅವರಿಗೆ ಸಮರ್ಪಿಸಿದ್ದರು. ಈ ಎಲ್ಲಾ ಕೃತಿಗಳನ್ನು ತುಳುನಾಡಿನ ಮದ್ರಸಾ ಮತ್ತು 'ಪಳ್ಳಿ ದರ್ಸ್' (ಮಸೀದಿ ಶಾಲೆಗಳು) ಗಳಲ್ಲಿ ಬಳಸಲಾಗುತ್ತಿತ್ತು. ಬಹುತೇಕ ಈ 'ದರ್ಸ್ ಕಿತಾಬ್'ಗಳನ್ನು ಅರಬ್ಬಿ ಮಲಯಾಳಂ ಭಾಷೆಗೆ ಅನುವಾದಿಸುವ ಪ್ರಯತ್ನಗಳು ನಡೆದಿದ್ದವು. ಬ್ಯಾರಿ ಮದ್ರಸಾ ಮತ್ತು ದರ್ಸ್‌ಗಳಲ್ಲಿ ಆರಂಭದ ಹಂತದಲ್ಲಿ ಈ ಅರಬ್ಬಿ ಮಲಯಾಳಂ ಶೈಕ್ಷಣಿಕ ಸಾಹಿತ್ಯಗಳು ಜನಪ್ರಿಯವಾಗಿದ್ದವು. ಆದರೆ ಬ್ಯಾರಿ ವಲಯದಲ್ಲಿ ಅಂತಹ ಕೃತಿಗಳಿಗೆ ಪ್ರತಿಕ್ರಿಯೆ ಅಷ್ಟಾಗಿ ಇರಲಿಲ್ಲ.

ಮೌಲೂದ್ ಮತ್ತು ರಾತೀಬ್‌ಗಳು ಅರಬ್ಬಿಯಲ್ಲಿ ಬರೆದ ಇನ್ನೊಂದು ಆರಂಭಿಕ ಸಾಹಿತ್ಯ ಸರಣಿಗಳಾಗಿವೆ. ಇವುಗಳಲ್ಲಿ ಮಂಖೂಸ್ ಮೌಲೂದ್ ಹೆಚ್ಚು ಜನಪ್ರಿಯವಾಗಿತ್ತು. ಇದನ್ನು ಮಾಪಿಳ್ಳೆಗಳು ಮತ್ತು ಬ್ಯಾರಿಗಳು ಎಲ್ಲಾ ಸಂತೋಷದ ಮತ್ತು ಕೆಟ್ಟ ಸಂದರ್ಭಗಳಲ್ಲಿ ಪಾರಾಯಣ ಮಾಡುತ್ತಿದ್ದರು. ಬ್ಯಾರಿಗಳ ನಡುವೆ ಇದು ಹೆಚ್ಚು ಜನಪ್ರಿಯ ಧಾರ್ಮಿಕ ಕಾರ್ಯವಾಗಿತ್ತು. ಇದನ್ನು ಕ್ರಿ.ಶ 1521ರಲ್ಲಿ ಪೊನ್ನಾನಿಯ ಝೈನುದ್ದೀನ್ ಬಿನ್ ಅಲಿ ಅವರು ರಚಿಸಿದರು. ಬದ್ರ್ ಮೌಲೂದ್ ಇಂತಹ ಇನ್ನೊಂದು ರಚನೆ. ಇಲ್ಲಿ ಹಲವು ಮೌಲೂದ್‌ಗಳು ಇದ್ದರೂ ಅವು ಅಷ್ಟು ಜನಪ್ರಿಯವಾಗಿಲ್ಲ. ಮುಹಿಯುದ್ದೀನ್ ರಾತೀಬ್ ಒಂದು ಜನಪ್ರಿಯ ಸಾಹಿತ್ಯವಾಗಿತ್ತು. ಬ್ಯಾರಿಗಳು ಕುತುಬಿಯತ್ ಮತ್ತು ಹದ್ದಾದ್ ರಾತೀಬ್‌ಗಳನ್ನು ಸಾಮಾನ್ಯ ವಾಗಿ ಆಚರಣೆ ಮಾಡುತ್ತಿದ್ದರು. ದೇವರನ್ನು ಸ್ತುತಿಸುವ ರಾತೀಬ್ ಅನ್ನು ಧಾರ್ಮಿಕ ಕ್ರಿಯೆ ಯಾಗಿ ಪರಿಗಣಿಸಲಾಗುತ್ತಿತ್ತು. ಬ್ಯಾರಿಗಳು ಅದನ್ನು ಆಗಾಗ್ಗೆ ನೇರ್ಚ (ಹರಕೆ)ಯಾಗಿ ಬಳಸುತ್ತಿದ್ದರು. ದಪ್ಪ್ ರಾತೀಬ್ ಅಂದರೆ ದಪ್ಪ್ (ಮ್ಯೂಸಿಕ್) ನೊಂದಿಗಿನ ರಾತೀಬ್. ಮೌಲೂದ್ ಮತ್ತು ರಾತೀಬ್‌ಗಳು ಬ್ಯಾರಿಗಳಲ್ಲಿ ಜನಪ್ರಿಯವಾಗಿ, ಧಾರ್ಮಿಕ ವಿಧಿಗಳ ಭಾಗ ವಾಗಿ ಮಾರ್ಪಟ್ಟಿತ್ತು. ಪ್ರತಿ ವರ್ಷ ಮಸೀದಿಗಳಲ್ಲಿ ಮೌಲೂದ್ ಮತ್ತು ರಾತೀಬ್‌ಗಳು

ನಡೆಯುವುದರೊಂದಿಗೆ ಹಲವು ಸಂದರ್ಭಗಳಲ್ಲಿ ವೈಯಕ್ತಿಕವಾಗಿ ಕುಟುಂಬ ಹಂತಗಳಲ್ಲಿಯೂ ಮೌಲೂದ್ ಮತ್ತು ರಾತೀಬ್‌ಗಳನ್ನು ನಡೆಸಲಾಗುತ್ತಿತ್ತು. ಇವು ಅತ್ಯಂತ ಅಗತ್ಯದ ಧಾರ್ಮಿಕ ಸಾಹಿತ್ಯವಾಗಿ ಮಾರ್ಪಟ್ಟವು.[14]

ಮಾಪಿಳ್ಳೆಪಾಟ್ಟು : ಇದು ಸಂಸ್ಕೃತಿಯ ಭಾಗವಾಗಿ ಅಂಗೀಕರಿಸಿರುವ ಇನ್ನೊಂದು ಸಾಹಿತ್ಯದ ಸರಣಿಯಾಗಿದೆ. ಇವು ಮಾಪಿಳ್ಳೆ ಭಾಷೆಯಲ್ಲಿ ಅಥವಾ ಬ್ಯಾರಿ ಭಾಷೆ, ತುಳು, ಕನ್ನಡ, ಅರೇಬಿಕ್, ಹಿಂದುಸ್ತಾನಿ ಇತ್ಯಾದಿ ಮಿಶ್ರ ಭಾಷೆಗಳಲ್ಲಿರುವ ಆಕರ್ಷಕ ಹಾಡುಗಳಾಗಿವೆ. ಇವುಗಳಲ್ಲಿ ಮುಖ್ಯವಾಗಿ 1) ಕಿಸ್ಸಪಾಟ್ಟು 2) ಮಾಲಪಾಟ್ಟು 3) ಒಪ್ಪನಪಾಟ್ಟು 4) ಮ್ಯೊಲಾಂಜಿ ಪಾಟ್ಟು 5) ಅಮ್ಮಾಯಿಪಾಟ್ಟು ಮತ್ತು 6) ತಾಲೇಲ ಪಾಟ್ಟು

ಕಿಸ್ಸಪಾಟ್ಟು : ಇವು ಪ್ರವಾದಿ ಹಾಗೂ ಅವರ ಅನುಯಾಯಿಗಳ ಶೌರ್ಯ ಸಾಧನೆಗಳನ್ನು ಬಣ್ಣಿಸುವ ಹಾಡುಗಳು. ಮೊಯಿನ್‌ಕುಟ್ಟಿ ವೈದ್ಯರ್ (1857–1891) ಇವರನ್ನು ಕಿಸ್ಸಾಪಾಟ್ಟು ರಾಜ ಎಂದು ಕರೆಯಲಾಗುತ್ತಿತ್ತು. ಇವರ ಬದ್ರುಲ್ ಮುನೀರ್ ಹಸನುಲ್ ಜಮಾಲ್ ಜನಪ್ರಿಯ ಸಾಹಿತ್ಯವಾಗಿತ್ತು. ಕಿಸ್ಸಾಪಾಟ್ಟುಗಳಲ್ಲೇ ಬದ್ರುಲ್ ಕಿಸ್ಸಾ ಹೆಚ್ಚು ಜನಪ್ರಿಯವಾಗಿತ್ತು. ಅದು ಬ್ಯಾರಿಗಳ ನಡುವೆ ಒಂದು ಧಾರ್ಮಿಕ ಕ್ರಿಯೆಯ ಭಾಗವಾಗಿ ಮಾರ್ಪಟ್ಟಿತ್ತು. ಬದ್ರುಪಾಟ್ಟು ಹಾಡಲು ಆಗಾಗ್ಗೆ ನೇರ್ಚಗಳನ್ನು ಆಯೋಜಿಸಲಾಗುತ್ತಿತ್ತು. ಬದ್ರ್ ಯುದ್ಧದಲ್ಲಿ ಪ್ರವಾದಿ ಅವರ ಸಾಧನೆಯನ್ನು ಇದು ವರ್ಣಿಸುತ್ತದೆ. ಇದರೊಂದಿಗೆ ಬ್ಯಾರಿಗಳು ಹಲವು ಸಂದರ್ಭಗಳಲ್ಲಿ ಉಹುದ್, ಉನೈನ್, ಕರ್ಬಲಾ, ಮದೀನತ್ ಮಾಲಾ, ಮಲಪ್ಪುರಂ ಮಾಲಾ ಇತ್ಯಾದಿಗಳನ್ನು ಸಹ ಹಾಡುತ್ತಿದ್ದರು.

ಮಾಲಪಾಟ್ಟು ಇದು ಅರಬ್ಬಿ ಮಲಯಾಳದಲ್ಲಿದ್ದ ಇನ್ನೊಂದು ಸಾಹಿತ್ಯದ ಸರಣಿ. ಈ ಮೌಲಿದ್ ಹಾಡುಗಳು ಹಲವು ಸಂತರು ಮತ್ತು ಹೀರೊಗಳ ಜೀವನದ ಸಾಧನೆಗಳು ಮತ್ತು ಪ್ರಾಮುಖ್ಯತೆಯನ್ನು ವಿವರಿಸುತ್ತಿದ್ದವು. ಅತ್ಯಂತ ಹಳೆಯ ಮಾಲಾಪಾಟ್ಟು ಅಂದರೆ ಬಹುಶಃ ಕುಂಞನ್ ಮುಸ್ಲಿಯಾರ್ (1151) ಅವರ ನೂಲಾಮಾಲ. ಇನ್ನೊಂದು ಜನಪ್ರಿಯ ಮಾಲಾ ಅಂದರೆ ಮೊಹಿಯುದ್ದೀನ್ ಮಾಲಾ. ಇದು ಬ್ಯಾರಿಗಳ ನಡುವೆ ಧಾರ್ಮಿಕ ಕ್ರಿಯೆಯ ಸ್ಥಾನವನ್ನು ಪಡೆದಿತ್ತು. ಇದು 19ನೇ ಶತಮಾನ ಹಾಗೂ 20ನೇ ಶತಮಾನದ ಆರಂಭದ ಕಾಲದಲ್ಲಿ ಅತ್ಯಂತ ಜನಪ್ರಿಯವಾಗಿತ್ತು. ಇದನ್ನು ಖ್ವಾದಿ ಮುಹಮ್ಮದ್ ಎಂದು ಸಾಮಾನ್ಯವಾಗಿ ಗುರುತಿಸಿಕೊಂಡಿದ್ದ ಮುಹಮ್ಮದ್ ಬಿನ್ ಅಬ್ದುಲ್ ಅಜೀಜ್ ಬರೆದಿದ್ದರು. ಅವರು 1607 ರಲ್ಲಿ ಕ್ಯಾಲಿಕಟ್‌ನ ಖ್ವಾದಿ ಆಗಿದ್ದರು. ಇವುಗಳೊಂದಿಗೆ ಬದ್ರ್ ಮಾಲಾ, ನಫೀಸತ್ ಮಾಲಾ ಸಹ ಬ್ಯಾರಿಗಳಿಗೆ ಸಾಮಾನ್ಯವಾಗಿತ್ತು. ಖ್ವಾದಿ ಬಾಪಕುಂಞ್ ಮುಸ್ಲಿಯಾರ್ ಬರೆದ ಸೈಯದ್ ಮದನಿ ಮಾಲಾ ಕೂಡಾ ಜನಪ್ರಿಯವಾಗಿತ್ತು. ಈ ಎಲ್ಲಾ ಮಾಲಾಗಳು ಅರಬ್ಬಿ ಮಲಯಾಳಂ ಭಾಷೆಯಲ್ಲಿದ್ದವು.

ಮ್ಯೊಲಾಂಜಿ ಪಾಟ್ಟು ಆಕರ್ಷಕ ಹಾಡುಗಳಾಗಿದ್ದವು. ಇದು ಮಾಪಿಳ್ಳೆಗಳು ಮತ್ತು ಬ್ಯಾರಿಗಳ ನಡುವೆ ಸಾಮಾನ್ಯವಾಗಿತ್ತು. ಇದನ್ನು ಮದುಮಗಳ ಮನೆಯಲ್ಲಿ ಮ್ಯೊಲಾಂಜಿ ದಿನ (ಮೆಹೆಂದಿ ದಿನ) ಅಂದರೆ ಸಾಮಾನ್ಯವಾಗಿ ಮದುವೆಯ ಒಂದು ದಿನ ಹಿಂದೆ ಹಾಡಲಾಗುತ್ತಿತ್ತು. ಮಹಿಳೆಯರು ಸುತ್ತುವರಿದು ಕೆಲವೊಮ್ಮೆ ಕೈಯನ್ನು ತಟ್ಟಿಕೊಂಡು ಹಾಡುತ್ತಿದ್ದರು.

'ಒಪ್ಪನಪಾಟ್ಟು' ಇದು ಮದುವೆ ಸಂದರ್ಭದಲ್ಲಿ ಹಾಡುವ ಇನ್ನೊಂದು ಪ್ರಾಕಾರ. ಮದುವೆ ಸಂದರ್ಭದಲ್ಲಿ ಅಂದರೆ, ಆರಕ್ಕಿಡಲ್ ಅಥವಾ ಮೆರವಣಿಗೆ ಅಥವಾ ಒಪ್ಪನದ ಸಮಯದಲ್ಲಿ ಬ್ಯಾರಿಗಳು ಈ ಹಾಡುಗಳನ್ನು ಹಾಡುತ್ತಿದ್ದರು. ಮದುಮಗ ಮತ್ತು ಮದುಮಗಳಿಗೆ ಅತ್ತೆ (ಮಾಮಿ) ನೀಡುವ ಆತಿಥ್ಯವನ್ನು ಬಣ್ಣಿಸುವ 'ಅಮ್ಮಾಯಿಪಾಟ್ಟು' ಮದುವೆ ಸಮಾರಂಭಕ್ಕೆ ಕಳೆ ತರುತ್ತಿದ್ದವು. ಇನ್ನೊಂದು ಸಾಮಾನ್ಯ ಹಾಡು ಅಂದರೆ 'ತಾಲೋಲಿಪಾಟ್ಟು'. ಇದನ್ನು ತೊಟ್ಟಿಲು ಸಮಾರಂಭದ ವೇಳೆ ಹಾಡಲಾಗುತ್ತಿತ್ತು. ಇದು ಮಗುವನ್ನು ಮಲಗಿಸುವ ಜೋಗುಳದ ಹಾಡಾಗಿತ್ತು. ಈ ಎಲ್ಲಾ ಮಾಪಿಳ್ಳೆಪಾಟ್ಟುಗಳನ್ನು ಮೌಲ್ವಿಗಳು ಓತುಪಳ್ಳಿ ಅಥವಾ ಮದ್ರಸಾ ದಲ್ಲಿ ಕಲಿಸುತ್ತಿದ್ದರು. ಕೆಲವೊಮ್ಮೆ ಯುವಕರು ಇದರ ತರಬೇತಿ ನೀಡಲು 'ಪಾಟ್ಟುಮಾಲಿಕಾ' ಏರ್ಪಡಿಸುತ್ತಿದ್ದರು. ಮಂಗಳೂರಿನಲ್ಲಿ 1916ರಲ್ಲಿ ಅಂಜುಮಾನ್ ಇತ್ತಿಹಾದುಲ್ ಇಸ್ಲಾಂ ಮತ್ತು ಅಂಜುಮಾನ್ ಕುವ್ವತುಲ್ ಇಸ್ಲಾಂ ಅಂತಹ ಪಾಟ್ಟುಮಾಲಿಕಾ ಆಯೋಜಿಸಿದ್ದವು. ಇನ್ನೊಂದು ಸಂಸ್ಥೆಯಾದ ಅಂಜುಮಾನ್ ನುಸ್ರತುಲ್ ಇಸ್ಲಾಂ ಸಹ ಪಾಟ್ಟುಮಾಲಿಕ ಮತ್ತು ಮಾಪಿಳ್ಳೆಪಾಟ್ಟು ಕಾರ್ಯಕ್ರಮಗಳನ್ನು ಆಯೋಜಿಸಿತ್ತು.[15]

ತುಳುನಾಡು ಪ್ರದೇಶದಲ್ಲಿನ ಖ್ಯಾತ ಮಾಪಿಳ್ಳೆಪಾಟ್ಟು ರಚನೆಕಾರರ ಬಗ್ಗೆ ಮಾಹಿತಿ ಇರುವುದಿಲ್ಲ. ಸೈಯದ್ ಮದನಿ ಮಾಲ ಬರೆದ ಬಾಪುಕುಂಞ್ ಮುಸ್ಲಿಯಾರ್ ಇನ್ನೂ ಅಂತಹ ಹಲವು ಮಾಲಗಳನ್ನು ಬರೆದಿದ್ದಾರೆ. ಮಂಗಳೂರಿನ ಉಂಞ್ ಮುಸ್ಲಿಯಾರ್ ಸಹ ಅಂತಹ ಕೆಲಸ ಮಾಡಿದ್ದಾರೆ ಎನ್ನಲಾಗುತ್ತದೆ. ಆದರೆ ಅವರ ರಚನೆಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಮೊಗ್ರಾಲ್‌ನ ಸಾಹುಕಾರ್ ಕುಂಞ್‌ಪಕ್ಕಿ ಮತ್ತು ಅವರ ಮಗ ಕುಂಞಮು ಇವರಿಬ್ಬರು ಜನಪ್ರಿಯ ಮಾಪಿಳ್ಳೆಪಾಟ್ಟು ರಚನಕಾರರಾಗಿದ್ದರು. ಇವರು ವ್ಯಾಪಾರಿ ಕುಂಬೋಳ್ ಪಕ್ಕಿಕ್ಕ ಅವರ ಮೊಮ್ಮಗ ಆಗಿದ್ದರು. ಅವರು ತನ್ನ 'ಪಂದ್ಯಾಲ್' ಅನ್ನು ಕುಂಬಳ ಬಳಿಯ ಕುಂಬೋಲ್‌ನಲ್ಲಿ ಸ್ಥಾಪಿಸಿದ್ದರು.[16] ಅವರ ತಂದೆ ಕುಂಞಮ ಹಾಜಿ ಸಹ ಸಮಾಜ ಸೇವಕ ರಾಗಿದ್ದರು. ವಿವಾದಗಳನ್ನು ಬಗೆಹರಿಸಲು ಖ್ಯಾತರಾಗಿದ್ದ ಅವರು ಸ್ಥಳೀಯ ನ್ಯಾಯಾಧೀಶರ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರ ಮನೆ ನ್ಯಾಯಾಲಯವಾಗಿತ್ತು ಅದು ಕೋಡ್ದಿಕಟ್ಟಿಲ್ ಎಂದು ಹೆಸರಾಗಿತ್ತು. ಮೊಗ್ರಾಲ್ ಕುಂಞ್‌ಪಕ್ಕಿ ಅವರು ಮುಸ್ಲಿಮರ ಐಕ್ಯತೆಗಾಗಿ ಕೆಲಸ ಮಾಡಿದ ಖ್ಯಾತ ಸಾಹುಕಾರರಾಗಿದ್ದರು. ಅವರು 1917ರಲ್ಲಿ ಕಾಸರಗೋಡಿನಲ್ಲಿ ಮುಸ್ಲಿಮರ ಸಮಾವೇಶ ಆಯೋಜಿಸಿದರು. ಅವರು ಅಧ್ಯಕ್ಷರಾಗಿದ್ದರು. ಅವರು ಜನಪ್ರಿಯ ಮಾಪಿಳ್ಳೆ ಪಾಟ್ಟು ಹಾಡುಗಾರರಾಗಿದ್ದರು. ಅವರ ಕವನಗಳಲ್ಲಿ ಹಲವು ತುಳು ಮತ್ತು ಕನ್ನಡ ಶಬ್ದಗಳು ಇರುತ್ತಿದ್ದವು. ಅರಬ್ಬಿ ಮಲಯಾಳಂ ಭಾಷೆಯಲ್ಲಿದ್ದ ಮಾಪಿಳ್ಳೆಪಾಟ್ಟುವಿನಲ್ಲಿ ಹಲವು ಮಿಶ್ರ ಶಬ್ದಗಳು ಸಹ ಇರುತ್ತಿದ್ದವು.

ಆದಂ ನಬಿಯುಡೆ ಸ್ವರ್ಗ ನಿಷ್ಕಾಶನಂ[17]

Order - ಜನಪದ ಹಾಡು ಓಬೇಲೆ— ಓಬೇಲೆ (ತುಳು ಜನಪದ ಹಾಡು)

ಓ ಹೋಲೆ. ಓ ಹೋಲೆ ಇರ್ಹಾಂ ಎನ್‌ಗಲೆ ಬೇಲೆಯಿಲೆ.

ಆದಿ ಪಡಚ್ಚವನ್ ಆದಂ ನಬಿಕ್ಕುಂ ಮುಂಬು ಅಹದ್.

ಅಹ್ಮದ್ ಮುಹಿಬ್ಬಿನಾಲ್ ಆಲಂ ನಬಿಯಾಯಿ ಅಹ್ಮದ್
ಅಹದ್ ಮುಹಮ್ಮದಿಯ ಮಹಮುದಾಕಿನ ಹಮ್‌ದಿನೆ.
ಹಮ್ದಿನಾಮೈತುಲ್ಲ ಎಲ್ಲಾ ಶೈಕ್‌ಲಿಲ್ ಇನ್‌ಸಾನ್.
ಇನ್ಸಾನ್ ಮುಹಮ್ಮದಿಯಾಯಿ ಆದರವ್ ಅಂಬಿಯಾ ಮನುಷ್ಯರಿಲಾಯಿ
ಮನುಷ್ಯರ್‌ಕ್ಕ ವಾಪ್ಪಾಕ್ಕಿ ಸ್ವರ್ಗಮಿಲ್ ಆದಮೆ ಉಂಡಾಕಿ
ಉಂಡಾಕ್ಕಿ ಉಮ್ಮಯಾಯಿ ಆದಂ ಪಿದಾವಿನ್ ಭಾರ್ಯಯಾಯಿ
ಭಾರ್ಯಯುಂ ಭರ್ತಾವುಂ ಬಾನು ಸ್ವರ್ಗಂ ಬುಸ್ತಾನುಮ್.
ಬುಸ್ತಾನ್ ಪಿಟ್ಟಿತ್ತಿಲಿಟ್ಟ್ ಪರಂತು ಕೊಲುಪ್ಪ್ ಮರಕ್ಕುಲಟ್ಟ್
ಮರಕ್ಕುಲಟ್ಟ್ ಇಂಚಿಡ್ತ್ ಮಾರ್ತ್ ಅಡೆಗ್ ಪೋವೊಡ್ಚಿ
ಪೋವೊಡ್ಚಿ ಎಂದ್ ದೇವರೆ ಅಪ್ಪಣ ಆತೋನಾತು
ಅತೋನಾತ್ ಪಿಂತೋನಾತ್ ಅಪ್ಪುಗ ಭೂತ ಬತ್ತೋನಾತ್.
ಬಂತೇಳಿ ಹವ್ವಮ್ಮ ಭಗವಾನು ಹೇಳಿದ್ದು ನಿಮ್ಮ
ನಿರ್ಮೆ ಶಿವಾರಿಶ್ ನೋಡುಗೋಸ್ಕರ ಹಾರಿಸಿ
ಹಾರಿಸಿ ಈ ಹಣ್ಣು ಹೆದರದೆ ಕೊಯ್ದು ಇಬ್ಬರು ತಿನ್ನು
ತಿನ್ನು ಎಂಬ ಮಾತು ತಾಯಿಗೆ ಕೇಳಿ ತಿಳಿಸಿತು
ತಿಳಕೊಂಡ ಬಳಿಕ ತರಲಿಕ್ಕೋಗಿ ಕೊಯ್ಯಾಕೆ.
ಕೊಯ್ದು ಫಝುಂ ತೀನು ಕನವಿನಿಲ್ ಎಂದು ಅದಿಲ್ ದೊನು
ದೊಡಿಯ ಮರ್ದುಕು ದಿಯ ಇಸ್ಮುಕ ಜೋರುಕ್ಕು
ಜೋರುಕ್ಕು ವಂಚಿಚ್ಚು ಮರಚ್ಚು ವೆಚ್ಚೆನ್ನೋಲ್ ಪಿಚ್ಚು
ಒನ್ನಾಗೆ ರಂಡಾಯುಂ ಓಮನ ತೇವಿ ತಾನ್ ತಿನ್ನೇಯುಂ
ತಿನ್ನು ಮಲಮೂತ್ರಂ ಬಾರುವಾನ್ ಕಾಲಮಾಯಿ ನರಗೋತಮ್
ನರರೆ ಈ ಲೋಗತ್ತಿಲ್ ನಗರ್ತಾಲಂ ಬಿಡುವಾನ್
ವಿಧಿ ಬಂತಿಟ್ಟಾಲ್ ವೇಗತ್ತಿಲ್

ಸಾರಾಂಶ: ದೇವರು ಆದಂ ಅವರನ್ನು ಮಾನವರ ತಂದೆಯಾಗಿ ಮತ್ತು ಹವ್ವಾ ಅವರನ್ನು ಆದಂ ಅವರ ಪತ್ನಿಯಾಗಿ ಸ್ವರ್ಗದಲ್ಲಿ ಸೃಷ್ಟಿಸಿದನು. ಅವರು ಫಲಭರಿತ ಹಣ್ಣು ಉದ್ಯಾನಗಳಿರುವ ಸ್ವರ್ಗದಲ್ಲಿ ಸಂತೋಷದಿಂದ ಇದ್ದರು. ಆದರೆ ಒಂದು ಮರದ ಹಣ್ಣನ್ನು ತಿನ್ನಬಾರದು ಮತ್ತು ಅದರ ಹತ್ತಿರ ಹೋಗಬಾರದು ಎಂದು ದೇವರು ಆದೇಶಿಸಿದ್ದರು. ಆದರೆ ಭೂತ (ಶೈತಾನ್) ಆ ಹಣ್ಣನ್ನು ಕಿತ್ತು ತಿನ್ನಲು ಪ್ರೇರೇಪಿಸಿದನು. ಅದನ್ನು ತಿನ್ನುವ ಮೂಲಕ ಅವರು ಆಜ್ಞೆಯನ್ನು ಉಲ್ಲಂಘಿಸಿದರು. ಆಜ್ಞೆ ಉಲ್ಲಂಘಿಸಿದವರಿಗೆ ಸ್ವರ್ಗದಲ್ಲಿ ಸ್ಥಳ ಇಲ್ಲ. ಆದ್ದರಿಂದ ಅವರನ್ನು ಈ ಲೋಕಕ್ಕೆ ಕಳುಹಿಸಲಾಯಿತು. ಬಳಿಕ ಅವರು ಎಲ್ಲರ ತಂದೆ ತಾಯಿ ಆದರು.

ತುಳು ಮತ್ತು ಕನ್ನಡ ಶಬ್ದಗಳ ಅತಿಯಾದ ಬಳಕೆ ಈ ಹಾಡಿನ ವಿಶೇಷತೆಯಾಗಿದೆ.

ಬ್ಯಾರಿ ಸಂಸ್ಕೃತಿ ಮೇಲೆ ಸ್ಥಳೀಯ ಪ್ರಭಾವವನ್ನು ಸ್ಪಷ್ಟಪಡಿಸುತ್ತದೆ. ಸಾಹುಕಾರ್ ಕುಂಞಿಪಕ್ಕಿ ಹಲವು ಕವನಗಳನ್ನು ರಚಿಸಿದ್ದರು. ಅವರ ಮಗ ಕುಂಞಮು 'ಬಲಮುಬೀನು ಫಕೀಹ್ ಎಂದು ಹೆಸರಾಗಿದ್ದರು. (balamubinu Fakih) ಅವರು ರಚಿಸಿದ ಹಲವು ಕವನಗಳು ಮೊಗ್ರಾಲ್ ಸುತ್ತಮುತ್ತ ಜನಪ್ರಿಯವಾಗಿದ್ದವು.[18] ಮೊಗ್ರಾಲ್ ಸುತ್ತಮುತ್ತ ಹಲವು ಮಂದಿ ಮಾಪಿಳ್ಳೆಪಾಟ್ಟು ರಚನೆಕಾರರು ಇದ್ದರು. ಇಡೀ ತುಳುನಾಡಿನಲ್ಲಿ ಎರಡು ಪ್ರದೇಶಗಳು ಮಾತ್ರ ಮಾಪಿಳ್ಳೆಪಾಟ್ಟು ರಚನೆಗೆ ಕೊಡುಗೆ ನೀಡಿದ್ದವು. 1) ಮೊಗ್ರಾಲ್. ಇಲ್ಲಿ ಹಲವು ಹಾಡುಗಳು ಮತ್ತು ಬರಹಗಾರರು ಇದ್ದರು. 2) ಮಂಗಳೂರಿನ ಕಿನ್ಯಾ ಸೇರಿದಂತೆ ಮಂಜನಾಡಿ. ಇಲ್ಲಿ ಹಲವು ಹಾಡುಗಳು ಇದ್ದರೂ, ಅದರ ಕರ್ತೃಗಳು ಯಾರೆಂಬುದು ತಿಳಿದಿಲ್ಲ ಮತ್ತು ಹಾಡುಗಳು ದಾಖಲಾಗದೇ ಅವರು ಮೃತಪಟ್ಟಿದ್ದಾರೆ. ಕಾಸರಗೋಡಿನ ಟಿ. ಉಬೈದ್ ಅವರು ನಂತರದ ಅವಧಿಯಲ್ಲಿ ಹಲವು ಕವನಗಳನ್ನು ಮತ್ತು ಬರಹಗಳನ್ನು ರಚಿಸಿದ್ದಾರೆ. ಇವರು ದ್ವಿಭಾಷಾ ಕವಿಯಾಗಿದ್ದು ಕನ್ನಡದಲ್ಲೂ ಬರೆದಿದ್ದಾರೆ.

ತುಳುನಾಡಿನಲ್ಲಿ ಮಾಪಿಳ್ಳೆಪಾಟ್ಟು ಪರಂಪರೆ ಬ್ಯಾರಿ ಸಂಸ್ಕೃತಿಗೆ ಅನುಯೋಜ್ಯವಾಗಿರಲಿಲ್ಲ, ಆದರೆ ಧಾರ್ಮಿಕ ಹೇರಿಕೆಯ ಕಾರಣದಿಂದ ಅದು ಜನಪ್ರಿಯವಾದವು. ಮಾಪಿಳ್ಳೆ ಮೌಲ್ವಿಗಳು ಧಾರ್ಮಿಕ ನಿರ್ವಾತ ಮತ್ತು ಬ್ಯಾರಿ ಭಾಷೆಯ ಎಳಸುತನ ಬಳಸಿಕೊಂಡು ಮಾಪಿಳ್ಳೆಪಾಟ್ಟುವಿಗೆ ಆಚರಣೆಯ ಸ್ವರೂಪ ನೀಡಿದರು. ಬ್ಯಾರಿ ಭಾಷೆ ಬೆಳೆಯಲು ಇಂತಹ ಹೊಸತನದ ಅಗತ್ಯವೂ ಇತ್ತು. ಆದರೆ 20ನೇ ಶತಮಾನ ಮಧ್ಯಭಾಗದಲ್ಲಿ ಧಾರ್ಮಿಕ ಸುಧಾರಣೆಗಳು ಮತ್ತು ಶೈಕ್ಷಣಿಕ ಪ್ರಗತಿಯಿಂದಾಗಿ, ಮಾಪಿಳ್ಳೆಪಾಟ್ಟುವಿಗೆ ಇದ್ದ ಆಚರಣೆಯ ಸ್ವರೂಪ ಬಹುತೇಕ ಇಲ್ಲವಾಯಿತು. ಅದು ಈ ಭಾಗದಲ್ಲಿ ಬಹಳ ವೇಗವಾಗಿ ಕಣ್ಮರೆಯಾಗ ತೊಡಗಿತು. ಇದೇ ರೀತಿ ಅರಬ್ಬಿ ಮಲಯಾಳಂ ಸಹ ಕೇರಳ ಹಾಗೂ ತುಳುನಾಡಿನಲ್ಲಿ ತನ್ನ ಸ್ಥಾನ ಕಳೆದುಕೊಂಡಿತು. ಇದು ಮಲಯಾಳಂ ಲಿಪಿಯನ್ನು ಒಪ್ಪಿಕೊಳ್ಳಲು ಹಾದಿ ಮಾಡಿತು ಮತ್ತು ತುಳುನಾಡಿನಲ್ಲಿ ಕನ್ನಡ ಹೆಚ್ಚು ರೂಢಿಯ ಭಾಷೆಯಾಯಿತು. ಅರಬ್ಬಿ ಮಲಯಾಳಂ ಇಂದು ಇಲ್ಲವಾಗಿದ್ದರೂ, ಕೇರಳಕ್ಕಿಂತ ಭಿನ್ನವಾಗಿ, ತುಳುನಾಡಿನ ಬ್ಯಾರಿಗಳು ಕನ್ನಡವನ್ನು ಬಹಳ ನಿಧಾನವಾಗಿ ಒಪ್ಪಿಕೊಂಡರು. ಆಧುನಿಕ ಶಿಕ್ಷಣಕ್ಕೂ ಅವರ ಪ್ರತಿಕ್ರಿಯೆ ನಿಧಾನವಾಗಿತ್ತು. ಬ್ಯಾರಿಗಳು ಇಂದಿಗೂ ಹಿಂದುಳಿದ ವರ್ಗವಾಗಿಯೇ ಉಳಿದಿದ್ದಾರೆ.

3. ಸಾಂಸ್ಕೃತಿಕ ಜಾಗೃತಿಯ ಆಂದೋಲನ

ಚ) ಆಧುನಿಕ ಶಿಕ್ಷಣ

ಲೋಗನ್ ತನ್ನ ಮಲಬಾರ್ ಮ್ಯಾನ್ಯುವಲ್‌ನಲ್ಲಿ ಮಾಪಿಳ್ಳೆಗಳನ್ನು ಅನಕ್ಷರಸ್ಥ ಜನರು ಎಂದು ಉಲ್ಲೇಖಿಸಿದ್ದಾರೆ. ಮಾಪಿಳ್ಳೆ ವರ್ಗ ಬಹುತೇಕ ಅನಕ್ಷರಸ್ಥವಾಗಿದೆ. ಇವರಿಗೆ ಸಿಗುತ್ತಿದ್ದ ಶಿಕ್ಷಣ ಅಂದರೆ ಕುರ್‌ಆನ್ ಕಲಿಕೆ. ಅದು ಸಹ ಅರಬ್ಬಿ ಭಾಷೆಯಲ್ಲಿದ್ದು, ಅವರಲ್ಲಿ ಯಾರಿಗೂ ಅದು ಅರ್ಥವಾಗುತ್ತಿರಲಿಲ್ಲ.[19] ಮಾಪಿಳ್ಳೆಗಳು ಒಂದು ಭಾಷೆಗೆ ಅಂಟಿಕೊಂಡಿದ್ದು ಧಾರ್ಮಿಕ ಶಿಕ್ಷಣದ ಬಗ್ಗೆ ಜಾಗೃತಿ ಹೊಂದದೇ, ಆಧುನಿಕ ಶಿಕ್ಷಣದ ಕೆಳಹಂತದಲ್ಲಿ ಉಳಿದಿದ್ದರೂ, ಅವರನ್ನು ಅನಕ್ಷರಸ್ಥರೆಂದು ಹೇಳುವಂತಿರಲಿಲ್ಲ. ಅಂಥವರನ್ನು ಅನಕ್ಷರಸ್ಥರೆಂದು ಪರಿಗಣಿಸಿದರೆ,

ತುಳುನಾಡಿನ ಬ್ಯಾರಿಗಳನ್ನು ಏನೆಂದು ಕರೆಯುವುದು? ಬ್ಯಾರಿಗಳು ಧಾರ್ಮಿಕ ಶಿಕ್ಷಣಕ್ಕೆ ಸಹ ಮಾಪಿಳ್ಳೆಗಳನ್ನು ಅವಲಂಬಿಸಿದ್ದರು. ಇದು ಸಹಜವಾಗಿಯೇ ಬ್ಯಾರಿಗಳು ಅನಕ್ಷರಸ್ಥರಲ್ಲೇ ಅತ್ಯಂತ ಕೆಳಮಟ್ಟದಲ್ಲಿ ಇರುವಂತೆ ಮಾಡಿತು. ಬ್ಯಾರಿಗಳು ಅರ್ಧ ಬೆಳವಣಿಗೆ ಹೊಂದಿದ ಅರಬ್ಬಿ ಮಲಯಾಳಂ ಮತ್ತು ಕನ್ನಡ ಭಾಷೆ ನಡುವೆ ಸಿಲುಕಿಕೊಂಡು ಎರಡರಲ್ಲಿ ಆಯ್ಕೆ ಮಾಡಲು ಸಾಧ್ಯವಾಗದೇ ಇದ್ದರು. ದಕ್ಷಿಣಿಗಳು ದೊಡ್ಡ ಪ್ರಮಾಣದಲ್ಲಿ ಆಗಮಿಸಿದ ಬಳಿಕ ಬಂದ ಉರ್ದು ಸಹ ಬ್ಯಾರಿಗಳಲ್ಲಿ ಶೈಕ್ಷಣಿಕ ಸ್ಫೂರ್ತಿಯನ್ನು ತುಂಬಲು ವಿಫಲವಾಯಿತು. ಮೌಲ್ವಿಗಳು ಶಿಕ್ಷಣ ಅಂದರೆ 'ಇಲ್ಮ್' ಎಂದು ಕಲಿಸುತ್ತಿದ್ದರು. ಧಾರ್ಮಿಕ ಶಿಕ್ಷಣಕ್ಕೆ ಮಾತ್ರ ಇಲ್ಮ್ ಅನುಮತಿ ನೀಡುತ್ತದೆ ಎಂದು ಅವರು ಬಲವಾದ ನಂಬಿಕೆಗೆ ಜೋತು ಬಿದ್ದಿದ್ದರು. ಕುರ್‌ಆನ್ ಪಾರಾಯಣ (ಅದರ ಅರ್ಥ ತಿಳಿಯದಿದ್ದರೂ) ಮತ್ತು ಆಚರಣೆಗಳು ಅಗತ್ಯ ಧಾರ್ಮಿಕ ಕ್ರಿಯೆಗಳಾಗಿದ್ದವು. ಒಬ್ಬನನ್ನು ಪರಿಪೂರ್ಣ ಮುಸ್ಲಿಂ ಮಾಡಲು ಅಗತ್ಯ ಇರುವಷ್ಟು ಇಲ್ಮ್ ಅನ್ನು ಮಾತ್ರ ಹೇರಲಾಗುತ್ತಿತ್ತು. ಮೌಲ್ವಿಗಳು ಶಿಕ್ಷಣವನ್ನು ಕುರ್‌ಆನ್, ಹದೀಸ್, ವ್ಯವಹಾರ ಶಾಸ್ತ್ರ ಮತ್ತು ಅಲ್ಪಸ್ವಲ್ಪ ಅರಬ್ಬಿ ಜ್ಞಾನ ನೀಡುವುದಕ್ಕೆ ಸೀಮಿತಗೊಳಿಸಿದರು. ಇದಕ್ಕಿಂತ ಹೆಚ್ಚಿನ ಶಿಕ್ಷಣ ಒದಗಿಸಿದರೆ ಮುಸ್ಲಿಮರು ಬುದ್ಧಿಜೀವಿ ಆಗುವ ಅಪಾಯ ಇದೆ ಎಂದು ಅವರು ಹೆದರಿದ್ದರು. ಅವರ ದೈನಂದಿನ ಜೀವನ ಮತ್ತು ಪರಿಸರದ ಬಗ್ಗೆ ಜ್ಞಾನವನ್ನು ಹೆಚ್ಚಿಸಲು ಪೂರಕವಾದ ಆಧುನಿಕ ಶಿಕ್ಷಣವನ್ನು ಒದಗಿಸುವ ಯಾವುದೇ ಸೌಲಭ್ಯ ಇರಲಿಲ್ಲ. ಆದರೆ 19ನೇ ಶತಮಾನದಲ್ಲಿ ಬ್ರಿಟಿಷರು ಭಾರತದಲ್ಲಿ ವೈಜ್ಞಾನಿಕ ಶಿಕ್ಷಣವನ್ನು ಜಾರಿಗೆ ತಂದರು. ಶಿಕ್ಷಣ ಕ್ಷೇತ್ರದಲ್ಲಿ ತ್ವರಿತ ಬದಲಾವಣೆ ತರಲು ಪ್ರಯತ್ನಿಸಿದ ಬ್ರಿಟಿಷರಿಗೆ ಧನ್ಯವಾದ ಸಲ್ಲಿಸಬೇಕು. ಆದರೆ ಈ ಸಮಯದಲ್ಲಿ ಬ್ರಿಟಿಷ್ ವಿರೋಧಿ ನಿಲುವು ಜನರಲ್ಲಿ ಹೆಚ್ಚಾಗ ತೊಡಗಿತ್ತು. ಟಿಪ್ಪು ಸುಲ್ತಾನ್ ಮರಣದ ಘಟನೆ ತುಳುನಾಡಿನ ಬ್ಯಾರಿಗಳಿಗೆ ತೀವ್ರ ನೋವುಂಟು ಮಾಡಿತು. ಟಿಪ್ಪುವನ್ನು ಅವರು ವಲಿ ಅಥವಾ ಸೂಫಿ ದೊರೆ ಎಂದು ಪರಿಗಣಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ಜಿಲ್ಲೆಯಾದ್ಯಂತ ಕಾಣಿಸಿಕೊಂಡಿತು. ಆದರೆ ಪ್ರತಿರೋಧವನ್ನು ಕೂರ್ಗ್ ಪಡೆಗಳ ನೆರವಿನಿಂದ ಬಂದೂಕಿನ ಮೊನೆಯಲ್ಲಿ ಮಟ್ಟ ಹಾಕಲಾಯಿತು. ಮಸೀದಿಗಳನ್ನು ಲೂಟಿ ಮಾಡಿ ಹಲವನ್ನು ನಾಶಪಡಿಸಲಾಯಿತು. ಇದು ಬ್ರಿಟಿಷರು ತಮ್ಮ ವಿರೋಧಿಗಳು ಎಂದು ಸಾಮಾನ್ಯ ಬ್ಯಾರಿಗಳು ಭಾವಿಸಲು ಕಾರಣವಾಯಿತು. ಮುಸ್ಲಿಮ್ ವಿದ್ವಾಂಸರು ಬ್ರಿಟಿಷರು ಮತ್ತು ಆಧುನಿಕ ಶಿಕ್ಷಣ ನಿಷೇಧಾತ್ಮಕ ವಿಷಯಗಳಾಗಿದ್ದು, ಇವು ನರಕಕ್ಕೆ ಹಾದಿ ಮಾಡಿಕೊಡುತ್ತದೆ ಎಂದು ಸಾರಿದರು.[20] ಆದರೆ ಶ್ರೀಮಂತ ವರ್ತಕರು, ತಮ್ಮ ವ್ಯಾಪಾರದ ಹಿತವನ್ನು ಕಾಪಾಡಿಕೊಳ್ಳಲು ಬ್ರಿಟಿಷ್ ಕಂಪನಿಯ ಸ್ನೇಹ ಗಳಿಸಿದರೂ, 19ನೇ ಶತಮಾನದಲ್ಲಿ ಜಮೀನುದಾರಿಕೆಯ ನಿಯಂತ್ರಣದಲ್ಲೇ ಇದ್ದರು. ಈ ರೀತಿ ಬ್ಯಾರಿಗಳು ಎರಡು ಕಾರಣಗಳಿಂದ ಆಧುನಿಕ ಶಿಕ್ಷಣ ಪಡೆಯುವುದರಿಂದ ವಂಚಿತರಾದರು. 1) ಮುಲ್ಲಾಗಳು ಮತ್ತು ಮೌಲ್ವಿಗಳು ಅದನ್ನು ಹರಾಮ್ (ನಿಷಿದ್ಧ) ಎಂದು ಸಾರಿದ್ದ ಕಾರಣ ಅದರ ಬಗ್ಗೆ ಧಾರ್ಮಿಕ ಕಾರಣವಾದ ತಿರಸ್ಕಾರ ಉಂಟಾಗಿತ್ತು. ಧಾರ್ಮಿಕ ಆದೇಶಗಳನ್ನು ವಿರೋಧಿಸುವ ಧೈರ್ಯ ಯಾರಿಗೂ ಇರಲಿಲ್ಲ. 2) ಬ್ರಿಟಿಷರು ಮುಸ್ಲಿಮರ ವಿರೋಧಿಗಳಾಗಿದ್ದು, ಮುಸ್ಲಿಮ್ ಸಂಸ್ಕೃತಿಯನ್ನು ನಾಶ ಮಾಡುವವರು ಎಂಬ ಹೆದರಿಕೆ ಇತ್ತು. ಇಂಗ್ಲಿಷರು ಆಧುನಿಕ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮ

ದಲ್ಲಿ ಜಾರಿಗೆ ತಂದರು. ಆದ್ದರಿಂದ ಬ್ಯಾರಿಗಳು ಅದು ಶೈತಾನನ ಕೆಲಸವಾಗಿದ್ದು, ಅದರಿಂದ ದೂರ ಇರಲು ಪ್ರಯತ್ನಿಸುತ್ತಿದ್ದರು. ಇದು ಆಧುನಿಕ ಶಿಕ್ಷಣದ ಬಗೆಗಿನ ಧೋರಣೆಯಲ್ಲಿ ಸಹಜವಾಗಿಯೇ ವ್ಯಕ್ತವಾಗುತ್ತಿತ್ತು. ಮುಸ್ಲಿಮರು ಮೂಲಭೂತ ಹಾಗೂ ಸಾಂಸ್ಕೃತಿಕ ಸಂಪ್ರದಾಯಗಳಿಗೆ ಜೋತು ಬಿದ್ದ ಕಾರಣ 20ನೇ ಶತಮಾನದ ಆರಂಭದಲ್ಲಿ ಅವರಿಗೆ ಶಿಕ್ಷಣ ಒದಗಿಸಲು ಯಾವುದೇ ಪ್ರಾಯೋಗಿಕ ಪರ್ಯಾಯ ಮಾರ್ಗ[21] ಇರಲಿಲ್ಲ. ಮುಸ್ಲಿಮ್ ಸಮುದಾಯದಲ್ಲಿ ಅದರಲ್ಲೂ ತುಳುನಾಡು ಜಿಲ್ಲೆಯಲ್ಲಿ ಈ ಶತಮಾನದ ಆರಂಭದಲ್ಲಿ ಮದ್ರಸಾ ಮತ್ತು ದರ್ಸ್ ಶಿಕ್ಷಣ ವ್ಯವಸ್ಥೆ ಮಾತ್ರ ಚಾಲ್ತಿಯಲ್ಲಿತ್ತು.[22] ಆದರೆ ಈ ಶತಮಾನದ ಆರಂಭದ ಬಳಿಕ ಧರ್ಮದ ಕುರಿತಾಗಿ ವ್ಯಾವಹಾರಿಕ ನಿಲುವು ಮತ್ತು ವೈಜ್ಞಾನಿಕ ತಳಹದಿಯ ನಂಬಿಕೆಗಳು ಬೆಳೆದು ಬಂದು ತ್ವರಿತಗತಿಯ ಬದಲಾವಣೆಗಳು ಉಂಟಾದವು. ಬ್ರಿಟಿಷ್ ಸರ್ಕಾರದೊಂದಿಗಿನ ಮುಸ್ಲಿಮರ ಅಸಹಕಾರ ಧೋರಣೆ ಸರ್ಕಾರಕ್ಕೆ ಗಲಿಬಿಲಿ ಉಂಟು ಮಾಡಿತ್ತು. ಮುಸ್ಲಿಮರಿಗೆ ಶಿಕ್ಷಣದ ಅಗತ್ಯದ ಕುರಿತು ಮನವರಿಕೆ ಮಾಡಲು ಅವರು ಪ್ರಯತ್ನಿಸಿದರು. ಮಾಪಿಳ್ಳೆ ದಂಗೆಗೆ ಮತ್ತು ಮುಸ್ಲಿಮರ ಅಂತಹ ಸಮಸ್ಯೆಗಳಿಗೆ ಈ ರೀತಿಯ ಅಸಹಕಾರದ ನಿಲುವು ಕಾರಣವಾಗಿತ್ತು.

ಬ್ರಿಟಿಷ್ ಸರ್ಕಾರ ಮುಸ್ಲಿಮರ ಅನಕ್ಷರತೆ ಕುರಿತು ಸಮಗ್ರ ಅಧ್ಯಯನ ನಡೆಸಿತು. ಕರಾವಳಿ ಜಿಲ್ಲೆಯಲ್ಲಿ ಮಾಪಿಳ್ಳೆ ದಂಗೆಗೆ ಮತ್ತು ಇನ್ನಿತರ ಸಮಸ್ಯೆಗಳಿಗೆ ಶಿಕ್ಷಣದ ಕೊರತೆಯೇ ಕಾರಣ ಎಂದು ಕಂಡುಕೊಂಡಿತು. ಮುಂದಿನ ದಿನಗಳಲ್ಲಿ ಕರಾವಳಿ ಪ್ರದೇಶದಲ್ಲಿ ಇಂತಹ ಮಾಪಿಳ್ಳೆ ದಂಗೆಗಳು ಮರುಕಳಿಸುವುದನ್ನು ತಪ್ಪಿಸಲು ಶಿಕ್ಷಣವನ್ನು ಹರಡುವುದೇ ದಾರಿ ಎಂದು ಬ್ರಿಟಿಷರು ಸಲಹೆ ನೀಡಿದ್ದರು.[23] ಮುಸ್ಲಿಮರಿಗೆ ಶಿಕ್ಷಣ ಒದಗಿಸಲು ಬ್ರಿಟಿಷ್ ಸರ್ಕಾರ ವಿಶೇಷ ಆಸಕ್ತಿ ತೋರಿಸಿತ್ತು. ಮಂಗಳೂರಿನಲ್ಲಿ ಮಸೀದಿಗಳಲ್ಲಿ ಧಾರ್ಮಿಕ ತರಬೇತಿ ನೀಡುವ ಜತೆಯಲ್ಲೇ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು[24] 1871ರಲ್ಲಿ ಸರ್ಕಾರದ ಮಟ್ಟದಲ್ಲಿ ಮುಲ್ಲಾಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ವೇತನ ಮತ್ತು ಹಣಕಾಸು ನೆರವು ನೀಡುವ ಪ್ರಯತ್ನಗಳು ಆರಂಭವಾದವು. ಆದರೆ ಮುಸ್ಲಿಮರು ಇದಕ್ಕೆ ಉತ್ತಮ ಪ್ರತಿಕ್ರಿಯೆ ತೋರದ ಕಾರಣ ಈ ಪ್ರಯತ್ನ ಸಫಲವಾಗಲಿಲ್ಲ. ಆದ್ದರಿಂದ ಶಿಕ್ಷಣವನ್ನು ಪ್ರೋತ್ಸಾಹ ಪ್ರಾರಂಭಿಕ ಹಂತವಾಗಿ ಶಾಲೆಗಳನ್ನು ಸ್ಥಳೀಯ ಬೋರ್ಡ್‌ಗಳ ಅಧೀನಕ್ಕೆ ತರಲಾಯಿತು. ಈ ಮೂಲಕ ಬ್ಯಾರಿಗಳ ಶಿಕ್ಷಣಕ್ಕಾಗಿ ಅನುದಾನ ಒದಗಿಸಲಾಯಿತು. ಆದರೂ ಇದರಿಂದ ಹೆಚ್ಚಿನ ಬದಲಾವಣೆ ಆಗಲಿಲ್ಲ. ಈ ಎಲ್ಲಾ ಪ್ರಯತ್ನಗಳ ಫಲವಾಗಿ 1892–93ರ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಮುಸ್ಲಿಮ್ ಕಾಲೇಜುಗಳು, 7 ಹಿರಿಯ ಪ್ರಾಥಮಿಕ, 27 ಲೋವರ್ ಪ್ರೈಮರಿ ಮತ್ತು ಪ್ರೈಮರಿ ಇದ್ದವು. ಇವುಗಳಲ್ಲಿ 105 ಹುಡುಗಿಯರು ಸೇರಿದಂತೆ 1455 ಮಕ್ಕಳು ಇದ್ದರು. ಇದು ಸಂಪೂರ್ಣ ಕತ್ತಲೆಯ ಅವಧಿಯಿಂದ ಜಾಗೃತಿಯ ಕಡೆಗೆ ಬರುತ್ತಿರುವುದರ ಶುಭ ಸೂಚಕವಾಗಿತ್ತು. ಆದರೆ 20ನೇ ಶತಮಾನದ ಆರಂಭದ ಹೊತ್ತಿಗೆ ಮುಸ್ಲಿಮರಲ್ಲಿ ಶಿಕ್ಷಣ ಮತ್ತು ಸುಧಾರಣೆ ಕುರಿತು ಅರಿವು ಮೂಡಿತು.[25]

ಧಾರ್ಮಿಕ ಮತ್ತು ಸಾಂಸ್ಕೃತಿಕ ಸುಧಾರಣಾ ಚಳುವಳಿಗಳು

ಹೊಸ ಜಾಗೃತಿಯು ಧಾರ್ಮಿಕ ಸುಧಾರಣೆಯ ವಾತಾವರಣವನ್ನು ಸೃಷ್ಟಿಸಿತು. ಶೆರುಲ್ ಮತ್ತು ಶಮ್ಮಾಡ್‌ರಂತಹ ನಾಯಕರು ಶಿಕ್ಷಣದ ಅಗತ್ಯವನ್ನು ಪ್ರತಿಪಾದಿಸಿದರು. ಮಹಿಳೆಯರು ಪರ್ದಾ ಅಥವಾ ಬುರ್ಖಾವನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಿದ್ದರು, ಕೆಲವೊಮ್ಮೆ ಇಬ್ಬರು ಮಹಿಳೆಯರು ವಲ್ಲಿ ಅಥವಾ ಡಬಲ್ ವಲ್ಲಿ (ಬಟ್ಟೆಯನ್ನು ಸುತ್ತಿಕೊಳ್ಳುವುದು) ಹಾಕಿಕೊಳ್ಳುತ್ತಿದ್ದರು. ಅಂತಹ ಹುಡುಗಿಯರ ಶಿಕ್ಷಣವನ್ನು ಆಲೋಚಿಸುವುದು ಸಾಧ್ಯವಿರಲಿಲ್ಲ. ಎಲ್ಲಿಯಾದರೂ ಬಾಲಕಿಯರ ಶಾಲೆ ಇದ್ದರೆ, ಅದು ಪುರುಷರಿಗೆ ನಿರ್ಬಂಧಿತ ಪ್ರದೇಶವಾಗಿತ್ತು. ಬಾಲ್ಯದಲ್ಲೇ ವಿವಾಹ ಆಗುತ್ತಿದ್ದ ಕಾರಣ ಅಂತಹ ಹುಡುಗಿಯರನ್ನು ಶಾಲೆಗೆ ಕಡ್ಡಾಯವಾಗಿ ಕಳುಹಿಸುತ್ತಿರಲಿಲ್ಲ. ಮಹಿಳೆಯರ ಶಿಕ್ಷಣ ಸಮಾಜಕ್ಕೆ ಹಾನಿಕರ ಎಂದು ಧಾರ್ಮಿಕ ನಾಯಕರು ಪರಿಗಣಿಸಿದ್ದರು. ಮುಸ್ಲಿಮ್ ಧಾರ್ಮಿಕ ವಿದ್ವಾಂಸರು ಮತ್ತು ಮೌಲ್ವಿಗಳು ಆಧುನಿಕ ಶಿಕ್ಷಣ ಕುರಿತಾಗಿ ಹೊಂದಿದ್ದ ನಕಾರಾತ್ಮಕ ನಿಲುವು ಮುಸ್ಲಿಮರು ಈ ಪ್ರದೇಶದಲ್ಲಿ ಹಿಂದುಳಿಯಲು ಪ್ರಮುಖ ಕಾರಣವಾಗಿತ್ತು. ಈ ನಿಟ್ಟಿನಲ್ಲಿ 'ಕೇರಳ ಮುಸ್ಲಿಮ್ ಐಕ್ಯ ಸಂಘಂ' ಪ್ರಮುಖ ಹೆಜ್ಜೆ ಇರಿಸಿತ್ತು. ಇದನ್ನು 1922ರಲ್ಲಿ ವಕ್ಕಂ ಮಹಮ್ಮದ್ ಅಬ್ದುಲ್ ಕಾದರ್ ಮೌಲ್ವಿ ಮತ್ತು ಇತರರು ಆರಂಭಿಸಿದರು. ಮುಸ್ಲಿಮರಲ್ಲಿ ಒಗ್ಗಟ್ಟು ಮೂಡಿಸುವುದು ಮತ್ತು ಹಳೆಯ ಸಂಪ್ರದಾಯಗಳಿಂದ ಭಿನ್ನವಾಗಿ ಹೊಸ ಆಧುನಿಕ ವಿಚಾರಗಳನ್ನು ಮೂಡಿಸುವುದು ಅದರ ಮುಖ್ಯ ಗುರಿಯಾಗಿತ್ತು. ಅದು ಮುಸ್ಲಿಮರ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರಿತು. ಶಮ್ಮಾಡ್‌ರಂತಹ ನಾಯಕರು ಅದರ ಸಕ್ರಿಯ ಕಾರ್ಯಕರ್ತರಾಗಿದ್ದರು. 1932ರಲ್ಲಿ ಐಕ್ಯಸಂಘ ಕಾಸರಗೋಡಿನಲ್ಲಿ ಒಂದು ಸಮಾವೇಶ ನಡೆಸಿತು. ಈ ಸಂಘವು ಆಚರಣೆಗಳನ್ನು ಕಡಿಮೆ ಮಾಡಲು, ಆಧುನಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಮತ್ತು ಉತ್ತಮ ಧಾರ್ಮಿಕ ಶಿಕ್ಷಣದಂತಹ ಸುಧಾರಣೆಗಳಿಗೆ ಪ್ರಯತ್ನಿಸಿತು.

20ನೇ ಶತಮಾನದಲ್ಲಿ ಹಲವು ಸಂಘಟನೆಗಳು ಸುಧಾರಣೆ ಮತ್ತು ಶಿಕ್ಷಣಕ್ಕಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದವು.

ಪಟ್ಟಿ-9 ಮಂಗಳೂರಿನ ಸಂಘ ಸಂಸ್ಥೆಗಳು ಮತ್ತು ಸುಧಾರಣೆಗಳು[26]

	ಸಂಘ ಸಂಸ್ಥೆ	ಪ್ರಾರಂಭವಾದ ವರ್ಷ	ಕಾರ್ಯಚಟುವಟಿಕೆ
1	ಅಂಜುಮಾನ್ ಮುನೀರುಲ್ ಇಸ್ಲಾಂ	1902	ಪ್ರಾಥಮಿಕ ಶಾಲೆ ಮದರಸಾ
2	ಇಸ್ಲಾಮಿಯಾ ಕ್ಲಬ್	1914	ರೀಡಿಂಗ್ ರೂಮ್
3	ಅಂಜುಮಾನ್ ಇತ್ತಿಹಾದುಲ್ ಇಸ್ಲಾಂ	1916	ಪಾಟುಪ್ಪಮಾಲಿಕ
4	ಅಂಜುಮಾನ್ ಕುವ್ವತುಲ್ ಇಸ್ಲಾಂ	1916	ಪಾಟುಪ್ಪಮಾಲಿಕ
5	ಮುಸ್ಲಿಂ ಎಜುಕೇಶನ್ ಅಸೋಸಿಯೇಶನ್	1924	ಮದ್ರಸಾ, ಎಲಿಮೆಂಟರಿ ಶಾಲೆ, ಹೈಸ್ಕೂಲ್
6	ಬದ್ರಿಯಾ ಲಿಟರೆಸಿ ಅಂಡ್	1930	ವಯಸ್ಕರ ರಾತ್ರಿ ಶಾಲೆ ಮತ್ತು

	ಡಿಬೇಟಿಂಗ್ ಸೊಸೈಟಿ		ರೀಡಿಂಗ್ ರೂಂ
7	ಸೀರತ್ ಕಮಿಟಿ	1930	ಈದ್ ಮಿಲಾದ್ ಆಚರಣೆ
8	ಕ್ರೆಸೆಂಟ್ ಕ್ಲಬ್	1932	ಗ್ರಂಥಾಲಯ
9	ಮುಸ್ಲಿಂ ವೆಲ್ಫೇರ್ ಲೀಗ್	1937	ಸಾಕ್ಷರತೆ, ಸ್ವಯಂಸೇವಕರ ರಾತ್ರಿ ಶಾಲೆ
10	ಯೆಂಗ್‌ಮೆನ್ ಮುಸ್ಲಿಂ ಅಸೋಸಿಯೇಶನ್	1937	ಗ್ರಂಥಾಲಯ, ರಾತ್ರಿ ಶಾಲೆ
11	ನುಸ್ರತುಲ್ ಇಸ್ಲಾಂ	1940	ಪಾಟ್ಟುಮಾಲಿಕ
12	ಮುಸ್ಲಿಂ ಯೂತ್ ಲೀಗ್	1940	ರೀಡಿಂಗ್ ರೂಂ
13	ಹಿಲಾಲ್ ಮಜ್ಲಿಸ್	1940	ರೀಡಿಂಗ್ ರೂಂ
14	ಅಂಜುಮಾನ್ ಮುತ್ತಿದುಲ್ ಇಸ್ಲಾಂ	1942	ವ್ಯಾಪಾರಿಗಳಿಗೆ ನೆರವು
15	ಅಂಜುಮಾನ್ ಇಂದಾದುಲ್ ಇಸ್ಲಾಂ	1942	ದರ್ಸ್ ಫೌಂಡೇಶನ್
16	ಯಂಗ್‌ಮೆನ್ಸ್ ಮುಸ್ಲಿಂ ಅಸೋಸಿಯೇಶನ್	1945	ರೀಡಿಂಗ್ ರೂಂ, ರಾತ್ರಿ ಶಾಲೆ, ಸ್ಕಾಲರ್‌ಶಿಫ್ ಫಂಡ್ (ಎರಡನೇ ಬಾರಿ)
17	ಇಸ್ಲಾಮಿಕ್ ಕ್ಲಬ್	1942	ರೀಡಿಂಗ್ ರೂಂ
18	ಮಜ್ಲಿಸೆ ನವ್ವಿತಾಲ್ (Majliae Nouvital)	1945	ರಾತ್ರಿ ಶಾಲೆ, ರೀಡಿಂಗ್ ರೂಂ
19	ಮಜ್ಲಿಸೆ	1947	ಮ್ಯಾಗಜಿನ್

ಕಾಸರಗೋಡಿನ ಅಜೀಜಿಯಾ ಎಜುಕೇಶನ್ ಸೊಸೈಟಿಯಂತಹ ಸಂಸ್ಥೆಗಳು ಶಿಕ್ಷಣಕ್ಕೆ ಉತ್ತೇಜನ ನೀಡಲು ಆಸಕ್ತಿಯಿಂದ ಕಾರ್ಯನಿರ್ವಹಿಸಿದವು.

1892ರಲ್ಲಿ ಆರಂಭವಾದ ಮುನೀರುಲ್ ಇಸ್ಲಾಂ ಮದ್ರಸಾ ಮೊದಲ ಶಾಲೆಯಾಗಿತ್ತು. ಹಾಜಿ ಕುಂಞಿ ಮುಸ್ಲಿಮಾರ್ ಶಿಕ್ಷಕರಾಗಿದ್ದರು. ಪ್ರಾಥಮಿಕ ಶಿಕ್ಷಣದ ಜತೆಯಲ್ಲೆ ಅರಬಿ ಮತ್ತು ಧಾರ್ಮಿಕ ಶಿಕ್ಷಣ ನೀಡುತ್ತಿದ್ದ ಈ ಶಾಲೆಗೆ ಮೆಮೊನ್ ಸೇಠ್ ಮತ್ತು ಅಹ್ಮದ್ ಪಟೇಲ್ ಸೇಠ್ ನೆರವು ಒದಗಿಸಿದರು. ಮದ್ರಸಾ ಶಿಕ್ಷಣದ ಜತೆಯಲ್ಲೇ ಪ್ರಾಥಮಿಕ ಶಿಕ್ಷಣ ಒದಗಿಸುವ ಪ್ರಯತ್ನಗಳು ಮಂಜೇಶ್ವರ, ಮಂಜನಾಡಿ ಮತ್ತು ಇತರ ಹಲವು ಪ್ರದೇಶಗಳಲ್ಲಿ ನಡೆದವು. ಆದರೆ ಹೆಚ್ಚಿನ ಪ್ರತಿಕ್ರಿಯೆ ದೊರೆಯಲಿಲ್ಲ. ಕಲಿಕೆಯಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸಲು ಸರ್ಕಾರ ಪ್ರಾಥಮಿಕ ಶಿಕ್ಷಣ ಪೂರ್ತಿಗೊಳಿಸುವ ವಿದ್ಯಾರ್ಥಿಗಳಿಗೆ ಧನ ಸಹಾಯ ಒದಗಿಸಿದರೂ, ಫಲಿತಾಂಶ ಆಶಾದಾಯಕವಾಗಿರಲಿಲ್ಲ. ಗಣಿತ, ವಿಜ್ಞಾನ ಮತ್ತು ರಾಜ್ಯ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಒದಗಿಸಬೇಕಾಗಿದ್ದ ಕಾರಣ ಮಾಪಿಳ್ಳೆ ಮೌಲ್ವಿಗಳಿಗೆ ಪಾಠ ಮಾಡುವುದು ಕಷ್ಟಕರವಾಗಿತ್ತು. ಇದಕ್ಕಾಗಿ ಅವರಿಗೆ ಸೂಕ್ತ ತರಬೇತಿ ಅಗತ್ಯವಿತ್ತು. ಶಿಕ್ಷಣ ವ್ಯವಸ್ಥೆ ಇನ್ನೂ ಪ್ರಾಥಮಿಕ ಹಂತದಲ್ಲಿ ಇದ್ದರೂ, ಶಿಕ್ಷಕರು ಮತ್ತು ಸಮುದಾಯದ ಪ್ರತಿಕ್ರಿಯೆ ನಿರಾಶಾದಾಯಕವಾಗಿತ್ತು. ಮಂಗಳೂರಿನಲ್ಲಿ ಉಂಟಾದ ಭೀಕರ ಪ್ಲೇಗ್ ಬಳಿಕ ಶಿಕ್ಷಣದ ಬಗ್ಗೆ

ನಿಜವಾದ ಜಾಗೃತಿ ಉಂಟಾಯಿತು. ದೊಡ್ಡ ಪ್ರಮಾಣದಲ್ಲಿ ಉಂಟಾದ ಸಾವು ನೋವುಗಳು, ಕಲೆಕ್ಟರ್ ಅಝೀಝುದ್ದೀನ್ ಅವರ ಪ್ರಯತ್ನಗಳು ಜನರು ಶಿಕ್ಷಣದ ಅಗತ್ಯದ ಬಗ್ಗೆ ಕಣ್ಣು ತೆರೆಯುವಂತೆ ಮಾಡಿದವು. ಜಿಲ್ಲೆಯ ಹಲವು ನಾಯಕರು ಜನರಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಿದರು. ಅಂತವರಲ್ಲಿ ಅಡ್ವಕೇಟ್ ಉಸ್ಮಾನ್ ಅವರು ಪ್ರಮುಖರು. ಅವರು ತಮ್ಮ ಸಮಯ ಮತ್ತು ಸಂಪೂರ್ಣ ಶಕ್ತಿಯನ್ನು ಧಾರ್ಮಿಕ ಮತ್ತು ಸಾಮಾನ್ಯ ಶಿಕ್ಷಣವನ್ನು ಉತ್ತೇಜಿಸಲು ವ್ಯಯಿಸಿದರು. ಮುಂದೆ ಕಾರ್ಕಳ ಹುಸೈನ್ ಸಾಹೆಬ್ ಮತ್ತು ಇತರ ಇಬ್ಬರು ಪ್ರಮುಖ ನಾಯಕರಾದ ಶೆರೂಲ್ ಮತ್ತು ಶಮ್ನಾಡ್ ಅವರು ಶಿಕ್ಷಣದ ಅಗತ್ಯವನ್ನು ಪ್ರತಿಪಾದಿಸಿದರು. ಕಾಸರಗೋಡಿನ ಅಝೀಝಿಯಾ ಸೊಸೈಟಿ, ಮಂಗಳೂರಿನ ಇಸ್ಲಾಮಿಯಾ ಕ್ಲಬ್ ಶಿಕ್ಷಣಕ್ಕೆ ಉತ್ತೇಜನ ತುಂಬಲು ಪ್ರಯತ್ನಿಸಿದವು. ವಿಶ್ವಯುದ್ಧ ಜನರಲ್ಲಿ ತೀವ್ರವಾದ ಧಾರ್ಮಿಕ ಕಾವು ಉಂಟು ಮಾಡಿತು. ಹಾಜಿ ಮೂಸಾ ಕುಂಞಿ, ಅಬ್ದುಲ್ಲಾ ಬಿನ್ ಅರುಮೀಟಿ, ತೆಂಗಿನಕಾಯಿ ಮೋನಬ್ಬಾಕ ಮತ್ತು ಸೈಕಲ್ ಅಹ್ಮದ್ ಅವರು ಸೇರಿ ಕಂದಕದಲ್ಲಿ ಒಂದು ಮಸೀದಿ ಮತ್ತು ಸಂಸ್ಥೆಯನ್ನು ಆರಂಭಿಸುವ ಇಚ್ಛೆ ವ್ಯಕ್ತಪಡಿಸಿದರು. ಮೆಮೊನ್ ಆಗಿದ್ದ ಹಾಜಿ ಹಸನ್ ಇಸಾ ಸೇಠ್ ಎಂಬವರು ಬಂದರ ಪ್ರದೇಶದಲ್ಲಿ 0.75ಸೆಂಟ್ಸ್ ಜಾಗವನ್ನು ಇದಕ್ಕಾಗಿ ಒದಗಿಸಿದರು. ಈ ಸ್ಥಳದಲ್ಲಿ 1971ರಲ್ಲಿ ಬದ್ರಿಯಾ ಮಸೀದಿ ನಿರ್ಮಿಸಲಾಯಿತು. ಹಾಜಿ ಹಸನ್ ಇಸಾ ಸೇಠ್, ಕುಂಞಾಮು ಹಾಜಿ ಮತ್ತು ಹಾಜಿ ಅಬ್ದುಲ್ ರಹ್ಮಾನ್ (ಬೆಂಡಿ ಹಾಜಾರ್) ರಂತಹ ನಾಯಕರು ಶೈಕ್ಷಣಿಕ ಮತ್ತು ಸುಧಾರಣೆಯ ಅಭಿಯಾನವನ್ನು ತಾರ್ಕಿಕ ಹಂತಕ್ಕೆ ತಲುಪಿಸಿದರು. ಇವರ ಪ್ರಯತ್ನಗಳಿಂದ ಸ್ಫೂರ್ತಿಗೊಂಡು ಮುಸ್ಲಿಂ ಎಜುಕೇಶನ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು 1924ರಲ್ಲಿ ಸ್ಥಾಪಿಸಲಾಯಿತು. ಸಿ.ಮಹಮೂದ್, ಕುಂಞಾಮು ಹಾಜಿ ಮತ್ತು ಟಿ.ಯು. ಅಬ್ಬಾಕ ಅವರು ಶೈಕ್ಷಣಿಕ ಪ್ರಗತಿಗೆ ಬಹಳಷ್ಟು ಶ್ರಮಿಸಿ, ಇದರ ಪರಿಸರದಲ್ಲಿ ಮದ್ರಸತುಲ್ ಬದ್ರಿಯೀನ್ ಆರಂಭಿಸಿದರು. ಹಾಜಿ ಎಸ್ಸಾ ಸೇಟ್ ಹೊಸ ಕಟ್ಟಡವನ್ನು ದೇಣಿಗೆಯಾಗಿ ನೀಡಿದರು. 15 ಮೊರ ಅಕ್ಕಿ ಬೆಳೆಯನ್ನು ಹಾಜಿ ಎಂ. ಮೊಯಿದಿನಬ್ಬ ಹಾಗೂ ಆರು ಮೊರ ಅಕ್ಕಿಯನ್ನು ಹಾಜಿ ಕುಂಞಾಮು ದೇಣಿಗೆ ನೀಡುವುದರೊಂದಿಗೆ ಸಂಸ್ಥೆಯು ಇನ್ನೊಂದು ಹೆಜ್ಜೆ ಮುಂದಿಟ್ಟಿತು. ಇದು ಪ್ರಾಥಮಿಕ ಶಿಕ್ಷಣ ಮತ್ತು ಬದ್ರಿಯಾ ಶಿಕ್ಷಣ ಕಾರ್ಯಕ್ರಮಗಳ ಯಶಸ್ಸಿಗೆ ಹಾದಿ ಮಾಡಿಕೊಟ್ಟಿತು. ಒಂದು ಪ್ರಿಲಿಮಿನರಿ ಸ್ಕೂಲ್ ಆರಂಭವಾಯಿತು. ಕುಂಞಾಮು ಹಾಜಿ ಈ ಶಾಲೆಯ ನಿರ್ವಹಣೆಯನ್ನು ವೈಯಕ್ತಿಕವಾಗಿ ಬಹಳ ಮುತುವರ್ಜಿಯಿಂದ ನಡೆಸಿದರು. ಇದೇ ವೇಳೆ ಮುನೀರುಲ್ ಇಸ್ಲಾಂ ಅಸೋಸಿಯೇಷನ್ ನಿರ್ವಹಣೆ ಕಳೆಗುಂದಿ ಮುಸ್ಲಿಮ್ ಎಜುಕೇಶನ್ ಅಸೋಸಿಯೇಷನ್ ಜತೆಯಲ್ಲಿ ವಿಲೀನಗೊಂಡಿತು.[27]

1927ರ ಹೊತ್ತಿಗೆ ಇಸ್ಮಾಯಿಲಬ್ಬು ಬಿನ್ ರಹೀಮ್, ಪಿ. ಮಹಮ್ಮದ್ ಮತ್ತು ಮಹಮ್ಮದ್ ಬಿನ್ ರಾಲಿ ಎಂಬ ಮೂರು ಯುವಕರು ಮೌಲ್ವಿ ಇಸ್ಮಾಯಿಲ್ ರಹೀಮ್ ಅವರ ಪ್ರೋತ್ಸಾಹದಿಂದ ಮದ್ರಸತುಲ್ ಅಝ್ಹಾರಿಯಾ ಎಂಬ ಸಂಸ್ಥೆ ಆರಂಭಿಸಿದರು. ಇದು ಮಂಗಳೂರು ಪ್ರದೇಶದಲ್ಲೇ ಅತ್ಯುತ್ತಮ ಧಾರ್ಮಿಕ ಶಿಕ್ಷಣ ಸಂಸ್ಥೆಯಾಗಿ ಬೆಳೆಯಿತು. ಮಹಮ್ಮದ್ ಶಮ್ಮದ್ ಮತ್ತು ಶಫಿ ಶಮ್ನಾಡ್ (Shamnad) ಆಧುನಿಕ ಶಿಕ್ಷಣ ಪ್ರೋತ್ಸಾಹಿಸಲು

ನಿರಂತರವಾಗಿ ಪ್ರಯತ್ನಿಸಿದರು. ಶಿಕ್ಷಣದ ಪರಿಕಲ್ಪನೆಯನ್ನು ಹುಟ್ಟು ಹಾಕಲು ಇಸ್ಲಾಮಿಯಾ ಕ್ಲಬ್‌ಗಳು ಪರಿಶ್ರಮ ನಡೆಸಿದವು. ಆದರೆ ಪ್ರಬಲವಾಗಿದ್ದ ಬ್ರಿಟಿಷ್ ವಿರೋಧಿ ಧೋರಣೆ ಮತ್ತು ಆರಂಭದಲ್ಲಿ ಉಲೆಮಾಗಳ ಶಿಕ್ಷಣ ವಿರೋಧಿ ನಿಲುವುಗಳ ಹಿನ್ನೆಲೆಯಲ್ಲಿ ಶೈಕ್ಷಣಿಕ ಸುಧಾರಣೆ ತರುವುದು ಸುಲಭದ ಕಾರ್ಯವಾಗಿರಲಿಲ್ಲ. ಮಹಿಳೆಯರಿಗೆ ಶಿಕ್ಷಣ ಒದಗಿಸುವುದು ಯೋಚಿಸುವುದೂ ಸಾಧ್ಯವಿರಲಿಲ್ಲ. ಶಮ್ನಾಡ್ ಅವರ ಪ್ರಯತ್ನದ ಫಲವಾಗಿ ಮಂಗಳೂರಿನಲ್ಲಿ ಮುಸ್ಲಿಮ್ ಮಹಿಳೆಯರ ಹೈಸ್ಕೂಲ್ ಮಂಜೂರಾಯಿತು. ಆದರೆ ಬೆರಳೆಣಿಕೆಯಷ್ಟು ಬಾಲಕಿಯರನ್ನು ಬಿಟ್ಟರೆ ಇತರರು ಶಾಲೆಗೆ ಸೇರಲೇ ಇಲ್ಲ. ಬಳಿಕ ಇದನ್ನು ಮುಚ್ಚಿ ಸರ್ಕಾರಿ ಬಾಲಕಿಯರ ಶಾಲೆಯಾಗಿ ಬದಲಾಯಿಸಲಾಯಿತು. ಆದರೆ ಬದ್ರಿಯಾ ಎಲಿಮೆಂಟರಿ ಶಾಲೆ ಮತ್ತು ಮುನೀರುಲ್ ಇಸ್ಲಾಮ್ ಶಾಲೆಗಳು ಯಶಸ್ವಿಯಾಗಿ ಶಿಕ್ಷಣ ರಂಗದಲ್ಲಿ ಮುಂದುವರಿದವು. ಆರಂಭದ ನಾಯಕರ ಪ್ರಯತ್ನದ ಫಲವಾಗಿ ಬದ್ರಿಯಾ ಶಾಲೆ ಹಂತ ಹಂತವಾಗಿ ಬೆಳೆದು ಪೂರ್ಣ ಪ್ರಮಾಣದ ಕಾಲೇಜು ಆಗಿ ಬೆಳೆಯಿತು. ಶತಮಾನದ ಆರಂಭದಲ್ಲಿ ಪ್ರಾಥಮಿಕ ಹಂತದಿಂದ ಕಾಲೇಜುವರೆಗೆ ಶಿಕ್ಷಣ ಒದಗಿಸುವ ಏಕೈಕ ಮುಸ್ಲಿಮ್ ಶಿಕ್ಷಣ ಕೇಂದ್ರ ಇದಾಗಿತ್ತು.

1930ರಲ್ಲಿ ಅಬ್ದುಲ್ ರಹ್ಮಾನ್ ಎಂಬ ಯುವ ವಕೀಲ (ಬಳಿಕ ನ್ಯಾಯಾಧೀಶ) ಸುಧಾರಣೆಯತ್ತ ಪ್ರಮುಖ ಹೆಜ್ಜೆ ಇರಿಸಿದರು. ಅವರು ಆಧುನಿಕ ಶಿಕ್ಷಣ ಮತ್ತು ಸುಧಾರಣೆಗೆ ಪ್ರಮುಖ ಸ್ಫೂರ್ತಿಯಾಗಿದ್ದರು. ಮಂಗಳೂರಿನಲ್ಲಿ ನಡೆದ ಎಲ್ಲಾ ಸುಧಾರಣೆಯ ಹೆಜ್ಜೆಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಇದರ ಆರಂಭಿಕ ಹೆಜ್ಜೆ 1930ರಲ್ಲಿ ಆರಂಭವಾದ ಮುಸ್ಲಿಮ್ ಲಿಟರರಿ ಅಂಡ್ ಡಿಬೇಟಿಂಗ್ ಸೊಸೈಟಿ. ಕುಂಞಾಮು ಹಾಜಿ, ಜಿ.ಮಹಮ್ಮದ್ ಮತ್ತು ಇತರರ ನೆರವಿನೊಂದಿಗೆ ಅವರು ಇದನ್ನು ಮುಸ್ಲಿಮ್ ಯುವಕರಿಗೆ ಸ್ಫೂರ್ತಿಯ ಕೇಂದ್ರವಾಗಿ ಮಾಡಿದರು. ಸೀರತ್ ಕಮಿಟಿ ಮಿಲಾದ್ ಕಾರ್ಯಕ್ರಮಗಳ ಆಚರಣೆಗಾಗಿ ಆರಂಭಿಸಲಾದ ಇನ್ನೊಂದು ಸಂಸ್ಥೆ. 1932ರಲ್ಲಿ ಮೊಹಸಿನ್ ಬಿನ್ ಹಸನ್ ಅವರು ಅಧ್ಯಕ್ಷರಾದ ಬಳಿಕ ಕ್ರೆಸೆಂಟ್ ಕ್ಲಬ್ ಸಕ್ರಿಯವಾಯಿತು. ಕ್ರೆಸೆಂಟ್ ಕ್ಲಬ್ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡಲು ಪ್ರಯತ್ನಿಸಿತು. ಕಾರ್ಯದರ್ಶಿ ಎಂಬ ನೆಲೆಯಲ್ಲಿ ಮೊಹಮ್ಮದ್ ಹಾರೂನ್ ಹೆಚ್ಚಿನ ಯುವಕರನ್ನು ಇಂತಹ ಆಂದೋಲನದತ್ತ ಆಕರ್ಷಿಸುವಲ್ಲಿ ಯಶಸ್ವಿಯಾದರು. ಮುಸ್ಲಿಮ್ ಸ್ವಯಂ ಸೇವಕ ಅಬ್ದುಲ್ ರಹ್ಮಾನ್ ಅಹ್ಮದ್ ಅವರ ಪ್ರಯತ್ನದ ಫಲ, ಈ ಶೈಕ್ಷಣಿಕ ರಂಗದ ಎಲ್ಲಾ ಪ್ರಯತ್ನಗಳನ್ನು ಜಿಲ್ಲಾಮಟ್ಟದ ನಾಯಕರು ಬೆಂಬಲಿಸಿದರು. ಕಾರ್ಕಳ ಹುಸ್ಸೈನ್ ಸಾಹೆಬ್, ಉಡುಪಿಯ ಅಬ್ದುಲ್ ಸಾಹೆಬ್, ಪುತ್ತೂರಿನ ಮಹಮ್ಮದ್ ಸಾಹೆಬ್, ಕಾಸರಗೋಡಿನ ಶೆರುಲ್ ಮತ್ತು ಶಮ್ನಾಡ್ ಇಂತಹ ಪ್ರಯತ್ನಗಳನ್ನು ನಿರಂತರವಾಗಿ ಬೆಂಬಲಿಸಿದವರಲ್ಲಿ ಪ್ರಮುಖರು. 1937ರಲ್ಲಿ ವಕೀಲರಾಗಿದ್ದ ಕಾರ್ಕಳ ಹುಸ್ಸೈನ್ ಸಾಹೆಬ್ ಅವರು ಮುಸ್ಲಿಮ್ ವೆಲ್ಫೇರ್ ಲೀಗ್ ಆರಂಭಿಸಿದರು. ಇದೇ ಅವಧಿಯಲ್ಲಿ ಕಂದತ್‌ಪಳ್ಳಿ (kandathpatu)ನಲ್ಲಿ ಅಂಜುಮಾನ್ ಮದ್ರಸತುಲ್ ಇಸ್ಲಾಂ ಮತ್ತು ಮದ್ರಸತುಲ್ ಮಹಮ್ಮದೀಯ ಆರಂಭವಾಯಿತು. ರಹೀಂ ಅವರ ಪ್ರೋತ್ಸಾಹ ಮತ್ತು ಪ್ರಯತ್ನಗಳಿಂದಾಗಿ ಮುಸ್ಲಿಮರು ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ

ತೋರಿಸುವಂತಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಶಿಕ್ಷಣ ಪಡೆಯಲು ಆರಂಭಿಸಿದರು. ಹೆಣ್ಣು ಮಕ್ಕಳು ಸಹ ಧೈರ್ಯದಿಂದ ಕಾಲೇಜಿಗೆ ಕಾಲು ಇರಿಸಿದರೂ, ಇವರ ಸಂಖ್ಯೆ ನಗಣ್ಯವಾಗಿತ್ತು.[28] 1940ರ ಹೊತ್ತಿಗೆ ಮಂಗಳೂರು ಮತ್ತು ಕಾರ್ಕಳದಲ್ಲಿ ಪದವಿ ಪಡೆದ ಮುಸ್ಲಿಮ್ ಯುವತಿಯರು ಇದ್ದರು. ಇದು ಆಧುನಿಕ ಶಿಕ್ಷಣದ ಕಡೆಗಿನ ಹಸಿರು ನಿಶಾನೆಯಾಗಿತ್ತು.

ಎಂ.ಸಿ.ಮಮ್ಮಿ : ಇವರು ಸೌತ್ ಕೆನರಾ ಜಿಲ್ಲೆಯ ಇನ್ನೊಬ್ಬ ಬಹುದೊಡ್ಡ ಸುಧಾರಕ. ಇವರು ಮೊಗ್ರಾಲ್‌ಗೆ ಸ್ಥಳಾಂತರಗೊಂಡ ಪೊವ್ವಲ್‌ನ ಮೆನಾತ್ ಅಹಮದ್ ಶಾ ಅವರ ಮಗ. ಇವರು ಕುಂಞಿಅಹ್ಮದ್ ಶಾ ಅವರ ಸಹೋದರ. ಶಮ್ಮಾಡ್ ಅವರಂತೆ ಎಂ.ಸಿ.ಮಮ್ಮಿ ಅವರು ಸಹ ಸಕ್ರಿಯ ಸಮಾಜ ಸೇವಕರಾಗಿದ್ದರು. ಇವರು ಹಳ್ಳಿಯಿಂದ ಹಳ್ಳಿಗೆ ತೆರಳಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ಇವರ ಪ್ರಯತ್ನದ ಫಲವಾಗಿ ಕುಂಬಳೆ, ಅರಿಕ್ಕಾಡ್, ಆಂಗಡಿಮೊಗರ್, ಮೊಗ್ರಾಲ್, ಬದಿಯಡ್ಕ, ಆಲಂಪಾಡಿ, ಕಾಸರಗೋಡು, ಮಂಗಳೂರು, ಬಂಟ್ವಾಳ, ಪುತ್ತೂರು ಮತ್ತು ಕಿನ್ಯಾ ಸೇರಿದಂತೆ ಹಲವು ಸ್ಥಳಗಳಲ್ಲಿ ಹಲವು ಶಾಲೆಗಳು ಆರಂಭವಾದವು.[29] ಇವುಗಳ ಪೈಕಿ ಹಲವು ಸ್ಥಳಗಳಲ್ಲಿ ಶಾಲೆಗಳು, ಧಾರ್ಮಿಕ ಶಿಕ್ಷಣ ನೀಡುವ ಮದ್ರಸಗಳೊಂದಿಗೆ ಸೇರಿಕೊಂಡಿದ್ದವು. ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳು ಮದ್ರಸಾ ಶಿಕ್ಷಣದಿಂದ ಆಧುನಿಕ ಶಿಕ್ಷಣದ ಕಡೆಗೆ ಬರಬೇಕು ಎಂಬುವುದು ಮಮ್ಮಿ ಅವರ ಇಚ್ಛೆಯಾಗಿತ್ತು. ಇವರು ಮದ್ರಸಾದ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸುವ ಆಂದೋಲನ ನಡೆಸಿದರು. ಇದು ಮುಸ್ಲಿಮರ ಶಿಕ್ಷಣದ ಒಂದು ಪ್ರಮುಖ ಹೆಜ್ಜೆಯಾಗಿತ್ತು ಮತ್ತು ಅವರು ಈ ನಿಟ್ಟಿನಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡುವಲ್ಲಿ ಯಶಸ್ವಿಯಾದರು.[30] ಇವರು ಮಾಪ್ಲಾ ಧಾರ್ಮಿಕ ದತ್ತಿ ಸಮಿತಿ ಸದಸ್ಯ ಸಹ ಆಗಿದ್ದರು.

ಶತಮಾನದ ಆರಂಭದಲ್ಲಿ ಕೆಲವೇ ಕೆಲವು ವಿದ್ಯಾವಂತ ಗಣ್ಯ ವ್ಯಕ್ತಿಗಳು ಇದ್ದರು. ಕಾರ್ಕಳದ ಸೈಯದ್ ನೂರುಲ್ಲಾ ವಕೀಲರಾಗಿದ್ದ ಮಂಗಳೂರಿನ ಮೂಸಬ್ಬ ಮತ್ತು ಉಡುಪಿಯ ಉಸ್ಮಾನ್ ಸಾಹೆಬ್ ಅವರು ಅಲೀಘಡ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದರು. ಸೈಯದ್ ನೂರುಲ್ಲಾ ಬ್ಯಾರಿಸ್ಟರ್ ಪದವಿ ಪಡೆದ ಸೌತ್ ಕೆನರಾದ (1938) ಪ್ರಥಮ ಮುಸ್ಲಿಮರಾಗಿದ್ದರು. ಇವರು ಅಲೀಘಡ ಮುಸ್ಲಿಮ್ ವಿಶ್ವವಿದ್ಯಾಲಯದ ಕುಲಪತಿಯಾಗಿ ಹಾಗೂ ಬಾಂಬೆ ಎಜುಕೇಶನ್ ಇಲಾಖೆಯ[31] ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಕಾರ್ಕಳದ ಕೆ.ಎಸ್.ಹುಸೇನ್ ಸಾಹೆಬ್ ಅವರು ಇನ್ನೊಬ್ಬ ಅಡ್ವಕೇಟ್ ಹಾಗೂ ಸಮಾಜಸೇವಕ. ಮೊಗ್ರಾಲ್‌ನ ಎಂ.ಸಿ.ಅಹ್ಮದ್ (1938) ಮದ್ರಾಸ್‌ನಲ್ಲಿ ಪದವಿ ಪಡೆದಿದ್ದರು. ಇವರು ಕಾನೂನು ಪದವಿಯಲ್ಲಿ ಚಿನ್ನದ ಪದಕ ಗಳಿಸಿದ ಖ್ಯಾತ ವಕೀಲರಾಗಿದ್ದರು. ಇಂತಹ ಕೆಲವೇ ಗಣ್ಯ ವ್ಯಕ್ತಿಗಳು ಇಲ್ಲಿ ಇದ್ದರು.

ಪತ್ರಿಕೋದ್ಯಮ ಬರಹಗಾರರು ಮತ್ತು ಚಿಂತಕರನ್ನು ಪೋಷಿಸುವ ಕ್ಷೇತ್ರವಾಗಿದೆ. ಬ್ಯಾರಿಗಳು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯ ಆಗಿದ್ದ ಕಾರಣ 1930ರವರೆಗೆ ಅಂತಹ ಹೇಳಿಕೊಳ್ಳುವ ಬರಹಗಾರರು ಇರಲಿಲ್ಲ. ಅಬ್ದುಲ್ ರಹ್ಮಾನ್ ಎಂಬವರು 1934ರಲ್ಲಿ ಹಮ್‌ದರ್ದ್ ಎಂಬ ವೃತ್ತಪತ್ರಿಕೆ ಆರಂಭಿಸುವ ಮೂಲಕ ಪ್ರಥಮ ಪ್ರಯತ್ನ ಮಾಡಿದರು.

ಆದರೆ ಇದು ಯಶಸ್ವಿಯಾಗಲಿಲ್ಲ. ಅರ್ಕುಳದ ವೊಡೆಯರ್ ಎಂಬವರು 'ಉದಯಚಂದ್ರ' ಆರಂಭಿಸುವ ಮೂಲಕ ಇನ್ನೊಂದು ಪ್ರಯತ್ನ ಮಾಡಿದರು. ಆದರೆ ಅಲ್ಪ ಅವಧಿಯಲ್ಲೆ ಅದು ಮುಚ್ಚಿ ಹೋಯಿತು. 1937ರಲ್ಲಿ ಕಾಸರಗೋಡಿನ ಮಹಮ್ಮದ್ ಶೆರುಲ್ ಎಂಬವರು 'ಜ್ಯೋತಿ' ಆರಂಭಿಸಿದರು. ಆದರೆ ಅವರು 1937ರಲ್ಲಿ ನಿಧನರಾದ ಬಳಿಕ 'ಜ್ಯೋತಿ'ಯೂ ಪ್ರಕಟಣೆ ನಿಲ್ಲಿಸಿತು. ಪತ್ರಕರ್ತರ ಪೈಕಿ ಗುರುವಾಯನಕೆರೆಯ ಹೈದರ್ ಬಹಳ ಸಕ್ರಿಯ ರಾಗಿದ್ದರು. ಇವರು 'ಜ್ಯೋತಿ' ಪತ್ರಿಕೆಯ ಸಂಪಾದಕರಾಗಿದ್ದರು. ಅದು ಪ್ರಕಟಣೆ ಸ್ಥಗಿತ ಗೊಳಿಸಿದ ಬಳಿಕ ಅವರು ಮಂಗಳೂರಿನ 'ಸ್ವತಂತ್ರ ಭಾರತ' ಮತ್ತು ಉಡುಪಿಯ 'ಅಂತರಂಗ' ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಆದರೆ ಭಾರತ ವಿಭಜನೆ ಬಳಿಕ ಅವರು ಎಲ್ಲಿದ್ದಾರೆ ಎಂದು ತಿಳಿಯಲಿಲ್ಲ. ಬಹುಶಃ ಅವರು ಪಾಕಿಸ್ತಾನಕ್ಕೆ ವಲಸೆ ಹೋಗಿರಬಹುದು. ಹೈದರ್ ರೀತಿಯಲ್ಲಿ ಕನ್ನಡದಲ್ಲಿ ಬರೆಯುವ ಬೇರೆ ಉತ್ತಮ ಬರಹಗಾರರು ಮುಸ್ಲಿಮರಲ್ಲಿ ಇರಲಿಲ್ಲ. ಅವರ ಕಣ್ಮರೆ ಕನ್ನಡ ಸಾಹಿತ್ಯಕ್ಕೆ ದೊಡ್ಡ ನಷ್ಟವಾಗಿತ್ತು.

ಪಟ್ಟಿ 10 ಕನ್ನಡದ ಮುಸ್ಲಿಂ ಬರಹಗಾರರು (1800-1947)[32]

	ಹೆಸರು	ಬರವಣಿಗೆ (Nature of work)	ಕಾರ್ಯ
1	ಹೈದರ್ ಕೆ ಗುರುವಾಯನಕೆರೆ	ಸಣ್ಣ ಕಥೆಗಳು	ಜ್ಯೋತಿ ಹಾಗೂ ಇತರ ಪತ್ರಿಕೆಗಳ ಸಂಪಾದಕರಾಗಿದ್ದರು.
2	ಉಬೇದ್ ಟಿ ಕಾಸರಗೋಡು	ಕವನ, ಕಥೆಗಳು	ದ್ವಿಭಾಷಾ ಕವಿ. ಇವರು ಮಲಯಾಳಂನಲ್ಲಿಯೂ ಬರೆದಿದ್ದಾರೆ.
3	ಬಿ.ಎಂ.ಇದಿನಬ್ಬ ಉಳ್ಳಾಲ	ಕವನಗಳು	ಉತ್ತಮ ಕವಿ ಹಾಗೂ ಬರಹಗಾರ. ಶಾಸಕ
4	ಇಬ್ರಾಹಿಂ ಮಂಜೇಶ್ವರ	ಕವನಗಳು, ಲೇಖನಗಳು	ಉದಯಚಂದ್ರ ಪ್ರಕಟಿಸಿದ್ದರು
5	ಮಹಮ್ಮದ್ (ಕೆಬಿಎಸ್ಎಂ) ಪುತ್ತೂರು	ಕರ್ನಾಟಕ ಮುಸ್ಲಿಮರ ಸುಧಾರಣೆಯೂ (1934)	
6	ಟಿಬಿ ಮಹಮ್ಮದ್ ಕುಂಞ್	ರಾಷ್ಟ್ರಭಾಷಾದಲ್ಲಿ ಲೇಖನ	(ಆಣ)ಬೋರ್ಡ್ ಲೈಬ್ರೇರಿಯನ್
7	ಮಹಮ್ಮದ್ ಕಮಾಲ್ ಮಂಗಳೂರು	ಕಂಠೀರವದಲ್ಲಿ ಕಥೆಗಳನ್ನು ಬರೆಯುತ್ತಿದ್ದರು	ಮಂಗಳೂರಿನಲ್ಲಿ ಶಿಕ್ಷಕರಾಗಿದ್ದರು
8	ಸಿ.ಪಿ.ರಹ್ಮಾನ್ ಮಂಗಳೂರು	ಸಣ್ಣ ಕಥೆಗಳು	ವೈರಭ್ಯ (1945)

9 ಹುಸೇನ್ ಸಾಹೇಬ್ ಕಾಪು	ಅಂತರಂಗದಲ್ಲಿ ಸಣ್ಣಕಥೆಗಳನ್ನು ಬರೆಯುತ್ತಿದ್ದರು	ಪೆಣ್ಣಾಮೆ ಸಿಕಂದರ್

ಸೈಯದ್ ಹಂಝುತುಲ್ಲಾ ಕಾರ್ಕಳದ ಉರ್ದು ಕವಿಯಾಗಿದ್ದರು. ಅವರು ಹಲವು ಸುಂದರ ಕ್ವಾಸಿದಾ (Qasida)ಗಳನ್ನು ರಚಿಸಿದ್ದಾರೆ. ಮೌಲಾನಾ ಕಾಪುವಿನ ಸೈಯದ್ ಖ್ವಾಜಾ ಪೀರಾನ್ (1930) ಉತ್ತಮ ವಿದ್ವಾಂಸ ಹಾಗೂ ಕವಿಯಾಗಿದ್ದರು. ಅವರು ಸಹ ಹಲವು ಕ್ವಾಸಿದಾ[33] ರಚಿಸಿದ್ದಾರೆ.

ಅನಕ್ಷರತೆಯ ಶಾಪ ಇದ್ದರೂ ಕೆಲವು ಮುಸ್ಲಿಮರು ಸಾಹಿತ್ಯಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಇಲ್ಲಿ ಹಲವು ಹಾಡುಗಾರರು, ಮಾಪಿಳ್ಳಪಾಟ್ಟು ಮತ್ತು ಜಾನಪದ ಹಾಡು ಹಾಡುವ ಕವಿಗಳು ಇದ್ದರು. ಆದರೆ ಅನಕ್ಷರತೆ ಕಾರಣ ಅವರೊಂದಿಗೆ ಅದು ಸಹ ಕಣ್ಮರೆಯಾದವು.

★★★

1) ಡಾ. ಸುಶೀಲಾ ಉಪಾಧ್ಯಾಯ, ಮಾಪಿಳ್ಳೆ ಮಲಯಾಳಂ (ಪ್ರಬಂಧ) ಪುಟ 1 (ಪೂನ), 1969
2) Ibid P3
3) Ibid P3
4) Ibid P3
5) Ibid P4
6) Ibid P7
7) ಕೂರ್ಗ್‌ನ ಕೊಡವ ಭಾಷೆ ಮಲಯಾಳಂ ಹಾಗೂ ಬ್ಯಾರಿ ಭಾಷೆಯೊಂದಿಗೆ ನಿಕಟ ಸಾಮ್ಯತೆ ಹೊಂದಿದೆ
8) ಬಿ.ಡಿ. ಗಣಪತಿ, ಕೊಡಗು ಮತ್ತು ಕೊಡವರು. ಟಿಪ್ಪಣಿ : ಕೊಡವ ಗಾದೆಗಳನ್ನು ಈ ಪುಸ್ತಕದಿಂದ ಹಾಗೂ ಬ್ಯಾರಿ ಗಾದೆಗಳನ್ನು ಆಡುಮಾತಿನಿಂದ ಆಯ್ದುಕೊಳ್ಳಲಾಗಿದೆ.
9) ಮೌಖಿಕ ಇತಿಹಾಸ, ಅಬ್ದುಲ್ಲಾ ಹಾಜಿ (1975) ಇಚ್ಲಂಗೋಡು, ಅಬೂಬಕರ್ ಮತ್ತು ಮಮ್ಮುಂಞ್ ಮತ್ತು ಕೆಲವರು ಬಟ್ಟೆಬರಹ ಹೊಂದಿದ್ದು ನಮೂನೆಯನ್ನು ಒದಗಿಸಿದ್ದಾರೆ.
10) ಪಣಂಬೂರಿನ ಸಾಯಿರಿ ಬ್ಯಾರಿ ಇದನ್ನು ವಿವರಿಸಿದ್ದು ಡಾ.ಸುಶೀಲಾ ಉಪಾಧ್ಯಾಯ ಅವರ ಸಂಗ್ರಹದಿಂದ ಪಡೆಯಲಾಗಿದೆ.
11) ಅಹ್ಮದ್ ಬಾವಾ ಬಜಾಲ್, ಪೋಕ್ಕಾಕಡೆ ನೇರ್ಚ. ಬ್ಯಾರಿ ವೆಲ್ಫೇರ್ ಸ್ಮರಣಸಂಚಿಕೆ 1989 ಲೇಖನ.

12) ಮೌಖಿಕ ಇತಿಹಾಸ, ಮಹಮ್ಮದ್ ಹಾರೂನ್, ಅಬ್ದುಲ್ಲಾ ಮತ್ತು ಇತರರು
13) ಎಸ್.ಎಂ.ಕೋಯಾ, ಮಾಪಿಳ್ಳ ಆಫ್ ಮಲಬಾರ್, ಪು. 95
14) ಮೌಖಿಕ ಇತಿಹಾಸ, ಝಕರಿಯಬ್ಬ ಮುಹಿದ್ದೀನ್ ಮೌಲ್ವಿ ಮತ್ತು ಇತರರು
15) ಮೌಖಿಕ ಇತಿಹಾಸ, ಎ.ಆರ್. ನೂರಿ ಮತ್ತು ಇತರರು
16) ಪಂದ್ಯಾಲ್ ಅಂದರೆ ಒಂದು ರಪ್ಪು ಕೇಂದ್ರ, ಅಲ್ಲಿ ವಸ್ತುಗಳನ್ನು ರಪ್ಪು ಮಾಡಲು ಸಂಗ್ರಹಿಸಿ ಇಡಲಾಗುವುದು. ಈಗಲೂ ಕುಂಬೋಲ್ ಪಕ್ಕೀರ್ ನೆನಪಿನ ಒಂದು ಪಂದ್ಯಾಲ್ ಬಳಪ್ಪು ಇದೆ.
17) ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್ ಸ್ಮರಣ ಸಂಚಿಕೆ 1983
18) Ibid
19) ಲೋಗಾನ್, ಮಲಬಾರ್ ಮ್ಯಾನುವೆಲ್ Vol.198
20) ಎಸ್.ಎಂ.ಕೋಯಾ, ಮಾಪಿಲ್ಲಾಸ್ ಆಫ್ ಮಲಬಾರ್ ಪು.78
21) ಆಬಿದ್ ಹುಸೈನ್, ಡೆಸ್ಪಿನಿ ಆಫ್ ಇಂಡಿಯನ್ ಮುಸ್ಲಿಮ್ಸ್ (ಬಾಂಬೆ 1965) ಪು. 17
22) ಎಸ್.ಎಂ.ಕೋಯಾ, ಮಾಪಿಲ್ಲಾಸ್ ಆಫ್ ಮಲಬಾರ್ ಪು.77
23) ಸಿ.ಎ.ಇನ್ನೆಸ್, ಮಲಬಾರ್ ಮದ್ರಾಸ್ ಡಿಸ್ಟ್ರಿಕ್ಟ್ ಗೆಜೆಟಿಯರ್ (Mad 1951) ಪು. 300
24) ಎಸ್.ಎಂ.ಕೋಯಾ, ಮಾಪಿಲ್ಲಾಸ್ ಆಫ್ ಮಲಬಾರ್ ಪು.79
25) ಎ.ಆರ್.ನೂರೀಸ್, ಮೈಕಾಲ ಪು.33, ಮೌಖಿಕ ಇತಿಹಾಸ, ಎ.ಆರ್. ಅಹ್ಮದ್ ಮತ್ತು ಇತರರು
26) Ibid, ಪು.45
27) Ibid, ಪು.43-44
28) Ibid,
29) ಸ್ಮರಣ ಸಂಚಿಕೆ, ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್ 1983, ಮೊಗ್ರಾಲ್
30) Ibid,
31) ಮೌಖಿಕ ಇತಿಹಾಸ, ಖುರ್ಷಿದ್ ಹಸನ್ ಸಾಹೇಬ್ ಮತ್ತು ಇತರರು
32) ಬಿ.ಶೇಖರ ಭಟ್ ಮತ್ತು ಬಿ.ಎಂ.ಶರ್ಮ, ಡಿ.ಕೆ. ಬರಹಗಾರರು, ತೆಂಕನಾಡು - 1947, ಪು.132-159
33) ಮೌಖಿಕ ಇತಿಹಾಸ, ಖುರ್ಷಿದ್ ಹಸನ್ ಸಾಹೇಬ್ ಮತ್ತು ಹಾರೂನ್ ಸೇಠ್ ಮತ್ತು ಇತರರು

ಅಧ್ಯಾಯ 7

ತುಳುನಾಡಿನಲ್ಲಿ ಮುಸ್ಲಿಮರ ಪ್ರಭಾವ

ತಮ್ಮ ಸಕ್ರಿಯ ವೃತ್ತಿ, ಉದ್ಯೋಗ ಮತ್ತು ಕಠಿಣ ದುಡಿಮೆಯ ಮೂಲಕ ಕಾಸರಗೋಡಿನಿಂದ ಬೈಂದೂರಿನವರೆಗೆ ಹಬ್ಬಿರುವ ಮುಸ್ಲಿಮರು ಒಂದು ಪ್ರಮುಖ ಜನವರ್ಗ ಎಂಬುದನ್ನು ನಾವು ಇಲ್ಲಿ ಗಮನಿಸಲೇಬೇಕು. ಭೂತಾರಾಧನೆಯ ನಾಡಿನಲ್ಲಿ ತಮ್ಮದೇ ಆದ ವಿಶಿಷ್ಟ ನಂಬಿಕೆಯನ್ನು ಅನುಸರಿಸುವ ವರೆಂಬ ಭಾವನೆಯನ್ನು ಸ್ಥಳೀಯರಲ್ಲಿ ಬಿತ್ತುವಲ್ಲಿ ಅವರು ಯಶಸ್ವಿಯಾದರು. ಮಾತ್ರವಲ್ಲ ತಮ್ಮ ಸಂಪ್ರದಾಯ ಮತ್ತು ಆಚರಣೆಗಳ ಮೂಲಕ ಜನರನ್ನು ಆಕರ್ಷಿಸಲು ಅವರಿಗೆ ಸಾಧ್ಯವಾಯಿತು. ಸ್ಥಳೀಯ ಮುಖಂಡರಿಗೆ, ಅದರಲ್ಲೂ ಜೈನ ಆಡಳಿತಗಾರರಾದ ಜೈನ ಬಲ್ಲಾಳರಿಗೆ ಮತ್ತು ಹೆಗ್ಗಡೆಗಳಿಗೆ ಅವರ ಮೇಲೆ ಅಪಾರ ನಂಬಿಕೆಯಿತ್ತು. ಜಾತಿ ನೀತಿ ಬ್ಯಾರಿಗಳು ಅತ್ಯಂತ ಪ್ರಾಮಾಣಿಕ, ಸೌಹಾರ್ದಪ್ರಿಯ ಮತ್ತು ಕಟ್ಟುನಿಟ್ಟಾಗಿ ಧರ್ಮವನ್ನು ಆಚರಿಸುವ ವ್ಯಕ್ತಿಗಳಾಗಿದ್ದರು. ಹಲವಾರು ಪಾಡ್ದನಗಳು ಮತ್ತು ಸ್ಥಳೀಯ ವರದಿಗಳು ಕೂಡಾ ಮುಸ್ಲಿಮರು ಮತ್ತು ಸ್ಥಳೀಯರ ಮಧ್ಯೆ ಇಂತಹ ಸಂಬಂಧ ಇತ್ತೆಂಬುದನ್ನು ದೃಢಪಡಿಸುತ್ತವೆ. ತಮ್ಮ ಸೇವೆಗೆ ಅವರನ್ನು ಭರ್ತಿ ಮಾಡಿಸಿಕೊಳ್ಳಲು ರಾಜರು ತುದಿಗಾಲಲ್ಲಿ ನಿಲ್ಲುತ್ತಿದ್ದರು. ಜೈನ ಮತ್ತು ಬ್ರಾಹ್ಮಣ ಮುಖಂಡರು ಕೂಡಾ ಅವರನ್ನು ಅಧಿಕಾರಿಗಳಾಗಿ ನೇಮಿಸುವುದಕ್ಕೆ ಆದ್ಯತೆ ನೀಡುತ್ತಿದ್ದರು. ದೇವಸ್ಥಾನದ ಆಡಳಿತಗಾರರು ಕೂಡಾ ಅವರನ್ನು ತಮ್ಮ ಬಾಡಿಗೆದಾರರಾಗಿ ನೇಮಿಸಿಕೊಳ್ಳಲು ಇಷ್ಟಪಡುತ್ತಿದ್ದರು. ಇದು ನಿಜವಾಗಿ ಇಸ್ಲಾಮಿನ ಪ್ರಾಮಾಣಿಕತೆ ಮತ್ತು ದೃಢಸಂಕಲ್ಪಕ್ಕೆ ದೊರೆತೆ ಮನ್ನಣೆಯಾಗಿತ್ತು. ಒಬ್ಬ ನೈಜ ಮುಸಲ್ಮಾನ ತನ್ನ ಶತ್ರುಗಳಿಗೂ ಹಾನಿಯುಂಟು ಮಾಡಲಾರ. ಯಾಕೆಂದರೆ ಆತನ ಮನದಲ್ಲಿ ದೇವಭಯ ಸದಾ ಜಾಗೃತವಾಗಿರುತ್ತದೆ ಮತ್ತು ಇತರರಿಗೆ ಕೆಡುಕು ಉಂಟು ಮಾಡುವುದನ್ನು ದೇವರು ಮೆಚ್ಚುವುದಿಲ್ಲ ಇಸ್ಲಾಮಿನ ಈ ಉದಾತ್ತ ತತ್ವವನ್ನು ತಮ್ಮೊಳಗೆ ಅಳವಡಿಸಿಕೊಂಡ ಪರಿಣಾಮವಾಗಿ

ವಿಶ್ವಾಸಿಗಳು ಜಿಲ್ಲೆಯ ಮುಸ್ಲಿಮೇತರರ ಮಟ್ಟಿಗೆ ಒಬ್ಬ ನಂಬಿಗಸ್ಥ ಸ್ನೇಹಿತರಾಗಿ ಅಥವಾ ಸೋದರರಾಗಿ ಕಾಣಿಸುತ್ತಿದ್ದರು.

ಯಾವುದೇ ರೀತಿಯ ಪೌರೋಹಿತ್ಯ ಅಥವಾ ಪುರೋಹಿತಶಾಹಿ ಸಂಘಟನೆ ಮತ್ತು ಮಿಷನರಿ ಇಲ್ಲದೆ ಇರುವುದು ಮುಸ್ಲಿಮರನ್ನು ಭಿನ್ನವಾದ ಸ್ಥಾನದಲ್ಲಿ ನಿಲ್ಲಿಸುತ್ತದೆ. ಮಿಷನರಿ ಸಮಾಜವಾಗಲೀ, ವಿಶೇಷ ತರಬೇತು ಪಡೆದ ಮಧ್ಯವರ್ತಿಗಳಾಗಲೀ, ಇಲ್ಲಿ ಕಂಡು ಬರುವುದಿಲ್ಲ.[1] ಸಮಾಜದ ಮೇಲೆ ಇಂತಹ ಪ್ರಭಾವ ಬೀರುವ ಯಾವುದೇ ಶಕ್ತಿ ಪ್ರದೇಶದಲ್ಲಿ ಇರಲಿಲ್ಲ. ಆಷ್ಟು ಮಾತ್ರವಲ್ಲ ಜನರಿಗೆ ಮಾರ್ಗದರ್ಶನ ನೀಡುವಂತಹ ಒಂದು ಧಾರ್ಮಿಕ ಸಂಘಟನೆಯೂ ಅಸ್ತಿತ್ವದಲ್ಲಿರಲಿಲ್ಲ. ತುಳುನಾಡಿನ ಇಡೀ ಮುಸ್ಲಿಮ್ ಸಮುದಾಯವು ದೂರದ ಪೊನ್ನಾಣಿಯ ಮರ್ಹೂಮ್‌ಗಳನ್ನು ಅವಲಂಬಿಸಬೇಕಾಗಿತ್ತು. ಆಗ ಕರಾವಳಿಯ ಮುಸ್ಲಿಮರಿಗೆ ಲಭ್ಯವಿದ್ದ ಧಾರ್ಮಿಕ ಕೇಂದ್ರ ಆದೊಂದೇ. ಆದರಲ್ಲೂ ಅಗತ್ಯ ಬಿದ್ದಾಗ, ಧಾರ್ಮಿಕ ವಿಚಾರಗಳಲ್ಲಿ ಏನಾದರೂ ಗೊಂದಲ ಅಥವಾ ಸಮಸ್ಯೆ ತಲೆದೋರಿದಾಗ ಮಾತ್ರ ಅವರನ್ನು ಸಂಪರ್ಕಿಸಿ ಸಲಹೆ ಪಡೆಯಲಾಗುತ್ತಿತ್ತು. ಹೀಗಾಗಿ ಇಸ್ಲಾಮ್ ಜನರ ಹೃದಯವನ್ನು ಅದರಲ್ಲೂ ಸ್ಥಳೀಯ ಕೆಳ ಜಾತಿಯ ಜನರ ಮನಸ್ಸನ್ನು ತಲುಪುವಲ್ಲಿ ಯಶಸ್ವಿಯಾಗಿತ್ತು. ಇದಕ್ಕೆ ಕಾರಣ ಇಸ್ಲಾಮಿನ ಅಂತರ್ಗತವಾದ ವೈಶಿಷ್ಟ್ಯ. ಹಾಗೆ ನೋಡಿದರೆ ಪ್ರತಿಯೊಬ್ಬ ಮುಸ್ಲಿಮನೂ, ಆತ ಹನಫಿಯಾಗಿರಲಿ, ಶಾಫಿಯಾಗಿರಲಿ, ಬ್ಯಾರಿಯಾಗಿರಲಿ, ಮಾಪಿಳ್ಳೆಯಾಗಿರಲಿ, ಇಸ್ಲಾಮೀ ಜೀವನದ ಮಾದರಿಯಾಗಿದ್ದಾನೆ. ಇಸ್ಲಾಮ್ ಮೋಡಿ ಮಾಡುವಂತಹ ಜೀವನ ಶೈಲಿಯನ್ನು ಹೊಂದಿತ್ತು. ಸ್ಥಿರತೆಯಲ್ಲಿ ನಂಬಿಕೆ ಜಾತಿ, ವರ್ಣ, ಹೆಣ್ಣು-ಗಂಡು ಹಾಗೂ ಬಡವ-ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲ ಸಹಜೀವಿಗಳನ್ನು ಪ್ರೀತಿಸಲು ಅದು ಕಲಿಸುತ್ತದೆ. ಪ್ರತಿಯೊಬ್ಬ ಮುಸ್ಲಿಮನೂ ಸಮಾನತೆಯ ನಿದರ್ಶನವಾಗಿ ನಮಗೆ ಗೋಚರಿಸುತ್ತಾನೆ. ಪ್ರೊ. ಆರ್ನಾಲ್ಡ್ ಪ್ರವಾದಿಯ ಮೊಮ್ಮಗ ಹಸನ್‌ರ ಮರಿಮಗಳಾದ ನಫೀಸಾರ ಉದಾಹರಣೆಯನ್ನು ಕೊಡುತ್ತಾರೆ. ಅವರ ದೇವನಿಷ್ಠೆ ಮತ್ತು ನಿರ್ಲಿಪ್ತ ಬದುಕು ಆಕೆಯನ್ನು ಕೈರೋದಾದ್ಯಂತ ಒಬ್ಬ ಸಂತನ ಘನತೆಗೆ ಏರಿಸಿಬಿಡುತ್ತದೆ. ಆಕೆಯ ನೆರೆಯಾಕೆ ಒಬ್ಬ ಮುಸ್ಲಿಮೇತರಳಾಗಿದ್ದಳು. ಆಕೆಗೊಬ್ಬ ರೋಗಪೀಡಿತ ಮತ್ತು ಮಂಚ ಬಿಟ್ಟು ಏಳಲಾಗದ ಮಗಳಿದ್ದಳು. ಒಮ್ಮೆ ನೆರೆಯಾಕೆ ಮತ್ತು ಆಕೆಯ ಕುಟುಂಬಿಕರಿಗೆ ಮಾರುಕಟ್ಟೆಗೆ ಹೋಗಬೇಕಾದ ಅನಿವಾರ್ಯತೆ ಇತ್ತು. ಆ ಸಂದರ್ಭದಲ್ಲಿ ಅವರು ಮಗಳನ್ನು ಈ ಪಾವನ ಮುಸ್ಲಿಮ್ ಮಹಿಳೆಯ ಬಳಿ ಬಿಟ್ಟು ಹೋಗಿದ್ದರು. ನಫೀಸಾಳಿಗೆ ಆ ಹೆಣ್ಣುಮಗುವನ್ನು ಶುಶ್ರೂಷೆ ಮಾಡುವುದು ಅತೀವ ಸಂತೋಷದ ವಿಷಯವಾಗಿತ್ತು. ಆಕೆಯ ಕಾಯಿಲೆಯು ಸಂತಳ ಮನವನ್ನು ಕಲಕಿ ಬಿಟ್ಟಿತ್ತು. ಆಕೆ ತನ್ನ ಕೈಗಳನ್ನು ಎತ್ತಿ ಈ ಅಸಹಾಯಕಿಗಾಗಿ ದೇವರೊಡನೆ ಬೇಡಿಕೊಂಡಳು. ಆಕೆಯ ಅಂಗಾಂಗಗಳಲ್ಲಿ ಮತ್ತೆ ಚೈತನ್ಯ ತುಂಬಿಕೊಂಡಿತು. ತನ್ನ ಹೆತ್ತವರು ವಾಪಸ್ ಬಂದಾಗ ಅವರನ್ನು ಸ್ವಾಗತಿಸಲು ಆಕೆ ಶಕ್ತಳಾಗಿದ್ದಳು. ಕೃತಜ್ಞತಾ ಭಾವ ತುಂಬಿ ಬಂದು ಆಕೆಯ ಇಡೀ ಕುಟುಂಬವೇ ಆಕೆಯ ವಿಮೋಚಕಳ ಧರ್ಮವನ್ನು ಸ್ವೀಕರಿಸಿತು.[3] ಬೇರೆ ಬೇರೆ ಕಡೆ ನಡೆದ ಮತಾಂತರದ ಹಲವಾರು ಪ್ರಕರಣಗಳ ಹಿಂದೆ ಇರುವುದು ಇಂತಹ ಕತೆಗಳೇ. ಅನಾಥರು, ನಿರ್ಗತಿಕರು, ಕೆಳ ಜಾತಿಯವರು, ಬಹಿಷ್ಕೃತ ಜಾತಿಯವರು, ಹಾಗೂ

ಸಮಾಜದಲ್ಲಿ ನೆಮ್ಮದಿಯ ಬದುಕು ಸಾಗಿಸಲು ಸಾಧ್ಯವಿರದ ಎಲ್ಲರೂ ಇಸ್ಲಾಮಿನಲ್ಲಿ ಆಶ್ರಯ ಪಡೆದರು ಮತ್ತು ಮುಸ್ಲಿಮರ ಒಡನಾಟದಲ್ಲಿ ಸಮಾಧಾನದಿಂದ ಬದುಕು ಸಾಗಿಸಿದರು. ಇದು ನಿಜವಾಗಿ ಜಗತ್ತಿಗೆ ಆದರಲ್ಲೂ ತುಳುನಾಡಿಗೆ ಇಸ್ಲಾಮ್‌ನ ಕೊಡುಗೆಯಾಗಿದೆ.

ತುಳುನಾಡಿನ ಮುಸ್ಲಿಮರು ಖಂಡಿತವಾಗಿಯೂ ಸ್ಥಳೀಯರೇ. ಇವರು ಒಂದೋ ಮತಾಂತರಗೊಂಡವರು ಅಥವಾ ಸಮ್ಮಿಶ್ರ ತಳಿಯವರು (ಎತ್ನಿಕ್ ಮಿಕ್ಸ್). ಇಸ್ಲಾಮ್ ಅವರ ನಂಬಿಕೆಯನ್ನು ಮುಸ್ಲಿಮ್ ಆಗಿ ಪರಿವರ್ತಿಸಿತು, ಆದರೆ ಅವರ ಸಂಸ್ಕೃತಿಯನ್ನಲ್ಲ. ನೆಲ, ಪರಿಸರ, ಅಭ್ಯಾಸಗಳು ಮತ್ತು ನಡತೆಗಳಲ್ಲಿ ಬದಲಾವಣೆಯಾಗಲಿಲ್ಲ. ಇಸ್ಲಾಂ ಧರ್ಮವು ಒಂದು ನಂಬಿಕೆಗೆ ಆಧಾರ, ಜೀವನಶೈಲಿಗೆ ಮಾದರಿಯನ್ನು ಕಲಿಸಿ ಮುಸ್ಲಿಮರನ್ನಾಗಿ ಮಾಡಿತು. ಆದರೆ ಸ್ಥಳೀಯ ನಡವಳಿಕೆಗಳನ್ನು ಕಡೆಗಣಿಸಿದುದರಿಂದಾಗಿ ಅವು ಉಳಿದು ಕೊಂಡವು. ಆರಂಭದ ಶತಮಾನಗಳಲ್ಲಿ ಮುಸ್ಲಿಮ್ ಧರ್ಮಶಾಸ್ತ್ರಜ್ಞರಿಗೆ ಇಸ್ಲಾಮಿನ ಪರಿಶುದ್ಧತೆಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಹಲವಾರು ನಂಬಿಕೆಗಳು, ಧರ್ಮ ಶಾಸ್ತ್ರದ ಪದ್ಧತಿಗಳು ಮತ್ತು ಸಂತರು ಮತ್ತು ಗೋರಿಗಳನ್ನು ಪೂಜಿಸುವುದು ಸೇರಿದಂತೆ ಹಲವು ಮೂಢನಂಬಿಕೆಗಳು ಮುಸ್ಲಿಮ್ ನಂಬಿಕೆಯೊಳಗೆ ಹಾಸುಹೊಕ್ಕಾಗಿರುವುದನ್ನು ನಿರಾಕರಿಸಲು ಸಾಧ್ಯವಿಲ್ಲ. ಸ್ಥಳೀಯ ಭೂತಾರಾಧನೆ, ಪ್ರೇತಗಳಲ್ಲಿ ನಂಬಿಕೆ, ಮಾಟ ಮಂತ್ರ, ತಾಯಿತಗಳ ಬಳಕೆ ಇತ್ಯಾದಿಗಳು ಮತಾಂತರ ಮತ್ತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ.[4] ಬ್ಯಾರಿ ಮುಸ್ಲಿಮರು ಅವರ ಸಂಪ್ರದಾಯಗಳಲ್ಲಿ ಇಸ್ಲಾಮಿನ ಸಂಪೂರ್ಣತೆಯನ್ನು ಕಂಡಕೊಂಡರು ಅಥವಾ ಇಸ್ಲಾಮೀ ನಂಬಿಕೆಗಳಲ್ಲಿ ಅವರ ಸಂಪ್ರದಾಯಗಳ ಪರಿಪೂರ್ಣತೆಯನ್ನು ಕಂಡರು. ಅವರು ಮನುಷ್ಯರ ನಡುವೆ ಎಲ್ಲ ರೀತಿಯ ಸಂಘರ್ಷ ಮತ್ತು ಭಿನ್ನತೆಗಳನ್ನು ಸೃಷ್ಟಿಸುವ ಶೈತಾನ ಅಥವಾ ದುಷ್ಟ ಶಕ್ತಿಯಿಂದ ದೂರವುಳಿಯಲೇ ಬೇಕಾಗಿತ್ತು. ಇದನ್ನು ಪತ್ತೆ ಹಚ್ಚದೇ ಹೋದಾಗ ಧರ್ಮ ಮತ್ತು ನಂಬಿಕೆಯ ದೃಷ್ಟಿಯಲ್ಲಿ ಎಲ್ಲ ಮನುಷ್ಯರೂ ತಪ್ಪು ದಾರಿಯನ್ನು ತುಳಿಯುತ್ತಾರೆ.

ಇಂತಹ ಅಜ್ಞಾನದಿಂದಾಗಿಯೇ ಇಸ್ಲಾಮ್ ಪ್ರತಿಪಾದಿಸುವ ಮೂಲಭೂತ ಬೋಧನೆಗಳಿಗೆ ಹೊರತಾದ ಮೂಢನಂಬಿಕೆಗಳು ಮತ್ತು ಅನಿಯಂತ್ರಿತ ಸಂಪ್ರದಾಯಗಳು ಕಾಣಿಸಿಕೊಂಡವು. ಇಸ್ಲಾಮ್ ಒಂದು ನಂಬಿಕೆಯಾಗಿ ಹಾಗೂ ಸಂಪ್ರದಾಯಗಳು ಒಂದು ಪದ್ಧತಿ ಎಂಬ ನೆಲೆಯಲ್ಲಿ ಜತೆಗೂಡಿ ಈ ಪ್ರದೇಶದಲ್ಲಿ ಒಂದು ಹೊಸ ಸಾಂಸ್ಕೃತಿಕ ವ್ಯವಸ್ಥೆಗೆ ನಾಂದಿ ಹಾಡಿತು.

ಇಂತಹ ಸಂಪ್ರದಾಯ ಮತ್ತು ನಂಬಿಕೆಗೆ ತುಳುನಾಡು ಜಿಲ್ಲೆಯು ಒಂದು ಸಮರ್ಪಕ ವಾದ ಹಿನ್ನೆಲೆಯನ್ನು ಒದಗಿಸಿತ್ತು. ದೊಡ್ಡ ಸಂಖ್ಯೆಯ ನದಿ, ತೊರೆ, ಹಿನ್ನೀರು, ಸಹಜವಾದ ಏರಿಳಿತಗಳು, ಬೆಟ್ಟ ಮತ್ತು ಕಣಿವೆಗಳು, ಈ ಪ್ರದೇಶವನ್ನು ಘಟ್ಟದಿಂದ ಪ್ರತ್ಯೇಕಿಸುವ ಪಶ್ಚಿಮ ಘಟ್ಟದ ಕಾಡುಗಳು, ಭತ್ತ ಮುಖ್ಯ ಬೆಳೆಯಾಗಿ ಬೆಳೆಯುವ ಫಲವತ್ತಾದ ಗದ್ದೆಗಳು, ಕಬ್ಬು ಮತ್ತು ತೆಂಗಿನ ತೋಟಗಳು ಇಡೀ ಪ್ರದೇಶವನ್ನೇ ಗಾರ್ಡನ್ ವ್ಯಾಲಿಯಾಗಿ ಪರಿವರ್ತಿಸಿದೆ. ಇಲ್ಲಿ ಬದುಕು ಸಾಗಿಸಲು ಇಷ್ಟ ಪಡುವ ವ್ಯಕ್ತಿ ತನ್ನ ಪರಿಶ್ರಮ ಮತ್ತು ಪ್ರಯತ್ನದ ಮೂಲಕ ಇಲ್ಲಿ ಆರಾಮದಲ್ಲೇ ಬದುಕಬಹುದಾಗಿದೆ. ಇಂತಹ ಶ್ರೀಮಂತವಾದ ಪ್ರಕೃತಿಯ ಮಧ್ಯೆ ಮುಸ್ಲಿಮರು ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಪ್ರಾಮಾಣಿಕವಾದ

ವ್ಯಾಪಾರ, ನದಿ ತಟದ ಪಟ್ಟಣಗಳಿಗೆ ದೋಣಿ ಸೌಕರ್ಯ, ಮಣ್ಣಿನ ನೆಲದ ಮೇಲೆ ಬಂಡಿ ಗಳನ್ನು ಓಡಿಸುವ ಚಾಲಕರು ಮತ್ತು ಒಟ್ಟಾರೆಯಾಗಿ ಚಿಗಿತುಕೊಂಡ ಕ್ರಿಯಾಶೀಲತೆ ಯನ್ನು ಮುಸ್ಲಿಮ್ ಸಂಸ್ಕೃತಿಯ ಪ್ರತಿಕ್ರಿಯೆಯೆಂದೇ ಹೇಳಬಹುದು. ತುಳುನಾಡಿನ ಎಲ್ಲೆಡೆಯೂ ದೋಣಿ ಮಾಲಿಕರು ಮತ್ತು ಚಾಲಕರು ಮುಸ್ಲಿಮರೇ ಆಗಿದ್ದರು. ಅಲ್ಲದೆ ಅವರೊಂದು ಪರಿಚಿತ ಗುಂಪಾಗಿದ್ದರು. ದೋಣಿಗಳ ಬದಲಿಗೆ ಎತ್ತಿನ ಗಾಡಿಗಳು ಬಂದಾಗ ಅಲ್ಲೂ ಅವರೇ ಚಾಲಕರಾಗಿ ಮುಂದುವರಿದರು. ಗೂಡಂಗಡಿಯಿಂದ ಹಿಡಿದು ಚಹಾದ ಅಂಗಡಿ, ಮೀನಿನ ಅಂಗಡಿ, ಮನೆ ಮನೆ ತಿರುಗಾಡುವ ವರ್ತಕರಿಂದ ಹಿಡಿದು, ಹಡಗುಗಳ ಮಾಲಕರವರೆಗೆ, ಮರದ ವ್ಯಾಪಾರಿಗಳು, ಅಕ್ಕಿ ವ್ಯಾಪಾರಿಗಳು ಮತ್ತು ಜವಳಿ ವರ್ತಕರವರೆಗೆ ಎಲ್ಲ ಕ್ಷೇತ್ರಗಳಲ್ಲೂ ಮುಸ್ಲಿಮರು ತಮ್ಮನ್ನು ತೊಡಗಿಸಿಕೊಂಡರು ಮತ್ತು ಹೆಸರು ಗಿಟ್ಟಿಸಿ ಕೊಂಡರು. ಭೂಮಾಲಿಕರು, ರೈತರು, ದಿನಗೂಲಿ ಕಾರ್ಮಿಕರು, ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮುಸ್ಲಿಮರಿಗೆ ಜಿಲ್ಲೆಯಲ್ಲಿ ಒಂದು ಸ್ಥಾನವಿತ್ತು. ಅದು ಸಂಸ್ಕೃತಿಯ ಸಂಕರವಾಗಿತ್ತು ಮತ್ತು ಮುಸ್ಲಿಮರು ಅದರ ಭಾಗವಾಗಿದ್ದರು. ಅವರು ಯಾವುದೇ ಕ್ಷೇತ್ರವನ್ನು ಬಿಟ್ಟಿರಲಿಲ್ಲ ಯಾವುದೇ ಶ್ರಮವನ್ನು ಕಡೆಗಣಿಸಲಿಲ್ಲ ಮತ್ತು ಧರ್ಮಸಮ್ಮತವಾದ ಯಾವುದೇ ಉದ್ಯೋಗಕ್ಕೆ ಬೆನ್ನು ತೋರಿಸಲಿಲ್ಲ. ಮುಸ್ಲಿಮರು ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಕಾರಣದಿಂದಲೇ ಅವರು ಹೆಚ್ಚು ಚಿರಪರಿಚಿತರಾದರು. ಅಷ್ಟೇ ಅಲ್ಲ ಹಂಜಮಾನ, ಮಾಪಿಳ್ಳ, ಬ್ಯಾರಿ ಅಥವಾ ಸಾಹೇಬ ಎಂಬ ಗೌರವಕ್ಕೂ ಪಾತ್ರರಾದರು.

ಇಸ್ಲಾಮ್ ಅವರಿಗೆ ಸ್ಫೂರ್ತಿಯನ್ನೂ ಸಾಮಾಜಿಕ ಸ್ಥಾನಮಾನವನ್ನೂ ಕೊಟ್ಟಿತು. ಜತೆಗೆ ಕಟ್ಟುಮಸ್ತಾದ ದೇಹ, ಸಂಪ್ರದಾಯ ಹಾಗೂ ಏನನ್ನು ಬೇಕಾದರೂ ಸಾಧಿಸಬಹುದೆಂಬ ಸಾಮರ್ಥ್ಯವನ್ನು ಕೊಟ್ಟಿತು. ಉದ್ಯೋಗ ಮತ್ತು ಶ್ರಮದ ಘನತೆಯು ಇಸ್ಲಾಮಿನ ಇನ್ನೊಂದು ದೊಡ್ಡ ಕೊಡುಗೆ. ಉದ್ಯೋಗ, ನೌಕರಿ ಅಥವಾ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮೇಲು ಕೀಳೆಂಬ ಭಾವನೆಯಾಗಲೀ ಯಾವುದೇ ನಿರ್ದಿಷ್ಟ ಉದ್ಯೋಗವು ಕೀಳೆಂಬ ಭಾವನೆಯಾಗಲೀ ಇಸ್ಲಾಮಿನಲ್ಲಿರಲಿಲ್ಲ. ನಿರ್ದಿಷ್ಟ ಜಾತಿಯವರು ನಿರ್ದಿಷ್ಟವಾದ ಕೆಲಸ ಮಾಡಬೇಕೆಂಬ ಕಟ್ಟುಪಾಡೂ ಇರಲಿಲ್ಲ. ಸ್ಥಳೀಯರಿಂದ ಪ್ರತ್ಯೇಕಗೊಳ್ಳದೆಯೇ ಕಚ್ಚೀ ಮೇಮನರು ಮತ್ತು ನವಾಯತರು ಪ್ರಮುಖ ವರ್ತಕರಾಗಿ ಮೂಡಿ ಬಂದರು. ವಾಸ್ತವದಲ್ಲಿ ಹನಫಿಗಳು ಸ್ಥಳೀಯ ಮುಸ್ಲಿಮರಿಗೆ ಧಾರ್ಮಿಕವಾಗಿ ಸ್ಫೂರ್ತಿಯೊದಗಿಸುವ ವರ್ಗವಾಗಿದ್ದರು.

ಜಿಲ್ಲೆಯಲ್ಲಿ ಮುಸ್ಲಿಮರು ಹಬ್ಬಲು ವಾಣಿಜ್ಯ ಕ್ಷೇತ್ರದಲ್ಲಿ ಅವರಿಗಿದ್ದ ಏಕಸ್ವಾಮ್ಯವೇ ಮುಖ್ಯ ಕಾರಣವಾಗಿತ್ತು. ಪೋರ್ಚುಗೀಸರಿಗೆ ಮುಸ್ಲಿಮ್ ಮತ್ತು ಅರಬ್ ವರ್ತಕರ ಮೇಲೆ ಪ್ರಾಬಲ್ಯ ಸಾದಿಸುವುದು ಕಷ್ಟವಾಯಿತು. ಇಸ್ಲಾಮ್ ಈ ಪ್ರದೇಶದಲ್ಲಿ ಹೆಚ್ಚು ಪರಿಚಿತ ವಾಗಿದ್ದುದರಿಂದ ಅವರ ಧರ್ಮಪ್ರಚಾರ ಚಟುವಟಿಕೆಗಳಿಗೂ ತೊಂದರೆ ಎದುರಾಯಿತು. ಹೀಗಾಗಿ ಪೋರ್ಚುಗೀಸರು ಮುಸ್ಲಿಮರನ್ನು ತಮ್ಮ ಶತ್ರುಗಳೆಂದು ಬಗೆದರು ಮತ್ತು ಹತ್ಯಾ ಕಾಂಡಗಳಿಗೆ ಮುಂದಾದರು. ಮೊಟ್ಟ ಮೊದಲ ಬಾರಿಗೆ ಪೋರ್ಚುಗೀಸರು ಮುಸ್ಲಿಮರಲ್ಲಿ ಮತೀಯ ಭಾವನೆಯನ್ನು ಮೂಡಿಸಿದರು. ಈ ಹತ್ಯಾಕಾಂಡಗಳಿಂದ ತಮ್ಮನ್ನು ರಕ್ಷಿಸುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟ ನಡೆಸಲು ಅಥವಾ ಪವಿತ್ರ ಯುದ್ಧ

(ಜಿಹಾದ್) ನಡೆಸಲು ಮುಸ್ಲಿಮರನ್ನು ನಿರ್ಬಂಧಿಸಲಾಯಿತು. ಮುಸ್ಲಿಮರ ಬಳಿ ಪೋರ್ಚುಗೀಸರ ದಾಳಿಯನ್ನು ಎದುರಿಸಲು ಬೇಕಾದ ಸಂಘಟನೆಯಾಗಲೀ ಅಸ್ತ್ರಗಳಾಗಲೀ ಇರಲಿಲ್ಲ. ಆದರೆ ಉಳ್ಳಾಲದ ರಾಣಿ ಅಬ್ಬಕ್ಕಳಂತಹ ಸ್ಥಳೀಯ ಮುಖಂಡರ ಜತೆ ಅವರು ಏಕತೆ ಪ್ರದರ್ಶಿಸಿದರು. ಕೊನೆಗೆ ಇಕ್ಕೇರಿ ಅರಸರ ಜತೆಗೂಡಿ ಪೋರ್ಚುಗೀಸ್ ದಾಳಿಯನ್ನು ತಪ್ಪಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾದರು. ತುಳುನಾಡಿನಲ್ಲಿ ಪೋರ್ಚುಗೀಸ್ ದಾಳಿಯಿಂದ ಅತ್ಯಂತ ಹೆಚ್ಚು ತೊಂದರೆಗೊಳಗಾದವರೆಂದರೆ ಮುಸ್ಲಿಮರು ಎಂಬುದು ಸರ್ವವಿದಿತ. ಸಾಂಪ್ರದಾಯಿಕ ಹಂಜಮಾನಗಳನ್ನು ಪುಡಿಗಟ್ಟಿ ವಾಣಿಜ್ಯ ರಂಗದಲ್ಲಿ ಮುಸ್ಲಿಮರ ಏಕಸ್ವಾಮ್ಯವನ್ನು ಕೊನೆಗಾಣಿಸಲಾಯಿತು. ಸಾಂಪ್ರದಾಯಿಕ ಮುಸ್ಲಿಮ್ ವೃತ್ತಿಗಳಲ್ಲಿ ಬದಲಾವಣೆಯಾಯಿತು. ಬ್ಯಾರಿಗಳು ಹಲವಾರು ವೃತ್ತಿ ಮತ್ತು ಉದ್ಯೋಗಗಳನ್ನು ಕೈಗೆತ್ತಿಕೊಳ್ಳಬೇಕಾಯಿತು. ಆದರೆ ನವಾಬರ ಕಾಲದಲ್ಲಿ ಸ್ಥಳೀಯರು ಇತರ ವರ್ತಕ ಸಮುದಾಯಗಳ ನೆರವಿನೊಂದಿಗೆ ದಕ್ಷಿಣ ಕೆನರಾದಲ್ಲಿ ತಮ್ಮ ವಾಣಿಜ್ಯ ಶಕ್ತಿಯನ್ನು ಪುನಶ್ಚೇತನಗೊಳಿಸಿದರು. ಇತರ ಹಲವು ಹೊಸ ವೃತ್ತಿಗಳಲ್ಲೂ ಅವರು ಪ್ರಗತಿ ಸಾಧಿಸಿದರು. ತುಳುನಾಡಿನ ಆರ್ಥಿಕತೆಯಲ್ಲಿ ಮುಸ್ಲಿಮರು ಬಹುಮುಖ್ಯ ಪಾತ್ರವಹಿಸಿದ್ದರೆಂಬುದನ್ನು ಇದರಿಂದ ಕಂಡುಕೊಳ್ಳಬಹುದಾಗಿದೆ.

ಹೈದರಾಲಿ, ಟೀಪು ಸುಲ್ತಾನರ (ಮೈಸೂರಿನ ನವಾಬರ) ಆಡಳಿತ ಕಾಲವೊಂದನ್ನು ಬಿಟ್ಟರೆ ತುಳುನಾಡು ಯಾವತ್ತೂ ಮುಸ್ಲಿಮ್ ಆಡಳಿತಕ್ಕೊಳಪಟ್ಟಿರಲಿಲ್ಲ. ಈ ಕಾಲದಲ್ಲಿ ಪರ್ಷಿಯಾದೊಂದಿಗೆ ಸಂಬಂಧ ಹೆಚ್ಚು ಬಲಿಷ್ಠಗೊಂಡಿತು. ಕ್ರಿ.ಶ. 1774ರಲ್ಲಿ ಹೈದರಾಲಿಯು ಶೀರಾಝ್‌ನ ಕರೀಮ್ ಖಾನ್ ಸನ್ನಿಧಿಗೆ ತನ್ನ ಒಬ್ಬ ಪ್ರತಿನಿಧಿಯನ್ನು ಕಳುಹಿಸಿಕೊಟ್ಟಿದ್ದನು. ಪರ್ಷಿಯಾ ಕೊಲ್ಲಿಯಲ್ಲಿ ವರ್ತಕರ ವಸತಿ ಕೇಂದ್ರವನ್ನು ನಿರ್ಮಿಸುವುದು ಆತನ ಉದ್ದೇಶವಾಗಿತ್ತು. ಆದರೆ ಅದು ಯಶಸ್ವಿಯಾಗಲಿಲ್ಲ. ಒಮಾನ್‌ನ ಇಮಾಮ್ ಅಹಮದ್ ಜತೆಗಿನ ಸಂಬಂಧವು ಫಲಪ್ರದವಾಗಿತ್ತು. ಪ್ರತಿನಿಧಿಗಳು ಪರಸ್ಪರ ರಾಷ್ಟ್ರಗಳಿಗೆ ಭೇಟಿ ನೀಡಿದರು. ಒಬ್ಬ ಪ್ರತಿನಿಧಿಯನ್ನು ಮಂಗಳೂರಲ್ಲೇ ಬರಮಾಡಿಕೊಳ್ಳಲಾಯಿತು. ಬೈತುಲ್ ನವಾಬ್ ಎಂಬ ಹೆಸರಲ್ಲಿ ಒಂದು ಭವನವನ್ನೂ ಇಲ್ಲಿ ನಿರ್ಮಿಸಲಾಯಿತು. ಟೀಪು ಸುಲ್ತಾನನು ಅಮೆರಿಕದ ವರ್ತಕರಿಗೆ ಪತ್ರ ಬರೆದು ಮೈಸೂರಿಗೆ ತಾವು ತರುವ ಎಲ್ಲ ಸರಕುಗಳಿಗೂ ಶುಲ್ಕ ವಿನಾಯಿತಿ ನೀಡಲಾಗುವುದು, ತಮಗೆ ಏನನ್ನು ಬೇಕಾದರೂ ಖರೀದಿಸುವ ಮತ್ತು ಮಾರುವ ಅಧಿಕಾರವಿದೆ ಮತ್ತು ಇಲ್ಲಿ ವಸತಿಯ ಅವಕಾಶವನ್ನೂ ಮುಕ್ತವಾಗಿ ವ್ಯಾಪಾರ ನಡೆಸುವ ವಾತಾವರಣವನ್ನು ನಿರ್ಮಾಣ ಮಾಡುವ ಭರವಸೆಯನ್ನು ನೀಡಿದನು.[5] ಇದು ಇಡೀ ಕರಾವಳಿ ಪ್ರದೇಶದ ವರ್ತಕ ಸಮೂಹವನ್ನು ಹುರಿದುಂಬಿಸಿತು. ಸುಲ್ತಾನನು ಎಲ್ಲ ಸಮುದಾಯದ ಜನರೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದನು, ಮಸೀದಿ, ಮಂದಿರಗಳೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದನು. ಜನಸಾಮಾನ್ಯರೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದನು. ಅವನು ಮಸೀದಿಗಳಲ್ಲಿ ಎಲ್ಲ ಮುಖಂಡರೊಂದಿಗೆ ಚರ್ಚೆ ನಡೆಸುತ್ತಿದ್ದನು ಮತ್ತು ಜನರ ಧಾರ್ಮಿಕ ಅಗತ್ಯಗಳಿಗೆ ದೇಣಿಗೆ ನೀಡುತ್ತಿದ್ದನು. ಆತನಿಗೆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಪ್ರೀತಿ ಇತ್ತು. ಧಾರ್ಮಿಕ ಸಂಸ್ಥೆಗಳಿಗೆ ಅವನು ತಸ್ದೀಕ್‌ಗಳನ್ನು ನೀಡಿದನು. ಝೀನತ್ ಬಕ್ಷ್ ಮಸೀದಿ ಅಥವಾ ಸುಲ್ತಾನ್

ಪಳ್ಳಿ, ಸುಲ್ತಾನ್ ಬತ್ತೇರಿ, ಬಾವುಟಗುಡ್ಡೆಯ ಈದ್ಗಾ ಮತ್ತು ಕುದ್ರೋಳಿಯಲ್ಲಿರುವ ಷಾಹ್ ಅಮೀರ್ ಮಸೀದಿಯು ಮಂಗಳೂರಿನಲ್ಲಿ ಇರುವ ಟೀಪುವಿನ ಸ್ಮಾರಕಗಳಾಗಿವೆ. ಎಲ್ಲ ಪ್ರಮುಖ ಸ್ಥಳಗಳಲ್ಲಿ ಅವನು ತನ್ನ ಅಧಿಕಾರಿಗಳನ್ನು ನೇಮಿಸಿದನು. ಅವರು ಕ್ರಮೇಣ ಸ್ಥಳೀಯ ನಿವಾಸಿಗಳಾಗಿ ಮಾರ್ಪಟ್ಟರು ಮತ್ತು ಹನಫಿ ವಸತಿ ಕೇಂದ್ರಗಳನ್ನು ನಿರ್ಮಿಸಿದರು. ಅವರಲ್ಲಿ ಹೆಚ್ಚಿನ ಇಸ್ಲಾಮೀ ಪ್ರವೃತ್ತಿ ಇತ್ತು ಮತ್ತು ಕಾಲಕ್ರಮೇಣ ಅವರು ಕರಾವಳಿಯ ಮುಸ್ಲಿಮರಲ್ಲಿ ಹಲವಾರು ಸುಧಾರಣೆಗಳಿಗೆ ಪ್ರೇರಣೆಯೊದಗಿಸಿದರು. ಉಡುಪಿಯ ಹಾಜಿ ಅಬ್ದುಲ್ಲಾ ಸೇಠ್, ಕಾರ್ಕಳದ ಹುಸೇನ್ ಸಾಹೆಬ್, ವಕೀಲ್ ಉಸ್ಮಾನ್ ಸಾಹೇಬ್, ದಾದಾ ಹಾಜಿ ಮೊದಲಾದವರು ಮುಸ್ಲಿಮ್ ಸಮುದಾಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮುಕ್ತ ವ್ಯಾಪಾರ, ಮುಕ್ತ ಸಂಚಾರ ಮತ್ತು ಮುಕ್ತ ಸಂಪ್ರದಾಯಗಳು ಇಸ್ಲಾಮ್ ಈ ಪ್ರದೇಶಕ್ಕೆ ಕೊಟ್ಟ ಪ್ರಮುಖ ಕೊಡುಗೆಗಳಾಗಿವೆ.

ಇಸ್ಲಾಮ್ ವ್ಯಾಪಾರವನ್ನು – ಅದು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ – ಕೃಷಿಯನ್ನು ಮತ್ತು ಅತ್ಯಂತ ಕನಿಷ್ಠ ಮಟ್ಟದ ನೌಕರಿಯನ್ನೂ ಮಾನ್ಯ ಮಾಡುತ್ತದೆ. ಇಸ್ಲಾಮಿನ ಪ್ರಕಾರ ವ್ಯಾಪಾರ ಒಂದು ಸೇವೆಯಾಗಿದ್ದು ಸಾಮಾಜಿಕ ಬದುಕಿನ ಒಂದು ಭಾಗವಾಗಿದೆ. ಅದು ಜನರನ್ನು ಉತ್ಪಾದನಾಶೀಲರಾಗಿರುವಂತೆ ಹುರಿದುಂಬಿಸುತ್ತದೆ. ದಾಸ್ತಾನು ಇಡುವುದು ಮತ್ತು ಬೆಲೆಯನ್ನು ತಿರುಚುವುದನ್ನು ಅದು ವಿರೋಧಿಸುತ್ತದೆ. ವ್ಯಾಪಾರದಲ್ಲಿ ಪ್ರಾಮಾಣಿಕ ರಾಗಿರುವುದು ಒಂದು ಅಗತ್ಯ ನೀತಿಯಾಗಿತ್ತು. ಪ್ರತಿಯೊಬ್ಬ ಮುಸ್ಲಿಮನೂ ಒಂದಿಲ್ಲೊಂದು ಉದ್ಯೋಗ ಅಥವಾ ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಮುಸ್ಲಿಮರಲ್ಲೇ ಬಡಗಿಗಳು ಮತ್ತು ಚಿನ್ನದ ಕೆಲಸ ಮಾಡುವವರೂ ಇದ್ದರು.[6] ಕೆಲಸವಿಲ್ಲದ ಮನಸ್ಸು ದೆವ್ವದ ಕಾರ್ಖಾನೆ ಯಂತೆ ಎಂಬುದು ಹಳೆಯ ಗಾದೆ ಮಾತು. ಆದರೆ ಮುಸ್ಲಿಮರ ಮಟ್ಟಿಗೆ ಕೆಲಸವಿಲ್ಲದ ವ್ಯಕ್ತಿಯೇ ಸಮಾಜದ ಮಟ್ಟಿಗೆ ಪಿಶಾಚಿ ಇದ್ದಂತೆ. ಇಸ್ಲಾಮ್ ತನ್ನ ಅನುಯಾಯಿಗಳಾದ ಮುಸ್ಲಿಮರಿಗೆ ಯಾವುದಾದರೊಂದು ಉದ್ಯೋಗ, ನೌಕರಿ ಅಥವಾ ವ್ಯಾಪಾರದಲ್ಲಿ ತನ್ನನ್ನು ತೊಡಗಿಸಿಕೊಳ್ಳುವಂತೆ ಕರೆ ನೀಡುತ್ತದೆ. ಬೇಡುವುದನ್ನು ನಿರುತ್ತೇಜಿಸ ಲಾಗಿದೆ ಮತ್ತು ಹರಾಮ್ (ಧರ್ಮ ನಿಷಿದ್ಧ) ಎಂದು ಪರಿಗಣಿಸಲಾಗಿದೆ. ಹೀಗಾಗಿ ಪ್ರತಿಯೊಬ್ಬ ಮುಸ್ಲಿಮನು ತನ್ನ ಧರ್ಮದ ಹುಕುಮಿನಂತೆ ಯಾವುದಾದರೊಂದು ವೃತ್ತಿಯಲ್ಲಿ ತನ್ನನ್ನು ತೊಡಗಿಸಿ ಕೊಳ್ಳುತ್ತಿದ್ದ. ಅದು ಆತನ ಮಟ್ಟಿಗೆ ಒಂದು ಧಾರ್ಮಿಕ ಕರ್ತವ್ಯವಾಗಿತ್ತು. ಒಬ್ಬ ಮುಸ್ಲಿಮ್ ಗೃಹಸ್ಥನ ಮಟ್ಟಿಗೆ ಎರಡು ಪ್ರಮುಖ ಕೆಲಸವನ್ನು ನಿಗದಿಪಡಿಸಲಾಗಿತ್ತು. 1. ಆತ ತನ್ನ ಮಗಳ ಮದುವೆಯ ಬಗ್ಗೆ ಸಣ್ಣ ಪ್ರಾಯದಿಂದಲೇ ಆಲೋಚನೆ ಮಾಡಬೇಕು. ತನ್ನ ಮಗಳ ಮದುವೆ ನಿಶ್ಚಯವಾಗದೇ ಆತ ಸಂತೃಪ್ತನಾಗಿರಲಾರ. 2. ಆತನಿಗೆ ಗಂಡು ಮಗು ವಿದ್ದರೆ, ಆತನನ್ನು ತನ್ನ ವ್ಯಾಪಾರದಲ್ಲಿ ಸೇರಿಸಿಕೊಳ್ಳಬೇಕು ಇಲ್ಲವೇ ಏನಾದರೂ ವೃತ್ತಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ತನ್ನ ಮಗನಿಗೆ ಒಂದು ಒಳ್ಳೆಯ ನೌಕರಿ ದೊರೆತು ಆತ ನೆಲೆ ಕಂಡುಕೊಳ್ಳುವ ವರೆಗೆ ತಂದೆಯಾದವನು ವಿರಮಿಸಲಾರ. ಈ ಸಂಸ್ಕೃತಿಯಿಂದಾಗಿ ಮುಸ್ಲಿಮರು ಯಾವುದೇ ರೀತಿಯ ಉದ್ಯೋಗವನ್ನು ಬೇಕಾದರು ಕೈಗೆತ್ತಿಕೊಳ್ಳಲು ಸಿದ್ಧರಿದ್ದರು. ಇತರರೂ ಈ ಸಂಪ್ರದಾಯವನ್ನು ಪಾಲಿಸತೊಡಗಿದರು. ಶ್ರಮದ ಬಗೆಗಿನ ಈ ಗೌರವವು ಈ ಪ್ರದೇಶಕ್ಕೆ

ಮುಸ್ಲಿಮರು ಕೊಟ್ಟ ಒಂದು ದೊಡ್ಡ ಕೊಡುಗೆ. ಮುಸ್ಲಿಮರು ಕಠಿಣ ದುಡಿಮೆ ಮತ್ತು ಪರಿಶ್ರಮಕ್ಕೆ ಹೆಸರಾಗಿದ್ದರು.

ಇಸ್ಲಾಮ್ ಒಂದು ಹೊಸ ಧರ್ಮವಲ್ಲ. ಅದು ಎಲ್ಲ ಈ ಹಿಂದಿನ ನಂಬಿಕೆಗಳನ್ನು ಅನುಮೋದಿಸುತ್ತದೆ. ಇದನ್ನೇ ನಾವು ಭಾರತದ ಸಂದರ್ಭದಲ್ಲಿ ಸನಾತನ ಧರ್ಮ ಎನ್ನುತ್ತೇವೆ. ಅದು ಮನುಷ್ಯ ವ್ಯವಹಾರದ ಎಲ್ಲ ಕ್ಷೇತ್ರಗಳನ್ನು - ವೈಯಕ್ತಿಕ ವಿಷಯಗಳಿಂದ ರಾಷ್ಟ್ರ ಮಟ್ಟದ ವಿಷಯಗಳವರೆಗೆ - ತನ್ನ ತೆಕ್ಕೆಗೆ ಎಳೆದುಕೊಳ್ಳುತ್ತದೆ. ಮನುಷ್ಯರ ವ್ಯವಹಾರಗಳು, ನೈತಿಕ ಮಾರ್ಗದರ್ಶನ ಮತ್ತು ಆಧ್ಯಾತ್ಮಿಕ ವಿಷಯಗಳ ಬಗ್ಗೆ ಅದು ಚರ್ಚಿಸುತ್ತದೆ. ಅದೊಂದು ನೈತಿಕ ಸಂಹಿತೆಯಾಗಿದ್ದು ಇಡೀ ಮಾನವ ಕುಲಕ್ಕೆ ಒಂದು ಮಾರ್ಗವಾಗಿದೆ. ಪ್ರತಿಯೊಬ್ಬ ಮುಸ್ಲಿಮನ ಮಟ್ಟಿಗೆ ಕುರ್‌ಆನ್ ಆತನ ಬದುಕಿನ ಸಂವಿಧಾನವಾಗಿದೆ. ಸಂಶಯಗಳು ಎದುರಾದರೆ ಹದೀಸ್‌ಗಳು ಅವುಗಳನ್ನು ಬಗೆಹರಿಸುತ್ತವೆ. ಪ್ರತಿಯೊಂದು ಮಸೀದಿಯ ಮೌಲ್ವಿ ಅಥವಾ ಇಮಾಮ್ ಕುರ್‌ಆನ್ ಮತ್ತು ಹದೀಸ್‌ನ ವ್ಯಾಖ್ಯಾನಕಾರನಾಗಿದ್ದಾನೆ. ಯಾಕೆಂದರೆ ಮನುಷ್ಯರಿಗೆ ಮಾರ್ಗದರ್ಶನ ಮಾಡಲು ಬೇರಾರೂ ಇಲ್ಲ. ಕಂಠ ಪಾಠ ಆಧರಿತ ಧಾರ್ಮಿಕ ವಿದ್ಯಾಭ್ಯಾಸ ವ್ಯವಸ್ಥೆಯು ಮುಸ್ಲಿಮರಿಗೆ ಕುರ್‌ಆನ್ ಏನು ಬೋಧಿಸುತ್ತದೆ ಎಂಬುದನ್ನು ಹೇಳಿಕೊಡುವುದಿಲ್ಲ. ಆದರೆ ಮೌಲ್ವಿಗಳು ಯಾವುದೇ ಆಧ್ಯಾತ್ಮಿಕ ತರಬೇತಿ ಇಲ್ಲದೆಯೇ ನಿಜವಾದ ಸತ್ಯ ವಿಶ್ವಾಸಿಗಳನ್ನು ಪ್ರಾಮಾಣಿಕ ಮತ್ತು ಒಳ್ಳೆಯ ಮುಸ್ಲಿಮರನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದರು. ಮೂಲಭೂತ ನಂಬಿಕೆಗಳು ಮತ್ತು ಕರ್ಮಗಳನ್ನು ಪ್ರತಿಯೊಬ್ಬ ಮುಸ್ಲಿಮನಿಗೂ ಕಲಿಸಿಕೊಡಲಾಗುತ್ತದೆ ಮತ್ತು ಪ್ರತಿಯೊಬ್ಬನೂ ವ್ಯಕ್ತಿಗತವಾಗಿ ಆಚರಣೆಗಳನ್ನು ಕಲಿತುಕೊಂಡು ತನ್ನ ಸಂತಾನಗಳಿಗೂ ಮನೆಯ ಹೆಂಗಸರಿಗೂ ಅದನ್ನು ಕಲಿಸಿಕೊಡುತ್ತಾನೆ. ದೇವರ ಮೇಲಿನ ಪ್ರೀತಿಯಿಂದ ಮತ್ತು ಅತ್ಯಂತ ಪ್ರಾಮಾಣಿಕ ಹೃದಯದಿಂದ ಈ ಎಲ್ಲ ಕೆಲಸಗಳನ್ನೂ ಆತ ನಿರ್ವಹಿಸುತ್ತಾನೆ. ನರಕಾಗ್ನಿಯ ಹೆದರಿಕೆ ಮತ್ತು ಸ್ವರ್ಗೋದ್ಯಾನದ ಪ್ರತಿಫಲವು ಆತನಿಗೆ ಕಲಿಸಿಕೊಡಲಾಗುವ ಇನ್ನೆರಡು ಅಂಶಗಳು. ಇಹಲೋಕದ ಬದುಕು ಅತ್ಯಂತ ಸೀಮಿತವಾಗಿರುವುದರಿಂದ ಪ್ರತಿಯೊಬ್ಬ ಮುಸ್ಲಿಮನೂ ಸಾತ್ವಿಕವಾದ ಮತ್ತು ಮಿತ ವ್ಯಯದಿಂದ ಕೂಡಿದ ಬದುಕನ್ನು ಬಾಳಿ ಸ್ವರ್ಗ (ಮೋಕ್ಷ) ಪಡೆಯಲು ಹಾತೊರೆಯುತ್ತಾನೆ. ಆದ್ದರಿಂದ ಅವರು ನಂಬಿಕೆ ಮತ್ತು ಆಚಾರಗಳಿಗೆ ಹೆಚ್ಚಿನ ಗರಿಷ್ಠ ಶ್ರದ್ಧೆ ತೋರ್ಪಡಿಸುತ್ತಾರೆ. ಮೌಲ್ವಿಗಳು ಅವರಿಗೆ ಆಚರಣೆಗಳನ್ನು ಕಲಿಸಿಕೊಡುತ್ತಾರೆ. ಆದರೆ ನಿಯಮಿತವಾದ ಪ್ರಾರ್ಥನೆಗಳನ್ನು ಸಲ್ಲಿಸಲು ಇಸ್ಲಾಮ್‌ನಲ್ಲಿ ಮೌಲ್ವಿಗಳ ಅಥವಾ ಪುರೋಹಿತರ ಅಗತ್ಯವಿಲ್ಲ. ಧರ್ಮದ ಈ ವೈಯಕ್ತಿಕವಾದ ಸ್ವರೂಪವು ಇಸ್ಲಾಮಿನ ಇನ್ನೊಂದು ಪ್ರಮುಖ ಆಕರ್ಷಣೆ ಯಾಗಿದೆ. ಆರಂಭ ಕಾಲದಲ್ಲಿ ಈ ಭಾಗದಲ್ಲಿ ಜಾತಿ ನೀತಿ ಬ್ಯಾರಿಗಳ ಜತೆಗೆ ಭಾರಿ ಸಂಖ್ಯೆಯ ಜಾತಿ ಬ್ಯಾರಿಗಳೂ ಇದ್ದರು. ಅವರಿಬ್ಬರೂ ಮುಸ್ಲಿಮರೇ ಆಗಿದ್ದರು. ಆದರೆ ಜಾತಿ ನೀತಿ ಬ್ಯಾರಿಗಳು ನಿಯಮಿತವಾಗಿ ಧರ್ಮವನ್ನು ಆಚರಿಸುತ್ತಿದ್ದರು. ಆದೇ ವೇಳೆ ಇನ್ನೊಂದು ಗುಂಪು ದೇವರ ಮೇಲೆ ನಂಬಿಕೆ ಹೊಂದಿದ್ದರೂ ಅವರು ಸಂಪ್ರದಾಯಗಳನ್ನು ಮನಬಂದಂತೆ ನಿರ್ವಹಿಸುತ್ತಿದ್ದರು. ಧರ್ಮವನ್ನು ಕಟ್ಟು ನಿಟ್ಟಾಗಿ ಆಚರಿಸುತ್ತಿದ್ದರೋ ಇಲ್ಲವೋ ಎಂಬುದನ್ನು ಪರಿಗಣಿಸದೆ ಎಲ್ಲರನ್ನೂ ಮುಸ್ಲಿಮರೆಂದೇ ಪರಿಗಣಿಸಲಾಗುತ್ತಿತ್ತು. ಅವರು ಜಮಾಅತ್‌ಗೆ

ಕಾಣಿಕೆ ಸಲ್ಲಿಸುತ್ತಿದ್ದ ಕಾರಣ ಅವರಿಗೆ ಜಮಾಅತ್‌ನ ಎಲ್ಲ ಸೌಲಭ್ಯಗಳೂ ಸಿಗುತ್ತಿದ್ದವು. ಹೀಗಾಗಿ ಇಸ್ಲಾಮ್ ಅತ್ಯಂತ ಸರಳ ಮತ್ತು ಪ್ರಾಯೋಗಿಕ ಧರ್ಮದಂತೆ ಭಾಸವಾಗ ತೊಡಗಿತ್ತು. ಸರ್ವಶಕ್ತನ ಮೇಲೆ ನಂಬಿಕೆ, ಪ್ರಾಮಾಣಿಕ ಜೀವನ ಮತ್ತು ದುಡಿಮೆ ಮಾಡಿ ನೆಮ್ಮದಿಯಿಂದ ಬದುಕು ಸಾಗಿಸಲು ಬೇಕಾದ ಪ್ರೇರಣೆಯನ್ನು ಇಸ್ಲಾಮ್ ಕೊಟ್ಟಿತು. ಇದು ಮುಸ್ಲಿಮರನ್ನು ನಿಜವಾಗಿಯೂ ಸಂತುಷ್ಟಗೊಳಿಸಿತು ಮತ್ತು ಜಿಲ್ಲೆಯಲ್ಲಿ ಧಾರ್ಮಿಕ ಕೇಂದ್ರ ವನ್ನು ಸ್ಥಾಪಿಸುವ ಗೊಡವೆಗೂ ಅವರು ಹೋಗಲಿಲ್ಲ. ಈ ಸ್ವಸಂಪರ್ಕ ಮತ್ತು ಸಾರ್ವತ್ರಿಕ ಸ್ವರೂಪವು ತುಳುನಾಡಿನ ಮುಸ್ಲಿಮರ ಅತ್ಯಂತ ಗಮನಾರ್ಹವಾದ ಲಕ್ಷಣವಾಗಿದೆ.

ತುಳುನಾಡಿನಲ್ಲಿ ಕಂಡುಬರುವ ಮಾತೃಪ್ರಧಾನ ವ್ಯವಸ್ಥೆಯು ಈ ಪ್ರದೇಶದ ಒಂದು ಲಕ್ಷಣ. ಆದರೆ ಇಸ್ಲಾಮ್ ಉತ್ತರಾಧಿಕಾರದ ವಿಷಯದಲ್ಲಿ ಪಿತೃ ಪ್ರಧಾನ ವ್ಯವಸ್ಥೆಯನ್ನು ಕಟ್ಟು ನಿಟ್ಟಾಗಿ ಉಳಿಸಿಕೊಂಡು ಬಂತು. ತುಳುನಾಡಿನ ಬ್ಯಾರಿಗಳು ಕೂಡಾ ಉತ್ತರಾಧಿಕಾರದ ವಿಚಾರದಲ್ಲಿ ಮಾತೃ ಪ್ರಧಾನ ವ್ಯವಸ್ಥೆಯನ್ನು ಪಾಲಿಸುತ್ತಾರೆ. ಆದರೆ ಇಲ್ಲಮ್ ಪದ್ಧತಿಯ ವಿಚಾರಕ್ಕೆ ಬಂದಾಗ ವಿವಾಹ ಸಂಬಂಧ ಮತ್ತು ಸ್ಥಾನಮಾನದ ವಿಚಾರದಲ್ಲಿ ಅವರು ಮಾತೃಪ್ರಧಾನ ವ್ಯವಸ್ಥೆಯನ್ನು ಅನುಸರಿಸುತ್ತಾರೆ. ಅದು ಒಬ್ಬ ಜವಾಬ್ದಾರಿಯುತ ಗೃಹಿಣಿ ಯಾಗಿ ಮಹಿಳೆಯ ಗೌರವವನ್ನು ಉಳಿಸುತ್ತದೆ. ತುಳುನಾಡಿನ ಬ್ಯಾರಿಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಮಾತೃ ಪ್ರಧಾನ ವ್ಯವಸ್ಥೆಯು ಆ ಕಾಲದಲ್ಲಿ ಸಾರ್ವತ್ರಿಕವಾಗಿ ಪ್ರಚಲಿತವಿದ್ದ ಮರುಮಕ್ಕತ್ತಾಯ ಸಂಪ್ರದಾಯದ ಪಡಿಯಚ್ಚಾಗಿದೆ. ಮರುಮಕ್ಕತ್ತಾಯ ಮುಖ್ಯವಾಗಿ ಉತ್ತರಾಧಿಕಾರ ವಿಚಾರಕ್ಕೆ ಸಂಬಂಧಿಸಿದ್ದು. ಆದರೆ ಬ್ಯಾರಿಗಳ ಮಾತೃಪ್ರಧಾನ ವ್ಯವಸ್ಥೆಯು ಉತ್ತರಾಧಿಕಾರಕ್ಕೆ ಸಂಬಂಧಿಸಿದ್ದಲ್ಲ. ಅದು ಮುಖ್ಯವಾಗಿ ವೈವಾಹಿಕ ಸಂಬಂಧ ಗಳು ಮತ್ತು ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದ್ದಾಗಿದೆ. ಅದು ಅಧಿಕೃತವಾಗಿಯೇ ಇಸ್ಲಾಮೀ ವ್ಯವಸ್ಥೆಗೆ ತಕ್ಕುದಾಗಿ ತಿದ್ದುಪಡಿಗೊಂಡಂತಿದೆ. ಇಲ್ಲಮ್ ವ್ಯವಸ್ಥೆಯು ಪ್ರಮುಖವಾಗಿ ಇಂತಹ ಸಂಪ್ರದಾಯಗಳನ್ನು ಆಧರಿಸಿದೆ. ಬ್ಯಾರಿಗಳ ಮಾತೃಪ್ರಧಾನ ವ್ಯವಸ್ಥೆಯು ಕುಟುಂಬದ ಸ್ಥಾನಮಾನವನ್ನು ವಿಭಜಿಸಿ ಸಾಮಾಜಿಕ ವ್ಯವಸ್ಥೆಗೆ ಕೊಡುಗೆ ನೀಡಿದೆ. ಮಂಗಳೂರಿನಲ್ಲಿದ್ದ ಹದಿನಾರು ಮನೆಗಳು ಹೆಚ್ಚಾಗಿ ಮಾತೃಪ್ರಧಾನ ವ್ಯವಸ್ಥೆಯನ್ನು ಪಾಲಿಸುತ್ತಿದ್ದವು. ಇದು ಮುಸ್ಲಿಮ್ ಕುಟುಂಬಗಳ ವಿಭಜನೆಗೂ ನಾಂದಿ ಹಾಡಿತು.

ಬ್ಯಾರಿ ಭಾಷೆ ಎಂಬುದು ತುಳುನಾಡಿನ ಒಂದು ಆಡುಭಾಷೆ. ಬ್ಯಾರಿಗಳು ಧಾರ್ಮಿಕ ವಿದ್ಯಾಭ್ಯಾಸ ಪಡೆಯಲು ಅರಬಿ ಮಲಯಾಳಂ ಎಂಬ ಭಾಷೆಯನ್ನು ಮಾಧ್ಯಮವಾಗಿ ಉಪಯೋಗಿಸಿದರು. ಅದು ಅರಬಿ ಲಿಪಿಯಲ್ಲಿ ಬರೆದ ಮಲಯಾಳವಾಗಿತ್ತು. ಅರಬಿ ಮಲಯಾಳಮ್‌ನಲ್ಲಿ ಪುಸ್ತಕಗಳೂ ಪ್ರಕಟಗೊಂಡಿದ್ದವು. ಇವನ್ನು ಮೌಲ್ವಿಗಳು ಓದುತ್ತಿದ್ದರು ಮತ್ತು ಬ್ಯಾರಿಗಳು ಆಲಿಸುತ್ತಿದ್ದರು. ಸಾಮಾನ್ಯವಾಗಿ ಎಲ್ಲ ಮುಸ್ಲಿಮರೂ ಕುರ್‌ಆನನ್ನು ಪಠಿಸುವ ಸಾಮರ್ಥ್ಯ ಹೊಂದಿದ್ದರು ಮತ್ತು ಕೆಲವು ಅಧ್ಯಾಯಗಳನ್ನು ಅವರು ಕಂಠ ಪಾಠ ಮಾಡಿದ್ದರು. ಅದೊಂದು ಧಾರ್ಮಿಕ ಅವಶ್ಯಕತೆಯಾಗಿತ್ತು. ಹೀಗಾಗಿ ಎಲ್ಲ ಮುಸ್ಲಿಮರೂ ಸಾಕ್ಷರರಾಗಿದ್ದರು. ಹೀಗಾಗಿ ಮುಸ್ಲಿಮರು (ಮಾಪಿಳ್ಳಗಳು) ಅನಕ್ಷರರಾಗಿದ್ದರು ಎಂಬ ಲೋಗನ್‌ನ ಹೇಳಿಕೆ ಸತ್ಯಕ್ಕೆ ದೂರವಾದದ್ದು. ಆದರೆ ತುಳುನಾಡಿನ ಮುಸ್ಲಿಮರು

ಅವಿದ್ಯಾವಂತರಾಗಿದ್ದರು ಎಂಬುದು ನಿಜವೇ. ಯಾಕೆಂದರೆ ಅವರಿಗೆ ಗಣಿತ ಮತ್ತು ವಿಜ್ಞಾನದ ಅತ್ಯಂತ ಕನಿಷ್ಠ ಜ್ಞಾನ ಮಾತ್ರ ಇತ್ತು. ಅವರು ನಿಯಂತ್ರಿತ ಕಲಿಕೆಯ ವ್ಯಾಪ್ತಿಯಿಂದ ಹೊರಕ್ಕೆ ಹೋಗಿರಲಿಲ್ಲ. ಅವರ ಮಟ್ಟಿಗೆ ಅದೊಂದು ಸಮ್ಮತಾರ್ಹ ಇಲ್ಮ್ ಆಗಿರಲಿಲ್ಲ. ಅಷ್ಟೇ ಅಲ್ಲ ಪಾಶ್ಚಾತ್ಯ ಶಿಕ್ಷಣವನ್ನು ಅವರು ಧರ್ಮಬಾಹಿರ ಎಂದು ಘೋಷಿಸಿ ಬಿಟ್ಟಿದ್ದರು. ಮೌಲ್ವಿಗಳು ಅವರಲ್ಲಿ ಆ ನಂಬಿಕೆಯನ್ನು ಹುಟ್ಟಿಸಿದ್ದರು. ಮೂರು ಆರ್‌ಗಳ ಜ್ಞಾನವನ್ನು ಅವರಿಗೆ ನಿರಾಕರಿಸಲಾಗಿತ್ತು.[7] ಹೀಗಾಗಿ ಮುಸ್ಲಿಮರು, ಅದರಲ್ಲೂ ತುಳುನಾಡಿನ ಬ್ಯಾರಿಗಳು ಅವಿದ್ಯಾವಂತರಾಗಿ ಉಳಿಯಬೇಕಾಯಿತು ಮತ್ತು ಪ್ರದೇಶದ ಇತರ ಸಮುದಾಯಗಳಿಗಿಂತ ಹಿಂದುಳಿದವರಾಗಿಯೇ ಇರಬೇಕಾಯಿತು. ಇದಲ್ಲದೆ ಮುಸ್ಲಿಮರಲ್ಲಿ ಹಲವಾರು ನಮೂನೆಯ ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳು ಚಾಲ್ತಿಯಲ್ಲಿದ್ದವು. ಇಂದಿಗೂ ಹಳ್ಳಿಗಳಲ್ಲಿ ರೋಗ ಶಮನಕ್ಕಾಗಿ ತಾಯಿತ ಕಟ್ಟುವ ಸಂಪ್ರದಾಯ ಕಂಡು ಬರುತ್ತದೆ. ನಾಯಕರ ಪ್ರಯತ್ನಗಳ ಹೊರತಾಗಿಯೂ ಆಧುನಿಕ ಶಿಕ್ಷಣವು ಬ್ಯಾರಿಗಳಲ್ಲಿ ಅಷ್ಟೊಂದು ಜನಪ್ರಿಯವಾಗಿಲ್ಲ. ಶೇ. 95ಕ್ಕೂ ಹೆಚ್ಚು ಬ್ಯಾರಿ ಮಹಿಳೆಯರು ಇಂದಿಗೂ ಅವಿದ್ಯಾವಂತರಾಗಿಯೇ ಉಳಿದಿದ್ದಾರೆ. ಆಧುನಿಕ ಶಿಕ್ಷಣದ ಬಗೆಗಿನ ಧೋರಣೆ ಮತ್ತು ತಪ್ಪು ಕಲ್ಪನೆ ಇನ್ನೂ ದೂರವಾಗಿಲ್ಲ. ಬ್ಯಾರಿ ಜಾಗೃತಿಯು ಕಾಲದ ಬೇಡಿಕೆಯಾಗಿದೆ. ತಾವು ಮಲಬಾರ್‌ನ ಮಾಪಿಳ್ಳೆಗಳಿಗಿಂತಲೂ ಹಿಂದುಳಿಯುತ್ತೇವೆ ಮತ್ತು ಇದಕ್ಕೆ ಆಧುನಿಕ ಶಿಕ್ಷಣದ ಅಭಾವವೇ ಕಾರಣ ಎಂಬ ಪ್ರಜ್ಞೆಯೇ ಅವರಿಗೆ ಬಂದಿರಲಿಲ್ಲ. ಹಲವಾರು ಆದರ್ಶಗಳು, ಚಿಂತನೆಗಳು, ಪ್ರಯತ್ನಗಳು ಮತ್ತು ಕೊಡುಗೆಗಳ ಹೊರತಾಗಿಯೂ ಮುಸ್ಲಿಮರು, ಅದರಲ್ಲೂ ವಿಶೇಷವಾಗಿ ಬ್ಯಾರಿಗಳು ಈ ಪ್ರದೇಶದಲ್ಲಿ ಒಂದು ಹಿಂದುಳಿದ ವರ್ಗವಾಗಿಯೇ ಬದುಕುತ್ತಿದ್ದಾರೆ.

★★★

1. ಆರ್ನಾಲ್ಡ್ ದ ಪ್ರೀಚಿಂಗ್ ಆಫ್ ಇಸ್ಲಾಮ್ ಪು. 408
2. ಮೇಲಿನಂತೆಯೇ 408
3. ಮೇಲಿನಂತೆಯೇ 411
4. ಮೇಲಿನಂತೆಯೇ 414
5. ಮೊಹಿಬ್ಬುಲ್ ಹಸನ್, ಟೀಪು ಸುಲ್ತಾನ್ಸ್ ಕಮರ್ಷಿಯಲ್ ರಿಲೇಶನ್ ವಿದ್ ದ ಪರ್ಷಿಯನ್ ಗಲ್ಫ್ 1783-1789, ಪುಟ. 41-42
6. ಟಿಪ್ಪಣಿ: ಇಚ್ಲಂಗೋಡಿನಲ್ಲಿ ಆಚಾರಿ ಮೊಯ್ದಿನ್ ಬ್ಯಾರಿ ಎಂಬ ಬಡಗಿಯಿದ್ದ ಮತ್ತು ಪಣಂಬೂರು ಪ್ರದೇಶದಲ್ಲಿ ಪೊನ್ನಿ ಬಾವಾಕ ಎಂಬ ಅಕ್ಕಸಾಲಿಗನಿದ್ದ
7. ಮೂರು ಆರ್‌ಗಳೆಂದರೆ ರೀಡಿಂಗ್, ರೈಟಿಂಗ್ ಮತ್ತು ಅರಿತ್ಮಾಟಿಕ್ಸ್

ಆಯ್ದ ಗ್ರಂಥಸೂಚಿ

ಪುಸ್ತಕಗಳು

1. ಆರ್ನಾಲ್ಡ್ ಟಿ. ಡಬ್ಲ್ಯೂ. ದ ಪ್ರೀಚಿಂಗ್ ಆಫ್ ಇಸ್ಲಾಮ್ (ಲಂಡನ್) 1913
2. ಅಯ್ಯಪ್ಪನ್: ಎ ಸೋಷಿಯಲ್ ರೆವೊಲ್ಯೂಷನ್ ಇನ್ ಕೇರಳ ವಿಲೇಜ್
3. ಎ. ರೈಹಾನ್ ನೂರಿ – ಮೈಕಾಲ 1961 (ಕ) ಮಂಗಳೂರು.
4. ಅಬ್ದುಲ್ ರೆಹಮಾನ್ ಕೆ.ಎ. – ಪೊನ್ನಾನಿ: ಎ ಬ್ರೀಫ್ ಹಿಸ್ಟಾರಿಕಲ್ ಎಕೌಂಟ್
5. ಅಬೂಬಕರ್ ಎ.ಎಮ್. – ಎ ಬುಕ್‌ಲೆಟ್ ಆನ್ ಸಿದ್ದೀಕ್ ಯೂಸುಫ್ ವಲಿ 1962.
6. ಆಬಿದ್ ಹುಸೇನಿ, ಡೆಸ್ಟಿನಿ ಆಫ್ ಇಂಡಿಯನ್ ಮುಸ್ಲಿಮ್ಸ್ 1965
7. ಕೋಚ್‌ಮನ್ – ಡಿಸ್ಕ್ರಿಪ್ಟೀವ್ ಮೇಮನ್ಸ್ ಆಫ್ ವಿಲೇಜೆಸ್ ಆಫ್ ಎಸ್.ಕೆ. ಡಿಸ್ಟ್ರಿಕ್ಟ್
8. ಈಲಿಯಟ್ ಡೌಸನ್ – ಹಿಸ್ಟರಿ ಆಫ್ ಇಂಡಿಯಾ ಸಂಚಿಕೆ 3
9. ಈಲಿಯಟ್ ಡೌಸನ್ – ಹಿಸ್ಟರಿ ಆಫ್ ಇಂಡಿಯಾ ಆಸ್ ಟೋಲ್ಡ್ ಬೈ ಹಿಸ್ಟಾರಿಯನ್ಸ್
10. ಎಡ್ವರ್ಡ್ ಗ್ರೇ (ಬಿ) ಡೆಲ್ಲಾ ವಿಲ್ಲಾ ಟ್ರಾವೆಲ್ಸ್ 1892.
11. ಗಣಪತಿ ರಾವ್ ಐಗಲ್ – ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ 1923.
12. ಹಮ್ಮಾ ಅಬ್ದುಲ್ಲಹಿ, ಇಸ್ಲಾಮ್ ಇನ್ ಪೋಯೆಮ್ – 1985
13. ದ ಹೋಲಿ ಕುರ್‌ಆನ್ (ಅನು. ಪಿಕ್ತಾಲ್)
14. ಇನ್ನರ್ ಸಿ.ಎ. ಮಲಬಾರ್, ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ 1951
15. ಜಾನ್ ಕ್ಯಾಂಪ್‌ವೆಲ್ – ಬ್ರಾಹ್ಮಿಣ್ ಪ್ರೀಸ್ಟ್ಸ್ ಎಂಡ್ ಮುಸ್ಲಿಮ್ಸ್ ಇನ್ ಇಂಡಿಯಾ 1973
16. ಜಮೀಲ್ ಹರೀಫಿ ಎಮ್. ಇಸ್ಲಾಮ್ ಎಂಡ್ ಇಟ್ಸ್ ಟ್ರಾನ್ಸ್‌ಫರಮೇಶನ್ ಆಫ್ ಕಲ್ಚರ್ 1970
17. ಜೆಸ್ಸಿ ಟೆಲ್ಲಿಸ್ ನಾಯಕ್ (ಶ್ರೀಮತಿ) ವೈ ಮುಸ್ಲಿಮ್ ವಿಮೆನ್ ಆರ್ ಅನೆಜುಕೇಟೆಡ್? (ಮಾಪ್ಲಾಸ್ ಡೆಸರ್‌ಟೇಶನ್)
18. ಕೇಶವ ಕೃಷ್ಣ ಕುಡ್ವ, ದಕ್ಷಿಣ ಕನ್ನಡ ಚರಿತ್ರೆ (ಕ)
19. ಕುಂಞಾಲಿ ವಿ. ಸೂಫಿಸಮ್ ಇನ್ ಕೇರಳ 1985 (ಮಾಪ್ಲಾಸ್ ಡೆಸರ್‌ಟೇಶನ್)
20. ಕನರಾಡಿ ವಾದಿರಾಜ ಭಟ್ಟ ಪಾಡ್ದನಗಳು 1974
21. ಕಿಲ್ಲೆ ಎನ್.ಎಸ್. ಪ್ರಾಚೀನ ತುಳುನಾಡು (ಕ) 1952
22. ಕುಶಾಲಪ್ಪ ಎಂಡ್ ಚಿನ್ನಪ್ಪ ಗೌಡ, ಡಿ.ಕೆ. ಜಿಲ್ಲೆಯ ಕೈಫಿಯಾತುಗಳು 1983
23. ಕುಡ್ವ ವಿ.ಎನ್. ಹಿಸ್ಟರಿ ಆಫ್ ದಕ್ಷಿಣಾತ್ಯ ಸಾರಸ್ವತ್ಸ್
24. ಕೃಷ್ಣಯ್ಯ ಡಿ.ಎನ್. ಕೊಡಗಿನ ಇತಿಹಾಸ 1974
25. ಕೃಷ್ಣಯ್ಯರ್ ಕೆ.ವಿ. ಎ ಶಾರ್ಟ್ ಹಿಸ್ಟರಿ ಆಫ್ ಕೇರಳ, 1964
26. ಕರುಣಾಕರ್ ಎಚ್.ಆರ್. ಎ ಸೋಷಿಯೋ ಇಕನಾಮಿಕ್ ಕಂಡಿಷನ್ ಆಫ್ ಎಸ್.ಕೆ.

1856–1956 (ಥೀಸೀಸ್ ಮಿಡ್.)
27. ಕೃಷ್ಣಸ್ವಾಮಿ ಅಯ್ಯಂಗಾರ್ – ಸೌತ್ ಇಂಡಿಯಾ ಎಂಡ್ ಹರ್ ಮೊಹಮ್ಮಡನ್ ಇನ್ವೇಡರ್ಸ್ (ಆಕ್ಸ್‌ಫರ್ಡ್ 1921)
28. ಲೋಗನ್, ಮಲಬಾರ್ ಸಂಪುಟ 1 ಮತ್ತು 2 ಸಂಚಿಕೆ 1987
29. ಲೋಗನ್, ಎ ಕಲೆಕ್ಷನ್ ಆಫ್ ಟ್ರೀಟೀಸ್ ಎಂಡ್ ಎಂಗೇಜ್‌ಮೆಂಟ್ಸ್ 1951
30. ಮನ್‌ಹರ್ ಎ. ಪಾಡ್ದನೊಲು 1853
31. ಮೊಹಮ್ಮದ್ ಕೋಯಾ ಎಸ್.ಎಂ. ಮೋಪಿಲ್ಲಾಸ್ ಆಫ್ ಮಲಬಾರ್ 1983
32. ಮೆಕೆಂಜೀಸ್ ಕಲೆಕ್ಷನ್ಸ್ ಆಫ್ ಕೈಫಿಯಾತ್ಸ್
33. ನೈನಾರ್ ಎಸ್. ಮೊಹಮ್ಮದ್ ಹುಸೇನ್, ಅರಬ್ ಜಿಯೋಗ್ರಫರ್ಸ್ ನೋಲೆಜ್ ಆಫ್ ಸದರ್ನ್ ಇಂಡಿಯಾ (ಮಡ್ರಾಸ್) 1942
34. ನಾರಾಯಣ ಶೆಟ್ಟಿ ಕೆ. ಬೈರರಸು
35. ಫಿಲಿಪ್ ಕೆ. ಹಿಟ್ಟಿ ಹಿಸ್ಟರಿ ಆಫ್ ದ ಅರಬ್ಸ್ 1964
36. ಫಣಿಕ್ಕರ್ ಕೆ. ಎಚ್. ಇಂಡಿಯಾ ಎಂಡ್ ದ ಇಂಡಿಯನ್ ರೇಸೆಸ್ 1962
37. ರಮೇಶ್ ಕೆ.ವಿ. ಹಿಸ್ಟರಿ ಆಫ್ ಸೌತ್ ಕೆನರಾ 1980
38. ರಮೇಶ್ ಕೆ.ವಿ. ತುಳುನಾಡಿನ ಇತಿಹಾಸ (ಕನ್ನಡ) 1969
39. ರೊನಾಲ್ಡ್ ಇ. ಮಿಲ್ಲರ್, ಮೊಪಿಳ್ಳ ಮುಸ್ಲಿಮ್ಸ್ ಆಫ್ ಕೇರಳ 1976
40. ಸ್ಪರ್ರಕ್, ಜೆ. ಎಸ್.ಕೆ. ಮ್ಯಾನುವೆಲ್ ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ ಸಂಪುಟ 1, 1984
41. ಸ್ಪುವರ್ಟ್ ಎಸ್.ಕೆ. ಡಿಸ್ಟ್ರಿಕ್ಟ್ ಮ್ಯಾನುವಲ್–ಮೆಡ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ ಸಂಪುಟ 2
42. ಸುಶೀಲಾ ಉಪಾಧ್ಯಾಯ (ಡಾ.) ಮೊಪಿಳ್ಳ ಮಲಯಾಳಮ್, ಪಿಎಚ್‌ಡಿ ಥೀಸೀಸ್
43. ಸಾಲೆತ್ತೂರ್ ಬಿ.ಎ. ಏನ್‌ಷಿಯೆಂಟ್ ಕರ್ನಾಟಕ ಭಾಗ 1
44. ಸೂರ್ಯನಾಥ ಕಾಮತ್ (ಪ್ರೊ), ಅಬ್ಬಕ್ಕ 1989
45. ಶೇಖರ ಇಡ್ಯ, ಮಂಗಳೂರು 1977
46. ಶ್ರೀನಿವಾಸ್ ಎಮ್.ಎನ್. ರಿಲಿಜನ್ ಎಂಡ್ ಸೊಸೈಟಿ ಎಮಂಗ್ ದ ಕೂರ್ಗ್ಸ್ ಆಫ್ ಇಂಡಿಯಾ
47. ಶೇಖ್ ಅಲಿ ಬಿ. (ಡಾ.) ಬ್ರಟಿಷ್ ರಿಲೇಶನ್ ವಿದ್ ಹೈದರಾಲಿ 1963 (ಮೈಸೂರ್)
48. ಟೈಟಸ್ ಎಂ.ಟಿ. ಇಂಡಿಯನ್ ಇಸ್ಲಾಮ್ (ಆಕ್ಸ್‌ಫರ್ಡ್ 1930)
49. ತಾರಾಚಂದ್, ಇನ್‌ಫ್ಲುಯೆನ್ಸ್ ಆಫ್ ಇಸ್ಲಾಮ್ ಇನ್ ಇಂಡಿಯನ್ ಕಲ್ಚರ್ 1946
50. ತರ್ಸ್ಟನ್ ಎಡ್ಗರ್, ಕಾಸ್ಟ್ಸ್ ಎಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ, ಸಂಪುಟ 2, 4, 5 ಮತ್ತು 7, ಮೆಡ್ರಾಸ್ 1909
51. ಉಬೈದ್ ಟಿ. ಅಬ್ದುಲ್ಲಾ ಖಾಝಿ, ಅನುವಾದ: ಸಿ.ಕೆ. ಹುಸೇನ್ (ಕನ್ನಡ)
52. ಉಮನಾಥ ಶೆಣೈ – ಬಂಗರ ಇತಿಹಾಸ 1985

53. ವಿಕ್ಟರ್ ಡಿಸೋಜ – ದ ನವಾಯತ್ಸ್ ಆಫ್ ಕೆನರಾ 1955
54. ಜೈನುದ್ದೀನ್ ತುಹ್‌ಫತುಲ್ ಮುಜಾಹಿದೀನ್ ಅನುವಾದ: ರೊಲಾಂಡ್ ಮತ್ತು ಇತರರು (1833), ಎಸ್ ಮೊಹಮ್ಮದ್ ಹುಸೈನಾರ್ (1942) ಮದ್ರಾಸ್ ಗಜೆಟಿಯರ್‌ಗಳು, ಲೇಖನಗಳು ಮತ್ತು ಪತ್ರಿಕೆಗಳು
55. ಗಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ಸ್ಟೇಟ್, ಸೌತ್ ಕೆನರಾ ಡಿಸ್ಟ್ರಿಕ್ಟ್ 1973
56. ಇಂಪೀರಿಯಲ್ ಗಜೆಟಿಯರ್ ಆಫ್ ಇಂಡಿಯಾ, ಸಂಪುಟ 3
57. ಮೈಸೂರ್ ಗಜೆಟಿಯರ್ ಸಂಪುಟ 1
58. ಎಸ್.ಕೆ ಇನ್‌ಸ್ಕ್ರಿಪ್ಷನ್ಸ್ ಸಂಪುಟ 7
59. ಆನುವಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಪಿಗ್ರಫಿ 1929
60. ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, 16, ಹೀರೋಸ್
61. ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ 1974, ಬಿ.ಎಸ್. ಶಾಸ್ತ್ರಿ
62. ತೆಂಕನಾಡು, 1947 (ಒಂದು ಪತ್ರಿಕೆ)
63. ಉತ್ತರದೇಶಮ್ (ಮಲಯಾಳಮ್) ಕಾಸರಗೋಡು ಜಿಲ್ಲೆ ವಿಶೇಷ ಸಂಚಿಕೆ 1984
64. ಮಲಯಾಳ ಮನೋರಮ ವಿಶೇಷ ಸಂಚಿಕೆ ಮೇ 23, 1983
65. ತವನಿಧಿ ಪತ್ರಿಕೆ ಸಂಪುಟ 7/1 1983: 5/9, 1984, 1985
66. ಬೈಲಾಸ್ ಆಫ್ ಎಸೋಸಿಯೇಶನ್. ಮುಸ್ಲಿಮ್ ಎಜುಕೇಶನಲ್ ಎಸೋಸಿಯೇಶನ್ 1924, ಮಂಗಳೂರು
67. ಬ್ಯಾರೀಸ್ ಎಸೋಸಿಯೇಶನ್ ಸ್ಮರಣ ಸಂಚಿಕೆ ಬೆಂಗಳೂರು 1989
68. ಸ್ಮರಣ ಸಂಚಿಕೆ, ಮೊಗ್ರಾಲ್ ಸ್ಪೋರ್ಟ್ಸ್ ಕ್ಲಬ್, ಮೊಗ್ರಾಲ್ 1983
69. ಆಲ್ ಇಂಡಿಯಾ ಕಚ್ಚಿ ಮೇಮನ್ ಡೈರೆಕ್ಟರಿ ಬಾಂಬೆ, 1985
70. ಅಧ್ಯಕ್ಷ ಕೊರಗಪ್ಪ ಮೆಮೋರಿಯಲ್ ಸ್ಮರಣ ಸಂಚಿಕೆ 1970. ಎಂ ಗಿರಿಯಪ್ಪ, ತುಳುವ ಎಂಡ್ ತುಳುನಾಡು

ಮೌಖಿಕ ಇತಿಹಾಸ : ಸಂದರ್ಶನ ಮೂಲಕ ಸಂಪರ್ಕಿಸಲಾದ ವ್ಯಕ್ತಿಗಳು

1. ಆಹ್ಮದ್ ಅಲಿ ಶೆರೂಲ್ ಹಾಜಿ (65) ಮೊಕ್ತೇಸರ್, ಜುಮಾ ಮಸೀದಿ, ಇಚ್ಲಂಗೋಡು
2. ಅಬ್ದುಲ್ ಹಮಿದ್ ಸಿ. (65) ಮುಸ್ಲಿಮ್ ಲೀಗ್ ರಾಜ್ಯಾಧ್ಯಕ್ಷರು ಮಂಗಳೂರು
3. ಅಬ್ದುರ್ರಹೀಮ್ ಅಹಮದ್ (70) ನಿವೃತ್ತ ನ್ಯಾಯಾಧೀಶರು, ಮಂಗಳೂರು
4. ಅಬ್ದುಲ್ಲಾ ಬ್ಯಾರಿ ಹಾಜಿ (75) ಹಿಡುವಳಿದಾರರು, ಇಚ್ಲಂಗೋಡು
5. ಅಬ್ದುಲ್ ಕಾದರ್ ಜಿ. ವ್ಯಾಪಾರಿ, ಬಂಟ್ವಾಳ
6. ಅಬ್ದುಲ್ ಕಾದರ್ ಹಾಜಿ (65) ಹಿಡುವಳಿದಾರು, ಉಪ್ಪಳ
7. ಅರಬಿ ಡಾಕ್ಟರ್ ಕಾರ್ಕಳ
8. ಅಬ್ದುಲ್ಲಾ ಹಾಜಿ (60) ಹಿಡುವಳಿದಾರರು, ಮಂಜೇಶ್ವರ
9. ಅಬೂಬಕರ್ ಡಾಕ್ಟರ್ 65, ಬಂಟ್ವಾಳ

10. ಅಬ್ದುಲ್ ರಝಾಕ್, 60, ವ್ಯಾಪಾರಿ, ಮಂಗಳೂರು
11. ಅಬ್ದುಲ್ಲಾ ಬ್ಯಾರಿ 65, ಕುಂಬಳ
12. ಅಬ್ದುಲ್ ಕಾದರ್ ಹಾಜಿ (55) ಮಂಗಳೂರು, ವ್ಯಾಪಾರಿ
13. ಅಬ್ದುಲ್ ಕಾದರ್ ಹಾಜಿ, (60) ಕಲ್ಲಡ್ಕ
14. ಅಬ್ದುಲ್ಲಾ (60) ತುಂಬೆ
15. ಅಬ್ದುಲ್ ರಹಮಾನ್ ಸಾಹೇಬ್ (65) ಮೂಡಬಿದ್ರೆ
16. ಅಬ್ದುಲ್ ರಜಾಕ್ (60) ತಲಪಾಡಿ
17. ಅಬ್ದುಲ್ ಕಾದರ್ ಎಂ. (60) ಕುಂಬಳ
18. ಅಬ್ದುಲ್ ಕಾದರ್ (65) ಪೋವ್ವಲ್
19. ಅಬ್ದುಲ್ ರಹಮಾನ್ (58) ಚೆಮ್ನಾಡ್
20. ಅಬ್ದುಲ್ ರಹಮಾನ್ (55) ಕಾಸರಗೋಡು
21. ಅಬ್ದುಲ್ ಕಾದರ್ ಹಾಜಿ (60) ಕುಂದಾಪುರ
22. ಅಬ್ದುಲ್ ರಝಾಕ್, (50) ವ್ಯಾಪಾರಿ, ಮಂಗಳೂರು
23. ಅಬ್ದುಲ್ ಕಾದರ್ ಸಿ.ಎಚ್. ಮೊಗ್ರಾಲ್
24. ಅಹಮದ್ ನೂರಿ, ಕುದ್ರೋಳಿ, ಮಂಗಳೂರು
25. ಅಬೂ ಸಾಲಿ (52) ಅಧಿಕಾರಿ, ಪುತ್ತೂರು
26. ಅಬ್ದುಲ್ ರಝಾಕ್ ಹಾಜಿ 65, ಹಿಡುವಳಿದಾರರು, ಮೊಗ್ರಾಲ್
27. ಅಮೀರ್ ಹುಸೇನ್, (60) ಅಧ್ಯಕ್ಷರು, ವೆಲ್‌ಫೇರ್ ಎಸೋಸಿಯೇಶನ್, ಮಂಗಳೂರು
28. ಬಾಪುಞ್ಞಿ ಬ್ಯಾರಿ (70) ಇಚ್ಲಂಗೋಡು
29. ಹಸೈನಾರ್, ವ್ಯಾಪಾರಿ, ಸುಳ್ಯ
30. ಹಸನಬ್ಬ ವ್ಯಾಪಾರಿ, ಹೆಜಮಾಡಿ
31, ಹಸನ್ ಮುಸ್ಲಿಯಾರ್, ಮುಲ್ಕಿ
32. ಹಸನ್ ಅಹಮದ್ ಪಟೇಲ್, ಮಂಗಳೂರು
33. ಹುಸೇನ್ ಕುಂಞಿ ಪಿ.ಬಿ. ವ್ಯಾಪಾರಿ, ಮಂಗಳೂರು
34. ಹಸನಬ್ಬ ಪುತ್ತೂರು
35. ಇದಿನಬ್ಬ 65, ಬ್ಯಾರಿ ಮೂಡಬಿದ್ರೆ
36. ಇಬ್ರಾಹೀಮ್ ಯು.ಕೆ. ಅಧ್ಯಕ್ಷರು, ದರ್ಗಾ ಕಮಿಟಿ ಉಳ್ಳಾಲ
37. ಇದಿನಬ್ಬ ಬಿ.ಎಮ್. ಮಾಜಿ ಶಾಸಕರು, ಉಳ್ಳಾಲ
38. ಕಾಸಿಮ್ ಸೊರಾಂಗ್, ನಾವಿಕ, ಉಪ್ಪಳ
39. ಖುರ್ಷಿದ್ ಹುಸೇನ್ ಸಾಹೆಬ್ ಕಾರ್ಕಳ
40. ಕೋಯಾ ಸಿ.ಎಚ್., ಲಕ್ಷದ್ವೀಪದ ಅಧಿಕಾರಿ
41. ಮೊಹಮ್ಮದ್ ಹಾರೂನ್ ಸಾಹೆಬ್ (75) ನಿವೃತ್ತ ಶಿಕ್ಷಕ, ಮಂಗಳೂರು
42. ಮೊಹಮ್ಮದ್ ಹುಸೇನ್ ಸಾಹೆಬ್ ಸಾಮಾಜಿಕ ಕಾರ್ಯಕರ್ತರು, ಕಾರ್ಕಳ

43. ಮಾಮುಂಞ ಮಾಸ್ಟರ್ ಟಿ. (75), ನಿವೃತ್ತ ಶಿಕ್ಷಕ, ಮೊಗ್ರಾಲ್
44. ಮೊಯ್ದು ಮೌಲವಿ, ಮಂಗಳೂರು
45. ಮೊಹಮ್ಮದ್ ಶರೀಫ್ ಡಾ., ಜೆಪ್ಪು ಮಂಗಳೂರು
46. ಮೊಹಮ್ಮದ್ ಮಾಸ್ಟರ್, ಕುಂಬಳೆ
47. ಮೊಗ್ರಾಲ್ ಎಮ್.ಎಸ್.ಎಮ್.ಎಲ್.ಎ. (ಮಾಜಿ) ಮೊಗ್ರಾಲ್
48. ಮೊಹಮ್ಮದ್ ಪಿ.ಟಿ. ಹಿಡುವಳಿದಾರರು, ಚೆಮ್ನಾಡ್
49. ಮೊಹಮ್ಮದ್ ನವಾಝ್, (65), ಮೂಲ್ಕಿ
50. ಮೊಹಮ್ಮದ್ ಕುಂಞ ಮುಸ್ಲಿಯಾರ್ ಹಾಜಿ, ಮಂಗಳೂರು
51, ಮೊಹಮ್ಮದ್ ಹಸನಬ್ಬ ಮೂಡತ್ತೋಟ
52. ಮಮ್ಮುಂಞ ಹಾಜಿ, ವ್ಯಾಪಾರಿ, ಕುಂಬ್ರ, ಪುತ್ತೂರು
53. ಮೊಹಮ್ಮದ್ ಹಾಜಿ ಬಂಟ್ವಾಳ
54. ಮೊಹಮ್ಮದ್ ಮಂಜೇಶ್ವರ
55. ಮೂಸಾ ಬ್ಯಾರಿ, ಕುಂಬಳ
56. ಮೊಯ್ದಿನ್ ಬ್ಯಾರಿ, ಬೆಳ್ತಂಗಡಿ
57. ಮೊಹಮ್ಮದ್ ವ್ಯಾಪಾರಿ, ಸುಳ್ಯ
58. ಮೊಯ್ದಿನಬ್ಬ ವರ್ತಕ, ವಿಟ್ಲ
59. ಮೊಹಮ್ಮದ್ ಕಮಾಲ್, ಶಿಕ್ಷಣ ತಜ್ಞ, ಮಂಗಳೂರು
60. ಮೊಹಮ್ಮದ್ ಅಲಿ ಸುರತ್ಕಲ್
61. ಮೊಹಮ್ಮದ್ ಅಲಿ ಕೈಕಂಬ
62. ಮೂಸಾ ಕುಂಞ ಹಾಜಿ, ಮಂಜೇಶ್ವರ
63. ಮೊಹಮ್ಮದ್ ಶರೀಫ್ ಡಾ. ಪಾಣೆಮಂಗಳೂರು
64. ಮೊಹಮ್ಮದ್ ಮೌಲವಿ, ಸಜಿಪ
65. ಮೊಹಿದಿನಬ್ಬ ಸಾಲಿಹ, ಮಂಗಳೂರು
66. ಮೊಹ್ಸಿನ್ ಕಾಸಿಮ್ ಸಾಹೇಬ್ ಉಡುಪಿ
68. ಮುಹಿಯುದ್ದೀನ್ ಮಾಸ್ಟರ್, ಹೆಜಮಾಡಿ
68. ಶರೀಫ್ ಎಮ್.ಕೆ.ಇ.ಎಸ್. (70), ಡಾ. ಮಂಗಳೂರು
69. ಶಂಸುದ್ದೀನ್ ಸಾಹೆಬ್ (55), ಕಾರ್ಕಳ
70. ಸಲೀಮ್ ಸಾಹೆಬ್ ಡಾ. (70), ಉಡುಪಿ
71. ಉಮರಬ್ಬ ಅಧ್ಯಾಪಕರು, ವೇಣೂರು
72. ಯೂಸುಫ್ ಅಬ್ದುಲ್ಲ ಉಪ್ಪಿನಂಗಡಿ
73. ಜಕರಿಯಬ್ಬ (65), ಬಜಪೆ
74. ಜಹೀರುದ್ದೀನ್ ಸಾಹೆಬ್ ಉಡುಪಿ

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳು

1. ಬ್ಯಾರಿ ಚೆಲ್ತ್ (ನುಡಿಮುತ್ತುಗಳು), 2009
   ಮುಹಮ್ಮದ್ ತಣ್ಣೀರುಬಾವಿ — ಬೆಲೆ ರೂ. 25-00
2. ತರವಾಡ್ (ಕಾದಂಬರಿ), 2010
   ಯು.ಎ. ಕಾಸೀಮ್ ಉಳ್ಳಾಲ್ — ಬೆಲೆ ರೂ. 120-00
3. ನೆನಲ್ (ಕವನ ಸಂಕಲನ), 2010
   ಇಬ್ರಾಹೀಂ ತಣ್ಣೀರುಬಾವಿ — ಬೆಲೆ ರೂ. 45-00
4. ನೊಂಬಲ (ಕಥಾಸಂಕಲನ), 2010
   ಫಕ್ರುದ್ದೀನ್ ಇರುವೈಲು — ಬೆಲೆ ರೂ. 70-00
5. ನಲ್ಲೊ ತೆರು (ಲೇಖನ ಸಂಕಲನ), 2010
   ಕೆ.ಪಿ. ಅಬ್ದುಲ್‌ಖಾದರ್ ಕುತ್ತೆತ್ತೂರು — ಬೆಲೆ ರೂ. 70-00
6. ಮೈಲಾಂಜಿ (ಕವನ ಸಂಕಲನ), 2010
   ಹುಸೈನ್ ಕಾಟಿಪಳ್ಳ — ಬೆಲೆ ರೂ. 70-00
7. ನಂಡೊ ರಾಯ ನಂಡೊ ಸಂಸ್ಕೃತಿ (ಸಾಂಸ್ಕೃತಿಕ ಕಥನ), 2010
   ಟಿ.ಎ. ಆಲಿಯಬ್ಬ ಜೋಕಟ್ಟೆ — ಬೆಲೆ ರೂ. 40-00
8. ಕಾಲಡಿರೆ ಸ್ವರ್ಗ (ಅನುವಾದ) (ಕಥಾಸಂಕಲನ), 2010
   ಝುಬೇದಾ ಗುರುಪುರ — ಬೆಲೆ ರೂ. 70-00
9. ಪಿರ್ಪಪ್ಪಾಡ್ (ಕವನ ಸಂಕಲನ), 2010
   ಅಶ್ರಫ್ ಅಪೋಲೊ — ಬೆಲೆ ರೂ. 40-00
10. ಪೂಮಾಲೆ (ಕವನ ಸಂಕಲನ), 2010
    ವಿವಿಧ ಕವಿಗಳಿಂದ — ಬೆಲೆ ರೂ. 75-00

11. ದಪ್ಪುರೊ ಪಾಟ್ (ದಪ್ಪು ಹಾಡುಗಳು), 2010
ಇಬ್ರಾಹೀಂ ತಣ್ಣೀರುಬಾವಿ, ಹುಸೈನ್ ಕಾಟಿಪಳ್ಳ — ಬೆಲೆ ರೂ. 70-00

12. The Bearys of Tulunadu, 2011
B.M. Ichlangod — ಬೆಲೆ ರೂ. 150-00

13. ಪೆರಿಮೆ
ಸಂಶೋಧನಾ ಗ್ರಂಥ, 2011 — ಬೆಲೆ ರೂ. 200-00

14. ಬ್ಯಾರಿ ಭಾಷೆ
ಡಾ. ಸುಶೀಲಾ ಪಿ. ಉಪಾಧ್ಯಾಯ, 2011 — ಬೆಲೆ ರೂ. 140-00

15. Beary Language, 2011
Dr. Susheela P. Upadhyaya — ಬೆಲೆ ರೂ. 180-00

16. ಬೆಲ್ಕಿರಿ (ಅಕಾಡೆಮಿ ತ್ರೈಮಾಸಿಕ), ಅಕ್ಟೋಬರ್ 2011
ಸಂಚಿಕೆ 1ರಿಂದ 7 — ವಾರ್ಷಿಕ ಚಂದಾ ರೂ. 50-00
ಆಜೀವ ಚಂದಾ ರೂ. 500-00

ಪ್ರೊ. ಬಿ.ಎಂ. ಇಚ್ಲಂಗೋಡುರವರು
ಪಿಎಚ್.ಡಿ.ಗಾಗಿ ಇಂಗ್ಲಿಷ್‌ನಲ್ಲಿ ಬರೆದ
ಪ್ರಬಂಧದ ಕನ್ನಡಾನುವಾದ ಈ
ಗ್ರಂಥ. ಬ್ಯಾರಿಗಳ ಇತಿಹಾಸದ ಬಗ್ಗೆ
ಬಹಳಷ್ಟು ತಿಳಿದಿರುವ
ಪ್ರೊ. ಇಚ್ಲಂಗೋಡುರವರು ಈ
ಗ್ರಂಥದಲ್ಲಿ ಬ್ಯಾರಿ ಸಮುದಾಯದ
ಒಂದು ಸಮಗ್ರ ಪರಿಚಯವನ್ನು
ಮಾಡಿದ್ದಾರೆ. ಬ್ಯಾರಿ ಸಮುದಾಯದ
ಬಗ್ಗೆ ತಿಳಿದುಕೊಳ್ಳುವವರಿಗೆ,
ಸಂಶೋಧನೆ ಮಾಡುವವರಿಗೆ,
ಪಿಎಚ್.ಡಿ. ಮಾಡುವವರಿಗೆ,
ಇತಿಹಾಸದ ವಿದ್ಯಾರ್ಥಿಗಳಿಗೆ ಈ
ಗ್ರಂಥ ಬಹಳಷ್ಟು ಉಪಯುಕ್ತವಾಗಲಿ
ಎಂಬ ಉದ್ದೇಶದಿಂದಲೇ ಕನ್ನಡದಲ್ಲೂ
ಪ್ರಕಟಿಸಲು ಪ್ರೇರಣೆಯಾಯಿತು.

ಈ ಗ್ರಂಥವನ್ನು ಬಹಳ ಸುಂದರವಾಗಿ
ಕನ್ನಡಕ್ಕೆ ಅನುವಾದಿಸಿದ ಗೆಳೆಯ
ತುಫೈಲ್ ಮುಹಮ್ಮದ್‌ರಿಗೆ
ಅಭಿನಂದನೆಗಳು.

ಎಂ.ಬಿ. ಅಬ್ದುಲ್ ರಹ್‌ಮಾನ್